**ಶೋಧ ಪ್ರಕಾಶನ–೫೬**

# ಶ್ರೀಶಿವಯೋಗಿಶಿವಾಚಾರ್ಯವಿರಚಿತಃ

# ಶ್ರೀಸಿದ್ಧಾಂತಶಿಖಾಮಣಿಃ

## ಪಾರಾಯಣಗ್ರಂಥಃ

*ಕನ್ನಡ ಅನುವಾದಕರು*

**ಶ್ರೀಮತ್ ಕಾಶೀ ಜ್ಞಾನಸಿಂಹಾಸನಾಧೀಶ್ವರ**

**ಶ್ರೀ ಶ್ರೀ ೧೦೦೮ ಜಗದ್ಗುರು ಡಾ. ಚಂದ್ರಶೇಖರ**

**ಶಿವಾಚಾರ್ಯ ಮಹಾಸ್ವಾಮಿಗಳು**

ಜಂಗಮವಾಡಿಮಠ, ವಾರಾಣಸಿ

*ಸಂಪಾದಕರು*

**ಡಾ. ಎಸ್.ಆರ್. ಸಿದ್ಧಲಿಂಗಪ್ಪ**

ಸಂಸ್ಥಾಪಕರು, ಇನ್ಸ್ಟಿಟ್ಯೂಟ್ ಆಫ್ ವೀರಶೈವ ಅಂಡ್

ಕಾನ್‌ಟೆಂಪೊರರಿ ಸ್ಟಡೀಸ್, ಬೆಂಗಳೂರು

**ಶೈವಭಾರತೀ ಶೋಧ ಪ್ರತಿಷ್ಠಾನ**

೩೫/೭೭, ಜಂಗಮವಾಡಿಮಠ, ವಾರಾಣಸಿ

# ಪಾರಾಯಣ ವಿಧಿ

ಸ್ನಾನಾದಿಗಳಿಂದ ಶುಚಿರ್ಭೂತನಾಗಿ ಆಸನವನ್ನು ಹಾಕಿಕೊಂಡು ಆಸನವನ್ನು ಮೊದಲು ಪೂಜಿಸಿ, ಅದರ ಮೇಲೆ ಪೂರ್ವ ಇಲ್ಲವೇ ಉತ್ತರ ದಿಕ್ಕಿಗೆ ಮುಖಮಾಡಿ ಕುಳಿತುಕೊಳ್ಳಬೇಕು. ನಂತರ ತನ್ನ ನಿತ್ಯಕರ್ಮವಾದ ಇಷ್ಟಲಿಂಗ ಪೂಜಾದಿಗಳನ್ನು ಮಾಡಿ, ಬಳಿಕ ಶ್ರೀ ಸಿದ್ಧಾಂತ ಶಿಖಾಮಣಿ ಪಾರಾಯಣ ಗ್ರಂಥವನ್ನು ಭಕ್ತಿಯಿಂದ ಪೂಜಿಸಿ ಅದರಲ್ಲಿ ಬರುವ ಗುರುಸ್ತೋತ್ರವನ್ನು ಮಾಡಿ, ಅನಂತರ ಗ್ರಂಥದಲ್ಲಿ ಹೇಳಿದಂತೆ ನ್ಯಾಸವನ್ನು ಮಾಡಬೇಕು. ಅದಾದ ಮೇಲೆ ಶ್ರೀಸಿದ್ಧಾಂತ ಶಿಖಾಮಣಿ ಧ್ಯಾನಶ್ಲೋಕಗಳನ್ನು ಪಠಣ ಮಾಡಬೇಕು. ತರುವಾಯ ಶ್ರೀಸಿದ್ಧಾಂತ ಶಿಖಾಮಣಿಯ ಮಹಾತ್ಮ್ಯೆ ಹಾಗೂ ಫಲಶೃತಿಯನ್ನು ಪಠಿಸಬೇಕು. ತರುವಾಯ ಮೂಲಗ್ರಂಥದ ಪಾರಾಯಣವನ್ನು ಪ್ರಾರಂಭಿಸಬೇಕು.

**ಪಾರಾಯಣ ಪದ್ಧತಿಗಳು :**

1. ಒಂದು ಸಪ್ತಾಹದಲ್ಲಿ ಈ ಗ್ರಂಥವನ್ನು ಪೂರ್ಣಗೊಳಿಸಬೇಕು. ಒಂದು ದಿವಸಕ್ಕೆ ಮೂರು ಪರಿಚ್ಛೇದಗಳಂತೆ ಪಾರಾಯಣ ಮಾಡಲು ಒಂದು ಸಪ್ತಾಹದಲ್ಲಿ ಪೂರ್ಣವಾಗುವುದು. ಅಥವಾ ತಮ್ಮ ಇಚ್ಛಾನುಸಾರ ಹೆಚ್ಚು ಕಡಿಮೆ ಪರಿಚ್ಛೇದಗಳನ್ನೂ ಸಹ ಪಾರಾಯಣ ಮಾಡಬಹುದು. ಆದರೆ ಯಾವುದೇ ಪರಿಚ್ಛೇದದ ಅರ್ಧದಲ್ಲಿ ಸಮಾಪ್ತಿ ಮಾಡಬಾರದು.
2. ದಿನಕ್ಕೆ ಒಂದು ಪರಿಚ್ಛೇದದಂತೆ 21 ದಿನಗಳಲ್ಲಿ ಗ್ರಂಥ ಪಾರಾಯಣವನ್ನು ಪೂರ್ಣಗೊಳಿಸಬಹುದು.
3. ಶ್ರೀಸಿದ್ಧಾಂತ ಶಿಖಾಮಣಿಯಲ್ಲಿ ಬರುವ 101 ಅವಾಂತರ ಸ್ಥಲಗಳನ್ನು ದಿವಸಕ್ಕೆ ಒಂದರಂತೆ ಪಾರಾಯಣ ಮಾಡಿ 101 ದಿನಗಳಲ್ಲಿ ಗ್ರಂಥ ಪಾರಾಯಣವನ್ನು ಪೂರ್ಣಗೊಳಿಸಬೇಕು.

ಹೀಗೆ ಏಳು ದಿನಗಳಲ್ಲಿ, ಇಪ್ಪತ್ತೊಂದು ದಿನಗಳಲ್ಲಿ ಇಲ್ಲವೆ ನೂರೊಂದು ದಿನಗಳಲ್ಲಿ ಪೂರ್ಣವಾಗುವ ಈ ಮೂರು ರೀತಿಯ ಪದ್ಧತಿಗಳಲ್ಲಿ ತಮಗೆ ಇಷ್ಟವಾದ ಪದ್ಧತಿಯಲ್ಲಿ ಪಾರಾಯಣವನ್ನು ಮಾಡಬೇಕು. ಈ ರೀತಿಯಲ್ಲಿ ನಿರಂತರ ತನ್ನ ಬದುಕಿನ ಉದ್ದಕ್ಕೂ ಪಾರಾಯಣ ಮಾಡುತ್ತಲೇ ಇರಬೇಕು. ಇದರಿಂದ ಭೋಗ-ಮೋಕ್ಷಗಳೆರಡೂ ಪ್ರಾಪ್ತವಾಗುವುವು.

**ಸ್ವಾಧ್ಯಾಯ :**

**'ಸ್ವಾಧ್ಯಾಯ ಪ್ರವಚನಾಭ್ಯಾಂ ನ ಪ್ರಮದಿತವ್ಯಮ್'** ಎಂಬ ಉಕ್ತಿಗನುಗುಣವಾಗಿ ವೀರಶೈವರಿಗೆ ಶ್ರೀ ಸಿದ್ಧಾಂತ ಶಿಖಾಮಣಿಯ ಅಧ್ಯಯನವೇ ಸ್ವಾಧ್ಯಾಯ.

ಶ್ರೀ ಸಿದ್ಧಾಂತಶಿಖಾಮಣಿಯನ್ನು ಸ್ವಾಧ್ಯಾಯ ಮಾಡಲು ವಿಶೇಷವಾದ ಕಟ್ಟಳೆಗಳು ಇರುವುದಿಲ್ಲ. ತಮಗೆ ಸಾಧ್ಯವಾದಷ್ಟು ಶ್ಲೋಕಗಳನ್ನು ಪಠಣ ಮಾಡಿ ಅರ್ಥವನ್ನು ಮನನ, ನಿಧಿಧ್ಯಾಸ ಮಾಡಬೇಕು. ಸ್ವಾಧ್ಯಾಯವನ್ನು ಮಾಡಲು ಸಮಯ ನಿರ್ಧಾರವಿರುವುದಿಲ್ಲ. ತಮಗೆ ಅನುಕೂಲವಿದ್ದಾಗ ಇಷ್ಟ ಬಂದ ಯಾವುದೇ ಸ್ಥಾನದಲ್ಲಿ ಅಂದರೆ ಖಾಲಿ ಕುಳಿತಾಗ, ಪ್ರವಾಸದಲ್ಲಿದ್ದಾಗ, ತನಗೆ ಬೇಕಾದಾಗ ಮಾಡಬಹುದು.

**ಇತ್ಯನಂತ ಶಿವಾಶಿಷಃ**

**ಓಂ ನಮಃ ಪಂಚಾಚಾರ್ಯೇಭ್ಯೋ**
**ಪಂಚಾನನಮುಖೋದ್ಭೂತೇಭ್ಯೋ**
**ಪಂಚಸೂತ್ರಕರ್ತೃಭ್ಯೋ**
**ಪಂಚಾಕ್ಷರಮನುಸ್ವರೂಪೇಭ್ಯೋ**
**ಶಿವಾದ್ವೈತವಿದ್ಯಾಸಂಪ್ರದಾಯಕರ್ತೃಭ್ಯೋ**
**ವೀರಶೈವಮಹಾಮತಸಂಸ್ಥಾಪಕೇಭ್ಯೋ**
**ನಮೋ ಜಗದ್ಗುರುಭ್ಯಃ ॥**

## ಅಥ ಶ್ರೀಸಿದ್ಧಾಂತಶಿಖಾಮಣಿ ನ್ಯಾಸಾದಿಃ

**ಅಸ್ಯ ಶ್ರೀಸಿದ್ಧಾಂತಶಿಖಾಮಣಿಶಾಸ್ತ್ರಮಹಾಮಂತ್ರಸ್ಯ ಭಗವಾನ್ ಶ್ರೀಶಿವಯೋಗಿಶಿವಾಚಾರ್ಯ ಋಷಿಃ । ಅನುಷ್ಟುಪ್ ಛಂದಃ । ಶ್ರೀ ಸಚ್ಚಿದಾನಂದಸ್ವರೂಪಃ ಪರಶಿವೋ ದೇವತಾ ॥**
**ಅರ್ಥ:** ಶ್ರೀ ಸಿದ್ಧಾಂತ ಶಿಖಾಮಣಿ ಶಾಸ್ತ್ರವೆಂಬ ಮಹಾಮಂತ್ರಕ್ಕೆ ಶ್ರೀಶಿವಯೋಗಿ ಶಿವಾಚಾರ್ಯರೇ ಋಷಿ. ಅನುಷ್ಟುಪ್ ಛಂದಸ್ಸು. ಶ್ರೀ ಸಚ್ಚಿದಾನಂದ ಸ್ವರೂಪನಾದ ಪರಶಿವನೇ ದೇವತೆಯು.

**ಸಚ್ಚಿದಾನಂದರೂಪಾಯ**
**ಶಿವಾಯ ಬ್ರಹ್ಮಣೇ ನಮಃ ।** (ಸಿ.ಶಿ., 1–1)
ಇತಿ ಬೀಜಮ್ ॥

**ಅಮೃತಾರ್ಥಂ ಪ್ರಪನ್ನಾನಾಂ**
**ಯಾ ಸುವಿದ್ಯಾಪ್ರದಾಯಿನೀ ।** (ಸಿ.ಶಿ., 1–12)
ಇತಿ ಶಕ್ತಿಃ ॥

**ಶಿವಜ್ಞಾನಕರಂ ವಕ್ಷ್ಯೇ**
**ಸಿದ್ಧಾಂತಂ ಶೃಣು ಸಾದರಮ್** (ಸಿ.ಶಿ., 5–2)
ಇತಿ ಕೀಲಕಮ್ ॥

## ಅಥ ಕರನ್ಯಾಸಃ

**ಏಕ ಏವ ಶಿವಸ್ಸಾಕ್ಷಾಚ್ಚಿದಾನಂದಮಯೋ ವಿಭುಃ ।**
ಇತಿ ಅಂಗುಷ್ಠಾಭ್ಯಾಂ ನಮಃ ॥ (ಸಿ.ಶಿ., 5–34)

**ನಿರ್ವಿಕಲ್ಪೋ ನಿರಾಕಾರೋ ನಿರ್ಗುಣೋ ನಿಷ್ಪ್ರಪಂಚಕಃ ।**
ಇತಿ ತರ್ಜನೀಭ್ಯಾಂ ನಮಃ ॥ (ಸಿ.ಶಿ., 5–34)

**ಅನಾದ್ಯವಿದ್ಯಾಸಂಬಂಧಾತ್ತದಂಶೋ ಜೀವನಾಮಕಃ ।**
ಇತಿ ಮಧ್ಯಮಾಭ್ಯಾಂ ನಮಃ ॥ (ಸಿ.ಶಿ., 5–34)

**ದೇವತಿರ್ಯಙ್ಮನುಷ್ಯಾದಿಜಾತಿಭೇದೇ ವ್ಯವಸ್ಥಿತಃ ।**
ಇತಿ ಅನಾಮಿಕಾಭ್ಯಾಂ ನಮಃ ॥ (ಸಿ.ಶಿ., 5–35)

**ಮಾಯೀ ಮಹೇಶ್ವರಸ್ತೇಷಾಂ ಪ್ರೇರಕೋ ಹೃದಿ ಸಂಸ್ಥಿತಃ ।**
ಇತಿ ಕನಿಷ್ಠಿಕಾಭ್ಯಾಂ ನಮಃ ॥ (ಸಿ.ಶಿ., 5–35)

**ಬೀಜೇ ಯಥಾऽಂಕುರಃ ಸಿದ್ಧಸ್ತಥಾऽತ್ಮನಿ ಶಿವಃ ಸ್ಥಿತಃ ।**
ಇತಿ ಕರತಲಕರಪೃಷ್ಠಾಭ್ಯಾಂ ನಮಃ ॥

## ಅಥ ಹೃದಯಾದಿನ್ಯಾಸಃ

**ಏಕ ಏವ ಶಿವಸ್ಸಾಕ್ಷಾಚ್ಚಿದಾನಂದಮಯೋ ವಿಭುಃ ।**
ಇತಿ ಹೃದಯಾಯ ನಮಃ ॥
(ಸಿ.ಶಿ., 5–34)
**ನಿರ್ವಿಕಲ್ಪೋ ನಿರಾಕಾರೋ ನಿರ್ಗುಣೋ ನಿಷ್ಪ್ರಪಂಚಕಃ ।**
ಇತಿ ಶಿರಸೇ ಸ್ವಾಹಾ ॥
(ಸಿ.ಶಿ., 5–34)
**ಅನಾದ್ಯವಿದ್ಯಾಸಂಬಂಧಾತ್ತದಂಶೋ ಜೀವನಾಮಕಃ ।**
ಇತಿ ಶಿಖಾಯೈ ವಷಟ್ ॥ (ಸಿ.ಶಿ., 5–34)
**ದೇವತಿರ್ಯಙ್ಮನುಷ್ಯಾದಿಜಾತಿಭೇದೇ ವ್ಯವಸ್ಥಿತಃ ।**
ಇತಿ ಕವಚಾಯ ಹುಮ್ ॥ (ಸಿ.ಶಿ., 5–35)
**ಮಾಯೀ ಮಹೇಶ್ವರಸ್ತೇಷಾಂ ಪ್ರೇರಕೋ ಹೃದಿ ಸಂಸ್ಥಿತಃ ।**
ಇತಿ ನೇತ್ರತ್ರಯಾಯ ವೌಷಟ್ ॥ (ಸಿ.ಶಿ., 5–35)
**ಬೀಜೇ ಯಥಾऽಂಕುರಃ ಸಿದ್ಧಸ್ತಥಾऽತ್ಮನಿ ಶಿವಃ ಸ್ಥಿತಃ ।**
ಇತಿ ಅಸ್ತ್ರಾಯ ಫಟ್ ॥ (ಸಿ.ಶಿ., 5–36)
ಶ್ರೀ ಶಿವಪ್ರೀತ್ಯರ್ಥೇ ಶ್ರೀಸಿದ್ಧಾಂತಶಿಖಾಮಣಿಪಾಠೇ
ವಿನಿಯೋಗಃ ॥ ಈ ಶಾಸ್ತ್ರಕ್ಕೆ 1–1 ಎಂಬುದು ಬೀಜ. ವಿಸ್ತಾರವಾದ ಶ್ರೀಸಿದ್ಧಾಂತ ಶಿಖಾಮಣಿ ಗ್ರಂಥದ ವಿಷಯವು ಈ ಆಧಾರದಲ್ಲಿರುವುದರಿಂದ ಇದಕ್ಕೆ ಬೀಜವೆನ್ನುತ್ತಾರೆ. 1–12 ಎಂಬುದು ಶಕ್ತಿಮಂತ್ರ. ಈ ಶಕ್ತಿ ಸಂಚಾರ ದಿಂದಲೇ ಗ್ರಂಥವು ಸಜೀವವಾಗಿದೆ ಮತ್ತು 5–2 ಎಂಬುದು ಕೀಲಕ.

## ಅಥ ಧ್ಯಾನಮ್

**(6 ಶ್ಲೋಕಗಳು)**

**ಸ್ವಸ್ತಿ ಶ್ರೀಗಣನಾಯಕೇನ ಮುನಯೇऽಗಸ್ತ್ಯಾಯ ತತ್ತ್ವಾರ್ಥಿನೇ ।**
**ಶಿಷ್ಯಾಯ ಪ್ರತಿಬೋಧಿತೇ ಭಗವತಾ ಶ್ರೀರೇಣುಕೇನ ಸ್ವಯಮ್ ॥**
**ತಾತ! ತ್ವಂ ಶಿವಯೋಗಿವರ್ಯಸುಕೃತಿರ್ಮೇ ಮಾನಸೇ ಮಂದಿರೇ।**

ಶ್ರೀಸಿದ್ಧಾಂತಶಿಖಾಮಣೇ! ವಸ ಸದಾ ಜ್ಞಾನಪ್ರದೀಪೋ ಭವ ॥1॥
ಶರಣಾಗತದೀನಾರ್ತಪರಿತ್ರಾಣೈಕಹೇತವೇ ।
ಶ್ರೀರೇಣುಕಗಣೇಶಾಯ ಜ್ಞಾನಮುದ್ರಾಯ ತೇ ನಮಃ ॥2॥
ಅಗಸ್ತ್ಯಸಂಶಯವ್ರಾತಮಹಾಧ್ವಾಂತಾಂಶುಮಾಲಿನಮ್ ।
ವಂದೇ ಶಿವಸುತಂ ದೇವಂ ರೇಣುಕಾಖ್ಯಂ ಜಗದ್ಗುರುಮ್ ॥3॥
ನಮಃ ಶಿವಾಚಾರ್ಯವರಾಯ ತುಭ್ಯಂ
ಶ್ರೀವೀರಶೈವಾಗಮಸಾಗರಾಯ ।
ವಿನಾಪಿ ತೈಲಂ ಭವತಾಽತ್ರ ಯೇನಪ್ರಜ್ವಾಲಿತೋ ಜ್ಞಾನಮಣಿಪ್ರದೀಪಃ ॥4॥
ಯಸ್ಮಿನ್ನಾಗಮಶಾಸ್ತ್ರತತ್ತ್ವಮಖಿಲಂ ಸಮ್ಯಕ್ ಚ ಸಂಸೂಚಿತಮ್
ಭಕ್ತೈರ್ವಾಂಛಿತಭುಕ್ತಿಮುಕ್ತಿಫಲದಂ ಯತ್ಕಲ್ಪವೃಕ್ಷಾತ್ಮಕಮ್ ।
ತಂ ಶೈವಾಗಮಸಮ್ಮತಂ ನಿಗಮವಿದ್ವಿದ್ವದ್ಭಿರಾಸೇವಿತಮ್ ।
ಶ್ರೀಸಿದ್ಧಾಂತಶಿಖಾಮಣಿಂ ಪ್ರತಿದಿನಂ ಧ್ಯಾಯೇತ್ ಸದಾ ಸಾದರಮ್ ॥5॥
ಪೂಜ್ಯಶ್ರೀಶಿವಯೋಗಿವರ್ಯರಚಿತಂ ಸಿದ್ಧಾಂತರತ್ನಾಕರಂ
ಸೂಕ್ಷ್ಮಂ ಧಾರ್ಮಿಕತಾತ್ತ್ವಿಕಸ್ಥಲಯುತಂ ಚೈಕಾಧಿಕಂ ತತ್ ಶತಮ್ ।
ತ್ರೈಲೋಕ್ಯಂ ಪದಮಾದಿಮಂ ಪರಪದಂ ಸರ್ವಾಂತಿಮೇ ಯೋಜಿತಮ್
ಶ್ರೀಸಿದ್ಧಾಂತಶಿಖಾಮಣಿಂ ದಿನದಿನಂ ಧ್ಯಾಯೇತ್ ಸದಾ ಶಾಂತಿದಮ್ ॥6॥

## ಧ್ಯಾನ ಶ್ಲೋಕಗಳ ಅರ್ಥ

1. **ಸ್ವಸ್ತಿಶ್ರೀಗಣನಾಯಕೇನ**

   **ಅರ್ಥಗಳು**: ಗಣನಾಯಕರಾದ ಶ್ರೀರೇಣುಕ ಭಗವತ್ಪಾದರಿಂದ, ಸ್ವತಃ ತನ್ನ ಶಿಷ್ಯನೂ, ತತ್ತ್ವಾಪೇಕ್ಷಿಯೂ, ಮುನಿಯೂ ಆದ ಅಗಸ್ತ್ಯನಿಗೆ ಉಪದೇಶಿಸಿದ ಮತ್ತು ಶಿವಯೋಗಿ ಶಿವಾಚಾರ್ಯರಿಂದ ರಚಿಸಲ್ಪಟ್ಟ ಹೇ ಶ್ರೀ ಸಿದ್ಧಾಂತ ಶಿಖಾಮಣಿಯೇ, ನನ್ನ ಮನೋಮಂದಿರದಲ್ಲಿ ಯಾವಾಗಲೂ ವಾಸವಾಗಿದ್ದು, ಜ್ಞಾನಪ್ರಕಾಶವನ್ನು ಕೊಡುವಂತಾಗು.

2. **ಶರಣಾಗತದೀನಾರ್ತ**

   ತನಗೆ ಶರಣಾಗತರಾದ ದೀನರರನ್ನು ಮತ್ತು ದುಃಖಿತರನ್ನು ರಕ್ಷಿಸುವಲ್ಲಿ ಕಾರಣೀಭೂತವಾಗಿರುವ ಮತ್ತು ಜ್ಞಾನಮುದ್ರೆಯಿಂದ ಒಡಗೂಡಿರುವ ಶ್ರೀ ರೇಣುಕ ಗಣೇಶ್ವರನಿಗೆ ನಮಸ್ಕಾರಗಳು.

3. **ಅಗಸ್ತ್ಯಸಂಶಯವ್ರಾತ**

   ಅಗಸ್ತ್ಯನ ಮನಸ್ಸಿನಲ್ಲಿರುವ ಸಂಶಯಗಳ ಸಮೂಹವೆಂಬ ಗಾಢವಾದ ಅಂಧಕಾರವನ್ನು ದೂರಮಾಡುವಲ್ಲಿ ಸೂರ್ಯ ನೋಪಾದಿಯಲ್ಲಿರುವ, ದೇವನಾದ, ಶಿವಪುತ್ರನಾದ, ಆ ರೇಣುಕ ಜಗದ್ಗುರುವಿಗೆ ನಾನು ವಂದಿಸುತ್ತೇನೆ.

4. **ನಮಃಶಿವಾಚಾರ್ಯ**

   ಶಿವಾಚಾರ್ಯ ಶ್ರೇಷ್ಠನೂ, ವೀರಶೈವ ಆಗಮಗಳ ಸಾಗರನೂ ಮತ್ತು ತೈಲವಿಲ್ಲದ ಜ್ಞಾನಮಣಿರೂಪವಾದ ದೀಪವನ್ನು ಬೆಳಗಿಸಿದವನೂ ಆದ ಹೇ ಶಿವಯೋಗಿಶಿವಾಚಾರ್ಯನೇ! ನಿನಗೆ ನಮಸ್ಕಾರವು.

5. **ಯಸ್ಮಿನ್ ಆಗಮಶಾಸ್ತ್ರ**

ಆಗಮಶಾಸ್ತ್ರಗಳ ಎಲ್ಲಾ ತತ್ತ್ವಗಳನ್ನು ಚೆನ್ನಾಗಿ ಸೂಚಿಸುವ, ಅಪೇಕ್ಷಿತವಾದ ಭುಕ್ತಿ ಮತ್ತು ಮುಕ್ತಿಫಲಗಳನ್ನು ಕೊಡುವಲ್ಲಿ ಮಂಗಲಮಯವಾದ ಕಲ್ಪವೃಕ್ಷದಂತಿರುವ, ಶೈವಾಗಮ ಸಮ್ಮತವಾದ, ವೇದಸಮ್ಮತವಾದ, ವಿದ್ವಾಂಸರಿಂದ ಸ್ವೀಕರಿಸಲ್ಪಟ್ಟ ಶ್ರೀ ಸಿದ್ಧಾಂತ ಶಿಖಾಮಣಿಯನ್ನು ಪ್ರತಿದಿನವೂ ಆದರಪೂರ್ವಕವಾಗಿ ಧ್ಯಾನಿಸಬೇಕು.

6. **ಪೂಜ್ಯಶ್ರೀ ಶಿವಯೋಗಿವರ್ಯರಚಿತಂ**

ಸಿದ್ಧಾಂತಗಳ ಸಾಗರದಂತಿರುವ ನೂರೊಂದು ಸ್ಥಲಗಳಿಂದ ಕೂಡಿದ ಸೂಕ್ಷ್ಮಗಳಾದ ಶಾಂತಿಯುಕ್ತವಾದ ಮತ್ತು ಧಾರ್ಮಿಕ ತತ್ತ್ವಗಳನ್ನೊಳಗೊಂಡ, ಆರಂಭದಲ್ಲಿ 'ತ್ರೈಲೋಕ್ಯ'ವೆಂಬ ಪದವನ್ನು ಹೊಂದಿದ ಗ್ರಂಥಾಂತ್ಯದಲ್ಲಿ 'ಪರ' ಪದದಿಂದ ಕೂಡಿದ ಶಾಂತಿದಾಯಕವಾದ ಮತ್ತು ಶ್ರೀ ಶಿವಯೋಗಿ ಶಿವಾಚಾರ್ಯರಿಂದ ವಿರಚಿತವಾದ ಶ್ರೀಸಿದ್ಧಾಂತ –ಶಿಖಾಮಣಿಯನ್ನು ದಿನದಿನವೂ ಧ್ಯಾನಿಸಬೇಕು.

## ಅಥ ಶ್ರೀಸಿದ್ಧಾಂತಶಿಖಾಮಣಿಮಾಹಾತ್ಮ್ಯಮ್
## (7 ಶ್ಲೋಕಗಳು)

ಯಃ ಪಠೇತ್ ಪ್ರಯತೋ ನಿತ್ಯಂ ಶ್ರೀಸಿದ್ಧಾಂತಶಿಖಾಮಣಿಮ್ ।
ಶಿವಸಾಯುಜ್ಯಮಾಪ್ನೋತಿ ಭಯಶೋಕಾದಿವರ್ಜಿತಃ ॥1॥
ಸದಾಽಧ್ಯಯನಶೀಲಸ್ಯ ಶ್ರೀಸಿದ್ಧಾಂತಶಿಖಾಮಣೇಃ ।
ಕ್ಷೀಯಂತೇ ಸರ್ವಪಾಪಾನಿ ಪೂರ್ವಜನ್ಮಕೃತಾನಿ ಚ ॥2॥
ಜಲಸ್ನಾನಾದ್ ವರಂ ಪುಂಸಾಂ ಶ್ರೀಸಿದ್ಧಾಂತಶಿಖಾಮಣೌ ।
ಜ್ಞಾನಾರ್ಣವೇ ಸದಾ ಸ್ನಾನಂ ಸಂಸಾರಮಲನಾಶನಮ್ ॥3॥
ಶ್ರೀರೇಣುಕಗಣಾಧ್ಯಕ್ಷಮುಖಪದ್ಮಾದ್ವಿನಿಃಸೃತಃ ।
ಕಂಠಪೀಠೇ ಸದಾ ಧಾರ್ಯಃ ಶ್ರೀಸಿದ್ಧಾಂತಶಿಖಾಮಣಿಃ ॥4॥
ಶ್ರೀರೇಣುಕಗಣಾಧ್ಯಕ್ಷವಚನಾಮೃತಸಾಗರಮ್ ।
ಪಾಯಂ ಪಾಯಂ ಸದಾ ಪುಂಸಾಂ ಪುನರ್ಜನ್ಮ ನ ವಿದ್ಯತೇ ॥5॥
ಸರ್ವಾಗಮವ್ರಜೋ ಗಾವಸ್ತಾಸಾಂ ದೋಗ್ಧಾ ಚ ರೇಣುಕಃ ।
ವತ್ಸೋಽಗಸ್ತ್ಯಃ ಸುಧೀರ್ಭೋಕ್ತಾ ದುಗ್ಧಂ ಶಿಖಾಮಣಿರ್ಮಹಾನ್ ॥6॥
ಏಕಂ ಶಾಸ್ತ್ರಂ ಶ್ರೀಶಿವಾದ್ವೈತಸಂಜ್ಞಮ್
ಏಕೋ ದೇವಃ ಶ್ರೀಮಹಾದೇವ ಏವ ।
ಏಕೋ ಮಂತ್ರಃ ಶೈವಪಂಚಾಕ್ಷರೋಽಯಮ್
ಕರ್ಮಾಪ್ಯೇಕಮಿಷ್ಟಲಿಂಗಾರ್ಚನಂ ಹಿ ॥7॥

## ಸಿದ್ಧಾಂತ ಶಿಖಾಮಣಿ ಮಾಹಾತ್ಮ್ಯ

**1. ಯಃ ಪಠೇತ್ ಪ್ರಯತೋ ನಿತ್ಯಮ್ :**

ಯಾರು ಶ್ರೀ ಸಿದ್ಧಾಂತ ಶಿಖಾಮಣಿಯನ್ನು ಪ್ರಯತ್ನಪೂರ್ವಕವಾಗಿ ದಿನವೂ ಪಾರಾಯಣ ಮಾಡುವವರೋ ಅವರು ಭಯ ಮತ್ತು ಶೋಕಾದಿಗಳಿಂದ ಬಿಡಲ್ಪಟ್ಟವರಾಗಿ ಶಿವಸಾಯುಜ್ಯವನ್ನು ಹೊಂದುತ್ತಾರೆ.

**2. ಸದಾಽಧ್ಯಯನಶೀಲಸ್ಯ**

ಶ್ರೀ ಸಿದ್ಧಾಂತ ಶಿಖಾಮಣಿಯನ್ನು ಯಾರು ಯಾವಾಗಲೂ ಅಧ್ಯಯನವನ್ನು ಮಾಡುತ್ತಾರೆಯೋ, ಅವರು ಪೂರ್ವಜನ್ಮಗಳಲ್ಲಿ ಮಾಡಿದ ಎಲ್ಲಾ ಪಾಪಗಳು ಕ್ಷಯಿಸಿಹೋಗುತ್ತವೆ.

**3. ಜಲಸ್ನಾನಾದ್ ವರಂ ಪುಂಸಾಮ್**

ಸಂಸಾರದ ಎಲ್ಲ ಮಲಗಳನ್ನು ದೂರಮಾಡುವ ಶ್ರೀ ಸಿದ್ಧಾಂತ ಶಿಖಾಮಣಿಯೆಂಬ ಜ್ಞಾನಸಾಗರದಲ್ಲಿ ಯಾವಾಗಲೂ ಮಾಡುವ ಸ್ನಾನವು ಪುರುಷರಿಗೆ (ಜೀವಿಗಳಿಗೆ) ಜಲಸ್ನಾನಕ್ಕಿಂತಲೂ ಶ್ರೇಷ್ಠವೆಂಬುದಾಗಿ ತಿಳಿದುಕೊಳ್ಳಬೇಕು.

**4. ಶ್ರೀ ರೇಣುಕಗಣಾಧ್ಯಕ್ಷ**

ಶ್ರೀ ರೇಣುಕರೆಂಬ ಗಣಾಧ್ಯಕ್ಷರ ಮುಖಕಮಲದಿಂದ ಹೊರಹೊರಟ ಶ್ರೀ ಸಿದ್ಧಾಂತ ಶಿಖಾಮಣಿಯನ್ನು ಯಾವಾಗಲೂ, ಕಂಠಪೀಠದಲ್ಲಿ (ಎಲ್ಲರೂ) ಸ್ಥಾಪಿಸಿಕೊಳ್ಳಬೇಕು.

**5. ಶ್ರೀ ರೇಣುಕಗಣಾಧ್ಯಕ್ಷ ವಚನಾಮೃತಸಾಗರ**

ಶ್ರೀ ರೇಣುಕ ಗಣಾಧ್ಯಕ್ಷರ ಉಪದೇಶಾಮೃತವೆಂಬ ಸಾಗರವನ್ನು ಯಾವ ಜೀವಿಗಳು ಪುನಃ ಪುನಃ ಪಾನ ಮಾಡುತ್ತಾರೆಯೋ ಅವರಿಗೆ ಪುನರ್ಜನ್ಮವು ಇರುವುದಿಲ್ಲ.

**6. ಸರ್ವಾಗಮವ್ರಜೋ ಗಾವಃ**

ಸಿದ್ಧಾಂತಾಗಮಗಳೆಂಬ ಗೋವುಗಳನ್ನು ಶ್ರೀ ರೇಣುಕರು ದೋಹನ ಮಾಡಿದ್ದಾರೆ (ಹಿಂಡಿದ್ದಾರೆ). ಇಲ್ಲಿ ಅಗಸ್ತ್ಯಮುನಿಯೇ ಕರುವಾಗಿದ್ದಾನೆ, ಶ್ರೀ ಸಿದ್ಧಾಂತ ಶಿಖಾಮಣಿಯೇ ಅಮೃತವಾಗಿರುತ್ತದೆ ಮತ್ತು ಸೂಕ್ಷ್ಮಜ್ಞರಾದ ಜಿಜ್ಞಾಸುಗಳೇ ಆ ಅಮೃತವನ್ನು ಸೇವಿಸುವ ಭೋಕ್ತೃಗಳಾಗಿದ್ದಾರೆ.

**7. ಏಕಂ ಶಾಸ್ತ್ರಂ**

ಈ ಲೋಕದಲ್ಲಿ ಶಿವಾದ್ವೈತಶಾಸ್ತ್ರವೊಂದೇ ಶಾಸ್ತ್ರವಾಗಿರುತ್ತದೆ. ಮಹಾದೇವ ನೊರ್ವನೇ ದೇವನಾಗಿರುತ್ತಾನೆ. ಶಿವಪಂಚಾಕ್ಷರಿ ಮಹಾಮಂತ್ರವೊಂದೇ ಮಂತ್ರವಾಗಿರುತ್ತದೆ. ಅದರಂತೆ ಇಷ್ಟಲಿಂಗಾರ್ಚನೆಯೊಂದೇ ಶ್ರೇಷ್ಠವಾದ ಕರ್ಮವಾಗಿರುತ್ತದೆ.

## ಅಥ ಫಲಶ್ರುತಿಃ

**ಶ್ರೀವೇದಾಗಮವೀರಶೈವಸರಣಿಂ ಶ್ರೀಷಟ್‌ಸ್ಥಲೋದ್ಯನ್ಮಣಿಮ್**
**ಶ್ರೀಜೀವೇಶ್ವರಯೋಗಪದ್ಮತರಣಿಂ ಶ್ರೀಗೋಪ್ಯಚಿಂತಾಮಣಿಮ್ ।**

**ಶ್ರೀಸಿದ್ಧಾಂತಶಿಖಾಮಣಿಂ ಲಿಖಯಿತ ಯಸ್ತಂ ಲಿಖಿತ್ವಾ ಪರಾನ್**
**ಶ್ರುತ್ವಾ ಶ್ರಾವಯಿತಾ ಸ ಯಾತಿ ವಿಮಲಾಂ ಭುಕ್ತಿಂ ಚ ಮುಕ್ತಿಂ ಪರಾಮ್ ॥**
**(ಸಿ.ಶಿ., 21–55)**

"ಶ್ರೀ ವೇದಾಗಮಗಳಿಂದ ಪ್ರತಿಪಾದಿತವಾಗಿರುವ ವೀರಶೈವ ಮಾರ್ಗವನ್ನು ನಿರೂಪಿಸಿರುವ, ಷಟ್‌ಸ್ಥಲ ಮಾರ್ಗವನ್ನು ತೋರಿಸಿ ಕೊಡುವ ಹೊಳೆಯುತ್ತಿರುವ ರತ್ನದಂತಿರುವ, **ಜೀವ ಮತ್ತು ಈಶ್ವರರ ಐಕ್ಯವೆಂಬ ತಾವರೆಯನ್ನು ಅರಳಿಸುವ ಸೂರ್ಯನಂತಿರುವ,** ಶಿವಾದ್ವೈತ ಜ್ಞಾನವೆಂಬ ಗುಪ್ತನಿಧಿಯನ್ನು ತೋರಿಸಿಕೊಡುವ ಶ್ರೀ ಚಿಂತಾಮಣಿಯಾಗಿರುವ, ಸಕಲ ಸಿದ್ಧಾಂತಗಳಿಗೆ ಶಿಖಾರತ್ನದಂತಿರುವ ಈ ಶ್ರೀ ಸಿದ್ಧಾಂತ ಶಿಖಾಮಣಿಯೆಂಬ ಶಿವಾದ್ವೈತ ಶಾಸ್ತ್ರವನ್ನು ಯಾರು ತಾನಾಗಿ ಬರೆದು, ಇತರರಿಂದಲೂ ಬರೆಯಿಸುವನೋ, ಯಾವಾತನು ತಾನೂ ಶ್ರವಣ ಮಾಡಿ (ಕೇಳಿ) ಇತರರಿಗೂ ಶ್ರವಣ ಮಾಡಿಸುವನೋ ಆತನು ನಿರ್ಮಲವಾದ ಐಹಿಕ ಸುಖಭೋಗಗಳನ್ನು ಮತ್ತು ಸರ್ವೋತ್ಕೃಷ್ಟವಾದ ಮುಕ್ತಿಯನ್ನು ಪಡೆದುಕೊಳ್ಳುವನು."

ಓಂ

ಶ್ರೀ ರೇಣುಕಾಚಾರ್ಯಾಯ ನಮಃ

## ಅವತರಣಿಕಾ

**ಅನೇಕವಿಧಸಿದ್ಧಾಂತಶಿಖಾಮಣಿಮನಾಮಯಮ್ ।**
**ಶ್ರೀವೀರಶೈವಸಿದ್ಧಾಂತಮೇಕೋತ್ತರಶತಸ್ಥಲಮ್ ॥**
**ರೇಣುಕಾಗಸ್ತ್ಯಸಂವಾದಂ ನಿಗಮಾಗಮವಿಶ್ರುತಮ್ ।**
**ಪ್ರದೀಪಯತಿ ಗುಪ್ತಾರ್ಥಮುದ್ಧೃತ್ಯ ಶಿವಯೋಗಿರಾಟ್ ॥**

**–ಮರಿತೋಂಟದಾರ್ಯರು (ಯುಗ್ಮಕ)**

"ಅನೇಕ ಪ್ರಕಾರದ ಸಿದ್ಧಾಂತಗಳಲ್ಲಿ ಶಿಖಾಮಣಿಯೋ ಪಾದಿಯಲ್ಲಿರುವ, ದೋಷರಹಿತವಾದ ನೂರೊಂದು ಸ್ಥಲಗಳಿಂದ ಕೂಡಿರುವ ರೇಣುಕಾಗಸ್ತ್ಯ ಸಂವಾದ ರೂಪದಲ್ಲಿರುವ, ನಿಗಮಾಗಮಗಳಲ್ಲಿ ಪ್ರಸಿದ್ಧವಾದ ವೀರಶೈವ ಸಿದ್ಧಾಂತವನ್ನು ಶಿವಯೋಗಿ ಶಿವಾಚಾರ್ಯರು ಅದರಲ್ಲಿನ ಗುಪ್ತವಾದ ಅರ್ಥವನ್ನು ಹೊರತೆಗೆದು ಪ್ರಕಾಶಪಡಿಸುತ್ತಾರೆ."

# ಪ್ರಥಮಃ ಪರಿಚ್ಛೇದಃ
# ಮೊದಲನೆಯ ಪರಿಚ್ಛೇದವು

## ಮಂಗಲಾಚರಣಾನುಕ್ರಮಪ್ರಸಂಗಃ
ಮಂಗಳಾಚರಣ ಕ್ರಮ ಪ್ರಸಂಗವು
**(32 ಶ್ಲೋಕಗಳು)**

### 1. ಶಿವಸ್ತುತಿಃ
ಶಿವಸ್ತುತಿಯು
**(7 ಶ್ಲೋಕಗಳು)**

**ತ್ರೈಲೋಕ್ಯಸಂಪದಾಲೇಖ್ಯ–**
**ಸಮುಲ್ಲೇಖನಭಿತ್ತಯೇ ।**
**ಸಚ್ಚಿದಾನಂದರೂಪಾಯ**
**ಶಿವಾಯ ಬ್ರಹ್ಮಣೇ ನಮಃ ॥ 1–1**

ಮೂರು ಲೋಕವೆಂಬ ಸಂಪದ್ರೂಪವಾದ ಚಿತ್ರದ ಬರವಣಿಗೆಗೆ ಆಧಾರವಾದ ಗೋಡೆಯಂತಿರುವ ಸತ್ತು, ಚಿತ್ತು, ಆನಂದರೂಪ ಶಿವನಾದ ಬ್ರಹ್ಮನಿಗೆ ನಮಸ್ಕಾರ

**ಬ್ರಹ್ಮೇತಿ ವ್ಯಪದೇಶಸ್ಯ**
**ವಿಷಯಂ ಯಂ ಪ್ರಚಕ್ಷತೇ ।**
**ವೇದಾಂತಿನೋ ಜಗನ್ಮೂಲಂ**
**ತಂ ನಮಾಮಿ ಪರಂ ಶಿವಮ್ ॥ 1–2**

ಬ್ರಹ್ಮನೆಂಬ ಶಬ್ದಕ್ಕೆ ವೇದಾಂತಿಗಳು ಯಾರನ್ನು ವಿಷಯವನ್ನಾಗಿ ತಿಳಿಯುವರೋ ಆ ಜಗದ ಮೂಲನಾದ ಪರನಾದ ಶಿವನಿಗೆ ನಮಿಸುತ್ತೇನೆ.

**ಯಸ್ಯೋರ್ಮಿಬುದ್ಬುದಾಭಾಸಃ**
**ಷಟ್ತ್ರಿಂಶತ್ತತ್ತ್ವಸಂಚಯಃ ।**
**ನಿರ್ಮಲಂ ಶಿವನಾಮಾನಮ್**
**ತಂ ವಂದೇ ಚಿನ್ಮಹೋದಧಿಮ್ ॥ 1–3**

ಮೂವತ್ತಾರು ತತ್ತ್ವಗಳ ಸಮೂಹವು ಯಾವ ಸಮುದ್ರದ ನೊರೆತೆರೆಯ ಸ್ವರೂಪವೋ ಆ ನಿರ್ಮಲವಾದ (ಮಲತ್ರಯಗಳಿಲ್ಲದ) ಶಿವನೆಂಬ ಚಿನ್ಮಯವಾದ ಸಾಗರ ಸ್ವರೂಪಿಗೆ ನಮಿಸುತ್ತೇನೆ (ಶಿವಾದಿ ಭೂಮಿ ಪರ್ಯಂತರವಾದ 36 ತತ್ತ್ವಗಳು).

**ಯದ್ಭಾಸಾ ಭಾಸತೇ ವಿಶ್ವಮ್**
**ಯತ್ಸುಖೇನಾನುಮೋದತೇ ।**

**ನಮಸ್ತಸ್ಮೈ ಗುಣಾತೀತ–**
**ವಿಭವಾಯ ಪರಾತ್ಮನೇ ॥ 1–4**

ವಿಶ್ವವು ಯಾರ ಪ್ರಕಾಶದಿಂದ ಪ್ರಕಾಶಿಸುತ್ತದೆಯೋ, ಯಾರ ಆನಂದದಿಂದ ಆನಂದಿಸುತ್ತದೆಯೋ, ಗುಣಾತೀತವಾದ ಮತ್ತು ಜ್ಞಾನ, ಐಶ್ವರ್ಯಯುಕ್ತನಾದ ಆ ಪರಮಾತ್ಮನಿಗೆ ನಮಸ್ಕರಿಸುತ್ತೇನೆ.

**ಸದಾಶಿವಮುಖಾಶೇಷ–**
**ತತ್ತ್ವೋನ್ಮೇಷವಿಧಾಯಿನೇ ।**
**ನಿಷ್ಕಲಂಕಸ್ವಭಾವಾಯ**
**ನಮಃ ಶಾಂತಾಯ ಶಂಭವೇ ॥ 1–5**

ಸದಾಶಿವತತ್ತ್ವವನ್ನೇ ಮೊದಲುಗೊಂಡು ಉಳಿದ ಸಮಸ್ತ ತತ್ತ್ವಗಳ ಅಭಿವ್ಯಕ್ತಿ ಯನ್ನುಂಟುಮಾಡುವ ನಿಷ್ಕಲಂಕ ಸ್ವಭಾವಿಯಾದ ಶಾಂತನಾದ ಶಂಭುವಿಗೆ ನಮಸ್ಕಾರವು.

**ಸ್ವೇಚ್ಛಾವಿಗ್ರಹಯುಕ್ತಾಯ**
**ಸ್ವೇಚ್ಛಾವರ್ತನವರ್ತಿನೇ ।**
**ಸ್ವೇಚ್ಛಾಕೃತತ್ರಿಲೋಕಾಯ**
**ನಮಃ ಸಾಂಬಾಯ ಶಂಭವೇ ॥ 1–6**

ಸ್ವೇಚ್ಛೆಯಿಂದ (ತನ್ನ ಇಚ್ಛಾಶಕ್ತಿಯಿಂದ) ದಿವ್ಯದೇಹವನ್ನು (ವಿಗ್ರಹ) ಧರಿಸಿದ, ಸ್ವೇಚ್ಛೆ (ಸ್ವ–ಇಚ್ಛೆ)ಯಿಂದ ಆಚರಣೆಯಲ್ಲಿರುವ, ಸ್ವೇಚ್ಛೆಯಿಂದಲೇ ಮೂರು ಲೋಕ ಗಳನ್ನು ಸೃಷ್ಟಿಸಿರುವ ಸಾಂಬನಾದ (ಉಮಾಸಹಿತನಾದ) ಶಂಭುವಿಗೆ ನಮಸ್ಕಾರವು

**ಯತ್ರ ವಿಶ್ರಾಮ್ಯತೀಶತ್ವಮ್**
**ಸ್ವಾಭಾವಿಕಮನುತ್ತಮಮ್ ।**
**ನಮಸ್ತಸ್ಮೈ ಮಹೇಶಾಯ**
**ಮಹಾದೇವಾಯ ಶೂಲಿನೇ ॥ 1–7**

ಸ್ವಾಭಾವಿಕವಾದ ಅತ್ಯಂತ ಶ್ರೇಷ್ಠವಾದ ಈಶತ್ವವು ಯಾರಲ್ಲಿ ವಿಶ್ರಮಿಸುವುದೋ, ಆ ಮಹೇಶ್ವರನೂ, ಶೂಲಿಯೂ ಆದ ಮಹಾದೇವನಿಗೆ ನಮಸ್ಕಾರವು.

***ಇತಿ ಶಿವಸ್ತುತಿಃ*** *ಇಲ್ಲಿಗೆ ಶಿವಸ್ತುತಿಯು ಮುಗಿಯಿತು.*

## 2. ಶಕ್ತಿಸ್ತುತಿಃ
## ಶಕ್ತಿಸ್ತುತಿಯು
## (5 ಶ್ಲೋಕಗಳು)

**ಯಾಮಾಹುಃ ಸರ್ವಲೋಕಾನಾಮ್**
**ಪ್ರಕೃತಿಂ ಶಾಸ್ತ್ರಪಾರಗಾಃ ।**
**ತಾಂ ಧರ್ಮಚಾರಿಣೀಂ ಶಂಭೋಃ**
**ಪ್ರಣಮಾಮಿ ಪರಾಂ ಶಿವಾಮ್ ॥ 1–8**

ಶಾಸ್ತ್ರಪಾರಂಗತರು ಯಾರನ್ನು ಸರ್ವಲೋಕಗಳ ಪ್ರಕೃತಿಯನ್ನಾಗಿ ಹೇಳುವರೋ, ಶಂಭುವಿಗೆ ಧರ್ಮಚಾರಿಣಿಯಾದ ಆ ಪರಶಿವೆಗೆ ಪ್ರಣಾಮವು.

**ಯಯಾ ಮಹೇಶ್ವರಃ ಶಂಭು–**
**ರ್ನಾಮರೂಪಾದಿಸಂಯುತಃ ।**
**ತಸ್ಯೈ ಮಾಯಾಸ್ವರೂಪಾಯೈ**
**ನಮಃ ಪರಮಶಕ್ತಯೇ ॥ 1–9**

ಯಾವ ಶಕ್ತಿಯಿಂದ ಮಹೇಶ್ವರನಾದ ಶಂಭುವು ನಾಮರೂಪಾದಿಗಳಿಂದ ಕೂಡಿರುವನೋ, ಆ ಮಾಯಾಸ್ವರೂಪಿಣಿಯಾದ ಪರಮಶಕ್ತಿಗೆ ನಮಸ್ಕಾರವು.

**ಶಿವಾದ್ಯಾದಿಸಮುತ್ಪನ್ನ–**
**ಶಾಂತ್ಯತೀತಪರೋತ್ತರಾಮ್ ।**
**ಮಾತರಂ ತಾಂ ಸಮಸ್ತಾನಾಮ್**
**ವಂದೇ ಶಿವಕರೀಂ ಶಿವಾಮ್ ॥ 1–10**

ಶಿವನಿಂದ ಯಾವಳು ಮೊದಲು ಆವಿರ್ಭವಿಸಿದ ಶಾಂತ್ಯತೀತೋತ್ತರ ಕಲಾರೂಪಳೂ, ಸಮಸ್ತರ ಮಾತೆಯೂ ಆದ ಆ ಶಿವಕರಿ (ಮಂಗಳವನ್ನುಂಟು ಮಾಡುವ) ಶಿವೆಯನ್ನು ವಂದಿಸುತ್ತೇನೆ.

**ಇಚ್ಛಾಜ್ಞಾನಾದಿರೂಪೇಣ**
**ಯಾ ಶಂಭೋರ್ವಿಶ್ವಭಾವಿನೀ ।**
**ವಂದೇ ತಾಂ ಪರಮಾನಂದ–**
**ಪ್ರಬೋಧಲಹರೀಂ ಶಿವಾಮ್ ॥ 1–11**

ಶಂಭುವಿನ ಯಾವ ಶಕ್ತಿಯು ಇಚ್ಛಾಜ್ಞಾನಾದಿ ರೂಪಗಳಿಂದ ವಿಶ್ವವನ್ನು ಅಭಿವ್ಯಕ್ತಗೊಳಿಸುವಳೋ, ಅಂತಹ ಪರಮಾನಂದ ಪ್ರಬೋಧಲಹರಿ ರೂಪಳಾದ ಶಿವೆಯನ್ನು ವಂದಿಸುತ್ತೇನೆ.

**ಅಮೃತಾರ್ಥಂ ಪ್ರಪನ್ನಾನಾಮ್**
**ಯಾ ಸುವಿದ್ಯಾಪ್ರದಾಯಿನೀ ।**
**ಅಹರ್ನಿಶಮಹಂ ವಂದೇ**
**ತಾಮೀಶಾನಮನೋರಮಾಮ್ ॥ 1–12**

ಅಮೃತತ್ವದ (ಮುಕ್ತಿ) ಪ್ರಾಪ್ತಿಗಾಗಿ ಶರಣಾಗತರಾದವರಿಗೆ ಯಾವಳು ಸುವಿದ್ಯೆಯನ್ನು ಪ್ರದಾನ ಮಾಡುವಳೋ, ಆ ಈಶನ ಮನೋರಮೆಯಾದ ಶಿವೆಯನ್ನು ಅಹರ್ನಿಶಿ (ಹಗಲು ರಾತ್ರಿಗಳಲ್ಲಿ) ವಂದಿಸುತ್ತೇನೆ.

***ಇತಿ ಶಕ್ತಿಸ್ತುತಿಃ ಪರಿಸಮಾಪ್ತಮ್*** *ಇಲ್ಲಿಗೆ ಶಕ್ತಿಸ್ತುತಿಯು ಮುಗಿಯಿತು.*

## 3. ಗ್ರಂಥಕಾರವಂಶವರ್ಣನಮ್
## ಗ್ರಂಥಕಾರನ ವಂಶ ವರ್ಣನೆಯು
## (8 ಶ್ಲೋಕಗಳು)

**ಕಶ್ಚಿದಾಚಾರಸಿದ್ಧಾನಾಮ್**
**ಅಗ್ರಣೀಃ ಶಿವಯೋಗಿನಾಮ್ ।**
**ಶಿವಯೋಗೀತಿ ವಿಖ್ಯಾತಃ**
**ಶಿವಜ್ಞಾನಮಹೋದಧಿಃ ॥ 1–13**

ಆಚಾರ ಸಿದ್ಧರಾದ ಶಿವಯೋಗಿಗಳಿಗೆ ಅಗ್ರಗಣ್ಯನಾದ, ಶಿವಜ್ಞಾನದ ಸಾಗರ ನಾದ, ಶಿವಯೋಗಿ ಎಂಬ ಹೆಸರಿನಿಂದ ಪ್ರಸಿದ್ಧನಾದ ಒಬ್ಬ ಮಹಾಮಹಿಮನು ಇದ್ದನು.

**ಶಿವಭಕ್ತಿಸುಧಾಸಿಂಧು–**
**ಜೃಂಭಣಾಮಲಚಂದ್ರಿಕಾ ।**
**ಭಾರತೀ ಯಸ್ಯ ವಿದಧೇ**
**ಪ್ರಾಯಃ ಕುವಲಯೋತ್ಸವಮ್ ॥ 1–14**

ಯಾವ ಶಿವಯೋಗಿಯ ಭಾರತಿ (ವಾಣಿ)ಯು ಶಿವಭಕ್ತಿಯೆಂಬ ಅಮೃತದ ಸಮುದ್ರವನ್ನು ಉಕ್ಕೇರಿಸುವಲ್ಲಿ ನಿರ್ಮಲ ಬೆಳದಿಂಗಳೋಪಾದಿಯಲ್ಲಿ ಇರುವುದೋ (ಮತ್ತು) ಭೂಮಂಡಲದ ಜನರ ಮನಸ್ಸೆಂಬ ಕನ್ನೈದಿಲೆ (ರಾತ್ರಿ ಅರಳುವ ಕಮಲ)ಯನ್ನು ಅರಳಿಸುವುದೋ (ಇಂತಹ ಶಿವಯೋಗಿಯು ಇದ್ದನು).

**ತಸ್ಯ ವಂಶೇ ಸಮುತ್ಪನ್ನೋ**
**ಮುಕ್ತಾಮಣಿರಿವಾಮಲಃ ।**
**ಮುದ್ದದೇವಾಭಿಧಾಚಾರ್ಯೋ**
**ಮೂರ್ಧನ್ಯಃ ಶಿವಯೋಗಿನಾಮ್ ॥ 1–15**

ಆ (ಶಿವಯೋಗಿಯ) ವಂಶದಲ್ಲಿ ಅಮಲವಾದ (ನಿರ್ಮಲವಾದ) ಮುತ್ತಿನ ಮಣಿಯಂತಿರುವ, ಶಿವಯೋಗಿಗಳಿಗೆ ಮೂರ್ಧನ್ಯ (ಶ್ರೇಷ್ಠ)ನಾದ ಮುದ್ದದೇವ ಎಂಬ ಹೆಸರಿನ ಆಚಾರ್ಯನು ಹುಟ್ಟಿದನು.

**ಮುದ್ದಾನಾತ್ಸರ್ವಜಂತೂನಾಮ್**
**ಪ್ರಣತಾನಾಂ ಪ್ರಬೋಧತಃ ।**
**ಮುದ್ದದೇವೇತಿ ವಿಖ್ಯಾತಾ**
**ಸಮಾಖ್ಯಾ ಯಸ್ಯ ವಿಶ್ರುತಾ ॥ 1–16**

ಎಲ್ಲ ಜೀವಿಗಳಿಗೆ ಸಂತೋಷವನ್ನುಂಟುಮಾಡುವುದರಿಂದ (ಮತ್ತು) ಪ್ರಣಾಮ ಮಾಡಿದವರಿಗೆ ಜ್ಞಾನೋಪದೇಶವನ್ನು ಮಾಡುವುದರಿಂದ ಯಾರಿಗೆ ಮುದ್ದದೇವ ಎಂಬ ಹೆಸರು ಲೋಕ ಪ್ರಸಿದ್ಧವಾಯಿತೋ–

**ತಸ್ಯಾಸೀನ್ನಂದನಃ ಶಾಂತಃ**
**ಸಿದ್ಧನಾಥಾಭಿಧಃ ಶುಚಿಃ ।**
**ಶಿವಸಿದ್ಧಾಂತನಿರ್ಣೇತಾ**
**ಶಿವಾಚಾರ್ಯಃ ಶಿವಾತ್ಮಕಃ ॥ 1–17**

ಆ ಮುದ್ದದೇವನಿಗೆ ಶಾಂತನೂ, ಶುಚಿಯಾದವನೂ, ಶಿವಾತ್ಮಕನೂ (ಶಿವಸ್ವರೂಪಿಯೂ), ಶಿವಸಿದ್ಧಾಂತ ನಿರ್ಣಯವನ್ನು ಮಾಡುವವನೂ ಆದ ಸಿದ್ಧನಾಥ ಶಿವಾಚಾರ್ಯನೆಂಬ ಅಭಿಧಾನವುಳ್ಳ (ಹೆಸರಿನ) ನಂದನನು (ಮಗನು) ಇದ್ದನು.

**ವೀರಶೈವಶಿಖಾರತ್ನಮ್**
**ವಿಶಿಷ್ಟಾಚಾರಸಂಪದಮ್ ।**
**ಶಿವಜ್ಞಾನಮಹಾಸಿಂಧುಮ್**
**ಯಂ ಪ್ರಶಂಸಂತಿ ದೇಶಿಕಾಃ ॥ 1–18**

ದೇಶಿಕರು ಯಾರನ್ನು ವೀರಶೈವಶಿಖಾರತ್ನನನ್ನಾಗಿಯೂ, ವಿಶಿಷ್ಟವಾದ ಆಚಾರಸಂಪನ್ನನನ್ನಾಗಿಯೂ, ಶಿವಜ್ಞಾನ ಮಹಾಸಮುದ್ರವನ್ನಾಗಿಯೂ (ಸಿಂಧು) ಪ್ರಶಂಸೆ ಮಾಡುವರೋ–

**ಯಸ್ಯಾಚಾರ್ಯಕುಲಾಜ್ಜಾತಾ**
**ಸತಾಮಾಚಾರಮಾತೃಕಾ ।**
**ಶಿವಭಕ್ತಿಃ ಸ್ಥಿರಾ ಯಸ್ಮಿನ್**
**ಜಜ್ಞೇ ವಿಗತವಿಪ್ಲವಾ ॥ 1–19**

ಯಾವ (ಸಿದ್ಧನಾಥ) ಆಚಾರ್ಯನ ಕುಲದಲ್ಲಿ ಸತ್ಪುರುಷರ ಆಚರಣೆಯು ಉಗಮವಾಯಿತೋ (ಜಾತಃ), ಯಾರಲ್ಲಿ ದೋಷರಹಿತವಾದ ಶಿವಭಕ್ತಿಯು ಸುಸ್ಥಿರ ವಾಯಿತೋ–

**ತಸ್ಯ ವೀರಶಿವಾಚಾರ್ಯ–**
**ಶಿಖಾರತ್ನಸ್ಯ ನಂದನಃ ।**
**ಅಭವಚ್ಛಿವಯೋಗೀತಿ**
**ಸಿಂಧೋರಿವ ಸುಧಾಕರಃ ॥ 1–20**

ವೀರಶೈವ ಶಿವಾಚಾರ್ಯರಿಗೆ ಶಿಖಾರತ್ನದೋಪಾದಿಯಲ್ಲಿರುವ ಅವನಿಗೆ (ಸಿದ್ಧನಾಥ) ಶಿವಯೋಗಿ ಎಂಬ ನಂದನನು (ಮಗನು) ಸಮುದ್ರದಿಂದ ಸುಧಾಕರನು (ಚಂದ್ರನು) ಉದಯಿಸಿದಂತೆ ಉದಯಿಸಿದನು (ಅಭವತ್).

***ಇತಿ ಕವಿವಂಶವರ್ಣನಂ ಪರಿಸಮಾಪ್ತಮ್*** *ಇಲ್ಲಿಗೆ ಕವಿವಂಶವರ್ಣನೆಯು ಮುಗಿಯಿತು.*

## 4. ಕವಿ–ಕಾವ್ಯಮ್
ಕವಿ–ಕಾವ್ಯವು
**(12 ಶ್ಲೋಕಗಳು)**

**ಚಿದಾನಂದಪರಾಕಾಶ–**
**ಶಿವಾನುಭವಯೋಗತಃ ।**
**ಶಿವಯೋಗೀತಿ ನಾಮೋಕ್ತಿ–**
**ರ್ಯಸ್ಯ ಯಾಥಾರ್ಥ್ಯಯೋಗಿನೀ ॥ 1–21**

ಚಿದಾನಂದ ಪರಾಕಾಶ ರೂಪವಾದ ಶಿವಾನುಭವ ಯೋಗದಿಂದ ಯಾರಿಗೆ ಶಿವಯೋಗಿ ಎಂಬ ನಾಮವು ಯಥಾರ್ಥವಾಗಿ ಅನ್ವಯಿಸುತ್ತದೆಯೋ–

**ಶಿವಾಗಮಪರಿಜ್ಞಾನ–**
**ಪರಿಪಾಕಸುಗಂಧಿನಾ ।**
**ಯದೀಯಕೀರ್ತಿಪುಷ್ಪೇಣ**
**ವಾಸಿತಂ ಹರಿತಾಂ ಮುಖಮ್ ॥ 1–22**

ಶಿವಾಗಮಗಳ ಪರಿಪಾಕದಿಂದ ಸುಗಂಧಿತವಾದ ಯಾವ ಶಿವಯೋಗಿಯ ಕೀರ್ತಿಪುಷ್ಪದಿಂದ ದಿಕ್ಕುಗಳ ಮುಖವು ಸುವಾಸಿತವಾಯಿತೋ–

**ಯೇನ ರಕ್ಷಾವತೀ ಜಾತಾ**
**ಶಿವಭಕ್ತಿಃ ಸನಾತನೀ ।**
**ಬೌದ್ಧಾದಿಪ್ರತಿಸಿದ್ಧಾಂತ–**
**ಮಹಾಧ್ವಾಂತಾಂಶುಮಾಲಿನಾ ॥ 1–23**

ಬೌದ್ಧಾದಿ ಪ್ರತಿಸಿದ್ಧಾಂತಗಳ ಕತ್ತಲೆಗೆ ಸೂರ್ಯನೋಪಾದಿಯಲ್ಲಿರುವ ಯಾರಿಂದ (ಶಿವಯೋಗಿ ಶಿವಾಚಾರ್ಯರಿಂದ) ಸನಾತನವಾದ ಶಿವಭಕ್ತಿಯು ರಕ್ಷಿಸಲ್ಪಟ್ಟಿತೋ–

**ಸ ಮಹಾವೀರಶೈವಾನಾಮ್**
**ಧರ್ಮಮಾರ್ಗಪ್ರವರ್ತಕಃ ।**
**ಶಿವತತ್ತ್ವಪರಿಜ್ಞಾನ–**
**ಚಂದ್ರಿಕಾವೃತಚಂದ್ರಮಾಃ ॥ 1–24**

ಶಿವತತ್ತ್ವ ಪರಿಜ್ಞಾನವೆಂಬ ಚಂದ್ರಿಕೆಯಿಂದ (ಬೆಳದಿಂಗಳಿನಿಂದ) ಆವರಿಸಲ್ಪಟ್ಟ ಚಂದ್ರನಂತೆ ಇರುವ ಅವನು (ಶಿವಯೋಗಿ ಶಿವಾಚಾರ್ಯನು) ಮಹಾವೀರಶೈವರಿಗೆ ಧರ್ಮಮಾರ್ಗ ಪ್ರವರ್ತಕನಾಗಿದ್ದನು.

**ಆಲೋಕ್ಯ ಶೈವತಂತ್ರಾಣಿ**
**ಕಾಮಿಕಾದ್ಯಾನಿ ಸಾದರಮ್ ।**
**ವಾತುಲಾಂತಾನಿ ಶೈವಾನಿ**
**ಪುರಾಣಾನ್ಯಖಿಲಾನಿ ತು ॥ 1–25**

ಆದರಪೂರ್ವಕವಾಗಿ (ಸಾದರಂ) ಕಾಮಿಕಾದಿ ವಾತುಲಾಂತವಾದ ಶೈವತಂತ್ರಗಳನ್ನು (ಆಗಮಗಳನ್ನು) ಮತ್ತು ಶಿವಸಂಬಂಧಿಯಾದ ಎಲ್ಲ ಪುರಾಣಗಳನ್ನು ಅವಲೋಕನ ಮಾಡಿ (ಪರಿಶೀಲಿಸಿ)–

**ವೇದಮಾರ್ಗಾವಿರೋಧೇನ**
**ವಿಶಿಷ್ಟಾಚಾರಸಿದ್ಧಯೇ ।**
**ಅಸನ್ಮಾರ್ಗನಿರಾಸಾಯ**
**ಪ್ರಮೋದಾಯ ವಿವೇಕಿನಾಮ್ ॥ 1–26**

ವೇದಮಾರ್ಗಗಳಿಗೆ ವಿರೋಧವಿಲ್ಲದ ಹಾಗೆ ವಿಶಿಷ್ಟವಾದ ಆಚಾರದ ಸಿದ್ಧಿಗಾಗಿ ಅಸನ್ಮಾರ್ಗಗಳ ನಿರಸನಕ್ಕೆ (ಬಿಡಲು) ವಿವೇಕಿಗಳ ಪ್ರಮೋದಕ್ಕಾಗಿ (ಸಂತೋಷಕ್ಕಾಗಿ)–

**ಸರ್ವಸ್ವಂ ವೀರಶೈವಾನಾಮ್**
**ಸಕಲಾರ್ಥಪ್ರಕಾಶನಮ್ ।**
**ಅಸ್ಪೃಷ್ಟಮಖಿಲೈರ್ದೋಷೈ–**
**ರಾದೃತಂ ಶುದ್ಧಮಾನಸೈಃ ॥ 1–27**

ವೀರಶೈವರಿಗೆ ಸರ್ವಸ್ವವಾದ ಸಕಲಾರ್ಥಗಳನ್ನು ಪ್ರಕಾಶಗೊಳಿಸುವ ಅಖಿಲದೋಷಗಳು ಮುಟ್ಟದಿರುವ ಶುದ್ಧಮನಸ್ಸಿನಿಂದ ಸ್ವೀಕರಿಸಲ್ಪಟ್ಟ–

**ತೇಷ್ವಾಗಮೇಷು ಸರ್ವೇಷು**
**ಪುರಾಣೇಷ್ವಖಿಲೇಷು ಚ ।**
**ಪುರಾ ದೇವೇನ ಕಥಿತಮ್**
**ದೇವ್ಯೈ ತನ್ನಂದನಾಯ ಚ ॥ 1–28**

ಆ ಎಲ್ಲಾ ಇಪ್ಪತ್ತೆಂಟು ಆಗಮಗಳಲ್ಲಿ, ಅಖಿಲ ಪುರಾಣಗಳಲ್ಲಿ ಪೂರ್ವದಲ್ಲಿ ದೇವನಿಂದ ದೇವಿಗೆ ಮತ್ತು ಅವರ ಮಗನಿಗೆ ಹೇಳಲ್ಪಟ್ಟಿರುವಂತೆ (ಶಿವನಿಂದ ಪಾರ್ವತಿಗೆ ಮತ್ತು ಅವರ ಮಗನಾದ ಷಣ್ಮುಖನಿಗೆ ಹೇಳ್ಪಟ್ಟಿರುವ)–

**ತತ್ಸಂಪ್ರದಾಯಸಿದ್ಧೇನ**
**ರೇಣುಕೇನ ಮಹಾತ್ಮನಾ ।**
**ಗಣೇಶ್ವರೇಣ ಕಥಿತ–**
**ಮಗಸ್ತ್ಯಾಯ ಪುನಃ ಕ್ಷಿತೌ ॥ 1–29**

ಆ ಸಂಪ್ರದಾಯಸಿದ್ಧನಾದ (ಶಿವಸಂಪ್ರದಾಯದ) ಮಹಾತ್ಮನಾದ ರೇಣುಕ ಗಣೇಶ್ವರನಿಂದ ಪುನಃ ಕ್ಷಿತಿ (ಭೂಮಂಡಲದಲ್ಲಿ)ಯಲ್ಲಿ ಅಗಸ್ತ್ಯನಿಗೆ ಹೇಳಲ್ಪಟ್ಟಿತು.

**ವೀರಶೈವಮಹಾತಂತ್ರ–**
**ಮೇಕೋತ್ತರಶತಸ್ಥಲಮ್ ।**
**ಅನುಗ್ರಹಾಯ ಲೋಕಾನಾ–**
**ಮಭ್ಯಧಾತ್ ಸುಧಿಯಾಂ ವರಃ ॥ 1–30**

ನೂರೊಂದು ಸ್ಥಲಗಳಿಂದ ಕೂಡಿದ ವೀರಶೈವ ಮಹಾತಂತ್ರವನ್ನು (ಮಹಾ ಆಗಮವನ್ನು) ಬುದ್ಧಿವಂತರಲ್ಲಿ (ಸುಧಿಯಾಂ) ಶ್ರೇಷ್ಠನಾದ (ಶಿವಯೋಗಿ ಶಿವಾಚಾರ್ಯನು) ಲೋಕದ ಅನುಗ್ರಹಕ್ಕಾಗಿ ಹೇಳಿದನು.

**ಸರ್ವೇಷಾಂ ಶೈವತಂತ್ರಾಣಾ–**
**ಮುತ್ತರತ್ವಾನ್ನಿರುತ್ತರಮ್ ।**

**ನಾಮ್ನಾ ಪ್ರತೀಯತೇ ಲೋಕೇ**
**ಯತ್ಸಿದ್ಧಾಂತಶಿಖಾಮಣಿಃ ॥ 1–31**

ಸಮಸ್ತ ಶೈವತಂತ್ರಗಳ ಉತ್ತರಭಾಗದಲ್ಲಿರುವುದರಿಂದ ಮತ್ತು ಇದರ ಉತ್ತರದಲ್ಲಿ ಮತ್ತಾವುದೂ ಇಲ್ಲದಿರುವುದರಿಂದ ಇದು **"ಸಿದ್ಧಾಂತಶಿಖಾಮಣಿ"** ಎಂಬ ಹೆಸರಿನಿಂದ ಪ್ರಖ್ಯಾತವಾಗಿದೆ. (ಪ್ರತೀಯತೇ) (ತಂತ್ರವೆಂದರೆ ಆಗಮ, ಆಗಮವೆಂದರೆ ಸಿದ್ಧಾಂತವಾಗಿದೆ. ಇವು ಮೂರೂ ಸಹ ಒಂದೇ ಆಗಿವೆ).

**ಅನುಗತಸಕಲಾರ್ಥೇ ಶೈವತಂತ್ರೈಃ ಸಮಸ್ತೈಃ**
**ಪ್ರಕಟಿತಶಿವಬೋಧಾದ್ವೈತಭಾವಪ್ರಸಾದೇ ।**
**ವಿದಧತು ಮತಿಮಸ್ಮಿನ್ ವೀರಶೈವಾ ವಿಶಿಷ್ಟಾಃ ಪಶುಪತಿಮತಸಾರೇ ಪಂಡಿತಶ್ಲಾಘನೀಯೇ॥ 1–32**
**– ಮಾಲಿನೀ ವೃತ್ತಮ್**

ಸಮಸ್ತ ಶೈವತಂತ್ರಗಳ (ಆಗಮಗಳ, ಸಿದ್ಧಾಂತಗಳ)ನ್ನು ಅನುಸರಿಸಲ್ಪಟ್ಟ ಸಕಲ ಅರ್ಥಗಳನ್ನು ಒಳಗೊಂಡು ಪ್ರಕಟಿಸಲ್ಪಟ್ಟ, ಶಿವಜ್ಞಾನದಿಂದುಂಟಾದ ಅದ್ವೈತ ಭಾವ ಪ್ರಸಾದವುಳ್ಳ, ಪಂಡಿತರಿಂದ ಶ್ಲಾಘಿಸಲ್ಪಟ್ಟ, ಪಶುಪತಿಮತಸಾರವಾದ ಇದರಲ್ಲಿ (ಶ್ರೀಸಿದ್ಧಾಂತಶಿಖಾಮಣಿಯಲ್ಲಿ) ವಿಶಿಷ್ಟರಾದ ವೀರಶೈವರು ತಮ್ಮ ಬುದ್ಧಿಯನ್ನು ತೊಡಗಿಸಲಿ (ಮತಿಂ ವಿದಧತು).

***ಇತಿ ಕವಿ–ಕಾವ್ಯವರ್ಣನಂ*** *ಇಲ್ಲಿಗೆ ಕವಿ–ಕಾವ್ಯ ವರ್ಣನೆಯು ಮುಗಿಯಿತು.*
***ಓಂ ತತ್ಸತ್ ಇತಿ***
***ಶ್ರೀ ಶಿವಗೀತೇಷು ಸಿದ್ಧಾಂತಾಗಮೇಷು ಶಿವಾದ್ವೈತವಿದ್ಯಾಯಾಂ, ಶಿವಯೋಗಶಾಸ್ತ್ರೇ ಶ್ರೀ ರೇಣುಕಾಗಸ್ತ್ಯಸಂವಾದೇ ವೀರಶೈವಧರ್ಮನಿರ್ಣಯೇ ಶ್ರೀಶಿವಯೋಗಿ ಶಿವಾಚಾರ್ಯವಿರಚಿತೇ ಶ್ರೀಸಿದ್ಧಾಂತಶಿಖಾಮಣೌ ಶ್ರೀಶಿವಯೋಗಿಶಿವಾಚಾರ್ಯ ವಂಶವರ್ಣನಂ ನಾಮ ಪ್ರಥಮಃ ಪರಿಚ್ಛೇದಃ ॥***

*ಓಂ ತತ್ಸತ್ ಇಲ್ಲಿಗೆ ಶ್ರೀ ಶಿವನಿಂದ ಉಪದೇಶಿಸಲ್ಪಟ್ಟ ಶ್ರೀಸಿದ್ಧಾಂತಾಗಮಗಳಲ್ಲಿಯ ಶಿವಾದ್ವೈತವಿದ್ಯಾರೂಪವೂ, ಶಿವಯೋಗಶಾಸ್ತ್ರವೂ, ಶ್ರೀ ರೇಣುಕಾಗಸ್ತ್ಯಸಂವಾದ ರೂಪವೂ, ಶ್ರೀವೀರಶೈವಧರ್ಮನಿರ್ಣಯವೂ, ಶ್ರೀ ಶಿವಯೋಗಿಶಿವಾಚಾರ್ಯ ವಿರಚಿತವೂ ಆದ ಶ್ರೀಸಿದ್ಧಾಂತಶಿಖಾಮಣಿಯಲ್ಲಿ ಶ್ರೀ ಶಿವಯೋಗಿ ಶಿವಾಚಾರ್ಯ ವಂಶವರ್ಣನವೆಂಬ ಹೆಸರಿನ ಮೊದಲನೆಯ ಪರಿಚ್ಛೇದವು ಮುಗಿದುದು.*

# ದ್ವಿತೀಯಃ ಪರಿಚ್ಛೇದಃ
# ಎರಡನೆಯ ಪರಿಚ್ಛೇದವು

**ರೇಣುಕದಾರುಕಾವತರಣಮ್**

ರೇಣುಕ ದಾರುಕರ ಆವತರಣವು

**(34 ಶ್ಲೋಕಗಳು)**

**ಸೃಷ್ಟಿ ವಿಚಾರಃ**

ಸೃಷ್ಟಿ ವಿಚಾರವು

## 1. ಮಂಗಲಾಚರಣಮ್

ಮಂಗಳಾಚರಣೆಯು

**(2 ಶ್ಲೋಕಗಳು)**

**ಸಚ್ಚಿದಾನಂದರೂಪಾಯ**
**ಸದಸದ್ವ್ಯಕ್ತಿಹೇತವೇ ।**
**ನಮಃ ಶಿವಾಯ ಸಾಂಬಾಯ**
**ಸಗಣಾಯ ಸ್ವಯಂಭುವೇ ॥ 2–1**

ಸದಸದ್ರೂಪವಾದ ಪ್ರಪಂಚದ ಅಭಿವ್ಯಕ್ತಿಗೆ ಕಾರಣವಾದ ಸಾಂಬನಾದ, (ಉಮಾಸಹಿತನಾದ) ಗಣಸಹಿತನಾದ, ಸ್ವಯಂಭುವಾದ, ಸಚ್ಚಿದಾನಂದ ಸ್ವರೂಪಿಯಾದ ಶಿವನಿಗೆ ನಮಸ್ಕಾರಗಳು (ನಮಃ ಶಿವಾಯ).

**ಸದಾಶಿವಮುಖಾಶೇಷ–**
**ತತ್ತ್ವಮೌಕ್ತಿಕಶುಕ್ತಿಕಾಮ್ ।**
**ವಂದೇ ಮಾಹೇಶ್ವರೀಂ ಶಕ್ತಿಮ್**
**ಮಹಾಮಾಯಾದಿರೂಪಿಣೀಮ್ ॥ 2–2**

ಸದಾಶಿವ ಮುಖಶೇಷಾದಿಗಳಾದ ತತ್ತ್ವಗಳೆಂಬ ಮುತ್ತುಗಳಿಗೆ ಚಿಪ್ಪಿನಂತಿರುವ (ಶುಕ್ತಿಕಾಂ) ಮಹಾ ಮಾಯಾದಿ ರೂಪವುಳ್ಳ ಮಹೇಶ್ವರಿಯಾದ ಶಕ್ತಿಯನ್ನು ನಮಿಸುವೆನು (ಸದಾಶಿವಾದಿ ಭೂಮಿಪರ್ಯಂತವಾದ 34 ತತ್ತ್ವಗಳು).

***ಇತಿ ಮಂಗಲಾಚರಣಂ*** *ಇಲ್ಲಿಗೆ ಮಂಗಲಾಚರಣೆಯು ಮುಗಿಯಿತು.*

## 2. ವಸ್ತುನಿರ್ದೇಶನಮ್

ವಸ್ತುನಿರ್ದೇಶನವು

**(22 ಶ್ಲೋಕಗಳು)**

**ಅಸ್ತಿ ಸಚ್ಚಿತ್ಸುಖಾಕಾರ–**
**ಮಲಕ್ಷಣಪದಾಸ್ಪದಮ್ ।**
**ನಿರ್ವಿಕಲ್ಪಂ ನಿರಾಕಾರಮ್**
**ನಿರಸ್ತಾಶೇಷವಿಪ್ಲವಮ್ ॥ 2–3**

ಯಾವುದೇ ಲಕ್ಷಣಗಳಿಂದ ತಿಳಿಯಲಶಕ್ಯವಾದ, ನಿರ್ವಿಕಲ್ಪವಾದ (ವಿಕಲ್ಪವೃತ್ತಿಗೆ ವಿಷಯವಾಗದ) ನಿರಾಕಾರವಾದ ಯಾವ ಬಾಧೆಗಳೂ ಇಲ್ಲದಿರುವ ಇಂತಹ ಸತ್ ಚಿತ್ ಆನಂದ ಸ್ವರೂಪವಾದ ಒಂದು ವಸ್ತುವು (ಸೃಷ್ಟಿ ಪೂರ್ವದಲ್ಲಿ) ಇತ್ತು.

**ಪರಿಚ್ಛೇದಕಥಾಶೂನ್ಯಮ್**
**ಪ್ರಪಂಚಾತೀತವೈಭವಮ್ ।**
**ಪ್ರತ್ಯಕ್ಷಾದಿಪ್ರಮಾಣಾನಾ–**
**ಮಗೋಚರಪದೇ ಸ್ಥಿತಮ್ ॥ 2–4**

ದೇಶ ಕಾಲ ವಸ್ತು ಪರಿಚ್ಛೇದಗಳಿಲ್ಲದ, ಪ್ರಪಂಚಕ್ಕೆ ಅತೀತವಾದ ವೈಭವವುಳ್ಳ, ಪ್ರತ್ಯಕ್ಷಾದಿ ಪ್ರಮಾಣಗಳಿಗೆ ಗೋಚರವಾಗದ ಸ್ಥಿತಿಯಲ್ಲಿರುವ–

**ಸ್ವಪ್ರಕಾಶವಿರಾಜಂತ–**
**ಮನಾಮಯಮನೌಪಮಮ್ ।**
**ಸರ್ವಜ್ಞಂ ಸರ್ವಗಂ ಶಾಂತಮ್**
**ಸರ್ವಶಕ್ತಿ ನಿರಂಕುಶಮ್ ॥ 2–5**

ಸ್ವಪ್ರಕಾಶವಾಗಿ ವಿರಾಜಮಾನವಾಗಿರುವ, ನಿರಾಮಯವಾದ (ಜನನ, ಮರಣರೂಪ ಬಾಧೆಯಿಲ್ಲದಿರುವ), ಉಪಮಾರಹಿತವಾಗಿರುವ ಸರ್ವಜ್ಞರೂಪವಾದ, ವ್ಯಾಪಕವಾದ (ಸರ್ವಗಂ), ಶಾಂತವಾದ, ಸರ್ವಸಾಮರ್ಥ್ಯವುಳ್ಳ ಅಂಕುಶರಹಿತವಾದ–

**ಶಿವರುದ್ರಮಹಾದೇವ**
**ಭವಾದಿಪದಸಂಜ್ಞಿತಮ್ ।**
**ಅದ್ವಿತೀಯಮನಿರ್ದೇಶ್ಯಮ್**
**ಪರಂಬ್ರಹ್ಮ ಸನಾತನಮ್ ॥ 2–6**

ಶಿವ ರುದ್ರ ಮಹಾದೇವ ಭವ ಮುಂತಾದ ಪದಗಳಿಂದ ಕರೆಯಿಸಿಕೊಳ್ಳುವ ಅದ್ವಿತೀಯವಾದ, ನಿರ್ದೇಶಿಸಲು (ತೋರಿಸಲು) ಬಾರದಿರುವ ಸನಾತನವಾದ ಪರಬ್ರಹ್ಮ ವಸ್ತುವು ಇತ್ತು.

**ತತ್ರ ಲೀನಮಭೂತ್ ಪೂರ್ವಮ್**
**ಚೇತನಾಚೇತನಂ ಜಗತ್ ।**
**ಸ್ವಾತ್ಮಲೀನಂ ಜಗತ್ಕಾರ್ಯಮ್**
**ಸ್ವಪ್ರಕಾಶ್ಯಂ ತದದ್ಭುತಮ್ ॥ 2–7**

ಅಲ್ಲಿ (ಆ ಪರಬ್ರಹ್ಮದಲ್ಲಿ) ಚೇತನಾಚೇತನವಾದ ಜಗತ್ತು ಸೃಷ್ಟಿಯ ಪೂರ್ವದಲ್ಲಿ ಲೀನವಾಗಿತ್ತು. ತನ್ನಲ್ಲಿ ಅಡಗಿರುವ ಜಗತ್ತೆಂಬ ಕಾರ್ಯವು ತನ್ನಿಂದಲೇ ಪ್ರಕಾಶಮಾನವಾಗಲು ಯೋಗ್ಯವಾಗಿದೆ.

**ಶಿವಾಭಿಧಂ ಪರಂ ಬ್ರಹ್ಮ**
**ಜಗನ್ನಿರ್ಮಾತುಮಿಚ್ಛಯಾ ।**
**ಸ್ವರೂಪಮಾದಧೇ ಕಿಂಚಿತ್**
**ಸುಖಸ್ಫೂರ್ತಿವಿಜೃಂಭಿತಮ್ ॥ 2–8**

ಶಿವನೆಂಬ ಅಭಿಧಾನವುಳ್ಳ (ಆ) ಪರಬ್ರಹ್ಮವು ಜಗತ್ತನ್ನು ನಿರ್ಮಾಣ ಮಾಡುವ ಇಚ್ಛೆಯಿಂದ ಸುಖಸ್ಫೂರ್ತಿಯಿಂದ ಕೂಡಿದ ಕಿಂಚಿತ್ (ಸ್ವಲ್ಪ) ಸ್ವರೂಪವನ್ನು ಹೊಂದಿತು (ಆದಧೇ) (ಈಶತ್ ಚಲನ).

**ನಿರಸ್ತದೋಷಸಂಬಂಧಮ್**
**ನಿರುಪಾಧಿಕಮವ್ಯಯಮ್ ।**
**ದಿವ್ಯಮಪ್ರಾಕೃತಂ ನಿತ್ಯಮ್**
**ನೀಲಕಂಠಂ ತ್ರಿಲೋಚನಮ್ ॥ 2–9**

ದೋಷಗಳ (ಹುಟ್ಟು–ಸಾವುಗಳ) ಸಂಬಂಧವಿಲ್ಲದಿರುವ, ಉಪಾಧಿ ರಹಿತವಾದ, ಅವ್ಯಯವಾದ, ಅಪ್ರಾಕೃತವಾದ (ಪ್ರಕೃತಿ ಸಂಬಂಧವಿಲ್ಲದ), ನಿತ್ಯವಾದ, ದಿವ್ಯವಾದ (ಆ ವಸ್ತುವು) ನೀಲಕಂಠ (ಮತ್ತು) ತ್ರಿಲೋಚನ (ಮುಕ್ಕಣ್ಣ) ಎಂದೆನಿಸಿಕೊಂಡಿತು.

**ಚಂದ್ರಾರ್ಧಶೇಖರಂ ಶುದ್ಧಮ್**
**ಶುದ್ಧಸ್ಫಟಿಕಸನ್ನಿಭಮ್ ।**
**ಶುದ್ಧಮುಕ್ತಾಫಲಾಭಾಸ–**
**ಮುಪಾಸ್ಯಂ ಗುಣಮೂರ್ತಿಭಿಃ ॥ 2–10**

ಅರ್ಧಚಂದ್ರನನ್ನು ಅಲಂಕರಿಸಿಕೊಂಡ, ಶುದ್ಧನಾದ, ಶುದ್ಧವಾದ ಸ್ಫಟಿಕದಂತೆ ಇರುವ, ಪರಿಶುದ್ಧ ಮುತ್ತಿನ ಕಾಂತಿಯಂತೆ ಕಾಂತಿಯುಳ್ಳ ಗುಣಮೂರ್ತಿ (ಬ್ರಹ್ಮಾದಿ)ಗಳಿಂದ ಉಪಾಸಿಸಲು ಯೋಗ್ಯನಾದ–

**ವಿಶುದ್ಧಜ್ಞಾನಕರಣಮ್**
**ವಿಷಯಂ ಸರ್ವಯೋಗಿನಾಮ್ ।**
**ಕೋಟಿಸೂರ್ಯಪ್ರತೀಕಾಶಮ್**
**ಚಂದ್ರಕೋಟಿಸಮಪ್ರಭಮ್**
**ಅಪ್ರಾಕೃತಗುಣಾಧಾರ–**
**ಮನಂತಮಹಿಮಾಸ್ಪದಮ್ ॥ 2–11**

ವಿಶುದ್ಧ ಜ್ಞಾನಕ್ಕೆ ಅಸಾಧಾರಣ ಕಾರಣವಾದ, ಸಮಸ್ತ ಯೋಗಿಗಳಿಗೆ ವಿಷಯವಾದ (ಅನುಭವಕ್ಕೆ ವಿಷಯವಾದ), ಕೋಟಿ ಸೂರ್ಯರ ಪ್ರಕಾಶಕ್ಕೆ ಸಮವಾದ ಪ್ರಕಾಶವುಳ್ಳ (ಬೆಳಕು), ಕೋಟಿ ಚಂದ್ರರ ಕಾಂತಿಗೆ ಸಮವಾದ ಕಾಂತಿಯುಳ್ಳ (ತಂಪು), ಅಪ್ರಾಕೃತ ಗುಣಗಳಿಗೆ ಆಧಾರವಾದ (ಸತ್ವಾದಿ ಪ್ರಾಕೃತ ಗುಣಗಳಿಗಿಂತಲೂ ಭಿನ್ನವಾದ ಸರ್ವಜ್ಞತ್ವಾದಿ ಅನಂತ ಕಲ್ಯಾಣ ಗುಣಗಳಿಗೆ ಆಧಾರವಾದ), ಅನಂತ ಮಹಿಮೆಗಳಿಗೆ ಆಧಾರವಾದ (ಆ ಶಿವನೆಂಬ ಬ್ರಹ್ಮವು ಸುಖಸ್ಫೂರ್ತಿಯಿಂದ ಕೂಡಿದ), ಕಿಂಚಿತ್ ಸ್ವರೂಪವನ್ನು ಹೊಂದಿತು.

**ತದೀಯಾ ಪರಮಾ ಶಕ್ತಿಃ**
**ಸಚ್ಚಿದಾನಂದಲಕ್ಷಣಾ ।**
**ಸಮಸ್ತಲೋಕನಿರ್ಮಾಣ–**
**ಸಮವಾಯಸ್ವರೂಪಿಣೀ ॥ 2–12**

ಸಕಲ ಲೋಕಗಳ ನಿರ್ಮಾಣ ಕಾರ್ಯದಲ್ಲಿ ಸಮವಾಯ (ಉಪಾದಾನ) ಕಾರಣರೂಪಳಾಗಿರುವ ಆ ಪರಶಿವನ ಸಂಬಂಧಿನಿಯಾದ ಪರಮಾಶಕ್ತಿಯು (ಪರಾಶಕ್ತಿ, ವಿಮರ್ಶಾಶಕ್ತಿ) ಸಚ್ಚಿದಾನಂದ ಲಕ್ಷಣವುಳ್ಳವಳಾಗಿರುತ್ತಾಳೆ.

**ತದಿಚ್ಛಯಾಽಭವತ್ಸಾಕ್ಷಾತ್**
**ತತ್ಸ್ವರೂಪಾನುಸಾರಿಣೀ ।**
**ಸ ಶಂಭುರ್ಭಗವಾನ್ ದೇವಃ**

**ಸರ್ವಜ್ಞಃ ಸರ್ವಶಕ್ತಿಮಾನ್ ॥ 2–13**

**ಜಗತ್ಸಿಸೃಕ್ಷುಃ ಪ್ರಥಮಮ್**
**ಬ್ರಹ್ಮಾಣಂ ಸರ್ವದೇಹಿನಾಮ್ ।**
**ಕರ್ತಾರಂ ಸರ್ವಲೋಕಾನಾಮ್**
**ವಿದಧೇ ವಿಶ್ವನಾಯಕಃ ॥ 2–14**

ಆ ಶಕ್ತಿಯು ಪರಶಿವನ ಇಚ್ಛೆಯಿಂದ ಸಾಕ್ಷಾತ್ ಅವನ ಸ್ವರೂಪದಂತಹ ಸ್ವರೂಪವನ್ನೇ ಧರಿಸಿದಳು. ಸರ್ವಜ್ಞನೂ, ಸರ್ವಶಕ್ತಿಯುತನೂ, ದೇವನೂ (ಮತ್ತು) ಭಗವಂತನೂ, ವಿಶ್ವನಾಯಕನೂ ಆದ ಆ ಶಂಭುವು ಜಗತ್ತನ್ನು ಸೃಷ್ಟಿಸುವ ಇಚ್ಛೆಯುಳ್ಳವನಾಗಿ ಎಲ್ಲ ಜೀವಿಗಳ (ಮತ್ತು) ಎಲ್ಲ ಲೋಕಗಳ ಕರ್ತಾರನಾದ ಬ್ರಹ್ಮನನ್ನು ಮೊದಲು ಸೃಷ್ಟಿಸಿದನು.

**ತಸ್ಮೈ ಪ್ರಥಮಪುತ್ರಾಯ**
**ಶಂಕರಃ ಶಕ್ತಿಮಾನ್ ವಿಭುಃ ।**
**ಸರ್ವಜ್ಞಃ ಸಕಲಾ ವಿದ್ಯಾಃ**
**ಸಾನುಗ್ರಹಮುಪಾದಿಶತ್ ।**
**ಪ್ರಾಪ್ತವಿದ್ಯೋ ಮಹಾದೇವಾತ್**
**ಬ್ರಹ್ಮಾ ವಿಶ್ವನಿಯಾಮಕಾತ್ ॥ 2–15**

ಶಕ್ತಿ ಸಮನ್ವಿತನಾದ, ವಿಭುವಾದ, ಸರ್ವಜ್ಞನಾದ ಶಂಕರನು ಆ ಪ್ರಥಮ ಪುತ್ರನಿಗೆ (ಬ್ರಹ್ಮನಿಗೆ) ಅನುಗ್ರಹಪೂರ್ವಕವಾಗಿ ಸಕಲ ವಿದ್ಯೆಗಳನ್ನು ಉಪದೇಶಿಸಿದನು. ವಿಶ್ವನಿಯಾಮಕನಾದ ಮಹಾದೇವನಿಂದ ವಿದ್ಯೆಯನ್ನು ಪಡೆದುಕೊಂಡ ಬ್ರಹ್ಮನು–

**ಸಮಸ್ತಲೋಕಾನ್ನಿರ್ಮಾತುಮ್**
**ಸಮುದ್ಯಮಪರೋಽಭವತ್ ।**
**ಕೃತೋದ್ಯೋಗೋಽಪಿ ನಿರ್ಮಾಣೇ**
**ಜಗತಾಂ ಶಂಕರಾಜ್ಞಯಾ ।**
**ಅಜ್ಞಾತೋಪಾಯಸಂಪತ್ತೇ–**
**ರಭವನ್ಮಾಯಯಾಽಽವೃತಃ ॥ 2–16**

ಸಮಸ್ತ ಲೋಕಗಳನ್ನು ನಿರ್ಮಿಸುವ ಉದ್ಯಮದಲ್ಲಿ ತೊಡಗಿಕೊಂಡನು. ಶಂಕರನ ಆಜ್ಞೆಯಂತೆ ಲೋಕಗಳ ನಿರ್ಮಾಣದಲ್ಲಿ ಕೃತೋದ್ಯೋಗಿಯಾದರೂ (ಬ್ರಹ್ಮನ) ಮಾಯೆಯಿಂದ ಆವೃತನಾದ್ದರಿಂದ ಉಪಾಯವನ್ನು ತಿಳಿಯದವನಾದನು.

**ವಿಧಾತುಮಖಿಲಾನ್ ಲೋಕಾ–**
**ನುಪಾಯಂ ಪ್ರಾಪ್ತುಮಿಚ್ಛಯಾ ।**
**ಪುನಸ್ತಂ ಪ್ರಾರ್ಥಯಾಮಾಸ**
**ದೇವದೇವಂ ತ್ರಿಯಂಬಕಮ್ ॥ 2–17**

ಅಖಿಲ ಲೋಕಗಳನ್ನು ಸೃಷ್ಟಿಸುವುದಕ್ಕಾಗಿ (ವಿಧಾತುಂ) ಉಪಾಯವನ್ನು ಪಡೆಯುವ ಇಚ್ಛೆಯಿಂದ ದೇವದೇವನಾದ ತ್ರಿಯಂಬಕನನ್ನು (ಮುಕ್ಕಣ್ಣನನ್ನು) ಪುನಃ ಪ್ರಾರ್ಥಿಸಿದನು.

**ನಮಸ್ತೇ ದೇವದೇವೇಶ**
**ನಮಸ್ತೇ ಕರುಣಾಕರ ।**

**ಅಸ್ಮದಾದಿಜಗತ್ಸರ್ವ–**
**ನಿರ್ಮಾಣನವಿಧಿಕ್ಷಮ ॥ 2–18**

ದೇವದೇವನಾದವನೇ, ಕರುಣಾಕರನೇ, ನನ್ನನ್ನು ಮೊದಲುಗೊಂಡು ಸಮಸ್ತ ಜಗತ್ತನ್ನು ನಿರ್ಮಿಸುವ ವಿಧಾನದಲ್ಲಿ ಸಮರ್ಥನಾದವನೇ, ನಿನಗೆ ನಮಸ್ಕಾರವು.

**ಉಪಾಯಂ ವದ ಮೇ ಶಂಭೋ**
**ಜಗತ್ಸ್ರಷ್ಟಃ! ಜಗತ್ಪತೇ ।**
**ಸರ್ವಜ್ಞಃ ಸರ್ವಶಕ್ತಿಸ್ತ್ವಮ್**
**ಸರ್ವಕರ್ತಾ ಸನಾತನಃ ॥ 2–19**

ನೀನು ಸರ್ವಜ್ಞನೂ, ಸರ್ವಶಕ್ತಿ ಸಮನ್ವಿತನೂ, ಸರ್ವಕರ್ತನೂ, ಸನಾತನನೂ (ಮೊದಲಿನಿಂದ ಇರುವವನು), ಜಗತ್ಪತಿಯೂ (ಮತ್ತು) ಜಗತ್‌ಸೃಷ್ಟಿಕರ್ತನಾದ ಹೇ ಶಂಭುವೇ, ನನಗೆ ಉಪಾಯವನ್ನು ಹೇಳು (ಸೃಷ್ಟಿ ಮಾಡುವ ಉಪಾಯವನ್ನು ಹೇಳು).

**ಇತಿ ಸಂಪ್ರಾರ್ಥಿತಃ ಶಂಭುಃ**
**ಬ್ರಹ್ಮಣಾ ವಿಶ್ವನಾಯಕಃ ।**
**ಉಪಾಯಮವದತ್ ತಸ್ಮೈ**
**ಲೋಕಸೃಷ್ಟಿಪ್ರವರ್ತನಮ್ ॥ 2–20**

ಈ ರೀತಿಯಾಗಿ ಬ್ರಹ್ಮನಿಂದ ಪ್ರಾರ್ಥಿಸಲ್ಪಟ್ಟ ವಿಶ್ವನಾಯಕನಾದ ಶಂಭುವು ಅವನಿಗೆ (ಬ್ರಹ್ಮನಿಗೆ) ಲೋಕಸೃಷ್ಟಿಯ ಪ್ರವರ್ತನೆಯ ಉಪಾಯವನ್ನು ಹೇಳಿದನು (ಅವದತ್).

**ಉಪಾಯಮೀಶ್ವರೇಣೋಕ್ತಮ್**
**ಲಬ್ಧ್ವಾಽಪಿ ಚತುರಾನನಃ ।**
**ನ ಸಮರ್ಥೋಽಭವತ್ ಕರ್ತುಮ್**
**ನಾನಾರೂಪಮಿದಂ ಜಗತ್ ॥ 2–21**

**ಪುನಸ್ತಂ ಪ್ರಾರ್ಥಯಾಮಾಸ**
**ಬ್ರಹ್ಮಾ ವಿಹ್ವಲಮಾನಸಃ ।**
**ದೇವದೇವ ಮಹಾದೇವ**
**ಜಗತ್ಪ್ರಥಮಕಾರಣ ।**
**ನಮಸ್ತೇ ಸಚ್ಚಿದಾನಂದ**
**ಸ್ವೇಚ್ಛಾವಿಗ್ರಹರಾಜಿತ ॥ 2–22**

**ಭವ ಶರ್ವ ಮಹೇಶಾನ**
**ಸರ್ವಕಾರಣಕಾರಣ ।**
**ಭವದುಕ್ತೋ ಹ್ಯುಪಾಯೋ ಮೇ**
**ನ ಕಿಂಚಿಜ್‌ಜ್ಞಾಯತೇಽಧುನಾ ॥ 2–23**

**ಸೃಷ್ಟಿಂ ವಿಧೇಹಿ ಭಗವನ್**

**ಪ್ರಥಮಂ ಪರಮೇಶ್ವರ ।**
**ಜ್ಞಾತೋಪಾಯಸ್ತತಃ ಕುರ್ಯಾಮ್**
**ಜಗತ್ಸೃಷ್ಟಿಮುಮಾಪತೇ ॥ 2–24**

ಚತುರ್ಮುಖನಾದ ಬ್ರಹ್ಮನು ಪರಮೇಶ್ವರನಿಂದ ಉಪದೇಶಿಸಿ ಹೇಳಲ್ಪಟ್ಟ ಉಪಾಯವನ್ನು (ಸೃಷ್ಟಿಸುವ ಉಪಾಯವನ್ನು) ಪಡೆದನಾದರೂ ಹಲವು ರೂಪದ ಈ ಜಗತ್ತನ್ನು ಸೃಷ್ಟಿ ಮಾಡಲು ಸಮರ್ಥನಾಗಲಿಲ್ಲ. ವಿಹ್ವಲ (ಭಯಯುಕ್ತವಾದ) ಮನಸ್ಸಿನ ಬ್ರಹ್ಮನು ಮತ್ತೆ ಪ್ರಾರ್ಥಿಸಿದನು. ಹೇ ದೇವದೇವನಾದ ಮಹಾದೇವನೇ, ಜಗದ ಆದಿಕಾರಣನೇ, ಸಚ್ಚಿದಾನಂದನೇ, ಸ್ವೇಚ್ಛೆಯಿಂದ ಅನಂತ ಮೂರ್ತಿಗಳನ್ನು ಧರಿಸಿದವನೇ, ಭವನೇ (ಸರ್ವ ಸಂಹಾರಕ) (ಸರ್ವಲೋಕೋತ್ಪಾದಕನೇ), ಶರ್ವನೇ, ಸರ್ವಕಾರಣಗಳಿಗೂ ಕಾರಣನಾದ ಮಹೇಶನೇ, ನಿನಗೆ ನಮಸ್ಕಾರವು. ಹೇ ಭಗವಂತನಾದ ಪರಮೇಶ್ವರನೇ, ಉಮಾಪತಿಯೇ, ನೀನು ಹೇಳಿದ ಉಪಾಯವು ನನಗೆ ಈಗ ಸ್ವಲ್ಪವೂ ಅರ್ಥವಾಗುತ್ತಿಲ್ಲ. (ಆದ್ದರಿಂದ) ಈಗ ನೀನೇ ಮೊದಲು ಸೃಷ್ಟಿ ಯನ್ನು ಮಾಡು. ಅನಂತರ ಉಪಾಯವನ್ನು ತಿಳಿದ ನಾನು ಜಗತ್‌ಸೃಷ್ಟಿಯನ್ನು ಮಾಡುವೆನು.

***ಇತಿ ವಸ್ತುನಿರ್ದೇಶನಂ*** *ಇಲ್ಲಿಗೆ ವಸ್ತುನಿರ್ದೇಶನವು ಮುಗಿಯಿತು.*

## 3. ಪ್ರಮಥಾನಾಂ ಸೃಷ್ಟಿಃ
ಪ್ರಮಥರ ಸೃಷ್ಟಿಯು
**(10 ಶ್ಲೋಕಗಳು)**

**ಇತ್ಯೇವಂ ಪ್ರಾರ್ಥಿತಃ ಶಂಭುಃ**
**ಬ್ರಹ್ಮಣಾ ವಿಶ್ವಯೋನಿನಾ ।**
**ಸಸರ್ಜಾತ್ಮಸಮಪ್ರಖ್ಯಾನ್**
**ಸರ್ವಗಾನ್ ಸರ್ವಶಕ್ತಿಕಾನ್ ॥ 2–25**

**ಪ್ರಬೋಧಪರಮಾನಂದ–**
**ಪರಿವಾಹಿತಮಾನಸಾನ್ ।**
**ಪ್ರಮಥಾನ್ ವಿಶ್ವನಿರ್ಮಾಣ–**
**ಪ್ರಲಯಾಪಾದನಕ್ಷಮಾನ್ ॥ 2–26**

ಈ ಪ್ರಕಾರವಾಗಿ ವಿಶ್ವಯೋನಿಯಾದ ಬ್ರಹ್ಮನಿಂದ ಪ್ರಾರ್ಥಿಸಲ್ಪಟ್ಟ ಶಂಭುವು ತನಗೆ ಸಮಾನ ತೇಜಸ್ಸುಳ್ಳ, ಸರ್ವಜ್ಞರಾದ, ಸಕಲ ಸಾಮರ್ಥ್ಯವುಳ್ಳ, ಪ್ರಬೋಧ (ಸರ್ವೋತ್ಕೃಷ್ಟವಾದ ಸಾಮರಸ್ಯಾತ್ಮಕ ಜ್ಞಾನ)ದಿಂದ ಉಂಟಾದ ಪರಮಾನಂದದ ಪ್ರವಾಹದಿಂದ ಉಲ್ಲಸಿತವಾದ ಮನಸ್ಸುಳ್ಳ, ವಿಶ್ವದ ನಿರ್ಮಾಣ ಮತ್ತು ಪ್ರಳಯ ಮಾಡುವುದರಲ್ಲಿ ಸಮರ್ಥರಾದ ಪ್ರಮಥಗಣರನ್ನು ನಿರ್ಮಿಸಿದನು.

**ಸೃಷ್ಟಪ್ರಮಥವರ್ಗೇಷು**
**ವರ್ಣಾಶ್ರಮಪರಿಕ್ರಮಾನ್ ।**
**ಅಪ್ರಾಕೃತಸದಾಚಾರಾನ್**
**ಉಪಾದಿಶದಥ ಪ್ರಭುಃ ॥ 2–27**

ತನ್ನಿಂದ ಸೃಷ್ಟಿಸಲ್ಪಟ್ಟ ಪ್ರಮಥಗಣರಲ್ಲಿ ಅತಿವರ್ಣಾಶ್ರಮ ಧರ್ಮವನ್ನು ಪರಿಪಾಲಿಸುವ, ಅಪ್ರಾಕೃತಗಳಾದ ಸದಾಚಾರ ಸಂಪನ್ನರಾದ, ಆ ಪ್ರಮಥಗಣರಿಗೆ ಪ್ರಭುವಾದ ಪರಮಾತ್ಮನು ಅನಂತರ ಉಪದೇಶವನ್ನು ಮಾಡಿದನು.

ತೇಷು ಪ್ರಮಥವರ್ಗೇಷು
ಸೃಷ್ಟೇಷು ಪರಮಾತ್ಮನಾ ।
ರೇಣುಕೋ ದಾರುಕಶ್ಚೇತಿ
ದ್ವಾವಭೂತಾಂ ಶಿವಪ್ರಿಯೌ ॥ 2–28

ಪರಮಾತ್ಮನಿಂದ ಸೃಜಿಸಲ್ಪಟ್ಟ ಆ ಪ್ರಮಥ ಸಮೂಹದಲ್ಲಿ ರೇಣುಕರು ಹಾಗೂ ದಾರುಕರು ಇಬ್ಬರೂ ಶಿವನಿಗೆ ಪ್ರೀತಿಪಾತ್ರರಾದರು.

ಸರ್ವವಿದ್ಯಾವಿಶೇಷಜ್ಞೌ
ಸರ್ವಕಾರ್ಯವಿಚಕ್ಷಣೌ ।
ಮಾಯಾಮಲವಿನಿರ್ಮುಕ್ತೌ
ಮಹಿಮಾತಿಶಯೋಜ್ವಲೌ ॥ 2–29
ಆತ್ಮಾನಂದಪರಿಸ್ಫೂರ್ತಿ–
ರಸಾಸ್ವಾದನಲಂಪಟೌ ।
ಶಿವತತ್ತ್ವಪರಿಜ್ಞಾನ–
ತಿರಸ್ಕೃತಭವಾಮಯೌ ॥ 2–30

(ಅವರು) ಸರ್ವವಿದ್ಯೆಗಳ ವಿಶೇಷಾರ್ಥವನ್ನು ಬಲ್ಲವರೂ, ಸರ್ವಕಾರ್ಯ ಗಳಲ್ಲಿ ವಿಚಕ್ಷಣರೂ (ಕುಶಲರು), ಮಾಯಾಶಕ್ತಿಯಿಂದ ಪರಿಕಲ್ಪಿತಗಳಾದ ಆಣವಾದಿ ಮಲತ್ರಯಗಳ ಸಂಬಂಧರಹಿತರೂ, ಉತ್ಕೃಷ್ಟ ಮಹಿಮಾ ಸಿದ್ಧಿಯಿಂದ ಪ್ರಕಾಶಿಸುತ್ತಿದ್ದ ಆತ್ಮಾನಂದ ಪರಿಪೂರ್ಣವಾದ ಅಮೃತ ರಸವನ್ನು ಆಸ್ವಾದಿಸುವುದರಲ್ಲಿ ಆಸಕ್ತರೂ, ಶಿವತತ್ತ್ವಜ್ಞಾನದಿಂದ ಜನನ–ಮರಣವೆಂಬ ಭವರೋಗವನ್ನು ತಿರಸ್ಕರಿಸಿಕೊಂಡವರೂ–

ನಾನಾಪಥಮಹಾಶೈವ–
ತಂತ್ರನಿರ್ವಾಹತತ್ಪರೌ ।
ವೇದಾಂತಸಾರಸರ್ವಸ್ವ–
ವಿವೇಚನವಿಚಕ್ಷಣೌ ॥ 2–31

ನಿತ್ಯಸಿದ್ಧೌ ನಿರಾತಂಕೌ
ನಿರಂಕುಶಪರಾಕ್ರಮೌ ।
ತಾದೃಶೌ ತೌ ಮಹಾಭಾಗೌ
ಸಂವೀಕ್ಷ್ಯ ಪರಮೇಶ್ವರಃ ॥ 2–32

ಸಮರ್ಥೌ ಸರ್ವಕಾರ್ಯೇಷು
ವಿಶ್ವಾಸಪರಮಾಶ್ರಿತೌ ।
ಅಂತಃಪುರದ್ವಾರಪಾಲೌ
ನಿರ್ಮಮೇ ನಿಯತೌ ವಿಭುಃ ॥ 2–33

ಅನೇಕ ಶಾಖೆಗಳುಳ್ಳ ಮಹಾಶೈವತಂತ್ರವನ್ನು ನಿರ್ವಹಿಸುವುದರಲ್ಲಿ (ಪರಿಪಾಲಿಸುವುದರಲ್ಲಿ) ತತ್ಪರರಾದ, ವೇದಾಂತಗಳ (ಉಪನಿಷತ್ತುಗಳ) ಸಾರಸರ್ವಸ್ವವನ್ನು ವಿವೇಚಿಸುವುದರಲ್ಲಿ ವಿಚಕ್ಷಣರಾದ (ಕುಶಲರಾದ), ನಿತ್ಯವಾದ ಸಿದ್ಧಿಗಳುಳ್ಳ, ನಿರಾತಂಕರಾದ, ತಡೆಯಿಲ್ಲದ ಪರಾಕ್ರಮಿಗಳಾದ ಇಂತಹ ಶ್ರೇಷ್ಠರಾದ, ಪ್ರೀತಿಪಾತ್ರರಾದ, ನೇಮಬದ್ಧರಾದ ಆ ಇಬ್ಬರು ರೇಣುಕ–ದಾರುಕ ಗಣೇಶ್ವರರನ್ನು ಸರ್ವತಂತ್ರ ಸ್ವತಂತ್ರನಾದ ಪರಮೇಶ್ವರನು (ವಿಭುಃ) ಅಂತಃಪುರದ ದ್ವಾರಪಾಲಕರನ್ನಾಗಿ ನೇಮಿಸಿದನು.

**ಗಣೇಶ್ವರೌ ರೇಣುಕದಾರುಕಾವುಭೌ**
**ವಿಶ್ವಾಸಭೂತೌ ನವಚಂದ್ರಮೌಲೇಃ ।**
**ಅಂತಃಪುರದ್ವಾರಗತೌ ಸದಾ ತೌ**
**ವಿತೇನತುರ್ವಿಶ್ವಪತೇಸ್ತು ಸೇವಾಮ್ ॥ 2–34**

**– ವಂಶಸ್ಥವೃತ್ತಂ**

ಬಾಲಚಂದ್ರನನ್ನು ಧರಿಸಿದವನ(ಶಿವ) ವಿಶ್ವಾಸಕ್ಕೆ ಪಾತ್ರರಾದ ಆ ಇಬ್ಬರು ರೇಣುಕ–ದಾರುಕರೆಂಬ ಗಣೇಶ್ವರರು ವಿಶ್ವಪತಿಯ ಅಂತಃಪುರದ ದ್ವಾರಪಾಲಕರಾಗಿ ಅವನ (ಶಿವನ) ಸೇವೆಯನ್ನು ಸದಾ ಮಾಡಿದರು.

***ಇತಿ ಪ್ರಮಥಾನಾಂ ಸೃಷ್ಟಿಃ*** *ಇಲ್ಲಿಗೆ ಪ್ರಮಥರ ಸೃಷ್ಟಿಯು ಮುಗಿಯಿತು.*

***ಓಂ ತತ್ಸತ್ ಇತಿ***

***ಶ್ರೀ ಶಿವಗೀತೇಷು ಸಿದ್ಧಾಂತಾಗಮೇಷು ಶಿವಾದ್ವೈತವಿದ್ಯಾಯಾಂ ಶಿವಯೋಗಶಾಸ್ತ್ರೇ, ಶ್ರೀ ರೇಣುಕಾಗಸ್ತ್ಯಸಂವಾದೇ ಶ್ರೀವೀರಶೈವಧರ್ಮನಿರ್ಣಯೇ, ಶ್ರೀಶಿವಯೋಗಿ ಶಿವಾಚಾರ್ಯವಿರಚಿತೇ ಶ್ರೀಸಿದ್ಧಾಂತಶಿಖಾಮಣೌ ಜಗತ್ಸೃಷ್ಟಿವಿಚಾರೋ ನಾಮ ದ್ವಿತೀಯಃ ಪರಿಚ್ಛೇದಃ ॥***

*ಓಂ ತತ್ಸತ್ ಇಲ್ಲಿಗೆ ಶ್ರೀ ಶಿವನಿಂದ ಉಪದೇಶಿಸಲ್ಪಟ್ಟ ಶ್ರೀ ಸಿದ್ಧಾಂತಾ ಗಮಗಳಲ್ಲಿಯ ಶಿವಾದ್ವೈತ ವಿದ್ಯಾರೂಪವೂ, ಶಿವಯೋಗಶಾಸ್ತ್ರವೂ, ಶ್ರೀರೇಣುಕಾಗಸ್ತ್ಯ ಸಂವಾದರೂಪವೂ, ಶ್ರೀ ವೀರಶೈವಧರ್ಮನಿರ್ಣಯವೂ, ಶ್ರೀಶಿವಯೋಗಿ ಶಿವಾಚಾರ್ಯ ವಿರಚಿತವೂ ಆದ ಶ್ರೀಸಿದ್ಧಾಂತಶಿಖಾಮಣಿಯಲ್ಲಿ ಜಗತ್ಸೃಷ್ಟಿ ವಿಚಾರವೆಂಬ ಹೆಸರಿನ ಎರಡನೆಯ ಪರಿಚ್ಛೇದವು ಮುಗಿದುದು.*

## ತೃತೀಯಃ ಪರಿಚ್ಛೇದಃ
ಮೂರನೆಯ ಪರಿಚ್ಛೇದವು

### ಕೈಲಾಸವರ್ಣನಂ ರೇಣುಕಾವತರಣಕಾರಣಂ ಚ
ಕೈಲಾಸವರ್ಣನೆ ಮತ್ತು ರೇಣುಕಾವತರಣ ಕಾರಣವು
**(88 ಶ್ಲೋಕಗಳು)**

### 1. ಕೈಲಾಸವರ್ಣನಮ್
### ಕೈಲಾಸದ ವರ್ಣನೆಯು
**(8 ಶ್ಲೋಕಗಳು)**

**ಕದಾಚಿದಥ ಕೈಲಾಸೇ**
**ಕಲಧೌತಶಿಲಾಮಯೇ ।**
**ಗಂಧರ್ವವಾಮನಯನಾ–**
**ಕ್ರೀಡಾಮೌಕ್ತಿಕದರ್ಪಣೇ ॥ 3–1**

ಅನಂತರ ಒಂದಾನೊಂದು ಕಾಲದಲ್ಲಿ (ಸಮಯದಲ್ಲಿ) ಬೆಳ್ಳಿಯ ಶಿಲೆಗಳಿಂದ ತುಂಬಿದಂತಿರುವ, ಗಂಧರ್ವಸ್ತ್ರೀಯರ ಕ್ರೀಡೆಗಾಗಿ ಮುತ್ತಿನ ದರ್ಪಣದಂತಿರ್ದ ಕೈಲಾಸ ಪರ್ವತದಲ್ಲಿ–

**ಮಂದಾರವಕುಲಾಶೋಕ–**
**ಮಾಕಂದಪ್ರಾಯಭೂರುಹೇ ।**
**ಮಲ್ಲೀಮರಂದನಿಷ್ಯಂದ –**
**ಪಾನಪೀನಮಧುವ್ರತೇ ॥ 3–2**

ಮಂದಾರ, ಬಕುಲ, ಅಶೋಕ, ಮಾವು ಮೊದಲಾದ ವೃಕ್ಷಗಳಿಂದ ನಿಬಿಡವಾದ, ಮಲ್ಲಿಗೆಯ ಹೂವುಗಳಿಂದ ಸೂಸುವ ಪರಿಮಳದ ಪಾನದಿಂದ ಪರಿಪುಷ್ಟಗಳಾದ ಭ್ರಮರಗಳಿಂದ (ಶೋಭಿಸುತ್ತಿರುವ)–

**ಕುಂಕುಮಸ್ತಬಕಾಮೋದ–**
**ಕೂಲಂಕಷಹರಿನ್ಮುಖೇ ।**
**ಕಲಕಂಠಕುಲಾಲಾಪ –**
**ಕಂದಲದ್ರಾಗಬಂಧುರೇ ॥ 3–3**

ಕೆಂಪುಹೂಗಳ ಗುಚ್ಛದ ಸುವಾಸನೆಯಿಂದ ತುಂಬಿದ ದಿಕ್ಪ್ರದೇಶಗಳುಳ್ಳ, ಕೋಗಿಲೆಗಳ ಸಮೂಹದ ಮಧುರ ಧ್ವನಿಯಿಂದುತ್ಪನ್ನವಾದ (ರಾಗ ಬಂಧುರವಾದ) ಪಂಚಮ ಸ್ವರದಿಂದ ಮನೋಹರವಾದ (ಕೈಲಾಸದಲ್ಲಿ)–

**ಕಿನ್ನರೀಗೀತಮಾಧುರ್ಯ–**
**ಪರಿವಾಹಿತಗಹ್ವರೇ ।**
**ಸಾನಂದವರಯೋಗೀಂದ್ರ–**
**ವೃಂದಾಲಂಕೃತಕಂದರೇ ॥ 3–4**

ಕಿನ್ನರ ಸ್ತ್ರೀಯರ ಗಾನದ ಮಧುರಧ್ವನಿಯಿಂದ ವ್ಯಾಪ್ತವಾದ ಗವಿಗಳುಳ್ಳ, ಸಾನಂದನೆಂಬ ಶ್ರೇಷ್ಠ ಯೋಗಿವರ್ಯನೇ ಮೊದಲಾದ (ಯೋಗೀಂದ್ರರ) ಸಮೂಹದಿಂದ–

**ಹೇಮಾರವಿಂದಕಲಿಕಾ–**
**ಸುಗಂಧಿರಸಮಾನಸೇ ।**
**ಶಾತಕುಂಭಮಯಸ್ತಂಭ–**
**ಶತೋತ್ತುಂಗವಿರಾಜಿತೇ ॥ 3–5**

ಸುವರ್ಣಕಮಲಗಳ ಮೊಗ್ಗುಗಳ ಸುಗಂಧರಸದಿಂದ ತುಂಬಿದ ಮಾನಸ ಸರೋವರವುಳ್ಳ, ಸುವರ್ಣಮಯಗಳಾದ ಉನ್ನತಗಳಾದ ನೂರಾರು ಕಂಬಗಳಿಂದ ಶೋಭಿಸುತ್ತಿರುವ–

**ಮಾಣಿಕ್ಯದೀಪಕಲಿಕಾ–**
**ಮರೀಚಿದ್ಯೋತಿತಾಂತರೇ ।**
**ದ್ವಾರತೋರಣಸಂರೂಢ–**
**ಶಂಖಪದ್ಮನಿಧಿದ್ವಯೇ ॥ 3–6**

ಮಾಣಿಕ್ಯ ದೀಪಜ್ವಾಲೆಯ ಕಾಂತಿಯಿಂದ ಪ್ರಕಾಶಮಾನವಾದ ಅಂತಃಪುರವುಳ್ಳ ಹೊರಬಾಗಿಲಿನಲ್ಲಿರುವ ತೋರಣದ ಎರಡು ಕಂಬಗಳ ಮೇಲೆ ಇರಿಸಲ್ಪಟ್ಟ ಶಂಖ ಮತ್ತು ಪದ್ಮವೆಂಬ ನಿಧಿಯುಳ್ಳ–

**ಮುಕ್ತಾತಾರಕಿತೋದಾರ –**
**ವಿತಾನಾಂಬರಮಂಡಿತೇ ।**
**ಸ್ಪರ್ಶಲಕ್ಷಿತವೈಡೂರ್ಯ–**
**ಮಯಭಿತ್ತಿಪರಂಪರೇ ॥ 3–7**

ನಕ್ಷತ್ರಗಳಂತಿರುವ ಮುತ್ತುಗಳಿಂದ ವಿರಚಿತವಾದ, ವಿಶಾಲವಾದ ಮೇಲ್ಕಟ್ಟಿನ ವಸ್ತ್ರದಿಂದ ಅಲಂಕೃತವಾದ, ಸ್ಪರ್ಶದಿಂದಲೇ ಕಂಡುಹಿಡಿಯಬೇಕಾದ ವೈಡೂರ್ಯಮಣಿಮಯವಾದ ಗೋಡೆಗಳ ಸಾಲುಗಳಿಂದ ಕೂಡಿದ–

**ಸಂಚರತ್ಪ್ರಮಥಶ್ರೇಣೀ –**
**ಪದವಾಚಾಲನೂಪುರೇ ।**
**ಪ್ರವಾಲವಲಭೀಶೃಂಗ –**
**ಶೃಂಗಾರಮಣಿಮಂಟಪೇ ॥ 3–8**

ಅಲ್ಲಿ ಸಂಚರಿಸುತ್ತಿರುವ ಪ್ರಮಥ ಸಮುದಾಯದ ಚರಣಗಳಲ್ಲಿರುವ ಗೆಜ್ಜೆಯ ಸರಗಳಿಂದ ಶಬ್ದಾಯಮಾನವಾದ ತಾರಸಿ (ಛತ್) ಮತ್ತು ಶಿಖರಗಳಿಂದ ಅಲಂಕೃತವಾದ, ರತ್ನಮಂಟಪದಲ್ಲಿ ಶೋಭಿಸುತ್ತಿದ್ದ ಸಿಂಹಾಸನದಲ್ಲಿ ಪರಮೇಶ್ವರನು ಮಂಡಿಸಿದ್ದನು.

***ಇತಿ ಕೈಲಾಸವರ್ಣನಂ*** *ಇಲ್ಲಿಗೆ ಕೈಲಾಸವರ್ಣನೆಯು ಮುಗಿಯಿತು.*

## 2. ಸಿಂಹಾಸನಾಸೀನಪರಮೇಶ್ವರವರ್ಣನಮ್

ಸಿಂಹಾಸನಾಸೀನನಾದ ಪರಮೇಶ್ವರನ ವರ್ಣನೆಯು

***(15 ಶ್ಲೋಕಗಳು)***

**ವಂದಾರುದೇವಮುಕುಟ–**
**ಮಂದಾರರಸವಾಸಿತಮ್ ।**
**ರತ್ನಸಿಂಹಾಸನಂ ದಿವ್ಯ–**

**ಮಧ್ಯಸ್ತಂ ಪರಮೇಶ್ವರಮ್ ॥ 3–9**

ನಮಸ್ಕರಿಸುತ್ತಿರುವ ದೇವತೆಗಳ ಕಿರೀಟಗಳಲ್ಲಿರುವ ಮಂದಾರ ಕುಸುಮಗಳ ಪರಿಮಳದಿಂದ ಸುವಾಸಿತವಾಗಿರುವ, ದೇವಲೋಕ ಸಂಬಂಧಿಯಾದ ರತ್ನ ಸಿಂಹಾಸನವನ್ನು ಆಶ್ರಯಿಸಿ ಕುಳಿತಿರುವ ಪರಮೇಶ್ವರನನ್ನು (ಪರಿವಾರ ದೇವತೆಗಳು ಸೇವಿಸುತ್ತಿದ್ದರು) –

**ತಮಾಸ್ಥಾನಗತಂ ದೇವಮ್**
**ಸರ್ವಲೋಕಮಹೇಶ್ವರಮ್ ।**
**ತ್ರಯ್ಯಂತಕಮಲಾರಣ್ಯ –**
**ವಿಹಾರಕಲಹಂಸಕಮ್ ॥ 3–10**

ವೇದಗಳ ಕೊನೆಯ ಭಾಗವಾದ (ತ್ರಯೀ) ಉಪನಿಷತ್ತೆಂಬ ಕಮಲಗಳ ವನದಲ್ಲಿ ವಿಹರಿಸುತ್ತಿರುವ ರಾಜಹಂಸದಂತಿರುವ, ಆಸ್ಥಾನದಲ್ಲಿ ಕುಳಿತಿರುವ ಸಕಲ ಲೋಕಗಳಿಗೆ ಒಡೆಯನಾದ, ದೇವತೆಗಳಿಗೂ ದೇವನಾದ ಆ ಪರಮೇಶ್ವರನನ್ನು–

**ಉದಾರಗುಣಮೋಂಕಾರ–**
**ಶುಕ್ತಿಕಾಪುಟಮೌಕ್ತಿಕಮ್ ।**
**ಸರ್ವಮಂಗಲಸೌಭಾಗ್ಯ–**
**ಸಮುದಾಯನಿಕೇತನಮ್ ॥ 3–11**

ಉದಾರಗುಣಗಳುಳ್ಳ, ಓಂಕಾರವೆಂಬ ಶುಕ್ತಿಕಾ ಪುಟಕ್ಕೆ (ಚಿಪ್ಪು) ಮುತ್ತಿನ ಸ್ವರೂಪನೂ, ನಾನಾ ಪ್ರಕಾರಗಳಾದ ಮಂಗಲ ಸೌಭಾಗ್ಯಗಳ ಸಮೂಹಕ್ಕೆ ಮಂದಿರ ಸ್ವರೂಪನೂ–

**ಸಂಸಾರವಿಷಮೂರ್ಛಾಲು–**
**ಜೀವಸಂಜೀವನೌಷಧಮ್ ।**
**ನಿತ್ಯಪ್ರಕಾಶನೈರ್ಮಲ್ಯ –**
**ಕೈವಲ್ಯಸುರಪಾದಪಮ್ ॥ 3–12**

ಸಂಸಾರವೆಂಬ ವಿಷದಿಂದ ಮೂರ್ಛಿತರಾದ ಜೀವಿಗಳಿಗೆಲ್ಲಾ ಸಂಜೀವಿನೀ ಔಷಧದಂತಿರುವ, ನಿತ್ಯಪ್ರಕಾಶದಿಂದ ನಿರ್ಮಲ ಸ್ವಭಾವದವನಾದ ಮುಕ್ತಿ ರೂಪ ಕಲ್ಪವೃಕ್ಷವಾಗಿರುವ–

**ಅನಂತಪರಮಾನಂದ –**
**ಮಕರಂದಮಧುವ್ರತಮ್ ।**
**ಆತ್ಮಶಕ್ತಿಲತಾಪುಷ್ಯತ್–**
**ತ್ರಿಲೋಕೀಪುಷ್ಪಕೋರಕಮ್ ॥ 3–13**

ಅಪಾರವಾದ ಪರಮಾನಂದವೆಂಬ ಪುಷ್ಪರಸವನ್ನು ಪಾನಮಾಡುವುದರಲ್ಲಿ ಭೃಂಗ ಸ್ವರೂಪನಾದ ಆತ್ಮ (ತನ್ನಲ್ಲಿ ನಿತ್ಯ ಸಂಬಂಧದಲ್ಲಿರುವ) ಶಕ್ತಿಯೆಂಬ ಬಳ್ಳಿಯಿಂದ ರಕ್ಷಿಸಲ್ಪಡುತ್ತಿರುವ ಮೂರು ಲೋಕಗಳೆಂಬ ಹೂಗಳ ಮೊಗ್ಗು ಗಳನ್ನುಳ್ಳವನಾದ–

**ಬ್ರಹ್ಮಾಂಡಕುಂಡಿಕಾಷಂಡ–**
**ಪಿಂಡೀಕರಣಪಂಡಿತಮ್ ।**
**ಸಮಸ್ತದೇವತಾಚಕ್ರ–**
**ಚಕ್ರವರ್ತಿಪದೇ ಸ್ಥಿತಮ್ ॥ 3–14**

ಅನಂತ ಬ್ರಹ್ಮಾಂಡಗಳೆಂಬ ಪಾತ್ರೆಗಳ ಸಮೂಹವನ್ನು ಒಂದುಗೂಡಿಸುವಲ್ಲಿ ಕುಶಲನಾದ, ಎಲ್ಲಾ ದೇವತಾ ಸಮೂಹಕ್ಕೆ ಚಕ್ರವರ್ತಿಸ್ಥಾನದಲ್ಲಿ ಇರುವ –

**ಚಂದ್ರಬಿಂಬಾಯುತಚ್ಛಾಯಾ–**
**ದಾಯಾದದ್ಯುತಿವಿಗ್ರಹಮ್ ।**
**ಮಾಣಿಕ್ಯಮುಕುಟಜ್ಯೋತಿ–**
**ರ್ಮಂಜರೀಪಿಂಜರಾಂಬರಮ್ ॥ 3–15**

(ನಮಸ್ಕರಿಸಲು ಬಂದ ದೇವತೆಗಳ ಮಸ್ತಕದಲ್ಲಿರುವ) ಹತ್ತುಸಾವಿರ ಚಂದ್ರ ಬಿಂಬಗಳ ಜೊತೆ ಸ್ಪರ್ಧಿಸುತ್ತಿರುವ ದೇಹಕಾಂತಿಯುಳ್ಳ, ರತ್ನಕಿರೀಟಗಳಲ್ಲಿರುವ ರತ್ನಗಳ ಪ್ರಕಾಶಮಾನ ಗಳಾದ ಕಿರಣಂಗಳಿಂದ (ಬಿಂಬಿತವಾದ) ವಿಚಿತ್ರ ಬಣ್ಣದ ವಸ್ತ್ರವುಳ್ಳವನಾದ–

**ಚೂಡಾಲಂ ಸೋಮಕಲಯಾ**
**ಸುಕುಮಾರಬಿಸಾಭಯಾ ।**
**ಕಲ್ಯಾಣಪುಷ್ಪಕಲಿಕಾ–**
**ಕರ್ಣಪೂರಮನೋಹರಮ್ ॥ 3–16**

ಸುಕುಮಾರ (ಕೋಮಲ)ವಾದ ಕಮಲ ತಂತುವಿನಂತಿರುವ; ಪ್ರಕಾಶಿಸುವ ಚಂದ್ರಕಲೆಯಿಂದ ಶಿರೋಭೂಷಣನಾದ, ಕಲ್ಯಾಣಗಳಾದ (ಮಂಗಳಗಳಾದ) ಹೂವಿನ ಮೊಗ್ಗೆಯ ಕರ್ಣಾಭರಣದಿಂದ ಸುಂದರವಾಗಿ ತೋರುತ್ತಿರುವ–

**ಮುಕ್ತಾವಲಯಸಂಬದ್ಧ–**
**ಮುಂಡಮಾಲಾವಿರಾಜಿತಮ್ ।**
**ಪರ್ಯಾಪ್ತಚಂದ್ರಸೌಂದರ್ಯ–**
**ಪರಿಪಂಥಿಮುಖಶ್ರಿಯಮ್ ॥ 3–17**

ಮುತ್ತಿನ ಸರಗಳಿಂದ ಕೂಡಿದ (ಸಂಬದ್ಧ) ರುಂಡಮಾಲೆಯಿಂದ ಶೋಭಿಸುವವನಾದ, ಪರಿಪೂರ್ಣನಾದ ಚಂದ್ರನ ಸೌಂದರ್ಯವನ್ನು ತಿರಸ್ಕರಿ ಸುತ್ತಿರುವ ಮುಖಕಾಂತಿಯುಳ್ಳವನಾದ–

**ಪ್ರಾತಃ ಸಂಫುಲ್ಲಕಮಲ –**
**ಪರಿಯಾಯತ್ರಿಲೋಚನಮ್ ।**
**ಮಂದಸ್ಮಿತಮಿತಾಲಾಪ–**
**ಮಧುರಾಧರಪಲ್ಲವಮ್ ॥ 3–18**

ಪ್ರಾತಃಕಾಲದಲ್ಲಿ ಅರಳಿದ ಕಮಲಗಳಿಗೆ ಸಮಾನಗಳಾದ ಮೂರು ನೇತ್ರಗಳುಳ್ಳವನಾದ, ಮುಗುಳ್ನಗೆಯಿಂದ, ಮಿತಭಾಷಣದಿಂದ ಕೂಡಿದ ಸುಮನೋಹರವಾದ ತುಟಿಗಳುಳ್ಳವನಾದ–

**ಗಂಡಮಂಡಲಪರ್ಯಂತ –**
**ಕ್ರೀಡನ್ಮಕರಕುಂಡಲಮ್ ।**
**ಕಾಲಿಮ್ನಾ ಕಾಲಕೂಟಸ್ಯ**
**ಕಂಠನಾಲೇ ಕಲಂಕಿತಮ್ ॥ 3–19**

ಗಲ್ಲದವರೆಗೆ ಜೋಲಾಡುತ್ತಿರುವ ಮೊಸಳೆಯಾಕಾರದ ಕುಂಡಲಗಳನ್ನು ಧರಿಸಿದ, ಕುತ್ತಿಗೆಯಲ್ಲಿ ಕಾಲಕೂಟ ವಿಷದ ಕಪ್ಪುಛಾಯೆಯಿಂದ ಕಲಂಕಿತ (ಕಪ್ಪುಕಲೆಯುಳ್ಳವ)ನಾದ–

**ಮಣಿಕಂಕಣಕೇಯೂರ–**
**ಮರೀಚಿಕರಪಲ್ಲವೈಃ ।**
**ಚತುರ್ಭಿಃ ಸಂವಿರಾಜಂತಮ್**
**ಬಾಹುಮಂದಾರಶಾಖಿಭಿಃ ॥ 3–20**

ರತ್ನದ ಕಡಗಗಳ, ರತ್ನಮಯ ತೋಳುಬಳೆಗಳ ಕಾಂತಿಯಿಂದ ಕೂಡಿದ, ಚಿಗುರಿನಂತೆ ಕೋಮಲವಾದ ಹಸ್ತಗಳುಳ್ಳ ಮತ್ತು ಮಂದಾರ ವೃಕ್ಷದ ಶಾಖೆಗಳಂತೆ ಸುಂದರವಾದ ನಾಲ್ಕು ಭುಜಗಳಿಂದ ಪರಿಶೋಭಿಸುತ್ತಿರುವ–

**ಗೌರೀಪಯೋಧರಾಶ್ಲೇಷ–**
**ಕೃತಾರ್ಥಭುಜಮಧ್ಯಮಮ್ ।**
**ಸುವರ್ಣಬ್ರಹ್ಮಸೂತ್ರಾಂಕಮ್**
**ಸೂಕ್ಷ್ಮಕೌಶೇಯವಾಸಸಮ್ ॥ 3–21**

ಗೌರಿಯ ಕುಚಗಳ (ಪಯೋಧರ) ಆಲಿಂಗನದಿಂದ ಕೃತಾರ್ಥವಾದ ಭುಜಮಧ್ಯ (ಎದೆ)ಯುಳ್ಳ ಸುವರ್ಣದ ಬ್ರಹ್ಮಸೂತ್ರವನ್ನು ಮತ್ತು ಅತಿ ಸೂಕ್ಷ್ಮವಾದ ರೇಷ್ಮೆಯ (ಕೌಶೇಯ) ವಸ್ತ್ರವನ್ನು ಧರಿಸಿದ–

**ನಾಭಿಸ್ಥಾನಾವಲಂಬಿನ್ಯಾ**
**ನವಮೌಕ್ತಿಕಮಾಲಯಾ ।**
**ಗಂಗಯೇವ ಕೃತಾಶ್ಲೇಷಮ್**
**ಮೌಲಿಭಾಗಾವತೀರ್ಣಯಾ ॥ 3–22**

ನಾಭಿಸ್ಥಾನದವರೆಗೆ ಜೋಲಾಡುತ್ತಿರುವ, ಮಸ್ತಕ ಭಾಗದಿಂದ ಇಳಿದು ಬಂದ ಗಂಗೆಯೋ ಎಂಬಂತೆ ಇರುವ, ನೂತನವಾದ ಮುತ್ತಿನಸರದಿಂದ ಆಶ್ಲೇಷಿತನಾದ (ಆಲಿಂಗಿತನಾಗಿರುವ)–

**ಪದೇನ ಮಣಿಮಂಜೀರ–**
**ಪ್ರಭಾಪಲ್ಲವಿತಶ್ರಿಯಾ ।**
**ಚಂದ್ರವತ್ಸ್ಫಾಟಿಕಂ ಪೀಠಂ**
**ಸಮಾವೃತ್ಯ ಸ್ಥಿತಂ ಪುರಃ ॥ 3–23**

ಮುಂಭಾಗದಲ್ಲಿ ರತ್ನ ನೂಪುರಗಳ ಕಾಂತಿಯಿಂದ ಪಲ್ಲವಾಕಾರದ ಶೋಭೆಯನ್ನು ಧರಿಸಿದ ಪಾದದಿಂದ ಚಂದ್ರನಂತೆ ಶುಭ್ರವಾಗಿರುವ ಸ್ಪಟಿಕಮಯವಾದ ಪೀಠವನ್ನು ಮೆಟ್ಟಿ ಕುಳಿತಿರುವ ಪರಮೇಶ್ವರನನ್ನು ಪರಿವಾರ ದೇವತೆಗಳು ಸೇವಿಸುತ್ತಿದ್ದರು.

*ಇತಿ ಸಿಂಹಾಸನಾಸೀನಪರಮೇಶ್ವರವರ್ಣನಂ*
*ಇಲ್ಲಿಗೆ ಸಿಂಹಾಸನಾಸೀನ ಪರಮೇಶ್ವರನ ವರ್ಣನೆಯು ಮುಗಿಯಿತು.*

## 3. ಶಕ್ತಿವರ್ಣನಮ್
ಶಕ್ತಿಯ ವರ್ಣನೆಯು
**(13 ಶ್ಲೋಕಗಳು)**

**ವಾಮಪಾರ್ಶ್ವನಿವಾಸಿನ್ಯಾ**
**ಮಂಗಲಪ್ರಿಯವೇಷಯಾ ।**
**ಸಮಸ್ತಲೋಕನಿರ್ಮಾಣ–**
**ಸಮವಾಯಸ್ವರೂಪಯಾ ॥ 3–24**

ಪರಶಿವನ ಎಡಭಾಗದಲ್ಲಿ ಕುಳಿತಿರುವ ಮಂಗಲಮಯವೂ, ಪ್ರಿಯಕರವೂ ಆದ ವೇಷವುಳ್ಳ, ಎಲ್ಲ ಭುವನಗಳ ನಿರ್ಮಾಣದಲ್ಲಿ ಶಿವನೊಂದಿಗೆ ಸಮವಾಯ (ನಿತ್ಯ) ಸಂಬಂಧದಿಂದ ಇರುವವಳಾದ–

**ಇಚ್ಛಾಜ್ಞಾನಕ್ರಿಯಾರೂಪ–**
**ಬಹುಶಕ್ತಿವಿಲಾಸಯಾ ।**
**ವಿದ್ಯಾತತ್ತ್ವಪ್ರಕಾಶಿನ್ಯಾ**
**ವಿನಾಭಾವವಿಹೀನಯಾ ॥ 3–25**

ಇಚ್ಛಾಜ್ಞಾನಕ್ರಿಯಾ ರೂಪವಾದ ಅನೇಕ ಶಕ್ತಿಗಳಿಂದ ಕೂಡಿರುವವಳಾದ, ಶುದ್ಧವಿದ್ಯಾ ತತ್ತ್ವಸ್ವರೂಪವನ್ನು ಪ್ರಕಾಶಿಸುವವಳಾದ, ಶಿವನೊಡನೆ ಅವಿನಾಭಾವ ಸಂಬಂಧದಿಂದ ಇರುವವಳಾದ–

**ಸಂಸಾರವಿಷಕಾಂತಾರ–**
**ದಾಹದಾವಾಗ್ನಿಲೇಖಯಾ ।**
**ಧಮ್ಮಿಲ್ಲಮಲ್ಲಿಕಾಮೋದ–**
**ಝುಂಕುರ್ವದ್‌ಭೃಂಗಮಾಲಯಾ ॥ 3–26**

ಸಂಸಾರವೆಂಬ ವಿಷದ ಅರಣ್ಯವನ್ನು ಸುಡುವುದರಲ್ಲಿ ಕಾಡುಗಿಚ್ಚಿನೋ ಪಾದಿಯಲ್ಲಿರುವ, ತುರುಬಿನಲ್ಲಿರುವ (ಧಮ್ಮಿಲ್ಲ) ಮಲ್ಲಿಗೆಹೂಗಳ ಸುಗಂಧದಿಂದ ಝೇಂಕರಿಸುತ್ತಿರುವ ಭ್ರಮರಗಳ ಪಂಕ್ತಿಯುಳ್ಳವಳಾದ–

**ಸಂಪೂರ್ಣಚಂದ್ರಸೌಭಾಗ್ಯ–**
**ಸಂವಾದಿಮುಖಪದ್ಮಯಾ ।**
**ನಾಸಾಮೌಕ್ತಿಕಲಾವಣ್ಯ–**
**ನಾಶೀರಸ್ಮಿತಶೋಭಯಾ ॥ 3–27**

ಪೂರ್ಣಚಂದ್ರನ ಸೌಂದರ್ಯದೊಡನೆ ಸ್ಪರ್ಧಿಸುತ್ತಿರುವ ಮುಖಕಮಲ ವುಳ್ಳವಳಾದ, ನತ್ತಿನಲ್ಲಿನ (ಮೂಗುತಿ) ಮುತ್ತಿನ ಲಾವಣ್ಯದಿಂದ ಉತ್ಕೃಷ್ಟವಾದ ಮಂದಹಾಸದ ಶೋಭೆಯಿಂದ ಶೋಭಾಯಮಾನಳಾದ–

**ಮಣಿತಾಟಂಕರಂಗಾಂತ–**
**ರ್ವಲಿತಾಪಾಂಗಲೀಲಯಾ ।**
**ನೇತ್ರದ್ವಿತಯಸೌಂದರ್ಯ–**
**ನಿಂದಿತೇಂದೀವರತ್ವಿಷಾ ॥ 3–28**

ರತ್ನದ ಕರ್ಣಾಭರಣ(ವಾಲೆ)ಗಳೆಂಬ ರಂಗಮಂಟಪದ ಮಧ್ಯದಲ್ಲಿ ಹೊರಳಿದ ಕಟಾಕ್ಷ (ಕಡೆಗಣ್ಣ ನೋಟ) ಲೀಲೆಯಿಂದುಂಟಾದ ಎರಡು ನಯನಗಳ ಸೌಂದರ್ಯವು ನೀಲಕಮಲಗಳ ಕಾಂತಿಯನ್ನು ಮೀರುವಂತಿತ್ತು.

**ಕುಸುಮಾಯುಧಕೋದಂಡ –**
**ಕುಟಿಲಭ್ರೂವಿಲಾಸಯಾ ।**
**ಬಂಧೂಕಕುಸುಮಚ್ಛಾಯಾ–**
**ಬಂಧುಭೂತಾಧರಶ್ರಿಯಾ ॥ 3–29**

ಮನ್ಮಥನ ಧನುಸ್ಸಿನಂತೆ ವಕ್ರವಾಗಿರುವ (ಮಣಿದಿರುವ) ಹುಬ್ಬುಗಳ ಶೋಭೆಯುಳ್ಳವಳಾದ, ಬಂಧೂಕ ಪುಷ್ಪ (ದಾಸವಾಳ, ಕೆಂಪು ಹೂವು) ಕಾಂತಿಯುಳ್ಳ ತುಟಿಗಳ ಶೋಭೆಯುಳ್ಳವಳಾದ–

**ಕಂಠನಾಲಜಿತಾನಂಗ–**
**ಕಂಬುಬಿಬ್ಬೋಕಸಂಪದಾ ।**
**ಬಾಹುದ್ವಿತಯಸೌಭಾಗ್ಯ–**
**ವಂಚಿತೋತ್ಪಲಮಾಲಯಾ ॥ 3–30**

ತನ್ನ ಕುತ್ತಿಗೆಯಿಂದ ಗೆಲ್ಲಲ್ಪಟ್ಟ ಅನಂಗನ (ಮನ್ಮಥನ) ವಿಜಯಶಂಖದ ನಾದ ಮಾಧುರ್ಯದ ಶೋಭೆಯುಳ್ಳವಳಾದ, ಎರಡೂ ಭುಜಗಳ ಸೌಭಾಗ್ಯದಿಂದ ವಂಚಿಸಲ್ಪಟ್ಟ ಕನ್ನೈದಿಲೆಯ ಮಾಲೆಯುಳ್ಳ–

**ಸ್ಥಿರಯೌವನಲಾವಣ್ಯ –**
**ಶೃಂಗಾರಿತಶರೀರಯಾ ।**
**ಅತ್ಯಂತಕಠಿನೋತ್ತುಂಗ–**
**ಪೀವರಸ್ತನಭಾರಯಾ ॥ 3–31**

ಸ್ಥಿರವಾದ ಯೌವ್ವನದ ಲಾವಣ್ಯದಿಂದ ಶೃಂಗಾರಿತ ಶರೀರವುಳ್ಳ, ಅತ್ಯಂತ ಕಠಿಣವಾದ ಉನ್ನತವಾದ ಪುಷ್ಟವಾದ ಕುಚಗಳ ಭಾರದಿಂದ ಕೂಡಿದವಳಾದ–

**ಮೃಣಾಲವಲ್ಲರೀತಂತು–**
**ಬಂಧುಭೂತಾವಲಗ್ನಯಾ ।**
**ಶೃಂಗಾರತಟಿನೀತುಂಗ–**
**ಪುಲಿನಶ್ರೋಣಿಭಾರಯಾ ॥ 3–32**

ಕಮಲದ ಬಳ್ಳಿಯ ತಂತುವಿಗೆ ಸಮಾನವಾದ ನಡುವಿನಿಂದ ಕೂಡಿದ (ಅತಿ ಸಣ್ಣ ನಡುವುಳ್ಳ), ಶೃಂಗಾರ ರೂಪನದಿಗೆ ಉನ್ನತವಾದ ಮರಳಿನ ದಿನ್ನೆಗಳಂತಿರುವ ನಿತಂಬಗಳ (ಶ್ರೋಣಿ) ಭಾರದಿಂದ ಕೂಡಿದ–

**ಕುಸುಂಭಕುಸುಮಚ್ಛಾಯಾ –**
**ಕೋಮಲಾಂಬರಶೋಭಯಾ ।**
**ಶೃಂಗಾರೋದ್ಯಾನಸಂರಂಭ –**
**ರಂಭಾಸ್ತಂಭೋರುಕಾಂಡಯಾ ॥ 3–33**

ಕುಸುಬೆಯ ಹೂವಿನ ಶೋಭೆಯಂತಿರುವ ರಮ್ಯವಾದ ವಸ್ತ್ರದಿಂದ ಶೋಭಿಸುತ್ತಿರುವ, ಶೃಂಗಾರವೆಂಬ ತೋಟದ ಶೋಭೆಗೆ ಬಾಳೆಯ ದಿಂಡಿನಂತಿರುವ ತೊಡೆಗಳುಳ್ಳವಳಾದ (ಊರುಕಾಂಡಯಾ)–

**ಚೂತಪ್ರವಾಲಸುಷುಮಾ–**
**ಸುಕುಮಾರಪದಾಬ್ಜಯಾ ।**
**ಸ್ಥಿರಮಂಗಲಶೃಂಗಾರ**
**ಭೂಷಣಾಲಂಕೃತಾಂಗಯಾ ॥ 3–34**

ಮಾವಿನ ಚಿಗುರಿನಂತೆ ಅತ್ಯಂತ ಶೋಭಾಯಮಾನಳಾದ ಮೃದುವಾದ ಪಾದಕಮಲಗಳುಳ್ಳವಳಾದ, ನಿತ್ಯ ಮಂಗಳಾತ್ಮಕಳಾದ ಶೃಂಗಾರ ಯೋಗ್ಯವಾದ ಒಡವೆಗಳಿಂದ ಅಲಂಕೃತವಾದ ಶರೀರವುಳ್ಳವಳಾದ–

**ಹಾರನೂಪುರಕೇಯೂರ–**
**ಚಮತ್ಕೃತಶರೀರಯಾ ।**
**ಚಕ್ಷುರಾನಂದಲತಯಾ**
**ಸೌಭಾಗ್ಯಕುಲವಿದ್ಯಯಾ ॥ 3–35**

ಪುಷ್ಪ ರತ್ನಾದಿಗಳ ಹಾರದಿಂದ, ಕಾಲಿನ ಗೆಜ್ಜೆಗಳಿಂದ, ವಂಕಿಗಳಿಂದ (ಕೇಯೂರ) ಪರಿಶೋಭಿಸುತ್ತಿರುವ ಶರೀರವುಳ್ಳವಳಾದ, ನೋಡುವವರ ಕಣ್ಣಿಗೆ ಆನಂದ ಲತೆಯಂತಿರುವ, ಸೌಭಾಗ್ಯ ಕುಲವಿದ್ಯಾಸ್ವರೂಪಳೂ ಆದ–

**ಉಮಯಾ ಸಮಮಾಸೀನಂ**

**ಲೋಕಜಾಲಕುಟುಂಬಯಾ ।**
**ಅಪೂರ್ವರೂಪಮಭಜನ್**
**ಪರಿವಾರಾಃ ಸಮಂತತಃ ॥ 3–36**

ಸಕಲ ಲೋಕಗಳೇ ಕುಟುಂಬವಾಗುಳ್ಳ, ಉಮೆಯೊಂದಿಗೆ ಕೂಡಿ ಕುಳಿತಿರುವ, ಅಸಾಧಾರಣ ರೂಪದಿಂದ ಕೂಡಿದ ಆ ಪರಮೇಶ್ವರನನ್ನು ಅವನ ಪರಿವಾರವು ಸುತ್ತಲೂ ನಿಂತು ಭಜಿಸುತ್ತಿದ್ದರು.

*ಇತಿ ಶಕ್ತಿವರ್ಣನಂ ಇಲ್ಲಿಗೆ ಶಕ್ತಿವರ್ಣನೆಯು ಮುಗಿಯಿತು.*

## 4. ದೇವತಾನಾಂ ಸೇವಾವರ್ಣನಮ್
ದೇವತೆಗಳು ಮಾಡುತ್ತಿರುವ ಸೇವೆಯ ವರ್ಣನೆಗಳು
**(20 ಶ್ಲೋಕಗಳು)**

**ಪುಂಡರೀಕಾಕೃತಿಂ ಸ್ವಚ್ಛಮ್**
**ಪೂರ್ಣಚಂದ್ರಸಹೋದರಮ್ ।**
**ದಧೌ ತಸ್ಯ ಮಹಾಲಕ್ಷ್ಮೀಃ**
**ಸಿತಮಾತಪವಾರಣಮ್ ॥ 3–37**

ಮಹಾಲಕ್ಷ್ಮಿದೇವಿಯು ಪರಮೇಶ್ವರನಿಗೆ ಬಿಳಿಕಮಲದಂತೆ (ಪುಂಡರೀಕಾಕೃತಿ) ಶುಭ್ರವಾಗಿರುವ, ಪೂರ್ಣಚಂದ್ರನಂತೆ ತಂಪಾದ ಶ್ವೇತಛತ್ರವನ್ನು ಹಿಡಿದಿದ್ದಳು.

**ತಂತ್ರೀಝಂಕಾರಶಾಲಿನ್ಯಾ**
**ಸಂಗೀತಾಮೃತವಿದ್ಯಯಾ ।**
**ಉಪತಸ್ಥೇ ಮಹಾದೇವಮ್**
**ಉಪಾಂತೇ ಚ ಸರಸ್ವತೀ ॥ 3–38**

ಸರಸ್ವತಿದೇವಿಯು ವೀಣೆಯ ಝೇಂಕಾರದೊಡನೆ ಕೂಡಿದ ಅಮೃತ ದಂತಿರುವ ಗಾನವಿದ್ಯೆಯಿಂದ ಸಮೀಪದಲ್ಲಿ ಇದ್ದು ಮಹಾದೇವನನ್ನು ಸೇವಿಸಿದಳು (ಉಪತಸ್ಥೇ).

**ಝಣತ್ಕಂಕಣಜಾತೇನ**
**ಹಸ್ತೇನೋಪನಿಷದ್ವಧೂಃ ।**
**ಓಂಕಾರತಾಲವೃಂತೇನ**
**ವೀಜಯಾಮಾಸ ಶಂಕರಮ್ ॥ 3–39**

ಉಪನಿಷತ್ತೆಂಬ ಸ್ತ್ರೀಯು ಝಣತ್ಕರಿಸುವ ಬಳೆಗಳಿಂದ ಕೂಡಿದ ಹಸ್ತದಿಂದ, ಓಂಕಾರವೆಂಬ ಬೀಸಣಿಗೆಯಿಂದ ಶಂಕರನಿಗೆ ಗಾಳಿಯನ್ನು ಬೀಸಿದಳು.

**ಚಲಚ್ಚಾಮರಿಕಾಹಸ್ತಾ**
**ಝಂಕುರ್ವನ್ಮಣಿಕಂಕಣಾಃ ।**
**ಆಸೇವಂತ ತಮೀಶಾನ–**
**ಮಭಿತೋ ದಿವ್ಯಕನ್ಯಕಾಃ ॥ 3–40**

ಝುಣತ್ಕಾರವನ್ನು ಮಾಡುವ ರತ್ನದ ಬಳೆಗಳುಳ್ಳ, ಚಲಿಸುತ್ತಿರುವ ಚಾಮರಗಳಿಂದ ಕೂಡಿದ ಹಸ್ತಗಳುಳ್ಳ ದೇವಲೋಕದ ಕನ್ಯೆಯರು ಈಶನನ್ನು (ಪರಮೇಶ್ವರನನ್ನು) ಸೇವಿಸುತ್ತಿದ್ದರು.

**ಚಾಮರಾಣಾಂ ವಿಲೋಲಾನಾಮ್**
**ಮಧ್ಯೇ ತನ್ಮುಖಮಂಡಲಮ್ ।**
**ರರಾಜ ರಾಜಹಂಸಾನಾಮ್**
**ಭ್ರಮತಾಮಿವ ಪಂಕಜಮ್ ॥ 3–41**

ಚಲಿಸುತ್ತಿರುವ ಚಾಮರಗಳ ಮಧ್ಯದಲ್ಲಿ ಆ ಪರಮಾತ್ಮನ ಮುಖವು ಸಂಚರಿಸುತ್ತಿರುವ ರಾಜಹಂಸಗಳ ಮಧ್ಯದಲ್ಲಿ ಇರುವ ಕಮಲದೋಪಾದಿಯಲ್ಲಿ ಶೋಭಿಸುತ್ತಿತ್ತು.

**ಮಂತ್ರೇಣ ತಮಸೇವಂತ**
**ವೇದಾಃ ಸಾಂಗವಿಭೂತಯಃ ।**
**ಭಕ್ತ್ಯಾ ಚೂಡಾಮಣಿಂ ಕಾಂತಮ್**
**ವಹಂತ ಇವ ಮೌಲಿಭಿಃ ॥ 3–42**

ಶಿಕ್ಷಾ–ವ್ಯಾಕರಣ ಷಡಂಗಯುಕ್ತಗಳಾದ (ಸಾಂಗ ವಿಭೂತಯಃ) ವೇದಗಳು, ಉಪನಿಷತ್ತುಗಳೆಂಬ ತಮ್ಮ ಶಿರಸ್ಸುಗಳಿಂದ ಆ ಪರಮಾತ್ಮನನ್ನು ಮನೋಹರವಾದ ಚೂಡಾಮಣಿಯೋಪಾದಿಯಲ್ಲಿ ಧರಿಸಿ ಮಂತ್ರದಿಂದ ಭಕ್ತಿಪೂರ್ವಕವಾಗಿ ಸೇವಿಸಿದವು.

**ತದೀಯಾಯುಧಧಾರಿಣ್ಯಃ**
**ತತ್ಸಮಾನವಿಭೂಷಣಾಃ ।**
**ಅಂಗಭೂತಾಃ ಸ್ತ್ರಿಯಃ ಕಾಶ್ಚಿದ್**
**ಆಸೇವಂತ ತಮೀಶ್ವರಮ್ ॥ 3–43**

ಆ ಪರಮಾತ್ಮನ ಆಯುಧಗಳನ್ನು ಧರಿಸಿರುವ ಪರಮಾತ್ಮನ ಹಾಗೆ ಅಲಂಕಾರಗಳನ್ನು ಧರಿಸಿರುವ ಶಿವನಿಗೆ ಅಂಗಭೂತರಾದ ಕೆಲವು ದೇವಸ್ತ್ರೀಯರು ಆ ಈಶ್ವರನನ್ನು ಸೇವಿಸುತ್ತಿದ್ದರು.

**ಆಪ್ತಾಧಿಕಾರಿಣಃ ಕೇಚಿತ್**
**ಅನಂತಪ್ರಮುಖಾ ಅಪಿ ।**
**ಅಷ್ಟೌ ವಿದ್ಯೇಶ್ವರಾ ದೇವಮ್**
**ಅಭಜಂತ ಸಮಂತತಃ ॥ 3–44**

ಶಿವನಿಗೆ ಆಪ್ತಾಧಿಕಾರಿಗಳಾದ ಅನಂತನೇ ಮೊದಲಾದ ಎಂಟು ಜನ ವಿದ್ಯೇಶ್ವರರು ಸುತ್ತಲೂ ನಿಂತು ದೇವನನ್ನು (ಶಿವನನ್ನು) ಭಜಿಸುತ್ತಿದ್ದರು.

**ತತೋ ನಂದೀ ಮಹಾಕಾಲಃ**
**ಚಂಡೋ ಭೃಂಗೀರಿಟಿಸ್ತತಃ ।**
**ಸೇನಾನಿರ್ಗಜವಕ್ತ್ರಶ್ಚ**
**ರೇಣುಕೋ ದಾರುಕಸ್ತಥಾ ।**
**ಘಂಟಾಕರ್ಣಃ ಪುಷ್ಪದಂತಃ**
**ಕಪಾಲೀ ವೀರಭದ್ರಕಃ ॥ 3–45**

**ಏವಮಾದ್ಯಾ ಮಹಾಭಾಗಾ**
**ಮಹಾಬಲಪರಾಕ್ರಮಾಃ ।**

**ನಿರಂಕುಶಮಹಾಸತ್ತ್ವಾ**
**ಭೇಜಿರೇ ತಂ ಮಹೇಶ್ವರಮ್ ॥ 3–46**

ಅನಂತರ ನಂದೀಶ್ವರ, ಮಹಾಕಾಲ, ಚಂಡ, ಭೃಂಗಿರಿಟಿ, ಷಣ್ಮುಖ (ಸೇನಾನಿ), ಗಣೇಶ, ರೇಣುಕ ದಾರುಕ, ಘಂಟಾಕರ್ಣ, ಪುಷ್ಪದಂತ, ಕಪಾಲಿ ಮತ್ತು ವೀರಭದ್ರರು – ಇವರೇ ಮೊದಲಾದ ಮಹಾನ್ ಬಲಶಾಲಿಗಳೂ, ನಿರಂಕುಶ ಸತ್ವಶಾಲಿಗಳೂ, ಮಹಾಮಹಿಮರೂ ಆದ ಪ್ರಮಥರು ಆ ಮಹೇಶ್ವರನನ್ನು ಸೇವಿಸುತ್ತಿದ್ದರು.

**ಅಣಿಮಾದಿಕಮೈಶ್ವರ್ಯಮ್**
**ಯೇಷಾಂ ಸಿದ್ಧೇರಪೋಹನಮ್ ।**
**ಬ್ರಹ್ಮಾದಯಃ ಸುರಾ ಯೇಷಾಮ್**
**ಆಜ್ಞಾಲಂಘನಭೀರವಃ ॥ 3–47**

ಯಾವ ಪ್ರಮಥರ ಸಿದ್ಧಿಯ ಮುಂದೆ ಅಣಿಮಾದಿ ಅಷ್ಟಸಿದ್ಧಿಗಳು ತುಚ್ಛವಾದವುಗಳೋ, ಬ್ರಹ್ಮನೇ ಮೊದಲಾದ ದೇವತೆಗಳು ಯಾವ ಪ್ರಮಥರ ಆಜ್ಞೆಯನ್ನು ಉಲ್ಲಂಘಿಸಲು ಭಯಪಡುವರೋ–

**ಮೋಕ್ಷಲಕ್ಷ್ಮೀಪರಿಷ್ವಂಗ –**
**ಮುದಿತಾ ಯೇಽನ್ತರಾತ್ಮನಾ ।**
**ಯೇಷಾಮೀಷತ್ಕರಂ ವಿಶ್ವ–**
**ಸರ್ಗಸಂಹಾರಕಲ್ಪನಮ್ ॥ 3–48**

ಯಾವ ಪ್ರಮಥರು ಮೋಕ್ಷ್ಮಲಕ್ಷ್ಮಿಯ ಆಲಿಂಗನದಿಂದ ಅಂತರಾತ್ಮನಲ್ಲಿ ಸಂತುಷ್ಟರಾಗಿರುವರೋ, ವಿಶ್ವಸೃಷ್ಟಿ ಸಂಹಾರಕ್ರಿಯೆಗಳು ಯಾರಿಗೆ ಅತಿಸುಲಭ ಸಾಧ್ಯಗಳೋ–

**ಜ್ಞಾನಶಕ್ತಿಃ ಪರಾ ಯೇಷಾಮ್**
**ಸರ್ವವಸ್ತುಪ್ರಕಾಶಿನೀ ।**
**ಆನಂದಕಣಿಕಾ ಯೇಷಾಮ್**
**ಹರಿಬ್ರಹ್ಮಾದಿಸಂಪದಃ ॥ 3–49**

ಯಾವ ಪ್ರಮಥರ ಸರ್ವೋತ್ಕೃಷ್ಟವಾದ ಜ್ಞಾನಶಕ್ತಿಯು ಸಕಲ ವಸ್ತುಗಳ ಯಥಾರ್ಥ ಜ್ಞಾನವನ್ನು ಉಂಟುಮಾಡುವುದೋ, ಹರಿಬ್ರಹ್ಮಾದಿ ದೇವತೆಗಳ ಐಶ್ವರ್ಯಗಳ ಆನಂದವು ಯಾರಿಗೆ ಅತ್ಯಲ್ಪವಾಗಿ ತೋರುವುದೋ–

**ಆಕಾಂಕ್ಷಂತೇ ಪದಂ ಯೇಷಾಮ್**
**ಯೋಗಿನೋ ಯೋಗತತ್ಪರಾಃ ।**
**ಕಾಂಕ್ಷಣೀಯಫಲೋ ಯೇಷಾಮ್**
**ಸಂಕಲ್ಪಃ ಕಲ್ಪಪಾದಪಃ ॥ 3–50**

ಯೋಗತತ್ಪರರಾದ ಯೋಗಿಗಳು ಯಾರ ಸ್ಥಾನವನ್ನು ಅಪೇಕ್ಷಿಸುವರೋ, ಯಾರ ಸಂಕಲ್ಪವು ಅಪೇಕ್ಷಿಸಿದ ಫಲವನ್ನು ಕೊಡುವ ಕಲ್ಪವೃಕ್ಷವಾಗಿರುವುದೋ–

**ಕರ್ಮಕಾಲಾದಿಕಾರ್ಪಣ್ಯ–**
**ಚಿಂತಾ ಯೇಷಾಂ ನ ವಿದ್ಯತೇ ।**
**ಯೇಷಾಂ ವಿಕ್ರಮಸನ್ನಾಹಾ**
**ಮೃತ್ಯೋರಪಿ ಚ ಮೃತ್ಯವಃ ।**
**ತೇ ಸಾರೂಪ್ಯಪದಂ ಪ್ರಾಪ್ತಾಃ**
**ಪ್ರಮಥಾ ಭೇಜಿರೇ ಶಿವಮ್ ॥ 3–51**

ಯಾವ ಪ್ರಮಥರಿಗೆ ಕರ್ಮ, ಕಾಲಗಳ ಚಿಂತೆಗಳು ಇರುವುದಿಲ್ಲವೊ, ಯಾರ ಪರಾಕ್ರಮದ ಉದ್ಯೋಗಗಳು ಮೃತ್ಯುವಿಗೂ ಮೃತ್ಯುವಾಗಿರುವುವೋ ಅಂಥ ಶಿವಸಾರೂಪ್ಯ ಪದವನ್ನು ಪಡೆದ ಅಂತಹ ಪ್ರಮಥರು ಶಿವನನ್ನು ಸೇವಿಸುತ್ತಿದ್ದರು (ಭೇಜಿರೇ).

**ಬ್ರಹ್ಮೋಪೇಂದ್ರಮಹೇಂದ್ರಾದ್ಯಾ**
**ವಿಶ್ವತಂತ್ರಾಧಿಕಾರಿಣಮ್ ।**
**ಆಯುಧಾಲಂಕೃತಪ್ರಾಂತಾಃ**
**ಪರಿತಸ್ತಂ ಸಿಷೇವಿರೇ ॥ 3–52**

ಬ್ರಹ್ಮ, ವಿಷ್ಣು, ಇಂದ್ರ ಮೊದಲಾದ ದೇವತೆಗಳು ತಮ್ಮ ತಮ್ಮ ಆಯುಧಗಳನ್ನು ಧರಿಸಿಕೊಂಡು ಜಗತ್ತಿನ ಸೂತ್ರಧಾರಿಯಾದ ಪರಮಾತ್ಮನ ಸುತ್ತಲೂ ಜಾಗ್ರತರಾಗಿ ನಿಂತು ಹಲವು ಬಗೆಯಲ್ಲಿ ಸೇವಿಸುತ್ತಿದ್ದರು.

**ಆದಿತ್ಯಾ ವಸವೋ ರುದ್ರಾ**
**ಯಕ್ಷಗಂಧರ್ವಕಿನ್ನರಾಃ ।**
**ದಾನವಾ ರಾಕ್ಷಸಾ ದೈತ್ಯಾಃ**
**ಸಿದ್ಧಾ ವಿದ್ಯಾಧರೋರಗಾಃ ।**
**ಅಭಜಂತ ಮಹಾದೇವಮ್**
**ಅಪರಿಚ್ಛಿನ್ನಸೈನಿಕಾಃ ॥ 3–53**

ಆದಿತ್ಯರು (ದ್ವಾದಶ ಸೂರ್ಯರು), ವಸುಗಳು (ಅಷ್ಟವಸುಗಳು) ಏಕಾದಶ ರುದ್ರರು, ಯಕ್ಷರು, ಗಂಧರ್ವರು, ಕಿನ್ನರರು, ದಾನವರು, ರಾಕ್ಷಸರು, ದೈತ್ಯರು, ಸಿದ್ಧರು, ವಿದ್ಯಾಧರರು, ಶೇಷನೇ (ಉರಗ) ಮೊದಲಾದ ಸರ್ಪಗಳು – ಇವರೆಲ್ಲರೂ ತಮ್ಮ ಅಪರಿಮಿತ ಸೇನೆಯೊಂದಿಗೆ ಮಹಾದೇವನನ್ನು ಭಜಿಸುತ್ತಿದ್ದರು.

**ವಸಿಷ್ಠೋ ವಾಮದೇವಶ್ಚ**
**ಪುಲಸ್ತ್ಯಾಗಸ್ತ್ಯಶೌನಕಾಃ ।**
**ದಧೀಚಿರ್ಗೌತಮಶ್ಚೈವ**
**ಸಾನಂದಶುಕನಾರದಾಃ ॥ 3–54**

**ಉಪಮನ್ಯುಭೃಗುವ್ಯಾಸ–**
**ಪರಾಶರಮರೀಚಯಃ ।**
**ಇತ್ಯಾದ್ಯಾ ಮುನಯಃ ಸರ್ವೇ**
**ನೀಲಕಂಠಂ ಸಿಷೇವಿರೇ ॥ 3–55**

ವಸಿಷ್ಠ, ವಾಮದೇವ, ಪುಲಸ್ತ್ಯ, ಆಗಸ್ತ್ಯ, ಶೌನಕ, ದಧೀಚಿ, ಗೌತಮ, ಸಾನಂದ, ಶುಕದೇವ, ನಾರದ, ಉಪಮನ್ಯು, ಭೃಗು, ವ್ಯಾಸ, ಪರಾಶರ ಮತ್ತು ಮರೀಚ – ಇವರೇ ಮೊದಲಾದ ಎಲ್ಲ ಮುನಿಗಳು ನೀಲಕಂಠನನ್ನು ಸೇವಿಸುತ್ತಿದ್ದರು.

**ಪಾರ್ಶ್ವಸ್ಥಪರಿವಾರಾಣಾಮ್**
**ವಿಮಲಾಂಗೇಷು ಬಿಂಬಿತಃ ।**
**ಸರ್ವಾಂತರ್ಗತಮಾತ್ಮಾನಮ್**
**ಸ ರೇಜೇ ದರ್ಶಯನ್ನಿವ ॥ 3–56**

ತನ್ನ ಇಕ್ಕೆಲಗಳಲ್ಲಿ ನಿಂತಿರುವ ತನ್ನ ಪರಿವಾರ ದೇವತೆಗಳು ಅತ್ಯಂತ ನಿರ್ಮಲವಾದ ಶರೀರಗಳಲ್ಲಿ ಪ್ರತಿಬಿಂಬಿತನಾದ ಆ ಪರಮಾತ್ಮನು, ತಾನು ಸರ್ವಾಂತರ್ಯಾಮಿಯೆಂಬುದನ್ನು ತೋರುತ್ತಿರುವನೋ ಎಂಬಂತೆ ಪರಿಶೋಭಿಸಿದನು (ರೇಜೇ).

*ಇತಿ ದೇವತಾನಾಂ ಸೇವಾವರ್ಣನಂ*

*ಇಲ್ಲಿಗೆ ದೇವತೆಗಳ ಸೇವಾವರ್ಣನೆಯು ಮುಗಿಯಿತು.*

## 5. ಪರಮೇಶ್ವರಸ್ಯ ರಾಜವ್ಯಾಪಾರವರ್ಣನಮ್

ಪರಮೇಶ್ವರನ ಒಡ್ಡೋಲಗದ ವರ್ಣನೆ

**(21 ಶ್ಲೋಕಗಳು)**

**ಕ್ಷಣಂ ಸ ಶಂಭುರ್ದೇವಾನಾಮ್**
**ಕಾರ್ಯಭಾಗಂ ನಿರೂಪಯನ್ ।**
**ಕ್ಷಣಂ ಗಂಧರ್ವರಾಜಾನಾಮ್**
**ಗಾನವಿದ್ಯಾಂ ವಿಭಾವಯನ್ ॥ 3–57**

ಆ ಶಂಭುವು ಕ್ಷಣಕಾಲ ದೇವತೆಗಳು ಮಾಡಬೇಕಾದ ಕಾರ್ಯಗಳ ಬಗ್ಗೆ ಆಜ್ಞಾಪಿಸುವವನಾದರೆ, ಇನ್ನೊಂದು ಕ್ಷಣಕಾಲ ಶ್ರೇಷ್ಠ ಗಂಧರ್ವರ ಗಾನವಿದ್ಯೆಯನ್ನು ಆಲಿಸುತ್ತಿದ್ದನು (ವಿಭಾವಯನ್).

**ಬ್ರಹ್ಮವಿಷ್ಣ್ವಾದಿಭಿರ್ದೇವೈಃ**
**ಕ್ಷಣಮಾಲಾಪಮಾಚರನ್ ।**
**ಕ್ಷಣಂ ದೇವಮೃಗಾಕ್ಷೀಣಾಮ್**
**ಲಾಲಯನ್ ನೃತ್ಯವಿಭ್ರಮಮ್ ॥ 3–58**

ಬಳಿಕ ಸ್ವಲ್ಪ ಹೊತ್ತು ಬ್ರಹ್ಮ, ವಿಷ್ಣು ಮೊದಲಾದ ದೇವತೆಗಳೊಡನೆ ಮಾತನಾಡುವನು, ಸ್ವಲ್ಪ ಹೊತ್ತು ದೇವಕನ್ಯೆಯರ ನರ್ತನ ವೈಭವವನ್ನು ನೋಡುವನು.

**ವ್ಯಾಸಾದೀನಾಂ ಕ್ಷಣಂ ಕುರ್ವನ್**
**ವೇದೋಚ್ಚಾರೇಷು ಗೌರವಮ್ ।**
**ವಿದಧಾನಃ ಕ್ಷಣಂ ದೇವ್ಯಾ**
**ಮುಖೇ ಬಿಂಬಾಧರೇ ದೃಶಃ ॥ 3–59**

ಒಂದು ಕ್ಷಣಕಾಲ ವೇದೋಚ್ಚಾರಣೆಯನ್ನು ಮಾಡುತ್ತಿರುವ ವ್ಯಾಸಾದಿ ಋಷಿಗಳಿಗೆ ಗೌರವವನ್ನು ಸೂಚಿಸುತ್ತಾ, ಮರುಕ್ಷಣದಲ್ಲಿ ತೊಂಡೆಯ ಹಣ್ಣಿನಂತಿರುವ ತುಟಿಯುಳ್ಳ ತನ್ನ ದೇವಿಯ ಮುಖದ ಕಡೆಗೆ ದೃಷ್ಟಿಯನ್ನು ಹೊರಳಿಸುತ್ತಾ–

**ಹಾಸ್ಯನೃತ್ಯಂ ಕ್ಷಣಂ ಪಶ್ಯನ್**
**ಭೃಂಗಿಣಾ ಪರಿಕಲ್ಪಿತಮ್ ।**
**ನಂದಿನಾ ವೇತ್ರಹಸ್ತೇನ**
**ಸರ್ವತಂತ್ರಾಧಿಕಾರಿಣಾ ॥ 3–60**

**ಅಮುಂಚತಾ ಸದಾ ಪಾರ್ಶ್ವಮ್**
**ಆತ್ಮಾಭಿಪ್ರಾಯವೇದಿನಾ ।**
**ಚೋದಿತಾನ್ ವಾಸಯನ್ ಕಾಂಶ್ಚಿದ್**
**ವಿಸೃಜನ್ ಭ್ರೂವಿಲಾಸತಃ ।**
**ಸಂಭಾವಯಂಸ್ತಥಾ ಚಾನ್ಯಾನ್**
**ಅನ್ಯಾನಪಿ ನಿಯಾಮಯನ್ ॥ 3–61**

ಮರುಕ್ಷಣದಲ್ಲಿ ಭೃಂಗಿಯಿಂದ ಮಾಡಲ್ಪಟ್ಟ ಹಾಸ್ಯನೃತ್ಯವನ್ನು ನೋಡುತ್ತಾ ಸದಾಶಿವನ ನಿಕಟವರ್ತಿಯಾದ ಶಿವನ ಅಭಿಪ್ರಾಯವನ್ನು ತಿಳಿದಿರುವ ಸರ್ವತಂತ್ರಾಧಿಕಾರಿಯಾದ ಮತ್ತು ದಂಡಧಾರಿಯಾದ ನಂದಿಯಿಂದ ಕೆಲವರನ್ನು ಕರೆಯಿಸಿ

ಕುಳ್ಳಿರಿಸುತ್ತಾ, ಕೆಲವರನ್ನು ತನ್ನ ಹುಬ್ಬಿನ ಸನ್ನೆಯಿಂದ ಹೊರಗೆ ಕಳುಹಿಸುತ್ತಾ, ಅದರಂತೆ ಕೆಲವರನ್ನು ಪ್ರೀತಿಯ ವಾಕ್ಯಗಳಿಂದ ಸಂತೋಷಪಡಿಸುತ್ತಾ ಮತ್ತೆ ಕೆಲವರನ್ನು ಶಾಸನಕ್ಕೆ ಒಳಪಡಿಸುತ್ತಿದ್ದನು.

**ಸಮಸ್ತಭುವನಾಧೀಶ–**
**ಮೌಲಿಲಾಲಿತಶಾಸನಃ ।**
**ಅಕುಂಠಶಕ್ತಿರವ್ಯಾಜ –**
**ಲಾವಣ್ಯಲಲಿತಾಕೃತಿಃ ॥ 3–62**

ಎಲ್ಲ ಭುವನಗಳ (ಹದಿನಾಲ್ಕು ಲೋಕಗಳ) ಅಧೀಶ್ವರರಿಂದ ಶಿರೋಧಾಯಕವಾದ ಶಾಸನವುಳ್ಳವನಾದ, ಎಲ್ಲಿಯೂ ಅಡೆತಡೆಯಿಲ್ಲದ ಶಕ್ತಿಯುಳ್ಳ, ಸ್ವಾಭಾವಿಕ ಲಾವಣ್ಯದಿಂದ ಸುಂದರವಾದ–

**ಸ್ಥಿರಯೌವನಸೌರಭ್ಯ–**
**ಶೃಂಗಾರಿತಕಲೇವರಃ ।**
**ಆತ್ಮಶಕ್ತ್ಯಮೃತಾಸ್ವಾದ –**
**ರಸೋಲ್ಲಾಸಿತಮಾನಸಃ ॥ 3–63**

ಸ್ಥಿರವಾದ ತಾರುಣ್ಯದಿಂದ ಅಲಂಕೃತವಾದ ಶರೀರವುಳ್ಳವನಾಗಿ, ತನ್ನಲ್ಲಿರುವ ಶಕ್ತಿರೂಪವಾದ ಅಮೃತದ ರಸಾಸ್ವಾದದಿಂದ ಉಲ್ಲಸಿತವಾದ ಮನಸ್ಸುಳ್ಳವನಾಗಿ–

**ಸ್ವಾಭಾವಿಕಮಹೈಶ್ವರ್ಯ–**
**ವಿಶ್ರಾಮಪರಮಾವಧಿಃ ।**
**ನಿಷ್ಕಲಂಕಮಹಾಸತ್ತ್ವ–**
**ನಿರ್ಮಿತಾನೇಕವಿಗ್ರಹಃ ॥ 3–64**

ಸ್ವಾಭಾವಿಕವಾಗಿ ನೆಲೆಸಿರುವ ಮಹದೈಶ್ವರ್ಯಗಳಿಗೆ (ಸರ್ವಜ್ಞತ್ವಾದಿ ಐಶ್ವರ್ಯಗಳಿಗೆ) ಪರಮಾವಧಿಯಾಗಿರುವ, ಕಲಂಕಶೂನ್ಯವಾದ ಮಹಾಶಕ್ತಿಯಿಂದ ನಿರ್ಮಿಸಲ್ಪಟ್ಟ ಅನೇಕ ಮಂಗಲ ವಿಗ್ರಹಗಳುಳ್ಳವನಾದ–

**ಅಖಂಡಾರಾತಿದೋರ್ದಂಡ–**
**ಕಂಡೂಖಂಡನಪಂಡಿತಃ ।**
**ಚಿಂತಾಮಣಿಃ ಪ್ರಪನ್ನಾನಾಮ್**
**ಶ್ರೀಕಂಠಃ ಪರಮೇಶ್ವರಃ ॥ 3–65**

ಅನೇಕ ಸಜ್ಜನ ವೈರಿಗಳ ಭುಜಗಳ ನವೆಯನ್ನು ಹೋಗಲಾಡಿಸುವುದರಲ್ಲಿ ಸಮರ್ಥನಾದ, ಶರಣಾಗತರಾದವರಿಗೆ ಚಿಂತಾಮಣಿ ಸ್ವರೂಪನಾದ, ಶ್ರೀಕಂಠನಾದ ಪರಮೇಶ್ವರನು (ಸಭೆಯಲ್ಲಿ ಶೋಭಿಸುತ್ತಿದ್ದನು)–

**ಸಭಾಂತರಗತಂ ತಂತ್ರಮ್**
**ರೇಣುಕಂ ಗಣನಾಯಕಮ್ ।**
**ಪ್ರಸಾದಂ ಸುಲಭಂ ದಾತುಮ್**
**ತಾಂಬೂಲಂ ಸ ತಮಾಹ್ವಯತ್ ॥ 3–66**

ಆ ಶ್ರೀಕಂಠನಾದ ಪರಮೇಶ್ವರನು ಸಭೆಯ ಮಧ್ಯದಲ್ಲಿರುವ ಪ್ರಸಿದ್ಧನಾದ ರೇಣುಕನೆಂಬ ಗಣಶ್ರೇಷ್ಠನನ್ನು ಸುಲಭವಾದ ತಾಂಬೂಲ ಪ್ರಸಾದವನ್ನು ಕೊಡುವುದಕ್ಕಾಗಿ ಆಹ್ವಾನಿಸಿದನು (ಶಿರಸಂಜ್ಞೆಯಿಂದ ಕರೆದನು).

**ಶಂಭೋರಾಹ್ವಾನಸಂತೋಷ–**

**ಸಂಭ್ರಮೇಣೈವ ದಾರುಕಮ್ ।**
**ಉಲ್ಲಂಘ್ಯ ಪಾರ್ಶ್ವಮಗಮತ್**
**ಲೋಕನಾಥಸ್ಯ ರೇಣುಕಃ ॥ 3–67**

ಶಂಭುವಿನ ಆಹ್ವಾನದ ಸಂತೋಷ ಸಂಭ್ರಮದಲ್ಲಿ ಆ ರೇಣುಕಗಣೇಶ್ವರನು ದಾರುಕ ಗಣೇಶ್ವರನನ್ನು ದಾಟಿ ಲೋಕನಾಥನಾದ (ಪರಮೇಶ್ವರನ) ಸಮೀಪಕ್ಕೆ ಹೋದನು.

**ತಮಾಲೋಕ್ಯ ವಿಭುಸ್ತತ್ರ**
**ಸಮುಲ್ಲಂಘಿತದಾರುಕಮ್ ।**
**ಮಾಹಾತ್ಮ್ಯಂ ನಿಜಭಕ್ತಾನಾಮ್**
**ದ್ಯೋತಯನ್ನಿದಮಬ್ರವೀತ್ ॥ 3–68**

ದಾರುಕನನ್ನು ದಾಟಿ ಬಂದ ರೇಣುಕನನ್ನು ಪರಶಿವನು ನೋಡಿ, ತನ್ನ ಭಕ್ತನ ಮಹಾತ್ಮ್ಯವನ್ನು ವ್ಯಕ್ತಪಡಿಸಲೋಸ್ಕರವಾಗಿ ಹೀಗೆ ಹೇಳಿದನು:

**ರೇ! ರೇ! ರೇಣುಕ ದುರ್ಬುದ್ಧೇ**
**ಕಥಮೇಷ ತ್ವಯಾಽಧುನಾ ।**
**ಉಲ್ಲಂಘಿತಃ ಸಭಾಮಧ್ಯೇ**
**ಮಮ ಭಕ್ತೋ ಹಿ ದಾರುಕಃ ॥ 3–69**

ಆತುರಬುದ್ಧಿಯವನಾದ ಹೇ ರೇಣುಕನೇ, ಈ ಸಭೆಯ ಮಧ್ಯದಲ್ಲಿದ್ದ ನನ್ನ ಭಕ್ತನಾದ ಈ ದಾರುಕನು ನಿನ್ನಿಂದ ಅದು ಹೇಗೆ ತಾನೇ ದಾಟಲ್ಪಟ್ಟನು?

**ಲಂಘನಂ ಮಮ ಭಕ್ತಾನಾಮ್**
**ಪರಮಾನರ್ಥಕಾರಣಮ್ ।**
**ಆಯುಃ ಶ್ರಿಯಂ ಕುಲಂ ಕೀರ್ತಿಮ್**
**ನಿಹಂತಿ ಹಿ ಶರೀರಿಣಾಮ್ ॥ 3–70**

ನನ್ನ ಭಕ್ತರನ್ನು ದಾಟುವುದು ಅತ್ಯಂತ ಅನರ್ಥಕ್ಕೆ ಕಾರಣವಾಗುವುದು. ಅದು ಪ್ರಾಣಿಗಳ ಆಯುಷ್ಯ, ಸಂಪತ್ತು, ವಂಶಕೀರ್ತಿಗಳನ್ನೆಲ್ಲಾ ಹಾಳುಮಾಡುತ್ತದೆ.

**ಮಮ ಭಕ್ತಮವಜ್ಞಾಯ**
**ಮಾರ್ಕಂಡೇಯಂ ಪುರಾ ಯಮಃ ।**
**ಮತ್ಪಾದತಾಡನಾದಾಸೀತ್**
**ಸ್ಮರಣೀಯಕಲೇವರಃ ॥ 3–71**

ಪೂರ್ವಕಾಲದಲ್ಲಿ ಯಮನು ನನ್ನ ಭಕ್ತನಾದ ಮಾರ್ಕಂಡೇಯನನ್ನು ತಿರಸ್ಕರಿಸಿ, ನನ್ನ ಕಾಲಿನ ಒದೆತದಿಂದ (ಅದರ) ಸ್ಮರಣೀಯ ಶರೀರಿಯಾದನು.

**ಭೃಗೋಶ್ಚ ಶಂಕುಕರ್ಣಸ್ಯ**
**ಮಮ ಭಕ್ತಿಮತೋಸ್ತಯೋಃ ।**
**ಕೃತ್ವಾಽನಿಷ್ಟಮಭೂದ್ವಿಷ್ಣುಃ**

**ವಿಕೇಶೋ ದಶಯೋನಿಭಾಕ್ ॥ 3–72**

ನನ್ನ ಭಕ್ತರಾದ ಭೃಗುಮುನಿಗೂ, ಶಂಕುಕರ್ಣನಿಗೂ ವಿಷ್ಣುವು ಕೇಡನ್ನು ಮಾಡಿ ಮುಂದಲೆಯ ಕೂದಲುಗಳನ್ನು ಕೀಳಿಸಿಕೊಂಡವನಾಗಿ ದಶಯೋನಿಗಳಲ್ಲಿ ಜನ್ಮ ತಾಳಿದನು.

**ಮದ್ಭಕ್ತೇನ ದಧೀಚೇನ**
**ಕೃತ್ವಾ ಯುದ್ಧಂ ಜನಾರ್ದನಃ ।**
**ಭಗ್ನಚಕ್ರಾಯುಧಃ ಪೂರ್ವಮ್**
**ಪರಾಭವಮುಪಾಗಮತ್ ॥ 3–73**

(ಪೂರ್ವದಲ್ಲಿ) ನನ್ನ ಭಕ್ತನಾದ ದಧೀಚಿಯೊಡನೆ ಜನಾರ್ದನನು ಯುದ್ಧ ಮಾಡಿ ತನ್ನ ಚಕ್ರಾಯುಧವನ್ನು ಮುರಿಸಿಕೊಂಡು ಪರಾಭವಗೊಂಡು ತಿರಸ್ಕೃತನಾದನು.

**ಕೃತಾಶ್ವಮೇಧೋ ದಕ್ಷೋಽಪಿ**
**ಮದ್ಭಕ್ತಾಂಶ್ಚ ಗಣೇಶ್ವರಾನ್ ।**
**ಅವಮತ್ಯ ಸಭಾಮಧ್ಯೇ**
**ಮೇಷವಕ್ತ್ರೋಽಭವತ್ ಪುರಾ ॥ 3–74**

ಪೂರ್ವದಲ್ಲಿ ದಕ್ಷನು ಕೂಡ ಅಶ್ವಮೇಧ ಯಾಗವನ್ನು ಮಾಡಿ ನನ್ನ ಭಕ್ತರಾದ ಪ್ರಮಥಗಣರನ್ನು ಸಭಾಮಧ್ಯದಲ್ಲಿ ಅವಮಾನಪಡಿಸಿ ಕುರಿತಲೆಯುಳ್ಳವನಾದನು.

**ಶ್ವೇತಸ್ಯ ಮಮ ಭಕ್ತಸ್ಯ**
**ದುರತಿಕ್ರಮತೇಜಸಃ ।**
**ಔದಾಸೀನ್ಯೇನ ಕಾಲೋಽಪಿ**
**ಮಯಾ ದಗ್ಧಃ ಪುರಾಽಭವತ್ ॥ 3–75**

(ಪೂರ್ವಕಾಲದಲ್ಲಿ) ಮೀರಲಾಗದ ತೇಜಸ್ಸುಳ್ಳ ನನ್ನ ಭಕ್ತನಾದ ಶ್ವೇತನನ್ನು ಉದಾಸೀನ ಮಾಡಿದ್ದರಿಂದ ಯಮನು ನನ್ನಿಂದ ಸುಡಲ್ಪಟ್ಟನು.

**ಏವಮನ್ಯೇಽಪಿ ಬಹವೋ**
**ಮದ್ಭಕ್ತಾನಾಮತಿಕ್ರಮಾತ್ ।**
**ಪರಿಭೂತಾಃ ಹತಾಶ್ಚಾಸನ್**
**ಭಕ್ತಾ ಮೇ ದುರತಿಕ್ರಮಾಃ ॥ 3–76**

ಹೀಗೆಯೇ ಇನ್ನೂ ಅನೇಕರು ನನ್ನ ಭಕ್ತರನ್ನು ಉದಾಸೀನವಾಗಿ ಕಂಡುದರಿಂದ ತಿರಸ್ಕೃತರೂ, ಕೊಲ್ಲಲ್ಪಟ್ಟವರೂ ಆಗಿರುತ್ತಾರೆ. ಆದ್ದರಿಂದ ನನ್ನ ಭಕ್ತರನ್ನು ಅತಿಕ್ರಮಿಸಬಾರದು.

**ಅವಿಚಾರೇಣ ಮದ್ಭಕ್ತೋ**
**ಲಂಘಿತೋ ದಾರುಕಸ್ತ್ವಯಾ ।**
**ಏಷ ತ್ವಂ ರೇಣುಕಾನೇನ**
**ಜನ್ಮವಾನ್ ಭವ ಭೂತಲೇ ॥ 3–77**

ಎಲೈ ರೇಣುಕನೇ, ನಿನ್ನಿಂದ ನನ್ನ ಭಕ್ತನಾದ ದಾರುಕನು ಅವಿಚಾರದಿಂದ ದಾಟಲ್ಪಟ್ಟನು. ಇದರಿಂದ ನೀನು ಭೂಲೋಕದಲ್ಲಿ ಜನ್ಮವನ್ನು ತಾಳು.

*ಇತಿ ಪರಮೇಶ್ವರಸ್ಯ ರಾಜವ್ಯಾಪಾರವರ್ಣನಂ*
*ಇಲ್ಲಿಗೆ ಪರಮೇಶ್ವರನ ರಾಜ್ಯವ್ಯಾಪಾರ ವರ್ಣನೆಯು ಮುಗಿಯಿತು.*

## 6. ಶ್ರೀರೇಣುಕಸ್ಯ ಶಿವವಿಜ್ಞಾಪನಮ್
ಶ್ರೀ ರೇಣುಕರಿಂದ ಶಿವನಲ್ಲಿ ವಿಜ್ಞಾಪನೆಯು
**(4 ಶ್ಲೋಕಗಳು)**

**ಇತ್ಯುಕ್ತಃ ಪರಮೇಶೇನ**
**ಭಕ್ತಮಾಹಾತ್ಮ್ಯಶಂಸಿನಾ ।**
**ಪ್ರಾರ್ಥಯಾಮಾಸ ದೇವೇಶಮ್**
**ಪ್ರಣಿಪತ್ಯ ಸ ರೇಣುಕಃ ।**
**ಭವದಾಹ್ವಾನಸಂಭ್ರಾಂತ್ಯಾ**
**ಮಯಾಽಜ್ಞಾನಾದ್ವಿಲಂಘಿತಃ ॥ 3–78**

ಭಕ್ತರ ಮಹಾತ್ಮೆಯನ್ನು ಪ್ರಶಂಸಿಸುತ್ತಿದ್ದ ಪರಮೇಶ್ವರನಿಂದ ಈ ರೀತಿಯಾಗಿ ಹೇಳಲ್ಪಟ್ಟ ಆ ರೇಣುಕನು ದೇವಾದಿದೇವನಾದ ಪರಮೇಶ್ವರನಿಗೆ ನಮಸ್ಕರಿಸಿ ಪ್ರಾರ್ಥನೆಯನ್ನು ಮಾಡಿದನು. ಹೇ ಶಂಭುವೇ, ನಿನ್ನ ಆಹ್ವಾನದಿಂದುಂಟಾದ ಸಂಭ್ರಾಂತಿಯಿಂದ (ಗಡಿಬಿಡಿಯಿಂದ) ಅಜ್ಞಾನದಿಂದ (ದಾರುಕನನ್ನು) ದಾಟಿದೆನು.

**ದಾರುಕೋಽಯಂ ತತಃ ಶಂಭೋ**
**ಪಾಹಿ ಮಾಂ ಭಕ್ತವತ್ಸಲ ।**
**ಮಾನುಷೀಂ ಯೋನಿಮಾಸಾದ್ಯ**
**ಮಹಾದುಃಖವಿವರ್ಧಿನೀಂ ।**
**ಜಾತ್ಯಾಯುರ್ಭೋಗವೈಷಮ್ಯ–**
**ಹೇತುಕರ್ಮೋಪಪಾದಿನೀಮ್ ॥ 3–79**

**ಸಮಸ್ತದೇವಕೈಂಕರ್ಯ–**
**ಕಾರ್ಪಣ್ಯಪ್ರಸವಸ್ಥಲೀಮ್ ।**
**ಮಹಾತಾಪತ್ರಯೋಪೇತಾಮ್**
**ವರ್ಣಾಶ್ರಮನಿಯಂತ್ರಿತಾಮ್ ।**
**ವಿಹಾಯ ತ್ವತ್ಪದಾಂಭೋಜ–**
**ಸೇವಾಂ ಕಿಂ ವಾ ವಸಾಮ್ಯಹಮ್ ॥ 3–80**

**ಯಥಾ ಮೇ ಮಾನುಷೋ ಭಾವೋ**
**ನ ಭವೇತ್ ಕ್ಷಿತಿಮಂಡಲೇ ।**
**ತಥಾ ಪ್ರಸಾದಂ ದೇವೇಶ**

**ವಿಧೇಹಿ ಕರುಣಾನಿಧೇ ॥ 3–81**

ಈ ದಾರುಕನು ನನ್ನಿಂದ ದಾಟಲ್ಪಟ್ಟನು. ಎಲೈ ಭಕ್ತವತ್ಸಲನೇ, ಅದರಿಂದ (ದಾಟಿದ ದೋಷದಿಂದ) ನನ್ನನ್ನು ರಕ್ಷಿಸು. (ಹೇ ಶಂಭುವೇ) ಮಹಾದುಃಖವನ್ನು ಹೆಚ್ಚಿಸುತ್ತಿರುವ ಜಾತಿ, ಆಯು, ಭೋಗಗಳ ವೈಷಮ್ಯಕ್ಕೆ ಕಾರಣವಾದ ಕರ್ಮವನ್ನು ಸಂಪಾದಿಸುವ, ಸಮಸ್ತ ದೇವತೆಗಳ ಕೈಂಕರ್ಯ ಮತ್ತು ಕಾರ್ಪಣ್ಯ (ದೈನ್ಯಭಾವ)ಕ್ಕೆ ಉಗಮಸ್ಥಾನವಾಗಿರುವ ಮಹಾತಾಪತ್ರಯಗಳಿಂದ ಕೂಡಿದ, ವರ್ಣಾಶ್ರಮಗಳ ನಿಯಂತ್ರಣಕ್ಕೆ ಒಳಗಾಗಿರುವ ಮನುಷ್ಯಯೋನಿಯನ್ನು ಹೊಂದಿ ನಿನ್ನ ಪಾದಕಮಲಸೇವೆಯನ್ನು ಬಿಟ್ಟು ನಾನು ವಾಸಮಾಡಲು ಸಾಧ್ಯವೇ? ಆದ್ದರಿಂದ ದೇವದೇವೇಶನಾದ ಹೇ ಕರುಣಾನಿಧಿಯೇ, ನನಗೆ ಭೂಮಂಡಲದಲ್ಲಿ ಮನುಷ್ಯಭಾವವು (ಮನುಷ್ಯ ಜನ್ಮವು) ಬಾರದ ಹಾಗೆ ಪ್ರಸಾದವನ್ನು ಅನುಗ್ರಹಿಸು.

*ಇತಿ ಶ್ರೀರೇಣುಕಸ್ಯ ಶಿವವಿಜ್ಞಾಪನಂ*
*ಇಲ್ಲಿಗೆ ಶ್ರೀ ರೇಣುಕರಿಂದ ಶಿವನಲ್ಲಿ ವಿಜ್ಞಾಪನೆಯು ಮುಗಿಯಿತು.*

## 7. ಅವತಾರಪ್ರಯೋಜನಮ್
ಅವತಾರ ಪ್ರಯೋಜನವು
**(7 ಶ್ಲೋಕಗಳು)**

**ಇತಿ ಸಂಪ್ರಾರ್ಥಿತೋ ದೇವೋ**
**ರೇಣುಕೇನ ಮಹೇಶ್ವರಃ ।**
**ಮಾ ಭೈಷೀರ್ಮಮ ಭಕ್ತಾನಾಮ್**
**ಕುತೋ ಭೀತಿರಿಹೈಷ್ಯತಿ ॥ 3–82**

ದೇವನಾದ (ಲೀಲಾಮೂರ್ತಿಯಾದ) ಮಹೇಶ್ವರನು, ರೇಣುಕನಿಂದ ಈ ರೀತಿಯಾಗಿ ಪ್ರಾರ್ಥಿಸಲ್ಪಟ್ಟವನಾಗಿ (ಹೀಗೆ ಹೇಳಿದನು)– ಎಲೈ ರೇಣುಕನೇ, ನೀನು ಹೆದರಬೇಡ. ನನ್ನ ಭಕ್ತರಿಗೆ ಎಲ್ಲಿಂದ ತಾನೆ ಭೀತಿಯುಂಟಾಗುವುದು?

**ಶ್ರೀಶೈಲಸ್ಯೋತ್ತರೇ ಭಾಗೇ**
**ತ್ರಿಲಿಂಗವಿಷಯೇ ಶುಭೇ ।**
**ಕೊಲ್ಲಿಪಾಕ್ಯಾಭಿಧಾನೋಽಸ್ತಿ**
**ಕೋಽಪಿ ಗ್ರಾಮೋ ಮಹತ್ತರಃ ॥ 3–83**

ಶ್ರೀಶೈಲದ ಉತ್ತರಭಾಗದಲ್ಲಿರುವ ಮಂಗಳಕರವಾದ ತ್ರಿಲಿಂಗ ದೇಶದಲ್ಲಿ ಕೊಲ್ಲಿಪಾಕಿಯೆಂಬ ಒಂದು ದೊಡ್ಡ ಗ್ರಾಮವಿರುವುದು.

**ಸೋಮೇಶ್ವರಾಭಿಧಾನಸ್ಯ**
**ತತ್ರ ವಾಸವತೋ ಮಮ ।**
**ಅಸ್ಪೃಶನ್ ಮಾನುಷಂ ಭಾವಮ್**
**ಲಿಂಗಾತ್ಪ್ರಾದುರ್ಭವಿಷ್ಯಸಿ ॥ 3–84**

ಅಲ್ಲಿ ಸೋಮೇಶ್ವರನೆಂಬ ಹೆಸರಿನಿಂದ ವಾಸವಾಗಿರುವ ನನ್ನ ಲಿಂಗದ ದೆಸೆಯಿಂದ ನೀನು ಮಾನುಷಭಾವವಿಲ್ಲದೆ (ಯೋನಿಜನಾಗದೆ) ಅವತರಿಸುತ್ತೀಯೆ?

**ಮದೀಯಲಿಂಗಸಂಭೂತಮ್**
**ಮದ್ಭಕ್ತಪರಿಪಾಲಕಮ್ ।**

**ವಿಸ್ಮಿತಾ ಮಾನುಷಾಃ ಸರ್ವೇ**
**ತ್ವಾಂ ಭಜಂತು ಮದಾಜ್ಞಯಾ ॥ 3–85**

ನನ್ನ ಆಜ್ಞೆಯಿಂದ ನನ್ನ ಆ ಸೋಮೇಶ್ವರ ಲಿಂಗದಿಂದುದಿಸಿದ, ನನ್ನ ಭಕ್ತರನ್ನು ಕಾಪಾಡುವ ನಿನ್ನನ್ನು (ನೋಡಿ) ಆಶ್ಚರ್ಯಪಟ್ಟ ಸರ್ವಮನುಷ್ಯರು ನಿನ್ನನ್ನು ಸೇವಿಸುವವರಾಗಲಿ.

**ಮದದ್ವೈತಪರಂ ಶಾಸ್ತ್ರಮ್**
**ವೇದವೇದಾಂತಸಂಮತಮ್ ।**
**ಸ್ಥಾಪಯಿಷ್ಯಸಿ ಭೂಲೋಕೇ**
**ಸರ್ವೇಷಾಂ ಹಿತಕಾರಕಮ್ ॥ 3–86**

ವೇದವೇದಾಂತ ಸಮ್ಮತವಾದ, ನನ್ನ ಅದ್ವೈತ ಪರವಾದ (ಶಿವಾದ್ವೈತ ಪರವಾದ), ಸರ್ವಜನಹಿತಕಾರಕವಾದ ಶಾಸ್ತ್ರವನ್ನು ಭೂಲೋಕದಲ್ಲಿ ನೀನು ಸ್ಥಾಪಿಸುವನಾಗುವೆ.

**ಮಮ ಪ್ರತಾಪಮತುಲಮ್**
**ಮದ್ಭಕ್ತಾನಾಂ ವಿಶೇಷತಃ ।**
**ಪ್ರಕಾಶಯ ಮಹೀಭಾಗೇ**
**ವೇದಮಾರ್ಗಾನುಸಾರತಃ ॥ 3–87**

ನನ್ನ ಪ್ರತಾಪವು (ಮಹಿಮೆಯು) ಅತುಲನೀಯವಾದುದು. ನನ್ನ ಭಕ್ತರ ಪ್ರತಾಪವು ನನಗಿಂತಲೂ ವಿಶೇಷವಾದುದು ಎಂಬುದನ್ನು ವೇದಮಾರ್ಗಾನು ಸಾರವಾಗಿ ಭೂಮಂಡಲದಲ್ಲಿ ಪ್ರಕಾಶಪಡಿಸು.

**ಇತ್ಯುಕ್ತ್ವಾ ಪರಮೇಶ್ವರಃ ಸ ಭಗವಾನ್ ಭದ್ರಾಸನಾದುತ್ಥಿತೋ**
**ಬ್ರಹ್ಮೋಪೇಂದ್ರಮುಖಾನ್ ವಿಸೃಜ್ಯ ವಿಬುಧಾನ್ ಭ್ರೂಸಂಜ್ಞಯಾ ಕೇವಲಮ್।**
**ಪಾರ್ವತ್ಯಾ ಸಹಿತೋ ಗಣೈರಭಿಮತೈಃ ಪ್ರಾಪ ಸ್ವಮಂತಃಪುರಮ್**
**ಕ್ಷೋಣೀಭಾಗಮವಾತರತ್ ಪಶುಪತೇರಾಜ್ಞಾವಶಾದ್ ರೇಣುಕಃ॥ 3–88**

**– ಶಾರ್ದೂಲವಿಕ್ರೀಡಿತವೃತ್ತಂ**

ಭಗವಂತನಾದ (ಷಡ್ಗುಣೈಶ್ವರ್ಯಯುಕ್ತನಾದ) ಆ ಪರಮೇಶ್ವರನು ಈ ರೀತಿಯಾಗಿ ಹೇಳಿ, ಸಿಂಹಾಸನದಿಂದ ಎದ್ದು ಹುಬ್ಬಿನ ಸಂಜ್ಞೆಯಿಂದ ಬ್ರಹ್ಮ, ವಿಷ್ಣು, ಮೊದಲಾದ ದೇವತೆಗಳನ್ನು ಕಳುಹಿಸಿ ಪಾರ್ವತಿಯೊಡಗೂಡಿ ಆಪ್ತರಾದ ಕೆಲ ಪ್ರಮಥರೊಡನೆ ಅಂತಃಪುರಕ್ಕೆ ತೆರಳಿದನು. ಇತ್ತ ಶ್ರೀರೇಣುಕಗಣೇಶ್ವರನು ಪಶುಪತಿಯ ಆಜ್ಞಾನುಸಾರವಾಗಿ ಭೂಲೋಕದಲ್ಲಿ ಅವತರಿಸಿದನು.

***ಇತಿ ಅವತಾರಪ್ರಯೋಜನಂ*** *ಇಲ್ಲಿಗೆ ಅವತಾರ ಪ್ರಯೋಜನವು ಮುಗಿಯಿತು.*

***ಓಂ ತತ್ಸತ್ ಇತಿ***
***ಶ್ರೀ ಶಿವಗೀತೇಷು, ಸಿದ್ಧಾಂತಾಗಮೇಷು ಶಿವಾದ್ವೈತವಿದ್ಯಾಯಾಂ ಶಿವಯೋಗಶಾಸ್ತ್ರೇ ಶ್ರೀರೇಣುಕಾಗಸ್ತ್ಯಸಂವಾದೇ,***
***ವೀರಶೈವಧರ್ಮನಿರ್ಣಯೇ ಶ್ರೀಶಿವಯೋಗಿಶಿವಾಚಾರ್ಯವಿರಚಿತೇ ಶ್ರೀಸಿದ್ಧಾಂತಶಿಖಾಮಣೌ ಶಿವಸಭಾವರ್ಣನಂ ನಾಮ ತೃತೀಯಃ ಪರಿಚ್ಛೇದಃ ॥***

*ಓಂ ತತ್ಸತ್ ಇಲ್ಲಿಗೆ ಶ್ರೀ ಶಿವನಿಂದ ಉಪದೇಶಿಸಲ್ಪಟ್ಟ*
*ಶ್ರೀ ಸಿದ್ಧಾಂತಾಗಮಗಳಲ್ಲಿಯ ಶಿವಾದ್ವೈತವಿದ್ಯಾರೂಪವೂ, ಶಿವಯೋಗಶಾಸ್ತ್ರವೂ, ಶ್ರೀ ರೇಣುಕಾಗಸ್ತ್ಯಸಂವಾದರೂಪವೂ,*
*ಶ್ರೀವೀರಶೈವಧರ್ಮನಿರ್ಣಯವೂ,*
*ಶ್ರೀಶಿವಯೋಗಿಶಿವಾಚಾರ್ಯವಿರಚಿತವೂ ಆದ ಶ್ರೀಸಿದ್ಧಾಂತಶಿಖಾಮಣಿಯಲ್ಲಿ*
*ಶ್ರೀ ಶಿವನ ಸಭಾವರ್ಣನೆಯೆಂಬ ಹೆಸರಿನ ಮೂರನೆಯ ಪರಿಚ್ಛೇದವು ಮುಗಿದುದು.*

# ಚತುರ್ಥಃ ಪರಿಚ್ಛೇದಃ
## ನಾಲ್ಕನೆಯ ಪರಿಚ್ಛೇದವು

### ರೇಣುಕಾಗಸ್ತ್ಯದರ್ಶನಪ್ರಸಂಗಃ
ರೇಣುಕ ಅಗಸ್ತ್ಯರ ದರ್ಶನ ಪ್ರಸಂಗವು
**(54 ಶ್ಲೋಕಗಳು)**

### 1. ರೇಣುಕಭೂಲೋಕಾವತರಣಮ್
ರೇಣುಕಗಣೇಶ್ವರನ ಭೂಲೋಕಾವತರಣವು
**(13 ಶ್ಲೋಕಗಳು)**

**ಅಥ ತ್ರಿಲಿಂಗವಿಷಯೇ**
**ಕೊಲ್ಲಿಪಾಕ್ಯಭಿಧೇ ಪುರೇ ।**
**ಸೋಮೇಶ್ವರಮಹಾಲಿಂಗಾತ್**
**ಪ್ರಾದುರಾಸೀತ್ ಸ ರೇಣುಕಃ ॥ 4-1**

ಅನಂತರದಲ್ಲಿ ಆ ರೇಣುಕಗಣೇಶ್ವರನು ತ್ರಿಲಿಂಗ ವಿಷಯ (ತ್ರಿಲಿಂಗದೇಶ)ದಲ್ಲಿರುವ ಕೊಲ್ಲಿಪಾಕವೆಂಬ ಹೆಸರುಳ್ಳ ಪುರದಲ್ಲಿ ಸೋಮೇಶ್ವರನೆಂಬ ಮಹಾಲಿಂಗದಲ್ಲಿ ಪ್ರಾದುರ್ಭಾವವಾದನು (ಅವತರಿಸಿದನು).

**ಪ್ರಾದುರ್ಭೂತಂ ತಮಾಲೋಕ್ಯ**
**ಶಿವಲಿಂಗಾತ್ ತ್ರಿಲಿಂಗಜಾಃ ।**
**ವಿಸ್ಮಿತಾಃ ಪ್ರಾಣಿನಃ ಸರ್ವೇ**
**ಬಭೂವುರತಿತೇಜಸಮ್ ॥ 4-2**

ತ್ರಿಲಿಂಗ ದೇಶದಲ್ಲಿ ಜನಿಸಿದ ಎಲ್ಲ ಜೀವಿಗಳು (ಜನರೆಲ್ಲರೂ) ಸೋಮೇಶ್ವರನೆಂಬ ಶಿವಲಿಂಗದಿಂದ ಅವತರಿಸಿದ ಮಹಾತೇಜಸ್ವಿಯಾದ ಶ್ರೀ ರೇಣುಕಗಣಾಧೀಶ್ವರನನ್ನು ನೋಡಿ ವಿಸ್ಮಿತರಾದರು (ಆಶ್ಚರ್ಯಚಕಿತರಾದರು).

**ಭಸ್ಮೋದ್ಧೂಲಿತಸರ್ವಾಂಗಮ್**
**ಸಾರರುದ್ರಾಕ್ಷಭೂಷಣಮ್ ।**
**ಲಿಂಗಧಾರಣಸಂಯುಕ್ತಮ್**
**ಲಿಂಗಪೂಜಾಪರಾಯಣಮ್ ।**
**ಜಟಾಮುಕುಟಸಂಯುಕ್ತಮ್**
**ತ್ರಿಪುಂಡ್ರಾಂಕಿತಮಸ್ತಕಮ್ ॥ 4-3**

ಭಸ್ಮದಿಂದ ಉದ್ಧೂಲನ ಮಾಡಲ್ಪಟ್ಟ ಸರ್ವಾಂಗವುಳ್ಳ, ಬಹಳಷ್ಟು ರುದ್ರಾಕ್ಷಿಗಳಿಂದ ಭೂಷಿತನಾದ, ಇಷ್ಟಲಿಂಗವನ್ನು ಧರಿಸಿಕೊಂಡಿದ್ದ, ಲಿಂಗಪೂಜೆಯಲ್ಲಿ ನಿಷ್ಣಾತನಾದ, ಜಟಾಮುಕುಟದಿಂದ ಕೂಡಿದ, ಹಣೆಯಲ್ಲಿ ತ್ರಿಪುಂಡ್ರವನ್ನು ಧರಿಸಿದ–

**ಕಟೀತಟೀಪಟೀಭೂತ–**
**ಕಂಥಾಪಟಲಬಂಧುರಮ್ ।**
**ದಧಾನಂ ಯೋಗದಂಡಂ ಚ**

**ಭಸ್ಮಾಧಾರಂ ಕಮಂಡಲುಮ್ ॥ 4–4**

**ಶಿವಾದ್ವೈತಪರಿಜ್ಞಾನ –**
**ಪರಮಾನಂದಮೋದಿತಮ್ ।**
**ನಿರ್ಧೂತಸರ್ವಸಂಸಾರ–**
**ವಾಸನಾದೋಷಪಂಜರಮ್ ॥ 4–5**

ಸೊಂಟಕ್ಕೆ ಅಲಂಕಾರವಾಗಿದ್ದ ಕಂಥಾ ವಸ್ತ್ರದಿಂದ ಮನೋಹರನಾದ, ಯೋಗದಂಡವನ್ನು ಧರಿಸಿದ ಮತ್ತು ಭಸ್ಮಕ್ಕೆ ಆಧಾರವಾದ ಕಮಂಡಲುವನ್ನು ಹಿಡಿದುಕೊಂಡಿದ್ದ, ಶಿವಾದ್ವೈತ (ಲಿಂಗಾಂಗ ಸಾಮರಸ್ಯ) ಪರಿಜ್ಞಾನದಿಂದುಂಟಾದ ಪರಮಾನಂದದಿಂದ ಸಂತುಷ್ಟನಾದ, ಜನನ ಮರಣ ರೂಪವಾದ ಸಂಸಾರದ ಸಕಲವಾಸನಾರೂಪವಾದ ದೋಷ ಸಮೂಹವನ್ನು ಕೊಡಹಿಕೊಂಡಿರುವ–

**ಶಿವಾಗಮಸುಧಾಸಿಂಧು–**
**ಸಮುನ್ಮೇಷಸುಧಾಕರಮ್ ।**
**ಚಿತ್ತಾರವಿಂದಸಂಗೂಢ–**
**ಶಿವಪಾದಾಂಬುಜದ್ವಯಮ್ ॥ 4–6**

ಶಿವಾಗಮಗಳೆಂಬ ಅಮೃತ ಸಮುದ್ರವನ್ನು ಉಕ್ಕೇರಿಸುವಲ್ಲಿ ಚಂದ್ರಪ್ರಾಯನಾದ, ಹೃದಯಕಮಲದಲ್ಲಿ ಅಡಗಿಸಿಟ್ಟಿರುವ ಶಿವಪಾದ ಕಮಲಗಳುಳ್ಳ–

**ಯಮಾದಿಯೋಗತಂತ್ರಜ್ಞಮ್**
**ಸ್ವತಂತ್ರಂ ಸರ್ವಕರ್ಮಸು ।**
**ಸಮಸ್ತಸಿದ್ಧಸಂತಾನ–**
**ಸಮುದಾಯಶಿಖಾಮಣಿಮ್ ॥ 4–7**

ಯೋಗದ ಯಮದಮಾದಿ ಅಷ್ಟಾಂಗಗಳ ತಂತ್ರ (ವಿಧಾನ)ವನ್ನು ತಿಳಿದ, ಸಕಲ ಕರ್ಮಗಳನ್ನು ಮಾಡುವಲ್ಲಿ ಸ್ವತಂತ್ರಗಳಾದ ಸಮಸ್ತಸಿದ್ಧರ ಸಂತಾನ ಸಮುದಾಯಕ್ಕೆ ಶಿಖಾಮಣಿಯಂತಿರುವ–

**ವೀರಸಿದ್ಧಾಂತನಿರ್ವಾಹ–**
**ಕೃತಪಟ್ಟನಿಬಂಧನಮ್ ।**
**ಆಲೋಕಮಾತ್ರನಿರ್ಭಿನ್ನ–**
**ಸಮಸ್ತಪ್ರಾಣಿಪಾತಕಮ್ ॥ 4–8**

ವೀರಶೈವ ಸಿದ್ಧಾಂತವನ್ನು ನಿರ್ವಹಿಸುವ (ಸ್ಥಾಪಿಸುವ) ಕಾರ್ಯಕ್ಕಾಗಿ ಪರಶಿವನಿಂದ ಪಟ್ಟ ಕಟ್ಟಿಸಿಕೊಂಡವನೂ, ನೋಟ ಮಾತ್ರದಿಂದಲೇ ಸಕಲ ಪ್ರಾಣಿಗಳ ಪಾಪವನ್ನು ತೊಲಗಿಸಿಕೊಂಡವನೂ ಆದ ಆ ರೇಣುಕಗಣೇಶ್ವರನನ್ನು ತ್ರಿಲಿಂಗದೇಶದ ಸರ್ವಜನರೂ ನೋಡಿ ಆಶ್ಚರ್ಯಪಟ್ಟರು.

**ತಮಪೃಚ್ಛನ್ ಜನಾಃ ಸರ್ವೇ**
**ನಮಂತಃ ಕೋ ಭವಾನಿತಿ ।**
**ಇತಿ ಪೃಷ್ಟೋ ಮಹಾಯೋಗೀ**
**ಜನೈರ್ವಿಸ್ಮಿತಮಾನಸೈಃ ॥ 4–9**
**ಪ್ರತ್ಯುವಾಚ ಶಿವಾದ್ವೈತ–**
**ಮಹಾನಂದಪರಾಯಣಃ ।**
**ಪಿನಾಕಿನಃ ಪಾರ್ಶ್ವವರ್ತೀ**

**ರೇಣುಕಾಖ್ಯೋ ಗಣೇಶ್ವರಃ ॥ 4–10**

ಅಲ್ಲಿಯ ಎಲ್ಲ ಜನರೂ ಇವನಿಗೆ ನಮಸ್ಕರಿಸಿ ನೀವು ಯಾರು? ಎಂಬುದಾಗಿ ಪ್ರಶ್ನಿಸಿದರು. ಹೀಗೆ ವಿಸ್ಮಿತ ಮಾನಸ (ಆಶ್ಚರ್ಯಚಕಿತ)ರಾದ ಜನರಿಂದ ಈ ರೀತಿಯಾಗಿ ಕೇಳಲ್ಪಟ್ಟ ಆ ಮಹಾಯೋಗಿಯು, ಶಿವಾದ್ವೈತ ಮಹಾನಂದ ಪರಾಯಣನು, ಪಿನಾಕಿಯ (ಶಿವನ) ಸಮೀಪವರ್ತಿಯಾದ
ರೇಣುಕನೆಂಬ ಹೆಸರಿನ ನಾನು ಗಣೇಶ್ವರನು ಎಂಬುದಾಗಿ (ಪ್ರತ್ಯುವಾಚ) ಉತ್ತರಿಸಿದನು.

**ಶಿವಾದೇಶಾನುಸಾರೇಣ**
**ಶಿವಲಿಂಗಾದಿಹಾಭವಮ್ ।**
**ನಾಮ್ನಾ ರೇಣುಕಸಿದ್ಧೋಽಹಮ್**
**ಸಿದ್ಧಸಂತಾನನಾಯಕಃ ॥ 4–11**

ಶಿವನ ಆದೇಶದ ಅನುಸಾರವಾಗಿ ನಾನು ಈ ಭೂಲೋಕದಲ್ಲಿ ಶಿವಲಿಂಗದಿಂದ ಅವತರಿಸಿರುವೆನು. ಸಿದ್ಧಸಂತಾನಕ್ಕೆ ನಾಯಕನಾದ ನಾನು ರೇಣುಕಸಿದ್ಧನೆಂಬ ಹೆಸರುಳ್ಳವನಾಗಿದ್ದೇನೆ.

**ಸ್ವಚ್ಛಂದಚಾರೀ ಲೋಕೇಽಸ್ಮಿನ್**
**ಶಿವಸಿದ್ಧಾಂತಪಾಲಕಃ ।**
**ಖಂಡಯನ್ ಜೈನಚಾರ್ವಾಕ–**
**ಬೌದ್ಧಾದೀನಾಂ ದುರಾಗಮಾನ್ ॥ 4–12**

ಈ ಲೋಕದಲ್ಲಿ ಜೈನ, ಚಾರ್ವಾಕ ಮತ್ತು ಬೌದ್ಧ ಮುಂತಾದ ಮತಗಳ ದುರಾಗಮಗಳನ್ನು (ವೇದ ವಿರುದ್ಧಗಳಾದ ಆಗಮಗಳನ್ನು) ಖಂಡಿಸಲು ಮತ್ತು ಶಿವಸಿದ್ಧಾಂತವನ್ನು ಸಂರಕ್ಷಿಸಲು ನಾನು ಸ್ವೇಚ್ಛೆಯಿಂದ ಸಂಚರಿಸುವವನಾಗಿದ್ದೇನೆ.

**ಇತ್ಯುಕ್ತ್ವಾ ಪಶ್ಯತಾಂ ತೇಷಾಮ್**
**ವಿಷಯಸ್ಥಿರಚಕ್ಷುಷಾಮ್ ।**
**ಉತ್ಥಾಯ ವ್ಯೋಮಮಾರ್ಗೇಣ**
**ಮಲಯಾದ್ರಿಮುಪಾಗಮತ್ ॥ 4–13**

ಈ ರೀತಿಯಾಗಿ ಹೇಳಿ, ಅಲ್ಲಿಯ ಜನರು ಬಿಟ್ಟ ಕಣ್ಣು ಬಿಟ್ಟಂತೆಯೇ ನೋಡುತ್ತಿರುವಾಗ ಅಲ್ಲಿಂದ ಎದ್ದು ವ್ಯೋಮ (ಆಕಾಶ) ಮಾರ್ಗವಾಗಿ ಮಲಯ ಪರ್ವತಕ್ಕೆ ಹೋದನು.

***ಇತಿ ರೇಣುಕಭೂಲೋಕಾವತರಣಂ***

*ಇಲ್ಲಿಗೆ ರೇಣುಕಗಣೇಶ್ವರನ ಭೂಲೋಕಾವತರಣವು ಮುಗಿಯಿತು.*

## 2. ಮಲಯಾಚಲವರ್ಣನಂ

ಮಲಯಾಚಲದ ವರ್ಣನೆ.

**(3 ಶ್ಲೋಕಗಳು)**

**ನವಚಂದನಕಾಂತಾರ–**
**ಕಂದಲನ್ಮಂದಮಾರುತಮ್ ।**
**ಅಭಂಗುರಭುಜಂಗಸ್ತ್ರೀ–**

**ಸಂಗೀತರಸಸಂಕುಲಮ್ ॥ 4–14**

ಹೊಸತಾದ ಶ್ರೀಗಂಧದ ಅರಣ್ಯವನ್ನು ಭೇದಿಸಿ ಬರುತ್ತಿದ್ದ ಮಂದ ಮಾರುತದಿಂದ ಕೂಡಿದ ದಟ್ಟವಾಗಿರುವ ಸರ್ಪಿಣಿಯರ ಸಂಗೀತರಸದಿಂದ ತುಂಬಿಕೊಂಡಿರುವ–

**ಕರಿಪೋತಕರಾಕೃಷ್ಟ–**
**ಸ್ಫುರದೇಲಾತಿವಾಸಿತಮ್ ।**
**ವರಾಹದಂಷ್ಟ್ರಿಕಾಧ್ವಸ್ತ–**
**ಮುಸ್ತಾಸುರಭಿಕಂದರಮ್ ॥ 4–15**

ಆನೆಯ ಮರಿಗಳು ಸೊಂಡಲಿನಿಂದ ಕಿತ್ತುಚೆಲ್ಲಿದ ಏಲಕ್ಕಿಯ ಬಳ್ಳಿಯಿಂದ ಸುವಾಸನೆಗೊಂಡಿರುವ, ಹಂದಿಗಳ ಕೋರೆದಾಡೆಯಿಂದ ಅಗೆಯಲ್ಪಟ್ಟ ಕೊನ್ನಾರಿಗಡ್ಡೆಯಿಂದ ಪರಿಮಳಿತವಾದ ಗುಹೆಗಳುಳ್ಳ–

**ಪಟೀರದಲಪರ್ಯಂಕ–**
**ಪ್ರಸುಪ್ತವ್ಯಾಧದಂಪತಿಮ್ ।**
**ಮಾಧವೀಮಲ್ಲಿಕಾಜಾತಿ–**
**ಮಂಜರೀರೇಣುರಂಜಿತಮ್ ॥ 4–16**

ಶ್ರೀಗಂಧದ ಚಿಗುರಿನ ಹಾಸುಗೆಯ ಮೇಲೆ ಮಲಗಿರುವ ಬೇಡ ದಂಪತಿ ಗಳುಳ್ಳ, ಸೇವಂತಿಗೆ, ಮಲ್ಲಿಗೆ, ಜಾಜಿ ಹೂಗಳ ಗೊಂಚಲಿನಿಂದ ಸುರಿದ ಧೂಳಿನಿಂದ ಮನೋಹರವಾಗಿಯೂ ಇರುವ ಮಲಯಪರ್ವತಕ್ಕೆ ಆಕಾಶಮಾರ್ಗದಿಂದ ಹೋದನು.

*ಇತಿ ಮಲಯಾಚಲವರ್ಣನಂ*
*ಇಲ್ಲಿಗೆ ಮಲಯಾಚಲ ವರ್ಣನೆಯು ಮುಗಿಯಿತು.*

## 3. ಅಗಸ್ತ್ಯಮುನೇಃ ಆಶ್ರಮವರ್ಣನಮ್
ಅಗಸ್ತ್ಯಮುನಿಯ ಆಶ್ರಮ ವರ್ಣನೆಯು
**(8 ಶ್ಲೋಕಗಳು)**

**ತತ್ರ ಕುತ್ರಚಿದಾಭೋಗ–**
**ಸರ್ವರ್ತುಕುಸುಮದ್ರುಮೇ ।**
**ಅಪಶ್ಯದಾಶ್ರಮಂ ದಿವ್ಯಮ್**
**ಅಗಸ್ತ್ಯಸ್ಯ ಮಹಾಮುನೇಃ ॥ 4–17**

ಎಲ್ಲ ಋತುಗಳಲ್ಲಿ ಅರಳುವ ಹೂಗಳ ಗಿಡಗಳಿಂದ ಕೂಡಿದ ಆ ಪರ್ವತದ ಒಂದು ಭಾಗದಲ್ಲಿ ಮಹಾಮುನಿಯಾದ ಅಗಸ್ತ್ಯನ ದಿವ್ಯವಾದ ಆಶ್ರಮವನ್ನು (ರೇಣುಕನು) ನೋಡಿದನು.

**ಮಂದಾರಚಂದನಪ್ರಾಯೈ–**
**ರ್ಮಂಡಿತಂ ತರುಮಂಡಲೈಃ ।**
**ಶಾಖಾಶಿಖರಸಂಲೀನ–**
**ತಾರಕಾಗಣಕೋರಕೈಃ ॥ 4–18**

ಕೊಂಬೆಗಳ ತುದಿಯಲ್ಲಿ ಅಡಗಿರುವ ನಕ್ಷತ್ರ ಸಮೂಹವೆಂಬ ಮೊಗ್ಗುಗಳಿಂದ ಕಲ್ಪವೃಕ್ಷ, ಶ್ರೀಗಂಧ ಮೊದಲಾದ ಮರಗಳ ಸಮೂಹದಿಂದ ಅಲಂಕೃತವಾದ–

**ಮುನಿಕನ್ಯಾಕರಾನೀತ–**
**ಕಲಶಾಂಬುವಿವರ್ಧಿತೈಃ ।**
**ಆಲವಾಲಜಲಾಸ್ವಾದ–**
**ಮೋದಮಾನಮೃಗೀಗಣೈಃ ॥ 4–19**

ಮುನಿಕನ್ಯೆಯರ ಕರಗಳಿಂದ ತಂದ ಕಲಶದ ನೀರಿನಿಂದ ಬೆಳೆದಿರುವ ಗಿಡಗಳ ಪಾತಿಯಲ್ಲಿರುವ ನೀರನ್ನು ಆಸ್ವಾದಿಸಿ ಆನಂದವಾಗಿರುವ ಹೆಣ್ಣು ಜಿಂಕೆಗಳ ಸಮೂಹದಿಂದ ಕೂಡಿದ–

**ಹೇಮಾರವಿಂದನಿಷ್ಯಂದ–**
**ಮಕರಂದಸುಗಂಧಿಭಿಃ ।**
**ಮರಾಲಾಲಾಪವಾಚಾಲು–**
**ವೀಚಿಮಾಲಾಮನೋಹರೈಃ ॥ 4–20**

ಸುವರ್ಣ ಕಮಲದಿಂದ ಹೊರಕ್ಕೆ ಸೂಸಿದ ಮಕರಂದದಿಂದ ಸುಗಂಧಿತಗಳಾದ ಹಂಸಪಕ್ಷಿಗಳ ನುಡಿಗಳಿಂದ ಶಬ್ದಾಯಮಾನವಾಗಿರುವ ತೆರೆಗಳ ಸಾಲುಗಳಿಂದ ಮನೋಹರಗಳಾಗಿರುವ–

**ಇಂದೀವರವರಜ್ಯೋತಿ–**
**ರಂಧೀಕೃತಹರಿನ್ಮುಖೈಃ ।**
**ಲೋಪಾಮುದ್ರಾಪದನ್ಯಾಸ–**
**ಚರಿತಾರ್ಥತಟಾಂಕಿತೈಃ ॥ 4–21**

ನೀಲಕಮಲಗಳ ಜ್ಯೋತಿಯಿಂದ ಕತ್ತಲಾಗಿ ಮಾಡಲ್ಪಟ್ಟಿರುವ ದಿಕ್ಕುಗಳುಳ್ಳ, ಅಗಸ್ತ್ಯರ ಪತ್ನಿಯಾದ ಲೋಪಾಮುದ್ರೆಯ ಪಾದ ವಿನ್ಯಾಸದಿಂದ ಧನ್ಯವಾದ ದಡಗಳಿಂದ ಕೂಡಿದ–

**ಹಾರನೀಹಾರಕರ್ಪೂರ–**
**ಹರಹಾಸಾಮಲೋದಕೈಃ ।**
**ನಿತ್ಯನೈಮಿತ್ತಿಕಸ್ನಾನ–**
**ನಿಯಮಾರ್ಥೈಸ್ತಪಸ್ವಿನಾಮ್ ॥ 4–22**

ಮುತ್ತಿನಹಾರ, ಹಿಮ, ಕರ್ಪೂರ ಮತ್ತು ಹರನ ಮಂದಹಾಸದಂತೆ ನಿರ್ಮಲವಾಗಿರುವ ಜಲದಿಂದ ಕೂಡಿದ, ತಪಸ್ವಿಗಳ ನಿತ್ಯ ನೈಮಿತ್ತಿಕ ಸ್ನಾನ ವ್ರತಗಳಿಗೆ ಪ್ರಯೋಜನಕಾರಿಯಾಗಿರುವ–

**ಪ್ರಕೃಷ್ಟಮಣಿಸೋಪಾನೈಃ**
**ಪರಿವೀತಂ ಸರೋವರೈಃ ।**
**ವಿಮುಕ್ತಸತ್ತ್ವವೈರಸ್ಯಂ**
**ಬ್ರಹ್ಮಲೋಕಮಿವಾಪರಮ್ ॥ 4–23**

ಉತ್ಕೃಷ್ಟ ರತ್ನಖಚಿತಗಳಾದ ಮೆಟ್ಟಲುಗಳಿಂದ ಕೂಡಿದ ಮುಕ್ತವಾಗಿರುವ ಸರೋವರಗಳುಳ್ಳ, ಪ್ರಾಣಿಗಳ ಜಾತಿವೈರದಿಂದ ಮುಕ್ತವಾಗಿರುವ ಜಾತಿ ಅಂತೆಯೆ ಎರಡನೆಯ ಬ್ರಹ್ಮಲೋಕದಂತಿರುವುದು.

**ಹೂಯಮಾನಾಜ್ಯಸಂತಾನ–**
**ಧೂಮಗಂಧಿಮಹಾಸ್ಥಲಮ್ ।**
**ಶುಕಸಂಸತ್ಸಮಾರಬ್ಧ**

**ಶ್ರುತಿಶಾಸ್ತ್ರೋಪಬೃಂಹಣಮ್ ॥ 4–24**

ಹೋಮ ಮಾಡುತ್ತಿದ್ದ ತುಪ್ಪದ ಧಾರೆಯಿಂದ ಉತ್ಪನ್ನವಾದ ಧೂಮದ ಸುಗಂಧದಿಂದ ಕೂಡಿದ ಗಿಣಿಗಳ ಸಂಸತ್ತಿನಲ್ಲಿ ಆರಂಭಿಸಲ್ಪಟ್ಟ ವೇದ, ಶಾಸ್ತ್ರ, ಪುರಾಣ ಪ್ರಸಂಗಗಳಿಂದ ಕೂಡಿದ ಅಗಸ್ತ್ಯರ ಋಷ್ಯಾಶ್ರಮವನ್ನು (ರೇಣುಕನು) ಕಂಡನು.

***ಇತಿ ಅಗಸ್ತ್ಯಾಶ್ರಮವರ್ಣನಂ ಪರಿಸಮಾಪ್ತಮ್***

*ಇಲ್ಲಿಗೆ ಅಗಸ್ತ್ಯಾಶ್ರಮ ವರ್ಣನೆಯು ಮುಗಿಯಿತು.*

## 4. ಅಗಸ್ತ್ಯಮುನಿವರ್ಣನಮ್

ಅಗಸ್ತ್ಯಮುನಿಯ ವರ್ಣನೆಯು

**(9 ಶ್ಲೋಕಗಳು)**

**ತಸ್ಯ ಮಧ್ಯೇ ಸಮಾಸೀನಂ**
**ಮೂಲೇ ಚಂದನಭೂರುಹಃ ।**
**ಸುಕುಮಾರದಲಚ್ಛಾಯಾ–**
**ದೂರಿತಾದಿತ್ಯತೇಜಸಃ ॥ 4–25**

ಆ ಆಶ್ರಮದ ಮಧ್ಯದಲ್ಲಿ ಕೋಮಲಗಳಾದ ಎಲೆಗಳ ನೆರಳಿನಿಂದ ಸೂರ್ಯನ ಬಿಸಿಲನ್ನು ನಿವಾರಿಸುತ್ತಿದ್ದ ಚಂದನದ ವೃಕ್ಷದ ಬುಡದಲ್ಲಿ ಕುಳಿತಿರುವ–

**ತಡಿತ್ಪಿಂಗಜಟಾಭಾರೈಃ**
**ತ್ರಿಪುಂಡ್ರಾಂಕಿತಮಸ್ತಕೈಃ ।**
**ಭಸ್ಮೋದ್ಧೂಲಿತಸರ್ವಾಂಗೈಃ**
**ಸ್ಫುರದ್ರುದ್ರಾಕ್ಷಭೂಷಣೈಃ ॥ 4–26**

ಮಿಂಚಿನಂತೆ ನಸುಗೆಂಪುವರ್ಣದ ಭಾರವಾದ ಜಡೆಯನ್ನು ಧರಿಸಿದ, ಹಣೆಯಲ್ಲಿ ತ್ರಿಪುಂಡ್ರಭಸ್ಮವನ್ನು ಧರಿಸಿದ, ಸರ್ವಾಂಗಗಳಲ್ಲಿ ಭಸ್ಮೋದ್ಧೂಲನವನ್ನು ಮಾಡಿಕೊಂಡಿದ್ದ, ರುದ್ರಾಕ್ಷಿಗಳ ಆಭೂಷಣಗಳಿಂದ ಒಪ್ಪುತ್ತಿರುವ–

**ನವವಲ್ಕಲವಾಸೋಭಿಃ**
**ನಾನಾನಿಯಮಧಾರಿಭಿಃ ।**
**ಪರಿವೀತಂ ಮುನಿಗಣೈಃ**
**ಪ್ರಮಥೈರಿವ ಶಂಕರಮ್ ॥ 4–27**

ನೂತನಗಳಾದ ನಾರುಮಡಿಗಳನ್ನು ಉಟ್ಟಿರುವ, ನಾನಾ ನಿಯಮ(ವ್ರತ) ಗಳನ್ನು ಪರಿಪಾಲಿಸುತ್ತಿರುವ ಮುನಿಗಳ ಸಮೂಹದಿಂದ ಸುತ್ತುವರಿದಿದ್ದ ಅಗಸ್ತ್ಯಮುನಿಯು ಪ್ರಮಥರಿಂದ ಸುತ್ತುವರೆಯಲ್ಪಟ್ಟ ಶಂಕರನಂತಿದ್ದನು.

**ಸಮುಜ್ವಲಜಟಾಜಾಲೈಃ**
**ತಪಃ ಪಾದಪಪಲ್ಲವೈಃ ।**
**ಸ್ಫುರತ್ಸೌದಾಮಿನೀಕಲ್ಪೈಃ**
**ಜ್ವಾಲಾಜಾಲೈರಿವಾನಲಮ್ ॥ 4–28**

ತಪಃ ಪಾದಪಲ್ಲವಗಳಿಗೆ ಸಮಾನಗಳಾದ, ಹೊಳೆಯುತ್ತಿರುವ ಮಿಂಚಿನಂತಿರುವ ಉಜ್ವಲವಾದ ಜಡೆಗಳಿಂದ ಕೂಡಿದ ಅಗಸ್ತ್ಯನು ಜ್ವಾಲೆಗಳಿಂದ ಕೂಡಿದ ಅಗ್ನಿಯಂತಿದ್ದನು.

**ವಿಶುದ್ಧಭಸ್ಮಕೃತಯಾ**
**ತ್ರಿಪುಂಡ್ರಾಂಕಿತರೇಖಯಾ ।**

**ತ್ರಿಸ್ರೋತಸೇವ ಸಂಬದ್ಧ–**
**ಶಿಲಾಭಾಗಂ ಹಿಮಾಚಲಮ್ ॥ 4–29**

ಪರಿಶುದ್ಧವಾದ ಭಸ್ಮದಿಂದ ತ್ರಿಪುಂಡ್ರವನ್ನು ಧರಿಸಿದ (ಅಗಸ್ತ್ಯನು) ಗಂಗೆಯ ಮೂರು ಧಾರೆಗಳಿಂದ ಕೂಡಿದ ಹಿಮಾಲಯ ಪರ್ವತದಂತೆ ಕಾಣುತ್ತಿದ್ದನು.

**ಭಸ್ಮಾಲಂಕೃತಸರ್ವಾಂಗಮ್**
**ಶಶಾಂಕಮಿವ ಭೂಗತಮ್ ।**
**ವಸಾನಂ ವಲ್ಕಲಂ ನವ್ಯಮ್**
**ಬಾಲಾತಪಸಮಪ್ರಭಮ್ ॥ 4–30**

ಸರ್ವಾಂಗಗಳಲ್ಲಿ ಭಸ್ಮದಿಂದ ಅಲಂಕೃತನಾಗಿರುವುದರಿಂದ ಭೂಮಿಗಿಳಿದ ಚಂದ್ರನಂತಿದ್ದನು. ಹೊಸ ನಾರುಮಡಿಯುಟ್ಟುದ್ದರಿಂದ ಎಳೆಬಿಸಿಲಿಗೆ ಸಮಾನವಾದ ಕಾಂತಿಯುಳ್ಳವನಾಗಿದ್ದನು.

**ವಡವಾಗ್ನಿಶಿಖಾಜಾಲ–**
**ಸಮಾಲೀಢಮಿವಾರ್ಣವಮ್ ।**
**ಸರ್ವಾಸಾಮಪಿ ವಿದ್ಯಾನಾಮ್**
**ಸಮುದಾಯನಿಕೇತನಮ್ ॥ 4–31**

ವಡವಾಗ್ನಿಯ ಜ್ವಾಲೆಗಳ ಶಿಖೆಗಳಿಂದ ವ್ಯಾಪ್ತವಾಗಿರುವ ಸಮುದ್ರದಂತೆ ತೋರುತ್ತಿದ್ದನು. ಎಲ್ಲ ವಿದ್ಯೆಗಳ ಸಮುದಾಯಕ್ಕೆ ಆಶ್ರಯನಾಗಿದ್ದನು.

**ನ್ಯಕ್ಕೃತಪ್ರಾಕೃತಾಹಂತಮ್**
**ನಿರೂಢಶಿವಭಾವನಮ್ ।**
**ತೃಣೀಕೃತಜಗಜ್ಜಾಲಮ್**
**ಸಿದ್ಧೀನಾಮುದಯಸ್ಥಲಮ್ ॥ 4–32**

ಪ್ರಾಕೃತಾಹಂಕಾರ ವರ್ಜಿತನೂ, ದೃಢವಾದ ಶಿವಭಾವನೆಯುಳ್ಳವನೂ, ಜಗಜ್ಜಾಲವನ್ನು ತುಚ್ಛೀಕರಿಸಿದವನೂ, ಸರ್ವಸಿದ್ಧಿಗಳಿಗೆ ಉಗಮ ಸ್ಥಾನವಾದವನೂ ಆಗಿದ್ದನು.

**ಮೋಹಾಂಧಕಾರತಪನಮ್**
**ಮೂಲಬೋಧಮಹೀರುಹಮ್ ।**
**ದದರ್ಶ ಸ ಮಹಾಯೋಗೀ**
**ಮುನಿಂ ಕಲಶಸಂಭವಮ್ ॥ 4–33**

ಮೋಹವೆಂಬ ಅಂಧಕಾರಕ್ಕೆ ಸೂರ್ಯನಂತಿರುವ, ಸ್ವಸ್ವರೂಪಜ್ಞಾನಕ್ಕೆ ಕಲ್ಪವೃಕ್ಷದಂತಿರುವ ಕಲಶಸಂಭವನಾದ ಅಗಸ್ತ್ಯಮಹಾಮುನಿಯನ್ನು ಆ ಮಹಾಯೋಗಿಯಾದ ರೇಣುಕಗಣೇಶ್ವರನು ನೋಡಿದನು.

*ಇತಿ ಅಗಸ್ತ್ಯಮುನಿವರ್ಣನಂ*
*ಇಲ್ಲಿಗೆ ಅಗಸ್ತ್ಯಮುನಿವರ್ಣನೆಯು ಮುಗಿಯಿತು.*

## 5. ಶ್ರೀರೇಣುಕಪೂಜನಮ್
ಶ್ರೀರೇಣುಕರ ಪೂಜೆಯು
**(3 ಶ್ಲೋಕಗಳು)**

**ತಮಾಗತಂ ಮಹಾಸಿದ್ಧಮ್**
**ಸಮೀಕ್ಷ್ಯ ಕಲಶೋದ್ಭವಃ ।**
**ಗಣೇಂದ್ರಂ ರೇಣುಕಾಭಿಖ್ಯಮ್**
**ವಿವೇದ ಜ್ಞಾನಚಕ್ಷುಷಾ ।**
**ತಸ್ಯಾನುಭಾವಂ ವಿಜ್ಞಾಯ**
**ಸಹಸೈವ ಸಮುತ್ಥಿತಃ ॥ 4–34**

ಕಲಶೋದ್ಭವನಾದ ಅಗಸ್ತ್ಯನು ತನ್ನ ಆಶ್ರಮಕ್ಕೆ ಆಗಮಿಸಿದ ಮಹಾಸಿದ್ಧನನ್ನು ತನ್ನ ಜ್ಞಾನಚಕ್ಷುವಿನಿಂದ ನೋಡಿ, ಈತನು ರೇಣುಕನೆಂಬ ಹೆಸರಿನ ಗಣೇಂದ್ರನೆಂಬುದಾಗಿ ತಿಳಿದುಕೊಂಡನು. ಶ್ರೀ ರೇಣುಕಗಣೇಶ್ವರನ ಪ್ರಭಾವವನ್ನು ತಿಳಿದು, ಕೂಡಲೆ ಅಗಸ್ತ್ಯನು ಎದ್ದು ನಿಂತು–

**ಸಂಪ್ರಣಮ್ಯ ಸಮಾನೀಯ**
**ಸ್ವಾಸನೇ ತಂ ನ್ಯವೇಶಯತ್ ।**
**ಲೋಪಾಮುದ್ರಾಕರಾನೀತೈಃ**
**ಉದಕೈರತಿಪಾವನೈಃ ।**
**ಪಾದೌ ಪ್ರಕ್ಷಾಲಯಾಮಾಸ**
**ಸ ತಸ್ಯ ಶಿವಯೋಗಿನಃ ॥ 4–35**

ನಮಸ್ಕರಿಸಿ (ಸಂಪ್ರಣಮ್ಯ) ಆ ರೇವಣಸಿದ್ಧೇಶ್ವರನನ್ನು ಆದರದಿಂದ ಬರಮಾಡಿಕೊಂಡು, ಅವರನ್ನು ತನ್ನ ಆಸನದ ಮೇಲೆ ಕುಳ್ಳಿರಿಸಿದನು. ಆ ಅಗಸ್ತ್ಯಮಹರ್ಷಿಯು ಲೋಪಾಮುದ್ರಾದೇವಿಯು ತಂದ ಅತಿ ಪಾವನವಾದ ನೀರಿನಿಂದ ಆ ಶಿವಯೋಗಿಯ ಎರಡೂ ಪಾದಗಳನ್ನು ತೊಳೆದನು.

**ಸಂಪೂಜ್ಯ ತಂ ಯಥಾಶಾಸ್ತ್ರಮ್**
**ತನ್ನಿಯೋಗಪುರಸ್ಸರಮ್ ।**
**ಮುನಿರ್ವಿನಯಸಂಪನ್ನೋ**
**ನಿಷಸಾದಾಸನಾಂತರೇ ॥ 4–36**

ಆ ರೇಣುಕ ಗಣೇಶ್ವರನನ್ನು ಶಾಸ್ತ್ರೋಕ್ತವಿಧಿಯಂತೆ ಪೂಜಿಸಿದ ವಿನಯ ಸಂಪನ್ನನಾದ ಆ ಅಗಸ್ತ್ಯಮಹರ್ಷಿಯು ರೇಣುಕರ ಆಜ್ಞಾನುಸಾರವಾಗಿ ಬೇರೊಂದು ಆಸನದ ಮೇಲೆ ಕುಳಿತುಕೊಂಡನು.

*ಇತಿ ಶ್ರೀರೇಣುಕಪೂಜನಂ*
*ಇಲ್ಲಿಗೆ ಶ್ರೀ ರೇಣುಕರ ಪೂಜೆಯು ಮುಗಿಯಿತು.*

## 6. ಶ್ರೀರೇಣುಕಾಗಸ್ತ್ಯ ಸಂವಾದಃ
ಶ್ರೀರೇಣುಕ ಅಗಸ್ತ್ಯರ ಸಂವಾದವು
**(8 ಶ್ಲೋಕಗಳು)**

**ಸಮಾಸೀನಂ ಮುನಿವರಮ್**
**ಸರ್ವತೇಜಸ್ವಿನಾಂ ವಿಭುಮ್ ।**
**ಉವಾಚ ಶಾಂತಯಾ ವಾಚಾ**
**ರೇವಣಃ ಸಿದ್ಧಶೇಖರಃ ॥ 4–37**

ತೇಜಸ್ವಿಗಳಿಗೆ ಶ್ರೇಷ್ಠನಾಗಿರುವ ಬೇರೊಂದು (ಸಮಾನವಾದ) ಆಸನದಲ್ಲಿ ಚೆನ್ನಾಗಿ ಕುಳಿತಿರುವ, ಮುನಿಗಳಲ್ಲಿ ಅಗ್ರಗಣ್ಯನಾದ ಅಗಸ್ತ್ಯನನ್ನು ಕುರಿತು ಸಿದ್ಧಶ್ರೇಷ್ಠನಾದ ರೇಣುಕನು ಶಾಂತವಾದ ವಾಣಿಯಿಂದ ಹೀಗೆ ನುಡಿದನು.

**ನಿರ್ವಿಘ್ನಂ ವರ್ತಸೇ ಕಿಂ ನು**
**ನಿತ್ಯಾ ತೇ ನಿಯಮಕ್ರಿಯಾ ।**
**ಅಥ ವಾಽಗಸ್ತ್ಯ ತೇಜಸ್ವಿನ್**
**ಕುತಃ ಸ್ಯುಸ್ತೇಽಂತರಾಯಕಾಃ ॥ 4–38**

ಹೇ ಅಗಸ್ತ್ಯನೇ, ನಿನಗೆ ಯಾವ ವಿಘ್ನಗಳೂ ಇರುವುದಿಲ್ಲವಲ್ಲವೇ? ಮತ್ತು ನಿನ್ನ ನಿತ್ಯಕ್ರಿಯೆಗಳು ನಿಯಮಿತವಾಗಿ ನಡೆಯುತ್ತಿರುವವಲ್ಲವೇ? ಅಥವಾ ತೇಜಸ್ವಿಯಾಗಿರುವುದರಿಂದ ನಿನಗೆ ವಿಘ್ನಗಳು ಹೇಗೆ ತಾನೇ ಬಂದಾವು?

**ವಿಂಧ್ಯೋ ನಿರುದ್ಧೋ ಭವತಾ**
**ವಿಶ್ವೋಲ್ಲಂಘನವಿಭ್ರಮಃ ।**
**ನಹುಷೋ ರೋಷಲೇಶಾತ್ ತೇ**
**ಸದ್ಯಃ ಸರ್ಪತ್ವಮಾಗತಃ ॥ 4–39**

ವಿಶ್ವವನ್ನೇ ಮೀರಿ ಬೆಳೆಯಬೇಕೆಂಬ ಭ್ರಮೆಯುಳ್ಳ ವಿಂಧ್ಯಪರ್ವತವನ್ನು ನೀನು ತಡೆದೆ. ನಹುಷ ಚಕ್ರವರ್ತಿಯು ನಿನ್ನ ಕಿಂಚಿತ್ ರೋಷ ಮಾತ್ರದಿಂದ ಕೂಡಲೇ ಸರ್ಪವಾದನು.

**ಆಚಾಂತೇ ಭವತಾ ಪೂರ್ವಮ್**
**ಪಂಕಶೇಷಾಃ ಪಯೋಧಯಃ ।**
**ಜೀರ್ಣಾಸ್ತೇ ಜಾಠರೇ ವಹ್ನೌ**
**ದೃಪ್ತೋ ವಾತಾಪಿದಾನವಃ ॥ 4–40**

ಪೂರ್ವಕಾಲದಲ್ಲಿ ನೀನು ಆಚಮನವನ್ನು ಮಾಡುವುದರಿಂದಲೇ (ಸಪ್ತ) ಸಮುದ್ರಗಳ ನೀರೆಲ್ಲಾ ಒಣಗಿ ಕೇವಲ ಕೆಸರೇ ಉಳಿಯಿತು. ವಾತಾಪಿಯೆಂಬ ಕೊಬ್ಬಿದ ರಾಕ್ಷಸನು ನಿನ್ನ ಜಠರಾಗ್ನಿಯಲ್ಲಿ ಜೀರ್ಣವಾಗಿ ಹೋದನು.

**ಏವಂವಿಧಾನಾಂ ಚಿತ್ರಾಣಾಮ್**
**ಸರ್ವಲೋಕಾತಿಶಾಯಿನಾಮ್ ।**
**ಕೃತ್ಯಾನಾಂ ತು ಭವಾನ್ ಕರ್ತಾ**
**ಕಸ್ತೇಽಗಸ್ತ್ಯ ಸಮಪ್ರಭಃ ॥ 4–41**

ನೀನು ಹೀಗೆ ಸರ್ವಲೋಕಗಳಲ್ಲಿ ಅತಿಶಯವಾದ ಪೂರ್ವೋಕ್ತವಾದ ಆಶ್ಚರ್ಯ ಕೃತ್ಯಗಳನ್ನು ಮಾಡಿರುವೆ. ಆದ್ದರಿಂದ ಹೇ ಅಗಸ್ತ್ಯನೇ, ನಿನಗೆ ಸರಿಸಾಟಿಯಾದವರು ಯಾರೂ ಇಲ್ಲ.

**ಶಿವಾದ್ವೈತಪರಾನಂದ–**

**ಪ್ರಕಾಶನಪರಾಯಣಮ್ ।**
**ಭವಂತಮೇಕಂ ಶಂಸಂತಿ**
**ಪ್ರಕೃತ್ಯಾ ಸಂಗವರ್ಜಿತಮ್ ॥ 4–42**

ಲೋಕದ ಜನರು ನಿನ್ನೊಬ್ಬನನ್ನೇ ಸ್ವಾಭಾವಿಕವಾಗಿ ಸಂಗವರ್ಜಿತನೆಂತಲೂ, ಶಿವಾದ್ವೈತ ಪರಾನಂದವನ್ನು ಪ್ರಕಾಶಪಡಿಸುವುದರಲ್ಲಿ ನಿತ್ಯನಿರತನೆಂತಲೂ ಪ್ರಶಂಸಿಸುತ್ತಿರುತ್ತಾರೆ.

**ಪುರಾ ಹೈಮವತೀಸೂನುಃ**
**ಅವದತ್ ತೇ ಷಡಾನನಃ ।**
**ಶಿವಧರ್ಮೋತ್ತರಂ ನಾಮ**
**ಶಾಸ್ತ್ರಮೀಶ್ವರಭಾಷಿತಮ್ ॥ 4–43**

ಈಶ್ವರನಿಂದ ಹೇಳಲ್ಪಟ್ಟ **"ಶಿವಧರ್ಮೋತ್ತರ"** ಎಂಬ ಹೆಸರಿನ ಶಾಸ್ತ್ರವನ್ನು ಪೂರ್ವಕಾಲದಲ್ಲಿ ಹೈಮವತಿ (ಪಾರ್ವತಿ)ಯ ಮಗನಾದ ಷಣ್ಮುಖನು ನಿನಗೆ ಬೋಧಿಸಿದನು.

**ಭಕ್ತಿಃ ಶೈವೀ ಮಹಾಘೋರ–**
**ಸಂಸಾರಭಯಹಾರಿಣೀ ।**
**ತ್ವಯಾ ರಾಜನ್ವತೀ ಲೋಕೇ**
**ಜಾತಾಽಗಸ್ತ್ಯ ಮಹಾಮುನೇ ॥ 4–44**

ಮಹಾಮುನಿಯಾದ ಹೇ ಅಗಸ್ತ್ಯನೇ, ಘೋರವಾದ ಸಂಸಾರದ ಭಯವನ್ನು ದೂರಮಾಡುವ ಶಿವಭಕ್ತಿಯು ರಾಜಮಾನ್ಯವಾಗಿ ಈ ಲೋಕದಲ್ಲಿ ನಿನ್ನಿಂದ ಪ್ರಕಾಶಿಸಲ್ಪಟ್ಟಿತು.

***ಇತಿ ಶ್ರೀರೇಣುಕಾಗಸ್ತ್ಯಸಂವಾದಂ ಪರಿಸಮಾಪ್ತಮ್***
*ಇಲ್ಲಿಗೆ ಶ್ರೀ ರೇಣುಕ ಅಗಸ್ತ್ಯರ ಸಂವಾದ ಮುಗಿಯಿತು.*

## 7. ಅಗಸ್ತ್ಯಮುನಿವಚನಮ್
ಅಗಸ್ತ್ಯಮುನಿಯ ವಚನವು
**(10 ಶ್ಲೋಕಗಳು)**

**ಇತಿ ತಸ್ಯ ವಚಃ ಶ್ರುತ್ವಾ**
**ಸಿದ್ಧಸ್ಯ ಮುನಿಪುಂಗವಃ ।**
**ಗಂಭೀರಗುಣಯಾ ವಾಚಾ**
**ಬಭಾಷೇ ಭಕ್ತಿಪೂರ್ವಕಮ್ ॥ 4–45**

ಮುನಿಪುಂಗವನಾದ ಅಗಸ್ತ್ಯನು ಸಿದ್ಧನಾದ ಆ ರೇಣುಕನ ಈ ರೀತಿಯ
ಮಾತನ್ನು ಕೇಳಿ, ಗಂಭೀರವಾದ ವಾಣಿಯಿಂದ ಭಕ್ತಿಪೂರ್ವಕವಾಗಿ ಹೀಗೆ ನುಡಿದನು.

**ಅಹಮೇವ ಮುನೀಂದ್ರಾಣಾಮ್**
**ಲಾಲನೀಯೋಽಸ್ಮಿ ಸರ್ವದಾ ।**
**ಭವದಾಗಮಸಂಪತ್ತಿಃ**
**ಮಾಂ ವಿನಾ ಕಸ್ಯ ಸಂಭವೇತ್ ॥ 4–46**

ಮುನಿಶ್ರೇಷ್ಠರಲ್ಲೆಲ್ಲಾ ನಾನೋರ್ವನೇ ಯಾವಾಗಲೂ ಪ್ರಶಂಸನೀಯ ವಾದವನು. ಕಾರಣವೇನೆಂದರೆ ತಮ್ಮ ಆಗಮನದ ಸಂಪತ್ತು ನನ್ನ ಹೊರತಾಗಿ ಇನ್ನಾರಿಗೂ ಲಭ್ಯವಾಗಿರುವುದಿಲ್ಲ.

**ಸ್ಥಿರಮದ್ಯ ಶಿವಜ್ಞಾನಮ್**
**ಸ್ಥಿರಾ ಮೇ ತಾಪಸಕ್ರಿಯಾ ।**
**ಭವದ್ದರ್ಶನಪುಣ್ಯೇನ**
**ಸ್ಥಿರಾ ಮೇ ಮುನಿರಾಜತಾ ॥ 4–47**

ನಿಮ್ಮ ದಿವ್ಯದರ್ಶನ ಪುಣ್ಯದಿಂದ ನನ್ನ ಶಿವಜ್ಞಾನವು ಸ್ಥಿರವಾಯಿತು. ನನ್ನ ತಪಸ್ಸಿನ ಆಚರಣೆಯು ಶಾಶ್ವತವಾಯಿತು. ನನ್ನ ಮುನಿತ್ವವು ಗಟ್ಟಿಗೊಂಡು ಸ್ಥಿರವಾಯಿತು.

**ಸಂಸಾರಸರ್ಪದಷ್ಟಾನಾಮ್**
**ಮೂರ್ಛಿತಾನಾಂ ಶರೀರಿಣಾಮ್ ।**
**ಕಟಾಕ್ಷಸ್ತವ ಕಲ್ಯಾಣಮ್**
**ಸಮುಜ್ಜೀವನಭೇಷಜಮ್ ॥ 4–48**

ಈ ಸಂಸಾರವೆಂಬ ಸರ್ಪವು ಕಚ್ಚಿ ಮೂರ್ಛಿತರಾದ ದೇಹಿಗಳಿಗೆ ಕಲ್ಯಾಣಕರವಾದ ನಿಮ್ಮ ದೃಷ್ಟಿಪಾತವು ಸಂಜೀವಿನಿ ಔಷಧಿಯಾಗಿದೆ.

**ಸಮಸ್ತಲೋಕಸಂದಾಹ–**
**ತಾಪತ್ರಯಮಹಾನಲಃ ।**
**ತ್ವತ್ಪದಾಂಬುಕಣಾಸ್ವಾದಾತ್**
**ಉಪಶಾಮ್ಯತಿ ದೇಹಿನಾಮ್ ॥ 4–49**

ಸಮಸ್ತ ಲೋಕಗಳನ್ನು ಸುಡುತ್ತಿರುವ ಜೀವಿಗಳ ತಾಪತ್ರಯವೆಂಬ ಪ್ರಳಯಾಗ್ನಿಯು ನಿಮ್ಮ ಪಾದೋದಕದ ಒಂದು ಬಿಂದುವನ್ನು ಸೇವಿಸಿದ ಮಾತ್ರದಿಂದಲೇ ಶಾಂತವಾಗುತ್ತದೆ.

**ರೇಣುಕಂ ತ್ವಾಂ ವಿಜಾನಾಮಿ**
**ಗಣನಾಥಂ ಶಿವಪ್ರಿಯಮ್ ।**
**ಅವತೀರ್ಣಮಿಮಾಂ ಭೂಮಿಮ್**
**ಮದನುಗ್ರಹಕಾಂಕ್ಷಯಾ ॥ 4–50**

ನೀವು ಶಿವನಿಗೆ ಪ್ರಿಯರಾದ ಗಣಗಳಿಗೆ ಒಡೆಯರಾದ ರೇಣುಕರು ಎಂಬುದನ್ನು ನಾನು ತಿಳಿದಿದ್ದೇನೆ. ನನಗೆ ಅನುಗ್ರಹ ಮಾಡುವ ಅಪೇಕ್ಷೆಯಿಂದಲೇ ತಾವು ಈ ಭೂಮಿಯ ಮೇಲೆ ಅವತಾರವನ್ನು ತಾಳಿದ್ದೀರಿ.

**ಭವಾದೃಶಾನಾಂ ಸಿದ್ಧಾನಾಮ್**
**ಪ್ರಬೋಧಧ್ವಸ್ತಜನ್ಮನಾಮ್ ।**
**ಪ್ರವೃತ್ತಿರೀದೃಶೀ ಲೋಕೇ**
**ಪರಾನುಗ್ರಹಕಾರಿಣೀ ॥ 4–51**

ಶಿವಜ್ಞಾನದಿಂದ ಜನ್ಮಬಂಧನವನ್ನು ಕಳೆದುಕೊಂಡಿರುವ ನಿನ್ನಂಥ ಸಿದ್ಧಪುರುಷರು ಈ ಮರ್ತ್ಯಲೋಕದಲ್ಲಿ ಸಂಚರಿಸುವುದು ಇತರರಿಗೆ ಅನುಗ್ರಹವನ್ನು ಮಾಡುವುದಕ್ಕಾಗಿಯೇ ಆಗಿರುವುದು.

**ತ್ವನ್ಮುಖಾಚ್ಛ್ರೋತುಮಿಚ್ಛಾಮಿ**

**ಸಿದ್ಧಾಂತಂ ಶ್ರುತಿಸಂಮತಮ್ ।**
**ಸರ್ವಜ್ಞವದ ಮೇ ಸಾಕ್ಷಾತ್**
**ಶೈವಂ ಸರ್ವಾರ್ಥಸಾಧಕಮ್ ॥ 4–52**

ಹೇ ಸರ್ವಜ್ಞನಾದ ರೇಣುಕನೇ, ಶ್ರುತಿಸಮ್ಮತವಾದ ಸರ್ವಾರ್ಥ ಸಾಧಕವಾದ ಶಿವನಿಗೆ ಸಂಬಂಧಿತವಾದ ಸಿದ್ಧಾಂತವನ್ನು ಸಾಕ್ಷಾತ್ ನಿನ್ನ ಮುಖದಿಂದಲೇ ಕೇಳಲು ಅಪೇಕ್ಷಿಸುತ್ತಿರುವೆನು. ಆದ್ದರಿಂದ ನನಗೆ ನೀನು ಅದನ್ನು ಬೋಧಿಸು.

**ಸದ್ಯಃ ಸಿದ್ಧಿಕರಂ ಪುಂಸಾಮ್**
**ಸರ್ವಯೋಗೀಂದ್ರಸೇವಿತಮ್ ।**
**ದುರಾಚಾರೈರನಾಘ್ರಾತಮ್**
**ಸ್ವೀಕೃತಂ ವೇದವೇದಿಭಿಃ ।**
**ಶಿವಾತ್ಮೈಕ್ಯಮಹಾಬೋಧ–**
**ಸಂಪ್ರದಾಯಪ್ರವರ್ತಕಮ್ ॥ 4–53**

ತತ್ಕ್ಷಣದಲ್ಲಿಯೇ ಸಿದ್ಧಿಯನ್ನು ಕೊಡುವ, ಎಲ್ಲ ಯೋಗೀಂದ್ರರಿಂದ ಸ್ವೀಕರಿಸಲ್ಪಟ್ಟಿರುವ, ದುರಾಚಾರಿಗಳಿಗೆ ದುಃಸಾಧ್ಯವಾದ, ವೇದವಿದರಿಂದ ಸ್ವೀಕೃತವಾದ, ಶಿವ–ಜೀವರ ಐಕ್ಯಬೋಧಕವಾದ, ಮಹಾಜ್ಞಾನದ ಸಂಪ್ರದಾಯವನ್ನು ಪ್ರವರ್ತನಗೊಳಿಸುವ ಶಿವಾದ್ವೈತವನ್ನು ನನಗೆ ಬೋಧಿಸು.

**ಉಕ್ತ್ವಾ ಭವಾನ್ ಸಕಲಲೋಕಮಹೋಪಕಾರಮ್**
**ಸಿದ್ಧಾಂತಸಂಗ್ರಹಮನಾದೃತಬಾಹ್ಯತಂತ್ರಮ್ ।**
**ಸದ್ಯಃ ಕೃತಾರ್ಥಯಿತುಮರ್ಹತಿ ದಿವ್ಯಯೋಗಿನ್**
**ನಾನಾಗಮಶ್ರವಣವರ್ತಿತಸಂಶಯಂ ಮಾಮ್ ॥**
**4–54**
**–ವಸಂತತಿಲಕಂ ವೃತ್ತಂ**

ಹೇ ದಿವ್ಯಯೋಗಿಯಾದ ರೇಣುಕನೇ, ಎಲ್ಲ ಜೀವಿಗಳಿಗೆ ಅನುಗ್ರಹಕಾರಕವಾದ, ವೇದವಿರುದ್ಧಗಳಾದ ತಂತ್ರಗಳನ್ನು ನಿರಾಕರಿಸಿದ ವೇದ ಸಮ್ಮತವಾದ ಸಿದ್ಧಾಂತ ಸಾರವನ್ನು ತಾವು ನನಗೆ ಉಪದೇಶ ಮಾಡಿ ಅನೇಕ ಆಗಮಗಳ ಶ್ರವಣದಿಂದ ಸಂಶಯಗೊಂಡಿರುವ ನನ್ನನ್ನು ಕೂಡಲೇ ಕೃತಾರ್ಥನನ್ನಾಗಿ ಮಾಡಬೇಕು.
***ಇತಿ ಅಗಸ್ತ್ಯಮುನಿವಚನಂ*** *ಇಲ್ಲಿಗೆ ಅಗಸ್ತ್ಯರ ಪ್ರಾರ್ಥನೆಯು ಮುಗಿಯಿತು.*

***ಓಂ ತತ್ಸತ್ ಇತಿ***
***ಶ್ರೀ ಶಿವಗೀತೇಷು ಸಿದ್ಧಾಂತಾಗಮೇಷು ಶಿವಾದ್ವೈತವಿದ್ಯಾಯಾಂ ಶಿವಯೋಗಶಾಸ್ತ್ರೇ ಶ್ರೀರೇಣುಕಾಗಸ್ತ್ಯಸಂವಾದೇ ವೀರಶೈವಧರ್ಮನಿರ್ಣಯೇ, ಶ್ರೀಶಿವಯೋಗಿ ಶಿವಾಚಾರ್ಯವಿರಚಿತೇ ಶ್ರೀಸಿದ್ಧಾಂತಶಿಖಾಮಣೌ ಶ್ರೀರೇಣುಕಾಗಸ್ತ್ಯ ಸಂಭಾಷಣ ಪ್ರಸಂಗೋನಾಮ ಚತುರ್ಥಃ ಪರಿಚ್ಛೇದಃ ॥***
*ಓಂ ತತ್ಸತ್ ಇಲ್ಲಿಗೆ ಶ್ರೀ ಶಿವನಿಂದ ಉಪದೇಶಿಸಲ್ಪಟ್ಟ ಶ್ರೀ ಸಿದ್ಧಾಂತಾಗಮಗಳಲ್ಲಿಯ ಶಿವಾದ್ವೈತವಿದ್ಯಾರೂಪವೂ, ಶಿವಯೋಗಶಾಸ್ತ್ರವೂ, ಶ್ರೀರೇಣುಕಾಗಸ್ತ್ಯ ಸಂವಾದರೂಪವೂ, ಶ್ರೀ ವೀರಶೈವಧರ್ಮನಿರ್ಣಯವೂ, ಶ್ರೀ ಶಿವಯೋಗಿ ಶಿವಾಚಾರ್ಯ ವಿರಚಿತವೂ ಆದ ಶ್ರೀಸಿದ್ಧಾಂತಶಿಖಾಮಣಿಯಲ್ಲಿ*
*ಶ್ರೀ ರೇಣುಕಾಗಸ್ತ್ಯರ ಸಂಭಾಷಣಪ್ರಸಂಗವೆಂಬ ಹೆಸರಿನ ನಾಲ್ಕನೆಯ ಪರಿಚ್ಛೇದವು ಮುಗಿದುದು.*

## ಪಂಚಮಃ ಪರಿಚ್ಛೇದಃ
## ಐದನೆಯ ಪರಿಚ್ಛೇದವು

### ಭಕ್ತಸ್ಥಲೇ ಪಿಂಡ–ಪಿಂಡಜ್ಞಾನ–ಸಂಸಾರಹೇಯಸ್ಥಲಪ್ರಸಂಗಃ
### ಭಕ್ತಸ್ಥಲದ ಪಿಂಡ, ಪಿಂಡಜ್ಞಾನ, ಸಂಸಾರಹೇಯಸ್ಥಲ ಪ್ರಸಂಗವು
**(77 ಶ್ಲೋಕಗಳು)**

### ಸಿದ್ಧಾಂತಕಥನಮ್
### ಸಿದ್ಧಾಂತದ ಕಥನವು
**(21 ಶ್ಲೋಕಗಳು)**

**ಅಥಾಗಸ್ತ್ಯವಚಃ ಶ್ರುತ್ವಾ**
**ರೇಣುಕೋ ಗಣನಾಯಕಃ ।**
**ಧ್ಯಾತ್ವಾ ಕ್ಷಣಂ ಮಹಾದೇವಮ್**
**ಸಾಂಬಮಾಹ ಸಮಾಹಿತಃ ॥ 5–1**

ಬಳಿಕ ಅಗಸ್ತ್ಯರ ಬಿನ್ನಪವನ್ನು ಕೇಳಿ ಗಣನಾಯಕರಾದ ರೇಣುಕರು ಕ್ಷಣಕಾಲ ಸಾಂಬ(ಉಮಾಪತಿ)ನಾದ ಮಹಾದೇವನನ್ನು ಧ್ಯಾನ ಮಾಡಿ ಸಮಾಧಾನ ಚಿತ್ತದಿಂದ ನುಡಿದರು.

***ಅಥ ಶ್ರೀರೇಣುಕಶಾಸನಂ*** *ಶ್ರೀರೇಣುಕ ಶಾಸನದ ಪ್ರಾರಂಭವು*

**ಅಗಸ್ತ್ಯ ಮುನಿಶಾರ್ದೂಲ**
**ಸಮಸ್ತಾಗಮಪಾರಗ ।**
**ಶಿವಜ್ಞಾನಕರಂ ವಕ್ಷ್ಯೇ**
**ಸಿದ್ಧಾಂತಂ ಶ್ರುಣು ಸಾದರಮ್ ॥ 5–2**

ಸಮಸ್ತ ಆಗಮಗಳಲ್ಲಿ ಪಾರಂಗತನಾದ, ಮುನಿಗಳಲ್ಲಿ ಶ್ರೇಷ್ಠನಾದ ಎಲೈ ಅಗಸ್ತ್ಯನೇ, ಶಿವಜ್ಞಾನವನ್ನು ಉಂಟುಮಾಡುವ ಸಿದ್ಧಾಂತವನ್ನು ಹೇಳುವೆನು. ಆದರಪೂರ್ವಕವಾಗಿ ಕೇಳು.

**ಅಗಸ್ತ್ಯ ಖಲು ಸಿದ್ಧಾಂತಾಃ**
**ವಿಖ್ಯಾತಾ ರುಚಿಭೇದತಃ ।**
**ಭಿನ್ನಾಚಾರಸಮಾಯುಕ್ತಾ**
**ಭಿನ್ನಾರ್ಥಪ್ರತಿಪಾದಕಾಃ ॥ 5–3**

ಹೇ ಅಗಸ್ತ್ಯನೇ, ಅಭಿರುಚಿಯ ಭೇದದಿಂದ ಭಿನ್ನ ಭಿನ್ನಾಚಾರಗಳಿಂದ ಭಿನ್ನ ಭಿನ್ನ ಅರ್ಥಗಳನ್ನು ವಿವರಿಸುವುದರಿಂದ ಸಿದ್ಧಾಂತಗಳು ಅನೇಕ ವಿಧವಾಗಿ ಪ್ರಖ್ಯಾತವಾಗಿವೆ.

**ಸಾಂಖ್ಯಂ ಯೋಗಃ ಪಾಂಚರಾತ್ರಮ್**
**ವೇದಾಃ ಪಾಶುಪತಂ ತಥಾ ।**
**ಏತಾನಿ ಮಾನಭೂತಾನಿ**

**ನೋಪಹನ್ಯಾನಿ ಯುಕ್ತಿಭಿಃ ॥ 5–4**

ಸಾಂಖ್ಯಶಾಸ್ತ್ರ, ಯೋಗಶಾಸ್ತ್ರ, ಪಾಂಚರಾತ್ರ, ವೇದಗಳು ಹಾಗೂ ಪಾಶುಪತಶಾಸ್ತ್ರ– ಇವೆಲ್ಲಾ ಪ್ರಮಾಣಗಳಾಗಿವೆ. ಆದ್ದರಿಂದ ಇವುಗಳನ್ನು ಯುಕ್ತಿ ತರ್ಕಗಳಿಂದ ಖಂಡಿಸಕೂಡದು.

**ವೇದಃ ಪ್ರಧಾನಂ ಸರ್ವೇಷಾಮ್**
**ಸಾಂಖ್ಯಾದೀನಾಂ ಮಹಾಮುನೇ ।**
**ವೇದಾನುಸರಣಾದೇಷಾಮ್**
**ಪ್ರಾಮಾಣ್ಯಮಿತಿ ನಿಶ್ಚಿತಮ್ ॥ 5–5**

ಹೇ ಮಹಾಮುನಿಯೇ, ಸಾಂಖ್ಯಾದಿ ಸರ್ವಶಾಸ್ತ್ರಗಳಿಗೆ ವೇದವೇ ಪ್ರಧಾನವಾದುದು. ವೇದವನ್ನು ಅನುಸರಿಸಿದ್ದರಿಂದಲೇ ಇವುಗಳ ಪ್ರಾಮಾಣ್ಯವು ನಿಶ್ಚಿತವಾಗಿರುತ್ತದೆ.

**ಪಾಂಚರಾತ್ರಸ್ಯ ಸಾಂಖ್ಯಸ್ಯ**
**ಯೋಗಸ್ಯ ಚ ತಥಾ ಮುನೇ ।**
**ವೇದೈಕದೇಶವರ್ತಿತ್ವಮ್**
**ಶೈವಂ ವೇದಮಯಂ ಮತಮ್ ॥ 5–6**

ಹೇ ಮುನಿಯೇ, ಪಾಂಚರಾತ್ರ, ಸಾಂಖ್ಯ ಮತ್ತು ಯೋಗಶಾಸ್ತ್ರಗಳು ವೇದದ ಏಕದೇಶವರ್ತಿಗಳಾಗಿರುತ್ತವೆ. (ವೇದದ ಒಂದು ಭಾಗವನ್ನು ಮಾತ್ರ ಒಪ್ಪುವಂತಹುಗಳಾಗಿವೆ). ಆದರೆ ಶೈವ(ಸಿದ್ಧಾಂತ)ವು ಸಂಪೂರ್ಣವಾಗಿ ವೇದಮಯ ಎನ್ನುವುದು ನಿಗಮಾಗಮ ತಜ್ಞರ ಅಭಿಮತವಾಗಿದೆ.

**ವೇದೈಕದೇಶವರ್ತಿಭ್ಯಃ**
**ಸಾಂಖ್ಯಾದಿಭ್ಯೋ ಮಹಾಮುನೇ ।**
**ಸರ್ವವೇದಾನುಸಾರಿತ್ವಾತ್**
**ಶೈವತಂತ್ರಂ ವಿಶಿಷ್ಯತೇ ॥ 5–7**

ಹೇ ಮಹಾಮುನಿಯೇ, ವೇದದ ಒಂದು ಭಾಗವನ್ನು ಒಪ್ಪುತ್ತಿರುವ ಸಾಂಖ್ಯಾದಿ ಶಾಸ್ತ್ರಗಳಿಗಿಂತಲೂ ಸರ್ವ ವೇದಾನುಸಾರಿಯಾದ ಶೈವ (ಸಿದ್ಧಾಂತ) ಶಾಸ್ತ್ರವು ಎಲ್ಲಕ್ಕಿಂತ ವಿಶಿಷ್ಟ (ವಿಲಕ್ಷಣ)ವಾಗಿದೆ.

**ಶೈವತಂತ್ರಮಿತಿ ಪ್ರೋಕ್ತಮ್**
**ಸಿದ್ಧಾಂತಾಖ್ಯಂ ಶಿವೋದಿತಮ್ ।**
**ಸರ್ವವೇದಾರ್ಥರೂಪತ್ವಾತ್**
**ಪ್ರಾಮಾಣ್ಯಂ ವೇದವತ್ ಸದಾ ॥ 5–8**

ಶಿವನಿಂದ ಉಪದೇಶಿತವಾದ ಶೈವತಂತ್ರವು ಸಿದ್ಧಾಂತವೆಂಬುದಾಗಿ ಹೇಳಲ್ಪಟ್ಟಿದೆ. ಇದು ಸರ್ವವೇದಾರ್ಥಗಳ ಸ್ವರೂಪವಾದ್ದರಿಂದ ಇದು ಯಾವಾಗಲೂ ವೇದದಂತೆ ಪ್ರಮಾಣವಾಗಿರುತ್ತದೆ.

**ಆಗಮಾ ಬಹುಧಾ ಪ್ರೋಕ್ತಾಃ**
**ಶಿವೇನ ಪರಮಾತ್ಮನಾ ।**
**ಶೈವಂ ಪಾಶುಪತಂ ಸೋಮಮ್**
**ಲಾಕುಲಂ ಚೇತಿ ಭೇದತಃ ॥ 5–9**

ಪರಮಾತ್ಮನಾದ ಶಿವನಿಂದ ಉಪದೇಶಿಸಲ್ಪಟ್ಟ ಆಗಮಗಳು ಶೈವ, ಪಾಶುಪತ, ಸೋಮ ಮತ್ತು ಲಾಕುಲವೆಂಬ ವೈವಿಧ್ಯದಿಂದ ಹಲವು ಬಗೆಯಾಗಿವೆ.

**ತೇಷು ಶೈವಂ ಚತುರ್ಭೇದಮ್**
**ತಂತ್ರಂ ಸರ್ವವಿನಿಶ್ಚಿತಮ್ ।**
**ವಾಮಂ ಚ ದಕ್ಷಿಣಂ ಚೈವ**
**ಮಿಶ್ರಂ ಸಿದ್ಧಾಂತಸಂಜ್ಞಕಮ್ ॥ 5–10**

ಅವುಗಳಲ್ಲಿ ಶೈವಶಾಸ್ತ್ರವು ವಾಮ, ದಕ್ಷಿಣ, ಮಿಶ್ರ ಮತ್ತು ಸಿದ್ಧಾಂತವೆಂಬ ಹೆಸರಿನಿಂದ ನಾಲ್ಕು ವಿಧವಾಗಿರುತ್ತದೆ ಎಂಬುದಾಗಿ ಎಲ್ಲಾ ಆಗಮತಜ್ಞರಿಂದ ನಿಶ್ಚಯಿಸಲ್ಪಟ್ಟಿದೆ.

**ಶಕ್ತಿಪ್ರಧಾನಂ ವಾಮಾಖ್ಯಮ್**
**ದಕ್ಷಿಣಂ ಭೈರವಾತ್ಮಕಮ್ ।**
**ಸಪ್ತಮಾತೃಪರಂ ಮಿಶ್ರಮ್**
**ಸಿದ್ಧಾಂತಂ ವೇದಸಮ್ಮತಮ್ ॥ 5–11**

ಶಕ್ತಿಯ ಉಪಾಸನೆಯೇ ಪ್ರಧಾನವಾದದ್ದು ವಾಮತಂತ್ರವು, ಭೈರವನ ಉಪಾಸನೆಯೇ ಪ್ರಧಾನವಾದದ್ದು ದಕ್ಷಿಣತಂತ್ರವು, ಬ್ರಾಹ್ಮಿ ಮೊದಲಾದ ಸಪ್ತಮಾತೃಕೆಯರ ಉಪಾಸನೆಯೇ ಪ್ರಧಾನವಾದದ್ದು ಮಿಶ್ರತಂತ್ರವು. ಇನ್ನು ವೇದಸಮ್ಮತವಾದದ್ದೇ ಸಿದ್ಧಾಂತತಂತ್ರವು.

**ವೇದಧರ್ಮಾಭಿಧಾಯಿತ್ವಾತ್**
**ಸಿದ್ಧಾಂತಾಖ್ಯಃ ಶಿವಾಗಮಃ ।**
**ವೇದಬಾಹ್ಯವಿರೋಧಿತ್ವಾದ್**
**ವೇದಸಮ್ಮತ ಉಚ್ಯತೇ ॥ 5–12**

ಸಿದ್ಧಾಂತವೆಂಬ ಹೆಸರಿನ ಶಿವಾಗಮವು ವೇದೋಕ್ತವಾದ ಧರ್ಮವನ್ನು ಪ್ರತಿಪಾದಿಸುವುದರಿಂದ ಮತ್ತು ವೇದ ಬಾಹ್ಯಗಳಾದ ಚಾರ್ವಾಕಾದಿಗಳನ್ನು ವಿರೋಧಿಸುತ್ತಿರುವುದರಿಂದ ಇದು ವೇದಸಮ್ಮತವೆಂದು ಹೇಳಲ್ಪಟ್ಟಿದೆ.

**ವೇದಸಿದ್ಧಾಂತಯೋರೈಕ್ಯಮ್**
**ಏಕಾರ್ಥಪ್ರತಿಪಾದನಾತ್ ।**
**ಪ್ರಾಮಾಣ್ಯಂ ಸದೃಶಂ ಜ್ಞೇಯಮ್**
**ಪಂಡಿತೈರೇತಯೋಃ ಸದಾ ॥ 5–13**

ವೇದ ಮತ್ತು ಸಿದ್ಧಾಂತಶಾಸ್ತ್ರಗಳಲ್ಲಿ ಒಂದೇ ವಿಷಯ ಪ್ರತಿಪಾದಿಸಲ್ಪಟ್ಟಿರು ವುದರಿಂದ ಪಂಡಿತರು ಇವೆರಡರ ಪ್ರಾಮಾಣ್ಯವನ್ನು ಯಾವಾಗಲೂ ಸಮಾನವಾಗಿಯೇ ತಿಳಿದುಕೊಳ್ಳಬೇಕು.

**ಸಿದ್ಧಾಂತಾಖ್ಯೇ ಮಹಾತಂತ್ರೇ**
**ಕಾಮಿಕಾದ್ಯೇ ಶಿವೋದಿತೇ ।**
**ನಿರ್ದಿಷ್ಟಮುತ್ತರೇ ಭಾಗೇ**
**ವೀರಶೈವಮತಂ ಪರಮ್ ॥ 5–14**

ಶಿವನಿಂದ ಉಪದೇಶಿಸಲ್ಪಟ್ಟ ಕಾಮಿಕಾದಿ ವಾತುಲಾಂತ್ಯಗಳಾದ ಸಿದ್ಧಾಂತವೆಂಬ ಹೆಸರಿನ ಮಹಾತಂತ್ರದ ಉತ್ತರ ಭಾಗದಲ್ಲಿ ಶ್ರೇಷ್ಠವಾದ ವೀರಶೈವ ಮತವು ಹೇಳಲ್ಪಟ್ಟಿದೆ.

**ವಿದ್ಯಾಯಾಂ ಶಿವರೂಪಾಯಾಮ್**
**ವಿಶೇಷಾದ್ ರಮಣಂ ಯತಃ ।**
**ತಸ್ಮಾದೇತೇ ಮಹಾಭಾಗಾ**
**ವೀರಶೈವಾ ಇತಿ ಸ್ಮೃತಾಃ ॥ 5–15**

ಶಿವರೂಪವಾದ ವಿದ್ಯೆಯಲ್ಲಿ ಯಾರು ವಿಶೇಷವಾಗಿ ರಮಿಸುವರೋ ಅಂತಹ ಭಾಗ್ಯಶಾಲಿಗಳು ವೀರಶೈವರೆಂಬುದಾಗಿ ಸ್ಮರಿಸಲ್ಪಡುತ್ತಾರೆ.

**ವೀಶಬ್ದೇನೋಚ್ಯತೇ ವಿದ್ಯಾ**
**ಶಿವಜೀವೈಕ್ಯಬೋಧಿಕಾ ।**
**ತಸ್ಯಾಂ ರಮಂತೇ ಯೇ ಶೈವಾ**
**ವೀರಶೈವಾಸ್ತು ತೇ ಮತಾಃ ॥ 5–16**

'ವೀ' ಶಬ್ದದಿಂದ ಶಿವ ಮತ್ತು ಜೀವರ ಐಕ್ಯವನ್ನು (ಏಕತ್ವವನ್ನು) ಬೋಧಿಸುವ ವಿದ್ಯೆಯು ಹೇಳಲ್ಪಡುತ್ತದೆ. ಆ ವಿದ್ಯೆಯಲ್ಲಿ ಯಾವ ಶಿವಭಕ್ತರು ರಮಿಸುವರೋ (ಆನಂದವನ್ನು) ಪಡುತ್ತಾರೆಯೋ ಅವರು ವೀರಶೈವರೆಂದು ಕರೆಯಲ್ಪಟ್ಟಿದ್ದಾರೆ.

**ವಿದ್ಯಾಯಾಂ ರಮತೇ ಯಸ್ಮಾತ್**
**ಮಾಯಾಂ ಹೇಯಾಂ ಶ್ವವದ್ ರಹೇತ್ ।**
**ಅನೇನೈವ ನಿರುಕ್ತೇನ**
**ವೀರಮಾಹೇಶ್ವರಃ ಸ್ಮೃತಃ ॥ 5–17**

ಯಾವ ಕಾರಣದಿಂದ ಈ ವಿದ್ಯೆಯಲ್ಲಿ ರಮಿಸುವನೋ, ಹೇಯವಾದ ಮಾಯೆಯನ್ನು ನಾಯಿಯಂತೆ ತ್ಯಾಗ ಮಾಡುವನೋ ಈ ರೀತಿಯಾದ ನಿರ್ವಚನದಿಂದ (ನಿರುಕ್ತಿ) ವೀರಮಾಹೇಶ್ವರನೆಂದು ಸ್ಮರಿಸಲ್ಪಡುತ್ತಾನೆ.

**ವೇದಾಂತಜನ್ಯಂ ಯಜ್ಜ್ಞಾನಮ್**
**ವಿದ್ಯೇತಿ ಪರಿಕೀರ್ತ್ಯತೇ ।**
**ವಿದ್ಯಾಯಾಂ ರಮತೇ ತಸ್ಯಾಮ್**
**ವೀರ ಇತ್ಯಭಿಧೀಯತೇ ॥ 5–18**

ವೇದಾಂತ(ಉಪನಿಷತ್)ದಿಂದ ಉತ್ಪನ್ನವಾದ ಯಾವ ಜ್ಞಾನವಿದೆಯೋ ಅದು ವಿದ್ಯೆಯೆಂದು ಹೇಳಲ್ಪಡುತ್ತದೆ. ಆ ವಿದ್ಯೆಯಲ್ಲಿ ಯಾರು ರಮಿಸುತ್ತಾರೆಯೋ ಅವರು 'ವೀರ' ಎಂದು ಹೇಳಿಸಿಕೊಳ್ಳುವರು.

**ಶೈವೈರ್ಮಾಹೇಶ್ವರೈಶ್ಚೈವ**
**ಕಾರ್ಯಮಂತರ್ಬಹಿಃ ಕ್ರಮಾತ್ ।**
**ಶಿವೋ ಮಹೇಶ್ವರಶ್ಚೇತಿ**
**ನಾತ್ಯಂತಮಿಹ ಭಿದ್ಯತೇ ॥ 5–19**

ಶೈವ(ವೀರಶೈವ)ರಿಂದ ಮತ್ತು ಮಾಹೇಶ್ವರ (ವೀರಮಾಹೇಶ್ವರ)ರಿಂದ ಮಾಡಲ್ಪಡುವ ಕ್ರಿಯೆಯು (ಇಷ್ಟಲಿಂಗೋಪಾಸನೆಯು) ಕ್ರಮವಾಗಿ ಅಂತರಂಗ ಮತ್ತು ಬಹಿರಂಗದ್ದು ಎಂದು ತಿಳಿದುಕೊಳ್ಳಬೇಕು. ಶಿವ ಮತ್ತು ಮಹೇಶ್ವರ ಇವರೀರ್ವರಲ್ಲಿ ಹೇಗೆ ಅತ್ಯಂತವಾಗಿ ಭೇದವಿರುವುದಿಲ್ಲವೋ ಅದರಂತೆ ವೀರಶೈವ ಮತ್ತು ವೀರಮಾಹೇಶ್ವರರಲ್ಲಿ ಪರಸ್ಪರ ಭೇದವಿರುವುದಿಲ್ಲ (ಏಕಾಂತದಲ್ಲಿ ಇಷ್ಟಲಿಂಗಪೂಜೆ ಮಾಡುವವರು ವೀರಶೈವರಾದರೆ, ಜನರಿಗೆ ಮಾರ್ಗದರ್ಶನ ಮಾಡುವುದಕ್ಕಾಗಿ ಬಹಿರಂಗದಲ್ಲಿ ಇಷ್ಟಲಿಂಗ ಪೂಜೆಯನ್ನು ಮಾಡುವವರು ವೀರಮಾಹೇಶ್ವರರೆಂದು ತಿಳಿಯಲಾಗಿದೆ).

**ಯಥಾ ತಥಾ ನ ಭಿದ್ಯಂತೇ**

**ಶೈವಾ ಮಾಹೇಶ್ವರಾ ಅಪಿ ।**
**ಶಿವಾಶ್ರಿತೇಷು ತೇ ಶೈವಾಃ**
**ಜ್ಞಾನಯಜ್ಞರತಾಃ ನರಾಃ ॥ 5–20**

**ಮಾಹೇಶ್ವರಾಃ ಸಮಾಖ್ಯಾತಾಃ**
**ಕರ್ಮಯಜ್ಞರತಾ ಭುವಿ ।**
**ತಸ್ಮಾದಾಭ್ಯಂತರೇ ಕುರ್ಯುಃ**
**ಶೈವಾಃ ಮಾಹೇಶ್ವರಾಃ ಬಹಿಃ ॥ 5–21**

ಶಿವ ಮತ್ತು ಮಹೇಶ್ವರರು ಹೇಗೆ ಭಿನ್ನರಲ್ಲವೋ ಅದರಂತೆ ವೀರಶೈವರು ಮತ್ತು ವೀರಮಾಹೇಶ್ವರರು ಸಹ ಪರಸ್ಪರ ಭಿನ್ನರಾಗಿರುವುದಿಲ್ಲ. ಶಿವನನ್ನು ಆಶ್ರಯಿಸುವವರಲ್ಲಿ ಯಾವ ಮನುಷ್ಯರು ಜ್ಞಾನಯಜ್ಞದಲ್ಲಿ ತತ್ಪರರೋ ಅವರು ವೀರಶೈವರೆನಿಸಿಕೊಳ್ಳುವರು. ಕರ್ಮಯಜ್ಞದಲ್ಲಿ ತತ್ಪರರಾದವರು ಈ ಭೂಮಿಯೊಳಗೆ ವೀರಮಾಹೇಶ್ವರರೆಂದು ಪ್ರಸಿದ್ಧರಾಗಿರುವರು. ಆದ್ದರಿಂದ ವೀರಶೈವರು ಅಂತರಂಗದಲ್ಲಿ ಶಿವಲಿಂಗಾರ್ಚನೆಯನ್ನು ಮತ್ತು ವೀರಮಾಹೇಶ್ವರರು ಬಹಿರಂಗದಲ್ಲಿ ಇಷ್ಟಲಿಂಗಾರ್ಚನೆಯನ್ನು ಮಾಡಿಕೊಳ್ಳುವರು.
(ಈ ರೀತಿಯಲ್ಲಿ ವೀರಶೈವರು ವೀರಮಾಹೇಶ್ವರರಿಬ್ಬರೂ ಜ್ಞಾನಿಗಳಾಗಿ ಅನುಭಾವಿಗಳಾದರೂ, ವೀರಶೈವನು ಜ್ಞಾನಿಯಾಗಿ ತನ್ನ ಪಾಡಿಗೆ ತಾನು ಇರುತ್ತಾನೆ. ಆದರೆ ವೀರಮಾಹೇಶ್ವರನು ತನ್ನ ಅನುಭವ ಜ್ಞಾನವನ್ನು ಜಗತ್ತಿಗೆ ಹಂಚಲು ಕ್ರಿಯಾಪ್ರಧಾನನಾಗಿರುತ್ತಾನೆ)

**ಇತಿ ಸಿದ್ಧಾಂತಕಥನಂ** *ಇಲ್ಲಿಗೆ ಸಿದ್ಧಾಂತದ ಕಥನವು ಮುಗಿಯಿತು*

## ವೀರಶೈವಾಃ ಷಡ್ಭೇದಾಃ
ವೀರಶೈವದ ಆರು ಭೇದಗಳು
**(3 ಶ್ಲೋಕಗಳು)**

**ವೀರಶೈವಾಸ್ತು ಷಡ್ಭೇದಾಃ**
**ಸ್ಥಲಧರ್ಮವಿಭೇದತಃ ।**
**ಭಕ್ತಾದಿವ್ಯವಹಾರೇಣ**
**ಪ್ರೋಚ್ಯಂತೇ ಶಾಸ್ತ್ರಪಾರಗೈಃ ॥ 5–22**

ಸ್ಥಲಗಳ ಭೇದದಿಂದ, ಭಕ್ತ ಮಾಹೇಶ್ವರಾದಿ ವ್ಯವಹಾರದಿಂದ ವೀರಶೈವರು ಆರು ವಿಧವಾಗಿದ್ದಾರೆ (ಷಡ್ಭೇಧ) ಎಂದು ಶಾಸ್ತ್ರಪಾರಂಗತರು ಹೇಳುತ್ತಾರೆ.

**ಶಾಸ್ತ್ರಂ ತು ವೀರಶೈವಾನಾಮ್**
**ಷಡ್ವಿಧಂ ಸ್ಥಲಭೇದತಃ ।**
**ಧರ್ಮಭೇದಸಮಾಯೋಗಾತ್**
**ಅಧಿಕಾರಿವಿಭೇದತಃ ॥ 5–23**

ವೀರಶೈವರ ಶಾಸ್ತ್ರವು ಸ್ಥಲಭೇದದಿಂದ ಮತ್ತು ಆಯಾ ಸ್ಥಲಗಳ ಧರ್ಮಭೇದದಿಂದ ಹಾಗೂ ಅಧಿಕಾರಿ ಭೇದದಿಂದ ಆರು ಪ್ರಕಾರವಾಗಿರುತ್ತವೆ.

**ಆದೌ ಭಕ್ತಸ್ಥಲಂ ಪ್ರೋಕ್ತಮ್**
**ತತೋ ಮಾಹೇಶ್ವರಸ್ಥಲಮ್ ।**
**ಪ್ರಸಾದಿಸ್ಥಲಮನ್ಯತ್ತು**
**ಪ್ರಾಣಲಿಂಗಿಸ್ಥಲಂ ತತಃ ।**
**ಶರಣಸ್ಥಲಮಾಖ್ಯಾತಮ್**
**ಷಷ್ಠಮೈಕ್ಯಸ್ಥಲಂ ಮತಮ್ ॥ 5–24**

ಮೊದಲನೆಯದು ಭಕ್ತಸ್ಥಲವೆಂದು ಹೇಳಲ್ಪಟ್ಟಿದೆ. ಆನಂತರ ಮಾಹೇಶ್ವರ ಸ್ಥಲವು ಮತ್ತೊಂದು ಪ್ರಸಾದಿಸ್ಥಲವು, ನಂತರ ಪ್ರಾಣಲಿಂಗಿಸ್ಥಲವು, ಆಮೇಲೆ ಶರಣ ಸ್ಥಲವು. ಆರನೆಯದು ಐಕ್ಯಸ್ಥಲವೆಂದುದಾಗಿ ಸಮ್ಮತವಾಗಿದೆ.

**ಇತಿ ವೀರಶೈವಾಃ ಷಡ್ಭೇದಾಃ** *ಇಲ್ಲಿಗೆ ವೀರಶೈವದ ಆರು ಭೇದಗಳು ಮುಗಿಯಿತು.*

## ಭಕ್ತಸ್ಥಲಮ್
ಭಕ್ತಸ್ಥಲವು
**(7 ಶ್ಲೋಕಗಳು)**

**ಭಕ್ತಸ್ಥಲಂ ಪ್ರವಕ್ಷ್ಯಾಮಿ**
**ಪ್ರಥಮಂ ಕಲಶೋದ್ಭವ ।**
**ತದವಾಂತರಭೇದಾಂಶ್ಚ**
**ಸಮಾಹಿತಮನಾಃ ಶೃಣು ॥ 5–25**

ಹೇ ಕಲಶೋದ್ಭವನಾದ ಅಗಸ್ತ್ಯನೇ, ಮೊದಲಿಗೆ ಭಕ್ತಸ್ಥಲವನ್ನು ಹೇಳುತ್ತೇನೆ ಮತ್ತು ಅದರ ಅವಾಂತರ ಸ್ಥಲಗಳ ಭೇದವನ್ನೂ ಸಹ ಹೇಳುವೆನು. ಸಮಾಧಾನ ಮನಸ್ಕನಾಗಿ ಕೇಳು.

**ಶೈವೀ ಭಕ್ತಿಃ ಸಮುತ್ಪನ್ನಾ**
**ಯಸ್ಯಾಸೌ ಭಕ್ತ ಉಚ್ಯತೇ ।**
**ತಸ್ಯಾನುಷ್ಠೇಯಧರ್ಮಾಣಾ–**
**ಮುಕ್ತಿರ್ಭಕ್ತಸ್ಥಲಂ ಮತಮ್ ॥ 5–26**

ಯಾವನಿಗೆ ಶಿವನಲ್ಲಿ ಭಕ್ತಿಯು ಉತ್ಪನ್ನವಾಗಿದೆಯೋ ಅವನು ಭಕ್ತನೆಂದು ಹೇಳಲ್ಪಡುತ್ತಾನೆ. ಅವನ ಅನುಷ್ಠಾನಕ್ಕೆ ಯೋಗ್ಯಗಳಾದ ಧರ್ಮಗಳನ್ನು ಹೇಳುವುದೇ ಭಕ್ತಸ್ಥಲವೆಂದು ಸಮ್ಮತವಾಗಿದೆ.

**ಅವಾಂತರಸ್ಥಲಾನ್ಯತ್ರ**
**ಪ್ರಾಹುಃ ಪಂಚದಶೋತ್ತಮಾಃ ।**
**ಪಿಂಡತಾ ಪಿಂಡವಿಜ್ಞಾನಮ್**
**ಸಂಸಾರಗುಣಹೇಯತಾ ॥ 5–27**

**ದೀಕ್ಷಾ ಲಿಂಗಧೃತಿಶ್ಚೈವ**
**ವಿಭೂತೇರಪಿ ಧಾರಣಮ್ ।**
**ರುದ್ರಾಕ್ಷಧಾರಣಂ ಪಶ್ಚಾತ್**
**ಪಂಚಾಕ್ಷರಜಪಸ್ತಥಾ ॥ 5–28**

**ಭಕ್ತಮಾರ್ಗಕ್ರಿಯಾ ಚೈವ**
**ಗುರೋರ್ಲಿಂಗಸ್ಯ ಚಾರ್ಚನಮ್ ।**
**ಜಂಗಮಸ್ಯ ತಥಾ ಹ್ಯೇಷಾಮ್**
**ಪ್ರಸಾದಸ್ವೀಕೃತಿಸ್ತಥಾ ॥ 5–29**

**ಅತ್ರ ದಾನತ್ರಯಂ ಪ್ರೋಕ್ತಮ್**
**ಸೋಪಾಧಿನಿರುಪಾಧಿಕಮ್ ।**
**ಸಹಜಂ ಚೇತಿ ನಿರ್ದಿಷ್ಟಮ್**
**ಸಮಸ್ತಾಗಮಪಾರಗೈಃ ॥ 5–30**
**ಏತಾನಿ ಶಿವಭಕ್ತಸ್ಯ**
**ಕರ್ತವ್ಯಾನಿ ಪ್ರಯತ್ನತಃ ॥ 5–31**

ಈ ಭಕ್ತಸ್ಥಲದಲ್ಲಿ ಹದಿನೈದು ಅವಾಂತರ ಸ್ಥಲಗಳಿವೆ ಎಂದು ಹೇಳಲಾಗಿದೆ. ಅವು ಯಾವುವೆಂದರೆ ಪಿಂಡಸ್ಥಲ, ಪಿಂಡಜ್ಞಾನಸ್ಥಲ, ಸಂಸಾರಹೇಯಸ್ಥಲ, ಗುರುಕಾರುಣ್ಯಸ್ಥಲ, ಲಿಂಗಧಾರಣಸ್ಥಲ, ವಿಭೂತಿಧಾರಣಸ್ಥಲ, ರುದ್ರಾಕ್ಷಧಾರಣಸ್ಥಲ, ಪಂಚಾಕ್ಷರಜಪಸ್ಥಲ, ಭಕ್ತಮಾರ್ಗಕ್ರಿಯಾಸ್ಥಲ, ಗುರು–ಲಿಂಗಾರ್ಚನಸ್ಥಲ (ಉಭಯಸ್ಥಲ), ಗುರು–ಲಿಂಗ–ಜಂಗಮಾರ್ಚನಸ್ಥಲ (ತ್ರಿವಿಧ ಸಂಪತ್ತಿಸ್ಥಲ), ಗುರು–ಲಿಂಗ–ಜಂಗಮ–ಪ್ರಸಾದ ಸ್ಥಲ (ಚತುರ್ವಿಧ ಸಾರಾಯಸ್ಥಲ), ತ್ರಿವಿಧ ದಾನಸ್ಥಲ (ಸೋಪಾಧಿದಾನ, ನಿರುಪಾಧಿದಾನ, ಸಹಜದಾನಸ್ಥಲ). ಹೀಗೆ ಎಲ್ಲ ಆಗಮಗಳ ಪಾರಂಗತರಿಂದ ನಿರ್ದೇಶಿಸಲ್ಪಟ್ಟಿವೆ. ಪ್ರತಿಯೊಬ್ಬ ಶಿವಭಕ್ತನು ಈ ಹದಿನೈದು ಸ್ಥಲಗಳ ಆಚರಣೆಗಳನ್ನು ಪ್ರಯತ್ನಪೂರ್ವಕವಾಗಿ ಮಾಡಬೇಕಾದ ಕರ್ತವ್ಯಗಳಾಗಿವೆ.

## 1. ಅಥ ಪಿಂಡಸ್ಥಲಮ್

ಈಗ ಪಿಂಡಸ್ಥಲವು

**(23 ಶ್ಲೋಕಗಳು)**

**ಬಹುಜನ್ಮಕೃತೈಃ ಪುಣ್ಯೈಃ**
**ಪ್ರಕ್ಷೀಣೇ ಪಾಪಪಂಜರೇ ।**
**ಶುದ್ಧಾಂತಃಕರಣೋ ದೇಹೀ**
**ಪಿಂಡಶಬ್ದೇನ ಗೀಯತೇ ॥ 5–32**

ಬಹು ಜನ್ಮಗಳಲ್ಲಿ ಮಾಡಿದ ಪುಣ್ಯವಿಶೇಷದಿಂದ ಪಾಪವೆಂಬ ಪಂಜರವು ಕ್ಷೀಣವಾಗಲು, ಶುದ್ಧವಾದ ಅಂತಕರಣವುಳ್ಳ ದೇಹಿ (ಜೀವಿ)ಯು ಪಿಂಡ ಶಬ್ದದಿಂದ ಕರೆಯಲ್ಪಡುತ್ತಾನೆ.

**ಶಿವಶಕ್ತಿಸಮುತ್ಪನ್ನೇ**
**ಪ್ರಪಂಚೇಽಸ್ಮಿನ್ ವಿಶಿಷ್ಯತೇ ।**
**ಪುಣ್ಯಾಧಿಕಃ ಕ್ಷೀಣಪಾಪಃ**
**ಶುದ್ಧಾತ್ಮಾ ಪಿಂಡನಾಮಕಃ ॥ 5–33**

ಶಿವ–ಶಕ್ತಿಯರಿಂದ ಉತ್ಪನ್ನವಾದ ಈ ಪ್ರಪಂಚದಲ್ಲಿ ಅಧಿಕ ಪುಣ್ಯವಂತನಾದ ಮತ್ತು ಪಾಪವನ್ನು ಕ್ಷಯಿಸಿಕೊಂಡ ಪಿಂಡ ಎಂಬ ಹೆಸರಿನ ಶುದ್ಧಾತ್ಮನು ವಿಶಿಷ್ಟವಾಗಿ ಕಲ್ಪಿಸಲ್ಪಡುತ್ತಾನೆ (ಎಲ್ಲರಿಗಿಂತ ಎದ್ದು ಕಾಣುತ್ತಾನೆ).

**ಏಕ ಏವ ಶಿವಃ ಸಾಕ್ಷಾತ್**
**ಚಿದಾನಂದಮಯೋ ವಿಭುಃ ।**
**ನಿರ್ವಿಕಲ್ಪೋ ನಿರಾಕಾರೋ**
**ನಿರ್ಗುಣೋ ನಿಷ್ಪ್ರಪಂಚಕಃ ।**
**ಅನಾದ್ಯವಿದ್ಯಾಸಂಬಂಧಾತ್**
**ತದಂಶೋ ಜೀವನಾಮಕಃ ॥ 5–34**

ಒಬ್ಬನೇ ಒಬ್ಬನಾಗಿರುವ ಶಿವನು ಸಾಕ್ಷಾತ್ ಚಿದಾನಂದಮಯನೂ, ವ್ಯಾಪಕನೂ (ವಿಭುವು), ನಿರ್ವಿಕಲ್ಪನೂ (ವಿಕಲ್ಪವೆಂದರೆ ವಸ್ತು ಶೂನ್ಯವಾದ ಶಬ್ದಜ್ಞಾನಾವಲಂಬಿ ಮನೋವೃತ್ತಿ), ನಿರಾಕಾರನೂ, ನಿರ್ಗುಣನೂ (ಸತ್ವ, ರಜ, ತಮೋಗುಣಗಳಿಗೆ ಅತೀತನು), ನಿಷ್ಪ್ರಪಂಚಕನೂ (ಮಾಯಿಕ ಪ್ರಪಂಚ ಶೂನ್ಯನೂ) ಆಗಿದ್ದಾನೆ. ಅನಾದಿಯಾದ ಅವಿದ್ಯೆಯ ಸಂಬಂಧವಾಗುವುದರಿಂದ ಆ ಸಚ್ಚಿದಾನಂದಮಯನಾದ ಶಿವನ ಅಂಶವೇ ಜೀವ ಎಂಬ ಹೆಸರಿನಿಂದ ಕರೆಯಲ್ಪಡುತ್ತಾನೆ.

**ದೇವತಿರ್ಯಙ್ಮನುಷ್ಯಾದಿ–**
**ಜಾತಿಭೇದೇ ವ್ಯವಸ್ಥಿತಃ ।**
**ಮಾಯೀ ಮಹೇಶ್ವರಸ್ತೇಷಾಮ್**
**ಪ್ರೇರಕೋ ಹೃದಿ ಸಂಸ್ಥಿತಃ ॥ 5–35**

ಆ ಜೀವನೇ ದೇವ, ಕ್ರಿಮಿಕೀಟ ಮತ್ತು ಮನುಷ್ಯ ಮೊದಲಾದ (84 ಲಕ್ಷ ಪ್ರಕಾರವಾದ) ಜಾತಿಗಳ ಭೇದದಲ್ಲಿ ವ್ಯವಸ್ಥಿತನಾಗಿದ್ದಾನೆ. ಮಾಯಾಶಕ್ತಿ ವಿಶಿಷ್ಟನಾದ ಮಹೇಶ್ವರನು ಆ ಎಲ್ಲ ಜೀವಿಗಳಿಗೆ ಪ್ರೇರಕನಾಗಿ ಅವುಗಳ ಹೃದಯದಲ್ಲಿ ನೆಲೆಸಿದ್ದಾನೆ.

**ಚಂದ್ರಕಾಂತೇ ಯಥಾ ತೋಯಮ್**
**ಸೂರ್ಯಕಾಂತೇ ಯಥಾಽನಲಃ ।**
**ಬೀಜೇ ಯಥಾಽಂಕುರಃ ಸಿದ್ಧಃ**
**ತಥಾಽತ್ಮನಿ ಶಿವಃ ಸ್ಥಿತಃ ॥ 5–36**

ಚಂದ್ರಕಾಂತ ಶಿಲೆಯಲ್ಲಿ ಹೇಗೆ ನೀರು ಇರುತ್ತದೆಯೋ, ಸೂರ್ಯಕಾಂತ ಶಿಲೆಯಲ್ಲಿ ಹೇಗೆ ಅಗ್ನಿ ಇರುತ್ತದೆಯೋ, ಬೀಜದಲ್ಲಿ ಹೇಗೆ ಅಂಕುರವಿರುವುದೋ ಹಾಗೆ ಜೀವಾತ್ಮನಲ್ಲಿ ಶಿವನು ನೆಲೆಸಿದ್ದಾನೆ.

**ಆತ್ಮತ್ವಮೀಶ್ವರತ್ವಂ ಚ**
**ಬ್ರಹ್ಮಣ್ಯೇಕತ್ರ ಕಲ್ಪಿತಮ್ ।**
**ಬಿಂಬತ್ವಂ ಪ್ರತಿಬಿಂಬತ್ವಮ್**
**ಯಥಾ ಪೂಷಣಿ ಕಲ್ಪಿತಮ್ ॥ 5–37**

ಹೇಗೆ ಸೂರ್ಯನಲ್ಲಿ ಬಿಂಬತ್ವವು ಮತ್ತು ಪ್ರತಿಬಿಂಬತ್ವವು ಕಲ್ಪಿಸಲ್ಪಟ್ಟಿರುವುದೋ ಹಾಗೇ ಬ್ರಹ್ಮನಲ್ಲಿ ಆತ್ಮತ್ವ (ಜೀವಾತ್ಮ)ವು ಮತ್ತು ಈಶ್ವರತ್ವವು ಕಲ್ಪಿಸಲ್ಪಟ್ಟಿದೆ.

**ಗುಣತ್ರಯವಿಭೇದೇನ**
**ಪರತತ್ತ್ವೇ ಚಿದಾತ್ಮನಿ ।**
**ಭೋಕ್ತೃತ್ವಂ ಚೈವ ಭೋಜ್ಯತ್ವಮ್**

**ಪ್ರೇರಕತ್ವಂ ಚ ಕಲ್ಪಿತಮ್ ॥ 5–38**

ಪರತತ್ತ್ವವಾದ ಚಿದ್ರೂಪವಾದ ಶುದ್ಧ ಚೈತನ್ಯದಲ್ಲಿ ಸತ್ವಾದಿ ಗುಣತ್ರಯಗಳ ಭೇದದಿಂದ ಭೋಕ್ತೃತ್ವ, ಭೋಜ್ಯತ್ವ ಮತ್ತು ಪ್ರೇರಕತ್ವಗಳು ಕಲ್ಪಿಸಲ್ಪಟ್ಟಿವೆ.

**ಗುಣತ್ರಯಾತ್ಮಿಕಾ ಶಕ್ತಿಃ**
**ಬ್ರಹ್ಮನಿಷ್ಠಾ ಸನಾತನೀ ।**
**ತದ್ವೈಷಮ್ಯಾತ್ ಸಮುತ್ಪನ್ನಾ**
**ತಸ್ಮಿನ್ ವಸ್ತುತ್ರಯಾಭಿಧಾ ॥ 5–39**

ಪರಬ್ರಹ್ಮದಲ್ಲಿ ಸನಾತನವಾಗಿರುವ (ಯಾವಾಗಲೂ ಇರುವ) ತ್ರಿಗುಣಾತ್ಮಕ ಶಕ್ತಿಯು ತನ್ನಲ್ಲಿಯ ಸತ್ವಾದಿ ಗುಣಗಳ ವೈಷಮ್ಯದಿಂದ (ತರತಮ ಭಾವದಿಂದ) ಆ ಪರಬ್ರಹ್ಮದಲ್ಲಿ ಮೂರು ವಸ್ತುಗಳಾಗಿ ಪರಿಣಮಿಸುತ್ತದೆ.

**ಕಿಂಚಿತ್ಸತ್ತ್ವರಜೋರೂಪಮ್**
**ಭೋಕ್ತೃಸಂಜ್ಞಕಮುಚ್ಯತೇ ।**
**ಅತ್ಯಂತತಾಮಸೋಪಾಧಿ–**
**ರ್ಭೋಜ್ಯಮಿತ್ಯಭಿಧೀಯತೇ ।**
**ಪರತತ್ತ್ವಮಯೋಪಾಧಿಃ**
**ಬ್ರಹ್ಮಚೈತನ್ಯಮೀಶ್ವರಃ॥ 5–40**

ಕಿಂಚಿತ್ (ಸ್ವಲ್ಪ) ಸತ್ವಗುಣ ಮತ್ತು ಸ್ವಲ್ಪ ರಜೋಗುಣಗಳಿಂದ ಉತ್ಪನ್ನವಾದ ರೂಪವು ಭೋಕ್ತೃವೆಂಬ ಹೆಸರಿನಿಂದ ಹೇಳಲ್ಪಡುತ್ತದೆ. ಅತ್ಯಂತ ತಮೋಗುಣ ಉಪಾಧಿಯಿಂದ ಭೋಜ್ಯವೆಂಬುದಾಗಿ ಹೇಳಲ್ಪಡುತ್ತದೆ. ಶುದ್ಧ ಸತ್ವಗುಣದ ಉಪಾಧಿಯಿಂದ ಆ ಬ್ರಹ್ಮಚೈತನ್ಯವೇ ಈಶ್ವರನೆಂದು ಕರೆಯಿಸಿಕೊಳ್ಳುತ್ತದೆ.

**ಭೋಕ್ತಾ ಭೋಜ್ಯಂ ಪ್ರೇರಯಿತಾ**
**ವಸ್ತುತ್ರಯಮಿದಂ ಸ್ಮೃತಮ್ ।**
**ಅಖಂಡೇ ಬ್ರಹ್ಮಚೈತನ್ಯೇ**
**ಕಲ್ಪಿತಂ ಗುಣಭೇದತಃ ॥ 5–41**

ಅಖಂಡವಾದ ಬ್ರಹ್ಮಚೈತನ್ಯದಲ್ಲಿ ಸತ್ವಾದಿ ಗುಣ ಭೇದದಿಂದ ಭೋಕ್ತಾ (ಜೀವ), ಭೋಜ್ಯ (ವಿಷಯ) ಮತ್ತು ಪ್ರೇರಯಿತಾ (ಪ್ರೇರಕನಾದ ಈಶ್ವರ) ಎಂಬ ವಸ್ತುತ್ರಯಗಳು ಕಲ್ಪಿಸಲ್ಪಟ್ಟಿದೆ.

**ಅತ್ರ ಪ್ರೇರಯಿತಾ ಶಂಭುಃ**
**ಶುದ್ಧೋಪಾಧಿರ್ಮಹೇಶ್ವರಃ ।**
**ಸಮ್ಮಿಶ್ರೋಪಾಧಯಃ ಸರ್ವೇ**
**ಭೋಕ್ತಾರಃ ಪಶವಃ ಸ್ಮೃತಾಃ ॥ 5–42**

ಇಲ್ಲಿ ಪ್ರೇರಕನಾದ ಶಂಭುವು ಶುದ್ಧ ಉಪಾಧಿಯಿಂದ ಕೂಡಿದವನಾಗಿ ಮಹೇಶ್ವರನೆಂದು ಕರೆಯಲ್ಪಡುತ್ತಾನೆ. ಮಿಶ್ರ ಉಪಾಧಿಯುಳ್ಳವರಾದ ಮತ್ತು ಭೋಕ್ತೃಗಳಾದ ಎಲ್ಲ ಜೀವಿಗಳು ಪಶುಗಳೆಂದು ಕರೆಯಿಸಿಕೊಳ್ಳುತ್ತಾರೆ.

**ಭೋಜ್ಯಮವ್ಯಕ್ತಮಿತ್ಯುಕ್ತಮ್**
**ಶುದ್ಧತಾಮಸರೂಪಕಮ್ ।**
**ಸರ್ವಜ್ಞಃ ಪ್ರೇರಕಃ ಶಂಭುಃ**
**ಕಿಂಚಿಜ್‌ಜ್ಞೋ ಜೀವ ಉಚ್ಯತೇ ।**

**ಅತ್ಯಂತಗೂಢಚೈತನ್ಯಮ್**
**ಜಡಮವ್ಯಕ್ತಮುಚ್ಯತೇ ॥ 5–43**

ಶುದ್ಧ ತಮೋರೂಪವಾದ ಭೋಜ್ಯವು (ವಿಷಯವು) ಅವ್ಯಕ್ತವೆಂದು ಹೇಳಲ್ಪಡುತ್ತದೆ. ಪ್ರೇರಕನಾದ ಶಂಭುವು ಸರ್ವಜ್ಞನಾಗಿರುತ್ತಾನೆ. ಜೀವನು ಕಿಂಚಿಜ್ಞರೆಂದು ಹೇಳಿಸಿಕೊಳ್ಳುವನು. ಅತ್ಯಂತ ಗೂಢ ಚೈತನ್ಯರೂಪವಾದದ್ದು (ಭೋಜ್ಯವು) ಅವ್ಯಕ್ತವೆಂದು ಹೇಳಲಾಗಿದೆ.

**ಉಪಾಧಿಃ ಪುನರಾಖ್ಯಾತಃ**
**ಶುದ್ಧಾಶುದ್ಧವಿಭೇದತಃ ।**
**ಶುದ್ಧೋಪಾಧಿಃ ಪರಾ ಮಾಯಾ**
**ಸ್ವಾಶ್ರಯಾಽಮೋಹಕಾರಿಣೀ ॥ 5–44**

ಉಪಾಧಿಯು ಪುನಃ ಶುದ್ಧ ಮತ್ತು ಅಶುದ್ಧವೆಂಬ ಭೇದದಿಂದ (ಎರಡು ವಿಧವಾಗಿ) ಹೇಳಲ್ಪಟ್ಟಿದೆ. ಶುದ್ಧವಾದ ಉಪಾಧಿಯೇ ಪರಾ (ಮಾಹಾ)ಮಾಯೆಯು ತಾನು ಆಶ್ರಯಿಸಿರುವ ಪ್ರೇರಕನಾದ ಶಂಭುವಿನ ಮೇಲೆ ತನ್ನ ಮೋಹವನ್ನು ಬೀರುವುದಿಲ್ಲ.

**ಅಶುದ್ಧೋಪಾಧಿರಪ್ಯೇವಮ್**
**ಅವಿದ್ಯಾಶ್ರಯಮೋಹಿನೀ ।**
**ಅವಿದ್ಯಾಶಕ್ತಿಭೇದೇನ**
**ಜೀವಾಃ ಬಹುವಿಧಾಃ ಸ್ಮೃತಾಃ ॥ 5–45**

ಇದೇ ಪ್ರಕಾರ ಅಶುದ್ಧೋಪಾಧಿಯಾದ ಅವಿದ್ಯೆಯು ತಾನು ಆಶ್ರಯಿಸಿರುವ ಜೀವಿಯ ಮೇಲೆ ತನ್ನ ಮೋಹವನ್ನು ಬೀರುತ್ತದೆ. ಈ ಅವಿದ್ಯಾಶಕ್ತಿಯ ಭೇದದಿಂದ ಜೀವಿಗಳು ಅನೇಕ ವಿಧವಾಗಿ ಹೇಳಲ್ಪಟ್ಟಿದ್ದಾರೆ.

**ಮಾಯಾಶಕ್ತಿವಶಾದೀಶೋ**
**ನಾನಾಮೂರ್ತಿಧರಃ ಪ್ರಭುಃ ।**
**ಸರ್ವಜ್ಞಃ ಸರ್ವಕರ್ತಾ ಚ**
**ನಿತ್ಯಮುಕ್ತೋ ಮಹೇಶ್ವರಃ ॥ 5–46**

ಸರ್ವ ಸಮರ್ಥನಾಗಿರುವಂತಹ ಈಶನು (ಈಶ್ವರನು) ಮಾಯಾಶಕ್ತಿಯ ಉಪಾಧಿಯಿಂದ ನಾನಾ ಲೀಲಾಮೂರ್ತಿ (ಸದ್ಯೋಜಾತಾದಿ ಲೀಲಾ ವಿಗ್ರಹ)ಗಳನ್ನು ಧರಿಸುತ್ತಾನೆ. ಈ ಮಹೇಶ್ವರನು ಸರ್ವಜ್ಞನು, ಸರ್ವಕರ್ತೃವು ಮತ್ತು ನಿತ್ಯಮುಕ್ತನು ಆಗಿರುತ್ತಾನೆ.

**ಕಿಂಚಿತ್ಕರ್ತಾ ಚ ಕಿಂಚಿಜ್ಞೋ**
**ಬದ್ಧೋಽನಾದಿಶರೀರವಾನ್ ।**
**ಅವಿದ್ಯಾಮೋಹಿತಾಃ ಜೀವಾಃ**
**ಬ್ರಹ್ಮೈಕ್ಯಜ್ಞಾನವರ್ಜಿತಾಃ ॥ 5–47**

ಅವಿದ್ಯಾಮೋಹಿತರಾದ ಜೀವರು ಕಿಂಚಿತ್‌ಕರ್ತರು, ಕಿಂಚಿತಜ್ಞರೂ, ಬದ್ಧರೂ, ಅನಾದಿಶರೀರವುಳ್ಳವರೂ ಮತ್ತು ಬ್ರಹ್ಮೈಕಜ್ಞಾನವರ್ಜಿತರೂ ಆಗಿರುತ್ತಾರೆ.

**ಪರಿಭ್ರಮಂತಿ ಸಂಸಾರೇ**
**ನಿಜಕರ್ಮಾನುಸಾರತಃ ।**
**ದೇವತಿರ್ಯಙ್ಮನುಷ್ಯಾದಿ–**
**ನಾನಾಯೋನಿವಿಭೇದತಃ ॥ 5–48**

(ಈ ಜೀವರು) ತಮ್ಮ ತಮ್ಮ ನಿಜಕರ್ಮಾನುಸಾರವಾಗಿ ತಿರ್ಯಕ್, ಮನುಷ್ಯ ಮತ್ತು ದೇವ ಮುಂತಾದ ನಾನಾ ಯೋನಿಗಳ ಭೇದದಿಂದ ಸಂಸಾರದಲ್ಲಿ ಪರಿಭ್ರಮಿಸುತ್ತಾರೆ.

**ಚಕ್ರನೇಮಿಕ್ರಮೇಣೈವ**
**ಭ್ರಮಂತಿ ಹಿ ಶರೀರಿಣಃ ।**
**ಜಾತ್ಯಾಯುರ್ಭೋಗವೈಷಮ್ಯ–**
**ಕಾರಣಂ ಕರ್ಮ ಕೇವಲಮ್ ॥ 5–49**

ಶರೀರಧಾರಿಗಳಾದ ಜೀವಿಗಳು ಚಕ್ರದಲ್ಲಿರುವ ಅರೆಗಳಂತೆ (ನಾನಾ ಯೋನಿಗಳಲ್ಲಿ) ತಿರುಗುತ್ತಿರುತ್ತಾರೆ. ಈ ಜೀವಿಗಳ ಜಾತಿ (ಜನ್ಮ), ಆಯುಷ್ಯ ಮತ್ತು ಭೋಗಗಳ ವೈಷಮ್ಯಕ್ಕೆ ಕೇವಲ (ಅವರವರ) ಕರ್ಮವೇ ಕಾರಣವಾಗಿರುತ್ತದೆ.

**ಏತೇಷಾಂ ದೇಹಿನಾಂ ಸಾಕ್ಷೀ**
**ಪ್ರೇರಕಃ ಪರಮೇಶ್ವರಃ ।**
**ಏತೇಷಾಂ ಭ್ರಮತಾಂ ನಿತ್ಯಮ್**
**ಕರ್ಮಯಂತ್ರನಿಯಂತ್ರಣೇ ॥ 5–50**

ಪ್ರೇರಕನಾದ ಪರಮೇಶ್ವರನು ದೇಹಧಾರಿಗಳಾದ ಜೀವಿಗಳಿಗೆ ಸಾಕ್ಷೀರೂಪವಾಗಿರುತ್ತಾನೆ. ಸಂಸಾರದಲ್ಲಿ ನಿತ್ಯವೂ ತಿರುಗುತ್ತಿರುವ ಎಲ್ಲ ಜೀವಿಗಳ ಕರ್ಮಯಂತ್ರವನ್ನು ಅವನೇ ನಿಯಂತ್ರಿಸುತ್ತಾನೆ. (ಈಶ್ವರನು ಜೀವಿಗಳ ಕರ್ಮಗಳಿಗೆ ಸಾಕ್ಷಿಯೂ ಪ್ರೇರಕ ಮತ್ತು ನಿಯಂತ್ರಕನಾಗಿದ್ದಾನೆ).

**ದೇಹಿನಾಂ ಪ್ರೇರಕಃ ಶಂಭುಃ**
**ಹಿತಮಾರ್ಗೋಪದೇಶಕಃ ।**
**ಪುನರಾವೃತ್ತಿರಹಿತ–**
**ಮೋಕ್ಷಮಾರ್ಗೋಪದೇಶಕಃ ॥ 5–51**

ದೇಹಧಾರಿಗಳಾದ ಜೀವಿಗಳಿಗೆ ಪ್ರೇರಕನಾಗಿರುವ ಶಂಭುವು ಹಿತಮಾರ್ಗೋ ಪದೇಶಕನೂ ಆಗಿದ್ದಾನೆ ಮತ್ತು
ಪುನರಾವೃತ್ತಿರಹಿತವಾದ ಮೋಕ್ಷಮಾರ್ಗದ ಉಪದೇಶಕನೂ ಆಗಿರುತ್ತಾನೆ.

**ಸ್ವಕರ್ಮಪರಿಪಾಕೇನ**
**ಪ್ರಕ್ಷೀಣಮಲವಾಸನಃ ।**
**ಶಿವಪ್ರಸಾದಾಜ್ಜೀವೋಽಯಮ್**
**ಜಾಯತೇ ಶುದ್ಧಮಾನಸಃ ॥ 5–52**

ಈ ಜೀವನು ತನ್ನ ಕರ್ಮಗಳು ಪರಿಪಾಕವಾದಾಗ, ಮಲವಾಸನೆಗಳು ಕ್ಷೀಣವಾದಾಗ ಮತ್ತು ಶಿವನ ಅನುಗ್ರಹವು ಪ್ರಾಪ್ತವಾದಾಗ ಶುದ್ಧ ಮಾನಸನಾಗುತ್ತಾನೆ.

**ಶುದ್ಧಾಂತಃಕರಣೇ ಜೀವೇ**
**ಶುದ್ಧಕರ್ಮವಿಪಾಕತಃ ।**
**ಜಾಯತೇ ಶಿವಕಾರುಣ್ಯಾತ್**
**ಪ್ರಸ್ಫುಟಾ ಭಕ್ತಿರೈಶ್ವರೀ ॥ 5–53**

ಕರ್ಮವಿಪಾಕದಿಂದ ಶುದ್ಧಾಂತಃಕರಣನಾದ ಜೀವಾತ್ಮನಲ್ಲಿ ಶಿವಕಾರುಣ್ಯದಿಂದ ಈಶ್ವರ ವಿಷಯಿಕವಾದ ಧೃಢವಾದ ಭಕ್ತಿಯು ಉಂಟಾಗುತ್ತದೆ.

**ಜಂತುರಂತ್ಯಶರೀರೋಽಸೌ**

**ಪಿಂಡಶಬ್ದಾಭಿಧೇಯಕಃ ॥ 5–54**

ಹೀಗೆ ಶುದ್ಧಾಂತಃಕರಣಿಯಾದ ಪಿಂಡಶಬ್ದ ವಾಚ್ಯನಾದ ಈ ಜೀವನು ಅಂತ್ಯಶರೀರಿ (ಚರಮದೇಹಿ)ಯೆಂದು ಕರೆಯಲ್ಪಡುತ್ತಾನೆ.

**ಇತಿ ಪಿಂಡಸ್ಥಲಂ**
*ಇಲ್ಲಿಗೆ ಪಿಂಡಸ್ಥಲವು ಮುಗಿಯಿತು.*

**2. ಅಥ ಪಿಂಡಜ್ಞಾನಸ್ಥಲಮ್**

ಈಗ ಪಿಂಡಜ್ಞಾನಸ್ಥಲವು

**(6 ಶ್ಲೋಕಗಳು)**

**ಶರೀರಾತ್ಮವಿವೇಕೇನ**
**ಪಿಂಡಜ್ಞಾನೀ ಸ ಕಥ್ಯತೇ ।**
**ಶರೀರಮೇವ ಚಾರ್ವಾಕೈಃ**
**ಆತ್ಮೇತಿ ಪರಿಕೀರ್ತ್ಯತೇ ॥ 5–55**

ಶರೀರ ಮತ್ತು ಆತ್ಮಗಳ ವಿವೇಕವನ್ನು ಪಡೆದವನು ಪಿಂಡಜ್ಞಾನಿಯೆಂದು ಹೇಳಲ್ಪಡುತ್ತಾನೆ. ಚಾರ್ವಾಕ ದರ್ಶನದವರು ಶರೀರವೇ ಆತ್ಮವೆಂದು ಹೇಳುತ್ತಾರೆ.

**ಇಂದ್ರಿಯಾಣಾಂ ತಥಾತ್ಮತ್ವಮ್**
**ಅಪರೈಃ ಪರಿಭಾಷ್ಯತೇ ।**
**ಬುದ್ಧಿತತ್ತ್ವಗತೈರ್ಬೌದ್ಧೈಃ**
**ಬುದ್ಧಿರಾತ್ಮೇತಿ ಗೀಯತೇ ॥ 5–56**

ಬೇರೆ ಕೆಲವರು ಇಂದ್ರಿಯಗಳೇ ಆತ್ಮವೆಂಬುದಾಗಿ ಪ್ರತಿಪಾದಿಸುತ್ತಾರೆ. ಬುದ್ಧಿತತ್ತ್ವವಾದಿಗಳಾದ ಬೌದ್ಧರು ಬುದ್ಧಿಯೇ ಆತ್ಮವೆಂದು ಪ್ರತಿಪಾದಿಸುತ್ತಾರೆ.

**ನೇಂದ್ರಿಯಾಣಾಂ ನ ದೇಹಸ್ಯ**
**ನ ಬುದ್ಧೇರಾತ್ಮತಾ ಭವೇತ್ ।**
**ಅಹಂಪ್ರತ್ಯಯವೇದ್ಯತ್ವಾದ್**
**ಅನುಭೂತಸ್ಮೃತೇರಪಿ ॥ 5–57**

ಆತ್ಮವು ಅಹಂ ಪ್ರತ್ಯಯಕ್ಕೆ ವೇದ್ಯವಾಗಿದೆ. ಅದೇ ರೀತಿಯಾದ ಅನುಭವ ಮತ್ತು ಸ್ಮೃತಿಗಳೂ ಸಹ ಇರುವುದರಿಂದ ಇಂದ್ರಿಯಗಳಾಗಲಿ, ದೇಹಗಳಾಗಲಿ ಮತ್ತು ಬುದ್ಧಿಯೇ ಆಗಲಿ ಇವು ಆತ್ಮವಾಗಲಾರವು– (ಏಕೆಂದರೆ ಇವು ಅಹಂ ಪ್ರತ್ಯಯಕ್ಕೆ ವೇದ್ಯವಾಗಿದೆ. ಮಮ ಪ್ರತ್ಯಯಕ್ಕೆ ವೇದ್ಯವಾಗಿರುವುದಿಲ್ಲ. ಅಂತೆಯೇ ಇವು ಅನಾತ್ಮಗಳು).

**ಶರೀರೇಂದ್ರಿಯಬುದ್ಧಿಭ್ಯೋ**
**ವ್ಯತಿರಿಕ್ತಃ ಸನಾತನಃ ।**
**ಆತ್ಮಸ್ಥಿತಿವಿವೇಕೀ ಯಃ**
**ಪಿಂಡಜ್ಞಾನೀ ಸ ಕಥ್ಯತೇ ॥ 5–58**

ಶರೀರ, ಇಂದ್ರಿಯ ಮತ್ತು ಬುದ್ಧಿಗಳಿಗಿಂತ ಭಿನ್ನವಾಗಿರುವ ಸನಾತನವಾದ ಆತ್ಮದ ಅಸ್ತಿತ್ವವನ್ನು ವಿವೇಕದಿಂದ ಯಾರು ತಿಳಿದುಕೊಳ್ಳುವರೋ ಅವರು ಪಿಂಡಜ್ಞಾನಿಯೆಂದು ಕರೆಯಲ್ಪಡುತ್ತಾರೆ.

**ನಶ್ವರಾಣಿ ಶರೀರಾಣಿ**
**ನಾನಾರೂಪಾಣಿ ಕರ್ಮಣಾ ।**
**ಆಶ್ರಿತೋ ನಿತ್ಯ ಏವಾಸೌ**
**ಇತಿ ಜಂತೋರ್ವಿವೇಕಿತಾ ॥ 5–59**

ಶರೀರಗಳು ನಶ್ವರವಾದವುಗಳು ಮತ್ತು ಕರ್ಮದ ತಾರತಮ್ಯದಿಂದ ನಾನಾ ಪ್ರಕಾರಗಳಾಗಿರುತ್ತವೆ. ಇಂತಹ ಶರೀರದಲ್ಲಿರುವ ಆತ್ಮವು ನಿತ್ಯವಾದುದು ಎಂಬ ತಿಳುವಳಿಕೆಯೇ ಜೀವಿಯ ವಿವೇಕವಾಗಿದೆ.

**ಶರೀರಾತ್ ಪೃಥಗಾತ್ಮಾನಮ್**
**ಆತ್ಮಭ್ಯಃ ಪೃಥಗೀಶ್ವರಮ್ ।**
**ಪ್ರೇರಕಂ ಯೋ ವಿಜಾನಾತಿ**
**ಪಿಂಡಜ್ಞಾನೀತಿ ಕಥ್ಯತೇ ॥ 5–60**

ಶರೀರಕ್ಕಿಂತಲೂ ಆತ್ಮವು ಭಿನ್ನವಾದುದು. ಆತ್ಮಕ್ಕಿಂತಲೂ (ಜೀವಾತ್ಮ ರಿಗಿಂತಲೂ) ಈಶ್ವರನು ಭಿನ್ನನಾಗಿದ್ದಾನೆ ಮತ್ತು ಪ್ರೇರಕನಾಗಿದ್ದಾನೆ ಎಂಬುದಾಗಿ ತಿಳಿದವನು ಪಿಂಡಜ್ಞಾನಿ ಎಂದು ಕರೆಯಲ್ಪಡುತ್ತಾನೆ.

**ಇತಿ ಪಿಂಡಜ್ಞಾನಸ್ಥಲಂ** *ಇಲ್ಲಿಗೆ ಪಿಂಡಜ್ಞಾನಸ್ಥಲವು ಮುಗಿಯಿತು.*

### 3. ಅಥ ಸಂಸಾರಹೇಯಸ್ಥಲಮ್

ಈಗ ಸಂಸಾರಹೇಯಸ್ಥಲವು

**(17 ಶ್ಲೋಕಗಳು)**

**ನಿರಸ್ತಹೃತ್ಕಲಂಕಸ್ಯ**
**ನಿತ್ಯಾನಿತ್ಯವಿವೇಕಿನಃ ।**
**ಸಂಸಾರಹೇಯತಾಬುದ್ಧಿಃ**
**ಜಾಯತೇ ವಾಸನಾಬಲಾತ್ ॥ 5–61**

ಹೃದಯದ ಕಲಂಕವನ್ನು ಕಳೆದುಕೊಂಡು ನಿತ್ಯಾನಿತ್ಯ ವಿವೇಕಿಯಾದ ಜೀವಿಗೆ ಶುಭವಾಸನಾ ಬಲದಿಂದ ಸಂಸಾರದಲ್ಲಿ ಹೇಯಬುದ್ಧಿಯು ಉಂಟಾಗುತ್ತದೆ.

**ಐಹಿಕೇ ಕ್ಷಣಿಕೇ ಸೌಖ್ಯೇ**
**ಪುತ್ರದಾರಾದಿಸಂಭವೇ ।**
**ಕ್ಷಯಿತ್ವಾದಿಯುತೇ ಸ್ವರ್ಗೇ**
**ಕಸ್ಯ ವಾಂಛಾ ವಿವೇಕಿನಃ ॥ 5–62**

ಪತ್ನಿಪುತ್ರಾದಿಗಳ ಸಂಗದಿಂದುಂಟಾಗುವ ಐಹಿಕವಾದ ಮತ್ತು ಕ್ಷಣಿಕವಾದ ಸುಖದಲ್ಲಿ ಮತ್ತು ಕ್ಷಯಪತನಾದಿ ದೋಷಗಳಿಂದ ಕೂಡಿದ ಸ್ವರ್ಗಸುಖದಲ್ಲಿ ಯಾವ ವಿವೇಕಿಗೆ ಇಚ್ಛೆಯುಂಟಾದೀತು?

**ಜಾತಸ್ಯ ಹಿ ಧ್ರುವೋ ಮೃತ್ಯುಃ**
**ಧ್ರುವಂ ಜನ್ಮ ಮೃತಸ್ಯ ಚ ।**
**ಜಂತುರ್ಮರಣಜನ್ಮಾಭ್ಯಾಮ್**
**ಪರಿಭ್ರಮತಿ ಚಕ್ರವತ್ ॥ 5–63**

ಹುಟ್ಟಿದವನಿಗೆ ಮರಣವೆಂಬುದು ನಿಯತವಾದುದು. ಮೃತವಾದವನಿಗೆ ಜನನವೂ ನಿಶ್ಚಿತವು. ಆದ್ದರಿಂದ ಜೀವಾತ್ಮನು (ಜಂತು) ಈ ಹುಟ್ಟು ಸಾವುಗಳ ಅಧೀನನಾಗಿ ಚಕ್ರದಂತೆ ಸುತ್ತುತ್ತಿರುವನು (ಪರಿಭ್ರಮಿಸುತ್ತಿರುವನು).

**ಮತ್ಸ್ಯಕೂರ್ಮವರಾಹಾಂಗೈಃ**
**ನೃಸಿಂಹಮನುಜಾದಿಭಿಃ ।**
**ಜಾತೇನ ನಿಧನಂ ಪ್ರಾಪ್ತಮ್**
**ವಿಷ್ಣುನಾಪಿ ಮಹಾತ್ಮನಾ ॥ 5–64**

ಮಹಾಮಹಿಮನಾದ ವಿಷ್ಣುಪರಮಾತ್ಮನೂ ಸಹ ಮತ್ಸ್ಯ, ಕೂರ್ಮ, ವರಾಹ, ನೃಸಿಂಹ, ಮನುಷ್ಯ ಮುಂತಾದ ಜನ್ಮಗಳಲ್ಲಿ (ಅವತಾರಗಳಲ್ಲಿ) ಮರಣವನ್ನು ಹೊಂದಿದನು.

**ಭೂತ್ವಾ ಕರ್ಮವಶಾಜ್ಜಂತುಃ**
**ಬ್ರಾಹ್ಮಣಾದಿಷು ಜಾತಿಷು ।**
**ತಾಪತ್ರಯಮಹಾವಹ್ನಿ–**
**ಸಂತಾಪಾದ್ ದಹ್ಯತೇ ಭೃಶಮ್ ॥ 5–65**

ಜೀವಾತ್ಮನು (ಜಂತು) ತನ್ನ ಅನಾದಿಕರ್ಮದ ದೆಸೆಯಿಂದ, ಬ್ರಾಹ್ಮಣ–ಕ್ಷತ್ರಿಯಾದಿ ನಾನಾ ಜಾತಿಗಳಲ್ಲಿ ಜನ್ಮ ತಾಳಿ (ಆಧ್ಯಾತ್ಮಿಕಾದಿ) ತಾಪತ್ರಯಗಳೆಂಬ ಬೆಂಕಿಯ ಬೇಗೆಯಲ್ಲಿ ಬಲವಾಗಿ ಬೆಂದು ಹೋಗುವನು (ಈ ಶ್ಲೋಕದಲ್ಲಿ ಲೋಕಾರೂಢಿಯಲ್ಲಿರುವ ಬ್ರಾಹ್ಮಣಾದಿ ವರ್ಣಗಳಲ್ಲಿ ಜನ್ಮ ತಾಳಲು ಅವರವರ ಪೂರ್ವಕರ್ಮಗಳೇ ಕಾರಣ ಎಂದು ಹೇಳಲಾಗಿದೆ. ಯಾರು ಯಾವುದೇ ವರ್ಣದವರಾಗಿದ್ದರೂ ಅವರೆಲ್ಲರೂ ಈ ಲಿಂಗಧಾರಣೆ, ಲಿಂಗಪೂಜೆಯ ಮುಖಾಂತರ ಲಿಂಗಸ್ವರೂಪರೇ ಆಗುವರೆಂಬ ವಿಚಾರವನ್ನು ಮುಂದಿನ ಪರಿಚ್ಛೇದಗಳಲ್ಲಿ ಶ್ರೀ ಶಿವಯೋಗಿ ಶಿವಾಚಾರ್ಯರು ನಿರೂಪಿಸಿದ್ದಾರೆ. ಆದ್ದರಿಂದ ಶ್ರೀ ಸಿದ್ಧಾಂತ ಶಿಖಾಮಣಿ ಗ್ರಂಥವು ವರ್ಣಾಶ್ರಮ ಧರ್ಮವನ್ನು ಪ್ರತಿಪಾದಿಸಿಲ್ಲ).

**ಕರ್ಮಮೂಲೇನ ದುಃಖೇನ**
**ಪೀಡ್ಯಮಾನಸ್ಯ ದೇಹಿನಃ ।**
**ಆಧ್ಯಾತ್ಮಿಕಾದಿನಾ ನಿತ್ಯಮ್**
**ಕುತ್ರ ವಿಶ್ರಾಂತಿರಿಷ್ಯತೇ ॥ 5–66**

ಕರ್ಮದ ಮೂಲಕವಾಗಿ ಪ್ರಾಪ್ತವಾಗುವ ಆಧ್ಯಾತ್ಮಿಕಾದಿ (ಅಧ್ಯಾತ್ಮಿಕ, ಆಧಿಭೌತಿಕ ಮತ್ತು ಆಧಿದೈವಿಕಗಳೆಂಬ) ಮೂರು ಪ್ರಕಾರದ ದುಃಖದಿಂದ ನಿತ್ಯವೂ ಪೀಡಿಸಲ್ಪಡುತ್ತಿರುವ ಜೀವಾತ್ಮರಿಗೆ ಎಲ್ಲಿ ತಾನೆ ವಿಶ್ರಾಂತಿಯನ್ನು ಇಚ್ಛಿಸಲು ಸಾಧ್ಯ

**ಆಧ್ಯಾತ್ಮಿಕಂ ತು ಪ್ರಥಮಮ್**
**ದ್ವಿತೀಯಂ ಚಾಧಿಭೌತಿಕಮ್ ।**
**ಆಧಿದೈವಿಕಮನ್ಯಚ್ಚ**
**ದುಃಖತ್ರಯಮಿದಂ ಸ್ಮೃತಮ್ ॥ 5–67**

ಮೊದಲನೆಯದು ಆಧ್ಯಾತ್ಮಿಕ ದುಃಖ. ಎರಡನೆಯದು ಆಧಿಭೌತಿಕ ದುಃಖ ಮತ್ತೊಂದು ಆಧಿದೈವಿಕ ದುಃಖ. ಹೀಗೆ ಇವು ಮೂರೂ ದುಃಖತ್ರಯಗಳೆಂದು ಹೇಳಲ್ಪಟ್ಟಿವೆ.

**ಆಧ್ಯಾತ್ಮಿಕಂ ದ್ವಿಧಾ ಪ್ರೋಕ್ತಮ್**
**ಬಾಹ್ಯಾಭ್ಯಂತರಭೇದತಃ ।**
**ವಾತಪಿತ್ತಾದಿಜಂ ದುಃಖಮ್**
**ಬಾಹ್ಯಮಾಧ್ಯಾತ್ಮಿಕಂ ಮತಮ್ ॥ 5–68**

ಆಧ್ಯಾತ್ಮಿಕ ದುಃಖವು ಬಾಹ್ಯ ಮತ್ತು ಅಭ್ಯಂತರವೆಂದು ಎರಡು ವಿಧವಾಗಿ ಹೇಳಲ್ಪಟ್ಟಿದೆ. ವಾತ ಪಿತ್ತಾದಿಗಳಿಂದ ಉತ್ಪನ್ನವಾದ (ರೋಗಗಳಿಂದುಂಟಾದವು) ದುಃಖವು ಬಾಹ್ಯ ಆಧ್ಯಾತ್ಮಿಕ ದುಃಖವೆಂದು ಸಮ್ಮತಿಸಲ್ಪಟ್ಟಿದೆ.

**ರಾಗದ್ವೇಷಾದಿಸಂಪನ್ನಮ್**
**ಆಂತರಂ ಪರಿಕೀರ್ತ್ಯತೇ ।**
**ಆಧಿಭೌತಿಕಮೇತದ್ಧಿ**
**ದುಃಖಂ ರಾಜಾದಿಭೂತಜಮ್॥ 5–69**

ರಾಗದ್ವೇಷಾದಿಗಳಿಂದ ಉಂಟಾಗುವ ದುಃಖವು ಅಭ್ಯಂತರ ಆಧ್ಯಾತ್ಮಿಕ ದುಃಖವೆಂದು ಕೀರ್ತಿಸಲ್ಪಡುತ್ತದೆ. ರಾಜನಿಂದ ಮತ್ತು ಕ್ರೂರಪ್ರಾಣಿಗಳಿಂದ ಉಂಟಾಗುವ ದುಃಖ ಆಧಿಭೌತಿಕ ದುಃಖವು.

**ಆಧಿದೈವಿಕಮಾಖ್ಯಾತಮ್**
**ಗ್ರಹಯಕ್ಷಾದಿಸಂಭವಮ್ ।**
**ದುಃಖೈರೇತೈರುಪೇತಸ್ಯ**
**ಕರ್ಮಬದ್ಧಸ್ಯ ದೇಹಿನಃ ।**
**ಸ್ವರ್ಗೇ ವಾ ಯದಿ ವಾ ಭೂಮೌ**
**ಸುಖಲೇಶೋ ನ ವಿದ್ಯತೇ ॥ 5–70**

ನವಗ್ರಹ ಮತ್ತು ಭೂತಭೇತಾಳಾದಿಗಳಿಂದ ಉತ್ಪನ್ನವಾಗುವ ದುಃಖ ಆಧಿದೈವಿಕ ದುಃಖವೆಂದು ಹೇಳಲ್ಪಡುತ್ತದೆ. ಈ ದುಃಖಗಳಿಂದ ಕೂಡಿರುವ ಮತ್ತು ಕರ್ಮ(ಪುಣ್ಯ, ಪಾಪ)ದಿಂದ ಬದ್ಧಿತನಾದ ಜೀವಿಗೆ ಸ್ವರ್ಗದಲ್ಲಿಯೇ ಆಗಲಿ ಅಥವಾ ಭೂಲೋಕದಲ್ಲಿಯೇ ಆಗಲಿ ಕಿಂಚಿತ್ತೂ ಸುಖವು ಇರುವುದಿಲ್ಲ.

**ತಟಿತ್ಸು ವೀಚಿಮಾಲಾಸು**
**ಪ್ರದೀಪಸ್ಯ ಪ್ರಭಾಸು ಚ ।**
**ಸಂಪತ್ಸು ಕರ್ಮಮೂಲಾಸು**
**ಕಸ್ಯ ವಾ ಸ್ಥಿರತಾಮತಿಃ ॥ 5–71**

ಕೋಲ್ಮಿಂಚುಗಳಂತೆ, ನೀರಿನ ತೆರೆಗಳ ಸಾಲುಗಳಂತೆ ಮತ್ತು ದೀಪದ ಜ್ವಾಲೆಗಳಂತೆ ಅಸ್ಥಿರಗಳಾದ ಕರ್ಮಮೂಲದ ಸಂಪತ್ತುಗಳಲ್ಲಿ ಯಾರಿಗೆ ತಾನೇ ಅವುಗಳ ಬಗ್ಗೆ ಸ್ಥಿರಬುದ್ಧಿಯುಂಟಾದೀತು?

**ಮಲಕೋಶೇ ಶರೀರೇಽಸ್ಮಿನ್**
**ಮಹಾದುಃಖವಿವರ್ಧನೇ ।**
**ತಟಿದಂಕುರಸಂಕಾಶೇ**
**ಕೋ ವಾ ರುಚ್ಯೇತ ಪಂಡಿತಃ ॥ 5–72**

ಮಲಮೂತ್ರಗಳ ಕೋಶವಾಗಿರುವ, ಮಹಾದುಃಖವನ್ನು ವರ್ಧಿಸುವ, ಕೋಲ್ಮಿಂಚಿನಂತೆ ಕ್ಷಣಕಾಲ ತೋರಿ ಇಲ್ಲದಂತಾಗುವ ಈ ಶರೀರದಲ್ಲಿ ಯಾವ ಪಂಡಿತನು ತಾನೇ ಪ್ರೀತಿಪಡುವನು?

**ನಿತ್ಯಾನಂದಚಿದಾಕಾರಮ್**
**ಆತ್ಮತತ್ತ್ವಂ ವಿಹಾಯ ಕಃ ।**
**ವಿವೇಕೀ ರಮತೇ ದೇಹೇ**
**ನಶ್ವರೇ ದುಃಖಭಾಜನೇ ॥ 5–73**

ನಿತ್ಯವೂ, ಆನಂದರೂಪನೂ, ಚಿದಾಕಾರಸ್ವರೂಪನೂ ಆದ ಆತ್ಮತತ್ತ್ವವನ್ನು ಬಿಟ್ಟು ಯಾವ ವಿವೇಕಿಯು ದುಃಖಾಶ್ರಯವಾದ ಮತ್ತು ನಶ್ವರವಾದ ದೇಹದಲ್ಲಿ ರಮಿಸಬಲ್ಲನು.

**ವಿವೇಕೀ ಶುದ್ಧಹೃದಯೋ**
**ನಿಶ್ಚಿತಾತ್ಮಸುಖೋದಯಃ ।**
**ದುಃಖಹೇತೌ ಶರೀರೇಽಸ್ಮಿನ್**
**ಕಲತ್ರೇ ಚ ಸುತೇಷು ಚ ॥ 5–74**
**ಸುಹೃತ್ಸು ಬಂಧುವರ್ಗೇಷು**
**ಧನೇಷು ಕುಲಪದ್ಧತೌ ।**
**ಅನಿತ್ಯಬುದ್ಧ್ಯಾ ಸರ್ವತ್ರ**

**ವೈರಾಗ್ಯಂ ಪರಮಶ್ನುತೇ ॥ 5–75**

ಶುದ್ಧ ಹೃದಯವುಳ್ಳವನು ಆತ್ಮಸುಖದಲ್ಲಿ ನಿಶ್ಚಯವನ್ನು ತಾಳಿದ ವಿವೇಕಿಯು ದುಃಖಕ್ಕೆ ಕಾರಣೀಭೂತವಾದ ಈ ಶರೀರದಲ್ಲಿ, ಹೆಂಡತಿಯಲ್ಲಿ, ಮಕ್ಕಳಲ್ಲಿ, ಸ್ನೇಹಿತರಲ್ಲಿ, ಬಂಧುಬಾಂಧವರಲ್ಲಿ, ಧನಕನಕಾದಿಗಳಲ್ಲಿ ಮತ್ತು ತನ್ನ ಕುಲಪದ್ಧತಿಯಲ್ಲಿ ಅನಿತ್ಯ ಬುದ್ಧಿಯುಳ್ಳವನಾಗಿ ಈ ಎಲ್ಲವುಗಳಲ್ಲಿ ವೈರಾಗ್ಯವನ್ನು ಹೊಂದುವನು.

**ವಿವೇಕಿನೋ ವಿರಕ್ತಸ್ಯ**
**ವಿಷಯೇಷ್ವಾತ್ಮರಾಗಿಣಃ ।**
**ಸಂಸಾರದುಃಖವಿಚ್ಛೇದ–**
**ಹೇತೌ ಬುದ್ಧಿಃ ಪ್ರವರ್ತತೇ ॥ 5–76**

ವಿಷಯ (ಶಬ್ದ, ಸ್ಪರ್ಶ, ರೂಪ, ರಸ, ಗಂಧ)ಗಳಲ್ಲಿ ವೈರಾಗ್ಯವನ್ನು ಹೊಂದಿದ, ತನ್ನಾತ್ಮನಲ್ಲಿ ಅನುಗ್ರಹವುಳ್ಳವನಾದ ವಿವೇಕಿಯ ಬುದ್ಧಿಯು ಸಂಸಾರದುಃಖವನ್ನು ಕತ್ತರಿಸಿ ಹಾಕುವ ಉಪಾಯವನ್ನು ಹುಡುಕುವುದರಲ್ಲಿ ಪ್ರವೃತ್ತವಾಗುತ್ತದೆ.

**ನಿತ್ಯಾನಿತ್ಯವಿವೇಕಿನಃ ಸುಕೃತಿನಃ ಶುದ್ಧಾಶಯಸ್ಯಾತ್ಮನೋ**
**ಬ್ರಹ್ಮೋಪೇಂದ್ರಮಹೇಂದ್ರಮುಖ್ಯವಿಭವೇಷ್ವಸ್ಥಾಯಿತಾಂ ಪಶ್ಯತಃ ।**
**ನಿತ್ಯಾನಂದಪದೇ ನಿರಾಕೃತಜಗತ್ಸಂಸಾರದುಃಖೋದಯೇ ಸಾಂಬೇ ಚಂದ್ರಶಿರೋಮಣೌ**
**ಸಮುದಯೇದ್ಭಕ್ತಿರ್ಭವಧ್ವಂಸಿನೀ॥ 5–77**
**– ಶಾರ್ದೂಲವಿಕ್ರೀಡಿತಂ ವೃತ್ತಮ್**

ಸತ್ಕರ್ಮ ಪರಾಯಣನೂ, ನಿರ್ಮಲಾಂತಃಕರಣನೂ, ನಿತ್ಯಾನಿತ್ಯ ವಿವೇಕಿಯೂ, ಬ್ರಹ್ಮ, ವಿಷ್ಣು, ಮಹೇಂದ್ರ ಮೊದಲಾದ ದೇವತೆಗಳ ವೈಭವಗಳನ್ನು
ಸಹ ಕ್ಷಣಿಕವಾಗಿ ಕಾಣುವ ಜೀವಾತ್ಮನಿಗೆ, ನಿತ್ಯಾನಂದಕ್ಕೆ ಸ್ಥಾನವಾಗಿರುವ ಸಂಸಾರ ದುಃಖವನ್ನು ನಿರಾಕರಿಸಿದ ಚಂದ್ರಧರನಾದ ಸಾಂಬನಲ್ಲಿ (ಉಮಾಸಹಿತ ಶಿವನಲ್ಲಿ) ಭವಧ್ವಂಸಿಯಾದ ಭಕ್ತಿಯುಂಟಾಗುವುದು.

**ಇತಿ ಸಂಸಾರಹೇಯಸ್ಥಲಂ** *ಇಲ್ಲಿಗೆ ಸಂಸಾರಹೇಯಸ್ಥಲವು ಮುಗಿಯಿತು.*

**ಓಂ ತತ್ಸತ್ ಇತಿ**
**ಶ್ರೀ ಶಿವಗೀತೇಷು ಸಿದ್ಧಾಂತಾಗಮೇಷು ಶಿವಾದ್ವೈತವಿದ್ಯಾಯಾಂ ಶಿವಯೋಗಶಾಸ್ತ್ರೇ ಶ್ರೀರೇಣುಕಾಗಸ್ತ್ಯಸಂವಾದೇ ವೀರಶೈವಧರ್ಮನಿರ್ಣಯೇ ಶ್ರೀಶಿವಯೋಗಿ ಶಿವಾಚಾರ್ಯವಿರಚಿತೇ ಶ್ರೀಸಿದ್ಧಾಂತಶಿಖಾಮಣೌ ಭಕ್ತಸ್ಥಲೇ ಪಿಂಡಾದಿಸ್ಥಲತ್ರಯಪ್ರಸಂಗೋ ನಾಮ ಪಂಚಮಃ ಪರಿಚ್ಛೇದಃ ॥**

*ಓಂ ತತ್ಸತ್ ಇಲ್ಲಿಗೆ ಶ್ರೀ ಶಿವನಿಂದ ಉಪದೇಶಿಸಲ್ಪಟ್ಟ ಶ್ರೀ ಸಿದ್ಧಾಂತಾಗಮ ಗಳಲ್ಲಿಯ ಶಿವಾದ್ವೈತವಿದ್ಯಾರೂಪವೂ, ಶಿವಯೋಗಶಾಸ್ತ್ರವೂ,*
*ಶ್ರೀ ರೇಣುಕಾಗಸ್ತ್ಯಸಂವಾದ ರೂಪವೂ ಶ್ರೀ ವೀರಶೈವಧರ್ಮ ನಿರ್ಣಯವೂ, ಶ್ರೀ ಶಿವಯೋಗಿ ಶಿವಾಚಾರ್ಯವಿರಚಿತವೂ ಆದ ಶ್ರೀಸಿದ್ಧಾಂತಶಿಖಾಮಣಿಯಲ್ಲಿ ಭಕ್ತಸ್ಥಲದಲ್ಲಿಯ ಪಿಂಡಾದಿ ಮೂರುಸ್ಥಲಗಳ ಪ್ರಸಂಗವೆಂಬ ಹೆಸರಿನ ಐದನೆಯ ಪರಿಚ್ಛೇದವು ಮುಗಿದುದು.*

**ಷಷ್ಠಃ ಪರಿಚ್ಛೇದಃ**
ಆರನೆಯ ಪರಿಚ್ಛೇದವು

**ಗುರುಕಾರುಣ್ಯಲಿಂಗಧಾರಣಪ್ರಸಂಗಃ**
ಗುರುಕಾರುಣ್ಯಲಿಂಗಧಾರಣ ಪ್ರಸಂಗವು
**(63 ಶ್ಲೋಕಗಳು)**

**4. ಅಥ ಗುರುಕಾರುಣ್ಯಸ್ಥಲಮ್**
ಈಗ ಗುರುಕಾರುಣ್ಯ ಸ್ಥಲವು
**(21 ಶ್ಲೋಕಗಳು)**

**ತತೋ ವಿವೇಕಸಂಪನ್ನೋ**
**ವಿರಾಗೀ ಶುದ್ಧಮಾನಸಃ ।**
**ಜಿಜ್ಞಾಸುಃ ಸರ್ವಸಂಸಾರ–**
**ದೋಷಧ್ವಂಸಕರಂ ಶಿವಮ್ ॥ 6–1**

ಪರಿಶುದ್ಧವಾದ ಮನಸ್ಸುಳ್ಳ (ಪಿಂಡಶಬ್ದ ವಾಚ್ಯನಾದ) ವಿವೇಕ ಸಂಪನ್ನನಾದ (ಪಿಂಡಜ್ಞಾನಿಯಾದ) ವಿರಾಗಿಯು (ಸಂಸಾರಹೇಯಸ್ಥಲಿಯು) ಬಳಿಕ ಸಂಸಾರದ ಎಲ್ಲ ದೋಷಗಳನ್ನು ಧ್ವಂಸ ಮಾಡುವ ಶಿವನ ಜಿಜ್ಞಾಸೆಯುಳ್ಳವನಾಗಿ (ಶಿವನನ್ನು ತಿಳಿದುಕೊಳ್ಳುವ ಉತ್ಕಟ ಇಚ್ಛೆಯುಳ್ಳವನಾಗಿ) ಶ್ರೀ ಗುರುವಿನ ಕಡೆಗೆ ಹೋಗುವನು.

**ಉಪೈತಿ ಲೋಕವಿಖ್ಯಾತಮ್**
**ಲೋಭಮೋಹವಿವರ್ಜಿತಮ್ ।**
**ಆತ್ಮತತ್ತ್ವವಿಚಾರಜ್ಞಮ್**
**ವಿಮುಕ್ತವಿಷಯಭ್ರಮಮ್ ॥6–2**

ಲೋಕವಿಖ್ಯಾತನಾದ, ಲೋಭ ಮೋಹವರ್ಜಿತನಾದ, ಆತ್ಮತತ್ತ್ವ ವಿಚಾರವನ್ನು ಬಲ್ಲ, ವಿಷಯಭ್ರಮೆಯಿಂದ ವಿಮುಕ್ತನಾದ–

**ಶಿವಸಿದ್ಧಾಂತತತ್ತ್ವಜ್ಞಮ್**
**ಛಿನ್ನಸಂದೇಹವಿಭ್ರಮಮ್ ।**
**ಸರ್ವತಂತ್ರಪ್ರಯೋಗಜ್ಞಮ್**
**ಧಾರ್ಮಿಕಂ ಸತ್ಯವಾದಿನಮ್ ॥ 6–3**

ಶಿವ ಸಿದ್ಧಾಂತವನ್ನು ಬಲ್ಲ, ಸಂದೇಹ ಮತ್ತು ವಿಭ್ರಮೆಗಳನ್ನು ಕತ್ತರಿಸಿ ಹಾಕಿದ, ಸರ್ವತಂತ್ರಗಳ (ಎಲ್ಲ ಶಿವಾಗಮಗಳ) ಪ್ರಯೋಗವನ್ನು ಬಲ್ಲ, ಧರ್ಮನಿಷ್ಠನಾದ ಮತ್ತು ಸತ್ಯವಾದಿಯಾದ–

**ಕುಲಕ್ರಮಾಗತಾಚಾರಮ್**
**ಕುಮಾರ್ಗಾಚಾರವರ್ಜಿತಮ್ ।**
**ಶಿವಧ್ಯಾನಪರಂ ಶಾಂತಮ್**

**ಶಿವತತ್ತ್ವವಿವೇಕಿನಮ್ ॥ 6–4**

ಗುರುವಂಶ ಕ್ರಮದಿಂದ ಬಂದ, ಆಚಾರ (ಸದಾಚಾರ) ಸಂಪನ್ನನಾದ, ಕುತ್ಸಿತ (ದುರಾಚಾರ) ಆಚಾರಗಳಿಂದ ವರ್ಜಿತನಾದ, ಶಿವಧ್ಯಾನತತ್ಪರನಾದ, ಶಾಂತ (ಮಾತ್ಸರ್ಯರಹಿತ)ನಾದ, ಶಿವತತ್ತ್ವ ವಿವೇಕವುಳ್ಳ–

**ಭಸ್ಮೋದ್ಧೂಲನನಿಷ್ಣಾತಮ್**
**ಭಸ್ಮತತ್ತ್ವವಿವೇಕಿನಮ್ ।**
**ತ್ರಿಪುಂಡ್ರಧಾರಣೋತ್ಕಂಠಮ್**
**ಧೃತರುದ್ರಾಕ್ಷಮಾಲಿಕಮ್ ॥ 6–5**

ಭಸ್ಮೋದ್ಧೂಲನ ಕ್ರಿಯೆಯಲ್ಲಿ ನಿಷ್ಣಾತನಾದ, ಭಸ್ಮತತ್ತ್ವವನ್ನು ತಿಳಿದಿರುವ, ತ್ರಿಪುಂಡ್ರವನ್ನು ಧರಿಸುವಲ್ಲಿ ಅತ್ಯಾಸಕ್ತಿಯುಳ್ಳ, ರುದ್ರಾಕ್ಷಮಾಲೆಯನ್ನು ಧರಿಸಿದ–

**ಲಿಂಗಧಾರಣಸಂಯುಕ್ತಮ್**
**ಲಿಂಗಪೂಜಾಪರಾಯಣಮ್ ।**
**ಲಿಂಗಾಂಗಯೋಗತತ್ತ್ವಜ್ಞಮ್**
**ನಿರೂಢಾದ್ವೈತವಾಸನಮ್ ।**
**ಲಿಂಗಾಂಗಸ್ಥಲಭೇದಜ್ಞಮ್**
**ಶ್ರೀಗುರುಂ ಶಿವವಾದಿನಮ್ ॥ 6–6**

ಲಿಂಗಧಾರಣೆಯಿಂದ ಕೂಡಿದ, ಲಿಂಗಪೂಜಾ ಪರಾಯಣನಾದ, ಲಿಂಗಾಂಗಯೋಗದ ತತ್ತ್ವವನ್ನು ತಿಳಿದಿರುವ, ಶಿವಾದ್ವೈತ ಭಾವನಾನಿಷ್ಠನಾದ, ಲಿಂಗಸ್ಥಲ ಅಂಗಸ್ಥಲ ಭೇದವನ್ನು ತಿಳಿದಿರುವ, ಶಿವತತ್ತ್ವವನ್ನು ಬೋಧಿಸುವ ಶ್ರೀ (ಷಡ್ಗುಣೈಶ್ವರ್ಯ ಸಂಪನ್ನನಾದ) ಗುರುವನ್ನು (ಶಿಷ್ಯಭಾವದಿಂದ) ಆಶ್ರಯಿಸುತ್ತಾನೆ.

**ಸೇವೇತ ಪರಮಾಚಾರ್ಯಮ್**
**ಶಿಷ್ಯೋ ಭಕ್ತಿಭಯಾನ್ವಿತಃ ।**
**ಷಣ್ಮಾಸಾನ್ ವತ್ಸರಂ ವಾಽಪಿ**
**ಯಾವದೇಷ ಪ್ರಸೀದತಿ ॥ 6–7**

ಭಯಭಕ್ತಿಗಳಿಂದ ಕೂಡಿದ ಶರಣಾಗತನಾದ ಶಿಷ್ಯನು ಆರು ತಿಂಗಳವರೆವಿಗೆ ಅಥವಾ ಒಂದು ವರ್ಷದವರೆವಿಗೆ ಅಥವಾ ಅವನು (ಶ್ರೀ ಗುರುವು) ಪ್ರಸನ್ನನಾಗುವವರೆವಿಗೆ ಪರಮಾಚಾರ್ಯನ ಸೇವೆಯನ್ನು ಮಾಡಬೇಕು.

**ಪ್ರಸನ್ನಂ ಪರಮಾಚಾರ್ಯಮ್**
**ಭಕ್ತ್ಯಾ ಮುಕ್ತಿಪ್ರದರ್ಶಕಮ್ ।**
**ಪ್ರಾರ್ಥಯೇದಗ್ರತಃ ಶಿಷ್ಯಃ**
**ಪ್ರಾಂಜಲಿರ್ವಿನಯಾನ್ವಿತಃ ॥ 6–8**

ತನ್ನ ಭಕ್ತಿಯಿಂದ ಪ್ರಸನ್ನನಾದ, ಮುಕ್ತಿಮಾರ್ಗವನ್ನು ತೋರಿಸುವ ಪರಮಾಚಾರ್ಯನ ಎದುರಿಗೆ ಶಿಷ್ಯನು ಅಂಜಲಿಬದ್ಧನಾಗಿ (ಹೀಗೆ) ವಿನಯದಿಂದ ಪ್ರಾರ್ಥಿಸಬೇಕು.

**ಭೋ ಕಲ್ಯಾಣ ಮಹಾಭಾಗ**
**ಶಿವಜ್ಞಾನಮಹೋದಧೇ ।**
**ಆಚಾರ್ಯವರ್ಯ ಸಂಪ್ರಾಪ್ತಮ್**
**ರಕ್ಷ ಮಾಂ ಭವರೋಗಿಣಮ್ ॥ 6–9**

ಕಲ್ಯಾಣಸ್ವರೂಪನಾದ, ಮಹಾಭಾಗ (ಶ್ರೇಷ್ಠ)ನಾದ, ಶಿವಜ್ಞಾನ ಸಾಗರನಾದ ಹೇ ಆಚಾರ್ಯ ಶ್ರೇಷ್ಠನೇ, ನಿನ್ನ ಬಳಿಗೆ ಬಂದಿರುವ ಭವರೋಗಿಯಾದ ನನ್ನನ್ನು ರಕ್ಷಿಸು.

**ಇತಿ ಶುದ್ಧೇನ ಶಿಷ್ಯೇಣ**
**ಪ್ರಾರ್ಥಿತಃ ಪರಮೋ ಗುರುಃ ।**
**ಶಕ್ತಿಪಾತಂ ಸಮಾಲೋಕ್ಯ**
**ದೀಕ್ಷಯಾ ಯೋಜಯೇದಮುಮ್ ॥ 6–10**

ಹೀಗೆ ಶುದ್ಧನಾದ ಶಿಷ್ಯನಿಂದ ಪ್ರಾರ್ಥಿಸಲ್ಪಟ್ಟ ಪರಮಗುರುವು ಅವನಲ್ಲಿಯ (ಶಿಷ್ಯನಲ್ಲಿಯ) ಶಕ್ತಿಪಾತದ (ಶಿವಭಕ್ತಿಯ) ಲಕ್ಷಣಗಳನ್ನು ಚೆನ್ನಾಗಿ ನೋಡಿ ಅವನಿಗೆ ದೀಕ್ಷೆಯನ್ನು ಮಾಡಬೇಕು.

**ದೀಯತೇ ಚ ಶಿವಜ್ಞಾನಮ್**
**ಕ್ಷೀಯತೇ ಪಾಶಬಂಧನಮ್ ।**
**ಯಸ್ಮಾದತಃ ಸಮಾಖ್ಯಾತಾ**
**ದೀಕ್ಷೇತೀಯಂ ವಿಚಕ್ಷಣೈಃ ॥ 6–11**

ಯಾವುದರಿಂದ ಶಿವಜ್ಞಾನವು ಕೊಡಲ್ಪಡುತ್ತದೆಯೋ ಮತ್ತು ಪಾಶಬಂಧವು ಕ್ಷಯಿಸಲ್ಪಡುತ್ತದೆಯೋ ಅದಕ್ಕೆ (ಆ ಸಂಸ್ಕಾರಕ್ಕೆ) ವಿಚಕ್ಷಣರು (ಶಿವಾಗಮ ವಿಶಾರದರು) ದೀಕ್ಷೆಯೆಂದು ಕರೆಯುತ್ತಾರೆ.

**ಸಾ ದೀಕ್ಷಾ ತ್ರಿವಿಧಾ ಪ್ರೋಕ್ತಾ**
**ಶಿವಾಗಮವಿಶಾರದೈಃ ।**
**ವೇಧಾರೂಪಾ ಕ್ರಿಯಾರೂಪಾ**
**ಮಂತ್ರರೂಪಾ ಚ ತಾಪಸ ॥ 6–12**

ಹೇ ತಪಸ್ವಿಯಾದ ಅಗಸ್ತ್ಯನೇ, ಶಿವಾಗಮ ವಿಶಾರದರು ದೀಕ್ಷೆಯನ್ನು ವೇಧಾದೀಕ್ಷೆ, ಮಂತ್ರದೀಕ್ಷೆ ಮತ್ತು ಕ್ರಿಯಾದೀಕ್ಷೆ ಎಂಬುದಾಗಿ ಮೂರು ವಿಧವಾಗಿ ಹೇಳಿದ್ದಾರೆ.

**ಗುರೋರಾಲೋಕಮಾತ್ರೇಣ**
**ಹಸ್ತಮಸ್ತಕಯೋಗತಃ ।**
**ಯಃ ಶಿವತ್ತ್ವಸಮಾವೇಶೋ**
**ವೇಧಾದೀಕ್ಷೇತಿ ಸಾ ಮತಾ ॥ 6–13**

ಶ್ರೀಗುರುವಿನ ಆಲೋಕನ (ಕೃಪಾಕಟಾಕ್ಷ ವೀಕ್ಷಣ) ಮಾತ್ರದಿಂದ ಮತ್ತು ಹಸ್ತ ಮಸ್ತಕ ಸಂಯೋಗದಿಂದ ಯಾವ ಶಿವತ್ವವು ಸಮಾವೇಶಗೊಳ್ಳುವುದೋ, ಅದು ವೇಧಾದೀಕ್ಷೆಯೆಂದು ಸಮ್ಮತವಾಗಿದೆ.

**ಮಾಂತ್ರೀ ದೀಕ್ಷೇತಿ ಸಾ ಪ್ರೋಕ್ತಾ**
**ಮಂತ್ರಮಾತ್ರೋಪದೇಶಿನೀ ।**
**ಕುಂಡಮಂಡಲಿಕೋಪೇತಾ**
**ಕ್ರಿಯಾದೀಕ್ಷಾ ಕ್ರಿಯೋತ್ತರಾ ॥ 6–14**

ಮಂತ್ರವನ್ನು ಮಾತ್ರ ಉಪದೇಶಿಸಲ್ಪಡುವ ದೀಕ್ಷೆಯು ಮಂತ್ರದೀಕ್ಷೆಯೆಂದು ಹೇಳಲ್ಪಡುತ್ತದೆ. ಕುಂಡಮಂಡಲಗಳನ್ನು ರಚಿಸಿ ಕ್ರಿಯಾಪ್ರಧಾನವಾಗಿ ಮಾಡಲ್ಪಡುವ ದೀಕ್ಷೆಯು ಕ್ರಿಯಾದೀಕ್ಷೆಯು.

**ಶುಭಮಾಸೇ ಶುಭತಿಥೌ**
**ಶುಭಕಾಲೇ ಶುಭೇಽಹನಿ ।**
**ವಿಭೂತಿಂ ಶಿವಭಕ್ತೇಭ್ಯೋ**
**ದತ್ತ್ವಾ ತಾಂಬೂಲಪೂರ್ವಕಮ್ ॥ 6–15**

ಶುಭ (ಮಾಘಾದಿ) ಮಾಸಗಳಲ್ಲಿ, ಶುಭ (ಭದ್ರಾದಿ) ತಿಥಿಗಳಲ್ಲಿ, ಶುಭ (ಅಮೃತಾದಿ) ಕಾಲಗಳಲ್ಲಿ, ಶುಭ (ಸೋಮ, ಶುಕ್ರಾದಿ) ವಾರದಲ್ಲಿ ಶಿವಭಕ್ತರಿಗೆ ತಾಂಬೂಲಪೂರ್ವಕವಾದ ವಿಭೂತಿಯನ್ನು ಕೊಟ್ಟು–

**ಯಥಾವಿಧಿ ಯಥಾಯೋಗಮ್**
**ಶಿಷ್ಯಮಾನೀಯ ದೇಶಿಕಃ ।**
**ಸ್ನಾತಂ ಶುಕ್ಲಾಂಬರಧರಮ್**
**ದಂತಧಾವನಪೂರ್ವಕಮ್ ॥ 6–16**

**ಮಂಡಲೇ ಸ್ಥಾಪಯೇಚ್ಛಿಷ್ಯಮ್**
**ಪ್ರಾಙ್ಮುಖಂ ತಮುದಙ್ಮುಖಃ ।**
**ಶಿವಸ್ಯ ನಾಮ ಕೀರ್ತಿಂ ಚ**
**ಚಿಂತಾಮಪಿ ಚ ಕಾರಯೇತ್ ॥ 6–17**

ದಂತಧಾವನವನ್ನು ಮಾಡಿ (ಹಲ್ಲುಜ್ಜಿ) ಸ್ನಾನ ಮಾಡಿ, ಶುಭ್ರವಾದ ಮಡಿಯನ್ನುಟ್ಟ ಶಿಷ್ಯನನ್ನು ದೇಶಿಕನು ಕರೆತಂದು ಮಂಡಲ (ಸ್ವಸ್ತಿಕ ಮಂಡಲ)ದಲ್ಲಿ ಪೂರ್ವ ಇಲ್ಲವೇ ಉತ್ತರಮುಖವಾಗಿ ಕೂಡಿಸಬೇಕು ಮತ್ತು ಶಿವನ ಚಿಂತನೆಯನ್ನು ಹಾಗೂ ಶಿವನಾಮ ಸಂಕೀರ್ತನೆಯನ್ನು ಮಾಡಿಸಬೇಕು.

**ವಿಭೂತಿಪಟ್ಟಂ ದತ್ತ್ವಾಽಗ್ರೇ**
**ಯಥಾಸ್ಥಾನಂ ಯಥಾವಿಧಿ ।**
**ಪಂಚಬ್ರಹ್ಮಮಯೈಸ್ತತ್ರ**
**ಸ್ಥಾಪಿತೈಃ ಕಲಶೋದಕೈಃ ॥ 6–18**

ವಿಧಿಪೂರ್ವಕವಾಗಿ (ಶಾಸ್ತ್ರೋಕ್ತ ಪದ್ಧತಿಯಂತೆ) ಆಯಾ ಸ್ಥಾನ (ಮಸ್ತಕಾದಿ)ಗಳಲ್ಲಿ ತ್ರಿಪುಂಡ್ರ ಪಟ್ಟವನ್ನು ಧರಿಸಿ, ಅವನ ಮುಂದೆ ಪಂಚಬ್ರಹ್ಮ ಪ್ರತೀಕಗಳಾಗಿ ಸ್ಥಾಪಿಸಲ್ಪಟ್ಟ ಕಲಶ (ಪಂಚ ಕಲಶ)ಗಳ ಉದಕದಿಂದ–

**ಆಚಾರ್ಯಃ ಸಮಮೃತ್ವಿಗ್ಭಿಃ**
**ತ್ರಿಃ ಶಿಷ್ಯಮಭಿಷಿಂಚಯೇತ್ ।**
**ಅಭಿಷಿಚ್ಯ ಗುರುಃ ಶಿಷ್ಯಮ್**
**ಆಸೀನಂ ಪರಿತಃ ಶುಚಿಮ್ ॥ 6–19**

ಆಚಾರ್ಯನು ಋತ್ವಿಜರಿಂದೊಡಗೂಡಿ ಶಿಷ್ಯನಿಗೆ ಮೂರು ಬಾರಿ ಅಭಿಷೇಕವನ್ನು ಮಾಡಬೇಕು. ಹೀಗೆ ಅಭಿಷೇಕವನ್ನು ಮಾಡಿ ಗುರುವು ತನ್ನ ಸಮೀಪದಲ್ಲಿ ಶುಚಿರ್ಭೂತನಾಗಿ ಕುಳಿತಿರುವ ಶಿಷ್ಯನಿಗೆ–

**ತತಃ ಪಂಚಾಕ್ಷರೀಂ ಶೈವೀಮ್**
**ಸಂಸಾರಭಯತಾರಿಣೀಮ್ ॥ 6–20**

**ತಸ್ಯ ದಕ್ಷಿಣಕರ್ಣೇ ತು**
**ನಿಗೂಢಮಪಿ ಕೀರ್ತಯೇತ್ ।**
**ಛಂದೋ ರೂಪಮೃಷಿಂ ಚಾಸ್ಯ**
**ದೇವತಾನ್ಯಾಸಪದ್ಧತಿಮ್ ॥ 6–21**

ಅನಂತರ ಸಂಸಾರಭಯವನ್ನು ದೂರ ಮಾಡುವ, ಶಿವ ಸಂಬಂಧಿಯಾದ ಪಂಚಾಕ್ಷರ ಮಂತ್ರವನ್ನು (ಶಿವ ಪಂಚಾಕ್ಷರಿ ಮಂತ್ರವನ್ನು) ಆ ಶಿಷ್ಯನ ಬಲಗಿವಿಯಲ್ಲಿ ನಿಗೂಢ (ಗುಪ್ತ)ವಾಗಿ ಹೇಳಬೇಕು. ಅದರಂತೆ ಆ ಮಂತ್ರದ ಛಂದಸ್ಸು, ರೂಪ, ಋಷಿ, ದೇವತೆ ಮತ್ತು ಅದರ ನ್ಯಾಸ ಪದ್ಧತಿಯನ್ನು ಹೇಳಬೇಕು.

***ಇತಿ ಗುರುಕಾರುಣ್ಯಸ್ಥಲಂ***
*ಇಲ್ಲಿಗೆ ಗುರುಕಾರುಣ್ಯಸ್ಥಲವು ಮುಗಿಯಿತು.*

## 5. ಅಥ ಲಿಂಗಧಾರಣಸ್ಥಲಮ್
ಈಗ ಲಿಂಗಧಾರಣ ಸ್ಥಲವು
**(42 ಶ್ಲೋಕಗಳು)**

**ಸ್ಫಾಟಿಕಂ ಶೈಲಜಂ ವಾಽಪಿ**
**ಚಂದ್ರಕಾಂತಮಯಂ ತು ವಾ ।**
**ಬಾಣಂ ವಾ ಸೂರ್ಯಕಾಂತಂ ವಾ**
**ಲಿಂಗಮೇಕಂ ಸಮಾಹರೇತ್ ॥ 6–22**

ಸ್ಫಟಿಕ, ಶ್ರೀಶೈಲಪರ್ವತ ಶಿಲೆ, ಚಂದ್ರಕಾಂತಶಿಲೆ, ಸೂರ್ಯಕಾಂತ ಶಿಲೆ ಮತ್ತು ನರ್ಮದಾ ಬಾಣಲಿಂಗ – ಇವುಗಳಲ್ಲಿ ಯಾವುದಾದರೊಂದು ಶಿಲೆಯಿಂದ ನಿರ್ಮಿತವಾದ ಲಿಂಗವನ್ನು (ದೀಕ್ಷೆಗಾಗಿ) ತೆಗೆದುಕೊಳ್ಳಬೇಕು.

**ಸರ್ವಲಕ್ಷಣಸಂಪನ್ನೇ**
**ತಸ್ಮಿನ್ ಲಿಂಗೇ ವಿಶೋಧಿತೇ ।**
**ಪೀಠಸ್ಥಿತೇಽಭಿಷಿಕ್ತೇ ಚ**
**ಗಂಧಪುಷ್ಪಾದಿಪೂಜಿತೇ ।**
**ಮಂತ್ರಪೂತೇ ಕಲಾಂ ಶೈವೀಮ್**
**ಯೋಜಯೇದ್ವಿಧಿನಾ ಗುರುಃ ॥ 6–23**

**ಶಿಷ್ಯಸ್ಯ ಪ್ರಾಣಮಾದಾಯ**
**ಲಿಂಗೇ ತತ್ರ ನಿಧಾಪಯೇತ್ । 6–24**

ಸರ್ವ ಲಕ್ಷಣಗಳಿಂದ ಕೂಡಿದ, ಶಾಸ್ತ್ರವಿಧಿಯಿಂದ ಪರಿಶುದ್ಧಗೊಳಿಸಿದ ಹಸ್ತಪೀಠದಲ್ಲಿರಿಸಿ ಅಭಿಷೇಕವನ್ನು ಮಾಡಿದ ಮತ್ತು ಗಂಧ ಪುಷ್ಪಾದಿಗಳಿಂದ ಪೂಜಿಸಲ್ಪಟ್ಟ, ಮಂತ್ರದಿಂದ ಸಂಸ್ಕರಿಸಲ್ಪಟ್ಟ ಆ ಲಿಂಗದಲ್ಲಿ ಶ್ರೀಗುರುವು ವಿಧ್ಯುಕ್ತವಾಗಿ ಶಿವಕಲೆಯನ್ನು (ಶಿಷ್ಯನ ಚಿತ್ಕಳೆಯನ್ನು) ಸಂಯೋಜಿಸಬೇಕು (ಹಸ್ತ ಮಸ್ತಕ ಸಂಯೋಗ ದಿಂದ). ಆ ಲಿಂಗದಲ್ಲಿಯೇ ಶಿಷ್ಯನ ಪ್ರಾಣವನ್ನೂ ಸಹ ತೆಗೆದುಕೊಂಡು ಪ್ರತಿಷ್ಠಿಸಬೇಕು.

**ತಲ್ಲಿಂಗಂ ತಸ್ಯ ತು ಪ್ರಾಣೇ**
**ಸ್ಥಾಪಯೇದೇಕಭಾವತಃ ।**
**ಏವಂ ಕೃತ್ವಾ ಗುರುರ್ಲಿಂಗಮ್**
**ಶಿಷ್ಯಹಸ್ತೇ ನಿಧಾಪಯೇತ್ ॥ 6–25**

ಅದರಂತೆ ಆ ಶಿಷ್ಯನ ಪ್ರಾಣದಲ್ಲಿ ಆ ಲಿಂಗವನ್ನು ಏಕಭಾವದಿಂದ (ತಾದಾತ್ಮ್ಯ ಭಾವದಿಂದ) ಸ್ಥಾಪಿಸಬೇಕು. ಹೀಗೆ ಮಾಡಿ ಶ್ರೀಗುರುವು ಶಿಷ್ಯನ ಹಸ್ತದಲ್ಲಿ ಆ ಲಿಂಗವನ್ನು ಕೊಡಬೇಕು.

**ಪ್ರಾಣವದ್ಧಾರಣೀಯಂ ತತ್**
**ಪ್ರಾಣಲಿಂಗಮಿದಂ ತವ ।**
**ಕದಾಚಿತ್ಕುತ್ರಚಿದ್ವಾಽಪಿ**
**ನ ವಿಯೋಜಯ ದೇಹತಃ ॥ 6–26**

(ಹೇ ಶಿಷ್ಯನೇ), ಇದು ನಿನ್ನ ಪ್ರಾಣಲಿಂಗವು. ಇದನ್ನು ನೀನು ನಿನ್ನ ಪ್ರಾಣದಂತೆ ಧರಿಸಬೇಕು ಎಂದೂ, ಎಲ್ಲಿಯೂ ಇದನ್ನು ನಿನ್ನ ದೇಹದಿಂದ ಅಗಲಿಸಬೇಡ.

**ಯದಿ ಪ್ರಮಾದಾತ್ ಪತಿತೇ**
**ಲಿಂಗೇ ದೇಹಾನ್ಮಹೀತಲೇ ।**
**ಪ್ರಾಣಾನ್ ವಿಮುಂಚ ಸಹಸಾ**
**ಪ್ರಾಪ್ತಯೇ ಮೋಕ್ಷಸಂಪದಃ ॥ 6–27**

ಒಂದು ವೇಳೆ ಪ್ರಮಾದದಿಂದ (ಎಚ್ಚರಿಕೆ ಇಲ್ಲದಿರುವುದರಿಂದ) ಲಿಂಗವು ದೇಹದಿಂದ ಕಳಚಿ ಭೂಮಿಯ ಮೇಲೆ ಬಿದ್ದದ್ದೇ ಆದರೆ ಮೋಕ್ಷ ಸಂಪತ್ತಿನ ಪ್ರಾಪ್ತಿಗಾಗಿ ಕೂಡಲೇ ಪ್ರಾಣವನ್ನು ತ್ಯಾಗ ಮಾಡು (ದೀಕ್ಷೆಯಿಂದ ಪಡೆದ ಲಿಂಗವನ್ನು ಪ್ರಾಣಕ್ಕಿಂತಲೂ ಮಿಗಿಲಾಗಿ ಪ್ರೀತಿಸು ಎಂಬ ಭಾವ).

**ಇತಿ ಸಂಬೋಧಿತಃ ಶಿಷ್ಯೋ**
**ಗುರುಣಾ ಶಾಸ್ತ್ರವೇದಿನಾ ।**
**ಧಾರಯೇಚ್ಛಾಂಕರಂ ಲಿಂಗಮ್**
**ಶರೀರೇ ಪ್ರಾಣಯೋಗತಃ ॥ 6–28**

ಶಾಸ್ತ್ರ (ವೀರಶೈವ ಶಾಸ್ತ್ರ)ವನ್ನು ಬಲ್ಲಂತಹ ಶ್ರೀ ಗುರುವಿನಿಂದ ಈ ರೀತಿಯಾಗಿ ಸಂಬೋಧಿಸಲ್ಪಟ್ಟ (ತಿಳಿ ಹೇಳಲ್ಪಟ್ಟ) ಶಿಷ್ಯನು ಆ ಇಷ್ಟಲಿಂಗವನ್ನು ಪ್ರಾಣವಿರುವವರೆಗೆ ತನ್ನ ದೇಹದ ಮೇಲೆ ಧರಿಸಿಕೊಂಡಿರಬೇಕು.

**ಲಿಂಗಸ್ಯ ಧಾರಣಂ ಪುಣ್ಯಮ್**
**ಸರ್ವಪಾಪಪ್ರಣಾಶನಮ್ ।**
**ಆದೃತಂ ಮುನಿಭಿಃ ಸರ್ವೈಃ**
**ಆಗಮಾರ್ಥವಿಶಾರದೈಃ ॥ 6–29**

ಇಷ್ಟಲಿಂಗವನ್ನು ಧರಿಸುವುದರಿಂದ ಪುಣ್ಯದ ಪ್ರಾಪ್ತಿಯಾಗುವುದು ಮತ್ತು ಎಲ್ಲಾ ಪಾಪಗಳು ನಾಶ ಹೊಂದುವವು. (ಅಂತೆಯೇ) ಶಿವಾಗಮಗಳ ಅರ್ಥವನ್ನು ತಿಳಿದ ವಿಶಾರದರಾದ (ನಿಪುಣರಾದ) ಎಲ್ಲ ಮುನಿಗಳು ಇದನ್ನು ಅಂಗೀಕರಿಸಿದ್ದಾರೆ.

**ಲಿಂಗಧಾರಣಮಾಖ್ಯಾತಮ್**
**ದ್ವಿಧಾ ಸರ್ವಾರ್ಥಸಾಧಕೈಃ ।**
**ಬಾಹ್ಯಮಾಭ್ಯಂತರಂ ಚೇತಿ**
**ಮುನಿಭಿರ್ಮೋಕ್ಷಕಾಂಕ್ಷಿಭಿಃ ॥ 6–30**

ಸರ್ವ ಪುರುಷಾರ್ಥ ಸಾಧಕರಾದ, ಮೋಕ್ಷಾಕಾಂಕ್ಷಿಗಳಾದ ಮುನಿಗಳಿಂದ ಈ ಲಿಂಗಧಾರಣೆಯು ಬಾಹ್ಯ ಮತ್ತು ಆಭ್ಯಂತರ (ಬಹಿರಂಗ ಮತ್ತು ಅಂತರಂಗ)ವೆಂಬುದಾಗಿ ಎರಡು ಪ್ರಕಾರ ಹೇಳಲ್ಪಟ್ಟಿದೆ.

**ಚಿದ್ರೂಪಂ ಪರಮಂ ಲಿಂಗಮ್**
**ಶಾಂಕರಂ ಸರ್ವಕಾರಣಮ್ ।**
**ಯತ್ತಸ್ಯ ಧಾರಣಂ ಚಿತ್ತೇ**
**ತದಾಂತರಮುದಾಹೃತಮ್ ॥ 6–31**

ಸರ್ವಕ್ಕೂ ಕಾರಣೀಭೂತವಾದ, ಶಿವಸಂಬಂಧವಾದ ಯಾವ ಚಿದ್ರೂಪವಾದ (ಅರಿವಿನ ಸ್ವರೂಪದ) ಆ ಪರಮಲಿಂಗವನ್ನು ಚಿತ್ತದಲ್ಲಿ ಧರಿಸಿಕೊಳ್ಳುವುದೇ ಅಂತರಲಿಂಗಧಾರಣವೆಂದು ಹೇಳಲಾಗಿದೆ.

**ಚಿದ್ರೂಪಂ ಹಿ ಪರಂ ತತ್ತ್ವಮ್**
**ಶಿವಾಖ್ಯಂ ವಿಶ್ವಕಾರಣಮ್ ।**
**ನಿರಸ್ತವಿಶ್ವಕಾಲುಷ್ಯಮ್**

**ನಿಷ್ಕಲಂ ನಿರ್ವಿಕಲ್ಪಕಮ್ ॥ 6–32**

ವಿಶ್ವಕ್ಕೆ ಕಾರಣೀಭೂತವಾದ ಶಿವನೆಂದು ಕರೆಸಿಕೊಳ್ಳುವ ಚಿದ್ರೂಪ (ಅರಿವು)ವಾದ ಆ ಪರತತ್ತ್ವವು ವಿಶ್ವದ ಕಾಲುಷ್ಯಕ್ಕೆ ಅಂಟಿಕೊಳ್ಳದ ನಿರ್ವಿಕಲ್ಪವಾದ, ನಿಷ್ಕಲ ತತ್ತ್ವವಾಗಿದೆ.

**ಸತ್ತಾನಂದಪರಿಸ್ಫೂರ್ತಿ–**
**ಸಮುಲ್ಲಾಸಕಲಾಮಯಮ್ ।**
**ಅಪ್ರಮೇಯಮನಿರ್ದೇಶ್ಯಮ್**
**ಮುಮುಕ್ಷುಭಿರುಪಾಸಿತಮ್ ॥ 6–33**

ಆ ಪರತತ್ತ್ವವು ಸತ್ತಾನಂದಗಳ ಪರಿಸ್ಫೂರ್ತಿ (ಸತ್, ಚಿತ್, ಆನಂದ)ಯೆಂಬ ಸಮುಲ್ಲಾಸ ರೂಪವಾದ ಕಲಾಶಕ್ತಿಯಿಂದ ಯುಕ್ತವಾಗಿದೆ. ಅದು ಪ್ರಮಾಣಗಳಿಗೆ ಅಗಮ್ಯವೂ, ಅನಿರ್ದೇಶ್ಯವೂ ಆಗಿದೆ. ಆದರೂ ಮುಮುಕ್ಷುಗಳಿಂದ ಉಪಾಸಿಸಲು ಅರ್ಹವಾದುದಾಗಿದೆ.

**ಪರಂ ಬ್ರಹ್ಮ ಮಹಾಲಿಂಗಮ್**
**ಪ್ರಪಂಚಾತೀತಮವ್ಯಯಮ್ ।**
**ತದೇವ ಸರ್ವಭೂತಾನಾಮ್**
**ಅಂತಸ್ತ್ರಿಸ್ಥಾನಗೋಚರಮ್ ॥ 6–34**

ಪ್ರಪಂಚಕ್ಕೆ ಅತೀತವಾದ, ಅವ್ಯಯವಾದ (ಅವಿನಾಶಿಯಾದ) ಪರಬ್ರಹ್ಮವೆಂದು ಕರೆಯಲ್ಪಡುವ ಆ ಮಹಾಲಿಂಗವು ಸರ್ವಜೀವಿಗಳ ಅಂತರಂಗದ ಮೂರು ಸ್ಥಾನಗಳಲ್ಲಿ ಅದೇ ಗೋಚರಿಸುತ್ತದೆ.

**ಮೂಲಾಧಾರೇ ಚ ಹೃದಯೇ**
**ಭ್ರೂಮಧ್ಯೇ ಸರ್ವದೇಹಿನಾಮ್ ।**
**ಜ್ಯೋತಿರ್ಲಿಂಗಂ ಸದಾ ಭಾತಿ**
**ಯದ್ ಬ್ರಹ್ಮೇತ್ಯಾಹುರಾಗಮಾಃ ॥ 6–35**

ಶಿವಾಗಮಗಳಲ್ಲಿ ಬ್ರಹ್ಮವೆಂದು ಕರೆಯಿಸಿಕೊಳ್ಳುವ ಆ ಜ್ಯೋತಿರ್ಲಿಂಗವು ಸರ್ವಜೀವಿಗಳ ಮೂಲಾಧಾರ (ಆಧಾರ ಚಕ್ರ), ಹೃದಯ (ಅನಾಹತ ಚಕ್ರ) ಮತ್ತು ಭ್ರೂಮಧ್ಯ (ಆಜ್ಞಾ ಚಕ್ರ)ಗಳಲ್ಲಿ ಯಾವಾಗಲೂ ಪ್ರಕಾಶಿಸುತ್ತದೆ.

**ಅಪರಿಚ್ಛಿನ್ನಮವ್ಯಕ್ತಮ್**
**ಲಿಂಗಂ ಬ್ರಹ್ಮ ಸನಾತನಮ್ ।**
**ಉಪಾಸನಾರ್ಥಮಂತಃಸ್ಥಮ್**
**ಪರಿಚ್ಛಿನ್ನಂ ಸ್ವಮಾಯಯಾ ॥ 6–36**

ಅಪರಿಚ್ಛಿನ್ನ (ಅಖಂಡ)ವಾದ, ಅವ್ಯಕ್ತವಾದ, ಸನಾತನವಾದ (ಯಾವಾಗಲೂ ಇರುವ), ಪರಬ್ರಹ್ಮ ಸ್ವರೂಪವಾದ, ಅಂತಸ್ಥವಾದ ಆ ಲಿಂಗವು ತನ್ನ ಮಾಯಾಶಕ್ತಿಯಿಂದ ಉಪಾಸನೆಗೋಸ್ಕರ ಪರಿಚ್ಛಿನ್ನವಾಯಿತು (ಖಂಡಿತವಾಯಿತು). (ಇದು ಸರ್ವಾತ್ಮಭಾವವಾಗಿದೆ).

**ಲಯಂ ಗಚ್ಛತಿ ಯತ್ರೈವ**
**ಜಗದೇತಚ್ಚರಾಚರಮ್ ।**
**ಪುನಃ ಪುನಃ ಸಮುತ್ಪತ್ತಿಮ್**
**ತಲ್ಲಿಂಗಂ ಬ್ರಹ್ಮ ಶಾಶ್ವತಮ್ ॥ 6–37**

ಚರಾಚರಾತ್ಮಕವಾದ ಈ ಜಗತ್ತು ಎಲ್ಲಿ ಪುನಃ ಪುನಃ ಉತ್ಪತ್ತಿಯಾಗುವುದೋ ಮತ್ತು ಲಯವಾಗುವುದೋ ಆ ಶಾಶ್ವತವಾದ ಬ್ರಹ್ಮವೇ ಲಿಂಗವೆಂದು ಕರೆಯಿಸಿಕೊಳ್ಳುವುದು.

**ತಸ್ಮಾಲ್ಲಿಂಗಮಿತಿ ಖ್ಯಾತಮ್**
**ಸತ್ತಾऽऽನಂದಚಿದಾತ್ಮಕಮ್ ।**
**ಬೃಹತ್ತ್ವಾದ್ ಬೃಂಹಣತ್ವಾಚ್ಚ**
**ಬ್ರಹ್ಮಶಬ್ದಾಭಿಧೇಯಕಮ್ ॥ 6–38**

ಆದ್ದರಿಂದ ಸಚ್ಚಿದಾನಂದ ಸ್ವರೂಪವಾದ ಆ ಪರಮತತ್ತ್ವವು ಲಿಂಗವೆಂಬುದಾಗಿ ಖ್ಯಾತಿಯನ್ನು ಪಡೆಯಿತು. ಇದು ವಿಶ್ವಕ್ಕಿಂತಲೂ ಬೃಹದಾಕಾರವಾಗಿರುವುದರಿಂದ ಮತ್ತು ವಿಶ್ವಕ್ಕೆ ಮಹಾಪೋಷಕವಾಗಿರುವುದರಿಂದ ಇದು ಬ್ರಹ್ಮಶಬ್ದಕ್ಕೆ ಅಭಿಧೇಯವಾಗಿರುತ್ತದೆ (ಇದನ್ನು ಬ್ರಹ್ಮವೆಂದು ಕರೆಯಲಾಗಿದೆ).

**ಆಧಾರೇ ಹೃದಯೇ ವಾऽಪಿ**
**ಭ್ರೂಮಧ್ಯೇ ವಾ ನಿರಂತರಮ್ ।**
**ಜ್ಯೋತಿರ್ಲಿಂಗಾನುಸಂಧಾನಮ್**
**ಆಂತರಂ ಲಿಂಗಧಾರಣಮ್ ॥ 6–39**

ಮೂಲಾಧಾರ, ಹೃದಯ ಮತ್ತು ಭ್ರೂಮಧ್ಯದಲ್ಲಿ ನಿರಂತರವಾಗಿ ಜ್ಯೋತಿರ್ಲಿಂಗದ ಅನುಸಂಧಾನವನ್ನು ಮಾಡುವುದೇ ಅಂತರಂಗದ ಲಿಂಗಧಾರಣೆಯು.

**ಆಧಾರೇ ಕನಕಪ್ರಖ್ಯಮ್**
**ಹೃದಯೇ ವಿದ್ರುಮಪ್ರಭಮ್ ।**
**ಭ್ರೂಮಧ್ಯೇ ಸ್ಫಟಿಕಚ್ಛಾಯಮ್**
**ಲಿಂಗಂ ಯೋಗೀ ವಿಭಾವಯೇತ್ ॥ 6–40**

ಯೋಗಿಯು ಅಂತರ ಲಿಂಗಾನುಸಂಧಾನವನ್ನು ಮಾಡುವಾಗ ಆಧಾರಚಕ್ರದಲ್ಲಿ ಸ್ವರ್ಣವರ್ಣದ, ಹೃದಯದ ಅನಾಹತಚಕ್ರದಲ್ಲಿ ವಿದ್ರುಮ (ಹವಳ)ದ ಕಾಂತಿಯ ಮತ್ತು ಭ್ರೂಮಧ್ಯದ ಆಜ್ಞಾಚಕ್ರದಲ್ಲಿ ಸ್ಫಟಿಕವರ್ಣದ ಲಿಂಗವನ್ನು ಭಾವಿಸಬೇಕು.

**ನಿರುಪಾಧಿಕಮಾಖ್ಯಾತಮ್**
**ಲಿಂಗಸ್ಯಾऽಂತರಧಾರಣಮ್ ।**
**ವಿಶಿಷ್ಟಂ ಕೋಟಿಗುಣಿತಮ್**
**ಬಾಹ್ಯಲಿಂಗಸ್ಯ ಧಾರಣಾತ್ ॥ 6–41**

ಅಂತರಂಗದಲ್ಲಿಯ ಈ ಲಿಂಗಧಾರಣೆಯು ನಿರುಪಾಧಿಕ ಲಿಂಗಧಾರಣೆ ಯೆಂದು ಖ್ಯಾತವಾಗಿದೆ. ಇದು ಬಾಹ್ಯಲಿಂಗಧಾರಣೆಗಿಂತಲೂ ಕೋಟಿ ಪಾಲು ಮಿಗಿಲಾದುದು ಆಗಿದೆ.

**ಯೇ ಧಾರಯಂತಿ ಹೃದಯೇ**
**ಲಿಂಗಂ ಚಿದ್ರೂಪಮೈಶ್ವರಮ್ ।**
**ನ ತೇಷಾಂ ಪುನರಾವೃತ್ತಿಃ**
**ಘೋರಸಂಸಾರಮಂಡಲೇ ॥ 6–42**

ಯಾರು ತನ್ನ ಹೃದಯದಲ್ಲಿ ಚಿದ್ರೂಪವಾದ ಈಶ್ವರ ಸಂಬಂಧಿಯಾದ ಲಿಂಗವನ್ನು ಧರಿಸುತ್ತಾರೆಯೋ ಅವರಿಗೆ ಈ ಘೋರ ಸಂಸಾರಮಂಡಲದಲ್ಲಿ ಪುನರಾವೃತ್ತಿಯು (ಪುನರ್ಜನ್ಮವು) ಇರುವುದಿಲ್ಲ.

**ಅಂತರ್ಲಿಂಗಾನುಸಂಧಾನಮ್**
**ಆತ್ಮವಿದ್ಯಾಪರಿಶ್ರಮಃ ।**
**ಗುರೂಪಾಸನಶಕ್ತಿಶ್ಚ**

**ಕಾರಣಂ ಮೋಕ್ಷಸಂಪದಾಮ್ ॥ 6–43**

ಗುರುಸೇವೆಯನ್ನು ಮಾಡುವ ಶಕ್ತಿಯು, ಆತ್ಮವಿದ್ಯೆಯ ಪರಿಶ್ರಮವು (ಶ್ರವಣ, ಮನನ, ನಿಧಿಧ್ಯಾಸನಗಳು) ಮತ್ತು ಅಂತರ್ಲಿಂಗಾನುಸಂಧಾನ – ಇವು ಮೂರು ಮೋಕ್ಷಸಂಪತ್ತನ್ನು ಪಡೆಯುವ ಕಾರಣಗಳು (ಸಾಧನಗಳು).

**ವೈರಾಗ್ಯಜ್ಞಾನಯುಕ್ತಾನಾಮ್**
**ಯೋಗಿನಾಂ ಸ್ಥಿರಚೇತಸಾಮ್ ।**
**ಅಂತರ್ಲಿಂಗಾನುಸಂಧಾನೇ**
**ರುಚಿರ್ಬಾಹ್ಯೇ ನ ಜಾಯತೇ ॥ 6–44**

ವೈರಾಗ್ಯ ಮತ್ತು ಜ್ಞಾನದಿಂದ ಕೂಡಿದ ಸ್ಥಿರಚಿತ್ತವುಳ್ಳ ಯೋಗಸಾಧಕರಿಗೆ ಅಂತರ್ಲಿಂಗಾನುಸಂಧಾನದಲ್ಲಿಯೇ ಅಭಿರುಚಿ ಉಂಟಾಗುವುದು. ಬಾಹ್ಯಲಿಂಗದಲ್ಲಿ ಅಭಿರುಚಿ ಉಂಟಾಗುವುದಿಲ್ಲ.

**ಬ್ರಹ್ಮಾ ವಿಷ್ಣುಶ್ಚ ರುದ್ರಶ್ಚ**
**ವಾಸವಾದ್ಯಾಶ್ಚ ಲೋಕಪಾಃ ।**
**ಮುನಯಃ ಸಿದ್ಧಗಂಧರ್ವಾಃ**
**ದಾನವಾ ಮಾನವಾಸ್ತಥಾ ॥ 6–45**

ಬ್ರಹ್ಮನೂ, ವಿಷ್ಣುವೂ, ರುದ್ರನೂ, ವಾಸವಾದಿ (ಇಂದ್ರಾದಿ) ಲೋಕಪಾಲಕರು (ದಿಕ್ಪಾಲಕರು), ಮುನಿಗಳು, ಸಿದ್ಧರು, ಗಂಧರ್ವರು ಹಾಗೆಯೇ ದಾನವರು ಮತ್ತು ಮಾನವರು–

**ಸರ್ವೇ ಚ ಜ್ಞಾನಯೋಗೇನ**
**ಸರ್ವಕಾರಣಕಾರಣಮ್ ।**
**ಪಶ್ಯಂತಿ ಹೃದಯೇ ಲಿಂಗಮ್**
**ಪರಮಾನಂದಲಕ್ಷಣಮ್ ॥ 6–46**

ಇವರೆಲ್ಲರೂ ಜ್ಞಾನಯೋಗದಿಂದ ಸಮಸ್ತ ಕಾರಣಗಳಿಗೆ ಕಾರಣನಾದ, ಪರಮಾನಂದ ಲಕ್ಷಣವುಳ್ಳ (ಸ್ವರೂಪವಾದ) ಲಿಂಗವನ್ನು ತಮ್ಮ ಹೃದಯದಲ್ಲಿಯೇ ಕಾಣುತ್ತಾರೆ.

**ತಸ್ಮಾತ್ಸರ್ವಪ್ರಯತ್ನೇನ**
**ಶಾಂಕರಂ ಲಿಂಗಮುತ್ತಮಮ್ ।**
**ಅಂತರ್ವಿಭಾವಯೇದ್ ವಿದ್ವಾನ್**
**ಅಶೇಷಕ್ಲೇಶಮುಕ್ತಯೇ ॥ 6–47**

ಆದ್ದರಿಂದ ಸರ್ವಪ್ರಯತ್ನದಿಂದ ಉತ್ತಮವಾದ ಶಿವಲಿಂಗವನ್ನು (ಜ್ಯೋತಿರ್ಲಿಂಗವನ್ನು) ಜ್ಞಾನಿಯು ತನ್ನ ಸಮಸ್ತ ಕ್ಲೇಶಗಳ ಮುಕ್ತಿಗಾಗಿ ಅಂತರಂಗದಲ್ಲಿ ಭಾವಿಸಬೇಕು (ಧ್ಯಾನಿಸಬೇಕು).

**ಅಂತರ್ಧಾರಯಿತುಂ ಲಿಂಗಮ್**
**ಅಶಕ್ತಃ ಶಕ್ತ ಏವ ವಾ ।**
**ಬಾಹ್ಯಂ ಚ ಧಾರಯೇಲ್ಲಿಂಗಮ್**
**ತದ್ರೂಪಮಿತಿ ನಿಶ್ಚಯಾತ್ ॥ 6–48**

ಜ್ಯೋತಿರ್ಲಿಂಗವನ್ನು ಅಂತರಂಗದಲ್ಲಿ ಧರಿಸಲು ಶಕ್ತನಾಗಲಿ ಅಥವಾ ಅಶಕ್ತನೇ ಆಗಿರಲಿ, ಅವನು ಬಾಹ್ಯಲಿಂಗವನ್ನು ಆ ಜ್ಯೋತಿರ್ಲಿಂಗದ ಸ್ವರೂಪವೆಂತಲೇ ನಿಶ್ಚಯಿಸಿ ಧರಿಸಬೇಕು.

**ಲಿಂಗಂ ತು ತ್ರಿವಿಧಂ ಪ್ರೋಕ್ತಮ್**
**ಸ್ಥೂಲಂ ಸೂಕ್ಷ್ಮಂ ಪರಾತ್ಪರಮ್ ।**
**ಇಷ್ಟಲಿಂಗಮಿದಂ ಸ್ಥೂಲಮ್**
**ಯದ್ ಬಾಹ್ಯೇ ಧಾರ್ಯತೇ ತನೌ ॥ 6–49**

ಈ ಲಿಂಗವು ಸ್ಥೂಲ, ಸೂಕ್ಷ್ಮ ಮತ್ತು ಪರಾತ್ಪರ (ಕಾರಣ) ಎಂಬುದಾಗಿ ಮೂರು ಪ್ರಕಾರವಾಗಿ ಹೇಳಲ್ಪಟ್ಟಿದೆ. ಯಾವುದು ಬಾಹ್ಯ ತನುವಿನಲ್ಲಿ ಧರಿಸಲ್ಪಟ್ಟಿದೆಯೋ ಆ ಸ್ಥೂಲವಾದ ಲಿಂಗವು ಇಷ್ಟಲಿಂಗವಾಗಿದೆ.

**ಪ್ರಾಣಲಿಂಗಮಿದಂ ಸೂಕ್ಷ್ಮಮ್**
**ಯದಂತರ್ಭಾವನಾಮಯಮ್ ।**
**ಪರಾತ್ಪರಂ ತು ಯತ್ಪ್ರೋಕ್ತಮ್**
**ತೃಪ್ತಿಲಿಂಗಂ ತದುಚ್ಯತೇ ॥ 6–50**

ಸೂಕ್ಷ್ಮವಾದ ಲಿಂಗವೇ ಪ್ರಾಣಲಿಂಗವು. ಯಾವುದು ಅಂತರಂಗದಲ್ಲಿ ಭಾವಮಯವಾಗಿರುವುದೋ ಅದು ಪರಾತ್ಪರಲಿಂಗ. ಅದುವೇ ತೃಪ್ತಿಲಿಂಗವೆಂದು, ಭಾವಲಿಂಗವೆಂದು ಹೇಳಲ್ಪಡುತ್ತದೆ.

**ಭಾವನಾತೀತಮವ್ಯಕ್ತಮ್**
**ಪರಬ್ರಹ್ಮ ಶಿವಾಭಿಧಮ್ ।**
**ಇಷ್ಟಲಿಂಗಮಿದಂ ಸಾಕ್ಷಾತ್**
**ಅನಿಷ್ಟಪರಿಹಾರತಃ ।**
**ಧಾರಯೇದವಧಾನೇನ**
**ಶರೀರೇ ಸರ್ವದಾ ಬುಧಃ ॥ 6–51**

ಅವ್ಯಕ್ತವೂ (ರೂಪಾದಿಗಳಿಲ್ಲದ), ಭಾವನೆಗೆ ಅತೀತವಾದುದೂ ಆ ಪರಶಿವನೆಂಬ ಹೆಸರಿನ ಆ ಪರಬ್ರಹ್ಮವೇ ಈ ಇಷ್ಟಲಿಂಗವು. ಇದು ಸಾಕ್ಷಾತ್ ಅನಿಷ್ಟ (ಸಂಸಾರದ ಪಾಶ ಲಕ್ಷಣವಾದ ಅನಿಷ್ಟ)ವನ್ನು ಪರಿಹರಿಸುವುದರಿಂದ ಬುಧನು (ಜ್ಞಾನಿಯು) ಯಾವಾಗಲೂ ಅವಧಾನದಿಂದ (ಎಚ್ಚರಿಕೆಯಿಂದ) ಶರೀರದ ಮೇಲೆ ಇದನ್ನು ಧರಿಸಬೇಕು.

**ಮೂರ್ಧ್ನಿ ವಾ ಕಂಠದೇಶೇ ವಾ**
**ಕಕ್ಷೇ ವಕ್ಷಃಸ್ಥಲೇಽಪಿ ವಾ ।**
**ಕುಕ್ಷೌ ಹಸ್ತಸ್ಥಲೇ ವಾಽಪಿ**
**ಧಾರಯೇಲ್ಲಿಂಗಮೈಶ್ವರಮ್ ॥ 6–52**

ಮಸ್ತಕದಲ್ಲಿ, ಕಂಠದೇಶದಲ್ಲಿ (ಕೊರಳಲ್ಲಿ), ಕಕ್ಷೆಯಲ್ಲಿ (ಬಗಲಲ್ಲಿ), ವಕ್ಷ ಸ್ಥಲದಲ್ಲಿ (ಎದೆಯ ಮೇಲೆ), ಕುಕ್ಷಿಯಲ್ಲಿ (ಉದರದ ಮೇಲೆ) ಅಥವಾ ಹಸ್ತದಲ್ಲಿಯೇ ಆಗಲಿ ಈಶ್ವರ ಸಂಬಂಧಿಯಾದ ಲಿಂಗವನ್ನು (ಇಷ್ಟಲಿಂಗವನ್ನು) ಧರಿಸಬೇಕು.

**ನಾಭೇರಧಸ್ತಾಲ್ಲಿಂಗಸ್ಯ**
**ಧಾರಣಂ ಪಾಪಕಾರಣಮ್ ।**
**ಜಟಾಗ್ರೇ ತ್ರಿಕಭಾಗೇ ಚ**
**ಮಲಸ್ಥಾನೇ ನ ಧಾರಯೇತ್ ॥ 6–53**

ನಾಭಿಗಿಂತಲೂ ಕೆಳಗೆ ಲಿಂಗವನ್ನು ಧರಿಸುವುದು ಪಾಪಕ್ಕೆ ಕಾರಣವು. ಜಟೆಯ ಅಗ್ರ ಭಾಗದಲ್ಲಿ, ತ್ರಿಕಜಾಗದಲ್ಲಿ (ಬೆನ್ನು ಮೇಲೆ) ಮತ್ತು ಮಲಸ್ಥಾನಗಳಲ್ಲಿ ಲಿಂಗವನ್ನು ಧರಿಸಬಾರದು.

**ಲಿಂಗಧಾರೀ ಸದಾ ಶುದ್ಧೋ**

**ನಿಜಲಿಂಗಂ ಮನೋರಮಮ್ ।**
**ಅರ್ಚಯೇದ್ ಗಂಧಪುಷ್ಪಾದ್ಯೈಃ**
**ಕರಪೀಠೇ ಸಮಾಹಿತಃ ॥ 6–54**

ಲಿಂಗ(ಇಷ್ಟಲಿಂಗ)ಧಾರಿಯು ಸದಾ ಕಾಲದಲ್ಲಿ ಶುದ್ಧನಾಗಿರುತ್ತಾನೆ. ಅವನು ಮನೋಹರವಾದ ತನ್ನ ಇಷ್ಟಲಿಂಗವನ್ನು ಕರಪೀಠದಲ್ಲಿರಿಸಿಕೊಂಡು ಸಮಾಧಾನ ಚಿತ್ತನಾಗಿ (ಏಕಾಗ್ರ ಮನಸ್ಸಿನಿಂದ) ಗಂಧ ಪುಷ್ಪಾದಿಗಳಿಂದ ಪೂಜಿಸಬೇಕು.

**ಬಾಹ್ಯಪೀಠಾರ್ಚನಾದೇತತ್**
**ಕರಪೀಠಾರ್ಚನಂ ವರಮ್ ।**
**ಸರ್ವೇಷಾಂ ವೀರಶೈವಾನಾಮ್**
**ಮುಮುಕ್ಷೂಣಾಂ ನಿರಂತರಮ್ ॥ 6–55**

ಮುಮುಕ್ಷುಗಳಾದ ಎಲ್ಲ ವೀರಶೈವರಿಗೆ ಬಾಹ್ಯಪೀಠದಲ್ಲಿ (ಇಷ್ಟಲಿಂಗವನ್ನಿರಿಸಿ) ಪೂಜೆ ಮಾಡುವುದಕ್ಕಿಂತಲೂ ಕರಪೀಠದಲ್ಲಿರಿಸಿ ಅರ್ಚಿಸುವುದೇ ವರವು (ಶ್ರೇಷ್ಠವಾದುದು).

**ಬ್ರಹ್ಮವಿಷ್ಣ್ವಾದಯೋ ದೇವಾಃ**
**ಮುನಯೋ ಗೌತಮಾದಯಃ ।**
**ಧಾರಯಂತಿ ಸದಾ ಲಿಂಗಮ್**
**ಉತ್ತಮಾಂಗೇ ವಿಶೇಷತಃ ॥ 6–56**

ಬ್ರಹ್ಮ, ವಿಷ್ಣುವೇ ಮೊದಲಾದ ದೇವತೆಗಳು, ಗೌತಮಾದಿ ಮುನಿಗಳು ವಿಶೇಷವಾಗಿ ಯಾವಾಗಲೂ ತಮ್ಮ ಉತ್ತಮಾಂಗದಲ್ಲಿ (ಮಸ್ತಕದಲ್ಲಿ) ಇಷ್ಟಲಿಂಗವನ್ನು ಧರಿಸುತ್ತಾರೆ.

**ಲಕ್ಷ್ಮ್ಯಾದಿಶಕ್ತಯಃ ಸರ್ವಾಃ**
**ಶಿವಭಕ್ತಿವಿಭಾವಿತಾಃ ।**
**ಧಾರಯಂತ್ಯಲಿಕಾಗ್ರೇಷು**
**ಶಿವಲಿಂಗಮಹರ್ನಿಶಮ್ ॥ 6–57**

ಶಿವಭಕ್ತಿಯುತರಾದ ಲಕ್ಷ್ಮಿಯೇ ಮೊದಲಾದ ಎಲ್ಲಾ ಶಕ್ತಿದೇವತೆಯರು ತಮ್ಮ ಹಣೆಯ ಮೇಲೆ ಹಗಲಿರುಳು ಇಷ್ಟಲಿಂಗವನ್ನು ಧರಿಸಿಕೊಂಡಿರುತ್ತಾರೆ.

**ವೇದಶಾಸ್ತ್ರಪುರಾಣೇಷು**
**ಕಾಮಿಕಾದ್ಯಾಗಮೇಷು ಚ ।**
**ಲಿಂಗಧಾರಣಮಾಖ್ಯಾತಮ್**
**ವೀರಶೈವಸ್ಯ ನಿಶ್ಚಯಾತ್ ॥ 6–58**

ವೇದ, ಶಾಸ್ತ್ರ ಹಾಗೂ ಪುರಾಣಗಳಲ್ಲಿ ಮತ್ತು ಕಾಮಿಕಾದಿ ವಾತುಲಾಂತಗಳಾದ 28 ಶಿವಾಗಮಗಳಲ್ಲಿ ವೀರಶೈವನಿಗೆ ಲಿಂಗಧಾರಣೆಯು ನಿಶ್ಚಿತವಾಗಿ ಹೇಳಲಾಗಿದೆ.

**ಋಗಿತ್ಯಾಹ ಪವಿತ್ರಂ ತೇ**
**ವಿತತಂ ಬ್ರಹ್ಮಣಸ್ಪತೇ ।**
**ತಸ್ಮಾತ್ಪವಿತ್ರಂ ತಲ್ಲಿಂಗಮ್**
**ಧಾರ್ಯಂ ಶೈವಮನಾಮಯಮ್ ॥ 6–59**

ಬ್ರಹ್ಮಪದ ವಾಚ್ಯವಾದ ಇಷ್ಟಲಿಂಗದಲ್ಲಿ ಅಧಿಷ್ಠಿತವಾದ ಪರಶಿವ ತತ್ತ್ವರೂಪವಾದ ಹೇ ಬ್ರಹ್ಮಣಸ್ಪತೇ, ನಿನ್ನ ಸ್ವರೂಪವು ವ್ಯಾಪಕವಾದುದು ಮತ್ತು ನೀನು ಪವಿತ್ರವಾಗಿರುವೆ ಎಂಬುದಾಗಿ ಋಗ್ವೇದವು ಹೇಳುತ್ತದೆ. ಆದ್ದರಿಂದ ಅನಾಮಯವಾದ (ದೋಷರಹಿತವಾದ) ಶಿವರೂಪವಾದ ಪವಿತ್ರವಾದ ಆ ಲಿಂಗವನ್ನು ಧರಿಸಬೇಕು.

**ಬ್ರಹ್ಮೇತಿ ಲಿಂಗಮಾಖ್ಯಾತಮ್**
**ಬ್ರಹ್ಮಣಃ ಪತಿರೀಶ್ವರಃ ।**
**ಪವಿತ್ರಂ ತದ್ಧಿ ವಿಖ್ಯಾತಮ್**
**ತತ್ಸಂಪರ್ಕಾತ್ತನುಃ ಶುಚಿಃ ॥ 6-60**

ಬ್ರಹ್ಮನ (ಸೃಷ್ಟಿಕರ್ತನ) ಪತಿಯು ಈಶ್ವರನು. ಅವನೇ ಬ್ರಹ್ಮನೆಂತಲೂ, ಲಿಂಗವೆಂತಲೂ ಹೇಳಲ್ಪಡುತ್ತದೆ. ಈ ಕಾರಣ ಆ ಲಿಂಗವು ಪವಿತ್ರವೆಂದು ವಿಖ್ಯಾತವಾಗಿದೆ. ಅಂತೆಯೇ ಅದರ ಸಂಪರ್ಕದಿಂದ ತನುವು (ಶರೀರವು, ಪಂಚಕ್ಲೇಶರಹಿತವಾಗಿ) ಶುಚಿಯಾಗಿರುತ್ತದೆ.

**ಅತಪ್ತತನುರಜ್ಞೋ ವೈ**
**ಆಮಃ ಸಂಸ್ಕಾರವರ್ಜಿತಃ ।**
**ದೀಕ್ಷಯಾ ರಹಿತಃ ಸಾಕ್ಷಾತ್**
**ನಾಪ್ನುಯಾಲ್ಲಿಂಗಮುತ್ತಮಮ್ ॥ 6-61**

ತನುವೆಂದರೆ (ಪಂಚಕ್ಲೇಶರಹಿತವಾದ) ದೇಹವಾಗಿದೆ. ಅತಪ್ತ ತನುವು (ಪಿಂಡಸ್ಥಲಿಯಾಗದವನು, ತಪೋರಹಿತನು) ಅಜ್ಞನು (ಪಿಂಡಜ್ಞಾನ ಸ್ಥಲಿಯಲ್ಲದವನು), ಆಮನು (ಅಪರಿಪಕ್ವನು, ವೈರಾಗ್ಯವಿಲ್ಲದವನು, ಅರ್ಥಾತ್ ಸಂಸಾರಹೇಯಸ್ಥಲಕ್ಕೆ ಭಾಜನನಾಗದವನು), ಸಂಸ್ಕಾರ ರಹಿತನು ಮತ್ತು ದೀಕ್ಷೆ ಹೊಂದದವನು ಸಾಕ್ಷಾತ್ ತಾನೇ ಉತ್ತಮವಾದ ಲಿಂಗವನ್ನು ಧರಿಸಕೂಡದು.

**ಅಘೋರಾಽಪಾಪಕಾಶೀತಿ**
**ಯಾ ತೇ ರುದ್ರ ಶಿವಾ ತನೂಃ ।**
**ಯಜುಷಾ ಗೀಯತೇ ಯಸ್ಮಾತ್**
**ತಸ್ಮಾಚ್ಛೈವೋಽಘವರ್ಜಿತಃ ॥ 6-62**

ಹೇ ರುದ್ರನೇ, ನಿನ್ನ ಮಂಗಲಸ್ವರೂಪವಾದ, ಲಿಂಗರೂಪವಾದ ಯಾವ ತನುವುಂಟೋ ಅದು ಅಘೋರವು (ಶಾಂತವೂ), ಅಪಾಪಕಾಶಿಯು (ಪಾಪರಹಿತ ಭಕ್ತರ ದೇಹದ ಮೇಲೆ ಪ್ರಕಾಶಿಸುವಂತಹದು) ಎಂಬುದಾಗಿ ಯಜುರ್ವೇದದಲ್ಲಿ ಹೇಳಲ್ಪಟ್ಟಿದೆ. ಆದ್ದರಿಂದ ಶೈವನು (ಇಷ್ಟಲಿಂಗಧಾರಿಯು) ಅಘವರ್ಜಿತನು (ಪಾಪರಹಿತನು) ಆಗಿರುತ್ತಾನೆ.

**ಯೋ ಲಿಂಗಧಾರೀ ನಿಯತಾಂತರಾತ್ಮಾ**
**ನಿತ್ಯಂ ಶಿವಾರಾಧನಬದ್ಧಚಿತ್ತಃ ।**
**ಸ ಧಾರಯೇತ್ ಸರ್ವಮಲಾಪಹತ್ಯೈ**
**ಭಸ್ಮಾಮಲಂ ಚಾರು ಯಥಾ ಪ್ರಯೋಗಮ್ ॥**
**6-63**
**–ವಂಶಸ್ಥವೃತ್ತಮ್**

ಇಷ್ಟಲಿಂಗಧಾರಿಯಾದವನು ನಿಯಂತ್ರಿತವಾದ ಅಂತರಾತ್ಮ (ಮನಸ್ಸುಳ್ಳವನಾಗಿ) ನಿತ್ಯವೂ, ಶಿವನ ಆರಾಧನೆಯಲ್ಲಿ ಬದ್ಧಚಿತ್ತನಾಗಿ ಸರ್ವಮಲಗಳ ನಿವೃತ್ತಿಗಾಗಿ ಸುಂದರವಾದ, ನಿರ್ಮಲವಾದ ಭಸ್ಮವನ್ನು ಶಾಸ್ತ್ರೋಕ್ತ ರೀತಿಯಲ್ಲಿ ಧರಿಸಿಕೊಳ್ಳಬೇಕು.

***ಇತಿ ಲಿಂಗಧಾರಣಸ್ಥಲಂ*** *ಇಲ್ಲಿಗೆ ಲಿಂಗಧಾರಣಸ್ಥಲವು ಮುಗಿಯಿತು.*

***ಓಂ ತತ್ಸತ್ ಇತಿ***

ಶ್ರೀ ಶಿವಗೀತೇಷು ಸಿದ್ಧಾಂತಾಗಮೇಷು ಶಿವಾದ್ವೈತವಿದ್ಯಾಯಾಂ ಶಿವಯೋಗಶಾಸ್ತ್ರೇ ಶ್ರೀರೇಣುಕಾಗಸ್ತ್ಯಸಂವಾದೇ, ವೀರಶೈವಧರ್ಮನಿರ್ಣಯೇ ಶ್ರೀಶಿವಯೋಗಿಶಿವಾಚಾರ್ಯವಿರಚಿತೇ ಶ್ರೀಸಿದ್ಧಾಂತಶಿಖಾಮಣೌ ಭಕ್ತಸ್ಥಲೇ ಗುರುಕಾರುಣ್ಯಸ್ಥಲಲಿಂಗಧಾರಣಸ್ಥಲಪ್ರಸಂಗೋ ನಾಮ ಷಷ್ಠಃ ಪರಿಚ್ಛೇದಃ॥

*ಓಂ ತತ್ಸತ್ ಇತಿ ಶ್ರೀ ಶಿವನಿಂದ ಉಪದೇಶಿಸಲ್ಪಟ್ಟ ಶ್ರೀ ಸಿದ್ಧಾಂತಾಗಮಗಳಲ್ಲಿಯ ಶಿವಾದ್ವೈತವಿದ್ಯಾರೂಪವೂ, ಶಿವಯೋಗಶಾಸ್ತ್ರವು ಶ್ರೀ ರೇಣುಕಾಗಸ್ತ್ಯಸಂವಾದವೂ ಶ್ರೀ ವೀರಶೈವಧರ್ಮನಿರ್ಣಯವೂ ಶ್ರೀಶಿವಯೋಗಿಶಿವಾಚಾರ್ಯ ವಿರಚಿತವೂ ಆದ ಶ್ರೀ ಸಿದ್ಧಾಂತಶಿಖಾಮಣಿಯಲ್ಲಿ, ಭಕ್ತಸ್ಥಲದಲ್ಲಿಯ ಗುರುಕಾರುಣ್ಯಸ್ಥಲ, ಲಿಂಗಧಾರಣಸ್ಥಲ ಪ್ರಸಂಗವೆಂಬ ಹೆಸರಿನ ಆರನೆಯ ಪರಿಚ್ಛೇದವು ಮುಗಿದುದು.*

## **ಸಪ್ತಮಃ ಪರಿಚ್ಛೇದಃ**
ಏಳನೆಯ ಪರಿಚ್ಛೇದವು
**ಭಸ್ಮರುದ್ರಾಕ್ಷಧಾರಣಪ್ರಸಂಗಃ**
ಭಸ್ಮರುದ್ರಾಕ್ಷಧಾರಣ ಪ್ರಸಂಗವು
**(68 ಶ್ಲೋಕಗಳು)**

### **6. ಅಥ ಭಸ್ಮಧಾರಣಸ್ಥಲಮ್**
ಈಗ ಭಸ್ಮಧಾರಣಸ್ಥಲವು
**(45 ಶ್ಲೋಕಗಳು)**

**ಭಸ್ಮಧಾರಣಸಂಯುಕ್ತಃ**
**ಪವಿತ್ರೋ ನಿಯತಾಶಯಃ ।**
**ಶಿವಾಭಿಧಾನಂ ಯತ್ಪ್ರೋಕ್ತಮ್**
**ಭಾಸನಾದ್ಭಸಿತಂ ತಥಾ ॥ 7–1**

ಭಸ್ಮಧಾರಣೆಯಿಂದ ಕೂಡಿದವನು ಪವಿತ್ರನೂ, ಸಂಯಮ ಚಿತ್ತವುಳ್ಳವನೂ ಆಗುವನು. ಯಾವುದು ಶಿವನ ಅಭಿಧಾನವಾಗಿ (ಶಿವನ ಹೆಸರಾಗಿ) ಹೇಳಲ್ಪಟ್ಟಿದೆಯೋ ಅದು ಶಿವತತ್ತ್ವವನ್ನು ಪ್ರಕಾಶಗೊಳಿಸುವುದರಿಂದ ಭಸಿತವೆಂತಲೂ ಕರೆಯಲ್ಪಡುತ್ತದೆ.

**ಮಹಾಭಸ್ಮೇತಿ ಸಂಚಿಂತ್ಯ**
**ಮಹಾದೇವಂ ಪ್ರಭಾಮಯಮ್ ।**
**ವರ್ತಂತೇ ಯೇ ಮಹಾಭಾಗಾಃ**
**ಮುಖ್ಯಾಸ್ತೇ ಭಸ್ಮಧಾರಿಣಃ ॥ 7–2**

ಪ್ರಭಾಮಯವಾದ (ಪ್ರಕಾಶ ರೂಪನಾದ) ಮಹದೇವನನ್ನು ಮಹಾಭಸ್ಮವೆಂದು ಭಾವಿಸಿ ಯಾರು ವರ್ತಿಸುವರೋ ಅಂತಹ ಮಹಾನುಭಾವರು (ಮಹಾನುಭಾವಿಗಳು) ಮುಖ್ಯರಾದ ಭಸ್ಮಧಾರಿಗಳೆಂದು ಕರೆಯಲ್ಪಡುತ್ತಾರೆ. ಇವರೇ ನಿರುಪಾಧಿಕ ಭಸ್ಮಧಾರಿಗಳು.

**ಶಿವಾಗ್ನ್ಯಾದಿಸಮುತ್ಪನ್ನಮ್**
**ಮಂತ್ರನ್ಯಾಸಾದಿಯೋಗತಃ ।**
**ತದುಪಾಧಿಕಮಿತ್ಯಾಹುಃ**
**ಭಸ್ಮತಂತ್ರವಿಶಾರದಾಃ ॥ 7–3**

ಪಂಚಬ್ರಹ್ಮ ಮಂತ್ರಗಳ ನ್ಯಾಸಾದಿಗಳ ಸಂಬಂಧದಿಂದ ಶಿವಮಂತ್ರ ಸಂಸ್ಕೃತವಾದ (ಸಂಸ್ಕಾರಯುತವಾದ) ಅಗ್ನಿಯಲ್ಲಿ ಉತ್ಪನ್ನವಾದ ಭಸ್ಮವನ್ನು ತಂತ್ರ ವಿಶಾರದರು (ಶಿವಾಗಮ ಪ್ರವೀಣರು) ಸೋಪಾಧಿಕ ಭಸ್ಮವೆಂದು ಕರೆಯುತ್ತಾರೆ.

**ವಿಭೂತಿರ್ಭಸಿತಂ ಭಸ್ಮ**
**ಕ್ಷಾರಂ ರಕ್ಷೇತಿ ಭಸ್ಮನಃ ।**
**ಏತಾನಿ ಪಂಚನಾಮಾನಿ**
**ಹೇತುಭಿಃ ಪಂಚಭಿರ್ಭೃಶಮ್ ॥ 7–4**

ನಿರ್ದಿಷ್ಟವಾದ ಐದು ಕಾರಣಗಳಿಂದ ಈ ಭಸ್ಮಕ್ಕೆ ವಿಭೂತಿ, ಭಸಿತ, ಭಸ್ಮ, ಕ್ಷಾರ ಮತ್ತು ರಕ್ಷಾ ಎಂಬುದಾಗಿ ಐದು ಹೆಸರುಗಳು ಬಂದಿರುತ್ತವೆ.

**ವಿಭೂತಿರ್ಭೂತಿಹೇತುತ್ವಾತ್**
**ಭಸಿತಂ ತತ್ತ್ವಭಾಸನಾತ್ ।**
**ಪಾಪಾನಾಂ ಭರ್ತ್ಸನಾದ್ಭಸ್ಮ**
**ಕ್ಷರಣಾತ್ ಕ್ಷಾರಮಾಪದಾಮ್ ।**
**ರಕ್ಷಣಾತ್ ಸರ್ವಭೂತೇಭ್ಯೋ**
**ರಕ್ಷೇತಿ ಪರಿಗೀಯತೇ ॥ 7–5**

ಭೂತಿಗೆ (ಅಣಿಮಾದಿ ಐಶ್ವರ್ಯಕ್ಕೆ) ಕಾರಣವಾಗಿರುವುದರಿಂದ ವಿಭೂತಿಯೆಂದೂ, ಶಿವತತ್ತ್ವವನ್ನು ಪ್ರಕಾಶಿಸುವುದರಿಂದ ಭಸಿತವೆಂದೂ, ಪಾಪಗಳನ್ನು ಭರ್ತ್ಸನ ಮಾಡುವುದರಿಂದ (ಬೆದರಿಸುವುದರಿಂದ) ಭಸ್ಮವೆಂದೂ, ಆಪತ್ತುಗಳನ್ನು ನಾಶಮಾಡುವುದರಿಂದ ಕ್ಷಾರವೆಂದೂ ಮತ್ತು ಎಲ್ಲ ಪ್ರಾಣಿಗಳಿಂದ ರಕ್ಷಣೆ ಮಾಡುವುದರಿಂದ ರಕ್ಷಾ ಎಂಬುದಾಗಿ ಹೇಳಲ್ಪಡುತ್ತದೆ.

**ನಂದಾ ಭದ್ರಾ ಚ ಸುರಭಿಃ**
**ಸುಶೀಲಾ ಸುಮನಾಸ್ತಥಾ ।**
**ಪಂಚ ಗಾವೋ ವಿಭೋರ್ಜಾತಾಃ**
**ಸದ್ಯೋಜಾತಾದಿವಕ್ತ್ರತಃ ॥ 7–6**

ವಿಭುವಾದ ಶಿವನ ಸದ್ಯೋಜಾತ, ವಾಮದೇವ, ಅಘೋರ, ತತ್ಪುರುಷ ಮತ್ತು ಈಶಾನಗಳೆಂಬ ಪಂಚಮುಖಗಳಿಂದ ಕ್ರಮವಾಗಿ ನಂದಾ, ಭದ್ರಾ, ಸುರಭಿ, ಸುಶೀಲಾ ಮತ್ತು ಸುಮನಾ ಎಂಬ ಐದು ಹೆಸರಿನ ಗೋವುಗಳು ಪ್ರಾದುರ್ಭವಿಸಿದವು (ಪ್ರಕಟಗೊಂಡವು).

**ಕಪಿಲಾ ಕೃಷ್ಣಾ ಧವಲಾ**
**ಧೂಮ್ರಾ ರಕ್ತಾ ತಥೈವ ಚ ।**
**ನಂದಾದೀನಾಂ ಗವಾಂ ವರ್ಣಾಃ**
**ಕ್ರಮೇಣ ಪರಿಕೀರ್ತಿತಾಃ ॥ 7–7**

ಮೇಲೆ ಹೇಳಿದ ನಂದಾ, ಭದ್ರಾ ಮುಂತಾದ ಪಂಚಗೋವುಗಳು ಕ್ರಮವಾಗಿ ಕಪಿಲ (ಗೋರೋಚನ), ಕೃಷ್ಣ (ಕಪ್ಪು), ಧವಳ (ಬಿಳಿ), ಧೂಮ್ರಾ (ಬೂದ), ರಕ್ತ (ಕೆಂಪು) ವರ್ಣದವುಗಳಾಗಿರುತ್ತವೆ.

**ಸದ್ಯೋಜಾತಾದ್ವಿಭೂತಿಶ್ಚ**
**ವಾಮಾದ್ಭಸಿತಮೇವ ಚ ॥ 7–8**

**ಅಘೋರಾದ್ಭಸ್ಮ ಸಂಜಾತಮ್**
**ತತ್ಪುರುಷಾತ್ ಕ್ಷಾರಮೇವ ಚ ।**
**ರಕ್ಷಾ ಚೇಶಾನವಕ್ತ್ರಾಚ್ಚ**
**ನಂದಾದಿದ್ವಾರತೋಽಭವತ್ ॥ 7–9**

ಸದ್ಯೋಜಾತ ಮುಖದಿಂದ ಉಂಟಾದ ನಂದಾಗೋವಿನಿಂದ ವಿಭೂತಿಯು, ವಾಮದೇವ ಮುಖದಿಂದ ಉಂಟಾದ ಭದ್ರಾಗೋವಿನಿಂದ ಭಸಿತವು, ಅಘೋರ ಮುಖದಿಂದ ಉಂಟಾದ ಸುರಭಿ ಗೋವಿನಿಂದ ಭಸ್ಮವು, ತತ್ಪುರುಷ ಮುಖದಿಂದ ಉಂಟಾದ ಸುಶೀಲಾ ಗೋವಿನಿಂದ ಕ್ಷಾರವೂ ಮತ್ತು ಈಶಾನ ಮುಖದಿಂದ ಜನಿಸಿದ ಸುಮನಾ ಗೋವಿನಿಂದ ರಕ್ಷೆಯು ಉಂಟಾಯಿತು.

**ಧಾರಯೇನ್ನಿತ್ಯಕಾರ್ಯೇಷು**

**ವಿಭೂತಿಂ ಚ ಪ್ರಯತ್ನತಃ ।**
**ನೈಮಿತ್ತಿಕೇಷು ಭಸಿತಮ್**
**ಕ್ಷಾರಂ ಕಾಮ್ಯೇಷು ಸರ್ವದಾ ॥ 7–10**

**ಪ್ರಾಯಶ್ಚಿತ್ತೇಷು ಸರ್ವೇಷು**
**ಭಸ್ಮ ನಾಮ ಯಥಾವಿಧಿ ।**
**ರಕ್ಷಾ ಚ ಮೋಕ್ಷಕಾರ್ಯೇಷು**
**ಪ್ರಯೋಕ್ತವ್ಯಾ ಸದಾ ಬುಧೈಃ ॥ 7–11**

ನಿತ್ಯಕರ್ಮಗಳಲ್ಲಿ ವಿಭೂತಿಯನ್ನು, ನೈಮಿತ್ತಿಕ ಕರ್ಮಗಳಲ್ಲಿ ಭಸಿತವನ್ನು ಮತ್ತು ಕಾಮ್ಯಕರ್ಮಗಳಲ್ಲಿ ಯಾವಾಗಲೂ ಪ್ರಯತ್ನಪೂರ್ವಕವಾಗಿ ಕ್ಷಾರವನ್ನು ಧರಿಸಿಕೊಳ್ಳಬೇಕು. ಎಲ್ಲ ವಿಧವಾದ ಪ್ರಾಯಶ್ಚಿತ್ತ ಕರ್ಮಗಳಲ್ಲಿ ಭಸ್ಮವನ್ನು ಮತ್ತು ಮೋಕ್ಷ ಕಾರ್ಯಗಳಲ್ಲಿ ರಕ್ಷೆಯನ್ನು ಪಂಡಿತರು ವಿಧಿವತ್ತಾಗಿ ಯಾವಾಗಲೂ ಪ್ರಯೋಗಿಸಬೇಕು.

**ನಂದಾದೀನಾಂ ತು ಯೇ ವರ್ಣಾಃ**
**ಕಪಿಲಾದ್ಯಾಃ ಪ್ರಕೀರ್ತಿತಾಃ ।**
**ತ ಏವ ವರ್ಣಾ ವಿಖ್ಯಾತಾ**
**ಭೂತ್ಯಾದೀನಾಂ ಯಥಾಕ್ರಮಮ್ ॥ 7–12**

ನಂದಾದಿ ಗೋವುಗಳಿಗೆ ಯಾವ ಕಪಿಲಾದಿ ವರ್ಣಗಳು ಹೇಳಲಾಗಿದೆಯೋ ಅವೇ ವರ್ಣಗಳೇ ಕ್ರಮವಾಗಿ ವಿಭೂತ್ಯಾದಿಗಳಿಗೂ ಹೇಳಲಾಗಿದೆ.

**ಭಸ್ಮೋತ್ಪಾದನಮುದ್ದಿಷ್ಟಮ್**
**ಚತುರ್ಧಾ ತಂತ್ರವೇದಿಭಿಃ ।**
**ಕಲ್ಪಂ ಚೈವಾನುಕಲ್ಪಂ ತು–**
**ಉಪಕಲ್ಪಮಕಲ್ಪಕಮ್ ॥ 7–13**

**ಏಷಾಮಾದಿಮಮುತ್ಕೃಷ್ಟಮ್**
**ಅನ್ಯತ್ ಸರ್ವಮಭಾವತಃ ।**
**ಯಥಾ ಶಾಸ್ತ್ರೋಕ್ತವಿಧಿನಾ**
**ಗೃಹೀತ್ವಾ ಗೋಮಯಂ ನವಮ್ ॥ 7–14**

ತಂತ್ರಜ್ಞಾನಿಗಳು (ಆಗಮ ವಿಶಾರದರು) ಭಸ್ಮದ ಉತ್ಪಾದನೆಯನ್ನು ಕಲ್ಪ, ಅನುಕಲ್ಪ, ಉಪಕಲ್ಪ ಮತ್ತು ಅಕಲ್ಪವೆಂಬುದಾಗಿ ನಾಲ್ಕು ಪ್ರಕಾರವಾಗಿ ಹೇಳಿದ್ದಾರೆ. ಇವುಗಳಲ್ಲಿ ಮೊದಲನೆಯದೇ (ಕಲ್ಪ ಭಸ್ಮವೇ) ಉತ್ಕೃಷ್ಟವಾಗಿದೆ. ಉಳಿದವುಗಳನ್ನು ಇದು ಇಲ್ಲದಿದ್ದಾಗ ಉಪಯೋಗಿಸಬಹುದಾಗಿದೆ. ನೂತನವಾದ ಗೋಮಯವನ್ನು (ಸಗಣಿಯನ್ನು) ಶಾಸ್ತ್ರದಲ್ಲಿ ಹೇಳಿದ ವಿಧಿಯಂತೆ ತೆಗೆದುಕೊಳ್ಳಬೇಕು.

**ಸದ್ಯೇನ ವಾಮದೇವೇನ**
**ಕುರ್ಯಾತ್ಪಿಂಡಮನುತ್ತಮಮ್ ।**
**ಶೋಷಯೇತ್ಪುರುಷೇಣೈವ**
**ದಹೇದ್ ಘೋರಾಚ್ಛಿವಾಗ್ನಿನಾ ।**
**ತತ ಈಶಾನಮಂತ್ರೇಣ**

**ಬಿಲ್ವಪಾತ್ರೇ ನಿಧಾಪಯೇತ್ । 7–15**

ಸದ್ಯೋಜಾತ ಮಂತ್ರವನ್ನು ಹೇಳುತ್ತಾ ಹೊಸದಾದ ಗೋಮಯವನ್ನು ತೆಗೆದುಕೊಂಡು, ವಾಮದೇವ ಮಂತ್ರದಿಂದ ಉತ್ತಮವಾದ ಪಿಂಡೆಯನ್ನು (ಉಂಡೆಯನ್ನು) ಮಾಡಬೇಕು. ತತ್ಪುರುಷ ಮಂತ್ರದಿಂದ ಒಣಗಿಸಬೇಕು. ಅದರಂತೆ ಅಘೋರ ಮಂತ್ರದಿಂದ ಅದನ್ನು ಅಗ್ನಿಯಲ್ಲಿ ದಹಿಸಬೇಕು (ಸುಡಬೇಕು). ಅನಂತರ ಈಶಾನ ಮಂತ್ರವನ್ನು ಹೇಳುತ್ತಾ (ಆ ಸುಟ್ಟ ಗೋಮಯವನ್ನು) ಬಿಲ್ವದ ಪಾತ್ರೆಯಲ್ಲಿ ಇರಿಸಬೇಕು.

**ಕಲ್ಪಂ ತದ್ಭಸ್ಮ ವಿಜ್ಞೇಯಮ್**
**ಅನುಕಲ್ಪಮಥೋಚ್ಯತೇ ॥ 7–16**

ಇದುವೆ ಕಲ್ಪಭಸ್ಮವೆಂದು ತಿಳಿಯಬೇಕು. ಇನ್ನು ಮುಂದೆ ಅನುಕಲ್ಪ ವಿಧಿಯು ಹೇಳಲಾಗಿದೆ.

**ವನೇಷು ಗೋಮಯಂ ಯಚ್ಚ**
**ಶುಷ್ಕಂ ಚೂರ್ಣೀಕೃತಂ ತಥಾ ।**
**ದಗ್ಧಂ ಚೈವಾನುಕಲ್ಪಾಖ್ಯಮ್**
**ಆಪಣಾದಿಗತಂ ತು ಯತ್ ॥ 7–17**

**ವಸ್ತ್ರೇಣೋತ್ತಾರಿತಂ ಭಸ್ಮ**
**ಗೋಮೂತ್ರಾಬದ್ಧಪಿಂಡಿತಮ್ ।**
**ದಗ್ಧಂ ಪ್ರಾಗುಕ್ತವಿಧಿನಾ**
**ಭವೇದ್ಭಸ್ಮೋಪಕಲ್ಪಕಮ್ ॥ 7–18**

ವನದಲ್ಲಿ (ಅಡವಿಯಲ್ಲಿ) ಒಣಗಿದ ಗೋಮಯವನ್ನು ತೆಗೆದುಕೊಂಡು ಚೂರ್ಣ ಮಾಡಿ ಸುಟ್ಟಿರುವ ಭಸ್ಮವೇ ಅನುಕಲ್ಪವೆಂಬ ಹೆಸರಿನ ಭಸ್ಮವಾಗಿದೆ. ಅಂಗಡಿಯಲ್ಲಿರುವಂತಹ ಯಾವ ಭಸ್ಮವೋ ಅದನ್ನು ವಸ್ತ್ರದಲ್ಲಿ ಸೋಸಿ, ಗೋಮೂತ್ರದಿಂದ ಉಂಡೆಯನ್ನು ಕಟ್ಟಿ ಮೇಲೆ ಹೇಳಿದ ವಿಧಿಯಂತೆ ಸುಟ್ಟು ತಯಾರಾದ ಭಸ್ಮವೇ ಉಪಕಲ್ಪ ಭಸ್ಮವಾಗಿದೆ.

**ಅನ್ಯೈರಾಪಾದಿತಂ ಭಸ್ಮ**
**ಅಕಲ್ಪಮಿತಿ ನಿಶ್ಚಿತಮ್ ।**
**ಏಷ್ವೇಕತಮಮಾದಾಯ**
**ಪಾತ್ರೇಷು ಕಲಶಾದಿಷು ॥ 7–19**

**ತ್ರಿಸಂಧ್ಯಮಾಚರೇತ್ ಸ್ನಾನಮ್**
**ಯಥಾಸಂಭವಮೇವ ವಾ ।**
**ಸ್ನಾನಕಾಲೇ ಕರೌ ಪಾದೌ**
**ಪ್ರಕ್ಷಾಲ್ಯ ವಿಮಲಾಂಭಸಾ ॥ 7–20**

ಅನ್ಯರಿಂದ ತಯಾರಿಸಲ್ಪಟ್ಟ ಭಸ್ಮವು ಅಕಲ್ಪ ಭಸ್ಮವೆಂದು ನಿಶ್ಚಿತವಾಗಿ ತಿಳಿದುಕೊಳ್ಳಬೇಕು. ಹೀಗೆ ಈ ನಾಲ್ಕು ಭಸ್ಮಗಳನ್ನು ಬೇರೆ ಬೇರೆ ಪಾತ್ರೆಗಳಲ್ಲಿ ಇರಿಸಬೇಕು. ಇವುಗಳಲ್ಲಿ ಯಾವುದಾದರೊಂದನ್ನು ತೆಗೆದುಕೊಂಡು ಮೂರು ಸಂಧ್ಯಾಕಾಲಗಳಲ್ಲಿ (ಪ್ರಾತಃ, ಮಧ್ಯಾಹ್ನ, ಸಾಯಂಕಾಲ) ಅಥವಾ ತನಗೆ ಸಾಧ್ಯವಾದಷ್ಟು ವೇಳೆ ಭಸ್ಮಸ್ನಾನವನ್ನು ಆಚರಿಸಬೇಕು. ಭಸ್ಮಸ್ನಾನವನ್ನು ಮಾಡುವ ಪೂರ್ವದಲ್ಲಿ ನಿರ್ಮಲವಾದ ನೀರಿನಿಂದ ಹಸ್ತಪಾದಗಳನ್ನು ತೊಳೆದುಕೊಳ್ಳಬೇಕು.

**ವಾಮಹಸ್ತತಲೇ ಭಸ್ಮ**
**ಕ್ಷಿಪ್ತ್ವಾಽಽಚ್ಛಾದ್ಯಾನ್ಯಪಾಣಿನಾ ।**
**ಅಷ್ಟಕೃತ್ವಾಽಥ ಮೂಲೇನ**
**ಮೌನೀ ಭಸ್ಮಾಭಿಮಂತ್ರ್ಯ ಚ ॥ 7–21**

**ಶಿರ ಈಶಾನಮಂತ್ರೇಣ**
**ಪುರುಷೇಣ ಮುಖಂ ತಥಾ ।**
**ಹೃತ್ಪ್ರದೇಶಮಘೋರೇಣ**
**ವಾಮದೇವೇನ ಗುಹ್ಯಕಮ್ ॥ 7–22**

ಎಡಹಸ್ತದ ಅಂಗೈಯಲ್ಲಿ ಭಸ್ಮವನ್ನಿಟ್ಟು ಬಲಹಸ್ತದಿಂದ ಮುಚ್ಚಿ ಮೌನಿಯಾಗಿ ಮೂಲಮಂತ್ರದಿಂದ (ಪಂಚಾಕ್ಷರ ಮಂತ್ರದಿಂದ) ಎಂಟು ಸಾರಿ ಅಭಿಮಂತ್ರಿಸಿ (ಜಪವನ್ನು ಮಾಡಿ), ಈಶಾನಮಂತ್ರದಿಂದ ಮಸ್ತಕವನ್ನು, ತತ್ಪುರುಷ ಮಂತ್ರದಿಂದ ಮುಖವನ್ನು, ಅಘೋರಮಂತ್ರದಿಂದ ಹೃದಯ ಪ್ರದೇಶವನ್ನು, ವಾಮದೇವ ಮಂತ್ರದಿಂದ ಗುಹ್ಯ ಸ್ಥಾನವನ್ನು–

**ಪಾದೌ ಸದ್ಯೇನ ಸರ್ವಾಂಗಮ್**
**ಪ್ರಣವೇನೈವ ಸೇಚಯೇತ್ ।**
**ಭಸ್ಮನಾ ವಿಹಿತಂ ಸ್ನಾನಮ್**
**ಇದಮಾಗ್ನೇಯಮುತ್ತಮಮ್ ॥ 7–23**

ಸದ್ಯೋಜಾತ ಮಂತ್ರದಿಂದ ಪಾದಗಳನ್ನು, ಪ್ರಣವದಿಂದ ಸರ್ವಾಂಗಗಳಲ್ಲಿ ಭಸ್ಮವನ್ನು ಸಿಂಪಡಿಸಿಕೊಳ್ಳಬೇಕು (ಭಸ್ಮಸ್ನಾನವನ್ನು ಮಾಡಬೇಕು). ಹೀಗೆ ಭಸ್ಮದಿಂದ ಮಾಡಿದ ಈ ಸ್ನಾನವು ಉತ್ತಮವಾದ ಆಗ್ನೇಯ ಸ್ನಾನ (ಅಗ್ನಿ ಸ್ನಾನ)ವೆಂದು ಕರೆಯಲಾಗಿದೆ.

**ಸ್ನಾನೇಷು ವಾರುಣಾದ್ಯೇಷು**
**ಮುಖ್ಯಮೇತನ್ಮಲಾಪಹಮ್ ।**
**ಭಸ್ಮಸ್ನಾನವತಾಂ ಪುಂಸಾಮ್**
**ಯಥಾಯೋಗಂ ದಿನೇ ದಿನೇ ॥ 7–24**

ನೀರು ಮೊದಲಾದವುಗಳಿಂದ ಮಾಡುವ (ಏಳು ವಿಧ ಸ್ನಾನಗಳಲ್ಲಿ) ಸರ್ವಮಲವನ್ನು ದೂರ ಮಾಡುವ ಈ ಭಸ್ಮಸ್ನಾನವೇ ಮುಖ್ಯವಾದುದಾಗಿದೆ. ಶಾಸ್ತ್ರೋಕ್ತಪದ್ಧತಿಯಂತೆ ದಿನದಿನವೂ ಭಸ್ಮಸ್ನಾನ ಮಾಡುವ ಜನರಿಗೆ–

**ವಾರುಣಾದ್ಯೈರಲಂ ಸ್ನಾನೈಃ**
**ಬಾಹ್ಯದೋಷಾಪಹಾರಿಭಿಃ ।**
**ಆಗ್ನೇಯಂ ಭಸ್ಮನಾ ಸ್ನಾನಮ್**
**ಯತಿಭಿಸ್ತು ವಿಧೀಯತೇ ॥ 7–25**

ಬಾಹ್ಯ (ಹೊರಗಿನ) ದೋಷಗಳನ್ನು ಪರಿಹರಿಸಲು ವಾರುಣಾದಿ (ಜಲಾದಿ) ಸ್ನಾನಗಳು ಸಾಕು (ಅಂದರೆ ಇದು ಹೆಚ್ಚು ಪ್ರಯೋಜನಕಾರಿಯಲ್ಲ). ಅಂತೆಯೇ ಆಗ್ನೇಯ ಸ್ನಾನವೆಂದು ಹೇಳಲ್ಪಡುವ ಭಸ್ಮಸ್ನಾನವು ಯತಿಗಳಿಂದ ವಿಧಿಸಲ್ಪಟ್ಟಿದೆ.

**ಆರ್ದ್ರಸ್ನಾನಾತ್ ಪರಂ ಭಸ್ಮ**
**ಆರ್ದ್ರೇ ಜಂತುವಧೋ ಧ್ರುವಮ್ ।**
**ಆರ್ದ್ರಂ ತು ಪ್ರಕೃತಿಂ ವಿದ್ಯಾತ್**
**ಪ್ರಕೃತಿಂ ಬಂಧನಂ ವಿದುಃ ॥ 7–26**

ಆರ್ದ್ರಸ್ನಾನಕ್ಕಿಂತಲೂ (ಜಲಸ್ನಾನಕ್ಕಿಂತಲೂ) ಭಸ್ಮಸ್ನಾನವು ಶ್ರೇಷ್ಠವಾದುದು. ಆರ್ದ್ರಸ್ನಾನದಿಂದ ಪ್ರಾಣಿವಧೆಯು ನಿಶ್ಚಯವಾದುದಾಗಿದೆ. ಆರ್ದ್ರತೆಯನ್ನು (ಜಲವನ್ನು) ಪ್ರಕೃತಿಯೆಂಬುದಾಗಿ ತಿಳಿದುಕೊಳ್ಳಬೇಕು. ಪ್ರಕೃತಿಯನ್ನು ಬಂಧನರೂಪವನ್ನಾಗಿ ಜ್ಞಾನಿಗಳು ತಿಳಿದುಕೊಂಡಿದ್ದಾರೆ.

**ಪ್ರಕೃತೇಸ್ತು ಪ್ರಹಾಣಾರ್ಥಮ್**
**ಭಸ್ಮನಾ ಸ್ನಾನಮಿಷ್ಯತೇ ।**
**ಬ್ರಹ್ಮಾದ್ಯಾ ವಿಬುಧಾಃ ಸರ್ವೇ**
**ಮುನಯೋ ನಾರದಾದಯಃ ॥ 7–27**

**ಯೋಗಿನಃ ಸನಕಾದ್ಯಾಶ್ಚ**
**ಬಾಣಾದ್ಯಾ ದಾನವಾ ಅಪಿ ।**
**ಭಸ್ಮಸ್ನಾನಯುತಾಃ ಸರ್ವೇ**
**ಶಿವಭಕ್ತಿಪರಾಯಣಾಃ ।**
**ನಿರ್ಮುಕ್ತದೋಷಕಲಿಲಾಃ**
**ನಿತ್ಯಶುದ್ಧಾ ಭವಂತಿ ಹಿ ॥ 7–28**

ಪ್ರಕೃತಿಯಿಂದ ಬಿಡುಗಡೆ ಹೊಂದಲು ಭಸ್ಮಸ್ನಾನವನ್ನು ಸ್ವೀಕರಿಸಲಾಗಿದೆ. ಬ್ರಹ್ಮನೇ ಮೊದಲಾದ ವಿಬುಧರು (ದೇವತೆಗಳು), ನಾರದನೇ ಮೊದಲಾದ ಮುನಿಗಳು, ಸನಕನೇ ಮೊದಲಾದ ಯೋಗಿಗಳು ಮತ್ತು ಬಾಣಾಸುರನೇ ಮೊದಲಾದ ಎಲ್ಲಾ ದಾನವರು, ಶಿವಭಕ್ತಿ ಪರಾಯಣರಾದ ಇವರೆಲ್ಲರೂ ಭಸ್ಮಸ್ನಾನವನ್ನು ಮಾಡಿರುವವರಾಗಿರುತ್ತಾರೆ. ಅವರೆಲ್ಲರೂ ದೋಷಸಮೂಹದಿಂದ ಮುಕ್ತರಾಗಿ ನಿತ್ಯಶುದ್ಧರಾಗಿರುತ್ತಾರೆ.

**ನಮಶ್ಶಿವಾಯೇತಿ ಭಸ್ಮ**
**ಕೃತ್ವಾ ಸಪ್ತಾಭಿಮಂತ್ರಿತಮ್ ।**
**ಉದ್ಧೂಲಯೇತ್ ತೇನ ದೇಹಮ್**
**ತ್ರಿಪುಂಡ್ರಂ ಚಾಪಿ ಧಾರಯೇತ್ ॥ 7–29**

ನಮಃಶಿವಾಯ ಎಂಬ ಮಂತ್ರದಿಂದ ಭಸ್ಮವನ್ನು ಏಳು ಸಾರಿ ಅಭಿಮಂತ್ರಿಸಿ, ಅದರಿಂದ ಶರೀರವನ್ನು ಉದ್ಧೂಲನ ಮಾಡಿಕೊಳ್ಳಬೇಕು (ಭಸ್ಮದ ಕಣಗಳನ್ನು ದೇಹದ ಮೇಲೆ ಸಿಂಪಡಿಸಿಕೊಳ್ಳಬೇಕು) ಮತ್ತು ತ್ರಿಪುಂಡ್ರವನ್ನು (ಮೂರು ಬೆರಳಿನ ಭಸ್ಮವನ್ನು) ಧರಿಸಬೇಕು.

**ಸರ್ವಾಂಗೋದ್ಧೂಲನಂ ಚಾಪಿ**
**ನ ಸಮಾನಂ ತ್ರಿಪುಂಡ್ರಕೈಃ ।**
**ತಸ್ಮಾತ್ ತ್ರಿಪುಂಡ್ರಮೇವೈಕಮ್**
**ಲಿಖೇದುದ್ಧೂಲನಂ ವಿನಾ ॥ 7–30**

**ತ್ರಿಪುಂಡ್ರಂ ಧಾರಯೇನ್ನಿತ್ಯಮ್**
**ಭಸ್ಮನಾ ಸಜಲೇನ ಚ ।**
**ಸ್ಥಾನೇಷು ಪಂಚದಶಸು**
**ಶರೀರೇ ಸಾಧಕೋತ್ತಮಃ ॥ 7–31**

ಸರ್ವಾಂಗದಲ್ಲಿ ಉದ್ಧೂಲನವನ್ನು ಮಾಡಿಕೊಂಡರೂ, ಅದು ತ್ರಿಪುಂಡ್ರಕ್ಕೆ ಸಮಾನವಾಗಲಾರದು. ಆದ್ದರಿಂದ ಉದ್ಧೂಲನ ಇಲ್ಲದೆ ಕೇವಲ ತ್ರಿಪುಂಡ್ರವನ್ನೇ ಧರಿಸಬೇಕು. ಉದಕದೊಡನೆ ಕೂಡಿದ ಭಸ್ಮದಿಂದ ದೇಹದಲ್ಲಿ ಹದಿನೈದು ಸ್ಥಾನಗಳಲ್ಲಿ ಸಾಧಕ ಶ್ರೇಷ್ಠನು ತ್ರಿಪುಂಡ್ರವನ್ನು ಯಾವಾಗಲೂ (ಪಂಚಾಕ್ಷರ ಪ್ರಣವ ಮಂತ್ರೋಚ್ಚಾರಣೆಯಿಂದ) ಧರಿಸಬೇಕು.

**ಉತ್ತಮಾಂಗೇ ಲಲಾಟೇ ಚ**
**ಶ್ರವಣದ್ವಿತಯೇ ತಥಾ ।**
**ಗಲೇ ಭುಜದ್ವಯೇ ಚೈವ**
**ಹೃದಿ ನಾಭೌ ಚ ಪೃಷ್ಠಕೇ ॥ 7–32**
**ಬಾಹುಯುಗ್ಮೇ ಕಕುದ್ದೇಶೇ**
**ಮಣಿಬಂಧದ್ವಯೇ ತಥಾ ।**
**ತ್ರಿಪುಂಡ್ರಂ ಭಸ್ಮನಾ ಧಾರ್ಯಮ್**
**ಮೂಲಮಂತ್ರೇಣ ಸಾಧಕೈಃ ॥ 7–33**

ಸಾಧಕನು ತನ್ನ ಶರೀರದ ಮಸ್ತಕ, ಹಣೆ, ಎರಡು ಕಿವಿಗಳು, ಕಂಠ, ಎರಡು ಭುಜಗಳು, ಹೃದಯ, ನಾಭಿ, ಬೆನ್ನು, ಎರಡು ಬಾಹುಗಳು, ಹೆಗಲು, ಎರಡು ಮುಂಗೈಗಳು– ಹೀಗೆ (ಈ ಹದಿನೈದು ಸ್ಥಾನಗಳಲ್ಲಿ) ಪಂಚಾಕ್ಷರ ಮಂತ್ರವನ್ನು ಪಠಿಸುತ್ತಾ ಭಸ್ಮದಿಂದ ತ್ರಿಪುಂಡ್ರವನ್ನು ಧರಿಸಿಕೊಳ್ಳಬೇಕು.

**ವಾಮಹಸ್ತತಲೇ ಭಸ್ಮ**
**ಕ್ಷಿಪ್ತ್ವಾಽಽಚ್ಛಾದ್ಯಾನ್ಯಪಾಣಿನಾ ।**
**ಅಗ್ನಿರಿತ್ಯಾದಿಮಂತ್ರೇಣ**
**ಸ್ಪೃಶನ್ ವಾರಾಽಭಿಮಂತ್ರ್ಯ ಚ ॥ 7–34**

**ತ್ರಿಪುಂಡ್ರಮುಕ್ತಸ್ಥಾನೇಷು**
**ದಧ್ಯಾತ್ ಸಜಲಭಸ್ಮನಾ ।**
**ಶಿವಂ ಶಿವಂಕರಂ ಶಾಂತಮ್**
**ಸ ಪ್ರಾಪ್ನೋತಿ ನ ಸಂಶಯಃ ॥ 7–35**

ತನ್ನ ಎಡಗೈಯಲ್ಲಿ ಭಸ್ಮವನ್ನಿಟ್ಟುಕೊಂಡು ಬಲಗೈನಿಂದ ಅದನ್ನು ಮುಚ್ಚಿ, ಅಗ್ನಿರಿತಿ ಭಸ್ಮ ಮುಂತಾದ ಮಂತ್ರಗಳಿಂದ ಭಸ್ಮವನ್ನು ಸ್ಪರ್ಶಿಸಿ, ಉದಕದಿಂದ ಏಳು ಸಾರಿ ಅಭಿಮಂತ್ರಿಸಬೇಕು ಮತ್ತು ನೀರಿನಿಂದ ಮಿಶ್ರಿತವಾದ ಭಸ್ಮದಿಂದ ಮೇಲೆ ಹೇಳಿದ ಸ್ಥಾನಗಳಲ್ಲಿ ತ್ರಿಪುಂಡ್ರವನ್ನೂ ಧರಿಸಬೇಕು. ಹೀಗೆ ಮಾಡಿದವನು ಶಾಂತನೂ, ಮಂಗಳಕರನೂ ಆದ ಶಿವನನ್ನು ಪಡೆದುಕೊಳ್ಳುತ್ತಾನೆ. ಇದರಲ್ಲಿ ಯಾವ ಸಂಶಯವೂ ಇಲ್ಲ.

**ಮಧ್ಯಾಂಗುಲಿತ್ರಯೇಣೈವ**
**ಸ್ವದಕ್ಷಿಣಕರಸ್ಯ ತು ।**
**ಷಡಂಗುಲಾಯತಂ ಮಾನಮ್**
**ಅಪಿ ವಾಽಲಿಕಮಾನಕಮ್ ॥ 7–36**

**ನೇತ್ರಯುಗ್ಮಪ್ರಮಾಣೇನ**
**ಫಾಲೇ ದಧ್ಯಾತ್ ತ್ರಿಪುಂಡ್ರಕಮ್ ।**
**ಮಧ್ಯಮಾನಾಮಿಕಾಂಗುಷ್ಠೈಃ**
**ಅನುಲೋಮವಿಲೋಮತಃ ॥ 7–37**

**ಧಾರಯೇದ್ಯಸ್ತ್ರಿಪುಂಡ್ರಾಂಕಮ್**
**ಸ ರುದ್ರೋ ನಾತ್ರ ಸಂಶಯಃ ॥ 7–38**

ತನ್ನ ಬಲಗೈಯ ನಡುವಿನ ಮೂರು ಬೆರಳುಗಳಿಂದ ಆರು ಅಂಗುಲ ಉದ್ದವಾಗಿ ಅಥವಾ ಹಣೆಯ ಪ್ರಮಾಣದಲ್ಲಿ ಎರಡೂ ಕಣ್ಣುಗಳ ಕಡೆದಂಡೆಗಳ ಪ್ರಮಾಣದಲ್ಲಾಗಲಿ ಹಣೆಯಲ್ಲಿ ತ್ರಿಪುಂಡ್ರವನ್ನು ಧರಿಸಬೇಕು ಅಥವಾ ಬಲಗೈಯ ಮಧ್ಯಮ, ಅನಾಮಿಕ ಮತ್ತು ಅಂಗುಷ್ಠ – ಈ ಮೂರು ಬೆರಳುಗಳಿಂದಲಾದರೂ ಅನುಲೋಮ ವಿಲೋಮ ಪದ್ಧತಿಯಂತೆ ಯಾರು ತ್ರಿಪುಂಡ್ರವನ್ನು ಹಣೆಯಲ್ಲಿ ಧರಿಸಿಕೊಳ್ಳುತ್ತಾರೆಯೋ ಅವರು ರುದ್ರರೇ ಆಗುತ್ತಾರೆ. ಇದರಲ್ಲಿ ಸಂಶಯವಿಲ್ಲ.

**ಋಜು ಶ್ವೇತಮನುವ್ಯಾಪ್ತಮ್**
**ಸ್ನಿಗ್ಧಂ ಶ್ರೋತ್ರಪ್ರಮಾಣಕಮ್ ।**
**ಏವಂ ಸಲ್ಲಕ್ಷಣೋಪೇತಮ್**
**ತ್ರಿಪುಂಡ್ರಂ ಸರ್ವಸಿದ್ಧಿದಮ್ ॥ 7–39**

ಸರಳವೂ, ಶುಭ್ರವೂ, ಅಖಂಡವೂ, ನುಣುಪಾಗಿಯೂ, ಎರಡೂ ಕಿವಿಗಳ ಪ್ರಮಾಣದಲ್ಲಿಯೂ, ಹೀಗೆ ಸುಲಕ್ಷಣದಿಂದ ಕೂಡಿದ ತ್ರಿಪುಂಡ್ರವು ಸರ್ವಸಿದ್ಧಿದಾಯಕವಾಗಿದೆ.

**ಪ್ರಾತಃಕಾಲೇ ಚ ಮಧ್ಯಾಹ್ನೇ**
**ಸಾಯಾಹ್ನೇ ಚ ತ್ರಿಪುಂಡ್ರಕಮ್ ।**
**ಕದಾಚಿದ್ಭಸ್ಮನಾ ಕುರ್ಯಾತ್**
**ಸ ರುದ್ರೋ ನಾತ್ರ ಸಂಶಯಃ ॥ 7–40**

ಪ್ರಾತಃಕಾಲದಲ್ಲಿ, ಮಧ್ಯಾಹ್ನದಲ್ಲಿ ಮತ್ತು ಸಾಯಂಕಾಲದಲ್ಲಿ – ಹೀಗೆ (ಮೂರು ಕಾಲದಲ್ಲಿ) ಇಲ್ಲವೇ ಯಾವುದಾದರೂ ಒಂದು ಕಾಲದಲ್ಲಿ ತ್ರಿಪುಂಡ್ರವನ್ನು ಧರಿಸಿಕೊಂಡರೆ ಅವನು ರುದ್ರಸ್ವರೂಪನೇ ಆಗುತ್ತಾನೆ. ಇದರಲ್ಲಿ ಯಾವ ಸಂಶಯವೂ ಇಲ್ಲ.

**ಏವಂವಿಧಂ ವಿಭೂತ್ಯಾ ಚ**
**ಕುರುತೇ ಯಸ್ತ್ರಿಪುಂಡ್ರಕಮ್ ।**
**ಸ ರೌದ್ರಧರ್ಮಸಂಯುಕ್ತಃ**
**ತ್ರಯೀಮಯ ಇತಿ ಶ್ರುತಿಃ ॥ 7–41**

ಪೂರ್ವೋಕ್ತ ವಿಧಿಯಂತೆ ವಿಭೂತಿಯಿಂದ ಯಾರು ತ್ರಿಪುಂಡ್ರವನ್ನು ಧರಿಸುತ್ತಾರೆಯೋ ಅವನು ರುದ್ರಧರ್ಮ (ಶಿವಾಚಾರ)ದಿಂದ ಕೂಡಿದ ತ್ರಯೀಮಯ (ತ್ರಿವೇದ ಸ್ವರೂಪ)ನೆಂದು ಶ್ರುತಿಗಳು ಸಾರುತ್ತಿವೆ.

**ಬ್ರಹ್ಮಾ ವಿಷ್ಣುಶ್ಚ ರುದ್ರಶ್ಚ**
**ದೇವಾಃ ಶಕ್ರಪುರೋಗಮಾಃ ।**
**ತ್ರಿಪುಂಡ್ರಂ ಧಾರಯಂತ್ಯೇವ**
**ಭಸ್ಮನಾ ಪರಿಕಲ್ಪಿತಮ್ ॥ 7–42**

ಬ್ರಹ್ಮ, ವಿಷ್ಣು, ರುದ್ರ ಮತ್ತು ಶಕ್ರ (ಇಂದ್ರ)ನೇ ಮೊದಲಾದ ದೇವತೆಗಳು ಭಸ್ಮದಿಂದ ಪರಿಕಲ್ಪಿತವಾದ (ಮಾಡಿದ) ತ್ರಿಪುಂಡ್ರವನ್ನು ಧರಿಸುತ್ತಾರೆ.

**ವಸಿಷ್ಠಾದ್ಯಾ ಮಹಾಭಾಗಾಃ**
**ಮುನಯಃ ಶ್ರುತಿಕೋವಿದಾಃ ।**
**ಧಾರಯಂತಿ ಸದಾಕಾಲಮ್**
**ತ್ರಿಪುಂಡ್ರಂ ಭಸ್ಮನಾ ಕೃತಮ್ ॥ 7–43**

ಅದರಂತೆ ಶ್ರುತಿಕೋವಿದರು (ವೇದಶಾಸ್ತ್ರ ಪಾರಂಗತರಾದ) ಮಹಾನುಭಾವಿಗಳಾದ ವಸಿಷ್ಠಾದಿ ಮುನಿಗಳು ಸದಾಕಾಲದಲ್ಲಿ ಭಸ್ಮದ ತ್ರಿಪುಂಡ್ರವನ್ನು ಧರಿಸಿಕೊಳ್ಳುತ್ತಾರೆ.

**ಶೈವಾಗಮೇಷು ವೇದೇಷು**
**ಪುರಾಣೇಷ್ವಖಿಲೇಷು ಚ ।**
**ಸ್ಮೃತೀತಿಹಾಸಕಲ್ಪೇಷು**
**ವಿಹಿತಂ ಭಸ್ಮಪುಂಡ್ರಕಮ್ ।**
**ಧಾರಣೀಯಂ ಸಮಸ್ತಾನಾಮ್**
**ಶೈವಾನಾಂ ಚ ವಿಶೇಷತಃ ॥ 7–44**

ಕಾಮಿಕಾದಿ ವಾತುಲಾಂತ್ಯವಾದ 28 ಶಿವಾಗಮಗಳಲ್ಲಿ, ಎಲ್ಲಾ ವೇದಗಳಲ್ಲಿ ಸಮಸ್ತ ಪುರಾಣಗಳಲ್ಲಿ ಮತ್ತು ಸ್ಮೃತಿ ಇತಿಹಾಸ ಕಲ್ಪಶಾಸ್ತ್ರಗಳಲ್ಲಿ ಭಸ್ಮತ್ರಿಪುಂಡ್ರವು ವಿಧಿಸಲ್ಪಟ್ಟಿದೆ. ಆದ್ದರಿಂದ ಸಮಸ್ತರೂ ಮತ್ತು ವಿಶೇಷವಾಗಿ (ವೀರ)ಶೈವರು (ಶಿವಭಕ್ತರು) ಧರಿಸಿಕೊಳ್ಳಬೇಕು.

**ನಾಸ್ತಿಕೋ ಭಿನ್ನಮರ್ಯಾದೋ**
**ದುರಾಚಾರಪರಾಯಣಃ ।**
**ಭಸ್ಮತ್ರಿಪುಂಡ್ರಧಾರೀ ಚೇತ್**
**ಮುಚ್ಯತೇ ಸರ್ವಕಿಲ್ಬಿಷೈಃ ॥ 7–45**

ನಾಸ್ತಿಕನೂ, ಶಾಸ್ತ್ರನಿಯಮಗಳನ್ನು ಉಲ್ಲಂಘಿಸಿದವನೂ, ದುರಾಚಾರದಲ್ಲಿ ಆಸಕ್ತನಾದವನೂ ಸಹ ಭಸ್ಮದ ತ್ರಿಪುಂಡ್ರವನ್ನು ಧರಿಸಿದರೆ ಅವನು ಎಲ್ಲಾ ಕಿಲ್ಬಿಷ (ಪಾಪ)ಗಳಿಂದ ಮುಕ್ತನಾಗುತ್ತಾನೆ.

***ಇತಿ ಭಸ್ಮಧಾರಣಸ್ಥಲಂ***
*ಇಲ್ಲಿಗೆ ಭಸ್ಮಧಾರಣಸ್ಥಲವು ಮುಗಿಯಿತು.*

## 7. ಅಥ ರುದ್ರಾಕ್ಷಧಾರಣಸ್ಥಲಮ್

ಈಗ ರುದ್ರಾಕ್ಷಧಾರಣಸ್ಥಲವು

**(23 ಶ್ಲೋಕಗಳು)**

**ಭಸ್ಮನಾ ವಿಹಿತಸ್ನಾನಃ**
**ತ್ರಿಪುಂಡ್ರಾಂಕಿತಮಸ್ತಕಃ ।**
**ಶಿವಾರ್ಚನಪರೋ ನಿತ್ಯಮ್**
**ರುದ್ರಾಕ್ಷಮಪಿ ಧಾರಯೇತ್ ॥ 7–46**

ಭಸ್ಮಸ್ನಾನವನ್ನು ಮಾಡಿ, ಮಸ್ತಕದಲ್ಲಿ ತ್ರಿಪುಂಡ್ರವನ್ನು ಧರಿಸಿದ ಶಿವಾಚಾರಣೆಯಲ್ಲಿ ತತ್ಪರನಾದ ಸಾಧಕನು ನಿತ್ಯವೂ ರುದ್ರಾಕ್ಷವನ್ನೂ ಸಹ ಧರಿಸಬೇಕು.

**ರುದ್ರಾಕ್ಷಧಾರಣಾದೇವ**
**ಮುಚ್ಯಂತೇ ಸರ್ವಪಾತಕೈಃ ।**
**ದುಷ್ಟಚಿತ್ತಾ ದುರಾಚಾರಾ**
**ದುಷ್ಪ್ರಜ್ಞಾ ಅಪಿ ಮಾನವಾಃ ॥ 7–47**

ದುಷ್ಟಚಿತ್ತವುಳ್ಳ, ದುರಾಚಾರಿಗಳಾದ ಮತ್ತು ಹೀನಬುದ್ಧಿಯುಳ್ಳ ಮಾನವರೂ ಕೂಡ ರುದ್ರಾಕ್ಷಗಳನ್ನು ಧರಿಸಿದ ಮಾತ್ರದಿಂದ ಸರ್ವಪಾತಕಗಳಿಂದ ಮುಕ್ತರಾಗುತ್ತಾರೆ.

**ಪುರಾ ತ್ರಿಪುರಸಂಹಾರೇ**
**ತ್ರಿನೇತ್ರೋ ಜಗತಾಂ ಪತಿಃ ।**
**ಉದಪಶ್ಯತ್ ಪುರಾಂ ಯೋಗ–**
**ಮುನ್ಮೀಲಿತವಿಲೋಚನಃ ॥ 7–48**

ತ್ರಿನೇತ್ರಧಾರಿಯಾದ ಜಗತ್ತಿನ ಪತಿಯಾದ ಶಿವನು ಪೂರ್ವಕಾಲದಲ್ಲಿ ತ್ರಿಪುರಾಸುರನನ್ನು ಸಂಹಾರ ಮಾಡುವುದಕ್ಕಾಗಿ, ಉನ್ಮೀಲಿತ ಲೋಚನನಾಗಿ (ತೆರೆದ ಮೂರು ಕಣ್ಣುಗಳುಳ್ಳವನಾಗಿ) ಪುರಗಳ ಯೋಗವನ್ನು (ತ್ರಿಪುರಗಳ ಕೂಡುವಿಕೆಯನ್ನು) ಮೇಲ್ಮುಖವಾಗಿ ನೋಡಿದನು.

**ನಿಪೇತುಸ್ತಸ್ಯ ನೇತ್ರೇಭ್ಯೋ**
**ಬಹವೋ ಜಲಬಿಂದವಃ ।**
**ತೇಭ್ಯೋ ಜಾತಾ ಹಿ ರುದ್ರಾಕ್ಷಾಃ**
**ರುದ್ರಾಕ್ಷಾ ಇತಿ ಕೀರ್ತಿತಾಃ ॥ 7–49**

(ಹೀಗೆ ನೋಡುತ್ತಿರುವ) ಆ ಶಿವನ ಮೂರು ಕಣ್ಣುಗಳಿಂದ ಬಹಳಷ್ಟು ಜಲಬಿಂದುಗಳು ಭುವಿಯ ಮೇಲೆ ಬಿದ್ದವು. ಆ ಜಲಬಿಂದುಗಳಿಂದಲೇ ನಿಶ್ಚಯವಾಗಿ ರುದ್ರಾಕ್ಷಗಳು ಉತ್ಪನ್ನವಾದವು. ಅಂತೆಯೇ ಅವುಗಳು ರುದ್ರಾಕ್ಷಗಳೆಂದು ಪ್ರಸಿದ್ಧವಾಗಿವೆ.

**ರುದ್ರನೇತ್ರಸಮುತ್ಪನ್ನಾ**
**ರುದ್ರಾಕ್ಷಾ ಲೋಕಪಾವನಾಃ ।**
**ಅಷ್ಟತ್ರಿಂಶತ್ಪ್ರಭೇದೇನ**
**ಭವಂತ್ಯುತ್ಪತ್ತಿ ಭೇದತಃ ॥ 7–50**

ರುದ್ರನ ನೇತ್ರಗಳಿಂದ ಉತ್ಪನ್ನಗಳಾದ ರುದ್ರಾಕ್ಷಗಳು ಲೋಕ ಪಾವನಗಳಾಗಿವೆ (ಜೀವಿಗಳನ್ನು ಪವಿತ್ರಗೊಳಿಸುವಂತಹುಗಳಾಗಿವೆ). ಇವುಗಳು ಉತ್ಪತ್ತಿಯ ಭೇದದಿಂದ ಮೂವತ್ತೆಂಟು ಪ್ರಕಾರಗಳಾಗಿರುತ್ತವೆ.

**ನೇತ್ರಾತ್ ಸೂರ್ಯಾತ್ಮನಃ ಶಂಭೋಃ**
**ಕಪಿಲಾ ದ್ವಾದಶೋದಿತಾಃ ।**
**ಶ್ವೇತಾಃ ಷೋಡಶ ಸಂಜಾತಾಃ**
**ಸೋಮರೂಪಾದ್ವಿಲೋಚನಾತ್ ॥ 7–51**

ಶಂಭುವಿನ (ಶಿವನ) ಸೂರ್ಯನೇತ್ರದಿಂದ ಕಪಿಲವರ್ಣದ (ಕಂದುಬಣ್ಣದ) ಹನ್ನೆರಡು ಪ್ರಕಾರದ ರುದ್ರಾಕ್ಷಿಗಳು, ಸೋಮಲೋಚನದಿಂದ (ಚಂದ್ರನೇತ್ರದಿಂದ) ಶ್ವೇತವರ್ಣದ (ಬಿಳಿ ಬಣ್ಣದ) ಹದಿನಾರು ಪ್ರಕಾರದ ರುದ್ರಾಕ್ಷಿಗಳು ಉತ್ಪನ್ನವಾದವು.

**ಕೃಷ್ಣಾ ದಶವಿಧಾ ಜಾತಾ**
**ವಹ್ನಿರೂಪಾದ್ವಿಲೋಚನಾತ್ ।**
**ಏವಮುತ್ಪತ್ತಿಭೇದೇನ**
**ರುದ್ರಾಕ್ಷಾ ಬಹುಧಾ ಸ್ಮೃತಾಃ ॥ 7–52**

ಶಿವನ ಅಗ್ನಿನೇತ್ರದಿಂದ (ಹಣೆಗಣ್ಣಿನಿಂದ) ಕೃಷ್ಣವರ್ಣದ (ಕಪ್ಪುಬಣ್ಣದ) ಹತ್ತು ಪ್ರಕಾರದ ರುದ್ರಾಕ್ಷಿಗಳು ಉತ್ಪನ್ನವಾದವು. ಹೀಗೆ ಉತ್ಪತ್ತಿಯ ಭೇದದಿಂದ ರುದ್ರಾಕ್ಷಗಳು ಬಹು ವಿಧವಾಗಿ ಹೇಳಲ್ಪಟ್ಟಿವೆ.

**ಅಚ್ಛಿದ್ರಂ ಕನಕಪ್ರಖ್ಯಮ್**
**ಅನನ್ಯಧೃತಮುತ್ತಮಮ್ ।**
**ರುದ್ರಾಕ್ಷಂ ಧಾರಯೇತ್ ಪ್ರಾಜ್ಞಃ**
**ಶಿವಪೂಜಾಪರಾಯಣಃ ॥ 7–53**

ಛಿದ್ರವಲ್ಲದ (ಹುಳ ಬಿದ್ದು ತೂತು ಬೀಳದ), ಬಂಗಾರದ ಕಾಂತಿಯುಳ್ಳ, ಇನ್ನೊಬ್ಬರಿಂದ ಧರಿಸದೆ ಇರುವ ರುದ್ರಾಕ್ಷವು ಶ್ರೇಷ್ಠವಾದುದು. ಶಿವಪೂಜಾ ಪರಾಯಣನಾದ ಪ್ರಜ್ಞಾಶಾಲಿಯು (ಬುದ್ಧಿವಂತನು) ರುದ್ರಾಕ್ಷವನ್ನು ಧರಿಸಬೇಕು.

**ಯಥಾಸ್ಥಾನಂ ಯಥಾವಕ್ತ್ರಮ್**
**ಯಥಾಯೋಗಂ ಯಥಾವಿಧಿ ।**
**ರುದ್ರಾಕ್ಷಧಾರಣಂ ವಕ್ಷ್ಯೇ**
**ರುದ್ರಸಾಯುಜ್ಯಸಿದ್ಧಯೇ ॥ 7–54**

ರುದ್ರ (ಶಿವ) ಸಾಯುಜ್ಯ ರೂಪವಾದ ಮುಕ್ತಿಯ ಪ್ರಾಪ್ತಿಗಾಗಿ ದೇಹದ ಯಾವ ಸ್ಥಾನದಲ್ಲಿ ಎಷ್ಟು ಎಷ್ಟು ಮುಖಗಳ ಎಷ್ಟು ರುದ್ರಾಕ್ಷಿಗಳನ್ನು ಯಾವ ಕ್ರಮದಲ್ಲಿ ಶಾಸ್ತ್ರೋಕ್ತ ವಿಧಿಯಂತೆ ಧರಿಸುವ ಬಗೆಯನ್ನು ಹೇಳುತ್ತೇನೆ.

**ಶಿಖಾಯಾಮೇಕಮೇಕಾಸ್ಯಮ್**
**ರುದ್ರಾಕ್ಷಂ ಧಾರಯೇದ್ ಬುಧಃ ।**
**ದ್ವಿತ್ರಿದ್ವಾದಶವಕ್ತ್ರಾಣಿ**
**ಶಿರಸಿ ತ್ರೀಣಿ ಧಾರಯೇತ್ ॥ 7–55**

ಶಿಖಾ ಸ್ಥಾನದಲ್ಲಿ ಒಂದು ಮುಖದ ಒಂದು ರುದ್ರಾಕ್ಷಿಯನ್ನು; ಎರಡು, ಮೂರು ಮತ್ತು ಹನ್ನೆರಡು ಮುಖಗಳುಳ್ಳ ಮೂರು ರುದ್ರಾಕ್ಷಿಗಳನ್ನು ಮಸ್ತಕದಲ್ಲಿ ಬುದ್ಧಿವಂತನು ಧರಿಸಬೇಕು.

**ಷಟ್ತ್ರಿಂಶದ್ಧಾರಯೇನ್ಮೂರ್ಧ್ನಿ**

**ನಿತ್ಯಮೇಕಾದಶಾನನಾನ್ ।**
**ದಶಸಪ್ತಪಂಚವಕ್ತ್ರಾನ್**
**ಷಟ್ ಷಟ್ಕರ್ಣದ್ವಯೇ ವಹೇತ್ ॥ 7–56**

ಹನ್ನೊಂದು ಮುಖದ ಮೂವತ್ತಾರು ರುದ್ರಾಕ್ಷಿಗಳನ್ನು ತಲೆಯ ಮೇಲೆ ಧರಿಸಬೇಕು. ಅದರಂತೆ ಹತ್ತು, ಏಳು ಮತ್ತು ಐದು ಮುಖದ ಎರೆಡೆರಡು ರುದ್ರಾಕ್ಷಿಗಳಂತೆ ಪ್ರತಿಯೊಂದು ಕಿವಿಯಲ್ಲಿ ಆರು ಆರು ರುದ್ರಾಕ್ಷಿಗಳನ್ನು ಧರಿಸಬೇಕು.

**ಷಡಷ್ಟವದನಾನ್ ಕಂಠೇ**
**ದ್ವಾತ್ರಿಂಶದ್ಧಾರಯೇತ್ ಸದಾ ।**
**ಪಂಚಾಶದ್ಧಾರಯೇದ್ ವಿದ್ವಾನ್**
**ಚತುರ್ವಕ್ತ್ರಾಣಿ ವಕ್ಷಸಿ ॥ 7–57**

ಇದೇ ಪ್ರಕಾರ ಆರು ಮತ್ತು ಎಂಟು ಮುಖದ ಹದಿನಾರು ಹದಿನಾರರಂತೆ 32 ರುದ್ರಾಕ್ಷಗಳನ್ನು ಕಂಠದಲ್ಲಿ ಯಾವಾಗಲೂ ಧರಿಸಬೇಕು. ನಾಲ್ಕು ಮುಖದ ಐವತ್ತು ರುದ್ರಾಕ್ಷಿಗಳ(ಮಾಲೆಯ)ನ್ನು ಎದೆಯ ಮೇಲೆ ಧರಿಸಬೇಕು.

**ತ್ರಯೋದಶಮುಖಾನ್ ಬಾಹ್ವೋಃ**
**ಧರೇತ್ ಷೋಡಶ ಷೋಡಶ ।**
**ಪ್ರತ್ಯೇಕಂ ದ್ವಾದಶ ವಹೇತ್**
**ನವಾಸ್ಯಾನ್ ಮಣಿಬಂಧಯೋಃ ॥ 7–58**

ಹದಿಮೂರು ಮುಖದ ಹದಿನಾರು ಹದಿನಾರು ರುದ್ರಾಕ್ಷಿಗಳನ್ನು ಎರಡೂ ರೆಟ್ಟೆಗಳಲ್ಲಿ ಧಾರಣೆ ಮಾಡಬೇಕು. ಒಂಭತ್ತು ಮುಖದ ಹನ್ನೆರಡು, ಹನ್ನೆರಡು ರುದ್ರಾಕ್ಷಿಗಳನ್ನು ಎರಡೂ ಮುಂಗೈಗಳಲ್ಲಿ ಧರಿಸಿಕೊಳ್ಳಬೇಕು.

**ಚತುರ್ದಶಮುಖಂ ಯಜ್ಞ–**
**ಸೂತ್ರಮಷ್ಟೋತ್ತರಂ ಶತಮ್ ।**
**ಧಾರಯೇತ್ ಸರ್ವಕಾಲಂ ತು**
**ರುದ್ರಾಕ್ಷಂ ಶಿವಪೂಜಕಃ ॥ 7–59**

ಶಿವಪೂಜಕನು ಹದಿನಾಲ್ಕು ಮುಖದ ಒಂದನೂರು ಎಂಟು ರುದ್ರಾಕ್ಷಿ ಗಳನ್ನು ಯಜ್ಞಸೂತ್ರದಂತೆ ಸರ್ವಕಾಲದಲ್ಲೂ ಧರಿಸಬೇಕು.

**ಏವಂ ರುದ್ರಾಕ್ಷಧಾರೀ ಯಃ**
**ಸರ್ವಕಾಲೇ ತು ವರ್ತತೇ ।**
**ತಸ್ಯ ಪಾಪಕಥಾ ನಾಸ್ತಿ**
**ಮೂಢಸ್ಯಾಪಿ ನ ಸಂಶಯಃ ॥ 7–60**

ಈ ರೀತಿಯಲ್ಲಿ (ಪೂರ್ವದಲ್ಲಿ ಹೇಳಿದ ಶಾಸ್ತ್ರೀಯ ಪದ್ಧತಿಗನುಸಾರವಾಗಿ) ಯಾರು ಯಾವಾಗಲೂ ರುದ್ರಾಕ್ಷಿ ಧರಿಸಿಕೊಂಡಿರುತ್ತಾರೆಯೋ ಅವನು ಮೂಢನಾಗಿದ್ದರೂ ಅವನಿಗೆ ಪಾಪದ ಸಂಬಂಧವೇ ಇರುವುದಿಲ್ಲ. ಇದರಲ್ಲಿ ಸಂಶಯವೂ ಇಲ್ಲ.

**ಬ್ರಹ್ಮಹಾ ಮದ್ಯಪಾಯೀ ಚ**
**ಸ್ವರ್ಣಹೃದ್ ಗುರುತಲ್ಪಗಃ ।**
**ಮಾತೃಹಾ ಪಿತೃಹಾ ಚೈವ**
**ಭ್ರೂಣಹಾ ಕೃತಘಾತಕಃ ।**
**ರುದ್ರಾಕ್ಷಧಾರಣಾದೇವ**
**ಮುಚ್ಯತೇ ಸರ್ವಪಾತಕೈಃ ॥ 7–61**

ಬ್ರಹ್ಮಹತ್ಯೆ, ಮದ್ಯಪಾನ, ಸ್ವರ್ಣಹರಣ, ಗುರುಪತ್ನಿಗಮನ, ಮಾತೃಹತ್ಯೆ, ಪಿತೃಹತ್ಯೆ, ಭ್ರೂಣಹತ್ಯೆ ಮತ್ತು ವಿಶ್ವಾಸಘಾತ ಮುಂತಾದ ಪಾತಕಗಳನ್ನಾಚರಿಸಿದವನೂ ಸಹ ರುದ್ರಾಕ್ಷಧಾರಣದಿಂದಲೇ ಎಲ್ಲ ಪಾತಕಗಳಿಂದ ಮುಕ್ತನಾಗುತ್ತಾನೆ.

**ದರ್ಶನಾತ್ ಸ್ಪರ್ಶನಾಚ್ಚೈವ**
**ಸ್ಮರಣಾದಪಿ ಪೂಜನಾತ್ ।**
**ರುದ್ರಾಕ್ಷಧಾರಣಾಲ್ಲೋಕೇ**
**ಮುಚ್ಯಂತೇ ಪಾತಕೈರ್ಜನಾಃ ॥ 7–62**

ರುದ್ರಾಕ್ಷಿಗಳನ್ನು ನೋಡುವುದರಿಂದ, ಮುಟ್ಟುವುದರಿಂದ, ಸ್ಮರಿಸುವುದರಿಂದ, ಪೂಜಿಸುವುದರಿಂದ ಮತ್ತು ಧರಿಸುವುದರಿಂದ ಈ ಲೋಕದ ಜನರು ಪಾತಕಗಳಿಂದ ಬಿಡುಗಡೆ ಹೊಂದುತ್ತಾರೆ.

**ಬ್ರಾಹ್ಮಣೋ ವಾಽಂತ್ಯಜೋ ವಾಽಪಿ**
**ಮೂರ್ಖೋ ವಾ ಪಂಡಿತೋಽಪಿ ವಾ ।**
**ರುದ್ರಾಕ್ಷಧಾರಣಾದೇವ**
**ಮುಚ್ಯತೇ ಸರ್ವಪಾತಕೈಃ ॥ 7–63**

ಬ್ರಾಹ್ಮಣನಾಗಲಿ, ಅಂತ್ಯಜನಾಗಲಿ, ಮೂರ್ಖನೇ ಆಗಲಿ ಅಥವಾ ಪಂಡಿತನೇ ಆಗಿರಲಿ ಅವನು ರುದ್ರಾಕ್ಷಧಾರಣದಿಂದಲೇ ಎಲ್ಲ ಪಾತಕಗಳಿಂದ ಮುಕ್ತನಾಗುತ್ತಾನೆ.

**ಗವಾಂ ಕೋಟಿಪ್ರದಾನಸ್ಯ**
**ಯತ್ಫಲಂ ಭುವಿ ಲಭ್ಯತೇ ।**
**ತತ್ಫಲಂ ಲಭತೇ ಮರ್ತ್ಯೋ**
**ನಿತ್ಯಂ ರುದ್ರಾಕ್ಷಧಾರಣಾತ್ ॥ 7–64**

ಕೋಟಿ ಗೋದಾನವನ್ನು ಮಾಡಿದರೆ ಯಾವ ಫಲವು ಲಭ್ಯವಾಗುವುದೋ ಈ ಭೂಲೋಕದಲ್ಲಿ ನಿತ್ಯವೂ ರುದ್ರಾಕ್ಷಿಯನ್ನು ಧರಿಸಿದ ಮನುಷ್ಯನು ಅದೇ ಫಲವನ್ನು ಪಡೆಯುತ್ತಾನೆ.

**ಮೃತ್ಯುಕಾಲೇ ತು ರುದ್ರಾಕ್ಷಮ್**
**ನಿಷ್ಪೀಡ್ಯ ಸಹ ವಾರಿಣಾ ।**
**ಯಃ ಪಿಬೇಚ್ಚಿಂತಯನ್ ರುದ್ರಮ್**
**ರುದ್ರಲೋಕಂ ಸ ಗಚ್ಛತಿ ॥ 7–65**

ಮರಣ ಸಮಯದಲ್ಲಿ ರುದ್ರಾಕ್ಷವನ್ನು ನೀರಿನೊಂದಿಗೆ ತೇಯ್ದು ರುದ್ರನನ್ನು ಚಿಂತಿಸುತ್ತಾ ಯಾರು ಅದನ್ನು ಪಾನ ಮಾಡುತ್ತಾರೆಯೋ ಅವರು ರುದ್ರಲೋಕವನ್ನು ಹೊಂದುವರು.

**ಭಸ್ಮೋದ್ಧೂಲಿತಸರ್ವಾಂಗಾಃ**
**ಧೃತರುದ್ರಾಕ್ಷಮಾಲಿಕಾಃ ।**
**ಯೇ ಭವಂತಿ ಮಹಾತ್ಮಾನಃ**
**ತೇ ರುದ್ರಾ ನಾತ್ರ ಸಂಶಯಃ ॥ 7–66**

ಸರ್ವಾಂಗಗಳಲ್ಲಿ ಭಸ್ಮೋದ್ಧೂಲನೆಯನ್ನು ಮಾಡಿಕೊಂಡು ರುದ್ರಾಕ್ಷ ಮಾಲೆಗಳನ್ನು ಯಾವ ಮಹಾತ್ಮರು ಧರಿಸುತ್ತಾರೆಯೋ ಅವರು ನಿಃಸಂಶಯವಾಗಿ ರುದ್ರರೇ ಆಗಿರುತ್ತಾರೆ.

**ನಿತ್ಯಾನಿ ಕಾಮ್ಯಾನಿ ನಿಮಿತ್ತಜಾನಿ**
**ಕರ್ಮಾಣಿ ಸರ್ವಾಣಿ ಸದಾಽಪಿ ಕುರ್ವನ್।**

**ಯೋಽಭಸ್ಮರುದ್ರಾಕ್ಷಧರೋ ಯದಿ ಸ್ಯಾದ್**
**ದ್ವಿಜೋ ನ ತಸ್ಯಾಸ್ತಿ ಫಲೋಪಪತ್ತಿಃ ॥ 7–67**
**– ಇಂದ್ರವಜ್ರಾವೃತ್ತಮ್**

ಯಾವ ದ್ವಿಜನು ಯಾವಾಗಲೂ ನಿತ್ಯನೈಮಿತ್ತಿಕ ಮತ್ತು ಕಾಮ್ಯಾದಿ ಕರ್ಮಗಳನ್ನು ತಪ್ಪದೆ ಮಾಡುತ್ತಿದ್ದರೂ ಭಸ್ಮ ರುದ್ರಾಕ್ಷಗಳನ್ನು ಧರಿಸಿಕೊಂಡಿರದಿದ್ದರೆ ಅವನಿಗೆ ಆ ಕರ್ಮದ ಫಲಗಳು ದೊರೆಯುವುದಿಲ್ಲ.

**ಸರ್ವೇಷು ವರ್ಣಾಶ್ರಮಸಂಗತೇಷು**
**ನಿತ್ಯಂ ಸದಾಚಾರಪರಾಯಣೇಷು ।**
**ಶ್ರುತಿಸ್ಮೃತಿಭ್ಯಾಮಿಹ ಚೋದ್ಯಮಾನೋ**
**ವಿಭೂತಿರುದ್ರಾಕ್ಷಧರಃ ಸಮಾನಃ ॥ 7–68**
**– ವಂಶಸ್ಥವೃತ್ತಮ್**

ಎಲ್ಲಾ ವರ್ಣಗಳಲ್ಲಿ, ಎಲ್ಲ ಆಶ್ರಮಗಳಲ್ಲಿ ಇದ್ದುಕೊಂಡು ಯಾವಾಗಲೂ ಸದಾಚಾರ ಪಾರಾಯಣರಾಗಿರುವ ಜನರಲ್ಲಿ ಯಾವನು ವಿಭೂತಿ ರುದ್ರಾಕ್ಷಿಗಳನ್ನು ಧರಿಸಿಕೊಂಡಿರುವನೋ ಅವನೊಬ್ಬನೇ ಗೌರವಾನ್ವಿತನು. ವೇದಶಾಸ್ತ್ರಗಳಿಂದ ಹೊಗಳಲ್ಪಡುವವನೂ ಆಗುತ್ತಾನೆ (ಎಲ್ಲಾ ವರ್ಣಾಶ್ರಮಗಳಲ್ಲಿ ಭಸ್ಮ ರುದ್ರಾಕ್ಷಗಳನ್ನು ಧರಿಸಿದವನೇ ಶ್ರೇಷ್ಠ ಎಂಬುದು ತಾತ್ಪರ್ಯ).

***ಇತಿ ರುದ್ರಾಕ್ಷಧಾರಣಸ್ಥಲಂ*** *ಇಲ್ಲಿಗೆ ರುದ್ರಾಕ್ಷಧಾರಣಸ್ಥಲವು ಮುಗಿಯಿತು.*

***ಓಂ ತತ್ಸತ್ ಇತಿ***
***ಶ್ರೀ ಶಿವಗೀತೇಷು ಸಿದ್ಧಾಂತಾಗಮೇಷು ಶಿವಾದ್ವೈತವಿದ್ಯಾಯಾಂ ಶಿವಯೋಗಶಾಸ್ತ್ರೇ***
***ಶ್ರೀರೇಣುಕಾಗಸ್ತ್ಯಸಂವಾದೇವೀರಶೈವ ಧರ್ಮನಿರ್ಣಯೇ ಶಿವಯೋಗಿಶಿವಾಚಾರ್ಯವಿರಚಿತೇ ಶ್ರೀಸಿದ್ಧಾಂತಶಿಖಾಮಣೌ ಭಕ್ತಸ್ಥಲೇ ಭಸ್ಮರುದ್ರಾಕ್ಷಧಾರಣಸ್ಥಲಪ್ರಸಂಗೋ ನಾಮ ಸಪ್ತಮಃ***
***ಪರಿಚ್ಛೇದಃ ।***

*ಓಂ ತತ್ಸತ್ ಇತಿ ಶ್ರೀ ಶಿವನಿಂದ ಉಪದೇಶಿಸಲ್ಪಟ್ಟ ಶ್ರೀ ಸಿದ್ಧಾಂತಾಗಮಗಳಲ್ಲಿಯ ಶಿವಾದ್ವೈತವಿದ್ಯಾರೂಪವೂ ಶಿವಯೋಗಶಾಸ್ತ್ರವೂ ಶ್ರೀ ರೇಣುಕಾಗಸ್ತ್ಯಸಂವಾದ ರೂಪವೂ ಶ್ರೀ ವೀರಶೈವಧರ್ಮನಿರ್ಣಯವೂ ಶ್ರೀ ಶಿವಯೋಗಿಶಿವಾಚಾರ್ಯ ವಿರಚಿತವೂ ಆದ ಶ್ರೀ ಸಿದ್ಧಾಂತಶಿಖಾಮಣಿಯಲ್ಲಿ ಭಕ್ತಸ್ಥಲದಲ್ಲಿಯ ಭಸ್ಮ–ರುದ್ರಾಕ್ಷಧಾರಣಸ್ಥಲ ಪ್ರಸಂಗ ಎಂಬ ಹೆಸರಿನ ಏಳನೆಯ ಪರಿಚ್ಛೇದವು ಮುಗಿದುದು.*

## ಅಷ್ಟಮಃ ಪರಿಚ್ಛೇದಃ
ಎಂಟನೆಯ ಪರಿಚ್ಛೇದವು

## ಪಂಚಾಕ್ಷರೀಜಪಸ್ಥಲಪ್ರಸಂಗಃ
ಪಂಚಾಕ್ಷರೀಜಪಸ್ಥಲ ಪ್ರಸಂಗವು
**(49 ಶ್ಲೋಕಗಳು)**

## 8. ಅಥ ಪಂಚಾಕ್ಷರೀಜಪಸ್ಥಲಮ್
ಈಗ ಪಂಚಾಕ್ಷರೀಜಪಸ್ಥಲವು
**(49 ಶ್ಲೋಕಗಳು)**

**॥ ಶ್ರೀ ರೇಣುಕ ಉವಾಚ ॥**
**ಧೃತಶ್ರೀಭೂತಿರುದ್ರಾಕ್ಷಃ**
**ಪ್ರಯತೋ ಲಿಂಗಧಾರಕಃ ।**
**ಜಪೇತ್ ಪಂಚಾಕ್ಷರೀವಿದ್ಯಾಮ್**
**ಶಿವತತ್ತ್ವಪ್ರಬೋಧಿನೀಮ್ ॥ 8–1**

ಶ್ರೀ (ಮಂಗಳಕರವೂ, ಸಂಪ್ರದಾಯಕವೂ ಆದ) ವಿಭೂತಿ ರುದ್ರಾಕ್ಷಗಳನ್ನು ಧರಿಸಿ ಪವಿತ್ರನಾದ ಇಷ್ಟಲಿಂಗಧಾರಿಯು ಶಿವತತ್ತ್ವವನ್ನು ಬೋಧಿಸುವ ಪಂಚಾಕ್ಷರೀ ವಿದ್ಯೆಯನ್ನು (ಮಂತ್ರವನ್ನು) ಜಪಿಸಬೇಕು.

**ಶಿವತತ್ತ್ವಾತ್ ಪರಂ ನಾಸ್ತಿ**
**ಯಥಾ ತತ್ತ್ವಾಂತರಂ ಮಹತ್ ।**
**ತಥಾ ಪಂಚಾಕ್ಷರೀಮಂತ್ರಾತ್**
**ನಾಸ್ತಿ ಮಂತ್ರಾಂತರಂ ಮಹತ್ ॥ 8–2**

ಶಿವತತ್ತ್ವಕ್ಕಿಂತಲೂ ಪರ(ಶ್ರೇಷ್ಠ)ವಾದ ಬೇರೊಂದು ಮಹತ್ತರ (ಮಹಿಮಾನ್ವಿತ)ವಾದ ತತ್ತ್ವವು ಹೇಗೆ ಇರುವುದಿಲ್ಲವೋ ಹಾಗೆಯೇ ಪಂಚಾಕ್ಷರೀ ಮಂತ್ರಕ್ಕಿಂತಲೂ ಮಹತ್ತರವಾದ ಬೇರೊಂದು ಮಂತ್ರವು ಇರುವುದಿಲ್ಲ.

**ಜ್ಞಾತೇ ಪಂಚಾಕ್ಷರೀಮಂತ್ರೇ**
**ಕಿಂ ವಾ ಮಂತ್ರಾಂತರೈಃ ಫಲಮ್ ।**
**ಜ್ಞಾತೇ ಶಿವೇ ಜಗನ್ಮೂಲೇ**
**ಕಿಂ ಫಲಂ ದೇವತಾಂತರೈಃ ॥ 8–3**

ಜಗತ್ತಿಗೆ ಮೂಲ ಕಾರಣನಾದ ಶಿವನನ್ನು ತಿಳಿದುಕೊಂಡ ಬಳಿಕ ಬೇರೆ ಬೇರೆ ದೇವರುಗಳನ್ನು ತಿಳಿದುಕೊಳ್ಳುವ ಅವಶ್ಯಕತೆ ಹೇಗೆ ಇರುವುದಿಲ್ಲವೋ ಹಾಗೆ ಪಂಚಾಕ್ಷರೀ ಮಂತ್ರವನ್ನು ತಿಳಿದುಕೊಂಡ ಬಳಿಕ ಮಂತ್ರಾಂತರಗಳನ್ನು (ಬೇರೆ ಬೇರೆ ಮಂತ್ರಗಳನ್ನು) ತಿಳಿದುಕೊಳ್ಳುವುದರಿಂದ ಏನು ಫಲ?

**ಸಪ್ತಕೋಟಿಷು ಮಂತ್ರೇಷು**
**ಮಂತ್ರಃ ಪಂಚಾಕ್ಷರೋ ಮಹಾನ್ ।**
**ಬ್ರಹ್ಮವಿಷ್ಣ್ವಾದಿದೇವೇಷು**

**ಯಥಾ ಶಂಭುರ್ಮಹತ್ತರಃ ॥ 8–4**

ಬ್ರಹ್ಮ, ವಿಷ್ಣು ಮೊದಲಾದ ದೇವರುಗಳಲ್ಲಿ ಶಂಭುವು ಹೇಗೆ ಮಹತ್ತರ (ಸರ್ವೋತ್ತಮ)ನಾಗಿರುವನೋ ಅದರಂತೆ ಸಪ್ತಕೋಟಿ ಮಂತ್ರಗಳಲ್ಲಿ ಪಂಚಾಕ್ಷರ ಮಂತ್ರವೇ ಸರ್ವೋತ್ತಮವಾಗಿದೆ.

**ಅಶೇಷಜಗತಾಂ ಹೇತುಃ**
**ಪರಮಾತ್ಮಾ ಮಹೇಶ್ವರಃ ।**
**ತಸ್ಯ ವಾಚಕಮಂತ್ರೋऽಯಮ್**
**ಸರ್ವಮಂತ್ರೈಕಕಾರಣಮ್ ॥ 8–5**

ಸಕಲ ಬ್ರಹ್ಮಾಂಡಗಳಿಗೆ ಪರಮಾತ್ಮನಾದ ಮಹೇಶ್ವರನು ಹೇತು (ಕಾರಣ)ವಾಗಿರುವಂತೆ ಅವನ ವಾಚಕ ಮಂತ್ರವಾದ ಈ ಪಂಚಾಕ್ಷರ ಮಂತ್ರವು ಎಲ್ಲ ಮಂತ್ರಗಳಿಗೆ ಮೂಲಕಾರಣವಾಗಿದೆ.

**ತಸ್ಯಾಭಿಧಾನಮಂತ್ರೋऽಯಮ್**
**ಅಭಿಧೇಯಶ್ಚ ಸ ಸ್ಮೃತಃ ।**
**ಅಭಿಧಾನಾಭಿಧೇಯತ್ವಾತ್**
**ಮಂತ್ರಾತ್ ಸಿದ್ಧಃ ಪರಃ ಶಿವಃ ॥ 8–6**

ಈ ಪಂಚಾಕ್ಷರ ಮಂತ್ರವು ಪರಶಿವನ ಅಭಿಧಾನವಾಗಿದೆ. ಆ ಪರಶಿವನು ಅಭಿಧೇಯನಾಗಿ ಹೇಳಲ್ಪಟ್ಟಿದ್ದಾನೆ. ಹೀಗೆ ಅಭಿಧಾನಾಭಿದೇಯ ಸಂಬಂಧ ವಿರುವುದರಿಂದ ಈ ಮಂತ್ರದಿಂದ ಪರಶಿವನು ಸಿದ್ಧ (ಪ್ರಕಾಶಗೊಳ್ಳುತ್ತಾನೆ) ನಾಗುತ್ತಾನೆ.

**ನಮಃ ಶಬ್ದಂ ವದೇತ್ ಪೂರ್ವಮ್**
**ಶಿವಾಯೇತಿ ತತಃ ಪರಮ್ ।**
**ಮಂತ್ರಃ ಪಂಚಾಕ್ಷರೋ ಹ್ಯೇಷ**
**ಸರ್ವಶ್ರುತಿಶಿರೋಗತಃ ॥ 8–7**

ನಮಃ ಎಂಬ ಶಬ್ದವನ್ನು ಪೂರ್ವದಲ್ಲಿ (ಮೊದಲು) ಹೇಳಬೇಕು. ಅನಂತರ ಶಿವಾಯ ಎಂಬುದಾಗಿ ಹೇಳಬೇಕು. (ನಮಃ ಶಿವಾಯ ಇದುವೇ
ಪಂಚಾಕ್ಷರ ಮಂತ್ರವು). ಈ ಪಂಚಾಕ್ಷರ ಮಂತ್ರವು ಸಕಲ ಶ್ರುತಿ(ವೇದ)ಗಳ ಶಿಖಾಮಣಿಯಾಗಿದೆ.

**ಆದಿತಃ ಪರಿಶುದ್ಧತ್ವಾತ್**
**ಮಲತ್ರಯವಿಯೋಗತಃ ।**
**ಶಿವ ಇತ್ಯುಚ್ಯತೇ ಶಂಭುಃ**
**ಚಿದಾನಂದಘನಃ ಪ್ರಭುಃ ॥ 8–8**

ಆದಿಕಾಲದಿಂದಲೂ (ಮೊದಲಿನಿಂದಲೂ) ಮಲತ್ರಯಗಳ ಸಂಬಂಧವಿಲ್ಲದಿರುವುದರಿಂದ ಸದಾ ಪರಿಶುದ್ಧನಾಗಿರುವ ಸಚ್ಚಿದಾನಂದ ಘನ (ಸ್ವರೂಪ)ನು, ಪ್ರಭುವಾದ (ಸ್ವತಂತ್ರನೂ ಆದ) ಶಂಭುವೇ ಶಿವನೆಂದು ಕರೆಯಲ್ಪಡುತ್ತಾನೆ.

**ಆಸ್ಪದತ್ವಾದಶೇಷಾಣಾಮ್**
**ಮಂಗಲಾನಾಂ ವಿಶೇಷತಃ ।**
**ಶಿವಶಬ್ದಾಭಿಧೇಯೋ ಹಿ**
**ದೇವದೇವಸ್ತ್ರಿಯಂಬಕಃ ॥ 8–9**

ಅಶೇಷಗಳಿಗೆ (ಜಗತ್ತಿನ ಸೃಷ್ಟಿ, ಸ್ಥಿತಿ, ಲಯಗಳಿಗೆ) ಆಸ್ಪದನಾಗಿರುವ, ವಿಶೇಷವಾಗಿ ಎಲ್ಲ ಮಂಗಲಗಳಿಗೂ ಆಶ್ರಯನಾಗಿರುವುದರಿಂದ ತ್ರಿಯಂಬಕನು (ಮುಕ್ಕಣ್ಣನು) ಆದ, ದೇವಾದಿದೇವನಾದ ಮಹಾದೇವನು ಶಿವ ಶಬ್ದದಿಂದ ಅಭಿಧೇಯನಾಗಿರುತ್ತಾನೆ. (ಶಿವನೆಂಬ ಹೆಸರಿನಿಂದ ಕರೆಯಲ್ಪಡುತ್ತಾನೆ).

**ಶಿವ ಇತ್ಯಕ್ಷರದ್ವಂದ್ವಮ್**

**ಪರಬ್ರಹ್ಮಪ್ರಕಾಶಕಮ್ ।**
**ಮುಖ್ಯವೃತ್ತ್ಯಾ ತದನ್ಯೇಷಾಮ್**
**ಶಬ್ದಾನಾಂ ಗುಣವೃತ್ತಯಃ ॥ 8–10**

ಶಿವ ಎಂಬ ಎರಡು ಅಕ್ಷರಗಳು ಮುಖ್ಯವೃತ್ತಿಯಿಂದ (ಸಾಕ್ಷಾತ್) ಪರಬ್ರಹ್ಮ ಪ್ರಕಾಶಕವಾಗಿರುತ್ತವೆ. (ಪರಶಿವ ಬ್ರಹ್ಮವನ್ನು ತಿಳಿಸುವಂತಹುಗಳಾಗಿವೆ). ಶಿವನ (ಉಳಿದ ನೀಲಕಂಠ, ಮೃತ್ಯುಂಜಯ ಮುಂತಾದ) ಉಳಿದ ನಾಮಗಳು ಅವನ ಗುಣಗಳನ್ನು ಹೇಳುವುದರ ಮೂಲಕ ಅವನನ್ನು ತಿಳಿಸುತ್ತವೆ.

**ತಸ್ಮಾನ್ಮುಖ್ಯತರಂ ನಾಮ**
**ಶಿವ ಇತ್ಯಕ್ಷರದ್ವಯಮ್ ।**
**ಸಚ್ಚಿದಾನಂದರೂಪಸ್ಯ**
**ಶಂಭೋರಮಿತತೇಜಸಃ ।**
**ಏತನ್ನಾಮಾವಲಂಬೇನ**
**ಮಂತ್ರಃ ಪಂಚಾಕ್ಷರಃ ಸ್ಮೃತಃ ॥ 8–11**

ಅಪರಿಮಿತ ತೇಜಸ್ವಿಯೂ, ಸಚ್ಚಿದಾನಂದ ಸ್ವರೂಪನೂ ಆದ ಶಂಭುವಿಗೆ ಶಿವನೆಂಬ ಎರಡು ಅಕ್ಷರಗಳು ಮುಖ್ಯವಾದ ನಾಮಗಳಾಗಿವೆ. ಈ ಶಿವನೆಂಬ ಹೆಸರನ್ನು ಅವಲಂಬಿಸಿಯೇ ಪಂಚಾಕ್ಷರ ಮಂತ್ರವು ಹೇಳಲ್ಪಟ್ಟಿದೆ.

**ಯಸ್ಮಾದತಃ ಸದಾ ಜಪ್ಯೋ**
**ಮೋಕ್ಷಾಕಾಂಕ್ಷಿಭಿರಾದರಾತ್ ॥ 8–12**

**ಯಥಾಽನಾದಿರ್ಮಹಾದೇವಃ**
**ಸಿದ್ಧಃ ಸಂಸಾರಮೋಚಕಃ ।**
**ತಥಾ ಪಂಚಾಕ್ಷರೋ ಮಂತ್ರಃ**
**ಸಂಸಾರಕ್ಷಯಕಾರಕಃ ॥ 8–13**

ಶಿವನಾಮದಿಂದ ಕೂಡಿರುವುದರಿಂದ ಮೋಕ್ಷಾಪೇಕ್ಷಿಗಳು ಯಾವಾಗಲೂ ಈ ಮಂತ್ರವನ್ನು ಜಪಿಸಬೇಕು. ಅನಾದಿಯಾದ ಮಹಾದೇವನು ಸಂಸಾರ ಮೋಚಕನೆಂದು (ಸಂಸಾರದಿಂದ ಮುಕ್ತಗೊಳಿಸುವನೆಂದು) ಪ್ರಸಿದ್ಧವಾಗಿರುವಂತೆ ಈ ಪಂಚಾಕ್ಷರ ಮಂತ್ರವು ಸಂಸಾರಕ್ಷಯಕಾರಕವಾಗಿರುತ್ತದೆ (ಸಂಸಾರವನ್ನು ಕ್ಷಯಿಸುವಂತಹುದ್ದಾಗಿರುತ್ತದೆ).

**ಪಂಚಭೂತಾನಿ ಸರ್ವಾಣಿ**
**ಪಂಚತನ್ಮಾತ್ರಕಾಣಿ ಚ ।**
**ಜ್ಞಾನೇಂದ್ರಿಯಾಣಿ ಪಂಚಾಪಿ**
**ಪಂಚಕರ್ಮೇಂದ್ರಿಯಾಣಿ ಚ ॥ 8–14**

**ಪಂಚಬ್ರಹ್ಮಾಣಿ ಪಂಚಾಪಿ**
**ಕೃತ್ಯಾನಿ ಸಹಕಾರಣೈಃ ।**
**ಬೋಧ್ಯಾನಿ ಪಂಚಭಿರ್ವರ್ಣೈಃ**
**ಪಂಚಾಕ್ಷರಮಹಾಮನೋಃ ॥ 8–15**

ಪಂಚಮಹಾಭೂತಗಳು (ಪೃಥ್ವಿ, ಅಪ್ಪು, ತೇಜ, ವಾಯು, ಆಕಾಶ), ಪಂಚತನ್ಮಾತ್ರಗಳು (ಗಂಧ, ರಸ, ರೂಪ, ಸ್ಪರ್ಶ, ಶಬ್ದ), ಪಂಚಜ್ಞಾನೇಂದ್ರಿಯಗಳು (ಘ್ರಾಣ, ರಸನ, ಚಕ್ಷು, ಚರ್ಮ, ಶ್ರೋತ್ರ), ಪಂಚ ಕರ್ಮೇಂದ್ರಿಯಗಳು (ಪಾಯು, ಉಪಸ್ಥ, ಪಾದ,

ಪಾಣಿ, ವಾಕ್), ಪಂಚಬ್ರಹ್ಮರು (ಈಶಾನ, ತತ್ಪುರುಷ, ಅಘೋರ, ವಾಮದೇವ, ಸದ್ಯೋಜಾತ) ಮತ್ತು ಪಂಚಕೃತ್ಯಗಳು (ಅನುಗ್ರಹ, ತಿರೋಧಾನ, ಲಯ, ಸ್ಥಿತಿ, ಸೃಷ್ಟಿ) – ಇವೆಲ್ಲವುಗಳು ಪಂಚಾಕ್ಷರ ಮಹಾಮಂತ್ರದ ಪಂಚವರ್ಣಗಳಿಂದ ಬೋಧ್ಯಗಳಾಗಿವೆ (ನಮಃ ಶಿವಾಯ ಎಂಬ ಪಂಚಾಕ್ಷರಗಳೇ ಈ ಎಲ್ಲಾ ಸೃಷ್ಟಿಗೆ ಮೂಲ ಕಾರಣ).

**ಪಂಚಧಾ ಪಂಚಧಾ ಯಾನಿ**
**ಪ್ರಸಿದ್ಧಾನಿ ವಿಶೇಷತಃ ।**
**ತಾನಿ ಸರ್ವಾಣಿ ವಸ್ತೂನಿ**
**ಪಂಚಾಕ್ಷರಮಯಾನಿ ಹಿ ॥ 8–16**

ಈ ಪ್ರಪಂಚದಲ್ಲಿ ವಿಶೇಷವಾಗಿ ಐದು ಐದರ ಗುಂಪುಗಳಾಗಿರುವ ವಸ್ತುಗಳೆಲ್ಲವೂ ಪಂಚಾಕ್ಷರಮಯಗಳೇ ಆಗಿರುತ್ತವೆ (ಪಂಚಾಕ್ಷರ ಮಂತ್ರದಿಂದಲೇ ಪ್ರಾದುರ್ಭವಿಸಿರುತ್ತವೆ).

**ಓಂಕಾರಪೂರ್ವೋ ಮಂತ್ರೋಽಯಮ್**
**ಪಂಚಾಕ್ಷರಮಯಃ ಪರಃ ।**
**ಶೈವಾಗಮೇಷು ವೇದೇಷು**
**ಷಡಕ್ಷರ ಇತಿ ಸ್ಮೃತಃ ॥ 8–17**

ಶ್ರೇಷ್ಠವಾದ ಈ ಪಂಚಾಕ್ಷರ ಮಹಾಮಂತ್ರವು ಓಂಕಾರದಿಂದ ಕೂಡಿಕೊಂಡಾಗ ವೇದಗಳಲ್ಲಿ ಮತ್ತು ಶೈವಾಗಮಗಳಲ್ಲಿ ಷಡಕ್ಷರ ಎಂದು ಕರೆಯಲ್ಪಡುತ್ತದೆ.

**ಮಂತ್ರನ್ಯಾಸಾದಿಭೂತೇನ**
**ಪ್ರಣವೇನ ಮಹಾಮನೋಃ ।**
**ಪ್ರಬೋಧ್ಯತೇ ಮಹಾದೇವಃ**
**ಕೇವಲಶ್ಚಿತ್ಸುಖಾತ್ಮಕಃ ॥ 8–18**

ಷಡಕ್ಷರ ಮಹಾಮಂತ್ರದ ಅಕ್ಷರಗಳು ಇರಿಸುವಿಕೆಯಲ್ಲಿ ಮೊದಲಿನ ಅಕ್ಷರವಾದ ಪ್ರಣವವೇ (ಓಂಕಾರವೇ) ಸಚ್ಚಿದಾನಂದ ಸ್ವರೂಪನಾದ ಕೇವಲ ಮಹಾದೇವನನ್ನೇ ಬೋಧಿಸುತ್ತದೆ.

**ಪ್ರಣವೇನೈಕವರ್ಣೇನ**
**ಪರಬ್ರಹ್ಮ ಪ್ರಕಾಶ್ಯತೇ ।**
**ಅದ್ವಿತೀಯಂ ಪರಾನಂದಮ್**
**ಶಿವಾಖ್ಯಂ ನಿಷ್ಪ್ರಪಂಚಕಮ್ ॥ 8–19**

ಅದ್ವಿತೀಯವಾದ (ಒಂದೇ ಒಂದಾದ) ಪರಮಾನಂದ ಸ್ವರೂಪವು ನಿಷ್ಪ್ರಪಂಚಕವು (ಪ್ರಾಪಂಚಿಕ ಭೇದ ಶೂನ್ಯವು) ಆದ ಶಿವನೆಂಬ ಹೆಸರಿನ ಪರಬ್ರಹ್ಮವು ಪ್ರಣವವೊಂದರಿಂದಲೇ ಪ್ರಕಾಶಿಸುತ್ತದೆ.

**ಪರಮಾತ್ಮಮನುರ್ಜ್ಞೇಯಃ**
**ಸೋಽಹಂರೂಪಃ ಸನಾತನಃ ।**
**ಜಾಯತೇ ಹಂಸಯೋರ್ಲೋಪಾತ್**
**ಓಮಿತ್ಯೇಕಾಕ್ಷರೋ ಮನುಃ ॥ 8–20**

ಸೋಽಹಂ ಎಂಬುವುದು ಶಿವ–ಜೀವರ ಅಭೇದವನ್ನು ಬೋಧಿಸುವ ಪರಮಾತ್ಮ ರೂಪವಾದ ಮಂತ್ರವಾಗಿರುತ್ತದೆ. ಇದು ಸನಾತನ (ನಿತ್ಯ)ವಾದುದು ಆಗಿದೆ. ಈ ಮಂತ್ರದಲ್ಲಿಯ ಹಕಾರ ಮತ್ತು ಸಕಾರಗಳು ಲೋಪವಾದಾಗ ಓಂಕಾರವೆಂಬ ಏಕಾಕ್ಷರ ಮಂತ್ರವು ಪ್ರಕಟವಾಗುತ್ತದೆ.

**ಪ್ರಣವೇನೈವ ಮಂತ್ರೇಣ**
**ಬೋಧ್ಯತೇ ನಿಷ್ಕಲಃ ಶಿವಃ ।**
**ಪಂಚಾಕ್ಷರೇಣ ಮಂತ್ರೇಣ**
**ಪಂಚಬ್ರಹ್ಮತನುಸ್ತಥಾ ॥ 8–21**

ಈ ಪ್ರಣವ (ಓಂಕಾರ) ಮಂತ್ರದಿಂದ ನಿಷ್ಕಲನಾದ ಶಿವನು ಬೋಧಿಸಲ್ಪಡುತ್ತಾನೆ. ಅದರಂತೆ ಪಂಚಾಕ್ಷರ ಮಂತ್ರದಿಂದ ಶಿವನ ಸದ್ಯೋಜಾತಾದಿ ಪಂಚಬ್ರಹ್ಮ ಸ್ವರೂಪವು ಹೇಳಲ್ಪಡುತ್ತದೆ.

**ನಿಷ್ಕಲಃ ಸಂವಿದಾಕಾರಃ**
**ಸಕಲೋ ವಿಶ್ವಮೂರ್ತಿಕಃ ।**
**ಉಭಯಾತ್ಮಾ ಶಿವೋ ಮಂತ್ರೇ**
**ಷಡಕ್ಷರಮಯೇ ಸ್ಥಿತಃ ॥ 8–22**

ನಿಷ್ಕಲನಾದ ಶಿವನು ಸಂವಿತ್ (ಜ್ಞಾನ, ಪ್ರಜ್ಞಾ) ಸ್ವರೂಪನು ಆಗಿರುತ್ತಾನೆ. ಸಕಲನಾದ ಪಂಚಬ್ರಹ್ಮನು ವಿಶ್ವ ಸ್ವರೂಪನಾಗಿರುತ್ತಾನೆ. ಹೀಗೆ ಈ ಷಡಕ್ಷರ ಮಂತ್ರದಿಂದ ಶಿವನ ಉಭಯ ರೂಪಗಳು (ನಿಷ್ಕಲ, ಸಕಲ ಸ್ವರೂಪಗಳು, ನಿರಾಕಾರ, ಸಾಕಾರ) ನಿರೂಪಿತವಾಗುತ್ತವೆ.

**ಮೂಲಂ ವಿದ್ಯಾ ಶಿವಃ ಶೈವಂ**
**ಸೂತ್ರಂ ಪಂಚಾಕ್ಷರಸ್ತಥಾ ।**
**ಏತಾನಿ ನಾಮಧೇಯಾನಿ**
**ಕೀರ್ತಿತಾನಿ ಮಹಾಮನೋಃ ॥ 8–23**

ಈ ಮಹಾಮಂತ್ರಕ್ಕೆ ಮೂಲಮಂತ್ರ, ವಿದ್ಯಾಮಂತ್ರ, ಶಿವಮಂತ್ರ, ಶೈವಸೂತ್ರ ಮಂತ್ರ ಮತ್ತು ಪಂಚಾಕ್ಷರಮಂತ್ರ ಎಂಬುದಾಗಿ ಐದು ಹೆಸರುಗಳು ಪ್ರಸಿದ್ಧವಾಗಿವೆ (ಪ್ರಪಂಚದ ಮೂಲ ಕಾರಣವಾಗಿರುವುದರಿಂದ ಮೂಲಮಂತ್ರ, ಈ ಮಂತ್ರದ ಜಪದಿಂದ ಶಿವ–ಜೀವೈಕ್ಯ ವಿದ್ಯೆಯು ಪ್ರಾಪ್ತವಾಗುವುದರಿಂದ ವಿದ್ಯಾಮಂತ್ರ, ಸರ್ವರಿಗೂ ಮಂಗಲವನ್ನುಂಟು ಮಾಡುವುದರಿಂದ ಶಿವಮಂತ್ರ, ಶಿವನ ಸಂಬಂಧಿಯಾದ ಸರ್ವ ವಿಷಯಂಗಳು ಇದರಲ್ಲಿ ಸೂತ್ರರೂಪವಾಗಿ ನಿರೂಪಿತವಾಗಿರುವುದರಿಂದ ಶೈವಸೂತ್ರ ಮಂತ್ರ, ಐದು ಅಕ್ಷರಗಳಿರುವುದರಿಂದ ಪಂಚಾಕ್ಷರ ಮಂತ್ರ).

**ಪಂಚಾಕ್ಷರೀಮಿಮಾಂ ವಿದ್ಯಾಮ್**
**ಪ್ರಣವೇನ ಷಡಕ್ಷರೀಮ್ ।**
**ಜಪೇತ್ ಸಮಾಹಿತೋ ಭೂತ್ವಾ**
**ಶಿವಪೂಜಾಪರಾಯಣಃ ॥ 8–24**

**ಪ್ರಾಣಾಯಾಮತ್ರಯಂ ಕೃತ್ವಾ**
**ಪ್ರಾಙ್ಮುಖೋದಙ್ಮುಖೋಽಪಿ ವಾ ।**
**ಚಿಂತಯನ್ ಹೃದಯಾಂಭೋಜೇ**
**ದೇವದೇವಂ ತ್ರಿಯಂಬಕಮ್ ॥ 8–25**

**ಸರ್ವಾಲಂಕಾರಸಂಯುಕ್ತಮ್**
**ಸಾಂಬಂ ಚಂದ್ರಾರ್ಧಶೇಖರಮ್ ।**
**ಜಪೇದೇತಾಂ ಮಹಾವಿದ್ಯಾಮ್**
**ಶಿವರೂಪಾಮನನ್ಯಧೀಃ ॥ 8–26**

ಶಿವಪೂಜಾ ಪರಾಯಣನಾದ (ಶಿವಪೂಜಾನಿಷ್ಠನಾದ)ವನು ಪ್ರಣವದಿಂದ ಕೂಡಿದ ಈ ಪಂಚಾಕ್ಷರ ಮಂತ್ರವನ್ನು (ಷಡಕ್ಷರ ಮಂತ್ರವನ್ನು) ಸಮಾಧಾನಚಿತ್ತನಾಗಿ ಜಪವನ್ನು ಮಾಡಬೇಕು. (ಶಿವಪೂಜಾನಿರತನಾದವನು) ಪೂರ್ವ ಇಲ್ಲವೇ ಉತ್ತರಮುಖವಾಗಿ ಕುಳಿತು, ಮೂರು ಸಾರಿ ಪ್ರಾಣಾಯಾಮವನ್ನು ಮಾಡಬೇಕು. ಆಮೇಲೆ ತನ್ನ ಹೃದಯ ಕಮಲದಲ್ಲಿ ಸರ್ವಾಲಂಕಾರಯುಕ್ತನಾದ ಸಾಂಬ (ಉಮಾಸಮೇತ)ನಾದ, ಚಂದ್ರಧರನಾದ, ಮುಕ್ಕಣ್ಣನಾದ, ಮಂಗಲಸ್ವರೂಪನಾದ, ದೇವದೇವನಾದ ಮಹಾದೇವನನ್ನು ಧ್ಯಾನಿಸುತ್ತಾ ಅನನ್ಯವಾದ ಮನಸ್ಸಿನಿಂದ ಈ ಷಡಕ್ಷರ ಮಹಾಮಂತ್ರವನ್ನು ಜಪಿಸಬೇಕು.

**ಜಪಸ್ತು ತ್ರಿವಿಧಃ ಪ್ರೋಕ್ತೋ**
**ವಾಚಿಕೋಪಾಂಶುಮಾನಸಃ ।**
**ಶ್ರೂಯತೇ ಯಸ್ತು ಪಾರ್ಶ್ವಸ್ಥೈಃ**
**ಯಥಾ ವರ್ಣಸಮನ್ವಯಃ ॥ 8–27**
**ವಾಚಿಕಃ ಸ ತು ವಿಜ್ಞೇಯಃ**
**ಸರ್ವಪಾಪಪ್ರಭಂಜನಃ ।**
**ಈಷತ್ಸ್ಪೃಷ್ಟಾಽಧರಪುಟಮ್**
**ಯೋ ಮಂದಮಭಿಧೀಯತೇ ॥ 8–28**

**ಪಾರ್ಶ್ವಸ್ಥೈರಶ್ರುತಃ ಸೋಽಯಮ್**
**ಉಪಾಂಶುಃ ಪರಿಕೀರ್ತಿತಃ ।**
**ಅಸ್ಪೃಷ್ಟಾಽಧರಮಸ್ಪಂದಿ**
**ಜಿಹ್ವಾಗ್ರಂ ಯೋಽಂತರಾತ್ಮನಾ ।**
**ಭಾವ್ಯತೇ ವರ್ಣರೂಪೇಣ**
**ಸ ಮಾನಸ ಇತಿ ಸ್ಮೃತಃ ॥ 8–29**

ಜಪವು ವಾಚಿಕ, ಉಪಾಂಶು ಮತ್ತು ಮಾನಸಿಕವೆಂಬುದಾಗಿ ಮೂರು ವಿಧವಾಗಿ ಹೇಳಲ್ಪಟ್ಟಿದೆ. ಸಮೀಪದ ವ್ಯಕ್ತಿಗೆ ಮಂತ್ರದ ಅಕ್ಷರಗಳು ಕೇಳುತ್ತಿದ್ದರೆ ಅದು ವಾಚಿಕ ಜಪವೆಂದು ನಿಶ್ಚಯವಾಗಿ ತಿಳಿದುಕೊಳ್ಳಬೇಕು. ಇದು ಸರ್ವಪಾಪ ನಾಶಕವಾಗಿರುತ್ತದೆ. ಎರಡೂ ತುಟಿಗಳನ್ನು ಸೂಕ್ಷ್ಮವಾಗಿ ಸ್ಪರ್ಶಿಸಿ ಸಮೀಪದ ವ್ಯಕ್ತಿಗೆ ಕೇಳದ ಹಾಗೆ ನಿಧಾನವಾಗಿ ಮಾಡುವ ಜಪವೇ ಉಪಾಂಶು ಜಪವೆಂದು ಕೀರ್ತಿಸಲ್ಪಡುತ್ತದೆ. ತುಟಿ ಹಾಗೂ ನಾಲಿಗೆಯ ತುದಿಯನ್ನು ಸ್ಪಂದಿಸದೆ (ಅಲ್ಲಾಡಿಸದೆ) ತನ್ನೊಳಗೆ ಮನಸ್ಸನ್ನು ಮಂತ್ರಾಕ್ಷರ ರೂಪದಲ್ಲಿ ಭಾವಿಸುವುದೇ ಮಾನಸಿಕ ಜಪವು.

**ಯಾವಂತಃ ಕರ್ಮಯಜ್ಞಾದ್ಯಾ**
**ವ್ರತದಾನತಪಾಂಸಿ ಚ ।**
**ಸರ್ವೇ ತೇ ಜಪಯಜ್ಞಸ್ಯ**
**ಕಲಾಂ ನಾರ್ಹಂತಿ ಷೋಡಶೀಮ್ ॥ 8–30**

ವ್ರತ, ದಾನ ಮತ್ತು ತಪಸ್ಸುಗಳೆಂಬ ಎಷ್ಟು ಕರ್ಮಯಜ್ಞಗಳಿರುವುವೋ ಅವೆಲ್ಲವೂ ಜಪಯಜ್ಞದ ಷೋಡಶಭಾಗಕ್ಕೂ ಸಮಾನವಾಗಲಾರದು (16ನೆಯ ಒಂದು ಭಾಗಕ್ಕೂ ಸಮನಾಗುವುದಿಲ್ಲ).

**ಮಾಹಾತ್ಮ್ಯಂ ವಾಚಿಕಸ್ಯೈತತ್**

**ಜಪಯಜ್ಞಸ್ಯ ಕೀರ್ತಿತಮ್ ।**
**ತಸ್ಮಾಚ್ಛತಗುಣೋಪಾಂಶುಃ**
**ಸಹಸ್ರೋ(ಸಹಸ್ರಂ) ಮಾನಸಃ ಸ್ಮೃತಃ ॥ 8–31**

ವಾಚಿಕ ಜಪಯಜ್ಞದ ಮಹಾತ್ಮ್ಯವು ಮೊದಲು ಹೇಳಲ್ಪಟ್ಟಿತು. ವಾಚಿಕ ಜಪದ ನೂರುಪಾಲು ಹೆಚ್ಚು ಫಲದಾಯಕವಾದದ್ದು ಉಪಾಂಶು ಜಪವು. ಇನ್ನು ಸಾವಿರ ಪಾಲು ಹೆಚ್ಚು ಫಲದಾಯಕವಾದದ್ದು ಮಾನಸಿಕ ಜಪವೆಂದು ಹೇಳಲಾಗಿದೆ.

**ವಾಚಿಕಾತ್ ತದುಪಾಂಶೋಶ್ಚ**
**ಜಪಾದಸ್ಯ ಮಹಾಮನೋಃ ।**
**ಮಾನಸೋ ಹಿ ಜಪಃ ಶ್ರೇಷ್ಠೋ**
**ಘೋರಸಂಸಾರನಾಶಕಃ ॥ 8–32**

(ಷಡಕ್ಷರ ಮಹಾಮಂತ್ರದ) ವಾಚಿಕ ಜಪ ಮತ್ತು ಉಪಾಂಶು ಜಪಕ್ಕಿಂತಲೂ ಘೋರ ಸಂಸಾರನಾಶಕವಾದ ಮಾನಸಿಕ ಜಪವೇ ನಿಶ್ಚಯವಾಗಿ ಶ್ರೇಷ್ಠವಾದುದು.

**ಏತೇಷ್ವೇಕೇನ ವಿಧಿನಾ**
**ಯಥಾಭಾವಂ ಯಥಾಕ್ರಮಮ್ ।**
**ಜಪೇತ್ ಪಂಚಾಕ್ಷರೀಮೇತಾಮ್**
**ವಿದ್ಯಾಂ ಪಾಶವಿಮುಕ್ತಯೇ ॥ 8–33**

ಈ ಮೇಲೆ ಹೇಳಿದ ವಿಧಿಗಳಲ್ಲಿ ಕ್ರಮವಾಗಿ ಒಂದೊಂದು ವಿಧಿಯಿಂದ ಭಾವಪೂರ್ಣವಾಗಿ, ಪಾಶದ ವಿಮುಕ್ತಿಗಾಗಿ (ಮಲ, ಮಾಯಾ, ಕರ್ಮಪಾಶಗಳ ನಿವೃತ್ತಿಗಾಗಿ) ಈ ಪಂಚಾಕ್ಷರೀ ವಿದ್ಯೆಯನ್ನು (ಮಂತ್ರವನ್ನು) ಜಪಿಸಬೇಕು.

**ಅನೇನ ಮೂಲಮಂತ್ರೇಣ**
**ಶಿವಲಿಂಗಂ ಪ್ರಪೂಜಯೇತ್ ।**
**ನಿತ್ಯಂ ನಿಯಮಸಂಪನ್ನಃ**
**ಪ್ರಯತಾತ್ಮಾ ಶಿವಾತ್ಮಕಃ ॥ 8–34**

ನಿಯಮ ಸಂಪನ್ನನಾಗಿ (ಯಮ ನಿಯಮಾದಿಗಳಿಂದ ಕೂಡಿದವನಾಗಿ), ಪ್ರತಿನಿತ್ಯವೂ ಶಿವಭಾವಸಂಪನ್ನನಾಗಿ ಪ್ರಯತ್ನಪೂರ್ವಕ ಈ ಮೂಲಮಂತ್ರದಿಂದ (ಪಂಚಾಕ್ಷರ ಮಂತ್ರದಿಂದ) ತನ್ನ ಶಿವಲಿಂಗವನ್ನು (ಇಷ್ಟಲಿಂಗವನ್ನು) ಪೂಜಿಸಬೇಕು.

**ಭಕ್ತ್ಯಾ ಪಂಚಾಕ್ಷರೇಣೈವ**
**ಯಃ ಶಿವಂ ಸಕೃದರ್ಚಯೇತ್ ।**
**ಸೋಽಪಿ ಗಚ್ಛೇಚ್ಛಿವಸ್ಥಾನಮ್**
**ಮಂತ್ರಸ್ಯಾಸ್ಯೈವ ಗೌರವಾತ್ ॥ 8–35**

ಭಕ್ತಿಯುತನಾಗಿ ಯಾರು ಈ ಪಂಚಾಕ್ಷರ ಮಂತ್ರದಿಂದಲೇ ಶಿವನನ್ನು (ಇಷ್ಟಲಿಂಗವನ್ನು) ಒಂದು ಬಾರಿಯಾದರೂ ಪೂಜಿಸುವರೋ ಅವರು ಈ ಮಂತ್ರದ ಮಹಿಮೆಯಿಂದ ಶಿವಲೋಕವನ್ನು ಹೊಂದುವರು.

**ಅಬ್‌ಭಕ್ಷಾ ವಾಯುಭಕ್ಷಾಶ್ಚ**
**ಯೇ ಚಾನ್ಯೇ ವ್ರತಕರ್ಷಿತಾಃ ।**
**ತೇಷಾಮೇತೈರ್ವ್ರತೈರ್ನಾಸ್ತಿ**
**ಶಿವಲೋಕಸಮಾಗಮಃ ॥ 8–36**

ಅಬ್‌ಭಕ್ಷಾ (ಜಲಹಾರಿಗಳಾಗಿ), ವಾಯು ಆಹಾರಿಗಳಾಗಿ ಯಾರು ಬೇರೆ ಬೇರೆ ವ್ರತಗಳಿಂದ (ಕೃಚ್ಛ್ರ ಚಾಂದ್ರಾಯಣಾದಿ ವ್ರತಗಳಿಂದ) ಕೃಶಗೊಂಡವರಿಗೆ ಅವರ ಆ ವ್ರತಗಳಿಂದ ಶಿವಲೋಕ ಪ್ರಾಪ್ತಿಯು ಆಗುವುದಿಲ್ಲ.

**ತಸ್ಮಾತ್ತಪಾಂಸಿ ಯಜ್ಞಾಶ್ಚ**
**ವ್ರತಾನಿ ನಿಯಮಾಸ್ತಥಾ ।**
**ಪಂಚಾಕ್ಷರಾರ್ಚನಸ್ಯೈತೇ**
**ಕೋಟ್ಯಂಶೇನಾಪಿ ನೋ ಸಮಾಃ ॥ 8–37**

ಆದ್ದರಿಂದ ತಪಸ್ಸು, ಯಜ್ಞ, ವ್ರತ ಹಾಗೂ ನಿಯಮಾದಿಗಳ ಫಲಗಳು ಪಂಚಾಕ್ಷರ ಮಹಾಮಂತ್ರದಿಂದ ಶಿವನನ್ನು ಪೂಜಿಸಿದ ಫಲದ ಕೋಟಿಯ ಒಂದು ಭಾಗಕ್ಕೆ ಸಮವಾಗಲಾರದು.

**ಅಶುದ್ಧೋ ವಾ ವಿಶುದ್ಧೋ ವಾ**
**ಸಕೃತ್ ಪಂಚಾಕ್ಷರೇಣ ಯಃ ।**
**ಪೂಜಯೇತ್ ಪತಿತೋ ವಾಽಪಿ**
**ಮುಚ್ಯತೇ ನಾತ್ರ ಸಂಶಯಃ ॥ 8–38**

ಅಶುದ್ಧನೇ ಆಗಿರಲಿ, ಪರಿಶುದ್ಧನೇ ಆಗಿರಲಿ ವ್ರತಭ್ರಷ್ಟನಾದ ಪತಿತನೇ ಆಗಿರಲಿ, ಒಂದು ಸಾರಿ ಈ ಪಂಚಾಕ್ಷರ ಮಂತ್ರವನ್ನು ಪಠಿಸುತ್ತಾ ಶಿವಲಿಂಗ (ಇಷ್ಟಲಿಂಗ)ವನ್ನು ಪೂಜಿಸಿದರೆ ಅವನು ಮುಕ್ತನಾಗುವುದರಲ್ಲಿ ಸಂಶಯವಿಲ್ಲ.

**ಸಕೃದುಚ್ಚಾರಮಾತ್ರೇಣ**
**ಪಂಚಾಕ್ಷರಮಹಾಮನೋಃ ।**
**ಸರ್ವೇಷಾಮಪಿ ಜಂತೂನಾಮ್**
**ಸರ್ವಪಾಪಕ್ಷಯೋ ಭವೇತ್ ॥ 8–39**

ಈ ಪಂಚಾಕ್ಷರ ಮಹಾಮಂತ್ರವನ್ನು ಒಂದೇ ಒಂದು ಸಾರಿ ಉಚ್ಚರಿಸಿದರೂ ಎಲ್ಲಾ ಜೀವಿಗಳ ಎಲ್ಲ ವಿಧ ಪಾಪಗಳು ನಾಶವಾಗುತ್ತವೆ.

**ಅನ್ಯೇಽಪಿ ಬಹವೋ ಮಂತ್ರಾ**
**ವಿದ್ಯಂತೇ ಸಕಲಾಗಮೇ ।**
**ಭೂಯೋ ಭೂಯಃ ಸಮಭ್ಯಾಸಾತ್**
**ಪುರುಷಾರ್ಥಪ್ರದಾಯಿನಃ ॥ 8–40**

ಸಕಲ ಶಿವಾಗಮಗಳಲ್ಲಿ ಬೇರೆ ಬೇರೆ ಪ್ರಕಾರದ ಅನೇಕ ಮಂತ್ರಗಳು ಇವೆ. ಅವುಗಳು ಮೇಲಿಂದ ಮೇಲೆ ಜಪಾಭ್ಯಾಸವನ್ನು ಮಾಡಿದಾಗ ಮಾತ್ರ ಪುರುಷಾರ್ಥ (ಧರ್ಮ, ಅರ್ಥ, ಕಾಮ, ಮೋಕ್ಷ)ಗಳನ್ನು ಕೊಡುವಂತಹುಗಳಾಗಿವೆ.

**ಏಷ ಮಂತ್ರೋ ಮಹಾಶಕ್ತಿಃ**
**ಈಶ್ವರಪ್ರತಿಪಾದಕಃ ।**
**ಸಕೃದುಚ್ಚಾರಣಾದೇವ**
**ಸರ್ವಸಿದ್ಧಿಪ್ರದಾಯಕಃ ॥ 8–41**

ಈಶ್ವರನನ್ನು ಪ್ರತಿಪಾದಿಸುವ (ಈಶ್ವರ ರೂಪವನ್ನು ಹೇಳುವ) ಈ ಪಂಚಾಕ್ಷರ ಮಹಾಮಂತ್ರವು ಮಹಾಶಕ್ತಿಶಾಲಿಯಾದುದಾಗಿದೆ. ಅಂತೆಯೇ ಒಂದೇ ಸಾರಿ ಉಚ್ಚರಿಸಿದರೂ ಸಕಲ ಸಿದ್ಧಿಗಳನ್ನು ಕೊಡುವಂತಹುದ್ದಾಗಿದೆ.

**ಪಂಚಾಕ್ಷರೀಂ ಸಮುಚ್ಚಾರ್ಯ**
**ಪುಷ್ಪಂ ಲಿಂಗೇ ವಿನಿಕ್ಷಿಪೇತ್ ।**
**ಯಸ್ತಸ್ಯ ವಾಜಪೇಯಾನಾಮ್**

**ಸಹಸ್ರಫಲಮಿಷ್ಯತೇ ॥ 8-42**

ಈ ಪಂಚಾಕ್ಷರ ಮಹಾಮಂತ್ರವನ್ನು ಉಚ್ಚರಿಸುತ್ತಾ ಒಂದು ಪುಷ್ಪವನ್ನು ಶಿವಲಿಂಗಕ್ಕೆ ಸಮರ್ಪಿಸಿದರೆ ವಾಜಪೇಯಿ ಯಾಗದ ಸಾವಿರ ಪಾಲು ಹೆಚ್ಚು ಫಲವು ಪ್ರಾಪ್ತವಾಗುತ್ತದೆ.

**ಅಗ್ನಿಹೋತ್ರಂ ತ್ರಯೋ ವೇದಾ**
**ಯಜ್ಞಾಶ್ಚ ಬಹುದಕ್ಷಿಣಾಃ ।**
**ಪಂಚಾಕ್ಷರಜಪಸ್ಯೈತೇ**
**ಕೋಟ್ಯಂಶೇನಾಪಿ ನೋ ಸಮಾಃ ॥ 8-43**

ಪ್ರತಿನಿತ್ಯ ಮಾಡುವ ಅಗ್ನಿಹೋತ್ರ ಯಾಗ, ಮೂರು ವೇದಗಳ ಅಧ್ಯಯನ, ಬಹುದಕ್ಷಿಣೆಯುಳ್ಳ ಜ್ಯೋತಿಷ್ಟೋಮಾದಿ ಯಾಗಗಳ ಫಲಗಳು ಪಂಚಾಕ್ಷರೀ ಮಂತ್ರದಿಂದ ಪ್ರಾಪ್ತವಾಗುವ ಫಲದ ಕೋಟಿಯ ಒಂದು ಭಾಗಕ್ಕೂ ಸಮವಾಗಲಾರವು.

**ಪುರಾ ಸಾನಂದಯೋಗೀಂದ್ರಃ**
**ಶಿವಜ್ಞಾನಪರಾಯಣಃ ।**
**ಪಂಚಾಕ್ಷರಂ ಸಮುಚ್ಚಾರ್ಯ**
**ನಾರಕಾನುದತಾರಯತ್ ॥ 8-44**

ಪೂರ್ವಕಾಲದಲ್ಲಿ ಶಿವಜ್ಞಾನ ಪರಾಯಣನಾದ (ಶಿವಜ್ಞಾನ ನಿಷ್ಠನಾದ) ಸಾನಂದನೆಂಬ ಯೋಗಿವರ್ಯನು ಪಂಚಾಕ್ಷರ ಮಹಾಮಂತ್ರವನ್ನು ಉಚ್ಚರಿಸಿ ನರಕದಲ್ಲಿರುವವರನ್ನು ಉದ್ಧರಿಸಿದನು.

**ಸಿದ್ಧ್ಯಾ ಪಂಚಾಕ್ಷರಸ್ಯಾಸ್ಯ**
**ಶತಾನಂದಃ ಪುರಾ ಮುನಿಃ ।**
**ನರಕಂ ಸ್ವರ್ಗಮಕರೋತ್**
**ಸಂಗಿರಸ್ಯಾಪಿ ಪಾಪಿನಃ ॥ 8-45**

ಪೂರ್ವಕಾಲದಲ್ಲಿ ಶತಾನಂದನೆಂಬ ಮುನಿಯು ಈ ಪಂಚಾಕ್ಷರಮಂತ್ರದ ಸಿದ್ಧಿಯಿಂದ ಸಂಗಿರನೆಂಬ ಪಾಪಿಯ ಸಲುವಾಗಿ ನರಕವನ್ನೇ ಸ್ವರ್ಗವನ್ನಾಗಿ ಮಾಡಿದನು.

**ಉಪಮನ್ಯುಃ ಪುರಾ ಯೋಗೀ**
**ಮಂತ್ರೇಣಾನೇನ ಸಿದ್ಧಿಮಾನ್ ।**
**ಲಬ್ಧವಾನ್ ಪರಮೇಶಾನಾತ್**
**ಶೈವಶಾಸ್ತ್ರಪ್ರವಕ್ತೃತಾಮ್ ॥ 8-46**

ಈ ಪಂಚಾಕ್ಷರ ಮಹಾಮಂತ್ರದಿಂದ ಸಿದ್ಧಿಯನ್ನು ಪಡೆದ ಉಪಮನ್ಯು ಎಂಬ ಹೆಸರಿನ ಯೋಗಿಯು ಪೂರ್ವಕಾಲದಲ್ಲಿ ಶಿವನಿಂದ ಶೈವಶಾಸ್ತ್ರದ ಆಚಾರ್ಯ ಪದವಿಯನ್ನು ಪಡೆದುಕೊಂಡನು.

**ವಸಿಷ್ಠವಾಮದೇವಾದ್ಯಾ**
**ಮುನಯೋ ಮುಕ್ತಕಿಲ್ಬಿಷಾಃ ।**
**ಮಂತ್ರೇಣಾನೇನ ಸಂಸಿದ್ಧಾ**
**ಮಹಾತೇಜಸ್ವಿನೋಽಭವನ್ ॥ 8-47**

ಈ ಪಂಚಾಕ್ಷರ ಮಹಾಮಂತ್ರದ ಜಪದಿಂದ ವಸಿಷ್ಠ ವಾಮದೇವಾದಿ ಮುನಿಗಳು ಪಾಪಮುಕ್ತರಾಗಿ ಅನೇಕ ಸಿದ್ಧಿಗಳನ್ನು ಪಡೆದುಕೊಂಡರಲ್ಲದೆ ಮಹಾತೇಜಸ್ವಿಗಳೂ (ಶಾಪಾನುಗ್ರಹ ಸಮರ್ಥರೂ) ಆಗಿದ್ದರು.

**ಬ್ರಹ್ಮಾದೀನಾಂ ಚ ದೇವಾನಾಮ್**
**ಜಗತ್ಸೃಷ್ಟ್ಯಾದಿಕರ್ಮಣಿ ।**
**ಮಂತ್ರಸ್ಯಾಸ್ಯೈವ ಮಾಹಾತ್ಮ್ಯಾತ್**

**ಸಾಮರ್ಥ್ಯಮುಪಜಾಯತೇ ॥ 8-48**

ಬ್ರಹ್ಮ, ವಿಷ್ಣು ಮೊದಲಾದ ದೇವತೆಗಳು ಈ ಪಂಚಾಕ್ಷರ ಮಹಾಮಂತ್ರದ ಜಪದ ಮಹಾತ್ಮ್ಯದಿಂದ ಈ ಜಗತ್ತಿನ ಸೃಷ್ಟಿ, ಸ್ಥಿತಿ ಮತ್ತು ಸಂಹಾರ ಕ್ರಿಯೆಗಳನ್ನು ಮಾಡಲು ಸಮರ್ಥರಾಗುತ್ತಾರೆ.

**ಕಿಮಿಹ ಬಹುಭಿರುಕ್ತೈರ್ಮಂತ್ರಮೇವಂ ಮಹಾತ್ಮಾ**
**ಪ್ರಣವಸಹಿತಮಾದೌ ಯಸ್ತು ಪಂಚಾಕ್ಷರಾಖ್ಯಮ್ ।**
**ಜಪತಿ ಪರಮಭಕ್ತ್ಯಾ ಪೂಜಯನ್ ದೇವದೇವಮ್**
**ಸ ಗತದುರಿತಬಂಧೋ ಮೋಕ್ಷಲಕ್ಷ್ಮೀಂ ಪ್ರಯಾತಿ ॥ 8-49**

**– ಮಾಲಿನೀ ವೃತ್ತಮ್**

ಇಲ್ಲಿ ಪಂಚಾಕ್ಷರ ಮಂತ್ರದ ವಿಷಯವಾಗಿ ಹೆಚ್ಚಿಗೆ ಹೇಳುವುದರಿಂದ ಏನು ಪ್ರಯೋಜನ? ಯಾವ ಮಹಾತ್ಮನು ದೇವನಾದ ಮಹಾದೇವನನ್ನು ಪೂಜಿಸುತ್ತಾ ಪರಮ ಭಕ್ತಿಯಿಂದ ಪ್ರಣವಾಕ್ಷರವೇ ಮೊದಲುಳ್ಳ ಪಂಚಾಕ್ಷರ ಮಹಾಮಂತ್ರವನ್ನು (ಓಂ ನಮಃ ಶಿವಾಯ ಮಂತ್ರವನ್ನು) ಜಪಿಸುತ್ತಾನೆ, ಅವನು ದುರಿತ (ಪಾಪ)ಬಂಧನದಿಂದ ಬಿಡುಗಡೆಯಾಗಿ ಮೋಕ್ಷಲಕ್ಷ್ಮಿಯನ್ನು ಪಡೆದುಕೊಳ್ಳುತ್ತಾನೆ.

***ಇತಿ ಪಂಚಾಕ್ಷರೀಜಪಸ್ಥಲಂ*** *ಇಲ್ಲಿಗೆ ಪಂಚಾಕ್ಷರೀಜಪಸ್ಥಲವು ಮುಗಿಯಿತು.*

***ಓಂ ತತ್ಸತ್ ಇತಿ***

***ಶ್ರೀ ಶಿವಗೀತೇಷು ಸಿದ್ಧಾಂತಾಗಮೇಷು ಶಿವಾದ್ವೈತವಿದ್ಯಾಯಾಂ ಶಿವಯೋಗಶಾಸ್ತ್ರೇ ಶ್ರೀರೇಣುಕಾಗಸ್ತ್ಯಸಂವಾದೇ ವೀರಶೈವಧರ್ಮನಿರ್ಣಯೇ ಶಿವಯೋಗಿಶಿವಾಚಾರ್ಯವಿರಚಿತೇ ಶ್ರೀಸಿದ್ಧಾಂತಶಿಖಾಮಣೌ ಭಕ್ತಸ್ಥಲೇ ಪಂಚಾಕ್ಷರ ಜಪಸ್ಥಲಪ್ರಸಂಗೋ ನಾಮ ಅಷ್ಟಮಃ ಪರಿಚ್ಛೇದಃ ॥***

*ಓಂ ತತ್ಸತ್ ಇತಿ ಶ್ರೀ ಶಿವನಿಂದ ಉಪದೇಶಿಸಲ್ಪಟ್ಟು ಶ್ರೀ ಸಿದ್ಧಾಂತಾ ಗಮಗಳಲ್ಲಿಯ ಶಿವಾದ್ವೈತವಿದ್ಯಾರೂಪವೂ, ಶಿವಯೋಗಶಾಸ್ತ್ರವೂ, ಶ್ರೀ ರೇಣುಕಾಗಸ್ತ್ಯಸಂವಾದ ರೂಪವೂ, ಶ್ರೀ ಶಿವಯೋಗಿ ಶಿವಾಚಾರ್ಯವಿರಚಿತವೂ ಆದ ಶ್ರೀ ಸಿದ್ಧಾಂತ ಶಿಖಾಮಣಿಯಲ್ಲಿ ಭಕ್ತಸ್ಥಲದಲ್ಲಿಯ ಪಂಚಾಕ್ಷರಜಪಸ್ಥಲ ಪ್ರಸಂಗವೆಂಬ ಹೆಸರಿನ ಎಂಟನೆಯ ಪರಿಚ್ಛೇದವು ಮುಗಿದುದು.*

## **ನವಮಃ ಪರಿಚ್ಛೇದಃ**
ಒಂಭತ್ತನೆಯ ಪರಿಚ್ಛೇದವು

## **ಭಕ್ತಮಾರ್ಗಕ್ರಿಯಾ–ಉಭಯ–ತ್ರಿವಿಧಸಂಪತ್ತಿ–ಚತುರ್ವಿಧಸಾರಾಯ ದಾನತ್ರಯಸ್ಥಲಪ್ರಸಂಗಃ**
ಭಕ್ತಮಾರ್ಗಕ್ರಿಯಾ–ಉಭಯ–ತ್ರಿವಿಧಸಂಪತ್ತಿ–ಚತುರ್ವಿಧಸಾರಾಯ– ದಾನತ್ರಯ ಸ್ಥಲ ಪ್ರಸಂಗವು

**(94 ಶ್ಲೋಕಗಳು)**

### **9. ಅಥ ಭಕ್ತಮಾರ್ಗಕ್ರಿಯಾಸ್ಥಲಮ್**
ಈಗ ಭಕ್ತಮಾರ್ಗಕ್ರಿಯಾಸ್ಥಲವು

**(50 ಶ್ಲೋಕಗಳು)**

**ಭೂತಿರುದ್ರಾಕ್ಷಸಂಯುಕ್ತೋ**
**ಲಿಂಗಧಾರೀ ಸದಾಶಿವಃ ।**
**ಪಂಚಾಕ್ಷರಜಪೋದ್ಯೋಗೀ**
**ಶಿವಭಕ್ತ ಇತಿ ಸ್ಮೃತಃ ॥ 9–1**

ವಿಭೂತಿ ರುದ್ರಾಕ್ಷಿಗಳನ್ನು ಧರಿಸಿದ, ಇಷ್ಟಲಿಂಗಧಾರಿಯಾದ, ಅಂತೆಯೇ ಸದಾ ಮಂಗಳಸ್ವರೂಪನಾದ ಮತ್ತು ಪಂಚಾಕ್ಷರ ಜಪದಲ್ಲಿ ನಿರತನಾದವನು, ಶಿವಭಕ್ತನೆಂದು ಕರೆಯಲ್ಪಡುತ್ತಾನೆ.

**ಶ್ರವಣಂ ಕೀರ್ತನಂ ಶಂಭೋಃ**
**ಸ್ಮರಣಂ ಪಾದಸೇವನಮ್ ।**
**ಅರ್ಚನಂ ವಂದನಂ ದಾಸ್ಯಮ್**
**ಸಖ್ಯಮಾತ್ಮನಿವೇದನಮ್ ॥ 9–2**
**ಏವಂ ನವವಿಧಾ ಭಕ್ತಿಃ**
**ಪ್ರೋಕ್ತಾ ದೇವೇನ ಶಂಭುನಾ ।**
**ದುರ್ಲಭಾ ಪಾಪಿನಾಂ ಲೋಕೇ**
**ಸುಲಭಾ ಪುಣ್ಯಕರ್ಮಣಾಮ್ ॥ 9–3**

ದೇವಾದಿದೇವನಾದ ಶಂಭುವಿನಿಂದ ಹೇಳಲ್ಪಟ್ಟ ಈ ಶಿವಭಕ್ತಿಯು ಶ್ರವಣ, ಕೀರ್ತನ, ಸ್ಮರಣ, ಪಾದಸೇವನ, ಅರ್ಚನ, ವಂದನ, ದಾಸ್ಯ, ಸಖ್ಯ ಮತ್ತು ಆತ್ಮನಿವೇದನ ಎಂಬುದಾಗಿ ಒಂಭತ್ತು ವಿಧವಾಗಿರುತ್ತದೆ. ಈ ಲೋಕದಲ್ಲಿ ಇದು ಪಾಪಿಗಳಿಗೆ ದುರ್ಲಭವಾದುದು, ಪುಣ್ಯಾತ್ಮರಿಗೆ ಸುಲಭವಾದುದಾಗಿದೆ.

**ಅಧಮೇ ಚೋತ್ತಮೇ ವಾಽಪಿ**
**ಯತ್ರ ಕುತ್ರಚಿದೂರ್ಜಿತಾ ॥**
**ವರ್ತತೇ ಶಾಂಕರೀ ಭಕ್ತಿಃ**
**ಸ ಭಕ್ತ ಇತಿ ಗೀಯತೇ ॥ 9–4**

**ಭಕ್ತಿಃ ಸ್ಥಿರೀಕೃತಾ ಯಸ್ಮಿನ್**
**ಮ್ಲೇಚ್ಛೇ ವಾ ದ್ವಿಜಸತ್ತಮೇ ।**
**ಶಂಭೋಃ ಪ್ರಿಯಃ ಸ ವಿಪ್ರಶ್ಚ**
**ನ ಪ್ರಿಯೋ ಭಕ್ತಿವರ್ಜಿತಃ ॥ 9–5**

ಅಧಮನೇ (ನೀಚನೇ) ಆಗಿರಲಿ ಅಥವಾ ಉತ್ತಮನೇ ಆಗಿರಲಿ, ಇನ್ನೂ ಬೇರೆ ಯಾರಾದರೂ ಆಗಿರಲಿ, ಅವನಲ್ಲಿ ಶಿವನ ಭಕ್ತಿಯು ಇದ್ದರೆ ಅವನು ಭಕ್ತನೆಂದು ಕರೆಯಲ್ಪಡುತ್ತಾನೆ. ಮ್ಲೇಚ್ಛ (ಅನಾಗರೀಕ)ನಾಗಿರಲಿ ಅಥವಾ ಬ್ರಾಹ್ಮಣೋತ್ತಮನೇ ಆಗಿರಲಿ ದೃಢವಾದ ಶಿವಭಕ್ತಿಯು ಯಾರಲ್ಲಿರುವುದೋ ಅವನೇ ಶಂಭುವಿಗೆ ಪ್ರಿಯನು. ಭಕ್ತಿಯಿಲ್ಲದ ವಿಪ್ರನು (ಬ್ರಾಹ್ಮಣನು) ಪ್ರಿಯನಲ್ಲ.

**ಸಾ ಭಕ್ತಿರ್ದ್ವಿವಿಧಾ ಜ್ಞೇಯಾ**
**ಬಾಹ್ಯಾಭ್ಯಂತರಭೇದತಃ ।**
**ಬಾಹ್ಯಾ ಸ್ಥೂಲಾಂತರಾ ಸೂಕ್ಷ್ಮಾ**
**ವೀರಮಾಹೇಶ್ವರಾದೃತಾ ॥ 9–6**

ಆ ಶಿವಭಕ್ತಿಯು ಬಾಹ್ಯವೆಂತಲೂ (ಹೊರಗಿನದೆಂತಲೂ) ಮತ್ತು ಅಭ್ಯಂತರವೆಂತಲೂ (ಅಂತರಂಗವೆಂತಲೂ) ಎರಡು ವಿಧವಾಗಿದೆ ಎಂದು ತಿಳಿದುಕೊಳ್ಳಬೇಕು. ಬಾಹ್ಯಭಕ್ತಿಯು ಸ್ಥೂಲವಾದುದು. ಅಂತರಭಕ್ತಿಯು ಸೂಕ್ಷ್ಮವಾದದ್ದು. ಈ ಸೂಕ್ಷ್ಮಭಕ್ತಿಯೇ ವೀರಮಾಹೇಶ್ವರರಿಂದ ಸ್ವೀಕರಿಸಲ್ಪಟ್ಟಿದೆ.

**ಸಿಂಹಾಸನೇ ಶುದ್ಧದೇಶೇ**
**ಸುರಮ್ಯೇ ರತ್ನಚಿತ್ರಿತೇ ।**
**ಶಿವಲಿಂಗಸ್ಯ ಪೂಜಾ ಯಾ**
**ಸಾ ಬಾಹ್ಯಾ ಭಕ್ತಿರುಚ್ಯತೇ ॥ 9–7**

ಸುರಮ್ಯವಾದ (ಮನೋಹರವಾದ) ಶುದ್ಧಪ್ರದೇಶ (ಗೋಮಯಾದಿ ಗಳಿಂದ ಸಾರಿಸಿ ಶುದ್ಧಗೊಳಿಸಿದ ಜಾಗ)ದಲ್ಲಿ ರತ್ನಗಳಿಂದ (ನವರತ್ನಗಳಿಂದ) ಅಲಂಕಾರಗೊಳಿಸಿದ ಸಿಂಹಾಸನದಲ್ಲಿ ಕುಳಿತು ಶಿವಲಿಂಗ (ಇಷ್ಟಲಿಂಗ)ವನ್ನು ಪೂಜಿಸುವುದೇ ಅದು ಬಾಹ್ಯ ಭಕ್ತಿಯೆಂದು ಹೇಳಲಾಗಿದೆ.

**ಲಿಂಗೇ ಪ್ರಾಣಂ ಸಮಾಧಾಯ**
**ಪ್ರಾಣೇ ಲಿಂಗಂ ತು ಶಾಂಭವಮ್ ।**
**ಸ್ವಸ್ಥಂ ಮನಸ್ತಥಾ ಕೃತ್ವಾ**
**ನ ಕಿಂಚಿಚ್ಚಿಂತಯೇದ್ ಯದಿ ॥ 9–8**

**ಸಾಭ್ಯಂತರಾ ಭಕ್ತಿರಿತಿ**
**ಪ್ರೋಚ್ಯತೇ ಶಿವಯೋಗಿಭಿಃ ।**
**ಸಾ ಯಸ್ಮಿನ್ ವರ್ತತೇ ತಸ್ಯ**
**ಜೀವನಂ ಭ್ರಷ್ಟಬೀಜವತ್ ॥ 9–9**

ಇನ್ನು ಇಷ್ಟಲಿಂಗದಲ್ಲಿ ತನ್ನ ಪ್ರಾಣವನ್ನು, ಆ ಪ್ರಾಣದಲ್ಲಿ ಶಿವಕಲಾಯುಕ್ತವಾದ ಲಿಂಗವನ್ನು ಅಳವಡಿಸಿಕೊಂಡು, ಅಂದರೆ ಲಿಂಗಪ್ರಾಣಗಳನ್ನು ಸಮರಸ ಮಾಡಿಕೊಂಡು ಮನಸ್ಸನ್ನು ಸ್ಥಿರಗೊಳಿಸಿ, ಬೇರಾವ ಚಿಂತನೆಗಳನ್ನೂ ಮಾಡದೆ ಮಾಡುವ ಲಿಂಗ (ಇಷ್ಟಲಿಂಗ) ಪೂಜೆ ಇದು ಆಭ್ಯಂತರ (ಅಂತರಂಗದ) ಭಕ್ತಿಯೆಂದು ಶಿವಯೋಗಿಗಳು ಹೇಳುತ್ತಾರೆ. ಈ ಭಕ್ತಿಯು ಯಾರಲ್ಲಿ ಇರುತ್ತದೆಯೋ ಅವನ ಜೀವನವು ಹುರಿದ ಬೀಜದಂತಾಗುತ್ತದೆ (ಅಂದರೆ ಅವನಿಗೆ ಪುನರ್ಜನ್ಮವಿಲ್ಲ).

**ಬಹುನಾತ್ರ ಕಿಮುಕ್ತೇನ**

**ಗುಹ್ಯಾದ್ ಗುಹ್ಯತರಾ ಪರಾ ।**
**ಶಿವಭಕ್ತಿರ್ನಸಂದೇಹಃ**
**ತಯಾ ಯುಕ್ತೋ ವಿಮುಚ್ಯತೇ ॥ 9–10**

(ಈ ಅಂತರಂಗ ಭಕ್ತಿಯ ಬಗೆಗೆ) ಹೆಚ್ಚಿನ ಮಾತುಗಳಿಂದ ಏನೂ ಪ್ರಯೋಜನವಿಲ್ಲ. ಈ ಭಕ್ತಿಯು ಸರ್ವೋತ್ಕೃಷ್ಟವೂ, ಗುಹ್ಯಕ್ಕಿಂತಲೂ ಗುಹ್ಯವಾದುದಾಗಿದೆ (ಅತ್ಯಂತ ಗೌಪ್ಯವಾದುದಾಗಿದೆ). ಈ ಶಿವಭಕ್ತಿಸಂಪನ್ನನು ಮುಕ್ತಿಯನ್ನು ಪಡೆಯುತ್ತಾನೆ. ಇದರಲ್ಲಿ ಯಾವ ಸಂಶಯವೂ ಇಲ್ಲ.

**ಪ್ರಸಾದಾದೇವ ಸಾ ಭಕ್ತಿಃ**
**ಪ್ರಸಾದೋ ಭಕ್ತಿಸಂಭವಃ ।**
**ಯಥೈವಾಂಕುರತೋ ಬೀಜಮ್**
**ಬೀಜತೋ ವಾ ಯಥಾಂಕುರಃ ॥ 9–11**
**ಪ್ರಸಾದಪೂರ್ವಿಕಾ ಯೇಯಮ್**
**ಭಕ್ತಿರ್ಮುಕ್ತಿವಿಧಾಯಿನೀ ।**
**ನೈವ ಸಾ ಶಕ್ಯತೇ ಪ್ರಾಪ್ತುಮ್**
**ನರೈರೇಕೇನ ಜನ್ಮನಾ ॥ 9–12**

ಬೀಜದಿಂದ ಅಂಕುರ ಮತ್ತು ಅಂಕುರದಿಂದ ಬೀಜ ಹೇಗೆ ಉತ್ಪನ್ನವಾಗುವುದೋ ಹಾಗೆ ಶಿವನ ಪ್ರಸಾದದಿಂದ (ಅನುಗ್ರಹದಿಂದ) ಭಕ್ತಿಯು ಮತ್ತು ಭಕ್ತಿಯಿಂದ ಶಿವನ ಪ್ರಸಾದವು ಉಂಟಾಗುತ್ತದೆ. ಪ್ರಸಾದ ಪೂರ್ವಕವಾದ (ಶಿವಾನುಗ್ರಹದಿಂದ ಲಭಿಸಿರುವ) ಯಾವ ಭಕ್ತಿ ಇರುವುದೋ ಅದು ಮುಕ್ತಿದಾಯಕವಾಗಿರುತ್ತದೆ. ಅಂತಹ ಆ ಭಕ್ತಿಯು ಮನುಷ್ಯರಿಗೆ ಒಂದೇ ಜನ್ಮದಲ್ಲಿ ಪಡೆಯಲು ಶಕ್ಯವಾಗುವುದಿಲ್ಲ (ಸಾಧ್ಯವಾಗುವುದಿಲ್ಲ).

**ಅನೇಕಜನ್ಮಶುದ್ಧಾನಾಮ್**
**ಶ್ರೌತಸ್ಮಾರ್ತಾನುವರ್ತಿನಾಮ್ ।**
**ವಿರಕ್ತಾನಾಂ ಪ್ರಬುದ್ಧಾನಾಮ್**
**ಪ್ರಸೀದತಿ ಮಹೇಶ್ವರಃ ॥ 9–13**

ಅನೇಕ ಜನ್ಮಜನ್ಮಾಂತರಗಳಲ್ಲಿ (ಶಿವಪೂಜಾದಿಗಳಿಂದ) ಪರಿಶುದ್ಧ ರಾದವರಿಗೆ ಶ್ರುತಿ ಮತ್ತು ಸ್ಮೃತಿಗಳಲ್ಲಿ ಹೇಳಲ್ಪಟ್ಟ (ನಿತ್ಯ, ನೈಮಿತ್ತಿಕ) ಕರ್ಮಗಳನ್ನು ಅಚರಿಸಿದವರಿಗೆ, ವಿರಕ್ತರಾದವರಿಗೆ, ಶಿವಜ್ಞಾನ ಸಂಪನ್ನರಾದ ಪ್ರಬುದ್ಧರಿಗೆ ಮಹೇಶ್ವರನು ಪ್ರಸನ್ನನಾಗುತ್ತಾನೆ.

**ಪ್ರಸನ್ನೇ ಸತಿ ಮುಕ್ತೋಽಭೂತ್**
**ಮುಕ್ತಃ ಶಿವಸಮೋ ಭವೇತ್ ।**
**ಅಲ್ಪಭಕ್ತ್ಯಾಽಪಿ ಯೋ ಮರ್ತ್ಯಃ**
**ತಸ್ಯ ಜನ್ಮತ್ರಯಾತ್ಪರಮ್ ॥ 9–14**

ಶಿವನು ಪ್ರಸನ್ನನಾಗಲು ಸಾಧಕನು ಮುಕ್ತನಾಗುತ್ತಾನೆ. ಮುಕ್ತನಾದವನು ಶಿವನಿಗೆ ಸಮಾನನಾಗುತ್ತಾನೆ (ಶಿವಸ್ವರೂಪನಾಗುತ್ತಾನೆ). ಯಾವನು ಅಲ್ಪಭಕ್ತಿಯುಳ್ಳವನಾಗಿರುವನೋ ಅವನಿಗೆ ಮೂರು ಜನ್ಮಗಳ ನಂತರ ಮುಕ್ತಿ ಲಭಿಸುತ್ತದೆ.

**ನ ಯೋನಿಯಂತ್ರಪೀಡಾ ವೈ**
**ಭವೇನ್ನೈವಾತ್ರ ಸಂಶಯಃ ।**
**ಸಾಂಗಾ ನ್ಯೂ ನಾ ಚ ಯಾ ಸೇವಾ**
**ಸಾ ಭಕ್ತಿರಿತಿ ಕಥ್ಯತೇ ॥ 9–15**

ಹೀಗೆ ನವವಿಧ ಅಂಗಗಳಿಂದ (ಭಕ್ತಿಗಳಿಂದ) ಪರಿಪುಷ್ಟವಾದದ್ದೇ ಸಾಂಗಾ (ಪೂರ್ಣ)ಭಕ್ತಿಯು. ಇನ್ನು ಇವುಗಳಲ್ಲಿ ಯಾವುದಾದರೊಂದು ಭಕ್ತಿಯು ಕೊರತೆಯಾದಲ್ಲಿ ಅದು ನ್ಯೂನಾಭಕ್ತಿಯೆಂದು ಕರೆಯಲ್ಪಡುತ್ತದೆ. ಈ ಭಕ್ತಿಯುಳ್ಳವನಿಗೆ ಯೋನಿಯಂತ್ರದ ಪೀಡೆಯು (ಪುನರ್ಜನ್ಮವು) ಆಗುವುದಿಲ್ಲ. ಇದರಲ್ಲಿ ಯಾವ ಸಂಶಯವೂ ಇಲ್ಲ.

**ಸಾ ಪುನರ್ಭಿದ್ಯತೇ ತ್ರೇಧಾ**
**ಮನೋವಾಕ್ಕಾಯಸಾಧನೈಃ ।**
**ಶಿವರೂಪಾದಿಚಿಂತಾ ಯಾ**
**ಸಾ ಸೇವಾ ಮಾನಸೀ ಸ್ಮೃತಾ ।**
**ಜಪಾದಿ ವಾಚಿಕೀ ಸೇವಾ**
**ಕರ್ಮಪೂಜಾ ಚ ಕಾಯಿಕೀ ॥ 9–16**

ಆ ಭಕ್ತಿಯು ಮತ್ತೆ ಮಾನಸಿಕ ಭಕ್ತಿ, ವಾಚಿಕ ಭಕ್ತಿ ಮತ್ತು ಕಾಯಿಕೀಭಕ್ತಿಯೆಂಬುದಾಗಿ ಮೂರು ಪ್ರಕಾರವಾಗಿರುವುದು. ಮನಸ್ಸಿನಲ್ಲಿ ಶಿವನ ಸ್ವರೂಪಾದಿಗಳನ್ನು ಧ್ಯಾನಿಸುವ ಮಾನಸಿಕ ಸೇವೆಯೇ ಮಾನಸಿಕ ಭಕ್ತಿಯೆಂದು ಕರೆಯಲ್ಪಡುತ್ತದೆ. ವಾಣಿಯಿಂದ ಶಿವಪಂಚಾಕ್ಷರ ಮಂತ್ರದ ಜಪ ಮತ್ತು ಶಿವಸ್ತೋತ್ರಾದಿಗಳ ಪಠಣವನ್ನು ಮಾಡುವುದೇ ವಾಚಿಕ ಭಕ್ತಿಯು. ಇನ್ನು ಶರೀರದಿಂದ ಮಾಡಲ್ಪಟ್ಟ ಕರ್ಮ ಪ್ರಧಾನವಾದ (ಇಷ್ಟಲಿಂಗ) ಪೂಜೆಯೇ ಕಾಯಿಕೀ ಭಕ್ತಿಯೆಂದು ಹೇಳಲ್ಪಡುತ್ತದೆ.

**ಬಾಹ್ಯಮಾಭ್ಯಂತರಂ ಚೈವ**
**ಬಾಹ್ಯಾಭ್ಯಂತರಮೇವ ವಾ ।**
**ಮನೋವಾಕ್ಕಾಯಭೇದೈಶ್ಚ**
**ತ್ರಿಧಾ ತದ್ಭಜನಂ ವಿದುಃ ॥ 9–17**

ಈ ಪೂರ್ವದಲ್ಲಿ ಹೇಳಿದ (ಕಾಯಿಕೀ, ವಾಚಿಕ, ಮಾನಸಿಕ) ಭಕ್ತಿಗಳು ಬಾಹ್ಯವೆಂತಲೂ, ಆಭ್ಯಂತರ (ಅಂತರಂಗ)ವೆಂತಲೂ ಮತ್ತು ಬಾಹ್ಯಾಭ್ಯಂತರ ವೆಂತಲೂ, ಪ್ರತಿಯೊಂದೂ ಮೂರು ಮೂರು ಪ್ರಕಾರವಾಗಿರುತ್ತದೆ.

**ಮನೋ ಮಹೇಶಧ್ಯಾನಾಢ್ಯಮ್**
**ನಾನ್ಯಧ್ಯಾನರತಂ ಮನಃ ।**
**ಶಿವನಾಮರತಾ ವಾಣೀ**
**ವಾಙ್ಮತಾ ಚೈವ ನೇತರಾ ॥ 9–18**
**ಲಿಂಗೈಃ ಶಿವಸ್ಯ ಚೋದ್ದಿಷ್ಟೈಃ**
**ತ್ರಿಪುಂಡ್ರಾದಿಭಿರಂಕಿತಃ ।**
**ಶಿವೋಪಚಾರನಿರತಃ**
**ಕಾಯಃ ಕಾಯೋ ನ ಚೇತರಃ ॥ 9–19**

ಮಹೇಶನ (ಶಿವನ) ಧ್ಯಾನದಲ್ಲಿ ಆಸಕ್ತವಾದ ಮನಸ್ಸೇ ನಿಜವಾದ ಮನಸ್ಸು. ಅನ್ಯ ಧ್ಯಾನಾಸಕ್ತವಾದ ಮನಸ್ಸು ಮನಸ್ಸಲ್ಲ. ಶಿವನಾಮದಲ್ಲಿ ನಿರತವಾದ (ಜಪಾಸಕ್ತವಾದ) ವಾಣಿಯೇ ನಿಜವಾದ ವಾಣಿಯು, ಅನ್ಯರ ಸ್ತುತಿಯಲ್ಲಿ ನಿರತವಾದ ವಾಣಿಯು ವಾಣಿಯಲ್ಲ. ಇದೇ ಪ್ರಕಾರ ಶಿವಲಾಂಛನಗಳಾದ ಶಿವಲಿಂಗ, ರುದ್ರಾಕ್ಷಿ, ತ್ರಿಪುಂಡ್ರಾದಿಗಳನ್ನು ಧರಿಸಿ ಶಿವನ ಉಪಚಾರದಲ್ಲಿ (ಶಿವಪೂಜೆಯಲ್ಲಿ) ನಿರತವಾದ ಕಾಯವೇ ನಿಜವಾದ ಕಾಯವು. ಇದಕ್ಕೆ ವಿಪರೀತವಾದದ್ದು ಕಾಯವೇ ಅಲ್ಲ.

**ಅನ್ಯಾತ್ಮವಿದಿತಂ ಬಾಹ್ಯಮ್**
**ಶಂಭೋರಭ್ಯರ್ಚನಾದಿಕಮ್ ।**
**ತದೇವ ತು ಸ್ವಸಂವೇದ್ಯಮ್**
**ಆಭ್ಯಂತರಮುದಾಹೃತಮ್ ।**

**ಮನೋ ಮಹೇಶಪ್ರವಣಮ್**
**ಬಾಹ್ಯಾಭ್ಯಂತರಮುಚ್ಯತೇ ॥ 9–20**

ಅನ್ಯರಿಗೆ ಗೋಚರವಾಗುವ ಶಂಭುವಿನ ಅರ್ಚನಾದಿಗಳು ಬಾಹ್ಯಭಕ್ತಿಯಾಗಿದೆ. ಅದುವೆ ಕೇವಲ ಸ್ವಸಂವೇದ್ಯವಾದರೆ (ತನಗೆ ಮಾತ್ರ ತಿಳಿದರೆ) ಅದು ಆಭ್ಯಂತರ ಭಕ್ತಿಯೆಂದು ಹೇಳಲ್ಪಡುತ್ತದೆ. ಮಹೇಶನ ಧ್ಯಾನ ಹಾಗೂ ಅರ್ಚನಾಸಕ್ತವಾದ ಮನವು ಬಾಹ್ಯಾಭ್ಯಂತರವೆಂದು ಹೇಳಲ್ಪಡುತ್ತದೆ.

**ಪಂಚಧಾ ಕಥ್ಯತೇ ಸದ್ಭಿಃ**
**ತದೇವ ಭಜನಂ ಪುನಃ ।**
**ತಪಃ ಕರ್ಮ ಜಪೋ ಧ್ಯಾನಮ್**
**ಜ್ಞಾನಂ ಚೇತ್ಯನುಪೂರ್ವಕಮ್ ॥ 9–21**

ತಪಸ್ಸು, ಕರ್ಮ, ಜಪ, ಧ್ಯಾನ ಮತ್ತು ಜ್ಞಾನ ಎಂಬುದಾಗಿ ಆ (ಮೇಲೆ ಹೇಳಿದ) ಭಕ್ತಿಯು ಮತ್ತೆ ಐದು ಪ್ರಕಾರವಾಗಿ (ಪಂಚಧಾ) ಹೇಳಲ್ಪಡುತ್ತದೆ.

**ಶಿವಾರ್ಥೇ ದೇಹಸಂಶೋಷಃ**
**ತಪಃಕೃಚ್ಛ್ರಾದಿ ನೋ ಮತಮ್ ।**
**ಶಿವಾರ್ಚಾ ಕರ್ಮ ವಿಜ್ಞೇಯಮ್**
**ಬಾಹ್ಯಂ ಯಾಗಾದಿ ನೋಚ್ಯತೇ ॥ 9–22**

ಶಿವಪೂಜೆಗಾಗಿ ದೇಹವನ್ನು ಶೋಷಣೆಗೊಳಿಸುವುದು (ದೇಹ ದಂಡಿಸುವುದು) ತಪಸ್ಸು. ಆದರೆ ಕೃಚ್ಛ್ರಚಾಂದ್ರಾಯಣಾದಿ ವ್ರತಗಳು ತಪಸ್ಸಲ್ಲ. ಇಷ್ಟಲಿಂಗಾರ್ಚನೆಯೇ ನಿತ್ಯಕರ್ಮವೆಂದು ತಿಳಿದುಕೊಳ್ಳಬೇಕು. ಬಾಹ್ಯಗಳಾದ ಯಾಗಾದಿ ನಿತ್ಯಕರ್ಮಗಳಲ್ಲ.

**ಜಪಃ ಪಂಚಾಕ್ಷರಾಭ್ಯಾಸಃ**
**ಪ್ರಣವಾಭ್ಯಾಸ ಏವ ವಾ ।**
**ರುದ್ರಾಧ್ಯಾಯಾದಿಕಾಭ್ಯಾಸೋ**
**ನ ವೇದಾಧ್ಯಯನಾದಿಕಮ್ ॥ 9–23**

ಪಂಚಾಕ್ಷರ ಮಂತ್ರದ ಅಭ್ಯಾಸವೂ (ಪುನಃ ಪುನಃ ಆವೃತ್ತಿಯು) ಪ್ರಣವದ (ಓಂಕಾರದ) ಅಥವಾ ರುದ್ರಾಧ್ಯಾಯಾದಿಗಳ ಅಭ್ಯಾಸವು ಜಪವೆಂದು ಕರೆಯಲ್ಪಡುತ್ತದೆ. ವೇದಾಧ್ಯಯನಾದಿಗಳು ಜಪವಲ್ಲ.

**ಧ್ಯಾನಂ ಶಿವಸ್ಯ ರೂಪಾದಿ–**
**ಚಿಂತಾ ನಾತ್ಮಾದಿಚಿಂತನಮ್ ।**
**ಶಿವಾಗಮಾರ್ಥವಿಜ್ಞಾನಮ್**
**ಜ್ಞಾನಂ ನಾನ್ಯಾರ್ಥವೇದನಮ್ ।**
**ಇತಿ ಪಂಚಪ್ರಕಾರೋಽಯಮ್**
**ಶಿವಯಜ್ಞಃ ಪ್ರಕೀರ್ತಿತಃ ॥ 9–24**

ಶಿವನ ರೂಪಾದಿಗಳ ಚಿಂತನೆಯೇ ಧ್ಯಾನವು. ಆತ್ಮಾದಿಗಳ ಚಿಂತನವು ಧ್ಯಾನವಲ್ಲ. ಶಿವಾಗಮಗಳ ಅರ್ಥವನ್ನು ತಿಳಿದುಕೊಳ್ಳುವುದೇ ಜ್ಞಾನವು. ಬೇರೆ ಶಾಸ್ತ್ರಗಳನ್ನು ತಿಳಿದುಕೊಳ್ಳುವುದು ಜ್ಞಾನವಲ್ಲ. ಹೀಗೆ ಈ ಶಿವಯಜ್ಞವು ಐದು ಪ್ರಕಾರವಾಗಿ (ತಪ, ಕರ್ಮ, ಜಪ, ಧ್ಯಾನ ಮತ್ತು ಜ್ಞಾನ) ಕೀರ್ತಿಸಲ್ಪಟ್ಟಿದೆ.

**ಅನೇನ ಪಂಚಯಜ್ಞೇನ**
**ಯಃ ಪೂಜಯತಿ ಶಂಕರಮ್ ।**
**ಭಕ್ತ್ಯಾ ಪರಮಯಾ ಯುಕ್ತಃ**
**ಸ ವೈ ಭಕ್ತ ಇತೀರಿತಃ ॥ 9–25**

ಈ ಮೇಲೆ ಹೇಳಿದ ಪಂಚಯಜ್ಞದಿಂದ ಯಾವನು ಶಂಕರ(ಶಿವ)ನನ್ನು ಪೂಜಿಸುತ್ತಾನೆಯೋ ಅವನು ಪರಮಶ್ರೇಷ್ಠವಾದ ಭಕ್ತಿಯಿಂದ ಕೂಡಿದವನಾಗಿ ಭಕ್ತನೆನಿಸಿಕೊಳ್ಳುತ್ತಾನೆ.

**ಪೂಜನಾಚ್ಛಿವಭಕ್ತಸ್ಯ**
**ಪುಣ್ಯಾ ಗತಿರವಾಪ್ಯತೇ ।**
**ಅವಮಾನಾನ್ಮಹಾಘೋರೋ**
**ನರಕೋ ನಾತ್ರ ಸಂಶಯಃ ॥ 9–26**

ಶಿವಭಕ್ತನನ್ನು ಪೂಜಿಸುವುದರಿಂದ ಸದ್ಗತಿಯು ಪ್ರಾಪ್ತವಾಗುತ್ತದೆ. ಆದರೆ ಅವನಿಗೆ ಅವಮಾನವನ್ನು ಮಾಡಿದರೆ ಮಹಾಘೋರ (ಮಹಾಭಯಂಕರ)ವಾದ ನರಕವು ಪ್ರಾಪ್ತವಾಗುವುದು. ಇದರಲ್ಲಿ ಯಾವ ಸಂಶಯವೂ ಇಲ್ಲ.

**ಶಿವಭಕ್ತೋ ಮಹಾತೇಜಾಃ**
**ಶಿವಭಕ್ತಿಪರಾಙ್ಮುಖಾನ್ ।**
**ನ ಸ್ಪೃಶೇನ್ನೈವ ವೀಕ್ಷೇತ**
**ನ ತೈಃ ಸಹ ವಸೇತ್ ಕ್ವಚಿತ್ ॥ 9–27**

ಮಹಾತೇಜಸ್ವಿಯಾದ ಶಿವಭಕ್ತನು ಶಿವಭಕ್ತಿ ಪರಾಙ್ಮುಖರನ್ನು (ಶಿವಭಕ್ತಿ ವಿಹೀನರನ್ನು) ಮುಟ್ಟಕೂಡದು, ನೋಡಕೂಡದು ಮತ್ತು ಎಲ್ಲಿಯೂ ಅವರೊಂದಿಗೆ ಸಹವಾಸವನ್ನು ಮಾಡಕೂಡದು (ಇಲ್ಲಿ ಪಂಚಾಚಾರಗಳಲ್ಲಿಯ ಲಿಂಗಾಚಾರ, ಸದಾಚಾರ, ಶಿವಾಚಾರ, ಭೃತ್ಯಾಚಾರ, ಗಣಾಚಾರಗಳ ವಿಚಾರವನ್ನು ಹೇಳಲಾಗಿದೆ. ಚಂದ್ರಜ್ಞಾನಾಗಮ ಮತ್ತು ಪರಮರಹಸ್ಯದಿಂದ ವಿಚಾರಪ್ರತಿಪಾದನೆ ನಡೆದಿದೆ).

**ಯದಾ ದೀಕ್ಷಾಪ್ರವೇಶಃ ಸ್ಯಾತ್**
**ಲಿಂಗಧಾರಣಪೂರ್ವಕಃ ।**
**ತದಾಪ್ರಭೃತಿ ಭಕ್ತೋಽಸೌ**
**ಪೂಜಯೇತ್ ಸ್ವಾಗಮಸ್ಥಿತಾನ್ ॥ 9–28**

ಶಿವಭಕ್ತನು (ಗುರುವಿನಿಂದ) ದೀಕ್ಷಾಸಂಸ್ಕಾರವನ್ನು ಹೊಂದಿ ಯಾವಾಗ ಲಿಂಗಧಾರಣೆಯನ್ನು ಮಾಡಿಕೊಳ್ಳುವನೋ ಅಂದಿನಿಂದ ಅವನು ಶಿವಾಗಮಗಳಲ್ಲಿ ಹೇಳಿದ ಆಚಾರಗಳನ್ನು ಪರಿಪಾಲಿಸುವವರನ್ನು (ಶಿವಾಚಾರ್ಯರನ್ನು, ಶಿವಶರಣರನ್ನು, ಶಿವಭಕ್ತರನ್ನು) ಪೂಜಿಸಬೇಕು.

**ಸ್ವಮಾರ್ಗಾಚಾರನಿರತಾಃ**
**ಸಜಾತೀಯಾ ದ್ವಿಜಾಸ್ತು ಯೇ ।**
**ತೇಷಾಂ ಗೃಹೇಷು ಭುಂಜೀತ**
**ನೇತರೇಷಾಂ ಕದಾಚನ ॥ 9–29**

ತನ್ನ ಆಚಾರ ವಿಚಾರಗಳಿಗೆ ಹೊಂದಿಕೆಯಾಗುವ (ಶಿವಾಚಾರ ಸಂಪನ್ನರಾದ) ದೀಕ್ಷಾ ಸಂಸ್ಕಾರವನ್ನು ಹೊಂದಿದ ತನ್ನ ಕುಲಬಾಂಧವರ ಮನೆಯಲ್ಲಿ ಭುಂಜಿಸಬೇಕೇ ವಿನಃ (ಊಟ ಮಾಡಬೇಕೇ ವಿನಃ) ಅನ್ಯರ ಮನೆಯಲ್ಲಿ ಎಂದೂ ಮಾಡಬಾರದು.

**ಸ್ವಮಾರ್ಗಾಚಾರವಿಮುಖೈಃ**

**ಭವಿಭಿಃ ಪ್ರಾಕೃತಾತ್ಮಭಿಃ ।**
**ಪ್ರೇಷಿತಂ ಸಕಲಂ ದ್ರವ್ಯಮ್**
**ಆತ್ಮಲೀನಮಪಿ ತ್ಯಜೇತ್ ॥ 9–30**

ಶಿವಭಕ್ತನು ಸ್ವಮಾರ್ಗಾಚಾರಕ್ಕೆ (ತನ್ನ ವೀರಶೈವಾಚಾರಕ್ಕೆ) ವಿಮುಖರಾದ ಭವಿಗಳಿಂದ (ಅಲಿಂಗಿಗಳಿಂದ) ಕಳುಹಿಸಲ್ಪಟ್ಟ ದ್ರವ್ಯವು ತನ್ನ ಸ್ವಾಧೀನವಾಗಿದ್ದರೂ ಅದೆಲ್ಲವನ್ನೂ ತ್ಯಾಗ ಮಾಡಬೇಕು.

**ನಾರ್ಚಯೇದನ್ಯದೇವಾಂಸ್ತು**
**ನ ಸ್ಮರೇನ್ನ ಚ ಕೀರ್ತಯೇತ್ ।**
**ನ ತನ್ನಿವೇದ್ಯಮಶ್ನೀಯಾತ್**
**ಶಿವಭಕ್ತೋ ದೃಢವ್ರತಃ ॥ 9–31**

ದೃಢವ್ರತನಾದ (ಶಿವೈಕ್ಯವ್ರತ ಸಂಪನ್ನನಾದ) ಶಿವಭಕ್ತನು ಶಿವನ ಹೊರತಾಗಿ ಅನ್ಯದೇವತೆಗಳನ್ನು ಅರ್ಚಿಸಕೂಡದು. ಅವರನ್ನು ಸ್ಮರಿಸಲೂ ಕೂಡದು ಮತ್ತು ಅನ್ಯದೇವರ ಗುಣಗಾನವನ್ನೂ ಸಹ ಮಾಡಕೂಡದು ಮತ್ತು ಅನ್ಯದೇವರಿಗೆ ಅರ್ಪಿಸಿದ ನೈವೇದ್ಯವನ್ನೂ ಸಹ ತಾನು ಸ್ವೀಕರಿಸಬಾರದು.

**ಯದ್ಗೃಹೇಷ್ವನ್ಯದೇವೋಽಸ್ತಿ**
**ತದ್ಗೃಹಾಣಿ ಪರಿತ್ಯಜೇತ್ ।**
**ನಾನ್ಯದೇವಾರ್ಚಕಾನ್ ಮರ್ತ್ಯಾನ್**
**ಪೂಜಾಕಾಲೇ ನಿರೀಕ್ಷಯೇತ್ ॥ 9–32**

ಯಾವ ಮನೆಗಳಲ್ಲಿ ಶಿವನ ಹೊರತಾದ ಅನ್ಯದೇವತೆಗಳಿರುವವೋ ಆ ಮನೆಗಳನ್ನು ತ್ಯಾಗ ಮಾಡಬೇಕು (ಶಿವಭಕ್ತನು ಆ ಮನೆಗಳಲ್ಲಿ ಪ್ರವೇಶ ಮಾಡಕೂಡದು). ಅದರಂತೆ ಶಿವನ ಹೊರತಾಗಿ ಅನ್ಯದೇವರನ್ನು ಅರ್ಚಿಸುವ ಮನುಷ್ಯರನ್ನು ಇಷ್ಟಲಿಂಗ ಪೂಜಾಕಾಲದಲ್ಲಿ ನೋಡಕೂಡದು.

**ಸದಾ ಶಿವೈಕನಿಷ್ಠಾನಾಮ್**
**ವೀರಶೈವಾಧ್ವವರ್ತಿನಾಮ್ ।**
**ನಹಿ ಸ್ಥಾವರಲಿಂಗಾನಾಮ್**
**ನಿರ್ಮಾಲ್ಯಾದ್ಯುಪಯುಜ್ಯತೇ ॥ 9–33**

ಯಾವಾಗಲೂ ಶಿವನಲ್ಲಿ ಏಕನಿಷ್ಠೆಯನ್ನು ಹೊಂದಿರುವ ವೀರಶೈವ ಧರ್ಮಾನುಯಾಯಿಗಳು ಸ್ಥಾವರಲಿಂಗಗಳ ನಿರ್ಮಾಲ್ಯಾದಿಗಳನ್ನು (ಪತ್ರೆ, ಪುಷ್ಪ, ಪ್ರಸಾದಗಳನ್ನು) ಉಪಯೋಗಿಸಕೂಡದು.

**ಯತ್ರ ಸ್ಥಾವರಲಿಂಗಾನಾಮ್**
**ಅಪಾಯಃ ಪರಿವರ್ತತೇ ।**
**ಅಥವಾ ಶಿವಭಕ್ತಾನಾಮ್**
**ಶಿವಲಾಂಛನಧಾರಿಣಾಮ್ ॥ 9–34**

**ತತ್ರ ಪ್ರಾಣಾನ್ ವಿಹಾಯಾಪಿ**
**ಪರಿಹಾರಂ ಸಮಾಚರೇತ್ ।**
**ಶಿವಾರ್ಥಂ ಮುಕ್ತಜೀವಶ್ಚೇತ್**
**ಶಿವಸಾಯುಜ್ಯಮಾಪ್ನುಯಾತ್ ॥ 9–35**

ಮಂದಿರಗಳಲ್ಲಿಯ ಸ್ಥಾವರಲಿಂಗಗಳಿಗೆ ಅಥವಾ ಶೈವ ಲಾಂಛನಗಳನ್ನು (ಇಷ್ಟಲಿಂಗ, ಭಸ್ಮ, ರುದ್ರಾಕ್ಷ) ಧರಿಸಿದ ಶಿವಭಕ್ತರಿಗೆ ಎಲ್ಲಿ ಅಪಾಯವು ಸಂಭವಿಸುವುದೋ ಅಲ್ಲಿ ತನ್ನ ಪ್ರಾಣಗಳನ್ನು ತ್ಯಜಿಸಿಯಾದರೂ ಆ ಅಪಾಯವನ್ನು ಪರಿಹರಿಸಬೇಕು. ಶಿವನಿಗಾಗಿ ತನ್ನ ಜೀವವನ್ನು (ಪ್ರಾಣವನ್ನು) ಕಳೆದುಕೊಂಡದ್ದೇ ಆದರೆ ಅವನು ಶಿವಸಾಯುಜ್ಯವನ್ನು ಪಡೆಯುವನು.

**ಶಿವನಿಂದಾಕರಂ ದೃಷ್ಟ್ವಾ**
**ಘಾತಯೇದಥವಾ ಶಪೇತ್ ।**
**ಸ್ಥಾನಂ ವಾ ತತ್ಪರಿತ್ಯಜ್ಯ**
**ಗಚ್ಛೇದ್ ಯದ್ಯಕ್ಷಮೋ ಭವೇತ್ ॥ 9–36**

ಶಿವಭಕ್ತನಾದವನು, ಶಿವನಿಂದಕರನ್ನು ಕಂಡಾಗ ಅವನನ್ನು ಸಂಹರಿಸಬೇಕು ಅಥವಾ ಕಠೋರ ಶಬ್ದಗಳಿಂದ ಶಪಿಸಬೇಕು. ಒಂದು ವೇಳೆ ಇವೆರಡನ್ನೂ ಮಾಡಲು ಅಸಮರ್ಥನಾಗಿದ್ದರೆ ಆ ಸ್ಥಾನವನ್ನು ತ್ಯಜಿಸಿ ಹೋಗಬೇಕು.

**ಯತ್ರ ಚಾಚಾರನಿಂದಾಽಸ್ತಿ**
**ಕದಾಚಿತ್ತತ್ರ ನ ವ್ರಜೇತ್ ।**
**ಯದ್ಗೃಹೇ ಶಿವನಿಂದಾಽಸ್ತಿ**
**ತದ್ಗೃಹಾಣಿ ಪರಿತ್ಯಜೇತ್ ॥ 9–37**

ಯಾವ ಸ್ಥಾನದಲ್ಲಿ ಆಚಾರಾದಿಗಳ (ಶಿವಾಚಾರಾದಿಗಳ) ನಿಂದೆಯು ಆಗುತ್ತದೆಯೋ ಅಲ್ಲಿ ಎಂದೂ ಹೋಗಬಾರದು ಮತ್ತು ಯಾರ ಮನೆಯಲ್ಲಿ ಶಿವನಿಂದೆಯು ನಡೆಯುತ್ತದೆಯೋ ಆ ಮನೆಗಳನ್ನು (ಶಿವಭಕ್ತನು) ತ್ಯಜಿಸಬೇಕು.

**ಯಃ ಸರ್ವಭೂತಾಧಿಪತಿಮ್**
**ವಿಶ್ವೇಶಾನಂ ವಿನಿಂದತಿ ।**
**ನ ತಸ್ಯ ನಿಷ್ಕೃತಿಃ ಶಕ್ಯಾ**
**ಕರ್ತುಂ ವರ್ಷಶತೈರಪಿ ॥ 9–38**

ಸರ್ವಭೂತಗಳಿಗೆ (ಪ್ರಾಣಿಗಳಿಗೆ) ಅಧಿಪತಿಯಾದ ವಿಶ್ವೇಶ(ಶಿವ)ನನ್ನು ವಿಶೇಷವಾಗಿ ಯಾರು ನಿಂದಿಸುತ್ತಾರೆಯೋ ಅವರು ಆ ನಿಂದೆಯಿಂದುಂಟಾದ ದೋಷವನ್ನು ಕಳೆದುಕೊಳ್ಳಲು ಒಂದು ನೂರು ವರ್ಷ ನಿಷ್ಕೃತಿ (ಪ್ರಾಯಶ್ಚಿತ್ತವನ್ನು) ಯನ್ನು ಮಾಡಿಕೊಂಡರೂ ಸಾಧ್ಯವಿಲ್ಲ.

**ಶಿವಪೂಜಾಪರೋ ಭೂತ್ವಾ**
**ಪೂರ್ವಕರ್ಮ ವಿಸರ್ಜಯೇತ್ ।**
**ಅಥವಾ ಪೂರ್ವಕರ್ಮ ಸ್ಯಾತ್**
**ಸಾ ಪೂಜಾ ನಿಷ್ಫಲಾ ಭವೇತ್ ॥ 9–39**

ಶಿವಪೂಜೆ (ಇಷ್ಟಲಿಂಗ ಪೂಜೆ)ಯಲ್ಲಿ ತತ್ಪರನಾದವನು ತನ್ನ ಪೂರ್ವಕರ್ಮಗಳನ್ನು ವಿಸರ್ಜಿಸಬೇಕು. ಒಂದು ವೇಳೆ ಪೂರ್ವಕರ್ಮಗಳನ್ನೇ ಮಾಡುತ್ತಿದ್ದರೆ ಆ ಶಿವಪೂಜೆಯು ನಿಷ್ಫಲವಾಗುವುದು.

**ಉತ್ತಮಾಂ ಗತಿಮಾಶ್ರಿತ್ಯ**
**ನೀಚಾಂ ವೃತ್ತಿಂ ಸಮಾಶ್ರಿತಃ ।**
**ಆರೂಢಪತಿತೋ ಜ್ಞೇಯಃ**
**ಸರ್ವಕರ್ಮಬಹಿಷ್ಕೃತಃ ॥ 9–40**

(ಶಿವಪೂಜಾರೂಪವಾದ) ಉನ್ನತವಾದ ಮಾರ್ಗವನ್ನು ಆಶ್ರಯಿಸಿದ ಮೇಲೆ ಕೆಳಮಟ್ಟದ ಕರ್ಮಗಳನ್ನು ಆಚರಿಸತೊಡಗಿದರೆ ಅವನು ಸರ್ವಕರ್ಮ ಬಹಿಷ್ಕೃತನೂ (ಎಲ್ಲ ಕರ್ಮಗಳನ್ನು ಮಾಡಲು ಅಯೋಗ್ಯನು) ಮತ್ತು ಆರೂಢಪತಿತನೆಂಬುದಾಗಿ ತಿಳಿಯಬೇಕು.

**ಪಂಚಾಕ್ಷರೋಪದೇಶೀ ಚ**

**ನರಸ್ತುತಿಕರೋ ಯದಿ**
**ಸೋಽಲಿಂಗೀ ಸ ದುರಾಚಾರೀ**
**ಕುಕವಿಃ ಸ ತು ವಿಶ್ರುತಃ ॥ 9-41**

(ಸದ್ಗುರುವಿನಿಂದ) ಪಂಚಾಕ್ಷರ ಮಹಾಮಂತ್ರದ ಉಪದೇಶವನ್ನು ಪಡೆದವನು ಒಂದು ವೇಳೆ ಸಾಮಾನ್ಯ ಮನುಷ್ಯರ ಸ್ತುತಿಯನ್ನು ಮಾಡಿದರೆ ಅವನು ಅಲಿಂಗಿಯೆಂತಲೂ, ದುರಾಚಾರಿಯೆಂತಲೂ, ಕುಕವಿಯೆಂತಲೂ ಕರೆಯಲ್ಪಡುತ್ತಾನೆ.

**ಚರ್ಮಪಾತ್ರೇ ಜಲಂ ತೈಲಮ್**
**ನ ಗ್ರಾಹ್ಯಂ ಭಕ್ತಿತತ್ಪರೈಃ ।**
**ಗೃಹ್ಯತೇ ಯದಿ ಭಕ್ತೇನ**
**ರೌರವಂ ನರಕಂ ವ್ರಜೇತ್ ॥ 9-42**

ಶಿವಭಕ್ತಿಯಲ್ಲಿ ತತ್ಪರರಾದವರು ಚರ್ಮಪಾತ್ರೆಗಳಲ್ಲಿ ನೀರು, ಎಣ್ಣೆ ಮುಂತಾದವುಗಳನ್ನು ತೆಗೆದುಕೊಳ್ಳಬಾರದು. ಒಂದು ವೇಳೆ ಶಿವಭಕ್ತನು ಹಾಗೆ ತೆಗೆದುಕೊಂಡರೆ ರೌರವ ನರಕವನ್ನು ಹೊಂದುವನು.

**ನ ತಸ್ಯ ಸೂತಕಂ ಕಿಂಚಿತ್-**
**ಪ್ರಾಣಲಿಂಗಾಂಗಸಂಗಿನಃ ।**
**ಜನ್ಮನೋತ್ಥಂ ಮೃತೋತ್ಥಂ ಚ**
**ವಿದ್ಯತೇ ಪರಮಾರ್ಥತಃ ॥ 9-43**

ತನ್ನಂಗದಲ್ಲಿನ ಪ್ರಾಣಲಿಂಗವನ್ನು ಸಂಬಂಧಮಾಡಿಕೊಂಡ ಪ್ರಾಣಲಿಂಗಿ ಯಾದ ಶಿವಭಕ್ತನಿಗೆ ಜನನ ಸಂಬಂಧಿಯಾದ ಮತ್ತು ಮರಣಸಂಬಂಧಿಯಾದ ಕಿಂಚಿತ್ (ಸ್ವಲ್ಪ) ಸೂತಕವೂ ಪರಮಾರ್ಥ (ನಿಜ)ವಾಗಿ
ಇರುವುದಿಲ್ಲ.

**ಲಿಂಗಾರ್ಚನರತಾಯಾಶ್ಚ**
**ಋತೌ ನಾರ್ಯಾ ನ ಸೂತಕಮ್ ।**
**ತಥಾ ಪ್ರಸೂತಿಕಾಯಾಶ್ಚ**
**ಸೂತಕಂ ನೈವ ವಿದ್ಯತೇ ॥ 9-44**

ಲಿಂಗಾರ್ಚನೆಯಲ್ಲಿ ನಿರತರಾಗಿರುವ ವೀರಶೈವ ಸ್ತ್ರೀಯರಿಗೆ ಋತುಕಾಲದಲ್ಲಿ ಉಂಟಾದ ರಜಸ್ಸೂತಕವಾಗಲಿ ಮತ್ತು ಹೆರಿಗೆಯಿಂದುಂಟಾದ ಪ್ರಸೂತಿಕಾ ಸೂತಕವಾಗಲಿ (ಜನನ ಸೂತಕವಾಗಲಿ) ಇರುವುದಿಲ್ಲ.

**ಗೃಹೇ ಯಸ್ಮಿನ್ ಪ್ರಸೂತಾ ಸ್ತ್ರೀ**
**ಸೂತಕಂ ನಾತ್ರ ವಿದ್ಯತೇ ।**
**ಶಿವಪಾದಾಂಬುಸಂಸ್ಪರ್ಶಾತ್**
**ಸರ್ವಪಾಪಂ ಪ್ರಣಶ್ಯತಿ ॥ 9-45**

ಯಾವ ಮನೆಯಲ್ಲಿ ಹೆಣ್ಣುಮಗಳು ಪ್ರಸೂತಳಾಗಿರುತ್ತಾಳೆಯೋ (ಹೆರಿಗೆಯನ್ನು ಮಾಡಿಸಿಕೊಂಡಿರುವಳೋ) ಅಲ್ಲಿ ಸೂತಕವು ಇರುವುದಿಲ್ಲ. ಶಿವಜ್ಞಾನಿಗಳ (ಸದ್ಗುರುಗಳ) ಪಾದೋದಕದ ಸ್ಪರ್ಶದಿಂದ ಎಲ್ಲ ಪಾಪವು ನಾಶವಾಗುತ್ತದೆ.

**ಶಿವಸ್ಥಾನಾನಿ ತೀರ್ಥಾನಿ**
**ವಿಶಿಷ್ಟಾನಿ ಶಿವಾರ್ಚಕಃ ।**

**ಶಿವಯಾತ್ರೋತ್ಸವಂ ನಿತ್ಯಮ್**
**ಸೇವೇತ ಪರಯಾ ಮುದಾ ॥ 9–46**

ಶಿವಾರ್ಚಕನಾದ (ಇಷ್ಟಲಿಂಗಾರ್ಚಕನಾದ) ಶಿವಭಕ್ತನು ಶಿವಸ್ಥಾನಗಳಾದ (ಶಿವನಿವಾಸ ಕ್ಷೇತ್ರಗಳಾದ ಕಾಶಿ, ಕೇದಾರ ಮುಂತಾದ ಕ್ಷೇತ್ರಗಳ) ವಿಶಿಷ್ಟಗಳಾದ ಗಂಗಾ ಮುಂತಾದ ತೀರ್ಥಗಳಲ್ಲಿನ (ಸ್ನಾನಗಳನ್ನು ಮಾಡಿ) ಅಲ್ಲಿ ನಡೆಯುವ ಯಾತ್ರೋತ್ಸವಗಳಲ್ಲಿ ಪರಮ ಸಂತೋಷದಿಂದ ಸೇವೆಯನ್ನು ಮಾಡಬೇಕು.

**ಶಿವಕ್ಷೇತ್ರೋತ್ಸವಮಹಾ–**
**ಯಾತ್ರಾದರ್ಶನಕಾಂಕ್ಷಿಣಾಮ್ ।**
**ಮಾರ್ಗೇಽನ್ನಪಾನದಾನಂ ಚ**
**ಕುರ್ಯಾನ್ಮಾಹೇಶ್ವರೋ ಜನಃ ॥ 9–47**

ಶಿವಕ್ಷೇತ್ರ ದರ್ಶನಕ್ಕಾಗಿ ಹೊರಟಿರುವ ಮಹಾಯಾತ್ರಿಗಳಿಗೆ ಮಾರ್ಗದಲ್ಲಿ ಮಾಹೇಶ್ವರನು ಅನ್ನ ನೀರುಗಳ ದಾನವನ್ನು ಮಾಡಬೇಕು.

**ನಾನ್ನತೋಯಸಮಂ ದಾನಮ್**
**ನ ಚಾಹಿಂಸಾಪರಂ ತಪಃ ।**
**ತಸ್ಮಾನ್ಮಾಹೇಶ್ವರೋ ನಿತ್ಯಮ್**
**ಅನ್ನತೋಯಪ್ರದೋ ಭವೇತ್ ॥ 9–48**

ಅಹಿಂಸೆಗೆ ಸಮನಾದ ತಪವು ಹೇಗೆ ಬೇರೆ ಇಲ್ಲವೋ ಹಾಗೆ ಅನ್ನ ನೀರುಗಳ ದಾನಕ್ಕೆ ಸಮವಾದ ದಾನವು ಬೇರೊಂದಿರುವುದಿಲ್ಲ. ಆದ್ದರಿಂದ ಮಾಹೇಶ್ವರನು ಪ್ರತಿದಿನವೂ ಅನ್ನ ನೀರುಗಳನ್ನು ದಾನ ಮಾಡಬೇಕು.

**ಸ್ವಮಾರ್ಗಾಚಾರವರ್ತಿಭ್ಯಃ**
**ಸ್ವಜಾತಿಭ್ಯಃ ಸದಾ ವ್ರತೀ ।**
**ದದ್ಯಾತ್ ತೇಭ್ಯಃ ಸಮಾದದ್ಯಾತ್**
**ಕನ್ಯಾಂ ಕುಲಸಮುದ್ಭವಾಮ್ ॥ 9–49**

ಶಿವಾಚಾರವ್ರತಸಂಪನ್ನನಾದ ಶಿವಭಕ್ತನು ತನ್ನ ಮಾರ್ಗಾಚಾರದಲ್ಲಿ ವರ್ತಿಸುತ್ತಿರುವ ಮತ್ತು ಸ್ವಜಾತೀಯರಿಗೆ ತನ್ನ ಕುಲದಲ್ಲಿ ಹುಟ್ಟಿದ ಕನ್ಯೆಯನ್ನು ಕೊಡಬೇಕು ಮತ್ತು ಅವರಿಂದ ಅಂತಹುದೇ ಕನ್ಯೆಯನ್ನು ತಾನೂ ತೆಗೆದುಕೊಳ್ಳಬೇಕು.

**ಏವಮಾಚಾರಸಂಯುಕ್ತೋ**
**ವೀರಶೈವೋ ಮಹಾವ್ರತೀ ।**
**ಪೂಜಯೇತ್ ಪರಯಾ ಭಕ್ತ್ಯಾ**
**ಗುರುಂಲಿಂಗಂ ಚ ಸಂತತಮ್ ॥ 9–50**

ಹೀಗೆ ಆಚಾರಯುಕ್ತನೂ, ಮಹಾವ್ರತಿಯೂ ಆದ ವೀರಶೈವನು ಪರಮ ಭಕ್ತಿಯಿಂದ ಯಾವಾಗಲೂ ಗುರುವನ್ನು ಮತ್ತು ಲಿಂಗವನ್ನು ಪೂಜೆಮಾಡಬೇಕು.

***ಇತಿ ಭಕ್ತಮಾರ್ಗಕ್ರಿಯಾಸ್ಥಲಂ*** *ಇಲ್ಲಿಗೆ ಭಕ್ತಮಾರ್ಗಕ್ರಿಯಾಸ್ಥಲವು ಮುಗಿಯಿತು*

## 10. ಅಥ ಉಭಯಸ್ಥಲಮ್

ಈಗ ಉಭಯಸ್ಥಲವು

**(7 ಶ್ಲೋಕಗಳು)**

**ಗುರೋರಭ್ಯರ್ಚನೇನಾಪಿ**
**ಸಾಕ್ಷಾದಭ್ಯರ್ಚಿತಃ ಶಿವಃ ।**
**ತಯೋರ್ನಾಸ್ತಿ ಭಿದಾ ಕಿಂಚಿತ್**
**ಏಕತ್ವಾತ್ ತತ್ತ್ವರೂಪತಃ ॥ 9–51**

ಗುರುವನ್ನು ಅರ್ಚಿಸಿದರೆ ಸಾಕ್ಷಾತ್ ಶಿವನೇ ಅರ್ಚಿಸಲ್ಪಡುತ್ತಾನೆ. ಅವರಿಬ್ಬರಲ್ಲಿ ತಾತ್ವಿಕವಾಗಿ ಏಕತ್ವವಿರುವುದರಿಂದ ಅವರಲ್ಲಿ ಭೇದವು ಕಿಂಚಿತ್ತೂ ಇರುವುದಿಲ್ಲ.

**ಯಥಾ ದೇವೇ ಜಗನ್ನಾಥೇ**
**ಸರ್ವಾನುಗ್ರಹಕಾರಕೇ ।**
**ತಥಾ ಗುರುವರೇ ಕುರ್ಯಾತ್**
**ಉಪಚಾರಾನ್ ದಿನೇ ದಿನೇ ॥ 9–52**

ಸರ್ವರ ಮೇಲೆ ಅನುಗ್ರಹವನ್ನು ಮಾಡುತ್ತಿರುವ ಜಗನ್ನಾಥನಾದ ದೇವನಲ್ಲಿ ಪ್ರತಿದಿನವೂ ಶಿವಭಕ್ತನು ಹೇಗೆ ಉಪಚಾರಗಳನ್ನು ಮಾಡುತ್ತಾನೆಯೋ ಅದರಂತೆ ಅವನು ಗುರುವಿಗೂ ಮಾಡಬೇಕು.

**ಅಪ್ರತ್ಯಕ್ಷೋ ಮಹಾದೇವಃ**
**ಸರ್ವೇಷಾಮಾತ್ಮಮಾಯಯಾ ।**
**ಪ್ರತ್ಯಕ್ಷೋ ಗುರುರೂಪೇಣ**
**ವರ್ತತೇ ಭಕ್ತಿಸಿದ್ಧಯೇ ॥ 9–53**

ತನ್ನ ಮಾಯೆಯ ಕಾರಣದಿಂದ ಸರ್ವರಿಗೂ ಅಪ್ರತ್ಯಕ್ಷನಾದ ಮಹಾದೇವನು (ಪರಮೇಶ್ವರನು) ಭಕ್ತರ ಭಕ್ತಿಸಿದ್ಧಿಗಾಗಿ ಗುರುರೂಪದಿಂದ ಪ್ರತ್ಯಕ್ಷವಾಗಿ ಇರುತ್ತಾನೆ.

**ಶಿವಜ್ಞಾನಂ ಮಹಾಘೋರ–**
**ಸಂಸಾರಾರ್ಣವತಾರಕಮ್ ।**
**ದೀಯತೇ ಯೇನ ಸ ಗುರುಃ**
**ಕಸ್ಯ ವಂದ್ಯೋ ನ ಜಾಯತೇ ॥ 9–54**

ಮಹಾಭಯಾನಕವಾದ ಸಂಸಾರ ಸಾಗರವನ್ನು ದಾಟಿಸುವ ಶಿವಜ್ಞಾನವನ್ನು ಯಾರು ಪಡೆದುಕೊಂಡಿರುತ್ತಾರೆಯೋ ಮತ್ತು ಆ ಜ್ಞಾನವನ್ನು ಕೊಡುತ್ತಾನೆಯೋ ಅಂತಹ ಗುರುವು ಯಾರಿಗೆ ತಾನೇ ವಂದ್ಯ (ಪೂಜ್ಯ)ನಾಗುವುದಿಲ್ಲ? (ಅವನು ಎಲ್ಲರಿಗೂ ವಂದ್ಯನಾಗಿರುತ್ತಾನೆ).

**ಯತ್ಕಟಾಕ್ಷಕಲಾಮಾತ್ರಾತ್**
**ಪರಮಾನಂದಲಕ್ಷಣಮ್ ।**
**ಲಭ್ಯತೇ ಶಿವರೂಪತ್ವಮ್**
**ಸ ಗುರುಃ ಕೇನ ನಾರ್ಚಿತಃ ॥ 9–55**

ಕೇವಲ ಯಾರ ಕೃಪಾಕಟಾಕ್ಷ ಮಾತ್ರದಿಂದಲೇ ಪರಮಾನಂದ ಲಕ್ಷಣ (ಸ್ವರೂಪ)ವಾದ ಶಿವಸ್ವರೂಪವು ಲಭ್ಯ(ಪ್ರಾಪ್ತ)ವಾಗುತ್ತದೆಯೋ ಅಂತಹ ಗುರುವು ಯಾರಿಂದ ತಾನೇ ಅರ್ಚಿಸಲ್ಪಡುವುದಿಲ್ಲ (ಸರ್ವರಿಂದಲೂ ಅರ್ಚಿಸಲ್ಪಡುತ್ತಾನೆ).

**ಹಿತಮೇವ ಚರೇನ್ನಿತ್ಯಮ್**
**ಶರೀರೇಣ ಧನೇನ ಚ ।**

**ಆಚಾರ್ಯಸ್ಯೋಪಶಾಂತಸ್ಯ**
**ಶಿವಜ್ಞಾನಮಹಾನಿಧೇಃ ॥ 9–56**

ಶಿವಜ್ಞಾನದ ಮಹಾನಿಕ್ಷೇಪನೂ, ಶಾಂತನೂ ಆಗಿರುವ ಆಚಾರ್ಯನಿಗೆ (ಗುರುವಿಗೆ) ಶಿಷ್ಯನಾದವನು ತನ್ನ ಶರೀರ ಮತ್ತು ಧನದಿಂದ ನಿತ್ಯವೂ ಹಿತವನ್ನೇ ಉಂಟುಮಾಡಬೇಕು.

**ಗುರೋರಾಜ್ಞಾಂ ನ ಲಂಘೇತ**
**ಸಿದ್ಧಿಕಾಮೀ ಮಹಾಮತಿಃ ।**
**ತದಾಜ್ಞಾಲಂಘನೇನಾಪಿ**
**ಶಿವಾಜ್ಞಾಚ್ಛೇದಕೋ ಭವೇತ್ ॥ 9–57**

ಮೋಕ್ಷದ ಸಿದ್ಧಿಯನ್ನು ಅಪೇಕ್ಷಿಸುವ ಮಹಾಮತಿಯಾದ (ವಿವೇಕ ಸಂಪನ್ನನಾದ) ಶಿಷ್ಯನು ಗುರುವಿನ ಆಜ್ಞೆಯನ್ನು ಉಲ್ಲಂಘಿಸಕೂಡದು. (ಒಂದು ವೇಳೆ) ಗುರುವಿನ ಆಜ್ಞೆಯನ್ನು ಉಲ್ಲಂಘಿಸಿದರೆ ಶಿವನ ಆಜ್ಞೆಯನ್ನು ಉಲ್ಲಂಘಿಸಿದಂತಾಗುತ್ತದೆ.

***ಇತಿ ಉಭಯಸ್ಥಲಂ*** *ಇಲ್ಲಿಗೆ ಉಭಯಸ್ಥಲವು ಮುಗಿಯಿತು*

## 11. ಅಥ ತ್ರಿವಿಧಸಂಪತ್ತಿಸ್ಥಲಮ್

ಈಗ ತ್ರಿವಿಧಸಂಪತ್ತಿಸ್ಥಲವು

**(9 ಶ್ಲೋಕಗಳು)**

**ಯಥಾ ಗುರೌ ಯಥಾ ಲಿಂಗೇ**
**ಭಕ್ತಿಮಾನ್ ಪರಿವರ್ತತೇ ।**
**ಜಂಗಮೇ ಚ ತಥಾ ನಿತ್ಯಮ್**
**ಭಕ್ತಿಂ ಕುರ್ಯಾದ್ ವಿಚಕ್ಷಣಃ ॥ 9–58**

ವಿಚಕ್ಷಣನಾದ (ವಿವೇಕ ಸಂಪನ್ನನಾದ ಶಿವಭಕ್ತನು) ಗುರುವಿನಲ್ಲಿ ಹಾಗೂ ತನ್ನ ಲಿಂಗ (ಇಷ್ಟಲಿಂಗ)ದಲ್ಲಿ ಯಾವ ರೀತಿಯಾಗಿ ಭಕ್ತಿಸಂಪನ್ನನಾಗಿರುತ್ತಾನೆಯೋ ಅದರಂತೆ ಪ್ರತಿದಿನವೂ ಜಂಗಮನ ಮೇಲೆಯೂ ಭಕ್ತಿಯನ್ನು ಮಾಡಬೇಕು.

**ಏಕ ಏವ ಶಿವಃ ಸಾಕ್ಷಾತ್**
**ಸರ್ವಾನುಗ್ರಹಕಾರಕಃ ।**
**ಗುರುಜಂಗಮಲಿಂಗಾತ್ಮಾ**
**ವರ್ತತೇ ಭುಕ್ತಿಮುಕ್ತಿದಃ ॥ 9–59**

ಒಬ್ಬನೇ ಆದ ಶಿವನು ಸ್ವತಃ ಗುರು ಜಂಗಮ ಲಿಂಗವೆಂಬ ತ್ರಿವಿಧ ಸ್ವರೂಪವನ್ನು ತಾಳಿ ಭಕ್ತರಿಗೆ ಭುಕ್ತಿಮುಕ್ತಿಗಳನ್ನು ಅನುಗ್ರಹಿಸುತ್ತಾನೆ.

**ಲಿಂಗಂ ಚ ದ್ವಿವಿಧಂ ಪ್ರೋಕ್ತಮ್**
**ಜಂಗಮಾಜಂಗಮಾತ್ಮನಾ ।**
**ಅಜಂಗಮೇ ಯಥಾ ಭಕ್ತಿಃ**
**ಜಂಗಮೇ ಚ ತಥಾ ಸ್ಮೃತಾ ॥ 9–60**

ಲಿಂಗವು ಜಂಗಮಲಿಂಗವೆಂತಲೂ, ಅಜಂಗಮಲಿಂಗವೆಂತಲೂ ಎರಡು ವಿಧವಾಗಿರುತ್ತದೆ. ಅಜಂಗಮಲಿಂಗದಲ್ಲಿ (ಸ್ಥಿರಲಿಂಗದಲ್ಲಿ)ಯಾವ ರೀತಿಯಾಗಿ ಭಕ್ತಿಯು ಮಾಡಲ್ಪಡುತ್ತದೆಯೋ ಅದರಂತೆ ಜಂಗಮಲಿಂಗದಲ್ಲಿಯೂ, ಭಕ್ತಿಯನ್ನು ಮಾಡಬೇಕು.

**ಅಜಂಗಮಂ ತು ಯಲ್ಲಿಂಗಮ್**
**ಮೃಚ್ಛಿಲಾದಿವಿನಿರ್ಮಿತಮ್ ।**
**ತದ್ವರಂ ಜಂಗಮಂ ಲಿಂಗಮ್**
**ಶಿವಯೋಗೀತಿ ವಿಶ್ರುತಮ್ ॥ 9–61**

ಮೃತ್ (ಮಣ್ಣು), ಶಿಲಾ (ಕಲ್ಲು) ಮುಂತಾದವುಗಳಿಂದ ನಿರ್ಮಿಸಲ್ಪಟ್ಟ ಯಾವ ಲಿಂಗವಿದೆಯೋ ಅದು ಅಜಂಗಮ ಲಿಂಗವು. ಅದಕ್ಕಿಂತಲೂ ಶ್ರೇಷ್ಠವಾದದ್ದು ಜಂಗಮಲಿಂಗವು. ಅದುವೇ ಶಿವಯೋಗಿಯೆಂದು ಸುಪ್ರಸಿದ್ಧವಾಗಿರುತ್ತದೆ.

**ಅಚರೇ ಮಂತ್ರಸಂಸ್ಕಾರಾತ್**
**ಲಿಂಗೇ ವಸತಿ ಶಂಕರಃ ।**
**ಸದಾಕಾಲಂ ವಸತ್ಯೇವ**
**ಚರಲಿಂಗೇ ಮಹೇಶ್ವರಃ ॥ 9–62**

ಅಚರಲಿಂಗದಲ್ಲಿ (ಅಜಂಗಮ ಲಿಂಗದಲ್ಲಿ) ಮಂತ್ರಸಂಸ್ಕಾರದಿಂದ ಶಂಕರನು ಅಲ್ಲಿ ವಾಸವಾಗಿರುತ್ತಾನೆ. ಇನ್ನು ಚರಲಿಂಗದಲ್ಲಿ (ಶಿವಯೋಗಿಯಲ್ಲಿ) ಮಹೇಶ್ವರನು ಸದಾಕಾಲದಲ್ಲಿಯೂ (ಯಾವಾಗಲೂ) ವಾಸವಾಗಿರುತ್ತಾನೆ.

**ಶಿವಯೋಗಿನಿ ಯದ್‌ದತ್ತಮ್**
**ತದಕ್ಷಯಫಲಂ ಭವೇತ್ ।**
**ತಸ್ಮಾತ್ ಸರ್ವಪ್ರಯತ್ನೇನ**
**ತಸ್ಮೈ ದೇಯಂ ಮಹಾತ್ಮನೇ ॥ 9–63**

ಶಿವಯೋಗಿಗೆ ಕೊಡಲ್ಪಟ್ಟ ದಾನದಿಂದ ಅಕ್ಷಯವಾದ ಫಲವು ಪ್ರಾಪ್ತಿಯಾಗುತ್ತದೆ. ಆದ್ದರಿಂದ ಸರ್ವಪ್ರಯತ್ನವನ್ನು ಮಾಡಿ ಮಹಿಮಾಶಾಲಿಯಾದ (ಮಹಾತ್ಮನಾದ) ಆ ಶಿವಯೋಗಿಗೆ ದಾನವನ್ನು ಮಾಡಬೇಕು.

**ಯತ್ಫಲಂ ಲಭತೇ ಜಂತುಃ**
**ಪೂಜಯಾ ಶಿವಯೋಗಿನಃ ।**
**ತದಕ್ಷಯಮಿತಿ ಪ್ರೋಕ್ತಮ್**
**ಸಕಲಾಗಮಪಾರಗೈಃ ॥ 9–64**

ಶಿವಯೋಗಿಗಳ ಪೂಜೆಯಿಂದ ಜೀವಿಗೆ ಯಾವ ಫಲವು ಲಭಿಸುತ್ತದೆಯೋ ಅದು ಅಕ್ಷಯವೆಂದು ಸಕಲಾಗಮ ಪಾರಂಗತರು (ಆಗಮತಜ್ಞರು) ಹೇಳುತ್ತಾರೆ.

**ನಾವಮನ್ಯೇತ ಕುತ್ರಾಪಿ**
**ಶಿವಯೋಗಿನಮಾಗತಮ್ ।**
**ಅವಮಾನಾದ್ಭವೇತ್ತಸ್ಯ**
**ದುರ್ಗತಿಶ್ಚ ನ ಸಂಶಯಃ ॥ 9–65**

(ತನ್ನ ಮನೆಗೆ) ಬಂದಂಥ ಶಿವಯೋಗಿಯನ್ನು ಎಲ್ಲಿಯೂ (ಅಂತರಂಗ ಬಹಿರಂಗಗಳಲ್ಲಿ) ಅವಮಾನಗೊಳಿಸಬಾರದು. ಅವನ ಅವಮಾನವನ್ನು ಮಾಡಿದರೆ ದುರ್ಗತಿಯಾಗುವುದರಲ್ಲಿ ಸಂದೇಹವಿಲ್ಲ.

**ಶಿವಯೋಗೀ ಶಿವಃ ಸಾಕ್ಷಾತ್**
**ಇತಿ ಕೈಂಕರ್ಯ ಭಕ್ತಿತಃ ।**
**ಪೂಜಯೇದಾದರೇಣೈವ**
**ಯಥಾ ಲಿಂಗಂ ಯಥಾ ಗುರುಃ ॥ 9–66**

ಶಿವಭಕ್ತನು ಲಿಂಗವನ್ನು ಮತ್ತು ಗುರುವನ್ನು ಯಾವ ಪ್ರಕಾರವಾಗಿ ಆದರದಿಂದ ಪೂಜಿಸುತ್ತಾನೆಯೋ ಅದರಂತೆಯೇ ಶಿವಯೋಗಿಯನ್ನೂ ಸಹ ಸಾಕ್ಷಾತ್ ಶಿವನೆಂದೇ ಭಾವಿಸಿ ಆತನನ್ನು ಕಿಂಕರಭಕ್ತಿಯಿಂದ ಹಾಗೂ ಆದರದಿಂದ ಪೂಜಿಸಬೇಕು.

***ಇತಿ ತ್ರಿವಿಧಸಂಪತ್ತಿಸ್ಥಲಂ*** *ಇಲ್ಲಿಗೆ ತ್ರಿವಿಧಸಂಪತ್ತಿಸ್ಥಲವು ಮುಗಿಯಿತು*

## 12. ಅಥ ಪ್ರಸಾದಸ್ವೀಕಾರಸ್ಥಲಮ್
ಈಗ ಪ್ರಸಾದಸ್ವೀಕಾರ ಸ್ಥಲವು
**ಚತುರ್ವಿಧಸಾರಾಯಸ್ಥಲಮ್**
(ಚತುರ್ವಿಧಸಾರಾಯಸ್ಥಲವು)
**(12 ಶ್ಲೋಕಗಳು)**

**ಪಾದೋದಕಂ ಯಥಾ ಭಕ್ತ್ಯಾ**
**ಸ್ವೀಕರೋತಿ ಮಹೇಶಿತುಃ ।**
**ತಥಾ ಶಿವಾತ್ಮನೋರ್ನಿತ್ಯಮ್**
**ಗುರುಜಂಗಮಯೋರಪಿ ॥ 9–67**

ಶಿವಭಕ್ತನಾದವನು ಮಹೇಶನ (ಇಷ್ಟಲಿಂಗದ) ಪಾದೋದಕವನ್ನು ಹೇಗೆ ಭಕ್ತಿಯಿಂದ ಸ್ವೀಕರಿಸುತ್ತಾನೆಯೋ, ಹಾಗೆಯೇ ಶಿವಾತ್ಮ ಸ್ವರೂಪರಾದ ಗುರು ಜಂಗಮರ ಪಾದೋದಕವನ್ನೂ ಸಹ ನಿತ್ಯವೂ ಸ್ವೀಕರಿಸಬೇಕು.

**ಸರ್ವಮಂಗಲಮಾಂಗಲ್ಯಮ್**
**ಸರ್ವಪಾವನಪಾವನಮ್ ।**
**ಸರ್ವಸಿದ್ಧಿಕರಂ ಪುಂಸಾಮ್**
**ಶಂಭೋಃ ಪಾದಾಂಬುಧಾರಣಮ್ ॥ 9–68**

ಶಂಭುವಿನ (ಇಷ್ಟಲಿಂಗದ) ಪಾದೋದಕವನ್ನು ಧರಿಸುವುದು (ಸ್ವೀಕರಿಸುವುದು) ಎಲ್ಲ ಮಂಗಳಗಳಿಗೆ ಮಂಗಲಕರವು, ಎಲ್ಲ ಪಾವನಗಳಿಗೆ
ಪಾವನವೂ (ಅತಿ ಪವಿತ್ರವೂ) ಮತ್ತು ಪುರುಷರಿಗೆ (ಸಾಧಕರಿಗೆ) ಸರ್ವಸಿದ್ಧಿಯನ್ನು ಕೊಡುವಂತಹುದೂ ಆಗಿದೆ.

**ಶಿರಸಾ ಧಾರಯೇದ್ಯಸ್ತು**
**ಪತ್ರಂ ಪುಷ್ಪಂ ಶಿವಾರ್ಪಿತಮ್ ।**
**ಪ್ರತಿಕ್ಷಣಂ ಭವೇತ್ ತಸ್ಯ**
**ಪೌಂಡರೀಕಕ್ರಿಯಾಫಲಮ್ ॥ 9–69**

ಶಿವನಿಗೆ ಸಮರ್ಪಿತವಾದ ಪತ್ರ ಪುಷ್ಪಾದಿಗಳನ್ನು ಯಾರು ತನ್ನ ಶಿರದ ಮೇಲೆ ಧರಿಸಿಕೊಳ್ಳುವರೋ (ಧನ್ಯತಾಭಾವದಿಂದ ಸ್ಪರ್ಶಿಸಿಕೊಳ್ಳುವರೋ) ಅಂತಹವರು ಪ್ರತಿಕ್ಷಣದಲ್ಲಿಯೂ ಪೌಂಡರೀಕಯಾಗದ ಫಲವನ್ನು ಪಡೆದುಕೊಳ್ಳುತ್ತಾರೆ.

**ಭುಂಜೀಯಾದ್ ರುದ್ರಭುಕ್ತಾನ್ನಮ್**
**ರುದ್ರಪೀತಂ ಜಲಂ ಪಿಬೇತ್ ।**
**ರುದ್ರಾಘ್ರಾತಂ ಸದಾ ಜಿಘ್ರೇತ್**
**ಇತಿ ಜಾಬಾಲಿಕೀ ಶ್ರುತಿಃ ॥ 9–70**

ರುದ್ರ ಭುಕ್ತವಾದ (ರುದ್ರನಿಗೆ ಎಡೆಮಾಡಿದ) ಅನ್ನವನ್ನು ಭುಂಜಿಸಬೇಕು. ರುದ್ರಪೀತವಾದ (ರುದ್ರನಿಗೆ ಅರ್ಪಿಸಿದ) ನೀರನ್ನು ಕುಡಿಯಬೇಕು. ರುದ್ರನಿಗೆ ಅರ್ಪಿಸಿದ ಪುಷ್ಪಾದಿ ದ್ರವ್ಯಗಳನ್ನು ಮೂಸಬೇಕು ಎಂಬುದಾಗಿ ಜಾಬಾಲಿಕೀ ಶ್ರುತಿಯಲ್ಲಿ ಪ್ರತಿಪಾದಿಸಲಾಗಿದೆ.

**ಅರ್ಪಯಿತ್ವಾ ನಿಜೇ ಲಿಂಗೇ**
**ಪತ್ರಂ ಪುಷ್ಪಂ ಫಲಂ ಜಲಮ್ ।**
**ಅನ್ನಾದ್ಯಂ ಸರ್ವಭೋಜ್ಯಂ ಚ**
**ಸ್ವೀಕುರ್ಯಾದ್ ಭಕ್ತಿಮಾನ್ನರಃ ॥ 9–71**

ಭಕ್ತಿಸಂಪನ್ನನಾದ ಮನುಷ್ಯನು ಪತ್ರೆ, ಪುಷ್ಪ, ಫಲ, ಜಲ ಮತ್ತು ಅನ್ನ ಮುಂತಾದ ಎಲ್ಲ ಭೋಜ್ಯ ಪದಾರ್ಥಗಳನ್ನು ನಿಜಲಿಂಗಕ್ಕೆ (ತನ್ನ ಇಷ್ಟಲಿಂಗಕ್ಕೆ) ಅರ್ಪಿಸಿ ಸ್ವೀಕರಿಸಬೇಕು (ಭುಂಜಿಸಬೇಕು).

**ಗುರುತ್ವಾತ್ ಸರ್ವಭೂತಾನಾಮ್**
**ಶಂಭೋರಮಿತತೇಜಸಃ ।**
**ತಸ್ಮೈ ನಿವೇದಿತಂ ಸರ್ವಮ್**
**ಸ್ವೀಕಾರ್ಯಂ ತತ್ಪರಾಯಣೈಃ ॥ 9–72**

ಅಪರಿಮಿತ ತೇಜಸ್ಸುಳ್ಳ ಶಂಭುವು ಸರ್ವಪ್ರಾಣಿಗಳಿಗೆ ಗುರುವಾಗಿರುತ್ತಾನೆ (ಜ್ಞಾನ ಕೊಟ್ಟವನಾಗಿರುತ್ತಾನೆ). ಆದ್ದರಿಂದ ತತ್ಪರಾಯಣರಾದವನು (ಅವನಲ್ಲಿ ಶ್ರದ್ಧೆಯುಳ್ಳವರು) ಅವನಿಗೆ ನಿವೇದಿಸಿದ (ನೈವೇದ್ಯವನ್ನು ಮಾಡಿದ) ಸರ್ವವನ್ನು ಸ್ವೀಕರಿಸಬೇಕು.

**ಯೇ ಲಿಂಗಧಾರಿಣೋ ಲೋಕೇ**
**ಯೇ ಶಿವೈಕಪರಾಯಣಾಃ ।**
**ತೇಷಾಂ ತು ಶಿವನಿರ್ಮಾಲ್ಯಮ್**
**ಉಚಿತಂ ನಾನ್ಯಜಂತುಷು ॥ 9–73**

ಈ ಲೋಕದಲ್ಲಿ ಯಾರು ಇಷ್ಟಲಿಂಗಧಾರಿಗಳೋ ಮತ್ತು ಯಾರು ಶಿವನೊಬ್ಬನಲ್ಲಿಯೇ ಪರಾಯಣರೋ (ಭಕ್ತಿಸಂಪನ್ನರೋ) ಅವರಿಗೆ ಮಾತ್ರ ಶಿವನಿರ್ಮಾಲ್ಯವು ಉಚಿತವಾದುದು (ಸೇವಿಸಲು ಯೋಗ್ಯವಾದುದು). ಆದರೆ ಬೇರೆ ಜೀವಿಗಳಿಗೆ (ಶಿವಭಕ್ತರಲ್ಲದವರುಗಳಿಗೆ) ಅದು ಉಚಿತವಾದುದಲ್ಲ.

**ಅನ್ನಜಾತೇ ತು ಭಕ್ತೇನ**
**ಭುಜ್ಯಮಾನೇ ಶಿವಾರ್ಪಿತೇ ।**
**ಸಿಕ್ಥೇ ಸಿಕ್ಥೇಽಶ್ವಮೇಧಸ್ಯ**
**ಯತ್ಫಲಂ ತದವಾಪ್ಯತೇ ॥ 9–74**

ಶಿವಭಕ್ತನಾದವನು ಶಿವನಿಗೆ ಅರ್ಪಿತವಾದ ಅನ್ನಾದಿಗಳನ್ನು ಭೋಜಿಸಿದ್ದೇ ಆದರೆ ತುತ್ತು ತುತ್ತಿಗೆ ಅವನಿಗೆ ಒಂದೊಂದು ಅಶ್ವಮೇಧಯಜ್ಞದ ಫಲವು ಪ್ರಾಪ್ತಿಯಾಗುತ್ತದೆ.

**ನಿರ್ಮಾಲ್ಯಂ ನಿರ್ಮಲಂ ಶುದ್ಧಮ್**
**ಶಿವೇನ ಸ್ವೀಕೃತಂ ಯತಃ ।**
**ನಿರ್ಮಲೈಸ್ತತ್ಪರೈರ್ಧಾರ್ಯಮ್**

**ನಾನ್ಯೈಃ ಪ್ರಾಕೃತಜಂತುಭಿಃ ॥ 9–75**

ಶಿವನಿಂದ ಸ್ವೀಕೃತವಾದ್ದರಿಂದ ನಿರ್ಮಾಲ್ಯವೂ ಶುದ್ಧವೂ ಆಗಿರುತ್ತದೆ. ಆದ್ದರಿಂದ ನಿರ್ಮಲವಾದ ಶಿವತತ್ಪರರಿಂದಲೇ (ಶಿವಭಕ್ತರಿಂದಲೇ) ಅದು ಧರಿಸಲ್ಪಡುತ್ತದೆ. ಪ್ರಾಕೃತ (ಸಾಮಾನ್ಯ) ಜೀವಿಗಳು ಅದನ್ನು ಧರಿಸಲು ಯೋಗ್ಯರಲ್ಲ.

**ಶಿವಭಕ್ತಿವಿಹೀನಾನಾಮ್**
**ಜಂತೂನಾಂ ಪಾಪಕರ್ಮಣಾಮ್ ।**
**ವಿಶುದ್ಧೇ ಶಿವನಿರ್ಮಾಲ್ಯೇ**
**ನಾಧಿಕಾರೋಽಸ್ತಿ ಕುತ್ರಚಿತ್ ॥ 9–76**

ಶಿವಭಕ್ತಿವಿಹೀನರಾದ (ಶಿವಭಕ್ತಿ ಇಲ್ಲದ) ಪಾಪಕರ್ಮಿಗಳಾದ ಜೀವಿಗಳಿಗೆ ವಿಶುದ್ಧವಾದ (ಪರಿಶುದ್ಧವಾದ) ಶಿವನಿರ್ಮಾಲ್ಯದಲ್ಲಿ ಎಲ್ಲಿಯೂ ಅಧಿಕಾರವಿರುವುದಿಲ್ಲ.

**ಶಿವಲಿಂಗಪ್ರಸಾದಸ್ಯ**
**ಸ್ವೀಕಾರಾದ್ಯತ್ಫಲಂ ಭವೇತ್ ।**
**ತಥಾ ಪ್ರಸಾದಸ್ವೀಕಾರಾದ್**
**ಗುರುಜಂಗಮಯೋರಪಿ ॥ 9–77**

ಶಿವಲಿಂಗದ (ಇಷ್ಟಲಿಂಗದ) ಪ್ರಸಾದವನ್ನು ಸ್ವೀಕರಿಸುವುದರಿಂದ ಯಾವ ಫಲವು ಉಂಟಾಗುವುದೋ (ದೊರೆಯುವುದೋ) ಅದೇ ಫಲವೇ ಗುರು ಮತ್ತು ಜಂಗಮ ಪ್ರಸಾದವನ್ನು ಸ್ವೀಕರಿಸುವುದರಿಂದ ಉಂಟಾಗುವುದು.

**ತಸ್ಮಾದ್ ಗುರುಂ ಮಹಾದೇವಮ್**
**ಶಿವಯೋಗಿನಮೇವ ಚ ।**
**ಪೂಜಯೇತ್ ತತ್ಪ್ರಸಾದಾನ್ನಮ್**
**ಭುಂಜೀಯಾತ್ ಪ್ರತಿವಾಸರಮ್ ॥ 9–78**

ಆದ್ದರಿಂದ ಗುರುವನ್ನು, ಮಹಾದೇವನನ್ನು (ಇಷ್ಟಲಿಂಗವನ್ನು) ಮತ್ತು ಶಿವಯೋಗಿಯನ್ನು ಪ್ರತಿದಿನವೂ ಪೂಜಿಸಬೇಕು ಹಾಗೂ ಅವರ ಪ್ರಸಾದಾನ್ನವನ್ನು ಭುಂಜಿಸಬೇಕು.

***ಇತಿ ಪ್ರಸಾದಸ್ವೀಕಾರಸ್ಥಲಂ***
*ಇಲ್ಲಿಗೆ ಪ್ರಸಾದಸ್ವೀಕಾರಸ್ಥಲವು ಮುಗಿಯಿತು*

## ದಾನತ್ರಯಸ್ಥಲಮ್
ದಾನತ್ರಯ ಸ್ಥಲವು
**(16 ಶ್ಲೋಕಗಳು)**

## 13. ಅಥ ಸೋಪಾಧಿದಾನಸ್ಥಲಮ್
ಈಗ ಸೋಪಾಧಿದಾನಸ್ಥಲವು
**(3 ಶ್ಲೋಕಗಳು)**

**ಶಿವಲಿಂಗೇ ಶಿವಾಚಾರ್ಯೇ**
**ಶಿವಯೋಗಿನಿ ಭಕ್ತಿಮಾನ್ ।**
**ದಾನಂ ಕುರ್ಯಾದ್ ಯಥಾಶಕ್ತಿ-**
**ತತ್ಪ್ರಸಾದಯುತಃ ಸದಾ ॥ 9-79**

ಭಕ್ತಿಸಂಪನ್ನನಾದ ಸಾಧಕನು ಶಿವಲಿಂಗದ, ಶಿವಾಚಾರ್ಯರ ಮತ್ತು ಶಿವಯೋಗಿಗಳ (ಗುರು, ಲಿಂಗ, ಜಂಗಮಗಳ) ಪ್ರಸಾದವನ್ನು ಪಡೆದುಕೊಂಡವನಾಗಿ ಯಾವಾಗಲೂ ತನ್ನ ಶಕ್ತ್ಯಾನುಸಾರವಾಗಿ ಅವರಿಗೆ ದಾನವನ್ನು ಮಾಡಬೇಕು.

**ದಾನಂ ಚ ತ್ರಿವಿಧಂ ಪ್ರೋಕ್ತಮ್**
**ಸೋಪಾಧಿನಿರುಪಾಧಿಕಮ್ ।**
**ಸಹಜಂ ಚೇತಿ ಸರ್ವೇಷಾಮ್**
**ಸರ್ವತಂತ್ರವಿಶಾರದೈಃ ॥ 9-80**

ಸರ್ವತಂತ್ರಗಳ ವಿಶಾರದರು (ಶಿವಾಗಮ ತಜ್ಞರು) ಎಲ್ಲ ಶಿವಭಕ್ತರಿಗಾಗಿ ಸೋಪಾಧಿಕ ದಾನ, ನಿರುಪಾಧಿಕ ದಾನ ಮತ್ತು ಸಹಜ ದಾನವೆಂಬುದಾಗಿ ಮೂರು ವಿಧವಾದ ದಾನಗಳನ್ನು ಹೇಳಿದ್ದಾರೆ.

**ಫಲಾಭಿಸಂಧಿಸಂಯುಕ್ತಮ್**
**ದಾನಂ ಯದ್ವಿಹಿತಂ ಭವೇತ್ ।**
**ತತ್ ಸೋಪಾಧಿಕಮಾಖ್ಯಾತಮ್**
**ಮುಮುಕ್ಷುಭಿರನಾದೃತಮ್ ॥ 9-81**

ಕೇವಲ ಫಲದ ಅಭಿಲಾಷೆಯಿಂದ ಕೂಡಿಕೊಂಡು ಮಾಡಿದ ದಾನವು ಸೋಪಾಧಿಕ ದಾನವೆಂದು ಹೇಳಲ್ಪಡುತ್ತದೆ. ಮುಮುಕ್ಷುಗಳು ಈ ರೀತಿಯ ದಾನವನ್ನು ಉಪೇಕ್ಷಿಸುತ್ತಾರೆ.

*ಇತಿ ಸೋಪಾಧಿದಾನಸ್ಥಲಂ ಪರಿಸಮಾಪ್ತಮ್*
*ಇಲ್ಲಿಗೆ ಸೋಪಾಧಿದಾನಸ್ಥಲವು ಮುಗಿಯಿತು*

## 14. ಅಥ ನಿರುಪಾಧಿದಾನಸ್ಥಲಮ್
ಈಗ ನಿರುಪಾಧಿದಾನಸ್ಥಲವು
**(1 ಶ್ಲೋಕ)**

**ಫಲಾಭಿಸಂಧಿನಿರ್ಮುಕ್ತಮ್**
**ಈಶ್ವರಾರ್ಪಿತಕಾಂಕ್ಷಿತಮ್ ।**
**ನಿರುಪಾಧಿಕಮಾಖ್ಯಾತಮ್**

**ದಾನಂ ದಾನವಿಶಾರದೈಃ ॥ 9–82**

ಯಾವುದೇ ಫಲದ ಅಭಿಲಾಷೆಯಿಲ್ಲದೆ, ಕೇವಲ ಈಶ್ವರಾರ್ಪಣ ಬುದ್ಧಿಯಿಂದ ಮಾಡಿದ ದಾನವು ನಿರುಪಾಧಿಕ ದಾನವೆಂದು ದಾನವಿಶಾರದರು ಹೇಳುತ್ತಾರೆ.

*ಇತಿ ನಿರುಪಾಧಿದಾನಸ್ಥಲಂ*
*ಇಲ್ಲಿಗೆ ನಿರುಪಾಧಿದಾನಸ್ಥಲವು ಮುಗಿಯಿತು*

## 15. ಅಥ ಸಹಜದಾನಸ್ಥಲಮ್
ಈಗ ಸಹಜದಾನಸ್ಥಲವು
**(12 ಶ್ಲೋಕಗಳು)**

**ಆದಾತೃದಾತೃದೇಯಾನಾಮ್**
**ಶಿವಭಾವಂ ವಿಚಿಂತಯನ್ ।**
**ಆತ್ಮನೋಽಕರ್ತೃಭಾವಂ ಚ**
**ಯದ್ ದತ್ತಂ ಸಹಜಂ ಭವೇತ್ ॥ 9–83**

ದಾನವನ್ನು ಸ್ವೀಕರಿಸುವವನು, ದಾನವನ್ನು ಕೊಡುವವನು ಮತ್ತು ದಾನವಾಗಿ ಕೊಡುವ ವಸ್ತು – ಇವೆಲ್ಲವುಗಳು ಶಿವಸ್ವರೂಪಗಳೆಂದು ಚಿಂತಿಸಿ ತನ್ನಲ್ಲಿ ಅಕರ್ತೃತ್ವ ಭಾವನೆಯನ್ನು ತಾಳಿಕೊಡುವ ದಾನವೇ ಸಹಜದಾನವು.

**ಸಹಜಂ ದಾನಮುತ್ಕೃಷ್ಟಮ್**
**ಸರ್ವದಾನೋತ್ತಮೋತ್ತಮಮ್ ।**
**ಶಿವಜ್ಞಾನಪ್ರದಂ ಪುಂಸಾಮ್**
**ಜನ್ಮರೋಗನಿವರ್ತಕಮ್ ॥ 9–84**

ಈ ಸಹಜದಾನವು ಉತ್ಕೃಷ್ಟವಾದುದು ಮತ್ತು ಎಲ್ಲ ದಾನಗಳಲ್ಲಿ ಉತ್ತಮೋತ್ತಮವಾಗಿರುತ್ತದೆ. ಇಂತಹ ದಾನವನ್ನು ಮಾಡಿದ ಜೀವಿಗಳಿಗೆ ಇದು ಶಿವಜ್ಞಾನಪ್ರದಾಯಕವೂ ಮತ್ತು ಜನ್ಮರೋಗ ನಿವರ್ತಕವೂ (ಭವರೊಗ ನಿವಾರಕವೂ) ಆಗಿರುತ್ತದೆ.

**ಶಿವಾಯ ಶಿವಭಕ್ತಾಯ**
**ದೀಯತೇ ಯದಿ ಕಿಂಚನ ।**
**ಭಕ್ತ್ಯಾ ತದಪಿ ವಿಖ್ಯಾತಮ್**
**ಸಹಜಂ ದಾನಮುತ್ತಮಮ್ ॥ 9–85**

ಶಿವನಿಗೆ ಅಥವಾ ಶಿವಭಕ್ತರಿಗೆ ಅತ್ಯಂತ ಭಕ್ತಿಯಿಂದ ಏನನ್ನೇ ಕೊಟ್ಟರೂ ಅದು ಸಹ ಉತ್ತಮವಾದ ಸಹಜದಾನವೆಂತಲೇ ಕರೆಯಲ್ಪಡುತ್ತದೆ.

**ದಾನಾತ್ ಸ್ವರ್ಣಸಹಸ್ರಸ್ಯ**
**ಸತ್ಪಾತ್ರೇ ಯತ್ಫಲಂ ಭವೇತ್ ।**
**ಏಕಪುಷ್ಪಪ್ರದಾನೇನ**
**ಶಿವೇ ತತ್ಫಲಮಿಷ್ಯತೇ ॥ 9–86**

ಒಂದು ಸಾವಿರ ಸುವರ್ಣ (ನಾಣ್ಯ) ಮುದ್ರೆಗಳನ್ನು ಸತ್ಪಾತ್ರರಲ್ಲಿ ದಾನ ಮಾಡಿದರೆ ಯಾವ ಫಲವು ಉಂಟಾಗುವುದೋ ಅದೇ ಫಲವು ಶಿವಲಿಂಗಕ್ಕೆ ಒಂದು ಪುಷ್ಪವನ್ನು ಸಮರ್ಪಿಸುವುದರಿಂದಲೂ ಪಡೆಯಬಹುದಾಗಿದೆ.

**ಶಿವ ಏವ ಪರಂ ಪಾತ್ರಮ್**
**ಸರ್ವವಿದ್ಯಾನಿಧಿರ್ಗುರುಃ ।**
**ತಸ್ಮೈ ದತ್ತಂ ತು ಯತ್ಕಿಂಚಿತ್**
**ತದನಂತಫಲಂ ಭವೇತ್ ॥ 9–87**

ಸರ್ವವಿದ್ಯೆಗಳ ನಿಧಿಯಾದ, ಸರ್ವರಿಗೂ ಗುರುಸ್ಥಾನದಲ್ಲಿರುವ ಶಿವನೋರ್ವನೇ ಸರ್ವೋತ್ಕೃಷ್ಟವಾದ ಸತ್ಪಾತ್ರನಾಗಿದ್ದಾನೆ. (ಆದ್ದರಿಂದ) ಅವನಿಗೆ ಕೊಟ್ಟ ಯಾವುದೇ ವಸ್ತುವು ಸಹ ಅನಂತ ಫಲಗಳನ್ನು ಕೊಡುತ್ತದೆ.

**ಶಿವಯೊಗೀ ಶಿವಃ ಸಾಕ್ಷಾತ್**
**ಶಿವಜ್ಞಾನಮಹೋದಧಿಃ ।**
**ಯತ್ಕಿಂಚಿದ್ ದೀಯತೇ ತಸ್ಮೈ**
**ತದ್ದಾನಂ ಪಾರಮಾರ್ಥಿಕಮ್ ॥ 9–88**

ಶಿವಜ್ಞಾನ ಸಾಗರನಾದ ಶಿವಯೋಗಿಯು ಸಾಕ್ಷಾತ್ ಶಿವನೇ ಆಗಿರುತ್ತಾನೆ. ಅವನಿಗೆ ಏನನ್ನೇ ಸ್ವಲ್ಪ ದಾನ ಮಾಡಿದರೂ ಆ ದಾನವು ಪಾರಮಾರ್ಥಿಕವಾದ ಸಹಜದಾನವೇ ಆಗಿದೆ.

**ಶಿವಯೋಗೀ ಮಹತ್ಪಾತ್ರಮ್**
**ಸರ್ವೇಷಾಂ ದಾನಕರ್ಮಣಿ ।**
**ತಸ್ಮಾನ್ನಾಸ್ತಿ ಪರಂ ಕಿಂಚಿತ್**
**ಪಾತ್ರಂ ಶಾಸ್ತ್ರವಿಚಾರತಃ ॥ 9–89**

ದಾನ ಮಾಡುವವರೆಲ್ಲರಿಗೂ ಶಿವಯೋಗಿಯೋರ್ವನೇ ಮಹತ್ಪಾತ್ರ ನಾಗಿದ್ದಾನೆ. ಆದ್ದರಿಂದ ಶಾಸ್ತ್ರದ ವಿಚಾರ ದೃಷ್ಟಿಯಿಂದ ಆ ಶಿವಯೋಗಿಗಿಂತಲೂ ಶ್ರೇಷ್ಠರಾದ ಪಾತ್ರರು ಯಾರೂ ಇರುವುದಿಲ್ಲ.

**ಭಿಕ್ಷಾಮಾತ್ರಪ್ರದಾನೇನ**
**ಶಾಂತಾಯ ಶಿವಯೋಗಿನೇ ।**
**ಯತ್ಫಲಂ ಲಭ್ಯತೇ ನೈತದ್**
**ಯಜ್ಞಕೋಟಿಶತೈರಪಿ ॥ 9–90**

ಶಾಂತಸ್ವಭಾವದ (ರಾಗದ್ವೇಷರಹಿತನಾದ) ಶಿವಯೋಗಿಗೆ ಒಂದು ತುತ್ತು ಭಿಕ್ಷಾನ್ನವನ್ನು ಕೊಡುವುದರಿಂದ ಯಾವ ಫಲವು ಲಭಿಸುವುದೋ ಅದು ಒಂದು ಕೋಟಿ ಯಜ್ಞವನ್ನು ಮಾಡಿದರೂ ಸಹ ಲಭಿಸುವುದಿಲ್ಲ.

**ಶಿವಯೋಗಿನಿ ಸಂತೃಪ್ತೇ**
**ತೃಪ್ತೋ ಭವತಿ ಶಂಕರಃ ।**
**ತತ್ತೃಪ್ತ್ಯಾ ತನ್ಮಯಂ ವಿಶ್ವಮ್**
**ತೃಪ್ತಿಮೇತಿ ಚರಾಚರಮ್ ॥ 9–91**

ಶಿವಯೋಗಿಯು ಸಂತೃಪ್ತನಾದರೆ ಶಂಕರನೇ ತೃಪ್ತನಾಗುತ್ತಾನೆ. ಶಂಕರನು ತೃಪ್ತನಾಗುವುದರಿಂದ ಅವನಲ್ಲಿ ಅಡಗಿರುವ ಚರಾಚರ ವಿಶ್ವವೆಲ್ಲವೂ ತೃಪ್ತವಾಗುತ್ತದೆ.

**ತಸ್ಮಾತ್ ಸರ್ವಪ್ರಯತ್ನೇನ**
**ಯೇನ ಕೇನಾಪಿ ಕರ್ಮಣಾ ।**
**ತೃಪ್ತಿಂ ಕುರ್ಯಾತ್ ಸದಾಕಾಲಮ್**
**ಅನ್ನಾದ್ಯೈಃ ಶಿವಯೋಗಿನಃ ॥ 9–92**

ಆದ್ದರಿಂದ (ಪ್ರತಿಯೊಬ್ಬರೂ) ಎಲ್ಲ ಪ್ರಯತ್ನವನ್ನು ಮಾಡಿ ಯಾವುದಾದ ರೊಂದು ಕ್ರಿಯೆಯಿಂದ ಯಾವಾಗಲೂ ಶಿವಯೋಗಿಯನ್ನು ಅನ್ನಾದಿಗಳಿಂದ ತೃಪ್ತಿಪಡಿಸಬೇಕು.

**ನಿರುಪಾಧಿಕಚಿದ್ರೂಪ–**

**ಪರಾನಂದಾತ್ಮವಸ್ತುನಿ ।**
**ಸಮಾಪ್ತಂ ಸಕಲಂ ಯಸ್ಯ**
**ಸ ದಾನೀ ಶಂಕರಃ ಸ್ವಯಮ್ ॥ 9–93**

ಉಪಾಧಿರಹಿತವಾದ, ಚಿದ್ರೂಪವಾದ, ಪರಾನಂದ ಸ್ವರೂಪವಾದ ಆತ್ಮ ವಸ್ತುವಿನಲ್ಲಿ ಯಾವ ದಾನಿಯ ಸಕಲ ವಸ್ತುಗಳು ಸಮಾಪ್ತವಾಗುವವೋ, ಆ ದಾನಿಯು ಸ್ವಯಂ ಶಂಕರನೇ ಆಗಿರುತ್ತಾನೆ.

**ಉಕ್ತಾಖಿಲಾಚಾರಪರಾಯಣೋಽಸೌ**
**ಸದಾ ವಿತನ್ವನ್ ಸಹಜಂ ತು ದಾನಮ್ ।**
**ಬ್ರಹ್ಮಾದಿಸಂಪತ್ಸು ವಿರಕ್ತಚಿತ್ತೋ**
**ಭಕ್ತೋ ಹಿ ಮಾಹೇಶ್ವರತಾಮುಪೈತಿ ॥ 9–94**
**– ಇಂದ್ರವಜ್ರಾ ವೃತ್ತಂ**

ಭಕ್ತಸ್ಥಲದಲ್ಲಿ ಹೇಳಿದ ಎಲ್ಲಾ ಆಚಾರಗಳಲ್ಲಿ (ಪಿಂಡಸ್ಥಲಾದಿ ಸಹಜದಾನ ಸ್ಥಲದವರೆಗಿನ) ಪರಾಯಣನಾದ (ನಿಷ್ಠನಾದ) ಈ ಭಕ್ತಸ್ಥಲಸಾಧಕನು ಯಾವಾಗಲೂ ಸಹಜದಾನವನ್ನೇ ಮಾಡುವಂತಹವನಾಗಿ ಬ್ರಹ್ಮ, ವಿಷ್ಣು ಮೊದಲಾದ ದೇವತೆಗಳ ಸಂಪತ್ತುಗಳಲ್ಲಿ ವಿರಕ್ತಚಿತ್ತನಾದ (ನಿಸ್ಪೃಹನಾದ) ಭಕ್ತನೇ ಮಾಹೇಶ್ವರ ಸ್ಥಿತಿಯನ್ನು ಹೊಂದುತ್ತಾನೆ.

***ಇತಿ ಸಹಜದಾನಸ್ಥಲಂ*** *ಇಲ್ಲಿಗೆ ಸಹಜದಾನಸ್ಥಲವು ಮುಗಿಯಿತು.*

***ಓಂ ತತ್ಸತ್ ಇತಿ***

***ಶ್ರೀ ಶಿವಗೀತೇಷು ಸಿದ್ಧಾಂತಾಗಮೇಷು ಶಿವಾದ್ವೈತವಿದ್ಯಾಯಾಂ ಶಿವಯೋಗಶಾಸ್ತ್ರೇ ಶ್ರೀರೇಣುಕಾಗಸ್ತ್ಯಸಂವಾದೇ ವೀರಶೈವಧರ್ಮನಿರ್ಣಯೇ ಶ್ರೀಶಿವಯೋಗಿಶಿವಾಚಾರ್ಯವಿರಚಿತೇ ಶ್ರೀಸಿದ್ಧಾಂತಶಿಖಾಮಣೌ ಭಕ್ತಸ್ಥಲೇ ಭಕ್ತಮಾರ್ಗಕ್ರಿಯಾಸ್ಥಲಾದಿಸಪ್ತವಿಧಸ್ಥಲಪ್ರಸಂಗೋ ನಾಮ ನವಮಃ ಪರಿಚ್ಛೇದಃ ।***

*ಓಂ ತತ್ಸತ್ ಇತಿ ಶ್ರೀ ಶಿವನಿಂದ ಉಪದೇಶಿಸಲ್ಪಟ್ಟ ಶ್ರೀ ಸಿದ್ಧಾಂತಾಗಮಗಳಲ್ಲಿಯ ಶಿವಾದ್ವೈತವಿದ್ಯಾರೂಪವೂ, ಶಿವಯೋಗಶಾಸ್ತ್ರವೂ, ಶ್ರೀ ರೇಣುಕಾಗಸ್ತ್ಯಸಂವಾದ ರೂಪವೂ, ಶ್ರೀ ವೀರಶೈವಧರ್ಮ ನಿರ್ಣಯವೂ, ಶ್ರೀ ಶಿವಯೋಗಿ ಶಿವಾಚಾರ್ಯ ವಿರಚಿತವೂ ಆದ ಶ್ರೀ ಸಿದ್ಧಾಂತ ಶಿಖಾಮಣಿಯಲ್ಲಿ ಭಕ್ತಸ್ಥಲದಲ್ಲಿಯ ಭಕ್ತಮಾರ್ಗಕ್ರಿಯಾಸ್ಥಲಾದಿ ಏಳು ವಿಧ ಸ್ಥಲ ಪ್ರಸಂಗವೆಂಬ ಹೆಸರಿನ ಒಂಭತ್ತನೆಯ ಪರಿಚ್ಛೇದವು ಮುಗಿದುದು*

## ದಶಮಃ ಪರಿಚ್ಛೇದಃ
ಹತ್ತನೆಯ ಪರಿಚ್ಛೇದವು

## ಮಾಹೇಶ್ವರಸ್ಯ ನವವಿಧಸ್ಥಲಪ್ರಸಂಗಃ
ಮಾಹೇಶ್ವರನ ನವವಿಧಸ್ಥಲ ಪ್ರಸಂಗವು
**(79 ಶ್ಲೋಕಗಳು)**

### ಮಾಹೇಶ್ವರಸ್ಥಲಮ್
ಮಾಹೇಶ್ವರಸ್ಥಲವು
**(7 ಶ್ಲೋಕಗಳು)**

**॥ ಅಗಸ್ತ್ಯ ಉವಾಚ ॥**
**ಭಕ್ತಸ್ಥಲಂ ಸಮಾಖ್ಯಾತಮ್**
**ಭವತಾ ಗಣನಾಯಕ ।**
**ಕೇನ ವಾ ಧರ್ಮಭೇದೇನ**
**ಭಕ್ತೋ ಮಾಹೇಶ್ವರೋ ಭವೇತ್ ॥ 10-1**

ಗಣನಾಯಕನಾದ ರೇಣುಕನೇ, ತಮ್ಮಿಂದ ಭಕ್ತಸ್ಥಲವು ಚೆನ್ನಾಗಿ ಹೇಳಲ್ಪಟ್ಟಿತು. ಆ ಭಕ್ತನು ಯಾವ ಧರ್ಮಭೇದದಿಂದ (ಆಚಾರ ವಿಶೇಷದಿಂದ) ಮಾಹೇಶ್ವರನಾಗುವನು?

**॥ ಶ್ರೀ ರೇಣುಕ ಉವಾಚ ॥**
**ಕೇವಲೇ ಸಹಜೇ ದಾನೇ**
**ನಿಷ್ಣಾತಃ ಶಿವತತ್ಪರಃ ।**
**ಬ್ರಹ್ಮಾದಿಸ್ಥಾನವಿಮುಖೋ**
**ಭಕ್ತೋ ಮಾಹೇಶ್ವರಃ ಸ್ಮೃತಃ ॥ 10-2**

ಕೇವಲ ಸಹಜದಾನದಲ್ಲಿಯೇ ಕುಶಲನಾದ, ಶಿವನಲ್ಲಿಯೇ ಏಕನಿಷ್ಠೆಯುಳ್ಳವನಾದ ಮತ್ತು ಬ್ರಹ್ಮಾದಿ ಪದವಿಗಳಿಂದ ವಿಮುಖನಾದ (ನಿಸ್ಪೃಹನಾದ) ಭಕ್ತನೇ ಮಾಹೇಶ್ವರನೆಂದು ಕರೆಸಿಕೊಳ್ಳುತ್ತಾನೆ.

**ಭಕ್ತೇರ್ಯದಾ ಸಮುತ್ಕರ್ಷೋ**
**ಭವೇದ್ ವೈರಾಗ್ಯಗೌರವಾತ್ ।**
**ತದಾ ಮಾಹೇಶ್ವರಃ ಪ್ರೋಕ್ತೋ**
**ಭಕ್ತಃ ಸ್ಥಿರವಿವೇಕವಾನ್ ॥ 10-3**

ವೈರಾಗ್ಯದ ಆಧಿಕ್ಯದಿಂದ ಭಕ್ತಿಯಲ್ಲಿ ಯಾವಾಗ ಉತ್ಕರ್ಷ ಉಂಟಾಗುವುದೋ ಆಗ ಸ್ಥಿರ ವಿವೇಕವುಳ್ಳ ಭಕ್ತನು ಮಾಹೇಶ್ವರನೆಂದು ಕರೆಸಿಕೊಳ್ಳುತ್ತಾನೆ.

**ಮಾಹೇಶ್ವರಸ್ಥಲಂ ವಕ್ಷ್ಯೇ**
**ಯಥೋಕ್ತಂ ಶಂಭುನಾ ಪುರಾ ।**

**ಮಾಹೇಶ್ವರಪ್ರಶಂಸಾಽಽದೌ**
**ಲಿಂಗನಿಷ್ಠಾ ತತಃ ಪರಮ್ ॥ 10–4**

**ಪೂರ್ವಾಶ್ರಯನಿರಾಸಶ್ಚ**
**ತಥಾದ್ವೈತನಿರಾಕೃತಿಃ ।**
**ಆಹ್ವಾನವರ್ಜನಂ ಪಶ್ಚಾತ್**
**ಅಷ್ಟಮೂರ್ತಿನಿರಾಕೃತಿಃ ॥ 10–5**

**ಸರ್ವಗತ್ವನಿರಾಸಶ್ಚ**
**ಶಿವತ್ವಂ ಶಿವಭಕ್ತಯೋಃ ।**
**ಏವಂ ನವವಿಧಂ ಪ್ರೋಕ್ತಮ್**
**ಮಾಹೇಶ್ವರಮಹಾಸ್ಥಲಮ್ ॥ 10–6**
**ಆದಿತಃ ಕ್ರಮಶೋ ವಕ್ಷ್ಯೇ**
**ಸ್ಥಲಭೇದಸ್ಯ ಲಕ್ಷಣಮ್ ।**
**ಸಮಾಹಿತೇನ ಮನಸಾ**
**ಶ್ರೂಯತಾಂ ಭವತಾ ಮುನೇ ॥ 10–7**

ಪೂರ್ವದಲ್ಲಿ ಶಂಭುವಿನಿಂದ ಮಾಹೇಶ್ವರಸ್ಥಲವು ಹೇಗೆ ಹೇಳಲ್ಪಟ್ಟಿದೆಯೋ ಅದೇ ರೀತಿಯಲ್ಲಿ ಇಲ್ಲಿ ಹೇಳುತ್ತೇನೆ. (ಈ ಮಾಹೇಶ್ವರ ಸ್ಥಲದಲ್ಲಿ) ಮೊದಲನೆಯದು ಮಾಹೇಶ್ವರ ಪ್ರಶಂಸಾಸ್ಥಲವು. ಅದಾದ ಮೇಲೆ ಲಿಂಗನಿಷ್ಠಾಸ್ಥಲವು. ನಂತರದಲ್ಲಿ ಪೂರ್ವಾಶ್ರಯನಿರಸನಸ್ಥಲವು. ಅದರಂತೆ ಅದ್ವೈತನಿರಸನಸ್ಥಲವು, ಅದಾದ ಮೇಲೆ ಆಹ್ವಾನನಿರಸನಸ್ಥಲವು ಮತ್ತು ಅಷ್ಟಮೂರ್ತಿನಿರಸನಸ್ಥಲವು. ಆಮೇಲೆ ಸರ್ವಗತ್ವ ನಿರಸನಸ್ಥಲವು, ಶಿವತ್ವಸ್ಥಲ (ಶಿವಜಗನ್ಮಯ ಸ್ಥಲವು) ಮತ್ತು ಶಿವಭಕ್ತಸ್ಥಲ (ಭಕ್ತ ದೇಹಿಕಲಿಂಗಸ್ಥಲ) – ಹೀಗೆ ಮಾಹೇಶ್ವರಸ್ಥಲದಲ್ಲಿ ಒಂಭತ್ತು ಪ್ರಕಾರದ ಸ್ಥಲಗಳು (ಅವಾಂತರ ಸ್ಥಲಗಳು) ಹೇಳಲ್ಪಟ್ಟಿವೆ. ಹೇ ಅಗಸ್ತ್ಯ ಮುನಿಯೇ ಕೇಳುವಂತವನಾಗು.

## 16. ಅಥ ಮಾಹೇಶ್ವರಪ್ರಶಂಸಾಸ್ಥಲಮ್
ಈಗ ಮಾಹೇಶ್ವರಪ್ರಶಂಸಾಸ್ಥಲವು
**(13 ಶ್ಲೋಕಗಳು)**

**ವಿಶ್ವಸ್ಮಾದಧಿಕೋ ರುದ್ರೋ**
**ವಿಶ್ವಾನುಗ್ರಹಕಾರಕಃ ।**
**ಇತಿ ಯಸ್ಯ ಸ್ಥಿರಾ ಬುದ್ಧಿಃ**
**ಸ ವೈ ಮಾಹೇಶ್ವರಃ ಸ್ಮೃತಃ ॥ 10–8**

ರುದ್ರನು ವಿಶ್ವಕ್ಕಿಂತಲೂ ದೊಡ್ಡವನಾಗಿರುತ್ತಾನೆ ಮತ್ತು ವಿಶ್ವಕ್ಕೆ ಅನುಗ್ರಹವನ್ನು ಮಾಡುವಂತಹವನೂ ಸಹ ಆಗಿರುತ್ತಾನೆ. ಈ ವಿಚಾರದಲ್ಲಿ ಸ್ಥಿರಬುದ್ಧಿಯುಳ್ಳವನು ಯಾವನೋ ಅವನೇ ಮಾಹೇಶ್ವರನೆಂದು ಸ್ಮರಿಸಿಕೊಳ್ಳುವನು (ಕರೆಸಿಕೊಳ್ಳುವನು).

**ಬ್ರಹ್ಮಾದ್ಯೈರ್ಮಲಿನಪ್ರಾಯೈಃ**
**ನಿರ್ಮಲೇ ಪರಮೇಶ್ವರೇ ।**
**ಸಾಮ್ಯೋಕ್ತಿಂ ಯೋ ನ ಸಹತೇ**

**ಸ ವೈ ಮಾಹೇಶ್ವರಾಭಿಧಃ ॥ 10–9**

ಮಲಿನಪ್ರಾಯರಾದ (ಒಂದಿಲ್ಲೊಂದು ದೋಷಗಳಿಂದ ಕೂಡಿದ) ಬ್ರಹ್ಮಾದಿ ದೇವತೆಗಳೊಂದಿಗೆ ನಿರ್ಮಲವಾದ ಶಿವನ ಸಮಾನತೆಯ ಉಕ್ತಿಯನ್ನು ಯಾರು ಸಹಿಸಿಕೊಳ್ಳುವುದಿಲ್ಲವೋ ಅವನೇ ಮಾಹೇಶ್ವರನು.

**ಈಶ್ವರಃ ಸರ್ವಭೂತಾನಾಮ್**
**ಬ್ರಹ್ಮಾದೀನಾಂ ಮಹಾನಿತಿ ।**
**ಬುದ್ಧಿಯೋಗಾತ್ ತದಾಸಕ್ತೋ**
**ಭಕ್ತೋ ಮಾಹೇಶ್ವರಃ ಸ್ಮೃತಃ ॥ 10–10**

ಸಮಸ್ತ ಪ್ರಾಣಿಗಳಿಗೆ ಮತ್ತು ಬ್ರಹ್ಮಾದಿ ದೇವತೆಗಳಿಗೆ ಈಶ್ವರನೇ ದೊಡ್ಡವನು ಎಂಬ ಬುದ್ಧಿಯೋಗದಿಂದ ಈಶ್ವರನಲ್ಲಿ ಆಸಕ್ತನಾದ ಭಕ್ತನೇ ಮಾಹೇಶ್ವರನೆಂದು ಕರೆಯಲ್ಪಡುವನು.

**ಬ್ರಹ್ಮಾದಿದೇವತಾಜಾಲಮ್**
**ಮೋಹಿತಂ ಮಾಯಯಾ ಸದಾ ।**
**ಅಶಕ್ತಂ ಮುಕ್ತಿದಾನೇ ತು**
**ಕ್ಷಯಾತಿಶಯಸಂಯುತಮ್ ॥ 10–11**

ಬ್ರಹ್ಮಾದಿ ದೇವತೆಗಳ ಸಮೂಹವು ಯಾವಾಗಲೂ ಮಾಯೆಯಿಂದ ಮೋಹಿತವಾಗಿರುತ್ತದೆ ಮತ್ತು ಕ್ಷಯಾತಿಶಯಗಳಿಂದ ಕೂಡಿಕೊಂಡಿರುತ್ತದೆ (ಬ್ರಹ್ಮಾದಿ ದೇವತೆಗಳು ಮುಕ್ತಿಯನ್ನು ಕೊಡಲು ಅಸಮರ್ಥರಾಗಿರುತ್ತಾರೆ).

**ಅನಾದಿಮುಕ್ತೋ ಭಗವಾನ್**
**ಏಕ ಏವ ಮಹೇಶ್ವರಃ ।**
**ಮುಕ್ತಿದಶ್ಚೇತಿ ಯೋ ವೇದ**
**ಸ ವೈ ಮಾಹೇಶ್ವರಃ ಸ್ಮೃತಃ ॥ 10–12**

ಭಗವಂತನಾದ (ಷಡ್ಗುಣೈಶ್ವರ್ಯ ಸಂಪನ್ನನಾದ) ಮಹೇಶ್ವರನೊಬ್ಬನೇ ಅನಾದಿಮುಕ್ತನು (ನಿತ್ಯಮುಕ್ತನು) ಮತ್ತು ಅವನೇ ಮುಕ್ತಿಯನ್ನು ಕೊಡುವಂತಹವನು ಎಂಬುದಾಗಿ ಯಾರು ತಿಳಿದುಕೊಳ್ಳುವರೋ ಅವನೇ ಮಾಹೇಶ್ವರನೆಂದು ಕರೆಯಿಸಿಕೊಳ್ಳುವನು.

**ಕ್ಷಯಾತಿಶಯಸಂಯುಕ್ತಾ**
**ಬ್ರಹ್ಮವಿಷ್ಣ್ವಾದಿಸಂಪದಃ ।**
**ತೃಣವನ್ಮನ್ಯತೇ ಯುಕ್ತ್ಯಾ**
**ವೀರಮಾಹೇಶ್ವರಃ ಸದಾ ॥ 10–13**

ಬ್ರಹ್ಮ, ವಿಷ್ಣು ಮೊದಲಾದ ದೇವತೆಗಳ ಸಂಪತ್ತುಗಳು (ಪದವಿಗಳು) ಕ್ಷಯ ಮತ್ತು ಅತಿಶಯಗಳಿಂದ ಕೂಡಿಕೊಂಡಿವೆ. ಈ ಪದವಿಗಳನ್ನು ಯುಕ್ತಿಯಿಂದ ಯಾವಾಗಲೂ ಯಾರು ತೃಣಕ್ಕೆ ಸಮಾನವಾಗಿ ತಿಳಿದುಕೊಳ್ಳುತ್ತಾನೆಯೋ ಅವನೇ ವೀರಮಾಹೇಶ್ವರನು.

**ಶಬ್ದಸ್ಪರ್ಶಾದಿಸಂಪನ್ನೇ**
**ಸುಖಲೇಶೇ ತು ನಿಃಸ್ಪೃಹಃ ।**
**ಶಿವಾನಂದೇ ಸಮುತ್ಕಂಠೋ**
**ವೀರಮಾಹೇಶ್ವರೋ ಭವೇತ್ ॥ 10–14**

ಶಬ್ದ ಸ್ಪರ್ಶಾದಿ ವಿಷಯಗಳಿಂದ ಉತ್ಪನ್ನವಾಗುವ ಅಲ್ಪಸುಖದಲ್ಲಿ ನಿಸ್ಪೃಹನಾದ (ನಿರಾಸಕ್ತನಾದ), ನಿತ್ಯವಾದ ಶಿವಾನಂದವನ್ನು ಪಡೆಯುವಲ್ಲಿ ಉತ್ಕಟವಾದ ಬಯಕೆಯುಳ್ಳವನೇ ವೀರಮಾಹೇಶ್ವರನಾಗುತ್ತಾನೆ.

**ಪರಸ್ತ್ರೀಸಂಗನಿರ್ಮುಕ್ತಃ**
**ಪರದ್ರವ್ಯಪರಾಙ್ಮುಖಃ ।**
**ಶಿವಾರ್ಥಕಾರ್ಯಸಂಪನ್ನಃ**
**ಶಿವಾಗಮಪರಾಯಣಃ ॥ 10–15**

ಪರಸ್ತ್ರೀಸಂಗದಿಂದ ನಿರ್ಮುಕ್ತನಾದ (ಯಾವ ಕಾಲಕ್ಕೂ ಪರಸ್ತ್ರೀ ಸಂಗವನ್ನು ಮಾಡದಿರುವ), ಪರದ್ರವ್ಯದಿಂದ ಪರಾಙ್ಮುಖನಾದ (ಪರದ್ರವ್ಯದಲ್ಲಿ ಅನಾಸಕ್ತನಾದ), ಸದಾಶಿವನ ಸಂಬಂಧಿ ಕಾರ್ಯಗಳನ್ನೇ ಮಾಡುವ ಮತ್ತು ಶಿವಾಗಮ ಪರಾಯಣನಾದ (ಶಿವಾಗಮಗಳನ್ನು ಅಧ್ಯಯನ ಮಾಡುವ)–

**ಶಿವಸ್ತುತಿರಸಾಸ್ವಾದ–**
**ಮೋದಮಾನಮನಾಃ ಶುಚಿಃ ।**
**ಶಿವೋತ್ಕರ್ಷಪ್ರಮಾಣಾನಾಮ್**
**ಸಂಪಾದನಸಮುದ್ಯತಃ ॥ 10–16**

ಶಿವಸಂಪತ್ತಿ ರೂಪವಾದ ರಸಾಸ್ವಾದನೆಯಲ್ಲಿ ಸಂತುಷ್ಟವಾದ ಮನಸ್ಸುಳ್ಳವನಾದ, ಪವಿತ್ರನಾದ, ಶಿವನ ಉತ್ಕರ್ಷದ (ಸರ್ವೋತ್ಕೃಷ್ಟತೆಯ) ಪ್ರಮಾಣಗಳನ್ನು ಸಂಪಾದಿಸುವುದರಲ್ಲಿ ತೊಡಗಿಕೊಂಡವನಾದ–

**ನಿರ್ಮಮೋ ನಿರಹಂಕಾರೋ**
**ನಿರಸ್ತಕ್ಲೇಶಪಂಜರಃ ।**
**ಅಸ್ಪೃಷ್ಟಮದಸಂಬಂಧೋ**
**ಮಾತ್ಸರ್ಯಾವೇಶವರ್ಜಿತಃ ॥ 10–17**

ಮಮಕಾರರಹಿತನಾದ, ನಿರಹಂಕಾರಿಯಾದ, ಪಂಚಕ್ಲೇಶಗಳೆಂಬ (ಅವಿದ್ಯಾ, ಅಸ್ಮಿತಾ, ರಾಗ, ದ್ವೇಷ, ಅಭಿನಿವೇಷ) ಪಂಜರವನ್ನು ತೊಲಗಿಸಿಕೊಂಡ, ಮದಗಳ ಸಂಬಂಧದ ಸೋಂಕು ಇಲ್ಲದ, ಮಾತ್ಸರ್ಯದ ಆವೇಶಕ್ಕೆ ಅವಕಾಶ ಕೊಡದ–

**ನಿರಸ್ತಮದನೋನ್ಮೇಷೋ**
**ನಿರ್ಧೂತಕ್ರೋಧವಿಪ್ಲವಃ ।**
**ಸದಾ ಸಂತುಷ್ಟಹೃದಯಃ**
**ಸರ್ವಪ್ರಾಣಿಹಿತೇ ರತಃ ॥ 10–18**

ಕಾಮೋದ್ರೇಕವನ್ನು ತೊಲಗಿಸಿಕೊಂಡ, ಕ್ರೋಧ (ಕೋಪ)ದ ಬಾಧೆಯನ್ನು ಜಾಡಿಸಿಕೊಂಡ (ಕಳೆದುಕೊಂಡ), ಯಾವಾಗಲೂ ಸಂತುಷ್ಟವಾದ ಹೃದಯವುಳ್ಳ ಮತ್ತು ಎಲ್ಲ ಪ್ರಾಣಿಗಳಿಗೆ ಹಿತವನ್ನು ಮಾಡುವ ಪ್ರೀತಿಯುಳ್ಳ–

**ನಿವಾರಣಸಮುದ್ಯೋಗೀ**
**ಶಿವಕಾರ್ಯವಿರೋಧಿನಾಮ್ ।**
**ಸಹಚಾರೀ ಸದಾಕಾಲಮ್**
**ಶಿವೋತ್ಕರ್ಷಾಭಿಧಾಯಿಭಿಃ ॥ 10–19**

ಶಿವಮಯ ಕಾರ್ಯವನ್ನು ವಿರೋಧಿಸುವವರನ್ನು ನಿವಾರಿಸುವಲ್ಲಿ ಸದಾ ಉದ್ಯೋಗಶೀಲನಾದ, ಶಿವಾಧಿಕ್ಯವನ್ನು ಹೇಳುವವರೊಂದಿಗೆ ಸದಾಕಾಲದಲ್ಲಿ ಸಹಚಾರಿಯಾದ–

**ಶಿವಾಪಕರ್ಷಸಂಪ್ರಾಪ್ತೌ**
**ಪ್ರಾಣತ್ಯಾಗೇऽಪ್ಯಶಂಕಿತಃ ।**
**ಶಿವೈಕನಿಷ್ಠಃ ಸರ್ವಾತ್ಮಾ**
**ವೀರಮಾಹೇಶ್ವರೋ ಭವೇತ್ ॥ 10–20**

ಶಿವನಿಗೆ ಅಪಕರ್ಷವು (ನಿಂದೆಯು) ಪ್ರಾಪ್ತವಾದಾಗ (ಅದನ್ನು ದೂರ ಮಾಡಲು) ಪ್ರಾಣವನ್ನು ತ್ಯಜಿಸಲು ಸಿದ್ಧನಾದ, ಶಿವನಲ್ಲಿಯೇ (ಇಷ್ಟಲಿಂಗದಲ್ಲಿಯೇ) ಏಕನಿಷ್ಠೆಯುಳ್ಳ ಮತ್ತು ಸರ್ವಾತ್ಮ ಭಾವನೆಯುಳ್ಳ (ಪೂರ್ಣಾಹಂಭಾವವುಳ್ಳ) ಸಾಧಕನೇ ವೀರಮಾಹೇಶ್ವರನಾಗುವನು. (10–15 ರಿಂದ 10–20ರ ವರೆವಿಗಿನ ಶ್ಲೋಕಗಳಲ್ಲಿ ವೀರಮಾಹೇಶ್ವರನ ಆಚರಣೆಗಳನ್ನು ನಿರೂಪಿಸಲಾಗಿದೆ)

*ಇತಿ ಮಾಹೇಶ್ವರಪ್ರಶಂಸಾಸ್ಥಲಂ*
*ಇಲ್ಲಿಗೆ ಮಾಹೇಶ್ವರಪ್ರಶಂಸಾಸ್ಥಲವು ಮುಗಿಯಿತು.*

## 17. ಅಥ ಲಿಂಗನಿಷ್ಠಾಸ್ಥಲಮ್

ಈಗ ಲಿಂಗನಿಷ್ಠಾಸ್ಥಲವು

**(9 ಶ್ಲೋಕಗಳು)**

**ಅಸ್ಯ ಮಾಹೇಶ್ವರಸ್ಯೋಕ್ತಮ್**
**ಲಿಂಗನಿಷ್ಠಾಮಹಾಸ್ಥಲಮ್ ।**
**ಪ್ರಾಣಾತ್ಯಯೇऽಪಿ ಸಂಪನ್ನೇ**
**ಯದತ್ಯಾಜ್ಯಂ ವಿಧೀಯತೇ ॥ 10–21**

ಈ ಮಾಹೇಶ್ವರನಿಗೆ ಪ್ರಾಣಕ್ಕೆ ಸಂಕಟವು ಬಂದೊದಗಿದರೂ ಸಹ ಬಿಡಲು ಬಾರದೆ ಇರುವ ವಿಧಿಯನ್ನು ಹೇಳುವ ಲಿಂಗನಿಷ್ಠಾಮಹಾಸ್ಥಲವನ್ನು ಹೇಳಲಾಗಿದೆ.

**ಅಪಗಚ್ಛತು ಸರ್ವಸ್ವಮ್**
**ಶಿರಶ್ಛೇದನಮಸ್ತು ವಾ ।**
**ಮಾಹೇಶ್ವರೋ ನ ಮುಂಚೇತ**
**ಲಿಂಗಪೂಜಾಮಹಾವ್ರತಮ್ ॥ 10–22**

ತನ್ನ ಸರ್ವಸಂಪತ್ತೆಲ್ಲವೂ ಹೋದರೂ, ಇಲ್ಲವೇ ಶಿರಶ್ಛೇದನವೇ ಆದರೂ ಮಾಹೇಶ್ವರನು ಲಿಂಗಪೂಜಾರೂಪವಾದ (ಇಷ್ಟಲಿಂಗ ಪೂಜಾರೂಪವಾದ) ಮಹಾವ್ರತವನ್ನು ಬಿಡಕೂಡದು.

**ಲಿಂಗಪೂಜಾಮಕೃತ್ವಾ ತು**
**ಯೇ ನ ಭುಂಜಂತಿ ಮಾನವಾಃ ।**
**ತೇಷಾಂ ಮಹಾತ್ಮನಾಂ ಹಸ್ತೇ**
**ಮೋಕ್ಷಲಕ್ಷ್ಮೀರುಪಸ್ಥಿತಾ ॥ 10–23**

ಇಷ್ಟಲಿಂಗ ಪೂಜೆಯನ್ನು ಮಾಡದೆ ಯಾವ ಮನುಷ್ಯನು ಏನನ್ನೂ ಭುಂಜಿಸು (ಭೋಜನ ಮಾಡು)ವುದಿಲ್ಲವೋ ಅಂತಹ ಮಹಾತ್ಮರ ಹಸ್ತದಲ್ಲಿ ಮೋಕ್ಷರೂಪವಾದ ಲಕ್ಷ್ಮೀಯು ಯಾವಾಗಲೂ ವಾಸವಾಗಿರುತ್ತಾಳೆ.

**ಕಿಮನ್ಯೈರ್ಧರ್ಮಕಲಿಲೈಃ**
**ಕೀಕಸಾರ್ಥಪ್ರದಾಯಿಭಿಃ ।**
**ಸಾಕ್ಷಾನ್ಮೋಕ್ಷಪ್ರದಃ ಶಂಭೋಃ**
**ಧರ್ಮೋ ಲಿಂಗಾರ್ಚನಾತ್ಮಕಃ ॥ 10–24**

ಕ್ಷುದ್ರಫಲವನ್ನು ಕೊಡುವ ಅನ್ಯ ಕ್ಷುದ್ರಧರ್ಮಾಚರಣೆಗಳಿಂದ ಏನು ಪ್ರಯೋಜನ? ಶಂಭುವಿನ ಲಿಂಗಾರ್ಚನಾರೂಪವಾದ (ಇಷ್ಟಲಿಂಗಾರ್ಚನಾ ರೂಪವಾದ) ಧರ್ಮವು ಸಾಕ್ಷಾತ್ ಮೋಕ್ಷವನ್ನೇ ಕೊಡುವಂತಹುದು ಆಗಿದೆ.

**ಅರ್ಪಿತೇನಾನ್ನಪಾನೇನ**
**ಲಿಂಗೇ ನಿಯಮಪೂಜಿತೇ ।**
**ಯೇ ದೇಹವೃತ್ತಿಂ ಕುರ್ವಂತಿ**
**ಮಹಾಮಾಹೇಶ್ವರಾ ಹಿ ತೇ ॥ 10–25**

ನಿಯಮದಿಂದ (ಗುರು ಹೇಳಿದ ನಿಯಮಾನುಸಾರವಾಗಿ) ಪೂಜಿತವಾದ ಇಷ್ಟಲಿಂಗಕ್ಕೆ ಅರ್ಪಿಸಿದ ಅನ್ನಪಾನಾದಿಗಳಿಂದಲೇ ಯಾರು ದೇಹವೃತ್ತಿಯನ್ನು ಮಾಡುವರೋ (ಲಿಂಗಾರ್ಚನೆಯನ್ನು ಮಾಡಿ ಅನ್ನಪಾನಾದಿಗಳನ್ನು ಸ್ವೀಕರಿಸುವರೋ) ಅವರೇ ಮಾಹೇಶ್ವರರಾಗಿರುತ್ತಾರೆ.

**ಚಿನ್ಮಯೇ ಶಾಂಕರೇ ಲಿಂಗೇ**
**ಸ್ಥಿರಂ ಯೇಷಾಂ ಮನಃ ಸದಾ ।**
**ವಿಮುಕ್ತೇತರಸರ್ವಾರ್ಥಮ್**
**ತೇ ಶಿವಾ ನಾತ್ರ ಸಂಶಯಃ ॥ 10–26**

ಯಾರ ಮನಸ್ಸು ಬೇರಾವ ಪದಾರ್ಥಗಳನ್ನು ಅಪೇಕ್ಷಿಸದೆ (ಸ್ವರ್ಗಾದಿ ಫಲಗಳನ್ನು ಅಪೇಕ್ಷಿಸದೆ) ಯಾವಾಗಲೂ ಚಿನ್ಮಯವಾದ ಶಿವಲಿಂಗದಲ್ಲಿಯೇ (ಇಷ್ಟಲಿಂಗಾರ್ಚನೆಯಲ್ಲಿಯೇ) ಸ್ಥಿರವಾಗಿರುವುದೋ ಅಂತಹ ಮನಸ್ಸುಳ್ಳ ಅವರು ಶಿವಸ್ವರೂಪರೇ ಆಗಿರುತ್ತಾರೆ. ಇದರಲ್ಲಿ ಯಾವ ಸಂಶಯವೂ ಇರುವುದಿಲ್ಲ.

**ಲಿಂಗೇ ಯಸ್ಯ ಮನೋ ಲೀನಮ್**
**ಲಿಂಗಸ್ತುತಿಪರಾ ಚ ವಾಕ್ ।**
**ಲಿಂಗಾರ್ಚನಪರೌ ಹಸ್ತೌ**
**ಸ ರುದ್ರೋ ನಾತ್ರ ಸಂಶಯಃ ॥ 10–27**

ಯಾವಾತನ ಮನಸ್ಸು ಇಷ್ಟಲಿಂಗ ಪೂಜೆಯಲ್ಲಿಯೇ ತನ್ಮಯ ವಾಗಿರುವುದೋ, ಯಾವಾತನ ವಾಣಿಯು ಲಿಂಗವನ್ನು ಸ್ತುತಿಸುವುದರಲ್ಲಿಯೇ ತನ್ಮಯವಾಗಿರುವುದೋ ಮತ್ತು ಯಾವಾತನ ಹಸ್ತಗಳು ಲಿಂಗಾರ್ಚನೆಯಲ್ಲಿಯೇ ನಿರತವಾಗಿರುವುವೋ, ಅಂತಹವನು ರುದ್ರನೇ ಆಗಿರುತ್ತಾನೆ. ಇದರಲ್ಲಿ ಯಾವ ಸಂಶಯವೂ ಇಲ್ಲ.

**ಲಿಂಗನಿಷ್ಠಸ್ಯ ಕಿಂ ತಸ್ಯ**
**ಕರ್ಮಣಾ ಸ್ವರ್ಗಹೇತುನಾ ।**
**ನಿತ್ಯಾನಂದಶಿವಪ್ರಾಪ್ತಿಃ**
**ಯಸ್ಯ ಶಾಸ್ತ್ರೇಷು ನಿಶ್ಚಿತಾ ॥ 10–28**

ಯಾರಿಗೆ ನಿತ್ಯಾನಂದ ರೂಪವಾದ ಶಿವಪ್ರಾಪ್ತಿಯು ಶಾಸ್ತ್ರಗಳಲ್ಲಿ ನಿಶ್ಚೈಸಲ್ಪಟ್ಟಿದೆಯೋ ಅಂತಹ ಇಷ್ಟಲಿಂಗದಲ್ಲಿ ನಿಷ್ಠೆಯುಳ್ಳ ಮಾಹೇಶ್ವರನಿಗೆ ಸ್ವರ್ಗ ಹೇತುಗಳಾದ ಕರ್ಮಗಳಿಂದ ಏನು ಪ್ರಯೋಜನ?

**ಲಿಂಗನಿಷ್ಠಾಪರಂ ಶಾಂತಮ್**
**ಭೂತಿರುದ್ರಾಕ್ಷಸಂಯುತಮ್ ।**
**ಪ್ರಶಂಸಂತಿ ಸದಾಕಾಲಮ್**
**ಬ್ರಹ್ಮಾದ್ಯಾ ದೇವತಾ ಮುದಾ ॥ 10–29**

ವಿಭೂತಿ, ರುದ್ರಾಕ್ಷಗಳನ್ನು ಧರಿಸಿದ ಶಾಂತಸ್ವಭಾವದ ಲಿಂಗನಿಷ್ಠನಾದ ಮಾಹೇಶ್ವರನನ್ನು ಬ್ರಹ್ಮಾದಿ ದೇವತೆಗಳು ಯಾವಾಗಲೂ ಆನಂದದಿಂದ ಪ್ರಶಂಸಿಸುತ್ತಿರುತ್ತಾರೆ.

*ಇತಿ ಲಿಂಗನಿಷ್ಠಾಸ್ಥಲಂ ಇಲ್ಲಿಗೆ ಲಿಂಗನಿಷ್ಠಾಸ್ಥಲವು ಮುಗಿಯಿತು.*

## 18. ಅಥ ಪೂರ್ವಾಶ್ರಯನಿರಸನಸ್ಥಲಮ್

ಈಗ ಪೂರ್ವಾಶ್ರಯನಿರಸನಸ್ಥಲವು

**(9 ಶ್ಲೋಕಗಳು)**

**ಲಿಂಗೈಕನಿಷ್ಠಹೃದಯಃ**
**ಸದಾ ಮಾಹೇಶ್ವರೋ ಜನಃ ।**
**ಪೂರ್ವಾಶ್ರಯಗತಾನ್ ಧರ್ಮಾನ್**
**ತ್ಯಜೇತ್ ಸ್ವಾಚಾರರೋಧಕಾನ್ ॥ 10–30**

ಯಾವಾಗಲೂ ತನ್ನ ಹೃದಯದಲ್ಲಿ ಇಷ್ಟಲಿಂಗದ ಬಗ್ಗೆ ನಿಷ್ಠೆಯುಳ್ಳ ಮಾಹೇಶ್ವರನು ತನ್ನ ಸಮಯಾಚಾರಕ್ಕೆ (ವೀರಶೈವ ಸಿದ್ಧಾಂತದ ಆಚರಣೆಗಳಿಗೆ) ವಿರೋಧಿಗಳಾದ ತನ್ನ ಪೂರ್ವಾಶ್ರಯದ ಧರ್ಮಾಚರಣೆಗಳನ್ನು ತ್ಯಜಿಸಬೇಕು.

**ಸ್ವಜಾತಿಕುಲಜಾನ್ ಧರ್ಮಾನ್**
**ಲಿಂಗನಿಷ್ಠಾವಿರೋಧಿನಃ ।**
**ತ್ಯಜನ್ ಮಾಹೇಶ್ವರೋ ಜ್ಞೇಯಃ**
**ಪೂರ್ವಾಶ್ರಯನಿರಾಸಕಃ ॥ 10–31**

ಇಷ್ಟಲಿಂಗ ನಿಷ್ಠೆಗೆ ವಿರೋಧಿಗಳಾದ ತನ್ನ ಪೂರ್ವದ ಜಾತಿ ಮತ್ತು ಕುಲಕ್ಕೆ ಸಂಬಂಧಿಸಿದ ಧರ್ಮಗಳನ್ನು (ಜನನ ಮರಣ ಸೂತಕಗಳನ್ನು ಪಾಲಿಸುವ ಧರ್ಮಗಳನ್ನು) ಬಿಡುವ ಮಾಹೇಶ್ವರನೇ ಪೂರ್ವಾಶ್ರಯ ನಿರಾಸಕನೆಂದು ತಿಳಿದುಕೊಳ್ಳಬೇಕು.

**ಶಿವಸಂಸ್ಕಾರಯೋಗೇನ**
**ವಿಶುದ್ಧಾನಾಂ ಮಹಾತ್ಮನಾಮ್ ।**
**ಕಿಂ ಪೂರ್ವಕಾಲಿಕೈರ್ಧರ್ಮೈಃ**
**ಪ್ರಾಕೃತಾನಾಂ ಹಿ ತೇ ಮತಾಃ ॥ 10–32**

ಶಿವಸಂಸ್ಕಾರದ ಯೋಗದಿಂದ ಪರಿಶುದ್ಧರಾದ ಮಹಾತ್ಮರಿಗೆ ಪೂರ್ವಕಾಲದ ಧರ್ಮಗಳಿಂದ ಏನು ಪ್ರಯೋಜನ? ಆ ಪೂರ್ವದ ಧರ್ಮಗಳು ಪಾಕೃತರಿಗೆ (ಶಿವದೀಕ್ಷಾ ಸಂಸ್ಕಾರ ರಹಿತರಿಗೆ) ಸಮ್ಮತಗಳಾಗಿರುತ್ತವೆ.

**ಶಿವಸಂಸ್ಕಾರಯೋಗೇನ**
**ಶಿವಧರ್ಮಾನುಷಂಗಿಣಾಮ್ ।**
**ಪ್ರಾಕೃತಾನಾಂ ನ ಧರ್ಮೇಷು**
**ಪ್ರವೃತ್ತಿರುಪಪದ್ಯತೇ ॥ 10–33**

ಶಿವಸಂಸ್ಕಾರ ಯೋಗದಿಂದ ಶಿವಧರ್ಮವನ್ನು ಅನುಷ್ಠಾನ ಮಾಡುವವರಿಗೆ ಪ್ರಾಕೃತಗಳಾದ ಧರ್ಮಗಳಲ್ಲಿ ಪ್ರವೃತ್ತಿಯು ಸಂಭವಿಸುವುದಿಲ್ಲ.

**ವಿಶುದ್ಧಾಃ ಪ್ರಾಕೃತಾಶ್ಚೇತಿ**
**ದ್ವಿವಿಧಾ ಮಾನುಷಾಃ ಸ್ಮೃತಾಃ ।**
**ಶಿವಸಂಸ್ಕಾರಿಣಃ ಶುದ್ಧಾಃ**
**ಪ್ರಾಕೃತಾ ಇತರೇ ಮತಾಃ ॥ 10–34**

ವಿಶುದ್ಧರು ಮತ್ತು ಪ್ರಾಕೃತರು ಎಂಬುದಾಗಿ ಮನುಷ್ಯರು ಎರಡು ವಿಧವಾಗಿ ಪರಿಗಣಿಸಲ್ಪಟ್ಟಿದ್ದಾರೆ. (ಇವರಲ್ಲಿ) ಶಿವದೀಕ್ಷಾ ಸಂಸ್ಕಾರವನ್ನು ಹೊಂದಿದವರು ಶುದ್ಧರು, ಅದನ್ನು ಹೊಂದದೇ ಇರುವ ಇತರರು ಪ್ರಾಕೃತರೆಂದು ಸಮ್ಮತರಾಗುತ್ತಾರೆ.

**ವರ್ಣಾಶ್ರಮಾದಿಧರ್ಮಾಣಾಮ್**
**ವ್ಯವಸ್ಥಾ ಹಿ ದ್ವಿಧಾ ಮತಾ ।**
**ಏಕಾ ಶಿವೇನ ನಿರ್ದಿಷ್ಟಾ**
**ಬ್ರಹ್ಮಣಾ ಕಥಿತಾ ಪರಾ ॥ 10–35**

ವರ್ಣಾಶ್ರಮಾದಿ ಧರ್ಮಗಳ ವ್ಯವಸ್ಥೆಯು ಎರಡು ವಿಧವಾಗಿ ಇರುತ್ತದೆ. ಒಂದನೆಯದು ಶಿವನಿಂದ ನಿರ್ದಿಷ್ಟವಾದದ್ದು. ಎರಡನೆಯದು ಬ್ರಹ್ಮನಿಂದ ಹೇಳಲ್ಪಟ್ಟಿದ್ದು.

**ಶಿವೋಕ್ತಧರ್ಮನಿಷ್ಠಾ ತು**
**ಶಿವಾಶ್ರಮನಿಷೇವಿಣಾಮ್ ।**
**ಶಿವಸಂಸ್ಕಾರಹೀನಾನಾಮ್**
**ಧರ್ಮಃ ಪೈತಾಮಹಃ ಸ್ಮೃತಃ ॥ 10–36**

ಶಿವಾಶ್ರಮದಲ್ಲಿ ತತ್ಪರರಾದ ಶಿವಭಕ್ತರಿಗೆ (ವೀರಶೈವರಿಗೆ) ಶಿವನಿಂದ ಹೇಳಿದ ಧರ್ಮಗಳಲ್ಲಿ ನಿಷ್ಠೆ ಇರಬೇಕು. ಶಿವಸಂಸ್ಕಾರವಿಲ್ಲದವರಿಗೆ ಬ್ರಹ್ಮನಿಂದ ಪ್ರತಿಪಾದಿತವಾದ ಧರ್ಮವು ವಿಹಿತವಾದುದು.

**ಶಿವಸಂಸ್ಕಾರಯುಕ್ತೇಷು**
**ಜಾತಿಭೇದೋ ನ ವಿದ್ಯತೇ ।**
**ಕಾಷ್ಠೇಷು ವಹ್ನಿದಗ್ಧೇಷು**
**ಯಥಾ ರೂಪಂ ನ ವಿದ್ಯತೇ ॥ 10–37**

ಅಗ್ನಿಯಿಂದ ಸುಡಲ್ಪಟ್ಟ ಕಟ್ಟಿಗೆಗಳಲ್ಲಿ ಅವುಗಳ ಪೂರ್ವದ ರೂಪವು ಹೇಗೆ ಗೋಚರಿಸುವುದಿಲ್ಲವೋ ಅದರಂತೆ ಶಿವದೀಕ್ಷಾಸಂಸ್ಕಾರವನ್ನು ಹೊಂದಿದವರಲ್ಲಿ (ವೀರಶೈವರಲ್ಲಿ) ಅವರ ಪೂರ್ವದ ಜಾತಿಭೇದಗಳು ಉಳಿದಿರುವುದಿಲ್ಲ.

**ತಸ್ಮಾತ್ಸರ್ವಪ್ರಯತ್ನೇನ**
**ಶಿವಸಂಸ್ಕಾರಸಂಯುತಃ ।**
**ಜಾತಿಭೇದಂ ನ ಕುರ್ವೀತ**
**ಶಿವಭಕ್ತೇ ಕದಾಚನ ॥ 10–38**

ಆದ್ದರಿಂದ ಸರ್ವಪ್ರಯತ್ನದಿಂದ ಶಿವಸಂಸ್ಕಾರವನ್ನು ಹೊಂದಿದ ಶಿವಭಕ್ತನಲ್ಲಿ ಎಂದೂ ಜಾತಿಭೇದವನ್ನು ಮಾಡಕೂಡದು.
***ಇತಿ ಪೂರ್ವಾಶ್ರಯನಿರಸನಸ್ಥಲಂ*** *ಇಲ್ಲಿಗೆ ಪೂರ್ವಾಶ್ರಯನಿರಸನಸ್ಥಲವು ಮುಗಿಯಿತು.*

## 19. ಅಥ ಸರ್ವಾದ್ವೈತನಿರಸನಸ್ಥಲಮ್

ಈಗ ಸರ್ವಾದ್ವೈತನಿರಸನಸ್ಥಲವು

(7 ಶ್ಲೋಕಗಳು)

**ಪೂಜ್ಯಪೂಜಕಯೋರ್ಲಿಂಗ–**
**ಜೀವಯೋರ್ಭೇದವರ್ಜನೇ ।**
**ಪೂಜಾಕರ್ಮಾದ್ಯಸಂಪತ್ತೇಃ**
**ಲಿಂಗನಿಷ್ಠಾವಿರೋಧತಃ ॥ 10–39**

ಪೂಜ್ಯ ಪೂಜಕರಾದ ಲಿಂಗ ಮತ್ತು ಜೀವರುಗಳ ಮಧ್ಯದಲ್ಲಿ ಭೇದವನ್ನು ಮಾಡದೆ ಇದ್ದರೆ, ಲಿಂಗನಿಷ್ಠೆಗೆ ವಿರೋಧವಾಗುವುದಲ್ಲದೆ, ಪೂಜಾದಿ ಕರ್ಮಗಳು ಸಹ ಸಂಭವಿಸುವುದಿಲ್ಲ.

**ಸರ್ವಾದ್ವೈತವಿಚಾರಸ್ಯ**
**ಜ್ಞಾನಾಭಾವೇ ವ್ಯವಸ್ಥಿತೇಃ ।**
**ಭವೇನ್ಮಾಹೇಶ್ವರಃ ಕರ್ಮೀ**
**ಸರ್ವಾದ್ವೈತನಿರಾಸಕಃ ॥ 10–40**

ಸರ್ವಾದ್ವೈತ ವಿಚಾರಕ್ಕೆ ಬೇಕಾದ ತತ್ತ್ವಜ್ಞಾನದ ಅಭಾವವು ಇವನಲ್ಲಿ ಇರುವುದರಿಂದ ಕರ್ಮಿಯಾದ (ಇಷ್ಟಲಿಂಗಪೂಜಾ ಕರ್ಮಿಯಾದ) ಮಾಹೇಶ್ವರನು ಸರ್ವಾದ್ವೈತ ನಿರಾಸಕನು ಆಗುತ್ತಾನೆ.

**ಪ್ರೇರಕಂ ಶಂಕರಂ ಬುದ್ಧ್ವಾ**
**ಪ್ರೇರ್ಯಮಾತ್ಮಾನಮೇವ ಚ ।**
**ಭೇದಾತ್ ತಂ ಪೂಜಯೇನ್ನಿತ್ಯಮ್**
**ನ ಚಾದ್ವೈತಪರೋ ಭವೇತ್ ॥ 10–41**

ಶಂಕರನನ್ನು ಪ್ರೇರಕನನ್ನಾಗಿ ಮತ್ತು ತನ್ನನ್ನು ಪ್ರೇರ್ಯನನ್ನಾಗಿ ತಿಳಿದು ಪ್ರತಿದಿನವೂ ಭೇದದಿಂದಲೇ ಆ ಶಿವನನ್ನು (ಆ ಇಷ್ಟಲಿಂಗವನ್ನು) ಪೂಜಿಸಬೇಕು. ಅದ್ವೈತ ಪರನಾಗ ಕೂಡದು.

**ಪತಿಃ ಸಾಕ್ಷಾನ್ಮಹಾದೇವಃ**
**ಪಶುರೇಷ ತದಾಶ್ರಯಃ ।**
**ಅನಯೋಃ ಸ್ವಾಮಿಭೃತ್ಯತ್ವಮ್**
**ಅಭೇದೇ ಕಥಮಿಷ್ಯತೇ ॥ 10–42**

ಮಹಾದೇವನು ಸಾಕ್ಷಾತ್ ಪತಿಯಾಗಿರುತ್ತಾನೆ. ಅವನ ಆಶ್ರಯದಲ್ಲಿರುವ ಜೀವನು ಪಶುವಾಗಿರುತ್ತಾನೆ. ಇವರೀರ್ವರಲ್ಲಿಯ ಸ್ವಾಮಿ ಮತ್ತು ಭೃತ್ಯಕಭಾವವು ಅಭೇದ ಭಾವನೆ ಇದ್ದಾಗ ಹೇಗೆ ತಾನೇ ಸಂಬಂಧಿಸೀತು?

**ಸಾಕ್ಷಾತ್ಕೃತಂ ಪರಂ ತತ್ತ್ವಮ್**
**ಯದಾ ಭವತಿ ಬೋಧತಃ ।**
**ತದಾಽದ್ವೈತಸಮಾಪತ್ತಿಃ**
**ಜ್ಞಾನಹೀನಸ್ಯ ನ ಕ್ವಚಿತ್ ॥ 10–43**

ತತ್ತ್ವಬೋಧೆಯಿಂದ ಯಾವಾಗ ಪರತತ್ತ್ವವು ಸಾಕ್ಷಾತ್ಕಾರವಾಗುವುದೋ ಆಗ ಅದ್ವೈತ ಸ್ಥಿತಿಯು ಪ್ರಾಪ್ತವಾಗುವುದು. ಆದರೆ ಜ್ಞಾನಹೀನನಾದವನಿಗೆ ಅದು ಎಂದೂ ಉಂಟಾಗುವುದಿಲ್ಲ.

**ಭೇದಸ್ಯ ಕರ್ಮಹೇತುತ್ವಾದ್**

**ವ್ಯವಹಾರಃ ಪ್ರವರ್ತತೇ ।**
**ಲಿಂಗಪೂಜಾದಿಕರ್ಮಸ್ಥೋ**
**ನ ಚಾದ್ವೈತಂ ಸಮಾಚರೇತ್ ॥ 10–44**

ಭೇದ ವ್ಯವಹಾರವು (ಜೀವೇಶ್ವರರ ಭೇದ ವ್ಯವಹಾರವು) ಕರ್ಮಕ್ಕೆ ಹೇತುವಾಗಿರುತ್ತದೆ (ಶಿವಪೂಜಾದಿ ಕರ್ಮಕ್ಕೆ ಕಾರಣವಾಗಿ ಪ್ರವರ್ತವಾಗಿರುತ್ತದೆ). ಆದ್ದರಿಂದ ಲಿಂಗಪೂಜಾದಿ ಕರ್ಮದಲ್ಲಿ ನಿರತನಾದ ಮಾಹೇಶ್ವರನು ಅದ್ವೈತವನ್ನು ಆಚರಿಸಕೂಡದು.

**ಪೂಜಾದಿವ್ಯವಹಾರಃ ಸ್ಯಾತ್**
**ಭೇದಾಶ್ರಯತಯಾ ಸದಾ ।**
**ಲಿಂಗಪೂಜಾಪರಸ್ತಸ್ಮಾತ್**
**ನಾದ್ವೈತೇ ನಿರತೋ ಭವೇತ್ ॥ 10–45**

ಶಿವಪೂಜಾದಿ ವ್ಯವಹಾರವು ಭೇದವನ್ನು ಆಶ್ರಯಿಸಿಯೇ ಉಂಟಾಗುತ್ತದೆ. ಆದ್ದರಿಂದ ಯಾವಾಗಲೂ ಲಿಂಗಪೂಜಾಪರನಾದ ಮಾಹೇಶ್ವರನು ಅದ್ವೈತದಲ್ಲಿ ನಿರತನಾಗಕೂಡದು (ಆಸಕ್ತನಾಗಕೂಡದು).

*ಇತಿ ಸರ್ವಾದ್ವೈತನಿರಸನಸ್ಥಲಂ ಇಲ್ಲಿಗೆ ಸರ್ವಾದ್ವೈತನಿರಸನಸ್ಥಲವು ಮುಗಿಯಿತು.*

## 20. ಅಥ ಆಹ್ವಾನನಿರಸನಸ್ಥಲಮ್

ಈಗ ಆಹ್ವಾನನಿರಸನಸ್ಥಲವು

**(4 ಶ್ಲೋಕಗಳು)**

**ಲಿಂಗಾರ್ಚನಪರಃ ಶುದ್ಧಃ**
**ಸರ್ವಾದ್ವೈತನಿರಾಸಕಃ ।**
**ಸ್ವೇಷ್ಟಲಿಂಗೇ ಶಿವಾಕಾರೇ**
**ನ ತಮಾವಾಹಯೇಚ್ಛಿವಮ್ ॥ 10–46**

ಲಿಂಗಾರ್ಚನೆಯಲ್ಲಿ ತತ್ಪರನಾದ, ಅಂತೆಯೇ ಪರಿಶುದ್ಧನಾದ, ಈ ಸರ್ವಾದ್ವೈತ ನಿರಾಸಕನು ಶಿವಸ್ವರೂಪವಾದ ತನ್ನ ಇಷ್ಟಲಿಂಗದಲ್ಲಿ ಆ ಶಿವನನ್ನು ಆಹ್ವಾನ ಮಾಡಕೂಡದು.

**ಯದಾ ಶಿವಕಲಾಯುಕ್ತಮ್**
**ಲಿಂಗಂ ದದ್ಯಾನ್ಮಹಾಗುರುಃ ।**
**ತದಾರಭ್ಯ ಶಿವಸ್ತತ್ರ**
**ತಿಷ್ಠತ್ಯಾಹ್ವಾನಮತ್ರ ಕಿಮ್ ॥ 10–47**

ಮಹಾಗುರುವು ಶಿವಕಲಾಯುಕ್ತವಾದ ಲಿಂಗವನ್ನು ಯಾವಾಗ ಕೊಡುವನೋ ಆವಾಗಲಿಂದ ಆ ಶಿವಲಿಂಗದಲ್ಲಿ ಶಿವನು ಇರುವುದರಿಂದ ಮತ್ತೆ ಆಹ್ವಾನವನ್ನು ಮಾಡುವುದರಿಂದ ಯಾವ ಪ್ರಯೋಜನವೂ ಇಲ್ಲ.

**ಸಸಂಸ್ಕಾರೇಷು ಲಿಂಗೇಷು**
**ಸದಾ ಸನ್ನಿಹಿತಃ ಶಿವಃ ।**
**ತತ್ರಾಹ್ವಾನಂ ನ ಕರ್ತವ್ಯಮ್**
**ಪ್ರತಿಪತ್ತಿವಿರೋಧಕಮ್ ॥ 10–48**

ಸಂಸ್ಕಾರಯುಕ್ತವಾದ ಶಿವಲಿಂಗಗಳಲ್ಲಿ ಶಿವನು ಯಾವಾಗಲೂ ಸನ್ನಿಹಿತನಾಗಿರುತ್ತಾನೆ. ಆದ್ದರಿಂದ ಪ್ರತಿಪತ್ತಿಗೆ (ಭಕ್ತಿಗೆ) ವಿರೋಧವಾದ ಆಹ್ವಾನವನ್ನು ಮಾಡಕೂಡದು.

**ನಾಹ್ವಾನಂ ನ ವಿಸರ್ಗಂ ಚ**
**ಸ್ವೇಷ್ಟಲಿಂಗೇ ತು ಕಾರಯೇತ್ ।**
**ಲಿಂಗನಿಷ್ಠಾಪರೋ ನಿತ್ಯಮ್**
**ಇತಿ ಶಾಸ್ತ್ರಸ್ಯ ನಿಶ್ಚಯಃ ॥ 10-49**

ಲಿಂಗನಿಷ್ಠಾ ಪರನಾದವನು ನಿತ್ಯವೂ ತನ್ನ ಇಷ್ಟಲಿಂಗದಲ್ಲಿ ಆಹ್ವಾನವನ್ನಾಗಲೀ ಮತ್ತು ವಿಸರ್ಜನೆಯನ್ನಾಗಲೀ ಮಾಡಕೂಡದು. ಹೀಗೆ ಶಾಸ್ತ್ರದ ನಿರ್ಣಯವಿರುತ್ತದೆ.

*ಇತಿ ಆಹ್ವಾನನಿರಸನಸ್ಥಲಂ*
*ಇಲ್ಲಿಗೆ ಆಹ್ವಾನನಿರಸನಸ್ಥಲವು ಮುಗಿಯಿತು.*

## 21. ಅಥ ಅಷ್ಟಮೂರ್ತಿನಿರಸನಸ್ಥಲಮ್
ಈಗ ಅಷ್ಟಮೂರ್ತಿನಿರಸನಸ್ಥಲವು
**(7 ಶ್ಲೋಕಗಳು)**

**ಯಥಾऽऽತ್ಮಶಿವಯೋರೈಕ್ಯಮ್**
**ನ ಮತಂ ಕರ್ಮಸಂಗಿನಃ ।**
**ತಥಾ ಶಿವಾತ್ ಪೃಥಿವ್ಯಾದೇಃ**
**ಅದ್ವೈತಮಪಿ ನೇಷ್ಯತೇ ॥ 10-50**

ಕರ್ಮಸಂಗಿಯಾದ (ಇಷ್ಟಲಿಂಗ ಪೂಜಾರೂಪ ಕರ್ಮನಿಷ್ಠನಾದ) ಮಾಹೇಶ್ವರನ ಮತ್ತು ಶಿವನ ಐಕ್ಯವು ಹೇಗೆ ಸಮ್ಮತವಲ್ಲವೋ ಅದರಂತೆ ಶಿವನೊಂದಿಗೆ ಪೃಥಿವ್ಯಾದಿ ಮಹಾಭೂತಗಳ ಅದ್ವೈತವೂ ಸಹ ಅಪೇಕ್ಷಿತವಲ್ಲ.

**ಪೃಥಿವ್ಯಾದ್ಯಷ್ಟಮೂರ್ತಿತ್ವಮ್**
**ಈಶ್ವರಸ್ಯ ಪ್ರಕೀರ್ತಿತಮ್ ।**
**ತದಧಿಷ್ಠಾತೃಭಾವೇನ**
**ನ ಸಾಕ್ಷಾದೇಕಭಾವತಃ ॥ 10-51**

ಪೃಥಿವ್ಯಾದಿಗಳು ಈಶ್ವರನ ಅಷ್ಟಮೂರ್ತಿಗಳೆಂದು ಹೇಳಲ್ಪಟ್ಟಿವೆ. ಆದರೆ ಸಾಕ್ಷಾತ್ ಪೃಥಿವ್ಯಾದಿಗಳೇ ಈಶ್ವರನಲ್ಲ. ಅವುಗಳಿಗೆ ಅಧಿಷ್ಠಾತೃವಾದವನೇ ಈಶ್ವರನು.

**ಪೃಥ್ವ್ಯಾದಿಕಮಿದಂ ಸರ್ವಮ್**
**ಕಾರ್ಯಂ ಕರ್ತಾ ಮಹೇಶ್ವರಃ ।**
**ನೈತತ್ಸಾಕ್ಷಾನ್ಮಹೇಶೋऽಯಮ್**
**ಕುಲಾಲೋ ಮೃತ್ತಿಕಾ ಯಥಾ ॥ 10-52**

ಪೃಥಿವ್ಯಾದಿಗಳೆಲ್ಲವೂ ಕಾರ್ಯರೂಪವಾದವುಗಳು. ಮಹೇಶ್ವರನು ಅವುಗಳ
ಕರ್ತೃವಾಗಿದ್ದಾನೆ. ಕುಂಬಾರನು ಮಣ್ಣಿಗಿಂತ ಭಿನ್ನವಾಗಿರುವಂತೆ ಈ ಪೃಥಿವ್ಯಾದಿ ಗಳಿಗಿಂತ ಮಹೇಶ್ವರನು ಭಿನ್ನನಾಗಿದ್ದಾನೆ.

**ಪೃಥಿವ್ಯಾದ್ಯಾತ್ಮಪರ್ಯಂತ–**
**ಪ್ರಪಂಚೋ ಹ್ಯಷ್ಟಧಾ ಸ್ಥಿತಃ ।**
**ತನುರೀಶಸ್ಯ ಚಾತ್ಮಾಽಯಮ್**
**ಸರ್ವತತ್ತ್ವನಿಯಾಮಕಃ ॥ 10–53**

ಪೃಥ್ವಿಯನ್ನೇ ಮೊದಲು ಮಾಡಿಕೊಂಡು ಆತ್ಮಪರ್ಯಂತವಾದ (ಪೃಥ್ವಿ, ಅಪ್ಪು, ತೇಜ, ವಾಯು, ಆಕಾಶ, ಸೂರ್ಯ, ಚಂದ್ರ, ಜೀವಾತ್ಮ) ಪ್ರಪಂಚವು ಎಂಟು ಪ್ರಕಾರವಾಗಿರುತ್ತದೆ. ಈ ಎಂಟು ಪರಮಾತ್ಮನ ಶರೀರಗಳು, ಸರ್ವತತ್ತ್ವ ನಿಯಾಮಕನಾದ ಪರಮಾತ್ಮನು ಇವೆಲ್ಲವುಗಳ ಆತ್ಮರೂಪವಾಗಿರುತ್ತಾನೆ.

**ಶರೀರಭೂತಾದೇತಸ್ಮಾತ್**
**ಪ್ರಪಂಚಾತ್ ಪರಮೇಷ್ಠಿನಃ ।**
**ಆತ್ಮಭೂತಸ್ಯ ದೇವಸ್ಯ**
**ನಾಭೇದೋ ನ ಪೃಥಕ್ ಸ್ಥಿತಿಃ ॥ 10–54**

ಪರಶಿವನ ಶರೀರ ರೂಪವಾದ ಈ ಪ್ರಪಂಚಕ್ಕಿಂತಲೂ ಅವುಗಳ ಆತ್ಮರೂಪವಾದ ದೇವನು (ಶಿವನು) ಅವುಗಳೊಂದಿಗೆ ಅಭಿನ್ನನೂ ಅಲ್ಲ, ಅವುಗಳಂತೆ ಭಿನ್ನನೂ ಅಲ್ಲ.

**ಅಚೇತನತ್ವಾತ್ ಪೃಥ್ವ್ಯಾದೇಃ**
**ಅಜ್ಞತ್ವಾದ್ ಆತ್ಮನಸ್ತಥಾ ।**
**ಸರ್ವಜ್ಞಸ್ಯ ಮಹೇಶಸ್ಯ**
**ನೈಕರೂಪತ್ವಮಿಷ್ಯತೇ ॥ 10–55**

ಪೃಥಿವ್ಯಾದಿಗಳು ಅಚೇತನಗಳಾಗಿರುವುದರಿಂದ (ಜಡಗಳಾಗಿರುವುದರಿಂದ) ಮತ್ತು ಆತ್ಮನು (ಜೀವಾತ್ಮನು) ಅಲ್ಪಜ್ಞನಾಗಿರುವುದರಿಂದ, ಸರ್ವಜ್ಞನಾದ ಮಹೇಶನೊಂದಿಗೆ ಇವುಗಳ ಏಕರೂಪತೆಯನ್ನು ಇಚ್ಛಿಸಲಾಗುವುದಿಲ್ಲ.

**ಇತಿ ಯಶ್ಚಿಂತಯೇನ್ನಿತ್ಯಮ್**
**ಪೃಥ್ವ್ಯಾದೇರಷ್ಟಮೂರ್ತಿತಃ ।**
**ವಿಲಕ್ಷಣಂ ಮಹಾದೇವಮ್**
**ಸೋಽಷ್ಟಮೂರ್ತಿನಿರಾಸಕಃ ॥ 10–56**

ಈ ರೀತಿಯಾಗಿ ಪೃಥ್ವಿಯೇ ಮೊದಲಾದ ಆತ್ಮ ಪರ್ಯಂತಗಳಾದ ಅಷ್ಟಮೂರ್ತಿಗಳಿಗಿಂತಲೂ ಮಹಾದೇವನು ವಿಲಕ್ಷಣನಾಗಿದ್ದಾನೆ ಎಂಬುದಾಗಿ ಯಾವನು ನಿತ್ಯವೂ ಚಿಂತಿಸುವನೋ ಅವನು ಅಷ್ಟಮೂರ್ತಿ ನಿರಾಸಕನು.

***ಇತಿ ಅಷ್ಟಮೂರ್ತಿನಿರಸನಸ್ಥಲಂ*** *ಇಲ್ಲಿಗೆ ಅಷ್ಟಮೂರ್ತಿನಿರಸನಸ್ಥಲವು ಮುಗಿಯಿತು.*

## 22. ಅಥ ಸರ್ವಗತ್ವನಿರಸನಸ್ಥಲಮ್

ಈಗ ಸರ್ವಗತ್ವನಿರಸನಸ್ಥಲವು

**(7 ಶ್ಲೋಕಗಳು)**

**ಸರ್ವಗತ್ವೇ ಮಹೇಶಸ್ಯ**
**ಸರ್ವತ್ರಾರಾಧನಂ ಭವೇತ್ ।**
**ನ ಲಿಂಗಮಾತ್ರೇ ತನ್ನಿಷ್ಠೋ**
**ನ ಶಿವಂ ಸರ್ವಗಂ ಸ್ಮರೇತ್ ॥ 10–57**

ಮಹೇಶನು ಸರ್ವಗತನಾದರೆ (ಎಲ್ಲೆಡೆ ಇರುವವನಾದರೆ) ಎಲ್ಲೆಡೆಯಲ್ಲಿ ಆರಾಧನೆಯನ್ನು (ಪೂಜೆಯನ್ನು) ಮಾಡಬೇಕಾಗುವುದು. ಕೇವಲ ಇಷ್ಟಲಿಂಗದಲ್ಲಿ ಆರಾಧನೆಯನ್ನು ಮಾಡಲಿಕ್ಕಾಗುವುದಿಲ್ಲ. ಆದ್ದರಿಂದ ಲಿಂಗನಿಷ್ಠನಾದ ಮಾಹೇಶ್ವರನು ಶಿವನನ್ನು ಸರ್ವಗತನನ್ನಾಗಿ ಸ್ಮರಿಸಕೂಡದು.

**ಸರ್ವಗೋಽಪಿ ಸ್ಥಿತಃ ಶಂಭುಃ**
**ಸ್ವಾಧಾರೇ ಹಿ ವಿಶೇಷತಃ ।**
**ತಸ್ಮಾದನ್ಯತ್ರ ವಿಮುಖಃ**
**ಸ್ವೇಷ್ಟಲಿಂಗೇ ಯಜೇಚ್ಛಿವಮ್ ॥ 10–58**

ಶಂಭುವು ಸರ್ವವ್ಯಾಪಿಯಾಗಿದ್ದರೂ ಆಧಾರವಾದ ಇಷ್ಟಲಿಂಗದಲ್ಲಿ ಅವನ ವಿಶೇಷ ಸ್ಥಿತಿಯು ಇರುತ್ತದೆ. ಆದ್ದರಿಂದ ಅನ್ಯ ಸ್ಥಾನಗಳಿಂದ ವಿಮುಖನಾಗಿ (ಮಾಹೇಶ್ವರನು) ತನ್ನ ಇಷ್ಟಲಿಂಗದಲ್ಲಿ ಶಿವನನ್ನು ಪೂಜಿಸಬೇಕು.

**ಶಿವಃ ಸರ್ವಗತಶ್ಚಾಪಿ**
**ಸ್ವಾಧಾರೇ ವ್ಯಜ್ಯತೇ ಭೃಶಮ್ ।**
**ಶಮೀಗರ್ಭೇ ಯಥಾ ವಹ್ನಿಃ**
**ವಿಶೇಷೇಣ ವಿಭಾವ್ಯತೇ ॥ 10–59**

ಅಗ್ನಿಯು ಎಲ್ಲ ಮರಗಳಲ್ಲಿ ಅಡಕವಾಗಿದ್ದರೂ, ಬನ್ನಿಯ ಮರದೊಳಗೆ ಅದು ವಿಶೇಷವಾಗಿ ಭಾಸವಾಗುವಂತೆ (ತೋರುವಂತೆ), ಸರ್ವಗತನಾದ ಶಿವನೂ ಸಹ ತನಗೆ ಆಧಾರವಾದ ಇಷ್ಟಲಿಂಗದಲ್ಲಿ ವಿಶೇಷವಾಗಿ ಅಭಿವ್ಯಕ್ತನಾಗುತ್ತಾನೆ.

**ಸರ್ವಗತ್ವಂ ಮಹೇಶಸ್ಯ**
**ಸರ್ವಶಾಸ್ತ್ರವಿನಿಶ್ಚಿತಮ್ ।**
**ತಥಾಪ್ಯಾಶ್ರಯಲಿಂಗಾದೌ**
**ಪೂಜಾರ್ಥಮಧಿಕಾ ಸ್ಥಿತಿಃ ॥ 10–60**

ಮಹೇಶನು ಸರ್ವವ್ಯಾಪಕನೆಂಬುದು ಸರ್ವಶಾಸ್ತ್ರಗಳಿಂದ ನಿಶ್ಚಯಿಸಲಾಗಿದೆ. ಆದರೂ ಸಹ ತನಗೆ ಆಧಾರವಾದ ಇಷ್ಟಲಿಂಗದಲ್ಲಿಯೇ ಪೂಜಿಸಿಕೊಳ್ಳಲು ಅವನ ಅಸ್ತಿತ್ವವು ವಿಶೇಷವಾಗಿ ಇರುತ್ತದೆ.

**ನಿತ್ಯಂ ಭಾಸಿ ತದೀಯಸ್ತ್ವಮ್**
**ಯಾ ತೇ ರುದ್ರ ಶಿವಾ ತನೂಃ ।**
**ಅಘೋರಾಽಪಾಪಕಾಶೀತಿ**
**ಶ್ರುತಿರಾಹ ಸನಾತನೀ ॥ 10–61**

ಹೇ ರುದ್ರನೇ, ನಿನ್ನ ಲಿಂಗರೂಪವಾದ ಯಾವ ಶರೀರವಿದೆಯೋ ಅದು ಅಘೋರವಾದದ್ದು (ಶಾಂತವಾದುದು) ಮತ್ತು ಪಾಪರಹಿತರಾದ ಭಕ್ತರ ದೇಹದ ಮೇಲೆ ಯಾವಾಗಲೂ ಪ್ರಕಾಶಿಸುವಂತಹುದು ಎಂಬುದಾಗಿ ಸನಾತನವಾದ ಶ್ರುತಿಯು ಹೇಳುವುದು. ಆದ್ದರಿಂದ ನೀನು ನಿತ್ಯವೂ ಭಕ್ತರ ದೇಹದಲ್ಲಿ ಭಾಸಿಸುವೆ (ತೋರುವೆ).

**ತಸ್ಮಾತ್ ಸರ್ವಪ್ರಯತ್ನೇನ**
**ಸರ್ವಸ್ಥಾನಪರಾಙ್ಮುಖಃ ।**
**ಸ್ವೇಷ್ಟಲಿಂಗೇ ಮಹಾದೇವಮ್**
**ಪೂಜಯೇತ್ ಪೂಜಕೋತ್ತಮಃ ॥ 10–62**

ಆದ್ದರಿಂದ ಉತ್ತಮ ಪೂಜಕನಾದ ಮಾಹೇಶ್ವರನು ಎಲ್ಲ ಪ್ರಯತ್ನಗಳನ್ನು ಮಾಡಿ ಸರ್ವಸ್ಥಾನಗಳಿಂದ (ಬಹಿರಂಗದ) ಪರಾಙ್ಮುಖನಾಗಿ (ವಿಮುಖನಾಗಿ) ತನ್ನ ಇಷ್ಟಲಿಂಗದಲ್ಲಿಯೇ ಮಹಾದೇವನನ್ನು ಪೂಜಿಸಬೇಕು.

**ಶಿವಸ್ಯ ಸರ್ವಗತ್ವೇऽಪಿ**
**ಸರ್ವತ್ರ ರತಿವರ್ಜಿತಃ ।**
**ಸ್ವೇಷ್ಟಲಿಂಗೇ ಯಜನ್ ದೇವಮ್**
**ಸರ್ವಗತ್ವನಿರಾಸಕಃ ॥ 10-63**

ಶಿವನು ಸರ್ವತ್ರ ವ್ಯಾಪಕನಾಗಿದ್ದರೂ ಎಲ್ಲೆಡೆ ರತಿವರ್ಜಿತನಾದ (ಭಕ್ತಿ ವರ್ಜಿತನಾದ) ಮಾಹೇಶ್ವರನು ತನ್ನ ಇಷ್ಟಲಿಂಗದಲ್ಲಿಯೇ ಶಿವನನ್ನು ಪೂಜಿಸುತ್ತಾ ಸರ್ವಗತ್ವ ನಿರಾಸಕನು ಆಗುವನು.

*ಇತಿ ಸರ್ವಗತ್ವನಿರಸನಸ್ಥಲಂ* *ಇಲ್ಲಿಗೆ ಸರ್ವಗತ್ವನಿರಸನಸ್ಥಲವು ಮುಗಿಯಿತು.*

## 23. ಅಥ ಶಿವಜಗನ್ಮಯಸ್ಥಲಮ್
ಈಗ ಶಿವಜಗನ್ಮಯಸ್ಥಲವು
**(9 ಶ್ಲೋಕಗಳು)**

**ಪೂಜಾವಿಧೌ ನಿಯಮ್ಯತ್ವಾತ್**
**ಲಿಂಗಮಾತ್ರೇ ಸ್ಥಿತಂ ಶಿವಮ್ ।**
**ಪೂಜಯನ್ನಪಿ ದೇವಸ್ಯ**
**ಸರ್ವಗತ್ವಂ ವಿಭಾವಯೇತ್ ॥ 10-64**

(ಶಿವ)ಪೂಜಾವಿಧಿಯಲ್ಲಿ ನಿಯಮಿಸಿದಂತೆ ಇಷ್ಟಲಿಂಗ ಮಾತ್ರದಲ್ಲಿರುವ ಶಿವನನ್ನು ಪೂಜಿಸುತ್ತಿದ್ದರೂ ಮಾಹೇಶ್ವರನು ಆ ದೇವನನ್ನು (ಶಿವನನ್ನು) ಸರ್ವಗತನನ್ನಾಗಿ ಭಾವಿಸಬೇಕು.

**ಯಸ್ಮಾದೇತತ್ ಸಮುತ್ಪನ್ನಮ್**
**ಮಹಾದೇವಾಚ್ಚರಾಚರಮ್ ।**
**ತಸ್ಮಾದೇತನ್ನ ಭಿದ್ಯೇತ**
**ಯಥಾ ಕುಂಭಾದಿಕಂ ಮೃದಃ ॥ 10-65**

ಮಣ್ಣಿನಿಂದ ಮಾಡಿದ ಮಡಿಕೆಗಳು ಮಣ್ಣಿನಿಂದ ಭಿನ್ನವಾಗಿರದಂತೆ ಮಹಾದೇವನಿಂದ ಸಮುತ್ಪನ್ನವಾದ ಈ ಚರಾಚರ ಪ್ರಪಂಚವು ಅವನಿಂದ ಭಿನ್ನವಾಗಿರುವುದಿಲ್ಲ.

**ಶಿವತತ್ತ್ವಾತ್ ಸಮುತ್ಪನ್ನಮ್**
**ಜಗದಸ್ಮಾನ್ನ ಭಿದ್ಯತೇ ।**
**ಫೇನೋರ್ಮಿಬುದ್ಬುದಾಕಾರಮ್**
**ಯಥಾ ಸಿಂಧೋರ್ನ ಭಿದ್ಯತೇ ॥ 10-66**

ಸಮುದ್ರದಲ್ಲಿ ಹುಟ್ಟಿದ ನೆರೆತೆರೆ ಬುದ್ಬುದಗಳು ಸಮುದ್ರಕ್ಕಿಂತಲೂ ಭಿನ್ನವಾಗಿರದಂತೆ, ಶಿವತತ್ತ್ವದಿಂದ ಉತ್ಪನ್ನವಾದ ಜಗತ್ತೂ ಸಹ ಶಿವನಿಂದ ಭಿನ್ನವಾಗಿರುವುದಿಲ್ಲ.

**ಯಥಾ ತಂತುಭಿರುತ್ಪನ್ನಃ**
**ಪಟಸ್ತಂತುಮಯಃ ಸ್ಮೃತಃ ।**
**ತಥಾ ಶಿವಾತ್ ಸಮುತ್ಪನ್ನಮ್**
**ಶಿವ ಏವ ಚರಾಚರಮ್ ॥ 10-67**

ತಂತುಗಳಿಂದ (ಎಳೆಗಳಿಂದ) ಉತ್ಪನ್ನವಾದ ಪಟವು (ವಸ್ತ್ರವು) ಹೇಗೆ ತಂತುಮಯವಾಗಿರುವುದೋ ಅದರಂತೆ ಶಿವನಿಂದ ಉತ್ಪನ್ನವಾದ ಈ ಚರಾಚರ ಪ್ರಪಂಚವು ಶಿವಸ್ವರೂಪವೇ ಆಗಿರುತ್ತದೆ.

**ಆತ್ಮಶಕ್ತಿವಿಕಾಸೇನ**
**ಶಿವೋ ವಿಶ್ವಾತ್ಮನಾ ಸ್ಥಿತಃ ।**
**ಕುಟೀಭಾವಾದ್ ಯಥಾ ಭಾತಿ**
**ಪಟಃ ಸ್ವಸ್ಯ ಪ್ರಸಾರಣಾತ್ ॥ 10–68**

ಪಟವು ತನ್ನ ಪ್ರಸಾರಣದಿಂದ ಕುಟಿ (ಡೇರೆ) ರೂಪವನ್ನು ಹೇಗೆ ತಾಳುವುದೋ ಅದರಂತೆ ತನ್ನ ಶಕ್ತಿಯ ವಿಕಾಸದಿಂದ ಶಿವನು ವಿಶ್ವಾತ್ಮನಾಗಿರುತ್ತಾನೆ.

**ತಸ್ಮಾಚ್ಛಿವಮಯಂ ಸರ್ವಮ್**
**ಜಗದೇತಚ್ಚರಾಚರಮ್ ।**
**ತದಭಿನ್ನತಯಾ ಭಾತಿ**
**ಸರ್ಪತ್ವಮಿವ ರಜ್ಜುತಃ ॥ 10–69**

ರಜ್ಜುವು (ಹಗ್ಗವು) ಸರ್ಪತ್ವವನ್ನು ಪಡೆದು ರಜ್ಜುವಿನೊಂದಿಗೆ ಅಭಿನ್ನವಾಗಿ ತೋರುವಂತೆ ಚರಾಚರವಾದ ಸರ್ವಜಗತ್ತು ಶಿವಮಯವಾಗಿ ತೋರುವುದು.

**ರಜ್ಜೌ ಸರ್ಪತ್ವವದ್ ಭಾತಿ**
**ಶುಕ್ತೌ ಚ ರಜತತ್ವವತ್ ।**
**ಚೋರತ್ವವದಪಿ ಸ್ಥಾಣೌ**
**ಮರೀಚ್ಯಾಂ ಚ ಜಲತ್ವವತ್ ॥ 10–70**

**ಗಂಧರ್ವಪುರವದ್ವ್ಯೋಮ್ನಿ**
**ಸಚ್ಚಿದಾನಂದಲಕ್ಷಣೇ ।**
**ನಿರಸ್ತಭೇದಸದ್ಭಾವೇ**
**ಶಿವೇ ವಿಶ್ವಂ ವಿರಾಜತೇ ॥ 10–71**

ರಜ್ಜುವಿನಲ್ಲಿ ಸರ್ಪತ್ವವು, ಶುಕ್ತಿಯಲ್ಲಿ ರಜತ್ವವು, ಸ್ಥಾಣುವಿನಲ್ಲಿ (ಮೋಟು ಮರದಲ್ಲಿ) ಚೋರತ್ವವು ಮತ್ತು ಮೃಗಮರೀಚಿಕೆಯಲ್ಲಿ ಜಲತ್ವವು, ಆಕಾಶದಲ್ಲಿ ಗಂಧರ್ವಪುರವು ತೋರುವಂತೆ ಸಚ್ಚಿದಾನಂದ ಲಕ್ಷಣನಾದ ಭೇದರಹಿತನಾದ ಶಿವನಲ್ಲಿ ವಿಶ್ವವು ವಿರಾಜಿಸುತ್ತದೆ.

**ಪತ್ರಶಾಖಾದಿರೂಪೇಣ**
**ಯಥಾ ತಿಷ್ಠತಿ ಪಾದಪಃ ।**
**ತಥಾ ಭೂಮ್ಯಾದಿರೂಪೇಣ**
**ಶಿವ ಏಕೋ ವಿರಾಜತೇ ॥ 10–72**

ಪಾದಪವು (ವೃಕ್ಷವು) ಹೇಗೆ ಪತ್ರ ಶಾಖಾದಿ ರೂಪದಲ್ಲಿ ಇರುವುದೋ ಅದರಂತೆ ಭೂಮ್ಯಾದಿಗಳ ರೂಪದಲ್ಲಿ ಒಬ್ಬನೇ ಆದ ಶಿವನು ವಿರಾಜಿಸುತ್ತಾನೆ.

***ಇತಿ ಶಿವಜಗನ್ಮಯಸ್ಥಲಂ*** *ಇಲ್ಲಿಗೆ ಶಿವಜಗನ್ಮಯಸ್ಥಲವು ಮುಗಿಯಿತು.*

## 24. ಅಥ ಭಕ್ತದೇಹಿಕಲಿಂಗಸ್ಥಲಮ್
ಈಗ ಭಕ್ತದೇಹಿಕಲಿಂಗಸ್ಥಲವು
**(7 ಶ್ಲೋಕಗಳು)**

**ಸಮಸ್ತಜಗದಾತ್ಮಾಽಪಿ**
**ಶಂಕರಃ ಪರಮೇಶ್ವರಃ ।**
**ಭಕ್ತಾನಾಂ ಹೃದಯಾಂಭೋಜೇ**
**ವಿಶೇಷೇಣ ವಿರಾಜತೇ ॥ 10–73**

ಶಂಕರನಾದ (ಸರ್ವರಿಗೂ ಸುಖವನ್ನು ಕೊಡುವ) ಪರಮೇಶ್ವರನು ಸಮಸ್ತ ಜಗದಾತ್ಮವಾಗಿದ್ದರೂ (ಜಗತ್ತನ್ನು ವ್ಯಾಪಿಸಿಕೊಂಡಿದ್ದರೂ) ಭಕ್ತರ ಹೃದಯಕಮಲದಲ್ಲಿ ಇವನು ವಿಶೇಷವಾಗಿ ವಿರಾಜಿಸುತ್ತಾನೆ.

**ಕೈಲಾಸೇ ಮಂದರೇ ಚೈವ**
**ಹಿಮಾದ್ರೌ ಕನಕಾಚಲೇ ।**
**ಹೃದಯೇಷು ಚ ಭಕ್ತಾನಾಮ್**
**ವಿಶೇಷೇಣ ವ್ಯವಸ್ಥಿತಃ ॥ 10–74**

ಕೈಲಾಸ ಪರ್ವತ, ಮಂದಾರ ಪರ್ವತ, ಹಿಮಾಲಯ, ಕನಕಾಚಲ (ಮೇರು ಪರ್ವತ) ಗಳಲ್ಲಿ ಮತ್ತು ಭಕ್ತರ ಹೃದಯದಲ್ಲಿ ಶಿವನು ವಿಶೇಷವಾಗಿ ವಾಸಿಸುತ್ತಾನೆ.

**ಸರ್ವಾತ್ಮಾಽಪಿ ಪರಿಚ್ಛಿನ್ನೋ**
**ಯಥಾ ದೇಹೇಷು ವರ್ತತೇ ।**
**ತಥಾ ಸ್ವಕೀಯಭಕ್ತೇಷು**
**ಶಂಕರೋ ಭಾಸತೇ ಸದಾ ॥ 10–75**

ಶಂಕರನು ಸರ್ವಾತ್ಮನಾಗಿದ್ದರೂ ಸಹ ಎಲ್ಲಾ ಜೀವಿಗಳ ದೇಹದಲ್ಲಿ ಪರಿಚ್ಛಿನ್ನನಾಗಿ ಹೇಗೆ ಇರುವನೋ ಹಾಗೆ ತನ್ನ ಭಕ್ತರಲ್ಲಿ (ಭಕ್ತರ ಹೃದಯದಲ್ಲಿ) ಯಾವಾಗಲೂ ಪ್ರಕಾಶಿಸುತ್ತಾನೆ.

**ನಿತ್ಯಂ ಭಾತಿ ತ್ವದೀಯೇಷು**
**ಯಾ ತೇ ರುದ್ರ ಶಿವಾ ತನೂಃ ।**
**ಅಘೋರಾಽಪಾಪಕಾಶೀತಿ**
**ಶ್ರುತಿರಾಹ ಸನಾತನೀ ॥ 10–76**

ಹೇ ರುದ್ರನೇ, ನಿನ್ನ ಲಿಂಗರೂಪವಾದ ಯಾವ ಶರೀರವಿದೆಯೋ ಅದು ಅಘೋರವಾದುದು (ಶಾಂತವಾದುದು) ಮತ್ತು ಪಾಪರಹಿತರಾದ ಭಕ್ತರ ದೇಹದ ಮೇಲೆ ಯಾವಾಗಲೂ ಪ್ರಕಾಶಿಸುವಂತಹುದು ಎಂಬುದಾಗಿ ಸನಾತನವಾದ ಶ್ರುತಿಯು ಹೇಳುವುದು. ಆದ್ದರಿಂದ ನೀನು ನಿತ್ಯವೂ ಭಕ್ತರ ದೇಹದಲ್ಲಿ ಭಾವಿಸುವೆ (ತೋರುವೆ).

**ವಿಶುದ್ಧೇಷು ವಿರಕ್ತೇಷು**
**ವಿವೇಕಿಷು ಮಹಾತ್ಮಸು ।**
**ಶಿವಸ್ತಿಷ್ಠತಿ ಸರ್ವಾತ್ಮಾ**
**ಶಿವಲಾಂಛನಧಾರಿಷು ॥ 10–77**

ವಿಶುದ್ಧರಲ್ಲಿ (ಪರಿಶುದ್ಧರಲ್ಲಿ), ವಿರಕ್ತರಲ್ಲಿ, ವಿವೇಕಿಗಳಲ್ಲಿ, ಮಹಾತ್ಮರಲ್ಲಿ ಮತ್ತು ಶಿವಲಾಂಛನಧಾರಿಗಳಲ್ಲಿ ಸರ್ವಾತ್ಮನಾದ ಶಿವನು ಇರುತ್ತಾನೆ.

**ನಿತ್ಯಂ ಸಂತೋಷಯುಕ್ತಾನಾಮ್**
**ಜ್ಞಾನನಿರ್ಧೂತಕರ್ಮಣಾಮ್ ।**
**ಮಾಹೇಶ್ವರಾಣಾಮಂತಃಸ್ಥೋ**
**ವಿಭಾತಿ ಪರಮೇಶ್ವರಃ ॥ 10-78**

ಸಂತೋಷಯುಕ್ತರಾದ, ಜ್ಞಾನದಿಂದ ಕರ್ಮವನ್ನು ಕಳೆದುಕೊಂಡ ಮಾಹೇಶ್ವರರ ಅಂತರಂಗದಲ್ಲಿ ಪರಮೇಶ್ವರನು ನಿತ್ಯವಾಗಿ (ಯಾವಾಗಲೂ) ವಿಶೇಷವಾಗಿ ಭಾಸಿಸುತ್ತಾನೆ (ಪ್ರಕಾಶಿಸುತ್ತಾನೆ).

**ಅನ್ಯತ್ರ ಶಂಭೋ ರತಿಮಾತ್ರಶೂನ್ಯೋ**
**ನಿಜೇಷ್ಟಲಿಂಗೇ ನಿಯತಾಂತರಾತ್ಮಾ ।**
**ಶಿವಾತ್ಮಕಂ ವಿಶ್ವಮಿದಂ ವಿಬುಧ್ಯನ್**
**ಮಾಹೇಶ್ವರೋಽಸೌ ಭವತಿ ಪ್ರಸಾದೀ ॥ 10-79**

**– ಇಂದ್ರವಜ್ರಾ ವೃತ್ತಮ್**

ಬೇರೆಡೆಯಲ್ಲಿ ಶಂಭುವಿನ ಪ್ರೀತಿ ಇಲ್ಲದಿರುವ, ತನ್ನ ಇಷ್ಟಲಿಂಗದಲ್ಲಿಯೇ ಏಕಾಗ್ರವಾದ ಮನಸ್ಸುಳ್ಳ, ಈ ವಿಶ್ವವನ್ನು ಶಿವಸ್ವರೂಪವೆಂದು ತಿಳಿದುಕೊಂಡ ಆ ಮಾಹೇಶ್ವರನೇ ಪ್ರಸಾದಿಯಾಗುವನು.

***ಇತಿ ಭಕ್ತದೇಹಿಕಲಿಂಗಸ್ಥಲಂ*** *ಇಲ್ಲಿಗೆ ಭಕ್ತದೇಹಿಕಲಿಂಗಸ್ಥಲವು ಮುಗಿಯಿತು.*

***ಓಂ ತತ್ಸತ್ ಇತಿ***

***ಶ್ರೀ ಶಿವಗೀತೇಷು ಸಿದ್ಧಾಂತಾಗಮೇಷು ಶಿವಾದ್ವೈತವಿದ್ಯಾಯಾಂ ಶಿವಯೋಗಶಾಸ್ತ್ರೇ ಶ್ರೀರೇಣುಕಾಗಸ್ತ್ಯಸಂವಾದೇ ವೀರಶೈವಧರ್ಮನಿರ್ಣಯೇ ಶ್ರೀಶಿವಯೋಗಿಶಿವಾಚಾರ್ಯವಿರಚಿತೇ ಶ್ರೀಸಿದ್ಧಾಂತಶಿಖಾಮಣೌ ಮಾಹೇಶ್ವರಸ್ಥಲೇ ಮಾಹೇಶ್ವರಪ್ರಶಂಸಾದಿನವವಿಧಸ್ಥಲಪ್ರಸಂಗೋ ನಾಮ ದಶಮಃ ಪರಿಚ್ಛೇದಃ ॥***

*ಓಂ ತತ್ಸತ್ ಇತಿ ಶ್ರೀ ಶಿವನಿಂದ ಉಪದೇಶಿಸಲ್ಪಟ್ಟ ಶ್ರೀ ಸಿದ್ಧಾಂತಾಗಮಗಳಲ್ಲಿಯ ಶಿವಾದ್ವೈತವಿದ್ಯಾರೂಪವೂ, ಶಿವಯೋಗಶಾಸ್ತ್ರವೂ, ಶ್ರೀ ರೇಣುಕಾಗಸ್ತ್ಯಸಂವಾದ ರೂಪವೂ, ಶ್ರೀ ವೀರಶೈವಧರ್ಮನಿರ್ಣಯವೂ,*
*ಶ್ರೀ ಶಿವಯೋಗಿ ಶಿವಾಚಾರ್ಯ ವಿರಚಿತವೂ ಆದ ಶ್ರೀ ಸಿದ್ಧಾಂತ ಶಿಖಾಮಣಿಯಲ್ಲಿ ಮಾಹೇಶ್ವರಸ್ಥಲದಲ್ಲಿಯ ಮಾಹೇಶ್ವರಪ್ರಶಂಸಾದಿ ಒಂಭತ್ತು ವಿಧ ಸ್ಥಲಪ್ರಸಂಗವೆಂಬ ಹೆಸರಿನ ಹತ್ತನೆಯ ಪರಿಚ್ಛೇದ ಮುಗಿದುದು.*

## **ಏಕಾದಶಃ ಪರಿಚ್ಛೇದಃ**
## ಹನ್ನೊಂದನೆಯ ಪರಿಚ್ಛೇದವು

### **ಪ್ರಸಾದಿನಃ ಸಪ್ತವಿಧಸ್ಥಲಪ್ರಸಂಗಃ**
ಪ್ರಸಾದಿಯ ಸಪ್ತವಿಧ ಸ್ಥಲ ಪ್ರಸಂಗವು
**(77 ಶ್ಲೋಕಗಳು)**

### **ಪ್ರಸಾದಿಸ್ಥಲಮ್**
ಪ್ರಸಾದಿಸ್ಥಲವು
**(5 ಶ್ಲೋಕಗಳು)**

**॥ ಅಗಸ್ತ್ಯ ಉವಾಚ ॥**
**ಉಕ್ತೋ ಮಾಹೇಶ್ವರಃ ಸಾಕ್ಷಾತ್**
**ಲಿಂಗನಿಷ್ಠಾದಿಧರ್ಮವಾನ್ ।**
**ಕಥಮೇಷ ಪ್ರಸಾದೀತಿ**
**ಕಥ್ಯತೇ ಗಣನಾಯಕ ॥ 11-1**

ಹೇ ಗಣನಾಯಕನಾದ ರೇಣುಕನೇ, ಲಿಂಗನಿಷ್ಠಾದಿ ಧರ್ಮಗಳುಳ್ಳ ಸಾಕ್ಷಾತ್ ಮಾಹೇಶ್ವರನ ಸ್ವರೂಪವನ್ನು ನೀನು ಹೇಳಿದೆ. ಈ ಮಾಹೇಶ್ವರನು ಹೇಗೆ ತಾನೇ ಪ್ರಸಾದಿಯಾಗುತ್ತಾನೆ?

**॥ ಶ್ರೀ ರೇಣುಕ ಉವಾಚ ॥**
**ಲಿಂಗನಿಷ್ಠಾದಿಭಾವೇನ**
**ಧ್ವಸ್ತಪಾಪನಿಬಂಧನಃ ।**
**ಮನಃ ಪ್ರಸಾದಯೋಗೇನ**
**ಪ್ರಸಾದೀತ್ಯೇಷ ಕಥ್ಯತೇ ॥ 11-2**

ಲಿಂಗನಿಷ್ಠಾದಿ ಸ್ಥಲಗಳನ್ನು ಭಾವಿಸುವುದರಿಂದ (ತಿಳಿದು ಆಚರಿಸುವುದರಿಂದ) ಪಾಪಬಂಧನವನ್ನು ಧ್ವಂಸಮಾಡಿಕೊಂಡ, ಅಂತೆಯೇ ಮನಸ್ಸನ್ನು ಪ್ರಸನ್ನವಾಗಿಟ್ಟುಕೊಂಡ ಈ ಮಾಹೇಶ್ವರನು ಪ್ರಸಾದಿಯೆಂದು ಹೇಳಲ್ಪಡುತ್ತಾನೆ.

**ಪ್ರಸಾದಿಸ್ಥಲಮಿತ್ಯೇತತ್**
**ಅಸ್ಯ ಮಾಹಾತ್ಮ್ಯಬೋಧಕಮ್ ।**
**ಅಂತರಸ್ಥಲಭೇದೇನ**
**ಸಪ್ತಧಾ ಪರಿಕೀರ್ತಿತಮ್ ॥ 11-3**

ಈ ಪ್ರಸಾದಿ ಸ್ಥಲವು ಅದರ ಮಹಾತ್ಮ್ಯ ಬೋಧಕಗಳಾದ ಏಳು ವಿಧವಾದ ಅಂತರಸ್ಥಲ ಭೇದವುಳ್ಳದ್ದಾಗಿ ಹೇಳಲ್ಪಟ್ಟಿದೆ.

**ಪ್ರಸಾದಿಸ್ಥಲಮಾದೌ ತು**
**ಗುರುಮಾಹಾತ್ಮ್ಯಕಂ ತತಃ ।**
**ತತೋ ಲಿಂಗಪ್ರಶಂಸಾ ಚ**

**ತತೋ ಜಂಗಮಗೌರವಮ್ ॥ 11–4**

**ತತೋ ಭಕ್ತಸ್ಯ ಮಾಹಾತ್ಮ್ಯಮ್**
**ತತಃ ಶರಣಕೀರ್ತನಮ್ ।**
**ಶಿವಪ್ರಸಾದಮಾಹಾತ್ಮ್ಯಮ್**
**ಇತಿ ಸಪ್ತಪ್ರಕಾರಕಮ್ ।**
**ಕ್ರಮಾಲ್ಲಕ್ಷಣಮೇತೇಷಾಮ್**
**ಕಥಯಾಮಿ ಮಹಾಮುನೇ ॥ 11–5**

ಮೊದಲನೆಯದು ಪ್ರಸಾದಿಸ್ಥಲವು, ತದನಂತರ ಗುರುಮಹಾತ್ಮ್ಯಸ್ಥಲವು, ಅದಾದ ಮೇಲೆ ಲಿಂಗಪ್ರಶಂಶಾಸ್ಥಲವು. ತದನಂತರದಲ್ಲಿ ಜಂಗಮಗೌರವಸ್ಥಲವು (ಜಂಗಮಮಹಾತ್ಮ್ಯ ಸ್ಥಲವು) ನಂತರ ಭಕ್ತಮಹಾತ್ಮ್ಯ ಸ್ಥಲವು. ಅದಾದ ಮೇಲೆ ಶರಣ ಮಹಾತ್ಮ್ಯಸ್ಥಲವು. ನಂತರ ಶಿವಪ್ರಸಾದಮಹಾತ್ಮ್ಯ ಸ್ಥಲವು. –ಹೀಗೆ ಇದು ಏಳು ಪ್ರಕಾರದ ಅವಾಂತರ ಸ್ಥಲಗಳಿಂದ ಕೂಡಿಕೊಂಡಿರುತ್ತದೆ.

*ಇತಿ ಪ್ರಸಾದಿಸ್ಥಲಮ್* *ಇಲ್ಲಿಗೆ ಪ್ರಸಾದಿಸ್ಥಲವು ಮುಗಿದುದು*

## 25. ಅಥ ಪ್ರಸಾದಿಸ್ಥಲಮ್

ಈಗ ಪ್ರಸಾದಿಸ್ಥಲವು

**(13 ಶ್ಲೋಕಗಳು)**

**ನೈರ್ಮಲ್ಯಂ ಮನಸೋ ಲಿಂಗಮ್**
**ಪ್ರಸಾದ ಇತಿ ಕಥ್ಯತೇ ।**
**ಶಿವಸ್ಯ ಲಿಂಗರೂಪಸ್ಯ**
**ಪ್ರಸಾದಾದೇವ ಸಿದ್ಧ್ಯತಿ ॥ 11–6**

ಮನಸ್ಸಿನ ನಿರ್ಮಲತೆಯ ಚಿಹ್ನವೇ ಪ್ರಸಾದವೆಂದು ಕರೆಯಲ್ಪಡುತ್ತದೆ. ಇದು (ಮನಸ್ಸಿನ ನಿರ್ಮಲತೆಯು) ಲಿಂಗರೂಪನಾದ ಶಿವನ ಪ್ರಸಾದದಿಂದಲೇ (ಪ್ರಸಾದವನ್ನು ಸ್ವೀಕರಿಸುವುದರಿಂದಲೇ) ಸಿದ್ಧವಾಗುತ್ತದೆ.

**ಶಿವಪ್ರಸಾದಂ ಯದ್ದ್ರವ್ಯಮ್**
**ಶಿವಾಯ ವಿನಿವೇದಿತಮ್ ।**
**ನಿರ್ಮಾಲ್ಯಂ ತತ್ತು ಶೈವಾನಾಮ್**
**ಮನೋನೈರ್ಮಲ್ಯಕಾರಣಮ್ ॥ 11–7**

ಶಿವನಿಗೆ ನೈವೇದ್ಯ ಮಾಡಲ್ಪಟ್ಟ ಯಾವ ಪದಾರ್ಥವಿರುತ್ತಿದೆಯೋ ಅದುವೇ ಶಿವಪ್ರಸಾದವು. ಆ ಶಿವಪ್ರಸಾದ ರೂಪವಾದ ನಿರ್ಮಾಲ್ಯವು ಶಿವಭಕ್ತರ ಮನೋನೈರ್ಮಲ್ಯಕ್ಕೆ ಕಾರಣವಾಗಿರುತ್ತದೆ.

**ಮನಃ ಪ್ರಸಾದಸಿದ್ಧ್ಯರ್ಥಮ್**
**ನಿರ್ಮಲಜ್ಞಾನಕಾರಣಮ್ ।**
**ಶಿವಪ್ರಸಾದಂ ಸ್ವೀಕುರ್ವನ್**

**ಪ್ರಸಾದೀತ್ಯೇಷ ಕಥ್ಯತೇ ॥ 11–8**

ನಿರ್ಮಲ ಜ್ಞಾನಕ್ಕೆ ಕಾರಣೀಭೂತವಾದ ಶಿವಪ್ರಸಾದವನ್ನು ಮನಸ್ಸಿನ ಪ್ರಸನ್ನತೆಗಾಗಿ ಸ್ವೀಕರಿಸುವ ಮಾಹೇಶ್ವರನೇ ಪ್ರಸಾದಿಯೆಂದು ಕರೆಯಲ್ಪಡುತ್ತಾನೆ.

**ಅನ್ನಶುದ್ಧ್ಯಾ ಹಿ ಸರ್ವೇಷಾಮ್**
**ತತ್ತ್ವಶುದ್ಧಿರುದಾಹೃತಾ ।**
**ವಿಶುದ್ಧಮನ್ನಜಾತಂ ಹಿ**
**ಯಚ್ಛಿವಾಯ ಸಮರ್ಪಿತಮ್ ॥ 11–9**

ಅನ್ನಶುದ್ಧಿಯಿಂದಲೇ ಎಲ್ಲ ಜೀವಿಗಳ ತತ್ತ್ವಶುದ್ಧಿಯು (ದೇಹೇಂದ್ರಿಯಾದಿಗಳ ಶುದ್ಧಿಯು) ಹೇಳಲ್ಪಟ್ಟಿದೆ. ಶಿವನಿಗೆ ಸಮರ್ಪಿತವಾದ ಯಾವುದು ಶಿವನಿಗೆ ಸಮರ್ಪಿತವಾಗುವುದೋ, ಅದುವೆ ಶುದ್ಧವಾದ ಅನ್ನವು.

**ತದೇವ ಸರ್ವಕಾಲಂ ತು**
**ಭುಂಜಾನೋ ಲಿಂಗತತ್ಪರಃ ।**
**ಮನಃಪ್ರಸಾದಮತುಲಮ್**
**ಲಭತೇ ಜ್ಞಾನಕಾರಣಮ್ ॥ 11–10**

ಲಿಂಗನಿಷ್ಠವಾದ (ಪ್ರಸಾದಿಸ್ಥಲದ ಸಾಧಕನು) ಯಾವಾಗಲೂ ಆ ಲಿಂಗಾರ್ಪಿತವಾದ ಅನ್ನವನ್ನು ಭುಂಜಿಸುವವನಾಗಿ ಜ್ಞಾನಕ್ಕೆ ಕಾರಣವಾದ ಅಸದೃಶವಾದ ಮನಸ್ಸಿನ ಪ್ರಸನ್ನತೆಯನ್ನು ಪಡೆದುಕೊಳ್ಳುತ್ತಾನೆ.

**ಆತ್ಮಭೋಗಾಯ ನಿಯತಮ್**
**ಯದ್ಯದ್ ದ್ರವ್ಯಂ ಸಮಾಹಿತಮ್ ।**
**ತತ್ತತ್ ಸಮರ್ಪ್ಯ ದೇವಾಯ**
**ಭುಂಜೀತಾತ್ಮವಿಶುದ್ಧಯೇ ॥ 11–11**

ತನ್ನ ಭೋಗಕ್ಕಾಗಿ ಯಾವ ಯಾವ ದ್ರವ್ಯಗಳು ನಿಯತವಾಗಿವೆಯೋ (ನಿಶ್ಚಿತವಾಗಿವೆಯೋ) ತಾನು ಸಂಪಾದಿಸಿದ (ತಾನು ದುಡಿದು ಗಳಿಸಿದ) ಆ ಎಲ್ಲ ದ್ರವ್ಯಗಳನ್ನು ತನ್ನ ಆತ್ಮಶುದ್ಧಿಗಾಗಿ (ಮನಸ್ಸಿನ ಶುದ್ಧಿಗಾಗಿ) ದೇವನಿಗೆ (ತನ್ನ ಇಷ್ಟಲಿಂಗಕ್ಕೆ) ಸಮರ್ಪಿಸಿ ಭುಂಜಿಸಬೇಕು (ಸ್ವೀಕರಿಸಬೇಕು).

**ನಿತ್ಯಸಿದ್ಧೇನ ದೇವೇನ**
**ಭಿಷಜಾ ಜನ್ಮರೋಗಿಣಾಮ್ ।**
**ಯದ್ಯತ್ ಪ್ರಸಾದಿತಂ ಭುಕ್ತ್ವಾ**
**ತತ್ತಜ್ಜನ್ಮರಸಾಯನಮ್ ॥ 11–12**

ಜನ್ಮರೋಗಿಗಳಿಗೆ (ಭವರೋಗಿಗಳಿಗೆ) ವೈದ್ಯನಾದ, ನಿತ್ಯಸಿದ್ಧನಾದ (ಇಷ್ಟಲಿಂಗದಲ್ಲಿ ಸದಾ ಸನ್ನಿಹಿತನಾದ) ದೇವನಿಗೆ (ಶಿವನಿಗೆ) ಯಾವ ಯಾವ ಪದಾರ್ಥವು ಅರ್ಪಿಸಿ ಪ್ರಸಾದವಾಗಿರುವುದೋ ಅದನ್ನು ಸೇವಿಸುವುದು ಭವರೋಗಕ್ಕೆ ದಿವ್ಯಔಷಧವು.

**ಆರೋಗ್ಯಕಾರಣಂ ಪುಂಸಾಮ್**
**ಅಂತಃಕರಣಶುದ್ಧಿದಮ್ ।**
**ತಾಪತ್ರಯಮಹಾರೋಗ–**
**ಸಮುದ್ಧರಣಭೇಷಜಮ್ ॥ 11–13**

(ಈ ಪ್ರಸಾದವು) ಎಲ್ಲ ಜೀವಿಗಳ ಆರೋಗ್ಯಕ್ಕೆ ಕಾರಣವಾಗಿರುತ್ತದೆ. ಅಂತಃಕರಣದ ಶುದ್ಧಿಯನ್ನು ಮಾಡುತ್ತದೆ. ತಾಪತ್ರಯಗಳೆಂಬ ಮಹಾರೋಗವನ್ನು ನಿರ್ಮೂಲನ ಮಾಡುವ ದಿವ್ಯಔಷಧವಾಗಿರುತ್ತದೆ.

**ವಿದ್ಯಾವೈಶದ್ಯಕರಣಮ್**
**ವಿನಿಪಾತವಿಘಾತನಮ್ ।**
**ದ್ವಾರಂ ಜ್ಞಾನಾವತಾರಸ್ಯ**
**ಮೋಹಚ್ಛೇದಸ್ಯ ಕಾರಣಮ್ ॥ 11–14**

(ಈ ಪ್ರಸಾದವು) ವಿದ್ಯೆಯ ವಿಕಾಸಕ್ಕೆ ಕಾರಣವಾಗಿರುತ್ತದೆ. ವಿನಿಪಾತಗಳ (ಸಂಕಟಗಳ) ನಾಶಕವು ಆಗಿರುತ್ತದೆ. ಜ್ಞಾನದ ಆಗಮಕ್ಕೆ ಮಹಾದ್ವಾರವಾಗಿದ್ದು ಮೋಹವನ್ನು ನಾಶಗೊಳಿಸಲು ಕಾರಣವಾಗಿರುತ್ತದೆ.

**ವೈರಾಗ್ಯಸಂಪದೋ ಮೂಲಮ್**
**ಮಹಾನಂದಪ್ರವರ್ಧನಮ್ ।**
**ದುರ್ಲಭಂ ಪಾಪಚಿತ್ತಾನಾಮ್**
**ಸುಲಭಂ ಶುದ್ಧಕರ್ಮಣಾಮ್ ॥ 11–15**

(ಈ ಪ್ರಸಾದವು) ವೈರಾಗ್ಯವೆಂಬ ಸಂಪತ್ತಿಗೆ ಮೂಲಕಾರಣವಾಗಿರುತ್ತದೆ. ಮಹಾನಂದವನ್ನು ಹೆಚ್ಚಿಸುತ್ತದೆ. ಇದು ಪಾಪಿಗಳಿಗೆ ದುರ್ಲಭವಾಗಿದ್ದು ಶುದ್ಧ ಕರ್ಮವುಳ್ಳವರಿಗೆ (ಪುಣ್ಯಾತ್ಮರಿಗೆ) ಸುಲಭವಾಗುತ್ತದೆ.

**ಆದೃತಂ ಬ್ರಹ್ಮವಿಷ್ಣ್ವಾದ್ಯೈಃ**
**ವಸಿಷ್ಠಾದ್ಯೈಶ್ಚ ತಾಪಸೈಃ ।**
**ಶಿವಸ್ವೀಕೃತಮನ್ನಾದ್ಯಮ್**
**ಸ್ವೀಕಾರ್ಯಂ ಸಿದ್ಧಿಕಾಂಕ್ಷಿಭಿಃ ॥ 11–16**

ಬ್ರಹ್ಮ, ವಿಷ್ಣು ಮೊದಲಾದ ದೇವತೆಗಳಿಂದ ಮತ್ತು ವಸಿಷ್ಠ ಮೊದಲಾದ ತಪಸ್ವಿಗಳಿಂದ (ಮುನಿಗಳಿಂದ) ಈ ಪ್ರಸಾದವು ಸ್ವೀಕರಿಸಲ್ಪಟ್ಟಿದೆ. ಆದ್ದರಿಂದ ಸಿದ್ಧಿಕಾಂಕ್ಷಿಗಳು (ಮೋಕ್ಷಾಪೇಕ್ಷಿಗಳು) ಶಿವನಿಗೆ ಅರ್ಪಿಸಿದ ಅನ್ನಾದಿಗಳನ್ನು ಸ್ವೀಕರಿಸಬೇಕು.

**ಪತ್ರಂ ಪುಷ್ಪಂ ಫಲಂ ತೋಯಮ್**
**ಯಚ್ಛಿವಾಯ ನಿವೇದಿತಮ್ ।**
**ತತ್ತತ್ ಸ್ವೀಕಾರಯೋಗೇನ**
**ಸರ್ವಪಾಪಕ್ಷಯೋ ಭವೇತ್ ॥ 11–17**

ಶಿವನಿಗೆ ನಿವೇದಿಸಿದ (ಅರ್ಪಿಸಿದ) ಪತ್ರೆ, ಪುಷ್ಪ, ಫಲ ಮತ್ತು ಜಲ–ಇವುಗಳನ್ನು ಸ್ವೀಕರಿಸುವುದರಿಂದ ಸರ್ವಪಾಪಗಳ ಕ್ಷಯವು ಆಗುತ್ತದೆ.

**ಯಥಾ ಶಿವಪ್ರಸಾದಾನ್ನಮ್**
**ಸ್ವೀಕಾರ್ಯಂ ಲಿಂಗತತ್ಪರೈಃ ।**
**ತಥಾ ಗುರೋಃ ಪ್ರಸಾದಾನ್ನಮ್**
**ತಥೈವ ಶಿವಯೋಗಿನಾಮ್ ॥ 11–18**

ಲಿಂಗತತ್ಪರರಾದ (ಲಿಂಗನಿಷ್ಠರಾದ ಪ್ರಸಾದಿಸ್ಥಲದ ಸಾಧಕರು) ಯಾವ ರೀತಿಯಾಗಿ ಶಿವನ ಪ್ರಸಾದರೂಪವಾದ ಅನ್ನವನ್ನು ಸ್ವೀಕರಿಸುತ್ತಾರೆಯೋ ಹಾಗೆಯೇ ಗುರುವಿನ ಮತ್ತು ಶಿವಯೋಗಿಗಳ ಪ್ರಸಾದಾನ್ನವನ್ನು ಸಹ ಸ್ವೀಕರಿಸಬೇಕು (ಲಿಂಗ, ಗುರು, ಜಂಗಮ ಪ್ರಸಾದಗಳನ್ನು ಸ್ವೀಕರಿಸಬೇಕು).

***ಇತಿ ಪ್ರಸಾದಿಸ್ಥಲಂ*** *ಇಲ್ಲಿಗೆ ಪ್ರಸಾದಿಸ್ಥಲವು ಮುಗಿಯಿತು.*

## 26. ಅಥ ಗುರುಮಾಹಾತ್ಮ್ಯಸ್ಥಲಮ್
ಈಗ ಗುರುಮಾಹಾತ್ಮ್ಯ ಸ್ಥಲವು
**(6 ಶ್ಲೋಕಗಳು)**

**ಗುರುರೇವಾತ್ರ ಸರ್ವೇಷಾಮ್**
**ಕಾರಣಂ ಸಿದ್ಧಿಕರ್ಮಣಾಮ್ ।**
**ಗುರುರೂಪೋ ಮಹಾದೇವೋ**
**ಯತಃ ಸಾಕ್ಷಾದುಪಸ್ಥಿತಃ ॥ 11–19**

ಈ ಲೋಕದಲ್ಲಿ ಎಲ್ಲರ ಸಿದ್ಧಿಕರ್ಮಗಳಿಗೆ (ಭೋಗ, ಮೋಕ್ಷ, ಸಿದ್ಧಿಗಳಿಗೆ) ಗುರುವೇ ಕಾರಣನು. ಏಕೆಂದರೆ ಮಹಾದೇವನೇ ಸಾಕ್ಷಾತ್ ಗುರು ಸ್ವರೂಪವಾಗಿ ಉಪಸ್ಥಿತನಾಗಿದ್ದಾನೆ (ಪ್ರತ್ಯಕ್ಷವಾಗಿ ಇದ್ದಾನೆ).

**ನಿಷ್ಕಲೋ ಹಿ ಮಹಾದೇವೋ**
**ನಿತ್ಯಜ್ಞಾನಮಹೋದಧಿಃ ।**
**ಸಕಲೋ ಗುರುರೂಪೇಣ**
**ಸರ್ವಾನುಗ್ರಾಹಕೋ ಭವೇತ್ ॥ 11–20**

ನಿತ್ಯಜ್ಞಾನದ ಮಹೋದಧಿಯಾದ (ಮಹಾಸಾಗರನಾದ) ಮಹಾದೇವನು ನಿಷ್ಕಲನಾಗಿರುತ್ತಾನೆ (ನಿರಾಕಾರವಾಗಿರುತ್ತಾನೆ). ಅವನೇ ಸಕಲನಾಗಿ (ಸಾಕಾರನಾಗಿ) ಗುರುರೂಪದಿಂದ ಸರ್ವರನ್ನು ಅನುಗ್ರಹಿಸುತ್ತಾನೆ. (ಸ್ವಸ್ವರೂಪಜ್ಞಾನ ರೂಪವಾದ ಅನುಗ್ರಹವನ್ನು ಮಾಡುತ್ತಾನೆ ಹಾಗೂ ಭೋಗ ಮೋಕ್ಷಗಳನ್ನೂ ಸಹ ಅನುಗ್ರಹಿಸುತ್ತಾನೆ).

**ಯಃ ಶಿವಃ ಸ ಗುರುರ್ಜ್ಞೇಯೋ**
**ಯೋ ಗುರುಃ ಸ ಶಿವಃ ಸ್ಮೃತಃ ।**
**ನ ತಯೋರಂತರಂ ಕುರ್ಯಾದ್**
**ಜ್ಞಾನಾವಾಪ್ತೌ ಮಹಾಮತಿಃ ॥ 11–21**

ಯಾವನು ಶಿವನೋ ಅವನೇ ಗುರುವೆಂದು ತಿಳಿದುಕೊಳ್ಳಬೇಕು. ಮಹಾಮತಿಯಾದ ಪ್ರಸಾದಿಯು ಜ್ಞಾನದ ಪ್ರಾಪ್ತಿಗಾಗಿ ಅವರೀರ್ವರಲ್ಲಿ ಅಂತರವನ್ನು (ಭೇದವನ್ನು) ಮಾಡಬಾರದು.

**ಹಸ್ತಪಾದಾದಿಸಾಮ್ಯೇನ**
**ನೇತರೈಃ ಸದೃಶಂ ವದೇತ್ ।**
**ಆಚಾರ್ಯಂ ಜ್ಞಾನದಂ ಶುದ್ಧಮ್**
**ಶಿವರೂಪತಯಾ ಸ್ಥಿತಮ್ ॥ 11–22**

ಜ್ಞಾನವನ್ನು ಕೊಡುವ ಶುದ್ಧನಾದ ಶಿವಸ್ವರೂಪದಲ್ಲಿರುವ ಆಚಾರ್ಯನನ್ನು (ಗುರುವನ್ನು) ಹಸ್ತ ಪಾದಗಳ ಸಾಮ್ಯತೆಯಿಂದ ಇತರರೊಂದಿಗೆ ಸಮಾನನೆಂದು ಹೇಳಕೂಡದು.

**ಆಚಾರ್ಯಸ್ಯಾವಮಾನೇನ**
**ಶ್ರೇಯಃ ಪ್ರಾಪ್ತಿರ್ವಿಹನ್ಯತೇ ।**
**ತಸ್ಮಾನ್ನಿಃಶ್ರೇಯಸಪ್ರಾಪ್ತ್ಯೈ**
**ಪೂಜಯೇತ್ ತಂ ಸಮಾಹಿತಃ ॥ 11–23**

ಆಚಾರ್ಯನ (ಗುರುವಿನ) ಅವಮಾನವನ್ನು ಮಾಡುವುದರಿಂದ ಶ್ರೇಯಸ್ಸಿನ ಪ್ರಾಪ್ತಿಯು (ಮೋಕ್ಷಪ್ರಾಪ್ತಿಯು) ಉಂಟಾಗುವುದಿಲ್ಲ. ಆದ್ದರಿಂದ ಮುಕ್ತಿಯ ಪ್ರಾಪ್ತಿಗಾಗಿ ಆ ಗುರುವನ್ನು ಸಮಾಧಾನವಾದ ಮನಸ್ಸಿನಿಂದ ಪೂಜಿಸಬೇಕು.

**ಗುರುಭಕ್ತಿವಿಹೀನಸ್ಯ**
**ಶಿವಭಕ್ತಿರ್ನ ಜಾಯತೇ ।**
**ತತಃ ಶಿವೇ ಯಥಾ ಭಕ್ತಿಃ**
**ತಥಾ ಭಕ್ತಿರ್ಗುರಾವಪಿ ॥ 11–24**

ಗುರುಭಕ್ತಿ ಇಲ್ಲದವನಿಗೆ ಶಿವಭಕ್ತಿಯು ಉಂಟಾಗುವುದಿಲ್ಲ. ಆದ್ದರಿಂದ ಶಿವನಲ್ಲಿ ಯಾವ ರೀತಿಯಾಗಿ ಭಕ್ತಿಯನ್ನು ಮಾಡುವನೋ ಅದರಂತೆ ಗುರುವಿನಲ್ಲಿಯೂ ಭಕ್ತಿಯನ್ನು ಮಾಡಬೇಕು.

*ಇತಿ ಗುರುಮಾಹಾತ್ಮ್ಯಸ್ಥಲಂ* *ಇಲ್ಲಿಗೆ ಗುರುಮಾಹಾತ್ಮ್ಯ ಸ್ಥಲವು ಮುಗಿಯಿತು.*

## 27. ಅಥ ಲಿಂಗಮಾಹಾತ್ಮ್ಯಸ್ಥಲಮ್
ಈಗ ಲಿಂಗಮಾಹಾತ್ಮ್ಯ ಸ್ಥಲವು
**(10 ಶ್ಲೋಕಗಳು)**

**ಗುರುಮಾಹಾತ್ಮ್ಯಯೋಗೇನ**
**ನಿಜಜ್ಞಾನಾತಿರೇಕತಃ ।**
**ಲಿಂಗಸ್ಯಾಪಿ ಚ ಮಾಹಾತ್ಮ್ಯಮ್**
**ಸರ್ವೋತ್ಕೃಷ್ಟಂ ವಿಭಾವ್ಯತೇ ॥ 11–25**

ಗುರುಮಹಾತ್ಮೆಯ ದೆಸೆಯಿಂದ ಮತ್ತು ನಿಜವಾದ ಜ್ಞಾನದ ಅತಿರೇಕದಿಂದ (ತನಗುಂಟಾದ ಶಿವಜ್ಞಾನದ ಅತಿಶಯದಿಂದ) ಲಿಂಗದ ಮಹಾತ್ಮೆಯೂ ಸಹ ಸರ್ವೋತ್ಕೃಷ್ಟವಾಗಿ ತೋರುತ್ತದೆ.

**ಶಿವಸ್ಯ ಬೋಧಲಿಂಗಂ ಯದ್**
**ಗುರುಬೋಧಿತಚೇತಸಾ ।**
**ತದೇವ ಲಿಂಗಂ ವಿಜ್ಞೇಯಮ್**
**ಶಾಂಕರಂ ಸರ್ವಕಾರಣಮ್ ॥ 11–26**

ಶಿವನ ಚಿದ್ರೂಪದ ಚಿಹ್ನವೇ ಶಾಂಕರಲಿಂಗವು. ಇದುವೆ ಎಲ್ಲಕ್ಕೂ ಕಾರಣವಾಗಿರುತ್ತದೆ. ಇದನ್ನು ಗುರುವಿನ ಬೋಧನೆಯಿಂದುಂಟಾದ ಅರಿವಿನಿಂದಲೇ ತಿಳಿದುಕೊಳ್ಳಬೇಕು.

**ಪರಂ ಪವಿತ್ರಮಮಲಮ್**
**ಲಿಂಗಂ ಬ್ರಹ್ಮ ಸನಾತನಮ್ ।**
**ಶಿವಾಭಿಧಾನಂ ಚಿನ್ಮಾತ್ರಮ್**
**ಸದಾನಂದಂ ನಿರಂಕುಶಮ್ ॥ 11–27**

ಪರಮ ಪವಿತ್ರವೂ, ನಿರ್ಮಲವೂ, ಸನಾತನವೂ ಆದ ಬ್ರಹ್ಮತತ್ತ್ವವೇ ಲಿಂಗವು. ಚಿದ್ರೂಪವಾದ ಸದಾನಂದ ರೂಪವಾದ ಶಿವನೆಂಬ ಹೆಸರುಳ್ಳ ಆ ಲಿಂಗವು ನಿರಂಕುಶವಾದುದಾಗಿದೆ (ಈ ಲಿಂಗತತ್ತ್ವವೇ ಸರ್ವರ ಮೇಲೆ ಶಾಸನ ಮಾಡುವುದರಿಂದ, ಇದರ ಮೇಲೆ ಶಾಸನ ಮಾಡುವವರು ಬೇರಾರೂ ಇರುವುದಿಲ್ಲ).

**ಕಾರಣಂ ಸರ್ವಲೋಕಾನಾಮ್**

**ವೇದಾನಾಮಪಿ ಕಾರಣಮ್ ।**
**ಪೂರಣಂ ಸರ್ವತತ್ತ್ವಸ್ಯ**
**ತಾರಣಂ ಜನ್ಮವಾರಿಧೇಃ ॥ 11–28**

ಈ ಲಿಂಗವು ಸರ್ವಲೋಕಗಳಿಗೆ (ಹದಿನಾಲ್ಕು ಭುವನಗಳ ನಿರ್ಮಾಣಕ್ಕೆ) ಕಾರಣವಾಗಿದೆ. ವೇದಗಳ ಉತ್ಪತ್ತಿಗೂ ಸಹ ಇದುವೇ ಕಾರಣವಾಗಿದೆ. ಸರ್ವತತ್ತ್ವಗಳನ್ನೊಳಗೊಂಡ ಪರಿಪೂರ್ಣ ತತ್ತ್ವವಾಗಿದೆ ಮತ್ತು ಜನ್ಮವಾರಿಧಿಯನ್ನು (ಸಂಸಾರ ಸಾಗರವನ್ನು) ತಾರಣಗೊಳಿಸುವುದಾಗಿದೆ (ದಾಟಿಸುವಂತಹುದಾಗಿದೆ).

**ಜ್ಯೋತಿರ್ಮಯಮನಿರ್ದೇಶ್ಯಮ್**
**ಯೋಗಿನಾಮಾತ್ಮನಿ ಸ್ಥಿತಮ್ ।**
**ಕಥಂ ವಿಜ್ಞಾಯತೇ ಲೋಕೇ**
**ಮಹಾಗುರುದಯಾಂ ವಿನಾ ॥ 11–29**

ಯೋಗಿಗಳ ಹೃದಯದಲ್ಲಿರುವ ಜ್ಯೋತಿರ್ಮಯವಾದ (ಪ್ರಕಾಶಮಾನ ವಾದ), ಅನಿರ್ದೇಶ್ಯವಾದ (ತೋರಿಸಲು ಬಾರದಿರುವ ಆ ಲಿಂಗತತ್ತ್ವವು) ಈ ಲೋಕದಲ್ಲಿ ಮಹಾಗುರುವಿನ ದಯವಿಲ್ಲದೆ ಹೇಗೆ ತಾನೇ ತಿಳಿದುಕೊಳ್ಳಲು ಸಾಧ್ಯ ?

**ಬ್ರಹ್ಮಣಾ ವಿಷ್ಣುನಾ ಪೂರ್ವಮ್**
**ಯಲ್ಲಿಂಗಂ ಜ್ಯೋತಿರಾತ್ಮಕಮ್ ।**
**ಅಪರಿಚ್ಛೇದ್ಯಮಭವತ್**
**ಕೇನ ವಾ ಪರಿಚೋದ್ಯತೇ ॥ 11–30**

ಪೂರ್ವದಲ್ಲಿ ಜ್ಯೋತಿರೂಪವಾದ ಆ ಲಿಂಗವು ಬ್ರಹ್ಮ ಮತ್ತು ವಿಷ್ಣುಗಳಿಂದ ತಿಳಿದುಕೊಳ್ಳಲು ಅಸಾಧ್ಯವಾಯಿತು. ಅಂತಹ ಆ ಲಿಂಗವು ಯಾರಿಂದ ತಾನೇ ತಿಳಿದುಕೊಳ್ಳಲು ಸಾಧ್ಯವಾದೀತು?

**ಬಹುನಾತ್ರ ಕಿಮುಕ್ತೇನ**
**ಲಿಂಗಂ ಬ್ರಹ್ಮ ಸನಾತನಮ್ ।**
**ಯೋಗಿನೋ ಯತ್ರ ಲೀಯಂತೇ**
**ಮುಕ್ತಪಾಶನಿಬಂಧನಾಃ ॥ 11–31**

ಈ ಲಿಂಗದ ವಿಷಯದಲ್ಲಿ ಬಹಳಷ್ಟು ಹೇಳುವುದರಿಂದ ಏನು ಪ್ರಯೋಜನ? ಪಾಶಬಂಧನದಿಂದ ಮುಕ್ತರಾದ ಯೋಗಿಗಳು ಎಲ್ಲಿ ಲೀನವಾಗುತ್ತಾರೆಯೋ ಸನಾತನವಾದ ಆ ಬ್ರಹ್ಮತತ್ತ್ವವೇ ಲಿಂಗವು.

**ಪೀಠಿಕಾ ಪರಮಾ ಶಕ್ತಿಃ**
**ಲಿಂಗಂ ಸಾಕ್ಷಾತ್ ಪರಃ ಶಿವಃ ।**
**ಶಿವಶಕ್ತಿಸಮಾಯೋಗಮ್**
**ವಿಶ್ವಂ ಲಿಂಗಂ ತದುಚ್ಯತೇ ॥ 11–32**

ಪೀಠಿಕೆಯು (ಪಾಣಿಬಟ್ಟಲು) ಪರಮ ಶಕ್ತಿಸ್ವರೂಪವಾದುದು. ಲಿಂಗವು (ಬಾಣವು) ಸಾಕ್ಷಾತ್ ಪರಶಿವನ ಸ್ವರೂಪವಾಗಿರುತ್ತದೆ. ಈ ಶಿವ–ಶಕ್ತಿ ಸಂಯುಕ್ತವಾದ
ಲಿಂಗವೇ ವಿಶ್ವವೆಂಬುದಾಗಿ ಹೇಳಲ್ಪಟ್ಟಿರುತ್ತದೆ (ಅಖಂಡ ಚೈತನ್ಯಾತ್ಮಕ ಶಕ್ತಿ ಸ್ವರೂಪವಾದದ್ದೇ ಈ ವಿಶ್ವವು ಎಂದು ತಿಳಿದುಕೊಳ್ಳಬೇಕು).

**ಬ್ರಹ್ಮಾದಯಃ ಸುರಾಃ ಸರ್ವೇ**
**ಮುನಯಃ ಶೌನಕಾದಯಃ ।**
**ಶಿವಲಿಂಗಾರ್ಚನಾದೇವ**
**ಸ್ವಂ ಸ್ವಂ ಪದಮವಾಪ್ನುಯುಃ ॥ 11–33**

ಬ್ರಹ್ಮನೇ ಮೊದಲಾದ ಎಲ್ಲ ದೇವತೆಗಳು ಮತ್ತು ಶೌನಕಾದಿ ಮುನಿಗಳು ಈ ಶಿವಲಿಂಗಾರ್ಚನೆಯಿಂದಲೇ ತಮ್ಮ ತಮ್ಮ ಪದವಿಗಳನ್ನು ಪ್ರಾಪ್ತ ಮಾಡಿಕೊಳ್ಳುತ್ತಾರೆ.

**ವಿಶ್ವಾಧಿಪತ್ವಮೀಶಸ್ಯ**
**ಲಿಂಗಮೂರ್ತೇಃ ಸ್ವಭಾವಜಮ್ ।**
**ಅನನ್ಯದೇವಸಾದೃಶ್ಯಮ್**
**ಶ್ರುತಿರಾಹ ಸನಾತನೀ ॥ 11–34**

ಅನ್ಯದೇವತೆಗಳೊಡನೆ ಸಾದೃಶ್ಯತ್ವವು ಇಲ್ಲದಿರುವ ವಿಶ್ವಾಧಿಪತ್ವವು ಲಿಂಗಮೂರ್ತಿಯಾದ ಈಶ್ವರನಿಗೆ ಸ್ವಭಾವ ಸಿದ್ಧವಾದದ್ದು ಎಂದು ಸನಾತನವಾದ ಶ್ರುತಿಯು ಹೇಳುತ್ತದೆ.

*ಇತಿ ಲಿಂಗಮಾಹಾತ್ಮ್ಯಸ್ಥಲಂ*
*ಇಲ್ಲಿಗೆ ಲಿಂಗಮಾಹಾತ್ಮ್ಯ ಸ್ಥಲವು ಮುಗಿಯಿತು.*

## 28. ಅಥ ಜಂಗಮಮಾಹಾತ್ಮ್ಯಸ್ಥಲಮ್
ಈಗ ಜಂಗಮಮಾಹಾತ್ಮ್ಯ ಸ್ಥಲವು
**(10 ಶ್ಲೋಕಗಳು)**

**ಗುರುಶಿಷ್ಯಸಮಾರೂಢ–**
**ಲಿಂಗಮಾಹಾತ್ಮ್ಯಸಂಪದಃ ।**
**ಸರ್ವಂ ಚಿದ್ರೂಪವಿಜ್ಞಾನಾತ್**
**ಜಂಗಮಾಧಿಕ್ಯಮುಚ್ಯತೇ ॥ 11–35**

ಗುರು ಶಿಷ್ಯರಲ್ಲಿ ಸಮಾರೂಢವಾದ (ನೆಲೆಗೊಂಡ) ಲಿಂಗಮಾಹಾತ್ಮ್ಯ ರೂಪವಾದ ಸಂಪತ್ತಿನಿಂದ (ಜ್ಞಾನಸಂಪತ್ತಿನಿಂದ) ಸರ್ವವೆಲ್ಲವೂ ಚಿದ್ರೂಪವೆಂಬ ವಿಜ್ಞಾನ ಉಂಟಾಗಲು (ಅನುಭವ ಉಂಟಾಗಲು) ಅದುವೇ ಜಂಗಮಾಧಿಕ್ಯವೆಂದು ಹೇಳಲ್ಪಡುತ್ತದೆ.

**ಜಾನಂತ್ಯತಿಶಯಾದ್ ಯೇ ತು**
**ಶಿವಂ ವಿಶ್ವಪ್ರಕಾಶಕಮ್ ।**
**ಸ್ವಸ್ವರೂಪತಯಾ ತೇ ತು**
**ಜಂಗಮಾ ಇತಿ ಕೀರ್ತಿತಾಃ ॥ 11–36**

ವಿಶ್ವಪ್ರಕಾಶಕನಾದ ಶಿವನನ್ನು ಯಾರು ತನ್ನ ಸ್ವಸ್ವರೂಪನನ್ನಾಗಿ ವಿಶೇಷವಾಗಿ ತಿಳಿದುಕೊಳ್ಳುತ್ತಾರೆಯೋ ಅವರು ಜಂಗಮರೆಂದು ಕೀರ್ತಿಸಲ್ಪಡುತ್ತಾರೆ.

**ಯೇ ಪಶ್ಯಂತಿ ಜಗಜ್ಜಾಲಮ್**
**ಚಿದ್ರೂಪಂ ಶಿವಯೋಗತಃ ।**
**ನಿರ್ಧೂತಮಲಸಂಸ್ಪರ್ಶಾಃ**
**ತೇ ಸ್ಮೃತಾಃ ಶಿವಯೋಗಿನಃ ॥ 11–37**

ಯಾರು ಶಿವಯೋಗದಿಂದ ಈ ಜಗಜ್ಜಾಲವನ್ನು ಚಿದ್ರೂಪವಾಗಿ ಕಾಣುತ್ತಾರೆಯೋ ಮತ್ತು ಆಣವಾದಿ ಮಲಗಳ ಸಂಬಂಧವನ್ನು ನಿಶ್ಶೇಶವಾಗಿ ಕಳೆದುಕೊಂಡ ಆ ಜಂಗಮರೇ ಶಿವಯೋಗಿಗಳೆಂದು ಕರೆಸಿಕೊಳ್ಳುತ್ತಾರೆ.

**ಘೋರಸಂಸಾರತಿಮಿರ–**
**ಪರಿಧ್ವಂಸನಕಾರಣಮ್ ।**
**ಯೇಷಾಮಸ್ತಿ ಶಿವಜ್ಞಾನಮ್**
**ತೇ ಮತಾಃ ಶಿವಯೋಗಿನಃ ॥ 11–38**

ಘೋರವಾದ (ಭಯಂಕರವಾದ) ಸಂಸಾರರೂಪವಾದ ಕತ್ತಲೆಯನ್ನು ಪರಿಧ್ವಂಸ ಮಾಡಲು (ಸಮೂಲ ನಾಶಮಾಡಲು) ಕಾರಣವಾದ ಶಿವಜ್ಞಾನವು ಯಾರಲ್ಲಿ ಇರುತ್ತದೆಯೋ ಅವರೇ ಶಿವಯೋಗಿಗಳೆಂದು ಕರೆಯಿಸಿಕೊಳ್ಳುತ್ತಾರೆ.

**ಜಿತಕಾಮಾ ಜಿತಕ್ರೋಧಾ**
**ಮೋಹಗ್ರಂಥಿವಿಭೇದಿನಃ ।**
**ಸಮಲೋಷ್ಟಾಶ್ಮಕನಕಾಃ**
**ಸಾಧವಃ ಶಿವಯೋಗಿನಃ ॥ 11–39**

ಕಾಮ ಕ್ರೋಧಾದಿಗಳನ್ನು ಗೆದ್ದ, ಮೋಹಗ್ರಂಥಿಯನ್ನು ಭೇದಿಸಿಕೊಂಡ (ಮೋಹ ನಾಶಮಾಡಿಕೊಂಡ), ಮಣ್ಣು, ಕಲ್ಲು, ಬಂಗಾರಗಳನ್ನು ಸಮನಾಗಿ ತಿಳಿದುಕೊಂಡ ಸಾಧುಗಳೇ (ಸಜ್ಜನರೇ) ಶಿವಯೋಗಿಗಳು.

**ಸಮೌ ಶತ್ರೌ ಚ ಮಿತ್ರೇ ಚ**
**ಸಾಕ್ಷಾತ್ಕೃತಶಿವಾತ್ಮಕಾಃ ।**
**ನಿಃಸ್ಪೃಹಾ ನಿರಹಂಕಾರಾ**
**ವರ್ತಂತೇ ಶಿವಯೋಗಿನಃ ॥ 11–40**

ನಿರಹಂಕಾರಿಗಳೂ, ನಿಸ್ಪೃಹರೂ ಆದ ಮತ್ತು ಶಿವನನ್ನು ತನ್ನ ಆತ್ಮರೂಪವಾಗಿ ಸಾಕ್ಷಾತ್ಕರಿಸಿಕೊಂಡ ಶಿವಯೋಗಿಗಳು ಶತ್ರುಗಳಲ್ಲಿ ಮತ್ತು ಮಿತ್ರರಲ್ಲಿ ಸಮನಾಗಿ ವರ್ತಿಸುತ್ತಾರೆ.

**ದುರ್ಲಭಂ ಹಿ ಶಿವಜ್ಞಾನಮ್**
**ದುರ್ಲಭಂ ಶಿವಚಿಂತನಮ್ ।**
**ಯೇಷಾಮೇತದ್ ದ್ವಯಂ ಚಾಸ್ತಿ**
**ತೇ ಹಿ ಸಾಕ್ಷಾಚ್ಛಿವಾತ್ಮಕಾಃ ॥ 11–41**

ಶಿವಜ್ಞಾನವು ದುರ್ಲಭವಾದುದು. ಶಿವಚಿಂತನೆಯೂ ಸಹ ದುರ್ಲಭವಾದುದೇ. ಯಾರು ಇವೆರಡನ್ನೂ ಮಾಡುತ್ತಾರೆಯೋ (ಶಿವಜ್ಞಾನ ಮತ್ತು ಶಿವಚಿಂತನೆಯನ್ನು ಮಾಡುತ್ತಾರೆಯೋ) ಅವರು ನಿಶ್ಚಿತವಾಗಿ ಸಾಕ್ಷಾತ್ ಶಿವಸ್ವರೂಪರೇ ಆಗಿರುತ್ತಾರೆ.

**ಪಾದಾಗ್ರರೇಣವೋ ಯತ್ರ**
**ಪತಂತಿ ಶಿವಯೋಗಿನಾಮ್ ।**
**ತದೇವ ಸದನಂ ಪುಣ್ಯಮ್**
**ಪಾವನಂ ಗೃಹಮೇಧಿನಾಮ್ ॥ 11–42**

ಶಿವಯೋಗಿಗಳ ಪಾದದ ತುದಿಯಲ್ಲಿರುವ ಧೂಳಿನಕಣವು ಯಾರ
ಮನೆಯಲ್ಲಿ ಬೀಳುವುದೋ ಆ ಗೃಹಸ್ಥರ ಮನೆಯೇ ಪವಿತ್ರವಾದ ಪುಣ್ಯಕ್ಷೇತ್ರವಾಗುವುದು.

**ಸರ್ವಸಿದ್ಧಿಕರಂ ಪುಂಸಾಮ್**
**ದರ್ಶನಂ ಶಿವಯೋಗಿನಾಮ್ ।**
**ಸ್ಪರ್ಶನಂ ಪಾಪಶಮನಮ್**

**ಪೂಜನಂ ಮುಕ್ತಿಸಾಧನಮ್ ॥ 11–43**

ಶಿವಯೋಗಿಗಳ ದರ್ಶನವು ಎಲ್ಲ ಜೀವಿಗಳಿಗೆ ಸಕಲಸಿದ್ಧಿಯನ್ನುಂಟು ಮಾಡುವುದು. ಅವರ ಸ್ಪರ್ಶವು ಪಾಪವನ್ನು ಶಮನ ಮಾಡುವುದು. ಅವರನ್ನು ಪೂಜಿಸುವುದರಿಂದ ಮುಕ್ತಿಯು ಲಭಿಸುವುದು.

**ಮಹತಾಂ ಶಿವತಾತ್ಪರ್ಯ–**
**ವೇದಿನಾಮನುಮೋದಿನಾಮ್ ।**
**ಕಿಂ ವಾ ಫಲಂ ನ ಸಿದ್ಧ್ಯೇತ**
**ಸಂಪರ್ಕಾಚ್ಛಿವಯೋಗಿನಾಮ್ ॥ 11–44**

ಶಿವತತ್ತ್ವದ ತಾತ್ಪರ್ಯಗಳನ್ನು (ರಹಸ್ಯಾರ್ಥವನ್ನು) ತಿಳಿದಿರುವ ಮತ್ತು ಅದನ್ನು ಅನುಭವಿಸಿ ಆನಂದಿಸುತ್ತಿರುವ ಶಿವಯೋಗಿಗಳ ಸಂಪರ್ಕದಿಂದ ಯಾವ ಫಲವು ತಾನೇ ಸಿದ್ಧಿಸುವುದಿಲ್ಲ?

*ಇತಿ ಜಂಗಮಮಾಹಾತ್ಮ್ಯಸ್ಥಲಂ ಇಲ್ಲಿಗೆ ಜಂಗಮ ಮಾಹಾತ್ಮ್ಯಸ್ಥಲವು ಮುಗಿಯಿತು.*

## 29. ಅಥ ಭಕ್ತಮಾಹಾತ್ಮ್ಯ ಸ್ಥಲಮ್
ಈಗ ಭಕ್ತಮಹಾತ್ಮ್ಯ ಸ್ಥಲವು
**(12 ಶ್ಲೋಕಗಳು)**

**ಗುರೋರ್ಲಿಂಗಸ್ಯ ಮಾಹಾತ್ಮ್ಯ–**
**ಕಥನಾಚ್ಛಿವಯೋಗಿನಾಮ್ ।**
**ಸಿದ್ಧಂ ಭಕ್ತಸ್ಯ ಮಾಹಾತ್ಮ್ಯಮ್**
**ತಥಾಪ್ಯೇಷ ಪ್ರಶಸ್ಯತೇ ॥ 11–45**

ಶ್ರೀಗುರುವಿನ, ಲಿಂಗದ ಮತ್ತು ಶಿವಯೋಗಿಗಳ ಮಹಾತ್ಮ್ಯವನ್ನು ಹೇಳುವುದರಿಂದ ಭಕ್ತನ ಮಹಾತ್ಮ್ಯವು ಸಿದ್ಧವಾಗುತ್ತದೆ. ಆದರೂ ಸಹ ಅದನ್ನು ಪ್ರಶಂಸಿಸಲಾಗುವುದು.

**ಯೇ ಭಜಂತಿ ಮಹಾದೇವಮ್**
**ಪರಮಾತ್ಮಾನಮವ್ಯಯಮ್ ।**
**ಕರ್ಮಣಾ ಮನಸಾ ವಾಚಾ**
**ತೇ ಭಕ್ತಾ ಇತಿ ಕೀರ್ತಿತಾಃ ॥ 11–46**

ಅವ್ಯಯನೂ (ನಾಶರಹಿತನೂ), ಪರಮಾತ್ಮನೂ (ಸರ್ವಾತ್ಮನೂ) ಆದ ಮಹಾದೇವನನ್ನು ಯಾರು ಕ್ರಿಯೆ, ವಾಣಿ ಮತ್ತು ಮನಸ್ಸುಗಳಿಂದ (ತ್ರಿಕರಣಗಳಿಂದ) ಭಜಿಸುತ್ತಾರೆಯೋ (ಪೂಜಿಸುತ್ತಾರೆಯೋ) ಅವರೇ ಭಕ್ತರೆಂದು ಹೇಳಲ್ಪಡುತ್ತಾರೆ.

**ದುರ್ಲಭಾ ಹಿ ಶಿವೇ ಭಕ್ತಿಃ**
**ಸಂಸಾರಭಯತಾರಿಣೀ ।**
**ಸಾ ಯತ್ರ ವರ್ತತೇ ಸಾಕ್ಷಾತ್**
**ಸ ಭಕ್ತಃ ಪರಿಗೀಯತೇ ॥ 11–47**

ಸಂಸಾರ ಭಯದಿಂದ ಪಾರು ಮಾಡುವ ಶಿವನಲ್ಲಿರುವ ಭಕ್ತಿಯು ನಿಶ್ಚಯವಾಗಿ ದುರ್ಲಭವಾದುದು. ಆ ಭಕ್ತಿಯು ಯಾರಲ್ಲಿ ಸಾಕ್ಷಾತ್ (ಪ್ರತ್ಯಕ್ಷವಾಗಿ) ಇರುತ್ತದೆಯೋ ಅವನೇ ಭಕ್ತನೆಂದು ವಿಶೇಷವಾಗಿ ಹೇಳಲ್ಪಡುತ್ತಾನೆ.

**ಕಿಂ ವೇದೈಃ ಕಿಂ ತತಃ ಶಾಸ್ತ್ರೈಃ**
**ಕಿಂ ಯಜ್ಞೈಃ ಕಿಂ ತಪೋವ್ರತೈಃ ।**
**ನಾಸ್ತಿ ಚೇಚ್ಛಾಂಕರೀ ಭಕ್ತಿಃ**
**ದೇಹಿನಾಂ ಜನ್ಮರೋಗಿಣಾಮ್ ॥ 11–48**

ಜನ್ಮರೋಗಿಗಳಾದ (ಭವರೋಗ ಪೀಡಿತರಾದ) ದೇಹಿಗಳಿಗೆ (ಜೀವಾತ್ಮರುಗಳಿಗೆ) ಶಾಂಕರೀ ಭಕ್ತಿಯು (ಶಿವಭಕ್ತಿಯು) ಇಲ್ಲದೆ ಇದ್ದರೆ, ವೇದಗಳ ಅಧ್ಯಯನದಿಂದ, ಅದರಂತೆ ಶಾಸ್ತ್ರಗಳ ಅಧ್ಯಯನದಿಂದ, ಯಜ್ಞಗಳಿಂದ (ಶಿವಪೂಜಾದಿಗಳಿಂದ) ಮತ್ತು ತಪೋವ್ರತಗಳಿಂದ ಏನೂ ಪ್ರಯೋಜನವಾಗಲಾರದು (ಭಕ್ತಿ ಇಲ್ಲದೆ ಮಾಡಿದ ಎಲ್ಲ ಕ್ರಿಯೆಗಳು ವ್ಯರ್ಥವಾಗುತ್ತವೆ).

**ಶಿವಭಕ್ತಿವಿಹೀನಸ್ಯ**
**ಸುಕೃತಂ ಚಾಪಿ ನಿಷ್ಫಲಮ್ ।**
**ವಿಪರೀತಫಲಂ ಚ ಸ್ಯಾದ್**
**ದಕ್ಷಸ್ಯಾಪಿ ಮಹಾಧ್ವರೇ ॥ 11–49**

ಶಿವಭಕ್ತಿ ಇಲ್ಲದವನ ಪುಣ್ಯಕರ್ಮವೂ ಕೂಡ ನಿಷ್ಫಲವಾಗುತ್ತದೆ ಮತ್ತು ಮಹಾಯಜ್ಞವನ್ನು ಮಾಡಿದ ದಕ್ಷ ಬ್ರಹ್ಮನಂತೆ ವಿಪರೀತ ಫಲವನ್ನು ಕೊಡುವಂತಹುದು ಸಹ ಆಗುತ್ತದೆ.

**ಅತ್ಯಂತಪಾಪಕರ್ಮಾಽಪಿ**
**ಶಿವಭಕ್ತ್ಯಾ ವಿಶುದ್ಧ್ಯತಿ ।**
**ಚಂಡೋ ಯಥಾ ಪುರಾ ಭಕ್ತ್ಯಾ**
**ಪಿತೃಹಾಽಪಿ ಶಿವೋಽಭವತ್ ॥ 11–50**

ಅತ್ಯಂತ ಪಾಪಕರ್ಮವನ್ನು ಮಾಡಿದವನೂ ಸಹ ಶಿವಭಕ್ತಿಯಿಂದ ಪರಿಶುದ್ಧನಾಗುತ್ತಾನೆ. ಹೇಗೆಂದರೆ ಪೂರ್ವಕಾಲದಲ್ಲಿ ಚಂಡನೆಂಬುವನು ತನ್ನ ತಂದೆಯನ್ನು ಕೊಂದರೂ ಸಹ ತಾನು ಮಾಡಿದ ಶಿವಭಕ್ತಿಯಿಂದ ಶಿವಸ್ವರೂಪನಾದನು.

**ಸುಕೃತಂ ದುಷ್ಕೃತಂ ಚಾಪಿ**
**ಶಿವಭಕ್ತಸ್ಯ ನಾಸ್ತಿ ಹಿ ।**
**ಶಿವಭಕ್ತಿವಿಹೀನಾನಾಮ್**
**ಕರ್ಮಪಾಶನಿಬಂಧನಮ್ ॥ 11–51**

ಶಿವಭಕ್ತನಾದವನಿಗೆ ಸುಕೃತ (ಪುಣ್ಯ)ವೇ ಆಗಲಿ, ದುಷ್ಕೃತ (ಪಾಪ)ವೇ ಆಗಲಿ ಇರುವುದಿಲ್ಲ. (ಆದರೆ) ಶಿವಭಕ್ತಿ ಇಲ್ಲದವರಿಗೆ ಕರ್ಮಪಾಶದ ಬಂಧನವು ಉಂಟಾಗುವುದು.

**ಶಿವಾಶ್ರಿತಾನಾಂ ಜಂತೂನಾಮ್**
**ಕರ್ಮಣಾ ನಾಸ್ತಿ ಸಂಗಮಃ ।**
**ವಾಜಿನಾಂ ದಿನನಾಥಸ್ಯ**
**ಕಥಂ ತಿಮಿರಜಂ ಭಯಮ್ ॥ 11–52**

ದಿನನಾಥನ (ಸೂರ್ಯನ) ವಾಜಿಗಳಿಗೆ (ಕುದುರೆಗಳಿಗೆ) ಹೇಗೆ ಕತ್ತಲೆಯಿಂದ ಉಂಟಾದ ಭಯವು ಇರುವುದಿಲ್ಲವೋ ಅದರಂತೆ ಶಿವನನ್ನು ಆಶ್ರಯಿಸಿದ ಜೀವಿಗಳಿಗೆ ಪುಣ್ಯ–ಪಾಪ ಕರ್ಮಗಳ ಸಂಗವು ಇರುವುದಿಲ್ಲ.

**ನಿರೋದ್ಧುಂ ನ ಕ್ಷಮಂ ಕರ್ಮ**
**ಶಿವಭಕ್ತಾನ್ ವಿಶೃಂಖಲಾನ್ ।**

**ಕಥಂ ಮತ್ತಗಜಾನ್ ರುಂಧೇತ್**
**ಶೃಂಖಲಾ ಬಿಸತಂತುಜಾ ॥ 11–53**

ತಾವರೆಯ ತಂತುಗಳಿಂದ ನಿರ್ಮಿಸಿದ ಶೃಂಖಲೆಯು (ಸರಪಳಿಯು) ಮದೋನ್ಮತ್ತವಾದ ಆನೆಯನ್ನು ಹೇಗೆ ತಡೆದು ನಿಲ್ಲಿಸಲಾರದೋ ಹಾಗೆ ವಿಶೃಂಖಲರಾದ (ಮಲ ಬಂಧನದಿಂದ ಮುಕ್ತರಾದ) ಶಿವಭಕ್ತರನ್ನು ಕರ್ಮಗಳು ತಡೆಯಲು ಸಮರ್ಥವಾಗುವುದಿಲ್ಲ.

**ಬ್ರಾಹ್ಮಣಃ ಕ್ಷತ್ರಿಯೋ ವಾಽಪಿ**
**ವೈಶ್ಯೋ ವಾ ಶೂದ್ರ ಏವ ವಾ ।**
**ಅಂತ್ಯಜೋ ವಾ ಶಿವೇ ಭಕ್ತಃ**
**ಶಿವವನ್ಮಾನ್ಯ ಏವ ಸಃ ॥ 11–54**

ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಇಲ್ಲವೆ ಅಂತ್ಯಜ – ಇವರಲ್ಲಿ ಯಾರೇ ಆದರೂ ಶಿವನಲ್ಲಿ ಭಕ್ತಿಯುಳ್ಳವನಾದರೆ ಅವನು ಶಿವನಂತೆಯೇ ಮಾನ್ಯನಾಗುತ್ತಾನೆ (ಗೌರವ ಯೋಗ್ಯನಾಗುತ್ತಾನೆ).

**ಶಿವಭಕ್ತಿಸಮಾವೇಶೇ**
**ಕ್ವ ಜಾತಿಪರಿಕಲ್ಪನಾ ।**
**ಇಂಧನೇಷ್ವಗ್ನಿದಗ್ಧೇಷು**
**ಕೋ ವಾ ಭೇದಃ ಪ್ರಕೀರ್ತ್ಯತೇ ॥ 11–55**

ಅಗ್ನಿಯಿಂದ ದಗ್ಧಗಳಾದ ಇಂಧನಗಳಲ್ಲಿ (ವಿವಿಧ ಕಟ್ಟಿಗೆಗಳಲ್ಲಿ) ಜಾತಿಭೇದವು ಹೇಗೆ ಹೇಳಲು ಬರುವುದಿಲ್ಲವೋ ಅದರಂತೆ ಶಿವಭಕ್ತಿಯು ಸಮಾವೇಶವಾದ ಮೇಲೆ (ಶಿವಭಕ್ತಿಯ ಪ್ರವೇಶವಾದ ಮೇಲೆ) ಪೂರ್ವದ ಬ್ರಾಹ್ಮಣಾದಿ ಜಾತಿಗಳ ಪರಿಕಲ್ಪನೆಯು ಉಂಟಾಗುವುದಿಲ್ಲ.

**ಶುದ್ಧಾ ನಿಯಮಸಂಯುಕ್ತಾಃ**
**ಶಿವಾರ್ಪಿತಫಲಾಗಮಾಃ ।**
**ಅರ್ಚಯಂತಿ ಶಿವಂ ಲೋಕೇ**
**ವಿಜ್ಞೇಯಾಸ್ತೇ ಗಣೇಶ್ವರಾಃ ॥ 11–56**

ಶುದ್ಧರಾಗಿ (ದೀಕ್ಷೆಯಿಂದ ಪರಿಶುದ್ಧರಾಗಿ) ನಿಯಮಯುಕ್ತರಾಗಿ (ಶಿವಾರ್ಚನೆಯ ನೇಮ ಸಂಪನ್ನರಾಗಿ) ಎಲ್ಲ ಫಲಗಳನ್ನು ಶಿವನಿಗೆ ಸಮರ್ಪಿಸಿ ಯಾರು ಈ ಲೋಕದಲ್ಲಿ ಶಿವನನ್ನು ಅರ್ಚಿಸುತ್ತಾರೆಯೋ ಅವರು ಗಣೇಶ್ವರರೆಂತಲೇ (ಶಿವಗಣರೆಂತಲೇ) ತಿಳಿದುಕೊಳ್ಳಬೇಕು.

***ಇತಿ ಭಕ್ತಮಾಹಾತ್ಮ್ಯಸ್ಥಲಂ*** *ಇಲ್ಲಿಗೆ ಭಕ್ತಮಾಹಾತ್ಮ್ಯ ಸ್ಥಲವು ಮುಗಿಯಿತು.*

## 30. ಅಥ ಶರಣಮಾಹಾತ್ಮ್ಯಸ್ಥಲಮ್

ಈಗ ಶರಣಮಾಹಾತ್ಮ್ಯ ಸ್ಥಲವು

**(10 ಶ್ಲೋಕಗಳು)**

**ಗುರುಲಿಂಗಾದಿ ಮಾಹಾತ್ಮ್ಯ–**

**ಬೋಧಾನ್ವೇಷಣಸಂಗತಃ ।**
**ಸರ್ವಾತ್ಮನಾ ಶಿವಾಪತ್ತಿಃ**
**ಶರಣಸ್ಥಾನಮುಚ್ಯತೇ ॥ 11–57**

ಗುರು ಲಿಂಗಾದಿ ಮಾಹಾತ್ಮ್ಯದ (ಗುರು, ಲಿಂಗ, ಜಂಗಮ ಮತ್ತು ಭಕ್ತ ಮಾಹಾತ್ಮ್ಯದ) ಬೋಧನಾನ್ವೇಷಣ ಸಂಗದಿಂದ (ಸಂಶೋಧನಾತ್ಮಕ ತಿಳುವಳಿಕೆಯ ಸಂಬಂಧದಿಂದ) ಮತ್ತು ಸರ್ವಾತ್ಮಭಾವದಿಂದ ಶಿವನಿಗೆ ಶರಣಾಗತನಾದವನೇ ಶರಣಸ್ಥಾನದವನೆಂದು ಕರೆಯಲ್ಪಡುತ್ತಾನೆ.

**ಬ್ರಹ್ಮಾದಿವಿಬುಧಾನ್ ಸರ್ವಾನ್**
**ಮುಕ್ತ್ವಾ ಪ್ರಾಕೃತವೈಭವಾನ್ ।**
**ಪ್ರಪದ್ಯತೇ ಶಿವಂ ಯತ್ತು**
**ಶರಣಂ ತದುದಾಹೃತಮ್ ॥ 11–58**

ಬ್ರಹ್ಮ ವಿಷ್ಣ್ವಾದಿ ಎಲ್ಲ ದೇವತೆಗಳನ್ನು ಪ್ರಾಕೃತ ವೈಭವವುಳ್ಳವರನ್ನಾಗಿ (ಪ್ರಾಕೃತಿಕ ಸಂಪತ್ತುಳ್ಳವರನ್ನಾಗಿ) ತಿಳಿದು ಯಾರು ಶಿವನಿಗೆ ಶರಣಾಗತ ನಾಗುತ್ತಾನೆಯೋ ಅವನು ಶರಣನೆಂದು ಉದಾಹರಿಸಲ್ಪಡುವನು.

**ಶರಣ್ಯಃ ಸರ್ವಭೂತಾನಾಮ್**
**ಶಂಕರಃ ಶಶಿಶೇಖರಃ ।**
**ಸರ್ವಾತ್ಮನಾ ಪ್ರಪನ್ನಸ್ತಮ್**
**ಶರಣಾಗತ ಉಚ್ಯತೇ ॥ 11–59**

ಸರ್ವಭೂತಗಳಿಗೆ (ಎಲ್ಲಾ ಪ್ರಾಣಿಗಳಿಗೆ) ಶಶಿಶೇಖರನಾದ (ಚಂದ್ರಧರನಾದ) ಶಂಕರನು ಸಂರಕ್ಷಕನು. ಆದ್ದರಿಂದ ಸರ್ವಾತ್ಮಭಾವದಿಂದ ಆ ಶಂಕರನಿಗೆ ಪ್ರಪನ್ನನಾದವನೇ (ಮೊರೆ ಹೊಕ್ಕವನೆ) ಶರಣಾಗತನೆಂದು ಹೇಳಲ್ಪಡುತ್ತಾನೆ.

**ವಿಮುಕ್ತಭೋಗಲಾಲಸ್ಯೋ**
**ದೇವತಾಂತರನಿಸ್ಪೃಹಃ ।**
**ಶಿವಮಭ್ಯರ್ಥಯನ್ ಮೋಕ್ಷಮ್**
**ಶರಣಾರ್ಥೀತಿ ಗೀಯತೇ ॥ 11–60**

ಭೋಗದ ಲಾಲಸೆಯಿಂದ ಮುಕ್ತನಾದ (ಬ್ರಹ್ಮಾದಿ ಪದವಿಗಳ ಅಪೇಕ್ಷೆ ಇಲ್ಲದ), ಬೇರೆ ಯಾವ ದೇವನಲ್ಲಿಯೂ ಪ್ರೀತಿ ಇಲ್ಲದ ಅಂತೆಯೇ ಮೋಕ್ಷಕ್ಕಾಗಿ ಶಿವನನ್ನೇ ಪ್ರಾರ್ಥಿಸುವವನು ಶರಣಾರ್ಥಿಯೆಂದು ಹೇಳಲ್ಪಡುತ್ತಾನೆ.

**ಯೇ ಪ್ರಪನ್ನಾ ಮಹಾದೇವಮ್**
**ಮನೋವಾಕ್ಕಾಯಕರ್ಮಭಿಃ ।**
**ತೇಷಾಂ ತು ಕರ್ಮಜಾತೇನ**
**ಕಿಂ ವಾ ದೇವಾದಿತರ್ಪಣೈಃ ॥ 11–61**

ಮನಸ್ಸು, ವಾಣಿ ಮತ್ತು ಕಾಯದ ಕರ್ಮಗಳಿಂದ (ಕ್ರಿಯೆಗಳಿಂದ) ಯಾರು ಮಹಾದೇವನಿಗೆ ಪ್ರಪನ್ನರಾಗುತ್ತಾರೆಯೋ (ಶರಣಾಗತರಾಗುತ್ತಾರೆಯೋ)
ಅವರಿಗೆ ಬೇರೆ ಕರ್ಮಸಮೂಹಗಳಿಂದ ಅಥವಾ ಬೇರೆ ದೇವರ ತರ್ಪಣದಿಂದ (ಪೂಜೆಗಳಿಂದ) ಯಾವ ಪ್ರಯೋಜನವೂ ಇಲ್ಲ.

**ಸರ್ವೇಷಾಮಪಿ ಯಜ್ಞಾನಾಮ್**
**ಕ್ಷಯಃ ಸ್ವರ್ಗಃ ಫಲಾಯತೇ ।**

**ಅಕ್ಷಯಂ ಫಲಮಾಪ್ನೋತಿ**
**ಪ್ರಪನ್ನಃ ಪರಮೇಶ್ವರಮ್ ॥ 11–62**

ಎಲ್ಲ ಯಜ್ಞಗಳಿಗೆ ಕ್ಷಯವಾದ ಸ್ವರ್ಗವೇ ಫಲವಾಗಿರುತ್ತದೆ. ಆದರೆ ಪರಮೇಶ್ವರನಿಗೆ ಪ್ರಪನ್ನನಾದವನು (ಶರಣಾದವನು) ಅಕ್ಷಯವಾದ ಫಲವನ್ನು ಹೊಂದುತ್ತಾನೆ.

**ಪ್ರಪನ್ನಪಾರಿಜಾತಸ್ಯ**
**ಭವಸ್ಯ ಪರಮಾತ್ಮನಃ ।**
**ಪ್ರಪತ್ತ್ಯಾ ಕಿಂ ನ ಜಾಯೇತ**
**ಪಾಪಿನಾಮಪಿ ದೇಹಿನಾಮ್ ॥ 11–63**

ಪ್ರಪನ್ನರಾದವರಿಗೆ (ಶರಣಾಗತರಾದವರಿಗೆ) ಪಾರಿಜಾತ ವೃಕ್ಷವಾಗಿರುವ (ಕಲ್ಪವೃಕ್ಷವಾಗಿರುವ) ಪರಬ್ರಹ್ಮ ಸ್ವರೂಪನಾದ ಶಿವನಿಗೆ, ಪಾಪಿಗಳಾದ ಜೀವಿಗಳೂ ಸಹ ಶರಣಾಗತರಾದರೆ ಏನು ತಾನೇ ಆಗುವುದಿಲ್ಲ? (ಅವರಿಗೆ ಸಕಲ ಸಿದ್ಧಿಗಳು ದೊರೆಯುತ್ತವೆ ಎಂಬುದು ತಾತ್ಪರ್ಯ).

**ಪ್ರಪನ್ನಾನಾಂ ಮಹಾದೇವಮ್**
**ಪರಿಪಕ್ವಾಂತರಾತ್ಮನಾಮ್ ।**
**ಜನ್ಮೈವ ಜನ್ಮ ನಾನ್ಯೇಷಾಮ್**
**ವೃಥಾ ಜನನಸಂಗಿನಾಮ್ ॥ 11–64**

ಪರಿಪಕ್ವವಾದ ಅಂತಃಕರಣವುಳ್ಳ ಮತ್ತು ಮಹಾದೇವನಿಗೆ ಪ್ರಪನ್ನರಾದವರ ಜನ್ಮವೇ ನಿಜವಾದ ಜನ್ಮವು. ಇದಕ್ಕೆ ಹೊರತಾಗಿ ಜನ್ಮವನ್ನು ತಾಳಿದ ಅನ್ಯರ ಜನ್ಮವು ವ್ಯರ್ಥವಾದುದಾಗಿದೆ (ಶಿವನಿಗೆ ಶರಣಾಗುವುದರಿಂದಲೇ ಜನ್ಮದ ಸಾಫಲ್ಯವು).

**ದುರ್ಲಭಂ ಮಾನುಷಂ ಪ್ರಾಪ್ಯ**
**ಜನನಂ ಜ್ಞಾನಸಾಧನಮ್ ।**
**ಯೇ ನ ಜಾನಂತಿ ದೇವೇಶಮ್**
**ತೇಷಾಮಾತ್ಮಾ ನಿರರ್ಥಕಃ ॥ 11–65**

ಜ್ಞಾನಕ್ಕೆ ಸಾಧನವಾದ ಮತ್ತು ದುರ್ಲಭವಾದ ಮನುಷ್ಯ ಜನ್ಮವನ್ನು ಪಡೆದುಕೊಂಡ ಬಳಿಕ ದೇವೇಶನನ್ನು (ಶಿವನನ್ನು) ತಿಳಿದುಕೊಳ್ಳುವುದಿಲ್ಲವೋ ಅವರ ಜೀವನವು ನಿರರ್ಥಕವಾದುದಾಗಿದೆ.

**ತತ್ಕುಲಂ ಹಿ ಸದಾ ಶುದ್ಧಮ್**
**ಸಫಲಂ ತಸ್ಯ ಜೀವಿತಮ್ ।**
**ಯಸ್ಯ ಚಿತ್ತಂ ಶಿವೇ ಸಾಕ್ಷಾದ್**
**ವಿಲೀನಮಬಹಿರ್ಮುಖಮ್ ॥ 11–66**

ಯಾವ ಶರಣನ ಚಿತ್ತವು ಬಹಿರ್ಮುಖವಾಗದೆ ಸಾಕ್ಷಾತ್ ಶಿವನಲ್ಲಿಯೇ ವಿಲೀನವಾಗಿರುವುದೋ ಆ ಶರಣನ ಕುಲವೇ ಸದಾ ಶುದ್ಧವಾದುದು ಮತ್ತು ಅವನ ಜೀವನವೇ ಸಫಲವಾದುದಾಗಿದೆ (ಸಾರ್ಥಕವಾದುದಾಗಿದೆ).

***ಇತಿ ಶರಣಮಾಹಾತ್ಮ್ಯಸ್ಥಲಂ*** *ಇಲ್ಲಿಗೆ ಶರಣಮಾಹಾತ್ಮ್ಯ ಸ್ಥಲವು ಮುಗಿಯಿತು.*

## 31. ಅಥ ಪ್ರಸಾದಮಾಹಾತ್ಮ್ಯಸ್ಥಲಮ್
ಈಗ ಪ್ರಸಾದಮಾಹಾತ್ಮ್ಯ ಸ್ಥಲವು
**(11 ಶ್ಲೋಕಗಳು)**

**ಗುರುಲಿಂಗಾದಿಮಾಹಾತ್ಮ್ಯ–**
**ವಿಶೇಷಾನುಭವಸ್ಥಿತಿಃ ।**
**ಯಸ್ಮಾಚ್ಛಿವಪ್ರಸಾದಾತ್ ಸ್ಯಾತ್**
**ತದಸ್ಯ ಮಹಿಮೋಚ್ಯತೇ ॥ 11–67**

ಗುರುಲಿಂಗಾದಿಗಳ ಮಾಹಾತ್ಮ್ಯವನ್ನು (ಶ್ರೀಗುರು, ಲಿಂಗ, ಜಂಗಮ, ಭಕ್ತ ಮತ್ತು ಶರಣರ ಮಾಹಾತ್ಮ್ಯವನ್ನು) ವಿಶೇಷವಾಗಿ ಅನುಭವಿಸುವ ಸ್ಥಿತಿಯು ಯಾವ ಶಿವಪ್ರಸಾದದಿಂದ ಪ್ರಾಪ್ತವಾಗುವುದೋ ಆ ಶಿವಪ್ರಸಾದದ ಮಹಿಮೆಯು ಈಗ ಹೇಳಲ್ಪಡುತ್ತದೆ.

**ಸದಾ ಲಿಂಗೈಕನಿಷ್ಠಾನಾಮ್**
**ಗುರುಪೂಜಾನುಷಂಗಿಣಾಮ್ ।**
**ಪ್ರಪನ್ನಾನಾಂ ವಿಶುದ್ಧಾನಾಮ್**
**ಪ್ರಸೀದತಿ ಮಹೇಶ್ವರಃ ॥ 11–68**

ಯಾವಾಗಲೂ ಲಿಂಗದಲ್ಲಿಯೇ ಏಕನಿಷ್ಠೆಯುಳ್ಳ, ಗುರುಪೂಜೆಯಲ್ಲಿ ಅನುಷಂಗಿಗಳಾದ (ತತ್ಪರರಾದ), ವಿಶುದ್ಧರಾದ (ಪರಿಶುದ್ಧರಾದ) ಮತ್ತು ಪ್ರಪನ್ನರಾದವರ ಮೇಲೆ (ಅನನ್ಯ ಶರಣಾಗತರಾದವರ ಮೇಲೆ) ಮಹೇಶ್ವರನು ಪ್ರಸನ್ನನಾಗುತ್ತಾನೆ.

**ಪ್ರಸಾದೋಽಪಿ ಮಹೇಶಸ್ಯ**
**ದುರ್ಲಭಃ ಪರಿಕೀರ್ತ್ಯತೇ ।**
**ಘೋರಸಂಸಾರಸಂತಾಪ–**
**ನಿವೃತ್ತಿರ್ಯೇನ ಜಾಯತೇ ॥ 11–69**

ಯಾವ ಪ್ರಸಾದದಿಂದ ಘೋರವಾದ ಸಂಸಾರದ ಸಂತಾಪವು ನಿವೃತ್ತಿಯಾಗುತ್ತದೆಯೋ, ಮಹೇಶನ ಆ ಪ್ರಸಾದವೂ ಸಹ ದುರ್ಲಭವೆಂಬುದಾಗಿ ಹೇಳಲ್ಪಟ್ಟಿದೆ.

**ಯಜ್ಞಾಸ್ತಪಾಂಸಿ ಮಂತ್ರಾಣಾಮ್**
**ಜಪಶ್ಚಿಂತಾ ಪ್ರಬೋಧನಮ್ ।**
**ಪ್ರಸಾದಾರ್ಥಂ ಮಹೇಶಸ್ಯ**
**ಕೀರ್ತಿತಾನಿ ನ ಸಂಶಯಃ ॥ 11–70**

ಯಜ್ಞಗಳು, ತಪಸ್ಸುಗಳು, ಮಂತ್ರಗಳು, ಜಪವು, ಧ್ಯಾನವು ಮತ್ತು ಜ್ಞಾನವು (ಇವೆಲ್ಲವುಗಳು) ಮಹೇಶನ ಪ್ರಸಾದ ಪ್ರಾಪ್ತಿಗಾಗಿಯೇ ಹೇಳಲ್ಪಟ್ಟಿವೆ. ಇದರಲ್ಲಿ ಯಾವ ಸಂಶಯವೂ ಇಲ್ಲ.

**ಪ್ರಸಾದಮೂಲಾ ಸರ್ವೇಷಾಮ್**
**ಭಕ್ತಿರವ್ಯಭಿಚಾರಿಣೀ ।**
**ಶಿವಪ್ರಸಾದಹೀನಸ್ಯ**
**ಭಕ್ತಿಶ್ಚಾಪಿ ನ ಸಿದ್ಧ್ಯತಿ ॥ 11–71**

ಅವ್ಯಭಿಚಾರಿಣಿಯಾದ (ಅನನ್ಯವಾದ) ಶಿವಭಕ್ತಿಯು ಎಲ್ಲರಿಗೂ ಶಿವಪ್ರಸಾದದ ಮೂಲಕವಾಗಿಯೇ ದೊರೆಯುತ್ತದೆ. ಶಿವಪ್ರಸಾದಹೀನರಾದವರಿಗೆ ಈ ಭಕ್ತಿಯೂ ಸಹ ಸಿದ್ಧಿಸುವುದಿಲ್ಲ.

**ಗರ್ಭಸ್ಥೋ ಜಾಯಮಾನೋ ವಾ**
**ಜಾತೋ ವಾ ಬ್ರಾಹ್ಮಣೋಽಥವಾ ।**

**ಅಂತ್ಯಜೋ ವಾಽಪಿ ಮುಚ್ಯೇತ**
**ಪ್ರಸಾದೇ ಸತಿ ಶಾಂಕರೇ ॥ 11–72**

ಶಂಕರನ ಪ್ರಸಾದವು ಪ್ರಾಪ್ತವಾಗಲು ಗರ್ಭದಲ್ಲಿರುವ ಪಿಂಡವಾಗಲಿ, ಆಗ ತಾನೆ ಹುಟ್ಟುತ್ತಿರುವ ಶಿಶುವಾಗಲಿ, ಹುಟ್ಟಿದ ಮನುಷ್ಯನಾಗಲಿ ಅಥವಾ ಅವನು ಬ್ರಾಹ್ಮಣನೇ ಇರಲಿ, ಇಲ್ಲವೇ ಅಂತ್ಯಜನೇ ಇರಲಿ ಅವನು ಮುಕ್ತನೇ ಸರಿ.

**ಬ್ರಹ್ಮಾದ್ಯಾ ವಿಬುಧಾಃ ಸರ್ವೇ**
**ಸ್ವಸ್ವಸ್ಥಾನನಿವಾಸಿನಃ ।**
**ನಿತ್ಯಸಿದ್ಧಾ ಭವಂತ್ಯೇವ**
**ಪ್ರಸಾದಾತ್ ಪಾರಮೇಶ್ವರಾತ್ ॥ 11–73**

ತಮ್ಮ ತಮ್ಮ ಸ್ಥಾನನಿವಾಸಿಗಳಾದ ಬ್ರಹ್ಮ ವಿಷ್ಣು ಮೊದಲಾದ ಎಲ್ಲ ದೇವತೆಗಳು ಪರಮೇಶ್ವರನ ಪ್ರಸಾದದಿಂದಲೇ ನಿತ್ಯಸಿದ್ಧರಾಗಿರುತ್ತಾರೆ.

**ಪ್ರಸಾದೇ ಶಾಂಭವೇ ಸಿದ್ಧೇ**
**ಪರಮಾನಂದಕಾರಣೇ ।**
**ಸರ್ವಂ ಶಿವಮಯಂ ವಿಶ್ವಮ್**
**ದೃಶ್ಯತೇ ನಾತ್ರ ಸಂಶಯಃ ॥ 11–74**

ಪರಮಾನಂದಕ್ಕೆ ಕಾರಣೀಭೂತವಾದ ಶಂಭುವಿನ ಪ್ರಸಾದವು ಸಿದ್ಧಿಯಾಗಲು (ಪ್ರಾಪ್ತವಾಗಲು) ಸರ್ವ ವಿಶ್ವವೆಲ್ಲವೂ ಶಿವಮಯವಾಗಿ ತೋರುತ್ತದೆ. ಇದರಲ್ಲಿ ಯಾವ ಸಂಶಯವೂ ಇಲ್ಲ.

**ಸಂಸಾರಚಕ್ರನಿರ್ವಾಹ–**
**ನಿಮಿತ್ತಂ ಕರ್ಮ ಕೇವಲಮ್ ।**
**ಪ್ರಸಾದೇನ ವಿನಾ ಶಂಭೋಃ**
**ನ ಕಸ್ಯಾಪಿ ನಿವರ್ತತೇ ॥ 11–75**

ಸಂಸಾರವೆಂಬ ಚಕ್ರದ ನಿರ್ವಹಣೆಗೆ (ಚಲನೆಗೆ) ಕೇವಲ ಕರ್ಮವೇ ನಿಮಿತ್ತ ಕಾರಣವಾಗಿರುತ್ತದೆ (ಯಾವುದೇ ವ್ಯಕ್ತಿಯ ಈ ಕರ್ಮವು). ಶಂಭುವಿನ ಪ್ರಸಾದದ ಹೊರತಾಗಿ ನಿವೃತ್ತಿಯಾಗುವುದಿಲ್ಲ.

**ಬಹುನಾಽತ್ರ ಕಿಮುಕ್ತೇನ**
**ನಾಸ್ತಿ ನಾಸ್ತಿ ಜಗತ್ ತ್ರಯೇ ।**
**ಸಮಾನಮಧಿಕಂ ಚಾಪಿ**
**ಪ್ರಸಾದಸ್ಯ ಮಹೇಶಿತುಃ ॥ 11–76**

ಈ ಪ್ರಸಾದದ ವಿಷಯದಲ್ಲಿ ಬಹಳ ಹೇಳುವುದರಿಂದ ಏನು ಪ್ರಯೋಜನ? ಮೂರು ಲೋಕದಲ್ಲಿ ಮಹೇಶನ ಪ್ರಸಾದಕ್ಕೆ ಸಮವಾದದ್ದಾಗಲಿ, ಅದಕ್ಕಿಂತಲೂ ಅಧಿಕವಾದದ್ದಾಗಲಿ ಯಾವುದೂ ಇರುವುದಿಲ್ಲ.

**ಶಿವಪ್ರಸಾದೇ ಸತಿ ಯೋಗಭಾಜಿ**
**ಸರ್ವಂ ಶಿವೈಕಾತ್ಮತಯಾ ವಿಭಾತಿ ।**
**ಸ್ವಕರ್ಮಮುಕ್ತಃ ಶಿವಭಾವಿತಾತ್ಮಾ**
**ಸ ಪ್ರಾಣಲಿಂಗೀತಿ ನಿಗದ್ಯತೇಽಸೌ ॥ 11–77**

**– ಉಪೇಂದ್ರವಜ್ರಾ ವೃತ್ತಮ್**

ಯೋಗಭಾಜಿ (ಸಾಮರಸ್ಯ ರೂಪವಾದ ಶಿವಯೋಗವನ್ನು ಪಡೆದವನಿಗೆ) ಶಿವಪ್ರಸಾದವು ಪ್ರಾಪ್ತವಾಗಲು, ಎಲ್ಲವೂ ಶಿವಾತ್ಮಕವಾಗಿಯೇ ತೋರುವುದು. ಸ್ವಕರ್ಮಗಳಿಂದ ಮುಕ್ತನಾದ ಪ್ರಸಾದಿಸ್ಥಲದ ಸಾಧಕನು ಶಿವಭಾವಿತಾತ್ಮನಾಗಿ (ಶಿವಸ್ವರೂಪವನ್ನು ತಿಳಿದು) ಅವನು ಪ್ರಾಣಲಿಂಗಿ ಎಂಬುದಾಗಿ ಹೇಳಲ್ಪಡುತ್ತಾನೆ.

***ಇತಿ ಪ್ರಸಾದಮಾಹಾತ್ಮ್ಯಸ್ಥಲಂ*** *ಇಲ್ಲಿಗೆ ಪ್ರಸಾದಮಾಹಾತ್ಮ್ಯ ಸ್ಥಲವು ಮುಗಿಯಿತು.*

***ಓಂ ತತ್ಸತ್ ಇತಿ***

***ಶ್ರೀ ಶಿವಗೀತೇಷು ಸಿದ್ಧಾಂತಾಗಮೇಷು ಶಿವಾದ್ವೈತವಿದ್ಯಾಯಾಂ ಶಿವಯೋಗಶಾಸ್ತ್ರೇ ಶ್ರೀರೇಣುಕಾಗಸ್ತ್ಯಸಂವಾದೇ ವೀರಶೈವಧರ್ಮನಿರ್ಣಯೇ ಶ್ರೀಶಿವಯೋಗಿಶಿವಾಚಾರ್ಯವಿರಚಿತೇ ಶ್ರೀಸಿದ್ಧಾಂತಶಿಖಾಮಣೌ ಪ್ರಸಾದಿಸ್ಥಲೇ ಪ್ರಸಾದಿಸ್ಥಲಾದಿಸಪ್ತವಿಧಸ್ಥಲಪ್ರಸಂಗೋ ನಾಮ ಏಕಾದಶಃ ಪರಿಚ್ಛೇದಃ ॥***

*ಓಂ ತತ್ಸತ್ ಇತಿ ಶ್ರೀ ಶಿವನಿಂದ ಉಪದೇಶಿಸಲ್ಪಟ್ಟು*
*ಶ್ರೀ ಸಿದ್ಧಾಂತಾಗಮಗಳಲ್ಲಿಯ ಶಿವಾದ್ವೈತವಿದ್ಯಾರೂಪವೂ, ಶಿವಯೋಗಶಾಸ್ತ್ರವೂ,*
*ಶ್ರೀ ರೇಣುಕಾಗಸ್ತ್ಯಸಂವಾದರೂಪವೂ, ಶ್ರೀ ವೀರಶೈವಧರ್ಮನಿರ್ಣಯವೂ,*
*ಶ್ರೀ ಶಿವಯೋಗಿ ಶಿವಾಚಾರ್ಯ ವಿರಚಿತವೂ ಆದ ಶ್ರೀ ಸಿದ್ಧಾಂತ ಶಿಖಾಮಣಿಯಲ್ಲಿ ಪ್ರಸಾದಿಸ್ಥಲದಲ್ಲಿಯ ಪ್ರಸಾದಿಸ್ಥಲಾದಿ ಏಳು ವಿಧ ಸ್ಥಲಪ್ರಸಂಗವೆಂಬ ಹೆಸರಿನ ಹನ್ನೊಂದನೆಯ ಪರಿಚ್ಛೇದವು ಮುಗಿದುದು.*

## ದ್ವಾದಶಃ ಪರಿಚ್ಛೇದಃ
## ಹನ್ನೆರಡನೆಯ ಪರಿಚ್ಛೇದವು

### ಪ್ರಾಣಲಿಂಗಿನಃ ಪಂಚವಿಧಸ್ಥಲಪ್ರಸಂಗಃ
### ಪ್ರಾಣಲಿಂಗಿಯ ಪಂಚವಿಧಸ್ಥಲ ಪ್ರಸಂಗವು

**(48 ಶ್ಲೋಕಗಳು)**

### ಪ್ರಾಣಲಿಂಗಿಸ್ಥಲಮ್
### ಪ್ರಾಣಲಿಂಗಿಸ್ಥಲವು

**(5 ಶ್ಲೋಕಗಳು)**

**॥ ಅಗಸ್ತ್ಯ ಉವಾಚ ॥**

**ಭಕ್ತೋ ಮಾಹೇಶ್ವರಶ್ಚೇತಿ**
**ಪ್ರಸಾದೀತಿ ನಿಬೋಧಿತಃ ।**
**ಏಕ ಏವ ಕಥಂ ಚೈಷಃ**
**ಪ್ರಾಣಲಿಂಗೀತಿ ಕಥ್ಯತೇ ॥ 12–1**

ಹೇ ಗಣಾಧೀಶ್ವರನೇ, ಒಬ್ಬನೇ ಆದ ಸಾಧಕನನ್ನು ಭಕ್ತನೆಂತಲೂ, ಮಾಹೇಶ್ವರನೆಂತಲೂ ಮತ್ತು ಪ್ರಸಾದಿಯೆಂತಲೂ ತಾವು ಬೋಧಿಸಿದ್ದೀರಿ. ಆ ಒಬ್ಬನೇ ಆದ ಸಾಧಕನು ಪ್ರಾಣಲಿಂಗಿಯೆಂದು ಹೇಗೆ ತಾನೆ ಕರೆಸಿಕೊಳ್ಳುವನು?

**॥ ಶ್ರೀ ರೇಣುಕ ಉವಾಚ ॥**

**ಭಕ್ತೋ ಮಾಹೇಶ್ವರಶ್ಚೈಷ**
**ಪ್ರಸಾದೀತಿ ಚ ಕೀರ್ತಿತಃ ।**
**ಕರ್ಮಪ್ರಾಧಾನ್ಯಯೋಗೇನ**
**ಜ್ಞಾನಯೋಗೋಽಸ್ಯ ಕಥ್ಯತೇ ॥ 12–2**

ಕರ್ಮಯೋಗದ ಪ್ರಾಧಾನ್ಯದಿಂದ ಒಬ್ಬನೇ ಆದ ವ್ಯಕ್ತಿಯು ಭಕ್ತ, ಮಹೇಶ ಮತ್ತು ಪ್ರಸಾದಿಯೆಂದು ಕೀರ್ತಿಸಲ್ಪಡುತ್ತಾನೆ. ಅವನಿಗೇನೇ ಈಗ ಜ್ಞಾನಯೋಗವು ಹೇಳಲ್ಪಡುತ್ತದೆ.

**ಲಿಂಗಂ ಚಿದಾತ್ಮಕಂ ಬ್ರಹ್ಮ**
**ತಚ್ಛಕ್ತಿಃ ಪ್ರಾಣರೂಪಿಣೀ ।**
**ತದ್ರೂಪಲಿಂಗವಿಜ್ಞಾನೀ**
**ಪ್ರಾಣಲಿಂಗೀತಿ ಕಥ್ಯತೇ ॥ 12–3**

ಚಿದಾತ್ಮಕವಾದ (ಸಂವಿದ್ರೂಪವಾದ) ಬ್ರಹ್ಮವೇ ಲಿಂಗವು. ಅದರ ಶಕ್ತಿಯೇ ಪ್ರಾಣರೂಪವು. ತದ್ರೂಪವಾದ (ಶಿವ–ಶಕ್ತ್ಯಾತ್ಮಕವಾದ) ಆ ಪ್ರಾಣಲಿಂಗದ ಅನುಭಾವಿಯೇ ಪ್ರಾಣಲಿಂಗಿಯೆಂದು ಹೇಳಲ್ಪಡುತ್ತಾನೆ.

**ಪ್ರಾಣಲಿಂಗಿಸ್ಥಲಂ ಚೈತತ್**
**ಪಂಚಸ್ಥಲಸಮನ್ವಿತಮ್ ।**

**ಪ್ರಾಣಲಿಂಗಿಸ್ಥಲಂ ಚಾದೌ**
**ಪ್ರಾಣಲಿಂಗಾರ್ಚನಂ ತತಃ ॥ 12–4**

**ಶಿವಯೋಗಸಮಾಧಿಶ್ಚ**
**ತತೋ ಲಿಂಗನಿಜಸ್ಥಲಮ್ ।**
**ಅಂಗಲಿಂಗಸ್ಥಲಂ ಚಾಥ**
**ಕ್ರಮಾದೇಷಾಂ ಭಿದೋಚ್ಯತೇ ॥ 12–5**

ಈ ಪ್ರಾಣಲಿಂಗಸ್ಥಲವು ಐದು ಅವಾಂತರ ಸ್ಥಲಗಳಿಂದ ಕೂಡಿರುತ್ತದೆ. ಅವುಗಳಲ್ಲಿ ಮೊದಲನೆಯದು ಪ್ರಾಣಲಿಂಗಿಸ್ಥಲವು. ಅದಾದ ನಂತರ ಪ್ರಾಣಲಿಂಗಾರ್ಚನ ಸ್ಥಲವು. ನಂತರ ಶಿವಯೋಗಸಮಾಧಿಸ್ಥಲವು. ತರುವಾಯ ಲಿಂಗನಿಜಸ್ಥಲವು. ಅನಂತರ ಅಂಗಲಿಂಗಸ್ಥಲವು. (ಇನ್ನು ಮೇಲೆ) ಕ್ರಮವಾಗಿ ಇವುಗಳ ಭೇದವನ್ನು ಹೇಳಲಾಗುತ್ತದೆ.

**32. ಅಥ ಪ್ರಾಣಲಿಂಗಿಸ್ಥಲಮ್**

ಈಗ ಪ್ರಾಣಲಿಂಗಿಸ್ಥಲವು

**(7 ಶ್ಲೋಕಗಳು)**

**ಪ್ರಾಣಾಪಾನಸಮಾಘಾತಾತ್**
**ಕಂದಮಧ್ಯಾದ್ಯದುತ್ಥಿತಮ್ ।**
**ಪ್ರಾಣಲಿಂಗಂ ತದಾಖ್ಯಾತಮ್**
**ಪ್ರಾಣಾಪಾನನಿರೋಧಿಭಿಃ ॥ 12–6**

ಪ್ರಾಣ ಮತ್ತು ಅಪಾನಗಳ ಸಮಾಘಾತದಿಂದ (ಸಂಘಟ್ಟನೆಯಿಂದ) ಕಂದದ ಮಧ್ಯದಲ್ಲಿ (ನಾಭಿ ಕಂದದ ಮಧ್ಯದಿಂದ) ಉತ್ಪನ್ನವಾದ ಆ ಜ್ಯೋತಿಯೇ ಪ್ರಾಣಲಿಂಗವೆಂದು ಪ್ರಾಣಾಪಾನ ನಿರೋಧಿಗಳಾದ ಶಿವಯೋಗಿಗಳು ಹೇಳುತ್ತಾರೆ.

**ಪ್ರಾಣೋ ಯತ್ರ ಲಯಂ ಯಾತಿ**
**ಭಾಸ್ಕರೇ ತುಹಿನಂ ಯಥಾ ।**
**ತತ್ಪ್ರಾಣಲಿಂಗಮುದ್ದಿಷ್ಟಮ್**
**ತದ್ಧಾರೀ ಸ್ಯಾತ್ ತದಾಕೃತಿಃ ॥ 12–7**

ಸೂರ್ಯನಲ್ಲಿ ಮಂಜು ಕರಗುವಂತೆ ಯಾವ ಜ್ಯೋತಿಯಲ್ಲಿ ಪ್ರಾಣವು ಲಯವಾಗುವುದೋ ಅದುವೇ ಪ್ರಾಣಲಿಂಗವೆಂದು ಹೇಳಲ್ಪಡುವುದು. ಅದನ್ನು ಧರಿಸಿದವನು ಪ್ರಾಣಲಿಂಗಿಯಾಗುತ್ತಾನೆ.

**ಜ್ಞಾನಿನಾಂ ಯೋಗಯುಕ್ತಾನಾಮ್**
**ಅಂತಃ ಸ್ಫುರತಿ ದೀಪವತ್ ।**
**ಚಿದಾಕಾರಂ ಪರಂ ಬ್ರಹ್ಮ–**
**ಲಿಂಗಮಜ್ಞೈರ್ನ ಭಾವ್ಯತೇ ॥ 12–8**

ಶಿವಯೋಗಯುಕ್ತರಾದ ಜ್ಞಾನಿಗಳ ಅಂತರಂಗದಲ್ಲಿ (ಹೃದಯದಲ್ಲಿ) ಚಿದ್ರೂಪವಾದ ಪರಬ್ರಹ್ಮವು ದೀಪದಂತೆ ಸ್ಫುರಿಸುವುದು. ಈ ಪ್ರಾಣಲಿಂಗವು ಅಜ್ಞರಿಂದ ಭಾವಿಸಲು ಸಾಧ್ಯವಾಗುವುದಿಲ್ಲ.

**ಅಂತಃಸ್ಥಿತಂ ಪರಂ ಲಿಂಗಮ್**
**ಜ್ಯೋತೀರೂಪಂ ಶಿವಾತ್ಮಕಮ್ ।**
**ವಿಹಾಯ ಬಾಹ್ಯಲಿಂಗಸ್ಥಾ**
**ವಿಮೂಢಾ ಇತಿ ಕೀರ್ತಿತಾಃ ॥ 12–9**

ಅಂತರಂಗದಲ್ಲಿರುವ ಜ್ಯೋತಿರೂಪವಾದ, ಶಿವಾತ್ಮಕವಾದ, ಶ್ರೇಷ್ಠವಾದ ಆ ಪ್ರಾಣಲಿಂಗವನ್ನು ಬಿಟ್ಟು ಬಾಹ್ಯ (ಸ್ಥಾವರ) ಲಿಂಗದಲ್ಲಿ ಆಸಕ್ತರಾದವರು ಮೂಢರೆಂದು ಕರೆಸಿಕೊಳ್ಳುತ್ತಾರೆ.

**ಸಂವಿಲ್ಲಿಂಗಪರಾಮರ್ಶೀ**
**ಬಾಹ್ಯವಸ್ತುಪರಾಙ್ಮುಖಃ ।**
**ಯಃ ಸದಾ ವರ್ತತೇ ಯೋಗೀ**
**ಪ್ರಾಣಲಿಂಗೀ ಸ ಉಚ್ಯತೇ ॥ 12–10**

ಆದ್ದರಿಂದ ಯಾವಾಗಲೂ ಬಾಹ್ಯವಸ್ತುಗಳಲ್ಲಿ (ಸ್ಥಾವರಲಿಂಗ ಮತ್ತು ಅದರ ಪೂಜಾ ಪರಿಕರಗಳಲ್ಲಿ) ಪರಾಙ್ಮುಖನಾಗಿ ಸಂವಿಲ್ಲಿಂಗದ (ಜ್ಞಾನರೂಪವಾದ ಪ್ರಾಣಲಿಂಗದ) ಪರಾಮರ್ಶಿಯಾಗಿರುವ (ಆ ವಿಚಾರದಲ್ಲೇ ಇರುವ) ಯೋಗಿಯು ಪ್ರಾಣಲಿಂಗಿಯೆಂದು ಕರೆಯಲ್ಪಡುತ್ತಾನೆ.

**ಮಾಯಾವಿಕಲ್ಪಜಂ ವಿಶ್ವಮ್**
**ಹೇಯಂ ಸಂಚಿಂತ್ಯ ನಿತ್ಯಶಃ ।**
**ಚಿದಾನಂದಮಯೇ ಲಿಂಗೇ**
**ವಿಲೀನಃ ಪ್ರಾಣಲಿಂಗವಾನ್ ॥ 12–11**

ಮಾಯವಿಕಲ್ಪದಿಂದ ಜನಿಸಿದ (ಮಾಯೆಯ ಗುಣಭೇದಗಳಿಂದ ಹುಟ್ಟಿದ) ಈ ವಿಶ್ವವು ಹೇಯವಾದುದು ಎಂಬುದಾಗಿ ನಿತ್ಯವೂ ಚಿಂತಿಸುತ್ತಾ, ಚಿದಾನಂದ ರೂಪವಾದ ಪ್ರಾಣಲಿಂಗದಲ್ಲಿಯೇ ವಿಲೀನನಾದವನು (ಮನೋಲಯ ಮಾಡಿಕೊಂಡವನು) ಪ್ರಾಣಲಿಂಗಿಯು (ತಾನು ಚಿದ್ರೂಪನಾಗಿದ್ದೇನೆ ಎಂಬ ತನ್ನ ಚೈತನ್ಯದ ಅರಿವುಳ್ಳಾತನೇ ಪ್ರಾಣಲಿಂಗಿಯು).

**ಸತ್ತಾ ಪ್ರಾಣಮಯೀ ಶಕ್ತಿಃ**
**ಸದ್ರೂಪಂ ಪ್ರಾಣಲಿಂಗಕಮ್ ।**
**ತತ್ಸಾಮರಸ್ಯವಿಜ್ಞಾನಾತ್**
**ಪ್ರಾಣಲಿಂಗೀತಿ ಕಥ್ಯತೇ ॥ 12–12**

ಸತ್ತಾತ್ಮಕ ಭಾವರೂಪವಾದುದು ಪ್ರಾಣಮಯೀ ಶಕ್ತಿಯು, ಸದ್ರೂಪವಾದುದು ಪ್ರಾಣಲಿಂಗವು. ಇವೆರಡರ ಸಾಮರಸ್ಯದ ವಿಜ್ಞಾನವುಳ್ಳವನೇ (ಅನುಭವವುಳ್ಳವನೇ) ಪ್ರಾಣಲಿಂಗಿಯೆಂದು ಕರೆಸಿಕೊಳ್ಳುವನು (ಸದ್ವಸ್ತು ಭಾವವೇ ಸತ್ತೇ ಅದುವೇ ಶಕ್ತಿ ಸದ್ವಸ್ತು ಶಿವ ಸತ್ತಾಭಾವವೇ ಶಕ್ತಿ. ಇವೆರಡಕ್ಕೂ ದೀಪ–ದೀಪ್ತಿಗಳಂತೆ ಅವಿನಾಭಾವವಿದೆಯೆಂಬುದೇ ವಿಜ್ಞಾನ. ಈ ವಿಜ್ಞಾನವುಳ್ಳವನೇ ಪ್ರಾಣಲಿಂಗಿಯು).

*ಇತಿ ಪ್ರಾಣಲಿಂಗಿಸ್ಥಲಂ* *ಇಲ್ಲಿಗೆ ಪ್ರಾಣಲಿಂಗಿಸ್ಥಲವು ಮುಗಿಯಿತು.*

## 33. ಅಥ ಪ್ರಾಣಲಿಂಗಾರ್ಚನಸ್ಥಲಮ್
ಈಗ ಪ್ರಾಣಲಿಂಗಾರ್ಚನಸ್ಥಲವು
**(8 ಶ್ಲೋಕಗಳು)**

**ಅಂತರ್ಗತಂ ಚಿದಾಕಾರಮ್**
**ಲಿಂಗಂ ಶಿವಮಯಂ ಪರಮ್ ।**
**ಪೂಜ್ಯತೇ ಭಾವಪುಷ್ಪೈರ್ಯತ್**
**ಪ್ರಾಣಲಿಂಗಾರ್ಚನಂ ಹಿ ತತ್ ॥ 12–13**

ಅಂತರ್ಗತವಾದ (ಅಂತರಂಗದಲ್ಲಿರುವ) ಚಿದಾಕಾರ ರೂಪವಾದ ಸರ್ವಶ್ರೇಷ್ಠವಾದ, ಶಿವರೂಪವಾದ, ಪ್ರಾಣಲಿಂಗವನ್ನು ಭಾವಪುಷ್ಪಗಳಿಂದ ಮಾಡುವ ಯಾವ ಪೂಜೆಯಿದೆಯೋ ಅದುವೇ ಪ್ರಾಣಲಿಂಗಾರ್ಚನೆಯು.

**ಅಂತಃ ಪವನಸಂಸ್ಪೃಷ್ಟೇ**

ಸುಸೂಕ್ಷ್ಮಾಂಬರಶೋಭಿತೇ ।
ಮೂರ್ಧನ್ಯಚಂದ್ರವಿಗಲತ್
ಸುಧಾಸೇಕಾತಿಶೀತಲೇ ॥ **12–14**
ಬದ್ಧೇಂದ್ರಿಯನವದ್ವಾರೇ
ಬೋಧದೀಪೇ ಹೃದಾಲಯೇ ।
ಪದ್ಮಪೀಠೇ ಸಮಾಸೀನಮ್
ಚಿಲ್ಲಿಂಗಂ ಶಿವವಿಗ್ರಹಮ್ ।
ಭಾವಯಿತ್ವಾ ಸದಾಕಾಲಮ್
ಪೂಜಯೇದ್ ಭಾವವಸ್ತುಭಿಃ ॥ **12–15**

ನವದ್ವಾರಗಳನ್ನು ಬಂಧಿಸಿಕೊಂಡು ಧ್ಯಾನಾಸಕ್ತನಾಗಿ ಕುಳಿತ ಸಾಧಕನು ಬ್ರಹ್ಮರಂಧ್ರದಲ್ಲಿರುವ ಚಂದ್ರಮಂಡಲದಿಂದ ಸ್ರವಿಸುವ ಅಮೃತದ ಧಾರೆಯಿಂದ ಶೀತಲವಾದ, ಅತ್ಯಂತ ಸೂಕ್ಷ್ಮವಾದ, ಆಕಾಶದಿಂದ ಶೋಭಿತವಾದ, ಅಂತರಂಗದ ಪ್ರಾಣವಾಯುವಿನಿಂದ ಆವರಿಸಲ್ಪಟ್ಟ ಹೃದಯಮಂಟಪದಲ್ಲಿ, ಶಿವಸ್ವರೂಪವಾದ ಜ್ಞಾನದೀಪವಾಗಿರುವ, ಅಷ್ಟದಳ ಕಮಲದಲ್ಲಿ ಸಮಾಸೀನನಾಗಿರುವ ಚಿಲ್ಲಿಂಗವನ್ನು (ಪ್ರಾಣ ಲಿಂಗವನ್ನು) ಸದಾಕಾಲದಲ್ಲಿ ಭಾವಿಸಿ, ಭಾವನಾಮಯ ವಸ್ತುಗಳಿಂದ ಪೂಜಿಸಬೇಕು.

ಕ್ಷಮಾಽಭಿಷೇಕಸಲಿಲಮ್
ವಿವೇಕೋ ವಸ್ತ್ರಮುಚ್ಯತೇ ।
ಸತ್ಯಮಾಭರಣಂ ಪ್ರೋಕ್ತಮ್
ವೈರಾಗ್ಯಂ ಪುಷ್ಪಮಾಲಿಕಾ ॥ **12–16**

ಗಂಧಃ ಸಮಾಧಿಸಂಪತ್ತಿಃ
ಅಕ್ಷತಾ ನಿರಹಂಕೃತಿಃ ।
ಶ್ರದ್ಧಾಧೂಪೋ ಮಹಾಜ್ಞಾನಮ್
ಜಗದ್ಭಾಸಿಪ್ರದೀಪಿಕಾ ॥ **12–17**

ಭ್ರಾಂತಿಮೂಲಪ್ರಪಂಚಸ್ಯ
ನಿವೇದ್ಯಂ ತನ್ನಿವೇದನಮ್ ।
ಮೌನಂ ಘಂಟಾಪರಿಸ್ಪಂದಃ
ತಾಂಬೂಲಂ ವಿಷಯಾರ್ಪಣಮ್॥ **12–18**
ವಿಷಯಭ್ರಾಂತಿರಾಹಿತ್ಯಮ್
ತತ್ಪ್ರದಕ್ಷಿಣಕಲ್ಪನಾ ।
ಬುದ್ಧೇಸ್ತದಾತ್ಮಿಕಾ ಶಕ್ತಿಃ
ನಮಸ್ಕಾರಕ್ರಿಯಾ ಮತಾ ॥ **12–19**

ಏವಂವಿಧೈರ್ಭಾವಶುದ್ಧೈಃ
ಉಪಚಾರೈರದೂಷಿತೈಃ ।
ಪ್ರತ್ಯುನ್ಮುಖಮನಾ ಭೂತ್ವಾ
ಪೂಜಯೇಲ್ಲಿಂಗಮಾಂತರಮ್ ॥ **12–20**

ಈ ಪ್ರಾಣಲಿಂಗ ಪೂಜೆಗೆ ಕ್ಷಮೆಯೇ ಅಭಿಷೇಕ ಜಲವು, ವಿವೇಕವೇ ವಸ್ತ್ರವು, ಸತ್ಯ ನುಡಿಯುವುದೇ ಆಭರಣ, ವೈರಾಗ್ಯವೇ ಪುಷ್ಪಮಾಲೆಯು, ಗಂಧವೇ ಸಮಾಪತ್ತಿಯು, ನಿರಹಂಕಾರವೇ ಅಕ್ಷತೆಯು, ಶ್ರದ್ಧೆಯೇ ಧೂಪವು, ಜಗತ್ತನ್ನು ಬೆಳಗುವ ಮಹಾಜ್ಞಾನವೇ ದೀಪವು, ಭ್ರಾಂತಿಮೂಲವಾದ ಪ್ರಪಂಚವನ್ನು ನಿವೇದಿಸುವುದೇ ನೈವೇದ್ಯವು (ನಾನು, ನನ್ನದೆಂಬ ತಪ್ಪು ಭಾವನೆಯನ್ನು ನಿವೇದಿಸುವುದು). ಮೌನವೇ ಘಂಟಾನಾದವು, ಶಬ್ದ ಸ್ಪರ್ಶಾದಿ ವಿಷಯಗಳನ್ನು ಅರ್ಪಿಸುವುದೇ ತಾಂಬೂಲ ಸಮರ್ಪಣೆಯು, ವಿಷಯಭ್ರಾಂತಿಯನ್ನು ಕಳೆದುಕೊಳ್ಳುವುದೇ ಪ್ರದಕ್ಷಿಣೆಯು, ಬುದ್ಧಿಯನ್ನು ತಾದಾತ್ಮ್ಯಗೊಳಿಸುವುದೇ ನಮಸ್ಕಾರವು. ಈ ಪ್ರಕಾರವಾದ ದೋಷರಹಿತವಾದ ಶುದ್ಧಭಾವನೆಗಳೆಂಬ ಉಪಚಾರದಿಂದ ಅಂತರ್ಮುಖ ಮನಸ್ಸುಳ್ಳವನಾಗಿ ಅಂತರಂಗದ ಪ್ರಾಣಲಿಂಗವನ್ನು ಪೂಜಿಸಬೇಕು.

*ಇತಿ ಪ್ರಾಣಲಿಂಗಾರ್ಚನಸ್ಥಲಂ*
*ಇಲ್ಲಿಗೆ ಪ್ರಾಣಲಿಂಗಾರ್ಚನಸ್ಥಲವು ಮುಗಿಯಿತು*

## 34. ಅಥ ಶಿವಯೋಗಸಮಾಧಿಸ್ಥಲಮ್
ಈಗ ಶಿವಯೋಗಸಮಾಧಿಸ್ಥಲವು
**(11 ಶ್ಲೋಕಗಳು)**

**ಅಂತಃಕ್ರಿಯಾರತಸ್ಯಾಸ್ಯ**
**ಪ್ರಾಣಲಿಂಗಾರ್ಚನಕ್ರಮೈಃ ।**
**ಶಿವಾತ್ಮಧ್ಯಾನಸಂಪತ್ತಿಃ**
**ಸಮಾಧಿರಿತಿ ಕಥ್ಯತೇ ॥ 12–21**

ಪ್ರಾಣಲಿಂಗಾರ್ಚನ ಕ್ರಮದ ಅಂತರಂಗಕ್ರಿಯೆಯಲ್ಲಿ ರತನಾದ ಈ ಪ್ರಾಣಲಿಂಗಿಗೆ ಉಂಟಾದ ಶಿವಾತ್ಮ ಧ್ಯಾನಸಂಪತ್ತಿಯೇ (ಶಿವ–ಜೀವರ ಸಮಾನ ಸಮರಸ ರೂಪವಾದ ಧ್ಯಾನವೇ) ಸಮಾಧಿಯೆಂದು ಹೇಳಲ್ಪಡುತ್ತದೆ.

**ಸರ್ವತತ್ತ್ವೋಪರಿಗತಮ್**
**ಸಚ್ಚಿದಾನಂದಭಾಸುರಮ್ ।**
**ಸ್ವಪ್ರಕಾಶಮನಿರ್ದೇಶ್ಯಮ್**
**ಅವಾಙ್ಮನಸಗೋಚರಮ್ ॥ 12–22**

**ಉಮಾಖ್ಯಯಾ ಮಹಾಶಕ್ತ್ಯಾ**
**ದೀಪಿತಂ ಚಿತ್ಸ್ವರೂಪಯಾ ।**
**ಹಂಸರೂಪಂ ಪರಾತ್ಮಾನಮ್**
**ಸೋಽಹಂಭಾವೇನ ಭಾವಯೇತ್ ।**
**ತದೇಕತಾನತಾಸಿದ್ಧಿಃ**
**ಸಮಾಧಿಃ ಪರಮೋ ಮತಃ ॥ 12–23**

36 ತತ್ತ್ವಗಳ ಅಗ್ರಭಾಗದಲ್ಲಿರುವ, ಸಚ್ಚಿದಾನಂದ ಸ್ವರೂಪನಾದ, ಸ್ವಯಂಪ್ರಕಾಶರೂಪನಾದ, ತೋರಿಸಲು ಬಾರದೆ ಇರುವ, ವಾಣಿ ಮತ್ತು ಮನಸ್ಸುಗಳಿಗೆ ಅಗೋಚರನಾದ, ಚಿತ್ಸ್ವರೂಪಿಣಿಯಾದ ಉಮಾ ಎಂಬ ಹೆಸರಿನ ಮಹಾಶಕ್ತಿಯಿಂದ ಪ್ರಕಾಶಿಸುತ್ತಿರುವ, ಹಂಸರೂಪನಾದ ಆ ಪರಮಾತ್ಮನನ್ನು ಸೋಽಹಂ ಎಂಬ ಭಾವನೆಯಿಂದ ಭಾವಿಸಬೇಕು. (ಈ ಭಾವನೆಯಿಂದುಂಟಾದ) ತಾದಾತ್ಮ್ಯಸಿದ್ಧಿಯೇ ಶ್ರೇಷ್ಠವಾದ ಸಮಾಧಿಯೆಂದು ಸಮ್ಮತವಾಗಿದೆ.

**ಪರಬ್ರಹ್ಮ ಮಹಾಲಿಂಗಮ್**
**ಪ್ರಾಣೋ ಜೀವಃ ಪ್ರಕೀರ್ತಿತಃ ।**
**ತದೇಕಭಾವಮನನಾತ್**
**ಸಮಾಧಿಸ್ಥಃ ಪ್ರಕೀರ್ತಿತಃ ॥ 12–24**

ಮಹಾಲಿಂಗವೆಂದರೆ ಪರಬ್ರಹ್ಮವು, ಪ್ರಾಣವೆಂದರೆ ಜೀವನೆಂದು ಹೇಳಲ್ಪಟ್ಟಿದೆ. ಅವೆರಡರ ಐಕ್ಯ ಭಾವನಾರೂಪವಾದ ಮನನದಿಂದ ಸಮಾಧಿಸ್ಥನೆಂದು ಕರೆಯಲ್ಪಡುತ್ತಾನೆ ("ಪ್ರಾಣಾರೂಢಾತ್ ಭವೇತ್ ಜೀವಃ" ಎಂಬ ಆಗಮೋಕ್ತಿ ಇದೆ).

**ಅಂತಃ ಷಟ್‌ಚಕ್ರರೂಢಾನಿ**
**ಪಂಕಜಾನಿ ವಿಭಾವಯೇತ್ ।**
**ಬ್ರಹ್ಮಾದಿಸ್ಥಾನಭೂತಾನಿ**
**ಭ್ರೂಮಧ್ಯಾಂತಾನಿ ಮೂಲತಃ ॥ 12–25**
**ಭ್ರೂಮಧ್ಯಾದೂರ್ಧ್ವಭಾಗೇ ತು**
**ಸಹಸ್ರದಲಮಂಬುಜಮ್ ।**
**ಭಾವಯೇತ್ತತ್ರ ವಿಮಲಮ್**
**ಚಂದ್ರಬಿಂಬಂ ತದಂತರೇ ॥ 12–26**

**ಸೂಕ್ಷ್ಮರಂಧ್ರಂ ವಿಜಾನೀಯಾತ್**
**ತತ್ಕೈಲಾಸಪದಂ ವಿದುಃ ।**
**ತತ್ರಸ್ಥಂ ಭಾವಯೇಚ್ಛಂಭುಮ್**
**ಸರ್ವಕಾರಣಕಾರಣಮ್ ॥ 12–27**

ಅಂತರಂಗದಲ್ಲಿ (ಜೀವೇಶ್ವರರಿಗೆ ಆಶ್ರಯವಾದ ಸೂಕ್ಷ್ಮದೇಹದಲ್ಲಿ) ಮೂಲದಿಂದ (ಮೂಲಾಧಾರದಿಂದ) ಭ್ರೂಮಧ್ಯದವರೆವಿಗೆ (ಆಜ್ಞಾಚಕ್ರದವರೆವಿಗೆ) ಇರುವ ಆರು ಚಕ್ರಗಳಲ್ಲಿ ಆರೂಢಿಸಿರುವ (ಇರುವ) ಆರು ರೀತಿಯ ಕಮಲಗಳನ್ನು ಭಾವಿಸಬೇಕು. ಭ್ರೂಮಧ್ಯದ ಊರ್ಧ್ವಭಾಗದಲ್ಲಿ (ಬ್ರಹ್ಮರಂಧ್ರದಲ್ಲಿ) ಸಹಸ್ರದಲದ ಕಮಲವನ್ನು ಭಾವಿಸಬೇಕು. ಆ ಕಮಲದಲ್ಲಿ ನಿರ್ಮಲವಾದ ಚಂದ್ರಬಿಂಬವನ್ನು ಭಾವಿಸಿ ಅದರ ಒಳಗೆ ಸೂಕ್ಷ್ಮರಂಧ್ರವಿರುವುದನ್ನು ತಿಳಿದುಕೊಳ್ಳಬೇಕು. ಅದುವೇ ಕೈಲಾಸ ಸ್ಥಾನವು. ಅದರಲ್ಲಿರುವ ಸರ್ವಕಾರಣಗಳಿಗೆ ಕಾರಣವಾದ ಶಂಭುವನ್ನು ಭಾವಿಸಬೇಕು.

**ಬಹಿರ್ವಾಸನಯಾ ವಿಶ್ವಮ್**
**ವಿಕಲ್ಪಾರ್ಥಂ ಪ್ರಕಾಶತೇ ।**
**ಅಂತರ್ವಾಸಿತಚಿತ್ತಾನಾಮ್**
**ಆತ್ಮಾನಂದಃ ಪ್ರಕಾಶತೇ ॥ 12–28**

ಬಹಿರಂಗದ ವಾಸನೆಯಿಂದ (ಶಬ್ದ, ಸ್ಪರ್ಶಾದಿ ವಿಷಯ ವಾಸನೆಯಿಂದ) ವಿಶ್ವವು ವಿಕಲ್ಪರೂಪವಾಗಿ (ಬೇಕು ಬೇಡೆಂಬ ರೂಪವಾಗಿ) ಪ್ರಕಾಶಿಸುತ್ತದೆ. ಅಂತರಂಗದ ವಾಸನೆಯಿಂದ (ಶಿವೋऽಹಂ ಭಾವದಿಂದ) ಕೂಡಿದ ಚಿತ್ತವುಳ್ಳವರಿಗೆ ಆತ್ಮಾನಂದವು ಪ್ರಕಾಶಿಸುತ್ತದೆ.

**ಆತ್ಮಾರಣಿಸಮುತ್ಥೇನ**
**ಪ್ರಮೋದಮಥನಾತ್ ಸುಧೀಃ ।**
**ಜ್ಞಾನಾಗ್ನಿನಾ ದಹೇತ್ ಸರ್ವಮ್**

**ಪಾಶಜಾಲಂ ಜಗನ್ಮಯಮ್ ॥ 12–29**

ಬುದ್ಧಿವಂತನಾದ ಪ್ರಾಣಲಿಂಗಿಯು ಆತ್ಮವೆಂಬ ಅರಣಿ (ಅಗ್ನಿಪ್ರಾಕಟ್ಯಕ್ಕೆ ಉಪಯೋಗಿಸುವ ಎರಡು ಕಟ್ಟಿಗೆಗಳು)ಯ ಮೇಲೆ ಪ್ರಮೋದದ ಮಥನದಿಂದ (ಶಿವೋऽಹಂ ಭಾವನೆಯಿಂದುಂಟಾದ ಆನಂದದ ವಿಚಾರ ಮಥನದಿಂದ) ಉತ್ಪನ್ನವಾದ ಜ್ಞಾನಾಗ್ನಿಯಿಂದ ಜಗತ್ತಿನ ಎಲ್ಲ ಪಾಶಜಾಲವನ್ನು ಸುಡುವನು.

**ಸಂಸಾರವಿಷವೃಕ್ಷಸ್ಯ**
**ಪಂಚಕ್ಲೇಶಪಲಾಶಿನಃ ।**
**ಛೇದನೇ ಕರ್ಮಮೂಲಸ್ಯ**
**ಪರಶುಃ ಶಿವಭಾವನಾ ॥ 12–30**

ಪಂಚಕ್ಲೇಶ (ಅವಿದ್ಯಾ, ಅಸ್ಮಿತಾ, ರಾಗ, ದ್ವೇಷ, ಅಭಿನಿವೇಷ)ಗಳೆಂಬ ಪಲಾಶಗಳಿಂದ (ಎಲೆಗಳಿಂದ ಕೂಡಿದ) ಕರ್ಮಕ್ಕೆ ಕಾರಣವಾದ ಸಂಸಾರವೆಂಬ ವಿಷವೃಕ್ಷವನ್ನು ಕತ್ತರಿಸಿ ಹಾಕಲು ಶಿವಭಾವವೇ (ಶಿವೋऽಹಂ ಭಾವವೇ) ಪರಶುವಾಗಿರುತ್ತದೆ (ಕೊಡಲಿಯಾಗಿರುತ್ತದೆ).

**ಅಜ್ಞಾನರಾಕ್ಷಸೋನ್ಮೇಷ–**
**ಕಾರಿಣಃ ಸಂಹೃತಾತ್ಮನಃ ।**
**ಶಿವಧ್ಯಾನಂ ತು ಸಂಸಾರ–**
**ತಮಸಶ್ಚಂಡಭಾಸ್ಕರಃ ।**
**ತದೇಕತಾನತಾಸಿದ್ಧಿಃ**
**ಸಮಾಧಿಃ ಪರಮೋ ಮತಃ ॥ 12–31**

ಆತ್ಮನನ್ನು ಆವರಿಸಿದ ಅಜ್ಞಾನವೆಂಬ ರಾಕ್ಷಸನ ಕಣ್ಣುಗಳನ್ನು ತೆರೆಯಿಸಿದ, ಸಂಸಾರ ವೆಂಬ ಗಾಢಾಂಧಕಾರವನ್ನು ದೂರ ಮಾಡಲು ಶಿವಧ್ಯಾನವು ಪ್ರಚಂಡವಾದ ಸೂರ್ಯ ನೋಪಾದಿಯಲ್ಲಿರುತ್ತದೆ. ಶಿವನೊಂದಿಗೆ ಏಕತಾನತೆ, ಅಂದರೆ ತಾದಾತ್ಮ್ಯ ರೂಪವಾದ ಸಿದ್ಧಿಯನ್ನು ಪಡೆದುಕೊಳ್ಳುವುದೇ ಶ್ರೇಷ್ಠವಾದ ಸಮಾಧಿಯೆಂದು ಕರೆಯಲ್ಪಡುವುದು.

***ಇತಿ ಶಿವಯೋಗಸಮಾಧಿಸ್ಥಲಂ***
*ಇಲ್ಲಿಗೆ ಶಿವಯೋಗಸಮಾಧಿಸ್ಥಲವು ಮುಗಿಯಿತು.*

## 35. ಅಥ ಲಿಂಗನಿಜಸ್ಥಲಮ್
ಈಗ ಲಿಂಗನಿಜಸ್ಥಲವು
**(10 ಶ್ಲೋಕಗಳು)**

**ಸ್ವಾಂತಸ್ಥಶಿವಲಿಂಗಸ್ಯ**
**ಪ್ರತ್ಯಕ್ಷಾನುಭವಸ್ಥಿತಿಃ ।**
**ಯಸ್ಯೈವ ಪರಲಿಂಗಸ್ಯ**
**ನಿಜಮಿತ್ಯುಚ್ಯತೇ ಬುಧೈಃ ॥ 12–32**

ತನ್ನ ಅಂತರಂಗದಲ್ಲಿರುವ (ಹೃದಯಕಮಲದಲ್ಲಿರುವ) ಶಿವಲಿಂಗದ (ಪ್ರಾಣಲಿಂಗದ) ಪ್ರತ್ಯಕ್ಷವಾದ ಅನುಭವದ ಸ್ಥಿತಿಯೇ ಆ ಪರಲಿಂಗದ (ಮಹಾಲಿಂಗದ) ನಿಜಸ್ವರೂಪವೆಂದು ಹೇಳಲ್ಪಡುತ್ತದೆ.

**ಬ್ರಹ್ಮವಿಷ್ಣ್ವಾದಯೋ ದೇವಾಃ**

**ಸರ್ವೇ ವೇದಾದಯಸ್ತಥಾ ।**
**ಲೀಯಂತೇ ಯತ್ರ ಗಮ್ಯಂತೇ**
**ತಲ್ಲಿಂಗಂ ಬ್ರಹ್ಮ ಕೇವಲಮ್ ॥ 12–33**

ಬ್ರಹ್ಮ, ವಿಷ್ಣು ಮೊದಲಾದ ದೇವತೆಗಳು ಮತ್ತು ಎಲ್ಲಾ ಸಕಲ ವೇದಾಗಮಾದಿಗಳು ಯಾವುದರಲ್ಲಿ ಲೀನಗೊಳ್ಳುವುವೋ ಮತ್ತು ಯಾವುದರಿಂದ ಹೊರಹೊಮ್ಮುವವೋ, ಆ ಪರಬ್ರಹ್ಮವೇ ಲಿಂಗವು.

**ಚಿದಾನಂದಮಯಃ ಸಾಕ್ಷಾತ್**
**ಶಿವ ಏವ ನಿರಂಜನಃ ।**
**ಲಿಂಗಮಿತ್ಯುಚ್ಯತೇ ನಾನ್ಯದ್**
**ಯತಃ ಸ್ಯಾದ್ವಿಶ್ವಸಂಭವಃ ॥ 12–34**

ಯಾವುದರಿಂದ ವಿಶ್ವೋತ್ಪತ್ತಿಯು ಆಗುವುದೋ ಮತ್ತು ಯಾವುದು ಸಚ್ಚಿದಾನಂದ ಸ್ವರೂಪವೋ, ನಿರಂಜನವೋ (ದೋಷರಹಿತವೂ) ಆದ ಅದು ಸಾಕ್ಷಾತ್ ಶಿವನೇ ಆಗಿದೆ. ಬೇರೆ ಯಾವುದೂ ಇಲ್ಲ.

**ಬಹುನಾಽತ್ರ ಕಿಮುಕ್ತೇನ**
**ಲಿಂಗಮಿತ್ಯುಚ್ಯತೇ ಬುಧೈಃ ।**
**ಶಿವಾಭಿಧಂ ಪರಂ ಬ್ರಹ್ಮ**
**ಚಿದ್ರೂಪಂ ಜಗದಾಸ್ಪದಮ್ ॥ 12–35**

ಹೆಚ್ಚಿಗೆ ಹೇಳುವುದರಿಂದ ಏನು ಪ್ರಯೋಜನ? ಜಗತ್ತಿಗೆ ಆಶ್ರಯವಾದ ಚಿದ್ರೂಪವಾದ ಶಿವನೆಂಬ ಅಭಿಧಾನವುಳ್ಳ ಪರಬ್ರಹ್ಮವೆ ಲಿಂಗವೆಂಬುದಾಗಿ ಬುಧರು (ಜ್ಞಾನಿಗಳು) ಹೇಳುತ್ತಾರೆ.

**ವೇದಾಂತವಾಕ್ಯಜಾಂ ವಿದ್ಯಾಮ್**
**ಲಿಂಗಮಾಹುಸ್ತಥಾಽಪರೇ ।**
**ತದಸದ್ ಜ್ಞೇಯರೂಪತ್ವಾತ್**
**ಲಿಂಗಸ್ಯ ಬ್ರಹ್ಮರೂಪಿಣಃ ॥ 12–36**

ಬೇರೆಯವರು (ವೇದಾಂತಿಗಳು) ವೇದಾಂತ ವಾಕ್ಯಗಳಿಂದ (ಪ್ರಜ್ಞಾನಂ ಬ್ರಹ್ಮ, ತತ್ತ್ವಮಸಿ, ಅಹಂ ಬ್ರಹ್ಮಾಸ್ಮಿ – ಅಯಮಾತ್ಮಾಬ್ರಹ್ಮ, ಈ ಮಹಾವಾಕ್ಯಗಳಿಂದ) ಉತ್ಪನ್ನವಾದ ವಿದ್ಯೆಯನ್ನು ಲಿಂಗವೆಂದು ಕರೆಯುತ್ತಾರೆ. ಆದರೆ ಅದು ಅಸತ್ಯ (ಏಕೆಂದರೆ ಪರಬ್ರಹ್ಮರೂಪವಾದ ಲಿಂಗವು ಆ ವೇದಾಂತಜನ್ಯ ಜ್ಞಾನಕ್ಕೆ ಜ್ಞೇಯ ರೂಪವಾಗಿರುತ್ತದೆ).

**ಅವ್ಯಕ್ತಂ ಲಿಂಗಮಿತ್ಯಾಹುಃ**
**ಜಗತಾಂ ಮೂಲಕಾರಣಮ್ ।**
**ಲಿಂಗೀ ಮಹೇಶ್ವರಶ್ಚೇತಿ**
**ಮತಮೇತದಸಂಗತಮ್ ॥ 12–37**

ಜಗತ್ತಿಗೆ ಮೂಲಕಾರಣವಾದ ಅವ್ಯಕ್ತವನ್ನು (ಪ್ರಕೃತಿಯನ್ನು) ಲಿಂಗವೆಂದು ಹೇಳುವರು ಮತ್ತು ಮಹೇಶ್ವರನನ್ನು ಲಿಂಗಿಯೆಂದು ಕರೆಯುವರು. ಸಾಂಖ್ಯರ ಈ ಮತವು ಅಸಂಗತವಾದುದು.

**ನ ಸೂರ್ಯೋ ಭಾತಿ ತತ್ರೇಂದುಃ**
**ನ ವಿದ್ಯುನ್ನ ಚ ಪಾವಕಃ ।**
**ನ ತಾರಕಾ ಮಹಾಲಿಂಗೇ**
**ದ್ಯೋತಮಾನೇ ಪರಾತ್ಮನಿ ॥ 12–38**

ಪರಮಾತ್ಮರೂಪವಾದ ಆ ಮಹಾಲಿಂಗವು ಪ್ರಕಾಶಮಾನವಾಗುತ್ತಿರಲು ಅಲ್ಲಿ ಸೂರ್ಯನಾಗಲಿ, ಚಂದ್ರನಾಗಲಿ, ವಿದ್ಯುತ್ತೇ ಆಗಲಿ, ಅಗ್ನಿಯೇ ಆಗಲಿ, ನಕ್ಷತ್ರಗಳೇ ಆಗಲಿ, ಪ್ರಕಾಶಿಸಲಾರವು (ಆ ಮಹಾಲಿಂಗದ ಪ್ರಕಾಶದ ಮುಂದೆ ಸೂರ್ಯಚಂದ್ರಾದಿಗಳು ನಿಸ್ತೇಜವಾಗಿರುತ್ತಾರೆ).

**ಜ್ಯೋತಿರ್ಮಯಂ ಪರಂ ಲಿಂಗಮ್**
**ಶ್ರುತಿರಾಹ ಶಿವಾತ್ಮಕಮ್ ।**
**ತಸ್ಯ ಭಾಸಾ ಸರ್ವಮಿದಮ್**
**ಪ್ರತಿಭಾತಿ ನ ಸಂಶಯಃ ॥ 12–39**

ಶಿವಸ್ವರೂಪವಾದ ಆ ಪರಲಿಂಗವು ಜ್ಯೋತಿರ್ಮಯವೆಂದು ಶ್ರುತಿಯು ಹೇಳುತ್ತದೆ. (ಅಂತೆಯೇ) ಇದೆಲ್ಲವೂ ಅವನ ಪ್ರಕಾಶದಿಂದಲೇ ಪ್ರಕಾಶಿಸುತ್ತಿರುತ್ತದೆ. ಇದರಲ್ಲಿ ಯಾವ ಸಂಶಯವೂ ಇಲ್ಲ.

**ಲಿಂಗಾನ್ನಾಸ್ತಿ ಪರಂ ತತ್ತ್ವಮ್**
**ಯದಸ್ಮಾಜ್ಜಾಯತೇ ಜಗತ್ ।**
**ಯದೇತದ್ರೂಪತಾಂ ಧತ್ತೇ**
**ಯದತ್ರ ಲಯಮಶ್ನುತೇ ॥ 12–40**

**ತಸ್ಮಾಲ್ಲಿಂಗಂ ಪರಂ ಬ್ರಹ್ಮ**
**ಸಚ್ಚಿದಾನಂದಲಕ್ಷಣಮ್ ।**
**ನಿಜರೂಪಮಿತಿ ಧ್ಯಾನಾತ್**
**ತದವಸ್ಥಾ ಪ್ರಜಾಯತೇ ॥ 12–41**

ಲಿಂಗತತ್ತ್ವಕ್ಕಿಂತಲೂ ಶ್ರೇಷ್ಠವಾದ ಬೇರೊಂದು ತತ್ತ್ವವಿಲ್ಲ. ಈ ಚರಾಚರ ವಿಶ್ವವೆಲ್ಲವೂ ಆ ಲಿಂಗತತ್ತ್ವದಿಂದಲೇ ಉತ್ಪನ್ನವಾಗಿದೆ. ಆ ಲಿಂಗತತ್ತ್ವದಲ್ಲಿ ಇರುವಂಥಾದ್ದೇ ಆಗಿದೆ ಮತ್ತು ಅಲ್ಲಿಯೇ ಎಲ್ಲವೂ ಲಯಗೊಳ್ಳುವುದು. ಆದ್ದರಿಂದ ಸಚ್ಚಿದಾನಂದ ಲಕ್ಷಣರೂಪವಾದ ಲಿಂಗವೇ ಪರಬ್ರಹ್ಮವು. ಆ ಲಿಂಗವೇ ತನ್ನ ನಿಜರೂಪವೆಂದು ಧ್ಯಾನಿಸುವುದರಿಂದ ಲಿಂಗನಿಜಸ್ಥಿತಿಯು ಪ್ರಾಪ್ತವಾಗುತ್ತದೆ.

*ಇತಿ ಲಿಂಗನಿಜಸ್ಥಲಂ ಇಲ್ಲಿಗೆ ಲಿಂಗನಿಜಸ್ಥಲವು ಮುಗಿಯಿತು.*

## 36. ಅಥ ಅಂಗಲಿಂಗಸ್ಥಲಮ್
ಈಗ ಅಂಗಲಿಂಗಸ್ಥಲವು
**(7 ಶ್ಲೋಕಗಳು)**

**ಜ್ಞಾನಮಂಗಮಿತಿ ಪ್ರಾಹುಃ**
**ಜ್ಞೇಯಂ ಲಿಂಗಂ ಸನಾತನಮ್ ।**
**ವಿದ್ಯತೇ ತದ್ದ್ವಯಂ ಯಸ್ಯ**
**ಸೋಽಂಗಲಿಂಗೀತಿ ಕೀರ್ತಿತಃ ॥ 12–42**

ಜ್ಞಾನವುಳ್ಳವನೇ ಅಂಗನೆಂದು ಹೇಳುತ್ತಾರೆ. ಸನಾತನವಾದ ಲಿಂಗವು, ಜ್ಞೇಯವೆಂಬುದಾಗಿ ಕರೆಯಲ್ಪಡುತ್ತದೆ. ಇವೆರಡೂ ಯಾರಿಗೆ ಇರುತ್ತವೆಯೋ ಅವನು ಅಂಗಲಿಂಗಿಯೆಂದು ಕರೆಯಲ್ಪಡುತ್ತಾನೆ.

**ಅಂಗೇ ಲಿಂಗಂ ಸಮಾರೂಢಮ್**
**ಲಿಂಗೇ ಚಾಂಗಮುಪಸ್ಥಿತಮ್ ।**

**ಏತದಸ್ತಿ ದ್ವಯಂ ಯಸ್ಯ**
**ಸ ಭವೇದಂಗಲಿಂಗವಾನ್ ॥ 12–43**

ಅಂಗದಲ್ಲಿ ಲಿಂಗವು ಸಮಾರೂಢವಾಗಿದೆ (ಸಮರಸವಾಗಿದೆ) ಮತ್ತು ಲಿಂಗದಲ್ಲಿ ಅಂಗವು ಉಪಸ್ಥಿತವಾಗಿದೆ (ಸಮರಸವಾಗಿದೆ). ಇವೆರಡೂ ಯಾರಲ್ಲಿ ಇರುತ್ತವೆಯೋ ಅವನೇ ಅಂಗಲಿಂಗಿಸ್ಥಲಿಯಾಗಿದ್ದಾನೆ (ಅಂಗದಲ್ಲಿ ಲಿಂಗವನ್ನು, ಲಿಂಗದಲ್ಲಿ ಅಂಗವನ್ನು – ಹೀಗೆ ಇವೆರಡರ ಸಾಮರಸ್ಯ ಸ್ಥಿತಿಯನ್ನು ಪಡೆದವನೇ ಅಂಗಲಿಂಗಿ).

**ಜ್ಞಾತ್ವಾ ಯಃ ಸತತಂ ಲಿಂಗಮ್**
**ಸ್ವಾಂತಸ್ಥಂ ಜ್ಯೋತಿರಾತ್ಮಕಮ್ ।**
**ಪೂಜಯೇದ್ ಭಾವಯನ್ನಿತ್ಯಮ್**
**ತಂ ವಿದ್ಯಾದಂಗಲಿಂಗಿನಮ್ ॥ 12–44**

ತನ್ನ ಹೃದಯ ಕಮಲದಲ್ಲಿದ್ದ ಜ್ಯೋತಿರ್ಮಯವಾದ ಲಿಂಗವನ್ನು ತಿಳಿದುಕೊಂಡು (ಶ್ರುತಿ, ಗುರು, ಸ್ವಾನುಭವಗಳಿಂದ) ನಿತ್ಯವೂ ಯಾವಾತನು ಅದನ್ನು ಪೂಜಿಸುವನೋ ಮತ್ತು ಭಾವಿಸುವನೋ ಅವನನ್ನು ಅಂಗಲಿಂಗಿಯೆಂದು ತಿಳಿದುಕೊಳ್ಳಬೇಕು.

**ಜ್ಞಾಯತೇ ಲಿಂಗಮೇವೈಕಮ್**
**ಸರ್ವೈಃ ಶಾಸ್ತ್ರೈಃ ಸನಾತನೈಃ ।**
**ಬ್ರಹ್ಮೇತಿ ವಿಶ್ವಧಾಮೇತಿ**
**ವಿಮುಕ್ತೇಃ ಪದಮಿತ್ಯಪಿ ॥ 12–45**

ಸನಾತನಗಳಾದ (ಅನಾದಿಗಳಾದ) ಎಲ್ಲ ಶಾಸ್ತ್ರಗಳು ಆ ಒಂದೇ ಆದ ಲಿಂಗವನ್ನು ಬ್ರಹ್ಮವೆಂತಲೂ, ವಿಶ್ವಕ್ಕೆ ಆಧಾರವೆಂತಲೂ, ಮುಕ್ತಿಯ ಸ್ಥಾನವೆಂತಲೂ ಹೇಳುತ್ತವೆ.

**ಮುಕ್ತಿರೂಪಮಿದಂ ಲಿಂಗಮ್**
**ಇತಿ ಯಸ್ಯ ಮನಃಸ್ಥಿತಿಃ ।**
**ಸ ಮುಕ್ತೋ ದೇಹಯೋಗೇಽಪಿ**
**ಸ ಜ್ಞಾನೀ ಸ ಮಹಾಗುರುಃ ॥ 12–46**

ಈ ಲಿಂಗವು ಮುಕ್ತಿಸ್ವರೂಪವಾದುದು ಎಂಬುದಾಗಿ ಯಾರ ಮನಸ್ಸಿನ ಸ್ಥಿತಿ ಇರುತ್ತದೆಯೋ ಅವನು ದೇಹ ಸಂಬಂಧಿಯಾಗಿದ್ದರೂ ಮುಕ್ತನೇ ಆಗಿರುತ್ತಾನೆ. ಅವನೇ ಜ್ಞಾನಿಯು ಮತ್ತು ಅವನೇ ಮಹಾಗುರುವು.

**ಅನಾದಿನಿಧನಂ ಲಿಂಗಮ್**
**ಕಾರಣಂ ಜಗತಾಮಿತಿ ।**
**ಯೇ ನ ಜಾನಂತಿ ತೇ ಮೂಢಾ**
**ಮೋಕ್ಷಮಾರ್ಗಬಹಿಷ್ಕೃತಾಃ ॥ 12–47**

ಆದಿ ಅಂತ್ಯಗಳಿಲ್ಲದ ಆ ಲಿಂಗವು ಜಗತ್ತಿಗೆ ಕಾರಣವಾಗಿರುತ್ತದೆ. ಈ ರೀತಿಯಾಗಿ ಯಾರು ತಿಳಿದುಕೊಳ್ಳುವುದಿಲ್ಲವೋ ಅವರು ಮೂಢರೆಂತಲೂ, ಮೋಕ್ಷಮಾರ್ಗ ಬಹಿಷ್ಕೃತರೆಂತಲೂ (ಮೋಕ್ಷಮಾರ್ಗಕ್ಕೆ ಅನರ್ಹರೆಂತಲೂ) ತಿಳಿದುಕೊಳ್ಳಬೇಕು.

**ಯಃ ಪ್ರಾಣಲಿಂಗಾರ್ಚನಭಾವಪೂರ್ವೈ–**
**ರ್ಧರ್ಮೈರುಪೇತಃ ಶಿವಭಾವಿತಾತ್ಮಾ ।**
**ಸ ಏವ ತುರ್ಯಃ ಪರಿಕೀರ್ತಿತೋಽಸೌ**
**ಸಂವಿದ್ವಿಪಾಕಾಚ್ಛರಣಾಭಿಧಾನಃ ॥ 12–48**
**– ಇಂದ್ರವಜ್ರಾ ವೃತ್ತಮ್**

ಪ್ರಾಣಲಿಂಗಾರ್ಚನ ಸ್ಥಲದಲ್ಲಿ ಹೇಳಿದ ಭಾವಪೂರ್ಣವಾದ ಧರ್ಮಗಳಿಂದ (ಕ್ಷಮಾದಿ ಸದ್ಗುಣಗಳಿಂದ) ಯಾವನು ಕೂಡಿದವನಾಗಿರುತ್ತಾನೆಯೋ ಮತ್ತು ತುರ್ಯಾವಸ್ಥೆಯಲ್ಲಿರುತ್ತಾನೆಯೋ ಅಂತಹ ಪ್ರಾಣಲಿಂಗಿಸ್ಥಲದ ಸಾಧಕನೇ ಜ್ಞಾನದ ಪರಿಪಕ್ವ ಸ್ಥಿತಿಯಿಂದ ಶರಣನೆಂದು ಕರೆಯಲ್ಪಡುತ್ತಾನೆ.

***ಇತಿ ಅಂಗಲಿಂಗಸ್ಥಲಂ*** *ಇಲ್ಲಿಗೆ ಅಂಗಲಿಂಗಸ್ಥಲವು ಮುಗಿಯಿತು*

***ಓಂ ತತ್ಸತ್ ಇತಿ***

***ಶ್ರೀ ಶಿವಗೀತೇಷು ಸಿದ್ಧಾಂತಾಗಮೇಷು ಶಿವಾದ್ವೈತವಿದ್ಯಾಯಾಂ ಶಿವಯೋಗಶಾಸ್ತ್ರೇ ಶ್ರೀರೇಣುಕಾಗಸ್ತ್ಯ ಸಂವಾದೇ ವೀರಶೈವಧರ್ಮನಿರ್ಣಯೇ ಶ್ರೀಶಿವಯೋಗಿಶಿವಾಚಾರ್ಯವಿರಚಿತೇ ಶ್ರೀಸಿದ್ಧಾಂತಶಿಖಾಮಣೌ ಪ್ರಾಣಲಿಂಗಿಸ್ಥಲೇ ಪ್ರಾಣಲಿಂಗಿಸ್ಥಲಾದಿಪಂಚವಿಧಸ್ಥಲಪ್ರಸಂಗೋ ನಾಮ ದ್ವಾದಶಃ ಪರಿಚ್ಛೇದಃ ॥***

*ಓಂ ತತ್ಸತ್ ಇತಿ ಶ್ರೀ ಶಿವನಿಂದ ಉಪದೇಶಿಸಲ್ಪಟ್ಟು ಶ್ರೀ ಸಿದ್ಧಾಂತಾಗಮಗಳಲ್ಲಿಯ ಶಿವಾದ್ವೈತವಿದ್ಯಾರೂಪವೂ, ಶಿವಯೋಗಶಾಸ್ತ್ರವೂ, ಶ್ರೀ ರೇಣುಕಾಗಸ್ತ್ಯಸಂವಾದರೂಪವೂ, ಶ್ರೀ ವೀರಶೈವಧರ್ಮನಿರ್ಣಯವೂ, ಶ್ರೀ ಶಿವಯೋಗಿ ಶಿವಾಚಾರ್ಯ ವಿರಚಿತವೂ ಆದ ಶ್ರೀ ಸಿದ್ಧಾಂತ ಶಿಖಾಮಣಿಯಲ್ಲಿ ಪ್ರಾಣಲಿಂಗಿಸ್ಥಲದ ಪ್ರಾಣಲಿಂಗಿಸ್ಥಲಾದಿ ಪಂಚವಿಧಸ್ಥಲ ಪ್ರಸಂಗನಾಮದ ಹನ್ನೆರಡನೆಯ ಪರಿಚ್ಛೇದವು ಮುಗಿದುದು.*

# ತ್ರಯೋದಶಃ ಪರಿಚ್ಛೇದಃ
ಹದಿಮೂರನೆಯ ಪರಿಚ್ಛೇದವು

## ಶರಣಸ್ಯ ಚತುರ್ವಿಧಸ್ಥಲಪ್ರಸಂಗಃ
ಶರಣನ ಚತುರ್ವಿಧಸ್ಥಲ ಪ್ರಸಂಗವು
**(37 ಶ್ಲೋಕಗಳು)**

## ಶರಣಸ್ಥಲಮ್
ಶರಣಸ್ಥಲವು
**(4 ಶ್ಲೋಕಗಳು)**

**॥ ಅಗಸ್ತ್ಯ ಉವಾಚ ॥**
**ಮಾಹೇಶ್ವರಃ ಪ್ರಸಾದೀತಿ**
**ಪ್ರಾಣಲಿಂಗೀತಿ ಬೋಧಿತಃ ।**
**ಕಥಮೇಷ ಸಮಾದಿಷ್ಟಃ**
**ಪುನಃ ಶರಣಸಂಜ್ಞಕಃ ॥ 13–1**

(ಹೇ ಗಣಾಧೀಶ್ವರನೇ) ಮಾಹೇಶ್ವರನೆಂದೂ, ಪ್ರಸಾದಿಯೆಂದೂ ಬೋಧಿಸಲ್ಪಟ್ಟ ಈ ಪ್ರಾಣಲಿಂಗಿಯೇ ಮತ್ತೆ ಯಾವ ಕಾರಣದಿಂದ ಶರಣನೆಂಬ ಹೆಸರುಳ್ಳವನಾಗಿ ಹೇಳಲ್ಪಡುವನು.

**॥ ಶ್ರೀ ರೇಣುಕ ಉವಾಚ ॥**
**ಅಂಗಲಿಂಗೀ ಜ್ಞಾನರೂಪಃ**
**ಸತೀ ಜ್ಞೇಯಃ ಶಿವಃ ಪತಿಃ ।**
**ಯತ್ಸೌಖ್ಯಂ ತತ್ಸಮಾವೇಶೇ**
**ತದ್ವಾನ್ ಶರಣನಾಮವಾನ್ ॥ 13–2**

ಜ್ಞಾನರೂಪನಾದ (ಶಿವಜ್ಞಾನರೂಪಿಯಾದ) ಅಂಗಲಿಂಗಿಯಾದ ಪ್ರಾಣಲಿಂಗಿಯೇ ಸತಿಯೆಂದು, ಶಿವನು ಪತಿಯೆಂದು ತಿಳಿದುಕೊಂಡು ಇವರಿಬ್ಬರ ಸಮಾವೇಶದಲ್ಲಿ (ಸಮಾನ ಸಮರಸ ರೂಪವಾದ ಸಾಮರಸ್ಯದಲ್ಲಿ) ಯಾವ ಸೌಖ್ಯವುಂಟಾಗುವುದೋ, ಅದನ್ನು ಪಡೆದವನೇ ಶರಣನೆಂದು ಹೆಸರುಳ್ಳವನಾಗುವನು (ಶರಣನಾಗುವನು).

**ಸ್ಥಲಮೇತತ್ಸಮಾಖ್ಯಾತಮ್**
**ಚತುರ್ಧಾ ಧರ್ಮಭೇದತಃ ।**
**ಆದೌ ಶರಣಮಾಖ್ಯಾತಮ್**
**ತತಸ್ತಾಮಸವರ್ಜನಮ್ ॥ 13–3**

**ತತೋ ನಿರ್ದೇಶಮುದ್ದಿಷ್ಟಮ್**
**ಶೀಲಸಂಪಾದನಂ ತತಃ ।**

**ಕ್ರಮಾಲ್ಲಕ್ಷಣಮೇತೇಷಾಮ್**
**ಕಥಯಾಮಿ ನಿಶಮ್ಯತಾಮ್ ॥ 13–4**

ಈ ಶರಣಸ್ಥಲವು ಧರ್ಮಭೇದದಿಂದ (ಆಚಾರ ಭೇದದಿಂದ) ನಾಲ್ಕು ಪ್ರಕಾರವಾಗಿ ಹೇಳಲ್ಪಟ್ಟಿರುತ್ತದೆ. ಅವುಗಳಲ್ಲಿ ಮೊದಲನೆಯದೇ ಶರಣಸ್ಥಲವು. ನಂತರ ತಾಮಸನಿರಸನಸ್ಥಲವು. ಅದಾದ ಬಳಿಕ ನಿರ್ದೇಶಸ್ಥಲವು. ತರುವಾಯ ಶೀಲಸಂಪಾದನ ಸ್ಥಲವು ಹೇಳಲ್ಪಡುತ್ತದೆ. ಇವೆಲ್ಲವುಗಳ ಲಕ್ಷಣಗಳನ್ನು ಕ್ರಮವಾಗಿ ಹೇಳುತ್ತೇವೆ (ಹೇ ಅಗಸ್ತ್ಯನೇ) ನೀನು ಕೇಳು.

## 37. ಅಥ ಶರಣಸ್ಥಲಮ್
ಈಗ ಶರಣಸ್ಥಲವು
**(8 ಶ್ಲೋಕಗಳು)**

**ಸತೀವ ರಮಣೇ ಯಸ್ತು**
**ಶಿವೇ ಶಕ್ತಿಂ ವಿಭಾವಯನ್ ।**
**ತದನ್ಯವಿಮುಖಃ ಸೋಽಯಮ್**
**ಜ್ಞಾತಃ ಶರಣನಾಮವಾನ್ ॥ 13–5**

ಪತಿವ್ರತೆಯಾದ ಸತಿಯು ತನ್ನ ರಮಣನ ವಿಷಯದಲ್ಲಿ ಅನನ್ಯವಾಗಿರುವಂತೆ ಶಿವನ ವಿಷಯದಲ್ಲಿ ತನ್ನನ್ನು ಶಕ್ತಿಯನ್ನಾಗಿ (ಸತಿಯನ್ನಾಗಿ) ವಿಭಾವಿಸಿ (ತಿಳಿದು) ತದನ್ಯವಿಮುಖನಾಗಿ (ಶಿವನಿಗೆ ಅನ್ಯವಾದ ದೇವತೆಗಳಿಗೆ ವಿಮುಖನಾಗಿ) ಇರುವನೋ ಅವನೇ ಶರಣನೆಂದು ತಿಳಿಯಲ್ಪಡುವನು.

**ಪರಿಜ್ಞಾತೇ ಶಿವೇ ಸಾಕ್ಷಾತ್**
**ಕೋ ವಾಽನ್ಯಮಭಿಕಾಂಕ್ಷತಿ ।**
**ನಿಧಾನೇ ಮಹತಿ ಪ್ರಾಪ್ತೇ**
**ಕಃ ಕಾಚಂ ಯಾಚತೇಽನ್ಯತಃ ॥ 13–6**

ಶಿವನನ್ನು ಸಾಕ್ಷಾತ್ (ಪ್ರತ್ಯಕ್ಷವಾಗಿ) ತಿಳಿದುಕೊಂಡ ಮೇಲೆ ಯಾರು ತಾನೇ ಅನ್ಯದೇವರನ್ನು ಬಯಸುವನು. ಮಹತ್ತರವಾದ ನಿಧಿಯು ಪ್ರಾಪ್ತವಾಗಿರಲು ಅನ್ಯರಿಂದ ಯಾರು ತಾನೇ ಕಾಚನ್ನು (ಗಾಜನ್ನು) ಯಾಚಿಸಬಲ್ಲನು?

**ಶಿವಾನಂದಂ ಸಮಾಸಾದ್ಯ**
**ಕೋ ವಾಽನ್ಯಮುಪತಿಷ್ಠತೇ ।**
**ಗಂಗಾಮೃತಂ ಪರಿತ್ಯಜ್ಯ**
**ಕಃ ಕಾಂಕ್ಷೇನ್ಮೃಗತೃಷ್ಣಿಕಾಮ್ ॥ 13–7**

ಶಿವಾನಂದವನ್ನು ಪಡೆದುಕೊಂಡ ಮೇಲೆ ಯಾರು ತಾನೇ ಅನ್ಯದೇವರನ್ನು ಆಶ್ರಯಿಸುವರು? ಗಂಗಾಮೃತವನ್ನು ತ್ಯಜಿಸಿ ಮೃಗ ಮರೀಚಿಕೆಯನ್ನು (ಮೃಗಜಲವನ್ನು) ಯಾರು ತಾನೇ ಅಪೇಕ್ಷಿಸಬಲ್ಲರು?

**ಸಂಸಾರತಿಮಿರಚ್ಛೇದೇ**
**ವಿನಾ ಶಂಕರಭಾಸ್ಕರಮ್ ।**

**ಪ್ರಭವಂತಿ ಕಥಂ ದೇವಾಃ**
**ಖದ್ಯೋತಾ ಇವ ದೇಹಿನಾಮ್ ॥ 13–8**

ಜೀವಿಗಳ ಸಂಸಾರವೆಂಬ ಕತ್ತಲೆಯನ್ನು ಕಳೆಯಲು ಶಂಕರನೆಂಬ ಸೂರ್ಯನ ಹೊರತಾಗಿ ಖದ್ಯೋತದಂತಿರುವ (ಮಿಂಚು ಹುಳುಗಳಂತಿರುವ) ಇತರ ದೇವತೆಗಳು ಹೇಗೆ ತಾನೇ ಸಮರ್ಥರಾಗಬಲ್ಲರು?

**ಸಂಸಾರಾರ್ತಃ ಶಿವಂ ಯಾಯಾದ್**
**ಬ್ರಹ್ಮಾದ್ಯೈಃ ಕಿಂ ಫಲಂ ಸುರೈಃ ।**
**ಚಕೋರಸ್ತೃಷಿತಃ ಪಶ್ಯೇತ್**
**ಚಂದ್ರಂ ಕಿಂ ತಾರಕಾ ಅಪಿ ॥ 13–9**

ಸಂಸಾರದಿಂದ ನೊಂದಾತನು ಶಿವನಿಗೇನೆ ಶರಣಾಗತನಾಗಬೇಕು. ಬ್ರಹ್ಮಾದಿ ಉಳಿದ ದೇವತೆಗಳಿಂದ ಏನು ಫಲ? ನೀರಡಿಸಿದ ಚಕೋರವು ಚಂದ್ರನನ್ನು ನೋಡುವುದಲ್ಲದೆ ತಾರೆಗಳನ್ನು ನೋಡುವುದೇ?

**ಶಿವ ಏವ ಸಮಸ್ತಾನಾಮ್**
**ಶರಣ್ಯಃ ಶರಣಾರ್ಥಿನಾಮ್ ।**
**ಸಂಸಾರೋರಗದಷ್ಟಾನಾಮ್**
**ಸರ್ವಜ್ಞಃ ಸರ್ವದೋಷಹಾ ॥ 13–10**
**ಶಿವಜ್ಞಾನೇ ಸಮುತ್ಪನ್ನೇ**
**ಪರಾನಂದಃ ಪ್ರಕಾಶತೇ ।**
**ತದಾಸಕ್ತಮನಾ ಯೋಗೀ**
**ನಾನ್ಯತ್ರ ರಮತೇ ಸುಧೀಃ ॥ 13–11**

ಸಂಸಾರವೆಂಬ ಉರಗದಿಂದ (ಸರ್ಪದಿಂದ) ಕಚ್ಚಲ್ಪಟ್ಟು ಅಂತೆಯೇ ಶರಣಾಗತರಾದ ಎಲ್ಲ ಜೀವಿಗಳ ಸರ್ವದೋಷಗಳನ್ನು ದೂರ ಮಾಡುವ ಸರ್ವಜ್ಞನಾದ ಶಿವನೊಬ್ಬನೇ ಶರಣ್ಯನಾಗಿದ್ದಾನೆ (ಶರಣಾಗತ ರಕ್ಷಕನಾಗಿದ್ದಾನೆ). ಶಿವಜ್ಞಾನವು ಉಂಟಾಗಲು ಪರಾನಂದವು (ಶಿವಾನಂದವು) ಪ್ರಕಾಶಿಸುತ್ತದೆ. ಆ ಪ್ರಕಾಶದಲ್ಲಿ ಆಸಕ್ತವಾದ ಮನಸ್ಸುಳ್ಳ ಜ್ಞಾನಿಯಾದ ಯೋಗಿಯು, ಬೇರೆ ಕಡೆಯಲ್ಲಿ ರಮಿಸುವುದಿಲ್ಲ (ಆನಂದಿಸುವುದಿಲ್ಲ).

**ತಸ್ಮಾತ್ ಸರ್ವಪ್ರಯತ್ನೇನ**
**ಶಂಕರಂ ಶರಣಂ ಗತಃ ।**
**ತದನಂತಸುಖಂ ಪ್ರಾಪ್ಯ**
**ಮೋದತೇ ನಾನ್ಯಚಿಂತಯಾ ॥ 13–12**

ಆದ್ದರಿಂದ ಸರ್ವಪ್ರಯತ್ನಗಳನ್ನು ಮಾಡಿ ಶಂಕರನಿಗೆ ಶರಣಾಗತನಾದ ಶರಣನು ಶಿವನ ಅನಂತ ಸುಖವನ್ನು ಪಡೆದು ಬೇರೆ (ಯಾವ) ಚಿಂತೆಗಳಿಲ್ಲದೆ ಆನಂದಿಸುತ್ತಿರುತ್ತಾನೆ.

*ಇತಿ ಶರಣಸ್ಥಲಂ*
*ಇಲ್ಲಿಗೆ ಶರಣಸ್ಥಲವು ಮುಗಿಯಿತು.*

## 38. ಅಥ ತಾಮಸನಿರಸನಸ್ಥಲಮ್
ಈಗ ತಾಮಸನಿರಸನಸ್ಥಲವು
**(9 ಶ್ಲೋಕಗಳು)**

**ಶಿವಾಸಕ್ತಪರಾನಂದ–**
**ಮೋದಿನಾ ಗುರುಣಾ ಯತಃ ।**
**ನಿರಸ್ಯಂತೇ ತಮೋಭಾವಾಃ**
**ಸ ತಾಮಸನಿರಾಸಕಃ ॥ 13–13**

ಶಿವಾಸಕ್ತಿಯಿಂದ (ಶಿವಸಾಮ್ಯದಿಂದ) ಉಂಟಾದ ಪರಮಾನಂದದಿಂದ ಮೋದಿಸುತ್ತಿದ್ದ (ಆನಂದಪಡುತ್ತಿದ್ದ) ಅಂತೆಯೇ ಶ್ರೇಷ್ಠವಾದ ಶರಣಸ್ಥಲದ ಸಾಧಕನು ತನ್ನಲ್ಲಿ ಉಂಟಾಗುವ ತಮೋಗುಣದ ಭಾವನೆಗಳನ್ನು ನಿರಾಕರಿಸಿಕೊಳ್ಳುತ್ತಾನೆ. ಆದ್ದರಿಂದ ಅವನನ್ನು ತಾಮಸನಿರಾಸಕನೆಂದು ಕರೆಯುತ್ತಾರೆ.

**ಯಸ್ಯ ಜ್ಞಾನಂ ತಮೋಮಿಶ್ರಮ್**
**ನ ತಸ್ಯ ಗತಿರಿಷ್ಯತೇ ।**
**ಸತ್ತ್ವಂ ಹಿ ಜ್ಞಾನಯೋಗಸ್ಯ**
**ನೈರ್ಮಲ್ಯಂ ವಿದುರುತ್ತಮಾಃ ॥ 13–14**
ಯಾರ ಜ್ಞಾನವು ತಮೋಗುಣ ಮಿಶ್ರವಾಗಿರುತ್ತದೆಯೋ ಅವರಿಗೆ ಸದ್ಗತಿಯು ದೊರೆಯುವುದಿಲ್ಲ. ಅಂತೆಯೇ ಉತ್ತಮರು (ಸತ್ಪುರುಷರು) ಸತ್ವಗುಣವೇ ಜ್ಞಾನವನ್ನು ನಿರ್ಮಲವಾಗಿರಿಸುವುದು ಎಂಬುದಾಗಿ ತಿಳಿದಿರುತ್ತಾರೆ.

**ಶಮೋ ದಮೋ ವಿವೇಕಶ್ಚ**
**ವೈರಾಗ್ಯಂ ಪೂರ್ಣಭಾವನಾ ।**
**ಕ್ಷಾಂತಿಃ ಕಾರುಣ್ಯಸಂಪತ್ತಿಃ**
**ಶ್ರದ್ಧಾ ಸತ್ಯಸಮುದ್ಭವಾ ॥ 13–15**
**ಶಿವಭಕ್ತಿಃ ಪರೋ ಧರ್ಮಃ**
**ಶಿವಜ್ಞಾನಸ್ಯ ಬಾಂಧವಾಃ ।**
**ಏತೈರ್ಯುಕ್ತೋ ಮಹಾಯೋಗೀ**
**ಸಾತ್ತ್ವಿಕಃ ಪರಿಕೀರ್ತಿತಃ ॥ 13–16**

ಶಮೆ (ಅಂತರಿಂದ್ರಿಯ ನಿಗ್ರಹ), ದಮೆ (ಬಹಿರಿಂದ್ರಿಯ ನಿಗ್ರಹ), ವಿವೇಕ (ನಿತ್ಯಾನಿತ್ಯ ವಸ್ತು ವಿವೇಕ), ವೈರಾಗ್ಯ (ವಿಷಯ ವೈರಾಗ್ಯ), ಪೂರ್ಣಭಾವನೆ (ಅಖಂಡ ಧ್ಯಾನ), ಕ್ಷಾಂತಿ (ಕ್ಷಮೆ), ಕಾರುಣ್ಯ (ದಯೆ) ಮುಂತಾದ ಸಂಪತ್ತುಗಳು (ಅಧ್ಯಾತ್ಮಿಕ ಸಂಪತ್ತುಗಳು) ಸತ್ಯದಲ್ಲಿಯ ವಿಶ್ವಾಸ, ಶಿವಭಕ್ತಿ, ಪರೋಧರ್ಮ (ಶ್ರೇಷ್ಠವಾದ ಶಿವಾಚಾರಗಳು) – ಇವೆಲ್ಲವುಗಳು ಶಿವಜ್ಞಾನದ ಬಂಧುಗಳು. ಇವುಗಳಿಂದ (ಈ ಸದ್ಗುಣಗಳಿಂದ) ಕೂಡಿಕೊಂಡಿದ್ದ ಮಹಾಯೋಗಿಯೇ ಸಾತ್ವಿಕನೆಂದು ಹೇಳಿಸಿಕೊಳ್ಳುವನು.

**ಕಾಮಕ್ರೋಧಮಹಾಮೋಹ–**

**ಮದಮಾತ್ಸರ್ಯವಾರಣಾಃ ।**
**ಶಿವಜ್ಞಾನಮೃಗೇಂದ್ರಸ್ಯ**
**ಕಥಂ ತಿಷ್ಠಂತಿ ಸನ್ನಿಧೌ ॥ 13–17**

ಕಾಮ, ಕ್ರೋಧ, ಮೋಹ, ಮದ ಮತ್ತು ಮಾತ್ಸರ್ಯಗಳೆಂಬ ಆನೆಗಳು ಶಿವಜ್ಞಾನವೆಂಬ ಮೃಗೇಂದ್ರದ (ಸಿಂಹದ) ಸನ್ನಿಧಿಯಲ್ಲಿ ಹೇಗೆ ತಾನೇ ನಿಲ್ಲಲು ಸಾಧ್ಯ?

**ಯತ್ರ ಕುತ್ರಾಪಿ ವಾ ದ್ವೇಷ್ಟಿ**
**ಪ್ರಪಂಚೇ ಶಿವರೂಪಿಣಿ ।**
**ಶಿವದ್ವೇಷೀ ಸ ವಿಜ್ಞೇಯೋ**
**ರಜಸಾऽऽವಿಷ್ಟಮಾನಸಃ ॥ 13–18**

ಶಿವರೂಪಿಣಿಯಾದ (ಶಿವಸ್ವರೂಪವಾದ) ಈ ಪ್ರಪಂಚದಲ್ಲಿ ಎಲ್ಲಿಯೇ ಆಗಲಿ ಅಥವಾ ಯಾರನ್ನೇ ಆಗಲಿ ಯಾರು ದ್ವೇಷಿಸುವರೋ ರಜೋಗುಣಿಯಾದ ಅವನು ಶಿವದ್ವೇಷಿಯೆಂದೂ ಮತ್ತು ರಜೋಗುಣಿಯೆಂದೂ ತಿಳಿದುಕೊಳ್ಳಬೇಕು.

**ಯೋ ದ್ವೇಷ್ಟಿ ಸಕಲಾನ್ ಲೋಕಾನ್**
**ಯೋ ವಾऽಹಂಕುರುತೇ ಸದಾ ।**
**ಯೋऽಸತ್ಯಭಾವನಾಯುಕ್ತಃ**
**ಸ ತಾಮಸ ಇತಿ ಸ್ಮೃತಃ ॥ 13–19**

ಯಾವನು ಲೋಕದ ಸಕಲಜೀವಿಗಳನ್ನು ದ್ವೇಷಿಸುವನೋ, ಯಾವಾಗಲೂ ಅಹಂಕಾರದಿಂದ ಕೂಡಿರುವನೋ ಮತ್ತು ಯಾವನು ಅಸತ್ಯ ಭಾವನೆಯಿಂದ ಯುಕ್ತನಾಗಿರುವನೋ (ಅಸತ್ಯ ವಸ್ತುಗಳ ಧ್ಯಾನಾಸಕ್ತನಾಗಿರುವನೋ) ಅವನು ತಾಮಸನೆಂದು ಕರೆಯಿಸಿಕೊಳ್ಳುವನು.

**ತಮೋಮೂಲಾ ಹಿ ಸಂಜಾತಾ**
**ರಾಗದ್ವೇಷಾದಿಪಾದಪಾಃ ।**
**ಶಿವಜ್ಞಾನಕುಠಾರೇಣ**
**ಛೇದ್ಯಂತೇ ಹಿ ನಿರಂತರಮ್ ॥ 13–20**

ರಾಗ ದ್ವೇಷಾದಿಗಳೆಂಬ ಪಾದಪಗಳು (ಗಿಡಗಳು) ತಮೋ (ಗುಣ) ಮೂಲಕವಾಗಿಯೇ ಹುಟ್ಟುತ್ತವೆ. ಅವುಗಳು ಶಿವಜ್ಞಾನವೆಂಬ ಕುಠಾರದಿಂದ ನಿರಂತರವಾಗಿ ಛೇದಿಸಲ್ಪಡುತ್ತವೆ (ಕತ್ತರಿಸಲ್ಪಡುತ್ತವೆ).

**ಶಿವಜ್ಞಾನೇ ಸಮುತ್ಪನ್ನೇ**
**ಸಹಸ್ರಾದಿತ್ಯಸನ್ನಿಭೇ ।**
**ಕುತಸ್ತಮೋವಿಕಾರಾಃ ಸ್ಯುಃ**
**ಮಹತಾಂ ಶಿವಯೋಗಿನಾಮ್ ॥ 13–21**

ಸಾವಿರ ಸೂರ್ಯರ ಪ್ರಕಾಶಕ್ಕೆ ಸಮವಾದ ಶಿವಜ್ಞಾನವು ಉತ್ಪನ್ನವಾಗಲು ಅಂತಹ ಜ್ಞಾನವುಳ್ಳ ಮಹಾತ್ಮರಾದ ಶಿವಯೋಗಿಗಳಿಗೆ (ಶಿವಶರಣರಿಗೆ) ತಮೋಗುಣದ ವಿಕಾರಗಳು ಹೇಗೆ ತಾನೇ ಉಂಟಾಗುವುವು?

***ಇತಿ ತಾಮಸನಿರಸನಸ್ಥಲಂ*** *ಇಲ್ಲಿಗೆ ತಾಮಸನಿರಸನಸ್ಥಲವು ಮುಗಿಯಿತು.*

## 39. ಅಥ ನಿರ್ದೇಶಸ್ಥಲಮ್
ಈಗ ನಿರ್ದೇಶಸ್ಥಲವು
**(8 ಶ್ಲೋಕಗಳು)**

**ನಿರಾಕೃತ್ಯ ತಮೋಭಾಗಮ್**
**ಸಂಸಾರಸ್ಯ ಪ್ರವರ್ತಕಮ್ ।**
**ನಿರ್ದಿಶ್ಯತೇ ತು ಯಜ್ಜ್ಞಾನಮ್**
**ಸ ನಿರ್ದೇಶ ಇತಿ ಸ್ಮೃತಃ । 13–22**

ಸಂಸಾರದ ಪ್ರವೃತ್ತಿಗೆ ಕಾರಣವಾದ ತಮೋಗುಣವನ್ನು ನಿರಾಕರಿಸಿ ಯಾವ ಜ್ಞಾನವು ನಿರ್ದೇಶಿಸಲ್ಪಡುವುದೋ (ಹೇಳಲ್ಪಡುವುದೋ) ಆ ಸ್ಥಲಕ್ಕೆ ನಿರ್ದೇಶಸ್ಥಲವೆಂದು ಕರೆಯಲಾಗಿದೆ.

**ಗುರುರೇವ ಪರಂ ತತ್ತ್ವಮ್**
**ಪ್ರಕಾಶಯತಿ ದೇಹಿನಾಮ್ ।**
**ಕೋ ವಾ ಸೂರ್ಯಂ ವಿನಾ ಲೋಕೇ**
**ತಮಸೋ ವಿನಿವರ್ತಕಃ ॥ 13–23**

ಸೂರ್ಯನ ಹೊರತಾಗಿ ಈ ಜಗತ್ತಿನಲ್ಲಿ ಕತ್ತಲೆಯನ್ನು ನಿವಾರಿಸುವವನು ಹೇಗೆ ಬೇರೆ ಯಾರೂ ಇರುವುದಿಲ್ಲವೊ ಅದರಂತೆ ಎಲ್ಲ ಜೀವಿಗಳಿಗೆ ಗುರುವೇ ಪರತತ್ತ್ವವನ್ನು ಪ್ರಕಾಶಿಸುವನು (ತೋರಿಸುವನು).

**ಅಂತರೇಣ ಗುರುಂ ಸಿದ್ಧಮ್**
**ಕಥಂ ಸಂಸಾರನಿಷ್ಕೃತಿಃ ।**
**ನಿದಾನಜ್ಞಂ ವಿನಾ ವೈದ್ಯಮ್**
**ಕಿಂ ವಾ ರೋಗೋ ನಿವರ್ತತೇ ॥ 13–24**

ಸಿದ್ಧನಾದ (ಶಿವಜ್ಞಾನವುಳ್ಳ) ಗುರುವಿನ ಹೊರತಾಗಿ ಸಂಸಾರದ ನಿಷ್ಕೃತಿಯು (ನಿವೃತ್ತಿಯು) ಹೇಗೆ ತಾನೇ ಸಾಧ್ಯವಾದೀತು? ನಿದಾನವನ್ನು ಬಲ್ಲ (ರೋಗದ ಕಾರಣವರಿತು ಔಷಧವನ್ನು ಕೊಡಬಲ್ಲ) ವೈದ್ಯನ ಹೊರತಾಗಿ ರೋಗದ ನಿವಾರಣೆಯು ಹೇಗೆ ಸಾಧ್ಯ?

**ಅಜ್ಞಾನಮಲಿನಂ ಚಿತ್ತ–**
**ದರ್ಪಣಂ ಯೋ ವಿಶೋಧಯೇತ್ ।**
**ಪ್ರಜ್ಞಾವಿಭೂತಿಯೋಗೇನ**
**ತಮಾಹುರ್ಗುರುಸತ್ತಮಮ್ ॥ 13–25**

ಅಜ್ಞಾನದಿಂದ ಮಲಿನವಾದ ಚಿತ್ತವೆಂಬ ದರ್ಪಣವನ್ನು ಪ್ರಜ್ಞೆಯೆಂಬ ವಿಭೂತಿಯಿಂದ ಯಾರು ಸ್ವಚ್ಛಗೊಳಿಸುವರೋ ಅವರನ್ನು ಗುರುಶ್ರೇಷ್ಠರೆಂದು ಹೇಳುವರು.

**ಅಪರೋಕ್ಷಿತತತ್ತ್ವಸ್ಯ**
**ಜೀವನ್ಮುಕ್ತಸ್ವಭಾವಿನಃ ।**

**ಗುರೋಃ ಕಟಾಕ್ಷೇ ಸಂಸಿದ್ಧೇ**
**ಕೋ ವಾ ಲೋಕೇಷು ದುರ್ಲಭಃ ॥ 13–26**

ಶಿವತತ್ತ್ವವನ್ನು ಅಪರೋಕ್ಷಗೊಳಿಸಿಕೊಂಡ (ಸಾಕ್ಷಾತ್ಕರಿಸಿಕೊಂಡ) ಜೀವನ್ಮುಕ್ತ ಲಕ್ಷಣದಿಂದ ಕೂಡಿದ ಗುರುವಿನ ಕೃಪಾಕಟಾಕ್ಷವು ದೊರೆತರೆ ಮೂರೂ ಲೋಕಗಳಲ್ಲಿ ಯಾವ ವಸ್ತುವು ತಾನೇ ದುರ್ಲಭವಾದೀತು.

**ಕೈವಲ್ಯಕಲ್ಪತರವೋ**
**ಗುರವಃ ಕರುಣಾಲಯಾಃ ।**
**ದುರ್ಲಭಾ ಹಿ ಜಗತ್ಯಸ್ಮಿನ್**
**ಶಿವಾದ್ವೈತಪರಾಯಣಾಃ ॥ 13–27**

ಕೈವಲ್ಯವನ್ನು ಕೊಡುವುದಕ್ಕೆ ಕಲ್ಪವೃಕ್ಷದಂತಿರುವ, ಕರುಣಾಲಯರಾದ (ದಯಾನಿಧಿಗಳಾದ), ಶಿವಾದ್ವೈತ ತತ್ತ್ವದಲ್ಲಿ ತತ್ಪರರಾದ ಗುರುಗಳು ಈ ಜಗತ್ತಿನಲ್ಲಿ ನಿಶ್ಚಯವಾಗಿ ದುರ್ಲಭರಾಗಿರುತ್ತಾರೆ.

**ಕ್ಷೀರಾಬ್ಧಿರಿವ ಸಿಂಧೂನಾಮ್**
**ಸುಮೇರುರಿವ ಭೂಭೃತಾಮ್ ।**
**ಗ್ರಹಾಣಾಮಿವ ತಿಗ್ಮಾಂಶುಃ**
**ಮಣೀನಾಮಿವ ಕೌಸ್ತುಭಃ ॥ 13–28**

**ದ್ರುಮಾಣಾಮಿವ ಭದ್ರಶ್ರೀಃ**
**ದೇವಾನಾಮಿವ ಶಂಕರಃ ।**
**ಗುರುಃ ಶಿವಃ ಪರಃ ಶ್ಲಾಘ್ಯೋ**
**ಗುರೂಣಾಂ ಪ್ರಾಕೃತಾತ್ಮನಾಮ್ ॥ 13–29**

ಸಾಗರಗಳಲ್ಲಿ ಕ್ಷೀರಸಾಗರದಂತೆ, ಪರ್ವತಗಳಲ್ಲಿ ಸುಮೇರುಪರ್ವತದಂತೆ, ನವಗ್ರಹಗಳಲ್ಲಿ ಸೂರ್ಯನಂತೆ, ಮಣಿಗಳಲ್ಲಿ ಕೌಸ್ತುಭಮಣಿಯಂತೆ, ಮರಗಳಲ್ಲಿ ಚಂದನಮರದಂತೆ (ಗಂಧದ ಮರದಂತೆ), ದೇವತೆಗಳಲ್ಲಿ ಶಂಕರನಂತೆ, ಪ್ರಾಕೃತರಾದ ಗುರುಗಳಲ್ಲಿ ಶಿವಸ್ವರೂಪನಾದ ಗುರು ಶ್ಲಾಘ್ಯನಾಗಿದ್ದಾನೆ (ಸ್ತುತ್ಯನಾಗಿದ್ದಾನೆ ಅಥವಾ ಶ್ರೇಷ್ಠನಾಗಿದ್ದಾನೆ).
***ಇತಿ ನಿರ್ದೇಶಸ್ಥಲಂ*** *ಇಲ್ಲಿಗೆ ನಿರ್ದೇಶಸ್ಥಲವು ಮುಗಿಯಿತು.*

## 40. ಅಥ ಶೀಲಸಂಪಾದನಸ್ಥಲಮ್
## ಈಗ ಶೀಲಸಂಪಾದನಸ್ಥಲವು
## (8 ಶ್ಲೋಕಗಳು)

**ಜಿಜ್ಞಾಸಾ ಶಿವತತ್ತ್ವಸ್ಯ**
**ಶೀಲಮಿತ್ಯುಚ್ಯತೇ ಬುಧೈಃ ।**
**ನಿರ್ದೇಶ್ಯಯೋಗಾದಾರ್ಯಾಣಾಮ್**
**ತದ್ವಾನ್ ಶೀಲೀತಿ ಕಥ್ಯತೇ ॥ 13–30**

ಆರ್ಯರ (ಗುರುಗಳ) ನಿರ್ದೇಶಯೋಗದಿಂದ (ನಿರ್ದೇಶದಿಂದ) ಶಿವತತ್ತ್ವವನ್ನು ತಿಳಿದುಕೊಳ್ಳುವ ಜಿಜ್ಞಾಸೆಯೇ (ಉತ್ಕಟವಾದ ಇಚ್ಛೆಯೇ) ಶೀಲವೆಂಬುದಾಗಿ ಜ್ಞಾನಿಗಳಿಂದ ಹೇಳಲಾಗಿದೆ. ಆ ಶೀಲವುಳ್ಳವನೇ 'ಶೀಲಿ' ಎಂದು ಕರೆಯಲ್ಪಡುತ್ತಾನೆ.

**ಪ್ರಪನ್ನಾರ್ತಿಹರೇ ದೇವೇ**
**ಪರಮಾತ್ಮನಿ ಶಂಕರೇ ।**
**ಭಾವಸ್ಯ ಸ್ಥಿರತಾಯೋಗಃ**
**ಶೀಲಮಿತ್ಯುಚ್ಯತೇ ಬುಧೈಃ ॥ 13–31**

ಪ್ರಪನ್ನರಾದವರ (ಮೊರೆ ಹೊಕ್ಕವರ) ಅರ್ತಿಹರನಾದ (ದುಃಖವನ್ನು ದೂರಮಾಡುವ) ದೇವನಾದ ಮತ್ತು ಪರಮಾತ್ಮನಾದ ಶಂಕರನಲ್ಲಿ ತನ್ನ ಭಾವನೆಯನ್ನು ಸ್ಥಿರಗೊಳಿಸುವ ಯೋಗವೇ 'ಶೀಲ'ವೆಂಬುದಾಗಿ ಜ್ಞಾನಿಗಳು ಹೇಳುತ್ತಾರೆ.

**ಶೀಲಂ ಶಿವೈಕವಿಜ್ಞಾನಮ್**
**ಶಿವಧ್ಯಾನೈಕತಾನತಾ ।**
**ಶಿವಪ್ರಾಪ್ತಿಸಮುತ್ಕಂಠಾ**
**ತದ್ಯೋಗೀ ಶೀಲವಾನ್ ಸ್ಮೃತಃ ॥ 13–32**

ಶಿವನೊಬ್ಬನನ್ನೇ ತಿಳಿದುಕೊಳ್ಳುವುದು, ಶಿವಧ್ಯಾನದಲ್ಲಿ ಏಕಾಗ್ರತೆಯು ಮತ್ತು ಶಿವನನ್ನು ಪ್ರಾಪ್ತಿಮಾಡಿಕೊಳ್ಳುವಲ್ಲಿ ಉತ್ಕಟವಾದ ಬಯಕೆಯೇ 'ಶೀಲ'ವೆಂದು ಕರೆಯಲಾಗುವುದು. ಆ 'ಶೀಲ'ವುಳ್ಳವನೇ 'ಶೀಲವಾನ'ನೆಂದು ಹೇಳಿಸಿಕೊಳ್ಳುವನು.

**ಶಿವಾದನ್ಯತ್ರ ವಿಜ್ಞಾನೇ**
**ವೈಮುಖ್ಯಂ ಯಸ್ಯ ಸುಸ್ಥಿರಮ್ ।**
**ತದಾಸಕ್ತಮನೋವೃತ್ತಿಃ**
**ತಮಾಹುಃ ಶೀಲಭಾಜನಮ್ ॥ 13–33**

ಶಿವನನ್ನು ಹೊರತುಪಡಿಸಿ ಅನ್ಯದೇವತೆಗಳನ್ನು ತಿಳಿದುಕೊಳ್ಳುವ ವಿಷಯದಲ್ಲಿ ವಿಮುಖತೆಯು ಯಾರಲ್ಲಿ ಸುಸ್ಥಿರವಾಗಿರುವುದೋ ಮತ್ತು ಯಾರು ಶಿವನೊಬ್ಬನಲ್ಲಿಯೇ ಆಸಕ್ತವಾದ ಮನೋವೃತ್ತಿಯುಳ್ಳವನೋ, ಅವನಿಗೆ 'ಶೀಲಭಾಜನ'ನೆಂದು ಕರೆಯುವರು.

**ಪತಿವ್ರತಾಯಾ ಯಚ್ಛೀಲಮ್**
**ಪತಿರಾಗಾತ್ ಪ್ರಶಸ್ಯತೇ ।**
**ತಥಾ ಶಿವಾನುರಾಗೇಣ**
**ಸುಶೀಲೋಽಭಕ್ತ ಉಚ್ಯತೇ ॥ 13–34**

ಪತಿವ್ರತೆಯಾದ ಹೆಣ್ಣುಮಗಳ ಶೀಲವು ಪತಿಯ ಮೇಲಿನ ಪ್ರೀತಿಯಿಂದ ಹೇಗೆ ಪ್ರಶಂಸಿಸಲ್ಪಡುತ್ತದೆಯೋ ಅದರಂತೆಯೇ ಶಿವನ ಮೇಲಿನ ಅನುರಾಗದಿಂದಲೇ ಸುಶೀಲನು ಅಭಕ್ತನೆಂದು (ಶಿವನಿಂದ ಅವಿಭಕ್ತನೆಂದು, ಶಿವನಿಂದ ಬೇರ್ಪಡದವನೆಂದು) ಹೇಳಲಾಗುವನು.

**ಪತಿಂ ವಿನಾ ಯಥಾ ಸ್ತ್ರೀಣಾಮ್**
**ಸೇವಾಽನ್ಯಸ್ಯ ತು ಗರ್ಹಣಾ ।**
**ಶಿವಂ ವಿನಾ ತಥಾಽನ್ಯೇಷಾಮ್**
**ಸೇವಾ ನಿಂದ್ಯಾ ಕೃತಾತ್ಮನಾಮ್ ॥ 13–35**

ಸ್ತ್ರೀಯರಿಗೆ ಪತಿಯನ್ನು ಹೊರತುಪಡಿಸಿ ಅನ್ಯರ (ಪರಪುರುಷರ) ಸೇವೆಯು ಹೇಗೆ ಗರ್ಹಣೀಯವಾದುದೋ (ನಿಂದಿತವಾದದ್ದೋ) ಅದರಂತೆ ಕೃತಾತ್ಮರಿಗೆ (ಕೃತಕೃತ್ಯರಾದ ಶರಣಸ್ಥಲ ಸಾಧಕರಿಗೆ) ಶಿವನನ್ನು ಹೊರತುಪಡಿಸಿ ಅನ್ಯದೇವರ ಸೇವೆಯು ನಿಂದನೀಯವಾದುದಾಗಿದೆ.

**ಬಹುನಾತ್ರ ಕಿಮುಕ್ತೇನ**
**ಶಿವಜ್ಞಾನೈಕನಿಷ್ಠತಾ ।**
**ಶೀಲಮಿತ್ಯುಚ್ಯತೇ ಸದ್ಭಿಃ**
**ಶೀಲವಾಂಸ್ತತ್ಪರೋ ಮತಃ ॥ 13–36**

ಈ ಶೀಲದ ವಿಷಯದಲ್ಲಿ ಹೆಚ್ಚು ಹೇಳುವುದರಿಂದ ಏನು ಪ್ರಯೋಜನ? ಶಿವಜ್ಞಾನೈಕ ನಿಷ್ಠತೆಯೇ (ಶಿವಜ್ಞಾನವೊಂದರಲ್ಲಿಯೇ ನಿಷ್ಠೆ ಇರುವಿಕೆಯೇ) 'ಶೀಲ'ವೆಂದು ಸತ್ಪುರುಷರಿಂದ ಹೇಳಲ್ಪಡುತ್ತದೆ. ಆದ್ದರಿಂದ 'ಶೀಲವಂತ'ನನ್ನು ಶಿವಜ್ಞಾನತತ್ಪರನೆಂದು ತಿಳಿದುಕೊಳ್ಳಬೇಕು.

**ಶಿವಾತ್ಮಬೋಧೈಕರತಃ ಸ್ಥಿರಾಶಯಃ**
**ಶಿವಂ ಪ್ರಪನ್ನೋ ಜಗತಾಮಧೀಶಮ್ ।**
**ಶಿವೈಕನಿಷ್ಠಾಹಿತಶೀಲಭೂಷಣಃ**
**ಶಿವೈಕ್ಯವಾನೇಷ ಹಿ ಕಥ್ಯತೇ ಬುಧೈಃ॥ 13–37**
**– ವಂಶಸ್ಥವೃತ್ತಮ್**

ಶಿವಾತ್ಮಬೋಧೆಯಲ್ಲಿಯೇ (ಲಿಂಗ–ಅಂಗಗಳ ಐಕ್ಯಜ್ಞಾನದಲ್ಲಿ) ಏಕರತನಾಗಿ (ನಿಷ್ಠೆಯುಳ್ಳವನಾಗಿ), ಜಗತ್ತಿಗೆ ಅಧೀಶ್ವರನಾದ (ಜಗತ್ತಿಗೆ ಒಡೆಯನಾದ) ಶಿವನಿಗೆ ಪ್ರಪನ್ನನಾದ (ರಕ್ಷಕನೆಂದು ಮೊರೆಹೊಕ್ಕ), ಸ್ಥಿರಾಶಯನಾದ (ದೃಢವಾದ ಭಾವನೆಯುಳ್ಳ), ಶಿವನಲ್ಲಿ ತನ್ನ ಏಕನಿಷ್ಠೆಯೆಂಬ 'ಶೀಲ'ವನ್ನೇ ಆಭರಣವನ್ನಾಗಿ ಮಾಡಿ ಕೊಂಡ ಈ ಶರಣಸ್ಥಲದ ಸಾಧಕನನ್ನು ಶಿವೈಕ್ಯನೆಂದು ಬುಧರು (ಜ್ಞಾನಿಗಳು) ಹೇಳುತ್ತಾರೆ.

***ಇತಿ ಶೀಲಸಂಪಾದನಸ್ಥಲಂ*** *ಇಲ್ಲಿಗೆ ಶೀಲಸಂಪಾದನಸ್ಥಲವು ಮುಗಿಯಿತು.*

***ಓಂ ತತ್ಸತ್ ಇತಿ***

***ಶ್ರೀ ಶಿವಗೀತೇಷು ಸಿದ್ಧಾಂತಾಗಮೇಷು ಶಿವಾದ್ವೈತವಿದ್ಯಾಯಾಂ ಶಿವಯೋಗಶಾಸ್ತ್ರೇ ಶ್ರೀರೇಣುಕಾಗಸ್ತ್ಯಸಂವಾದೇ ವೀರಶೈವಧರ್ಮನಿರ್ಣಯೇ ಶ್ರೀಶಿವಯೋಗಿಶಿವಾಚಾರ್ಯವಿರಚಿತೇ ಶ್ರೀಸಿದ್ಧಾಂತಶಿಖಾಮಣೌ ಶರಣಸ್ಥಲೇ ಶರಣಸ್ಥಲಾದಿಚತುರ್ವಿಧಸ್ಥಲಪ್ರಸಂಗೋ ನಾಮ ತ್ರಯೋದಶಃ ಪರಿಚ್ಛೇದಃ ॥***

*ಓಂ ತತ್ಸತ್ ಇತಿ ಶ್ರೀ ಶಿವನಿಂದ ಉಪದೇಶಿಸಲ್ಪಟ್ಟು*
*ಶ್ರೀ ಸಿದ್ಧಾಂತಾಗಮಗಳಲ್ಲಿಯ ಶಿವಾದ್ವೈತವಿದ್ಯಾರೂಪವೂ, ಶಿವಯೋಗಶಾಸ್ತ್ರವೂ, ಶ್ರೀ ರೇಣುಕಾಗಸ್ತ್ಯಸಂವಾದರೂಪವೂ,*
*ಶ್ರೀವೀರಶೈವಧರ್ಮನಿರ್ಣಯವೂ,*
*ಶ್ರೀ ಶಿವಯೋಗಿ ಶಿವಾಚಾರ್ಯ ವಿರಚಿತವೂ ಆದ ಶ್ರೀ ಸಿದ್ಧಾಂತ ಶಿಖಾಮಣಿಯಲ್ಲಿ ಶರಣಸ್ಥಲದಲ್ಲಿಯ ಶರಣಸ್ಥಲಾದಿ ನಾಲ್ಕು ವಿಧ ಸ್ಥಲಪ್ರಸಂಗವೆಂಬ ಹೆಸರಿನ ಹದಿಮೂರನೆಯ ಪರಿಚ್ಛೇದವು ಮುಗಿದುದು.*

# ಚತುರ್ದಶಃ ಪರಿಚ್ಛೇದಃ
ಹದಿನಾಲ್ಕನೆಯ ಪರಿಚ್ಛೇದವು

## ಐಕ್ಯಸ್ಯ ಚತುರ್ವಿಧಸ್ಥಲಪ್ರಸಂಗಃ
ಐಕ್ಯನ ಚರ್ತುವಿಧಸ್ಥಲ ಪ್ರಸಂಗವು
**(44 ಶ್ಲೋಕಗಳು)**

## ಅಥ ಐಕ್ಯಸ್ಥಲಮ್
ಈಗ ಐಕ್ಯಸ್ಥಲವು
**(3 ಶ್ಲೋಕಗಳು)**

**॥ ಅಗಸ್ತ್ಯ ಉವಾಚ ॥**
**ತಾಮಸತ್ಯಾಗಸಂಬಂಧಾತ್**
**ನಿರ್ದೇಶಾಚ್ಛೀಲತಸ್ತಥಾ ।**
**ಶರಣಾಖ್ಯಸ್ಯ ಭೂಯೋಽಸ್ಯ**
**ಕಥಮೈಕ್ಯನಿರೂಪಣಮ್ ॥ 14–1**

ಹೇ ರೇಣುಕಗಣಾಧೀಶ್ವರನೇ, ತಮೋಗುಣವನ್ನು ತ್ಯಾಗ ಮಾಡಿಕೊಂಡ ಜ್ಞಾನ ನಿರ್ದೇಶದಿಂದ ಮತ್ತು ಶೀಲ ಸಂಪಾದನೆಯಿಂದ ಶರಣನೆಂದು ಕರೆಯಲ್ಪಟ್ಟ ಈ ಶರಣಸ್ಥಲದ ಸಾಧಕನು ಮತ್ತೆ ಐಕ್ಯನೆಂದು ಹೇಗೆ ನಿರೂಪಿಸಲ್ಪಡುವನು.

**॥ಶ್ರೀ ರೇಣುಕ ಉವಾಚ ॥**
**ಪ್ರಾಣಲಿಂಗಾದಿಯೋಗೇನ**
**ಸುಖಾತಿಶಯಮೇಯಿವಾನ್ ।**
**ಶರಣಾಖ್ಯಃ ಶಿವೇನೈಕ್ಯ–**
**ಭಾವನಾದೈಕ್ಯವಾನ್ ಭವೇತ್ ॥ 14–2**

ಹೇ ಅಗಸ್ತ್ಯನೇ, ಪ್ರಾಣಲಿಂಗಾದಿಗಳ ಯೋಗದಿಂದ (ಪ್ರಾಣಲಿಂಗದ ಅನುಸಂಧಾನದಿಂದ) ಅತಿಶಯವಾದ ಆನಂದವನ್ನು ಅನುಭವಿಸುತ್ತಿದ್ದ ಶರಣನೆಂಬ ಸಾಧಕನು ಶಿವನೊಂದಿಗೆ ಐಕ್ಯ ಭಾವನೆಯನ್ನು ಹೊಂದಿದಾಗ ಐಕ್ಯನೇ ಆಗುತ್ತಾನೆ.

**ಐಕ್ಯಸ್ಥಲಮಿದಂ ಪ್ರೋಕ್ತಮ್**
**ಚತುರ್ಧಾ ಮುನಿಪುಂಗವ ।**
**ಐಕ್ಯಮಾಚಾರಸಂಪತ್ತಿಃ**
**ಏಕಭಾಜನಮೇವ ಚ ।**
**ಸಹಭೋಜನಮಿತ್ಯೇಷಾಮ್**
**ಕ್ರಮಾಲ್ಲಕ್ಷಣಮುಚ್ಯತೇ ॥ 14–3**

ಮುನಿಪುಂಗವನಾದ ಅಗಸ್ತ್ಯನೇ, ಈ ಐಕ್ಯಸ್ಥಲವು ನಾಲ್ಕು ಪ್ರಕಾರವಾಗಿ ಹೇಳಲ್ಪಟ್ಟಿದೆ. (ಅವು ಯಾವುದೆಂದರೆ) ಐಕ್ಯಸ್ಥಲ, ಆಚಾರಸಂಪತ್ತಿಸ್ಥಲ, ಏಕಭಾಜನ ಸ್ಥಲ ಮತ್ತು ಸಹಭೋಜನಸ್ಥಲಗಳು. ಇವುಗಳ ಲಕ್ಷಣಗಳನ್ನು ಕ್ರಮವಾಗಿ ಹೇಳಲಾಗುವುದು.

## 41. ಅಥ ಐಕ್ಯಸ್ಥಲಮ್

ಈಗ ಐಕ್ಯಸ್ಥಲವು

(12 ಶ್ಲೋಕಗಳು)

**ವಿಷಯಾನಂದಕಣಿಕಾ–**
**ನಿಃಸ್ಪೃಹೋ ನಿರ್ಮಲಾಶಯಃ ।**
**ಶಿವಾನಂದಮಹಾಸಿಂಧು–**
**ಮಜ್ಜನಾದೈಕ್ಯಮುಚ್ಯತೇ ॥ 14–4**

ಬಿಂದು ರೂಪಗಳಾದ ವಿಷಯಾನಂದದಲ್ಲಿ ನಿಸ್ಪೃಹನಾಗಿ ನಿರ್ಮಲವಾದ ಆಶಯ (ಭಾವನೆ)ಯುಳ್ಳ ಶರಣನೇ ಶಿವಾನಂದವೆಂಬ ಮಹಾಸಿಂಧುವಿನಲ್ಲಿ (ಮಹಾಸಾಗರದಲ್ಲಿ) ಮುಳುಗುವುದರಿಂದ ಐಕ್ಯನೆಂದು ಹೇಳಲ್ಪಡುತ್ತಾನೆ.

**ನಿರ್ಧೂತಮಲಸಂಬಂಧೋ**
**ನಿಷ್ಕಲಂಕಮನೋಗತಃ ।**
**ಶಿವೋಽಹಮಿತಿ ಭಾವೇನ**
**ನಿರೂಢೋ ಹಿ ಶಿವೈಕ್ಯತಾಮ್ ॥ 14–5**

ಮಲಗಳ (ಆಣವಾದಿ ಮಲಗಳ) ಸಂಬಂಧವನ್ನು ಕಳೆದುಕೊಂಡ, ಕಲಂಕರಹಿತವಾದ ಮನೋವ್ಯಾಪಾರವುಳ್ಳ ಸಾಧಕನು ಶಿವೋಽಹಂ (ಶಿವನೇ ನಾನಾಗಿದ್ದೇನೆ) ಎಂಬ (ಅನುಸಂಧಾನದಿಂದ) ಶಿವೈಕ್ಯತೆಯನ್ನು (ಶಿವನೊಡನೆ ಸಂಪೂರ್ಣವಾಗಿ ಅಭೇದವನ್ನು) ಹೊಂದುವನು.

**ಶಿವೇನೈಕ್ಯಂ ಸಮಾಪನ್ನಃ**
**ಚಿದಾನಂದಸ್ವರೂಪಿಣಾ ।**
**ನ ಪಶ್ಯತಿ ಜಗಜ್ಜಾಲಮ್**
**ಮಾಯಾಕಲ್ಪಿತವೈಭವಮ್ ॥ 14–6**

ಚಿದಾನಂದ ಸ್ವರೂಪನಾದ ಶಿವನೊಂದಿಗೆ ಐಕ್ಯತೆಯನ್ನು (ಸಾಮರಸ್ಯವನ್ನು) ಪಡೆದ ಐಕ್ಯಸ್ಥಲಿಯ ಮಾಯಾಕಲ್ಪಿತ ವೈಭವದಿಂದ ಕೂಡಿದ ಜಗಜ್ಜಾಲವನ್ನು ನೋಡುವುದಿಲ್ಲ.

**ಬ್ರಹ್ಮಾಂಡಬುದ್ಬುದೋದ್ಭೇದ–**
**ವಿಜೃಂಭೀ ತತ್ತ್ವವೀಚಿಮಾನ್ ।**
**ಮಾಯಾಸಿಂಧುರ್ಲಯಂ ಯಾತಿ**
**ಶಿವೈಕ್ಯವಡವಾನಲೇ ॥ 14–7**

ಬ್ರಹ್ಮಾಂಡಗಳೆಂಬ ಬುದ್ಬುದಗಳಿಂದ (ಬೊಬ್ಬುಳಿಕೆಗಳಿಂದ) ಬೆಳೆದು ನಿಂತ ತತ್ತ್ವಗಳೆಂಬ ವೀಚಿಗಳುಳ್ಳ (36 ತತ್ತ್ವಗಳೆಂಬ ತೆರೆಗಳುಳ್ಳ) ಮಾಯಾ ಸಿಂಧುವು (ಮಾಯೆಯೆಂಬ ಸಮುದ್ರವು) ಶಿವೈಕ್ಯವೆಂಬ ವಡಬಾನಲದಲ್ಲಿ (ವಡವಾಗ್ನಿಯಲ್ಲಿ) ಲಯವನ್ನು ಹೊಂದುತ್ತದೆ.

**ಮಾಯಾಶಕ್ತಿತಿರೋಧಾನಾತ್**
**ಶಿವೇ ಭೇದವಿಕಲ್ಪನಾ ।**
**ಆತ್ಮನಸ್ತದ್ವಿನಾಶೇ ತು**
**ನಾದ್ವೈತಾತ್ಕಿಂಚಿದಿಷ್ಯತೇ ॥ 14–8**

ಶಿವನಿಗೆ ಮಾಯಾಶಕ್ತಿಯ ತಿರೋಧಾನವಾಗಿರಲು (ಅವತರಣವಾಗಲು) ಜೀವಾತ್ಮನಲ್ಲಿ ಭೇದ ಕಲ್ಪನೆ ಉಂಟಾಗುವುದು. ಜೀವಾತ್ಮನಲ್ಲಿ ಭೇದಬುದ್ಧಿಯು ನಾಶವಾಗಲು ಅದ್ವೈತಕ್ಕಿಂತಲೂ ಬೇರೆ ಯಾವುದೂ ಉಳಿಯುವುದಿಲ್ಲ.

**ಪಶುತ್ವಂ ಚ ಪತಿತ್ವಂ ಚ**
**ಮಾಯಾಮೋಹವಿಕಲ್ಪಿತಮ್ ।**
**ತಸ್ಮಿನ್ ಪ್ರಲಯಮಾಪನ್ನೇ**
**ಕಃ ಪಶುಃ ಕೋ ನು ವಾ ಪತಿಃ ॥ 14–9**

**ಘೋರಸಂಸಾರಸರ್ಪಸ್ಯ**
**ಭೇದವಲ್ಮೀಕಶಾಯಿನಃ ।**
**ಬಾಧಕಂ ಪರಮಾದ್ವೈತ–**
**ಭಾವನಾ ಪರಮೌಷಧಮ್ ॥ 14–10**

ಪಶುತ್ವವೇ ಆಗಲಿ (ಜೀವಭಾವವೇ ಆಗಲಿ) ಮತ್ತು ಪತಿತ್ವವೇ ಆಗಲಿ (ಶಿವತ್ವವೇ ಆಗಲಿ) – ಇವೆರಡೂ ಮಾಯಾ ಮೋಹದಿಂದಲೇ ಕಲ್ಪಿಸಲ್ಪಟ್ಟಿವೆ. ಆ ಮಾಯಾ ಮೋಹವು ಶಿವನಲ್ಲಿ ಪ್ರಳಯವಾಗಲು (ಇಲ್ಲದಂತಾಗಲು) ಪಶು ಯಾರು? ಪತಿ ಯಾರು? (ಈ ಭೇದವಿರುವುದಿಲ್ಲ). ಭೇದವೆಂಬ (ಶಿವ–ಜೀವಭೇದವೆಂಬ) ಹುತ್ತದಲ್ಲಿ ವಾಸವಾಗಿರುವ, ಘೋರವಾದ (ಭಯಾನಕವಾದ) ಸಂಸಾರರೂಪವಾದ ಸರ್ಪಕ್ಕೆ ಪರಮಾದ್ವೈತ (ಶಿವಾದ್ವೈತ) ಭಾವನೆಯೇ ಬಾಧಕವಾದ ಪರಮೌಷಧವಾಗಿದೆ.

**ಭೇದಬುದ್ಧಿಸಮುತ್ಪನ್ನ–**
**ಮಹಾಸಂಸಾರಸಾಗರಮ್ ।**
**ಅದ್ವೈತಬುದ್ಧಿಪೋತೇನ**
**ಸಮುತ್ತರತಿ ದೇಶಿಕಃ ॥ 14–11**

ಈ ಮಹಾಸಂಸಾರರೂಪವಾದ ಸಾಗರವು ಭೇದಬುದ್ಧಿಯಿಂದಲೇ (ಶಿವ–ಜೀವರ ಭೇದಬುದ್ಧಿಯಿಂದಲೇ) ಉತ್ಪನ್ನವಾಗುತ್ತದೆ. ಇದನ್ನು ದೇಶಿಕನು ಅದ್ವೈತ (ಶಿವಾದ್ವೈತ) ಬುದ್ಧಿಯೆಂಬ ಹಡಗಿನಿಂದಲೇ ದಾಟುತ್ತಾನೆ.

**ಅಜ್ಞಾನತಿಮಿರೋದ್ರಿಕ್ತಾ**
**ಕಾಮರಕ್ಷಃಕ್ರಿಯಾಕರೀ ।**
**ಸಂಸಾರಕಾಲರಾತ್ರಿಸ್ತು**
**ನಶ್ಯೇದದ್ವೈತಭಾನುನಾ ॥ 14–12**

ಅಜ್ಞಾನರೂಪವಾದ ಗಾಢಾಂಧಕಾರದಿಂದ ಹುಟ್ಟಿ, ಕಾಮ ವ್ಯಾಪಾರ ರೂಪವಾದ ರಾಕ್ಷಸಕೃತ್ಯವನ್ನು ಮಾಡುತ್ತಿರುವ ಸಂಸಾರವೆಂಬ ಕಾರ್ಗತ್ತಲೆಯು ಅದ್ವೈತ ಭಾವನಾರೂಪವಾದ ಭಾನುವಿನಿಂದ (ಸೂರ್ಯನಿಂದ) ನಾಶವಾಗುತ್ತದೆ.

**ತಸ್ಮಾದದ್ವೈತಭಾವಸ್ಯ**
**ಸದೃಶೋ ನಾಸ್ತಿ ಯೋಗಿನಾಮ್ ।**
**ಉಪಾಯೋ ಘೋರಸಂಸಾರ–**
**ಮಹಾತಾಪನಿವೃತ್ತಯೇ ॥ 14–13**

ಆದ್ದರಿಂದ ಯೋಗಿಗಳಿಗೆ ಘೋರವಾದ (ಭಯಾನಕವಾದ) ಸಂಸಾರದ ಮಹಾತಾಪವನ್ನು ನಿವೃತ್ತಿ ಮಾಡಿಕೊಳ್ಳಲು, ಅದ್ವೈತ ಭಾವನೆಗೆ ಸಮವಾದ ಬೇರೊಂದು ಉಪಾಯವು ಇರುವುದಿಲ್ಲ.

**ಅದ್ವೈತಭಾವನಾಜಾತಮ್**
**ಕ್ಷಣಮಾತ್ರೇಽಪಿ ಯತ್ಸುಖಮ್ ।**
**ತತ್ಸುಖಂ ಕೋಟಿವರ್ಷೇಣ**
**ಪ್ರಾಪ್ಯತೇ ನೈವ ಭೋಗಿಭಿಃ ॥ 14–14**

ಅದ್ವೈತ ಭಾವನೆಯಿಂದುಂಟಾದ ಒಂದು ಕ್ಷಣದ ಯಾವ ಸುಖವುಂಟೋ ಆ ಸುಖವು ವಿಷಯಭೋಗಿಗಳಿಗೆ ಒಂದು ಕೋಟಿ ವರ್ಷಗಳಿಂದಲೂ ಸಹ ಪ್ರಾಪ್ತಿ ಮಾಡಿಕೊಳ್ಳಲಾಗುವುದಿಲ್ಲ.

**ಚಿತ್ತವೃತ್ತಿಸಮಾಲೀನ–**
**ಜಗತಃ ಶಿವಯೋಗಿನಃ ।**
**ಶಿವಾನಂದಪರಿಸ್ಫೂರ್ತಿಃ**
**ಮುಕ್ತಿರಿತ್ಯಭಿಧೀಯತೇ ॥ 14–15**

ತಮ್ಮ ಚಿತ್ತವೃತ್ತಿಯಲ್ಲಿ ಜಗತ್ತನ್ನು ಲೀನಗೊಳಿಸಿಕೊಂಡ ಶಿವಯೋಗಿಗಳಿಗೆ ಉಂಟಾಗುವ ಶಿವಾನಂದ ಪರಿಸ್ಫೂರ್ತಿಯೇ (ಪರಿಪೂರ್ಣತೆಯೇ) ಮುಕ್ತಿ ಎಂಬುದಾಗಿ ಹೇಳಲ್ಪಡುತ್ತದೆ.

*ಇತಿ ಐಕ್ಯಸ್ಥಲಂ ಇಲ್ಲಿಗೆ ಐಕ್ಯಸ್ಥಲವು ಮುಗಿಯಿತು.*

## 42. ಅಥ ಆಚಾರಸಂಪತ್ತಿಸ್ಥಲಮ್

ಈಗ ಆಚಾರಸಂಪತ್ತಿಸ್ಥಲವು

**(12 ಶ್ಲೋಕಗಳು)**

**ಶಿವೈಕಭಾವನಾಪನ್ನ–**
**ಶಿವತ್ವೋ ದೇಹವಾನಪಿ ।**
**ದೇಶಿಕೋ ಹಿ ನ ಲಿಪ್ಯೇತ**
**ಸ್ವಾಚಾರೈಃ ಸೂತಕಾದಿಭಿಃ ॥ 14–16**

ಶಿವೈಕ್ಯ ಭಾವನೆಯಿಂದ (ಶಿವಾದ್ವೈತ ಭಾವನೆಯಿಂದ) ಪ್ರಾಪ್ತ ಮಾಡಿಕೊಂಡ ಶಿವತ್ವವುಳ್ಳ ದೇಶಿಕನು (ಐಕ್ಯಸ್ಥಲಿಯು) ದೇಹಧಾರಿಯಾಗಿದ್ದರೂ ಸಹ ತನ್ನ ನಿತ್ಯಕ್ರಿಯೆಗಳಿಂದ ಮತ್ತು ಜನನಾದಿ ಪಂಚ (ಜನನ, ಮರಣ, ರಜಃ, ಜಾತಿ, ಉಚ್ಛಿಷ್ಟ) ಸೂತಕಗಳಿಂದ ಲಿಪ್ತನಾಗುವುದಿಲ್ಲ.

**ಶಿವಾದ್ವೈತಪರಿಜ್ಞಾನೇ**
**ಸ್ಥಿತೇ ಸತಿ ಮನಸ್ವಿನಾಮ್ ।**
**ಕರ್ಮಣಾ ಕಿಂ ನು ಭಾವ್ಯಂ ಸ್ಯಾದ್**
**ಅಕೃತೇನ ಕೃತೇನ ವಾ ॥ 14–17**

ಮನಸ್ವಿಗಳಿಗೆ (ಲಿಂಗದಲ್ಲಿ ಐಕ್ಯವಾದ ಮನಸ್ಸುಳ್ಳವರಿಗೆ) ಶಿವಾದ್ವೈತ ಜ್ಞಾನವು ಸ್ಥಿರಗೊಳ್ಳಲು ಅಕೃತ ಕರ್ಮಗಳಿಂದ (ಮಾಡಲೇಬಾರದ ದುಷ್ಕರ್ಮಗಳಿಂದ) ಅಥವಾ ಕೃತ ಕರ್ಮಗಳಿಂದ (ಮಾಡಲೇಬೇಕಾದ ಸತ್ಕರ್ಮಗಳಿಂದ) ಯಾವ ಫಲವೂ ಆಗುವುದಿಲ್ಲ.

**ಶಂಭೋರೇಕತ್ವಭಾವೇನ**
**ಸರ್ವತ್ರ ಸಮದರ್ಶನಃ ।**
**ಕುರ್ವನ್ನಪಿ ಮಹಾಕರ್ಮ**
**ನ ತತ್ಫಲಮವಾಪ್ನುಯಾತ್ ॥ 14–18**

ಎಲ್ಲೆಡೆಯಲ್ಲಿ ಸಮದರ್ಶಿಯಾದ, ಶಂಭುವಿನಲ್ಲಿ (ಶಿವನಲ್ಲಿ) ಐಕ್ಯಭಾವನೆಯನ್ನು ಹೊಂದಿದ ಐಕ್ಯಸ್ಥಲಿಯು ಮಹಾಕರ್ಮಗಳನ್ನು (ಪುಣ್ಯ ಪಾಪರೂಪವಾದ ಕರ್ಮಗಳನ್ನು) ಮಾಡಿದರೂ ಸಹ, ಅವುಗಳ ಫಲವನ್ನು ಆತನು ಹೊಂದುವುದಿಲ್ಲ.

**ಸುಕೃತೀ ದುಷ್ಕೃತೀ ವಾಽಪಿ**
**ಬ್ರಾಹ್ಮಣೋ ವಾಂತ್ಯಜೋಽಪಿ ವಾ ।**

**ಶಿವೈಕಭಾವಯುಕ್ತಾನಾಮ್**
**ಸದೃಶೋ ಭವತಿ ಧ್ರುವಮ್ ॥ 14–19**

ಸುಕೃತಿಯೇ (ಪುಣ್ಯಾತ್ಮನೇ) ಆಗಲಿ, ದುಷ್ಕೃತಿಯೇ (ಪಾಪಾತ್ಮನೇ) ಆಗಲಿ, ಬ್ರಾಹ್ಮಣನೇ ಆಗಿರಲಿ ಅಥವಾ ಅಂತ್ಯಜನೇ ಆಗಿರಲಿ ಇವರೆಲ್ಲರೂ ಶಿವೈಕ್ಯಭಾವನೆಯಿಂದ ಕೂಡಿದ (ಶಿವಾದ್ವೈತ ಭಾವವುಳ್ಳ) ಐಕ್ಯಸ್ಥಲಿಗೆ ನಿಶ್ಚಯವಾಗಿ ಸಮರಾಗಿ ಕಾಣುತ್ತಾರೆ.

**ವರ್ಣಾಶ್ರಮಸದಾಚಾರೈಃ**
**ಜ್ಞಾನಿನಾಂ ಕಿಂ ಪ್ರಯೋಜನಮ್ ।**
**ಲೌಕಿಕಸ್ತು ಸದಾಚಾರಃ**
**ಫಲಾಭಾವೇಽಪಿ ಭಾವ್ಯತೇ ॥ 14–20**

ಜ್ಞಾನಿಗಳಿಗೆ ಬ್ರಾಹ್ಮಣಾದಿ ವರ್ಣಗಳ ಮತ್ತು ಬ್ರಹ್ಮಚರ್ಯಾದಿ ಆಶ್ರಮಗಳ ಸದಾಚಾರಗಳಿಂದ ಏನೂ ಪ್ರಯೋಜನವಿರುವುದಿಲ್ಲ. ಆದರೂ ಸಹ ಲೌಕಿಕವಾದ ಸದಾಚಾರವು (ನಿತ್ಯ, ನೈಮಿತ್ತಿಕ ಕರ್ಮಗಳನ್ನು) ಫಲವಿಲ್ಲದೆ ಇದ್ದರೂ ಸಹ ವಿಧಿಸಲ್ಪಟ್ಟಿದೆ.

**ನಿರ್ದಗ್ಧಕರ್ಮಬೀಜಸ್ಯ**
**ನಿರ್ಮಲಜ್ಞಾನವಹ್ನಿನಾ ।**
**ದೇಹಿವದ್ ಭಾಸಮಾನಸ್ಯ**
**ದೇಹಯಾತ್ರಾ ತು ಲೌಕಿಕೀ ॥ 14–21**

ನಿರ್ಮಲವಾದ ಜ್ಞಾನಾಗ್ನಿಯಿಂದ ಕರ್ಮಬೀಜಗಳನ್ನು ಸುಟ್ಟುಕೊಂಡಿರುವ ಐಕ್ಯಸ್ಥಲಿಯು ದೇಹಧಾರಿಯಂತೆ ಭಾಸವಾಗುತ್ತಿದ್ದರೂ ಸಹ ಅವನ ದೇಹಯಾತ್ರೆಯು (ದೇಹದಿಂದಾಗುವ ವ್ಯವಹಾರಗಳು) ಅವು ಲೌಕಿಕವಾದವುಗಳು (ಪ್ರಕೃತಿ ಸಂಬಂಧವಾದವುಗಳು) ಆಗಿವೆ.

**ಶಿವಜ್ಞಾನಸಮಾಪನ್ನ–**
**ಸ್ಥಿರವೈರಾಗ್ಯಲಕ್ಷಣಃ ।**
**ಸ್ವಕರ್ಮಣಾ ನ ಲಿಪ್ಯೇತ**
**ಪದ್ಮಪತ್ರಮಿವಾಂಭಸಾ ॥ 14–22**

ಶಿವಜ್ಞಾನವನ್ನು ಪಡೆದ ಮತ್ತು ಸ್ಥಿರವಾದ ವೈರಾಗ್ಯದ ಲಕ್ಷಣವುಳ್ಳ ಐಕ್ಯಸ್ಥಲಿಯು ನೀರಿನಲ್ಲಿರುವ ಕಮಲದಂತೆ ತನ್ನ ಕರ್ಮಗಳಿಂದ (ಕರ್ಮಫಲಗಳಿಂದ) ಲಿಪ್ತನಾಗುವುದಿಲ್ಲ.

**ಗಚ್ಛಂಸ್ತಿಷ್ಠನ್ ಸ್ವಪನ್ ವಾಽಪಿ**
**ಜಾಗ್ರನ್ ವಾಽಪಿ ಮಹಾಮತಿಃ ।**
**ಶಿವಜ್ಞಾನಸಮಾಯೋಗಾತ್**
**ಶಿವಪೂಜಾಪರಃ ಸದಾ ॥ 14–23**

ಮಹಾಮತಿಯು (ಐಕ್ಯಸ್ಥಲಿಯು) ನಡೆಯುತ್ತಿದ್ದರೂ, ನಿಂತಿದ್ದರೂ, ಮಲಗಿದ್ದರೂ, ಎಚ್ಚರಗೊಂಡಿದ್ದರೂ ಮತ್ತು ಇನ್ನಾವ ಕಾರ್ಯಗಳನ್ನೇ ಮಾಡುತ್ತಿದ್ದರೂ ಅವನು ಶಿವಜ್ಞಾನಯುಕ್ತನಾಗಿರುವುದರಿಂದ ಯಾವಾಗಲೂ ಶಿವಪೂಜೆಯನ್ನೇ ಮಾಡುತ್ತಿರುತ್ತಾನೆ.

**ಯದ್ಯತ್ಪಶ್ಯತಿ ಸಾಮೋದಮ್**
**ವಸ್ತು ಲೋಕೇಷು ದೇಶಿಕಃ ।**
**ಶಿವದರ್ಶನಸಂಪತ್ತಿಃ**

**ತತ್ರ ತತ್ರ ಮಹಾತ್ಮನಃ ॥ 14–24**

ದೇಶಿಕನು (ಐಕ್ಯಸ್ಥಲಿಯು) ಈ ಲೋಕದಲ್ಲಿ ಯಾವ ಯಾವ ವಸ್ತುವನ್ನು ಪ್ರೀತಿಯಿಂದ ನೋಡುತ್ತಾನೆಯೋ ಅವೆಲ್ಲವುಗಳಲ್ಲಿ ಮಹಾತ್ಮನಾದ ಅವನಿಗೆ ಶಿವದರ್ಶನ ಸಂಪತ್ತಿಯೇ ಪ್ರಾಪ್ತವಾಗುವುದು.

**ಯದ್ಯಚ್ಚಿಂತಯತೇ ಯೋಗೀ**
**ಮನಸಾ ಶುದ್ಧಭಾವನಃ ।**
**ತತ್ತಚ್ಛಿವಮಯತ್ವೇನ**
**ಶಿವಧ್ಯಾನಮುದಾಹೃತಮ್ ॥ 14–25**

ಶುದ್ಧ ಭಾವದ (ನಿರ್ಮಲವಾದ ಭಾವನೆಯುಳ್ಳ) ಐಕ್ಯಸ್ಥಲದ ಯೋಗಿಯು ತನ್ನ ಮನಸ್ಸಿನಿಂದ ಏನೇನು ಚಿಂತಿಸುತ್ತಾನೆಯೋ ಅದೆಲ್ಲವೂ ಶಿವಮಯ ವಾಗಿರುವುದರಿಂದ ಅದನ್ನು (ಅವನ ಚಿಂತನೆಯನ್ನು) ಶಿವಧ್ಯಾನವೆಂತಲೇ ಹೇಳಲಾಗುವುದು.

**ಯತ್ಕಿಂಚಿದ್ ಭಾಷಿತಂ ಲೋಕೇ**
**ಸ್ವೇಚ್ಛಯಾ ಶಿವಯೋಗಿನಾ ।**
**ಶಿವಸ್ತೋತ್ರಮಿದಂ ಸರ್ವಮ್**
**ಯಸ್ಮಾತ್ ಸರ್ವಾತ್ಮಕಃ ಶಿವಃ ॥ 14–26**

ಶಿವಯೋಗಿಯು ಈ ಲೋಕದಲ್ಲಿ ಸ್ವೇಚ್ಛೆಯಿಂದ (ತನ್ನ ಇಚ್ಛೆಯಿಂದ) ಏನನ್ನೇ ಮಾತನಾಡಿದರೂ ಸಹ ಅದೆಲ್ಲವೂ ಶಿವಸ್ತೋತ್ರವೇ ಆಗಿರುತ್ತದೆ. ಏಕೆಂದರೆ ಶಿವನು ಸರ್ವಾತ್ಮಕನಾಗಿರುತ್ತಾನೆ.

**ಯಾ ಯಾ ಚೇಷ್ಟಾ ಸಮುತ್ಪನ್ನಾ**
**ಜಾಯತೇ ಶಿವಯೋಗಿನಾಮ್ ।**
**ಸಾ ಸಾ ಪೂಜಾ ಮಹೇಶಸ್ಯ**
**ಸರ್ವದಾ ತದ್ಗತಾತ್ಮನಾಮ್ ॥ 14–27**

ಶಿವತಾದಾತ್ಮ್ಯವನ್ನು ಹೊಂದಿದ ಶಿವಯೋಗಿಗಳಿಂದ ಯಾವಾಗಲೂ ಯಾವ ಯಾವ ಚೇಷ್ಟೆಗಳು (ಕ್ರಿಯೆಗಳು) ಉತ್ಪನ್ನವಾಗುವುವೋ, ಅವೆಲ್ಲವೂ ಮಹೇಶನಾದ ಶಿವನ ಪೂಜೆಯೇ ಆಗಿರುತ್ತವೆ.

*ಇತಿ ಆಚಾರಸಂಪತ್ತಿಸ್ಥಲಂ* *ಇಲ್ಲಿಗೆ ಆಚಾರಸಂಪತ್ತಿಸ್ಥಲವು ಮುಗಿಯಿತು.*

## 43. ಅಥ ಏಕಭಾಜನಸ್ಥಲಮ್

ಈಗ ಏಕಭಾಜನಸ್ಥಲವು

**(6 ಶ್ಲೋಕಗಳು)**

**ವಿಶ್ವಂ ಶಿವಮಯಂ ಚೇತಿ**
**ಸದಾ ಭಾವಯತೋ ಧಿಯಾ ।**
**ಶಿವೈಕಭಾಜನಾತ್ಮತ್ವಾತ್**
**ಏಕಭಾಜನಮುಚ್ಯತೇ ॥ 14–28**

ಈ ವಿಶ್ವವೆಲ್ಲವೂ ಶಿವಮಯವೆಂದು ತನ್ನ ಬುದ್ಧಿಯಿಂದ ಯಾವಾಗಲೂ ಭಾವಿಸುತ್ತಿದ್ದ ಐಕ್ಯಸ್ಥಲಿಗೆ ಶಿವನೋರ್ವನೇ ಏಕೈಕ ಆಶ್ರಯನಾಗಿರುವುದರಿಂದ ಅವನು ಏಕಭಾಜನನೆಂದು ಕರೆಯಲ್ಪಡುತ್ತಾನೆ.
(ಉದಾಹರಣೆ : ಭಾಜನ= ಪಾತ್ರ, ಶಿವನು ಜೀವಾತ್ಮನು ಒಂದೇ ಪಾತ್ರರಾಗಿದ್ದಾರೆ. ಲಿಂಗೈಕ್ಯನೂ, ಈ ವಿಶ್ವ ಎರಡೂ ಸಹ ಶಿವನಲ್ಲಿರುವುದರಿಂದ ಇವನು (ಲಿಂಗೈಕ್ಯನು) ಏಕಭಾಜನಸ್ಥಲಿಯಾಗಿದ್ದಾನೆ.)

**ಸ್ವಸ್ಯ ಸರ್ವಸ್ಯ ಲೋಕಸ್ಯ**
**ಶಿವಸ್ಯಾದ್ವೈತದರ್ಶನಾತ್ ।**
**ಏಕಭಾಜನಯೋಗೇನ**
**ಪ್ರಸಾದೈಕ್ಯಮತಿರ್ಭವೇತ್ ॥ 14–29**

ಈ ಲಿಂಗೈಕ್ಯಸ್ಥಲಿಯು ತನ್ನನ್ನು ಸಕಲ ವಿಶ್ವವನ್ನು ಮತ್ತು ಶಿವನನ್ನು ಒಂದಾಗಿ ನೋಡುವುದರಿಂದ ತನಗುಂಟಾದ ಏಕಭಾಜನ ಸ್ಥಿತಿಯಿಂದ ಪ್ರಸಾದೈಕ್ಯಮತಿ ಯುಳ್ಳವನಾಗುತ್ತಾನೆ (ಪ್ರಸಾದದಲ್ಲಿ ಐಕ್ಯಮತಿಯುಳ್ಳವನಾಗುತ್ತಾನೆ).

**ಶಿವೇ ವಿಶ್ವಮಿದಂ ಸರ್ವಮ್**
**ಶಿವಃ ಸರ್ವತ್ರ ಭಾಸತೇ ।**
**ಆಧಾರಾಧೇಯಭಾವೇನ**
**ಶಿವಸ್ಯ ಜಗತಃ ಸ್ಥಿತಿಃ ॥ 14–30**

ಈ ಎಲ್ಲ ವಿಶ್ವವು ಶಿವನಲ್ಲಿ ಇರುತ್ತದೆ. ಶಿವನು ಎಲ್ಲ ಕಡೆಗಿರುತ್ತಾನೆ. ಶಿವ ಮತ್ತು ಜಗತ್ತು – ಇವರೀರ್ವರಲ್ಲಿ ಆಧಾರ ಮತ್ತು ಅಧೇಯಭಾವದ ಸ್ಥಿತಿ ಇರುತ್ತದೆ (ಶಿವನು ಆಧಾರ, ಜಗತ್ತು ಆಧೇಯವೆಂದು ತಿಳಿದುಕೊಳ್ಳಬೇಕು).

**ಚಿದೇಕಭಾಜನಂ ಯಸ್ಯ**
**ಚಿತ್ತವೃತ್ತೇಃ ಶಿವಾತ್ಮಕಮ್ ।**
**ನಾನ್ಯತ್ ತಸ್ಯ ಕಿಮೇತೇನ**
**ಮಾಯಾಮೂಲೇನ ವಸ್ತುನಾ ॥ 14–31**

ಯಾರ ಚಿತ್ತವೃತ್ತಿಯು (ಮನೋವ್ಯಾಪಾರವು) ಶಿವಾತ್ಮಕವೂ (ಶಿವಸ್ವರೂಪವೂ) ಮತ್ತು ಚಿದೇಕಭಾಜನವೂ (ಚಿದ್ರೂಪವನ್ನೇ ಆಶ್ರಯವಾಗಿ ಪಡೆದಿರುವುದೋ) ಆ ಐಕ್ಯಸ್ಥಲಿಗೆ ಮಾಯಾ ಮೂಲವಾದ ಈ ಪ್ರಪಂಚದಿಂದ ಏನು ಪ್ರಯೋಜನ?

**ಚಿತ್ಪ್ರಕಾಶಯತೇ ವಿಶ್ವಮ್**
**ತದ್ವಿನಾ ನಾಸ್ತಿ ವಸ್ತು ಹಿ ।**
**ಚಿದೇಕನಿಷ್ಠಚಿತ್ತಾನಾಮ್**
**ಕಿಂ ಮಾಯಾಪರಿಕಲ್ಪಿತೈಃ ॥ 14–32**

ಚೈತನ್ಯವೇ ವಿಶ್ವವನ್ನು ಪ್ರಕಾಶಿಸುತ್ತದೆ. ಆ ಚೈತನ್ಯದ ಹೊರತಾಗಿ ಯಾವ ವಸ್ತುವೂ ಅಸ್ತಿತ್ವದಲ್ಲಿರುವುದಿಲ್ಲ. ಆದ್ದರಿಂದ ಚಿದೇಕನಿಷ್ಠ ಚಿತ್ತನಾದ (ಚೈತನ್ಯದಲ್ಲಿಯೇ ತತ್ಪರವಾದ ಚಿತ್ತವುಳ್ಳ) ಐಕ್ಯಸ್ಥಲಿಗೆ ಮಾಯಾಕಲ್ಪಿತವಾದ ಈ ಪ್ರಾಪಂಚಿಕ ವಸ್ತುಗಳಿಂದ ಯಾವ ಪ್ರಯೋಜನವೂ ಇರುವುದಿಲ್ಲ.

**ವೃತ್ತಿಶೂನ್ಯೇ ಸ್ವಹೃದಯೇ**
**ಶಿವಲೀನೇ ನಿರಾಕುಲೇ ।**
**ಯಃ ಸದಾ ವರ್ತತೇ ಯೋಗೀ**

**ಸ ಮುಕ್ತೋ ನಾತ್ರ ಸಂಶಯಃ ॥   14–33**

ವೃತ್ತಿಶೂನ್ಯವಾದ (ಅನ್ಯ ವ್ಯವಹಾರವಿಲ್ಲದಿರುವ), ನಿರಾಕುಲವಾದ (ಕ್ಷೋಭೆರಹಿತವಾದ) ಮತ್ತು ಶಿವನಲ್ಲಿಯೇ ಲೀನವಾದ ತನ್ನ ಹೃದಯದಲ್ಲಿಯೇ ಯಾವ (ಐಕ್ಯಸ್ಥಲದ) ಯೋಗಿಯು ವರ್ತಿಸುತ್ತಾನೆಯೋ ಅವನು ಮುಕ್ತನೆಂಬುವುದರಲ್ಲಿ ಯಾವ ಸಂಶಯವಿಲ್ಲ.

*ಇತಿ ಏಕಭಾಜನಸ್ಥಲಂ*
*ಇಲ್ಲಿಗೆ ಏಕಭಾಜನಸ್ಥಲವು ಮುಗಿಯಿತು.*

## 44. ಅಥ ಸಹಭೋಜನಸ್ಥಲಮ್
ಈಗ ಸಹಭೋಜನಸ್ಥಲವು
**(11 ಶ್ಲೋಕಗಳು)**

**ಗುರೋಃ ಶಿವಸ್ಯ ಶಿಷ್ಯಸ್ಯ**
**ಸ್ವಸ್ವರೂಪತಯಾ ಸ್ಮೃತಿಃ ।**
**ಸಹಭೋಜನಮಾಖ್ಯಾತಮ್**
**ಸರ್ವಗ್ರಾಸಾತ್ಮಭಾವತಃ ॥ 14–34**

ಗುರುವನ್ನು, ಶಿವನನ್ನು ಮತ್ತು ಶಿಷ್ಯನನ್ನು ಸ್ವಸ್ವರೂಪವಾಗಿ (ತನ್ನ ಆತ್ಮದೊಂದಿಗೆ ಅಭಿನ್ನವಾಗಿ) ತಿಳಿದುಕೊಂಡು ಸರ್ವಗ್ರಾಸಾತ್ಮಭಾವದಿಂದ (ಎಲ್ಲವನ್ನು ಒಟ್ಟುಗೂಡಿಸಿ ಗ್ರಹಿಸುವ ದೆಸೆಯಿಂದ) ಇರುವ ಐಕ್ಯಸ್ಥಲಿಯು ಸಹಭೋಜನನೆಂದು ಕರೆಯಲ್ಪಡುತ್ತಾನೆ.

**ಶಿವಂ ವಿಶ್ವಂ ಗುರುಂ ಸಾಕ್ಷಾದ್**
**ಯೋಜಯೇನ್ನಿತ್ಯಮಾತ್ಮನಿ ।**
**ಏಕತ್ವೇನ ಚಿದಾಕಾರೇ**
**ತದಿದಂ ಸಹಭೋಜನಮ್ ॥   14–35**

ಚಿದಾಕಾರರೂಪವಾದ ತನ್ನ ಆತ್ಮದಲ್ಲಿ ಶಿವನನ್ನು, ವಿಶ್ವವನ್ನು ಮತ್ತು ಗುರುವನ್ನು ಏಕತ್ವದಿಂದ ಸಾಕ್ಷಾತ್ ಯೋಜಿಸುವ (ಸಾಕ್ಷಾತ್ ತಿಳಿದುಕೊಳ್ಳುವ) ಸ್ಥಿತಿಯೇ ಸಹಭೋಜನವು.

**ಅಯಂ ಶಿವೋ ಗುರುಶ್ಚೈಷ**
**ಜಗದೇತಚ್ಚರಾಚರಮ್ ।**
**ಅಹಂ ಚೇತಿ ಮತಿರ್ಯಸ್ಯ**
**ನಾಸ್ತ್ಯಸೌ ವಿಶ್ವಭೋಜಕಃ ॥   14–36**

ಇವನು ಶಿವನು, ಇವನು ಗುರುವು, ಇದು ಚರಾಚರವಾದ ಜಗತ್ತು ಮತ್ತು ನಾನು ಎಂಬ ಭೇದಬುದ್ಧಿಯು ಯಾರಲ್ಲಿ ಇರುತ್ತದೆಯೋ ಅವನು ವಿಶ್ವಭೋಜಕನಾಗನು (ಅವನು ಸಹಭೋಜನಸ್ಥಲಿಯಲ್ಲ).

**ಅಹಂ ಭೃತ್ಯಃ ಶಿವಃ ಸ್ವಾಮೀ**
**ಶಿಷ್ಯೋಽಹಂ ಗುರುರೇವ ವೈ ।**

**ಇತಿ ಯಸ್ಯ ಮತಿರ್ನಾಸ್ತಿ**
**ಸ ಚಾದ್ವೈತಪದೇ ಸ್ಥಿತಃ ॥ 14–37**

ನಾನು ಭೃತ್ಯನು (ಸೇವಕನು), ಶಿವನು ಸ್ವಾಮಿಯು, ನಾನು ಶಿಷ್ಯನು, ಅವನು ಗುರುವು.–ಈ ಪ್ರಕಾರದ ಭೇದಬುದ್ಧಿಯು ಯಾರಿಗೆ ಇರುವುದಿಲ್ಲವೋ ಅವನು ಅದ್ವೈತ ಸ್ಥಾನದಲ್ಲಿರುತ್ತಾನೆ.

**ಪರಾಹಂತಾಮಯೇ ಸ್ವಾತ್ಮ–**
**ಪಾವಕೇ ವಿಶ್ವಭಾಸ್ವತಿ ।**
**ಇದಂತಾಹವ್ಯಹೋಮೇನ**
**ವಿಶ್ವಹೋಮೀತಿ ಕಥ್ಯತೇ ॥ 14–38**

ವಿಶ್ವಭಾಸಕವಾದ (ವಿಶ್ವವನ್ನು ಬೆಳಗುವ) ಪರಾಹಂತರೂಪವಾದ ತನ್ನ ಆತ್ಮವೆಂಬ ಅಗ್ನಿಯಲ್ಲಿ ಇದಂ ರೂಪವಾದ ಎಲ್ಲವನ್ನು ಹೋಮ ಮಾಡುವವನು ವಿಶ್ವಹೋಮಿಯೆಂದು ಕರೆಯಲ್ಪಡುತ್ತಾನೆ.

**ಅಹಂ ಶಿವೋ ಗುರುಶ್ಚಾಹಮ್**
**ಅಹಂ ವಿಶ್ವಂ ಚರಾಚರಮ್ ।**
**ಯಯಾ ವಿಜ್ಞಾಯತೇ ಸಮ್ಯಕ್**
**ಪೂರ್ಣಾಹಂತೇತಿ ಸಾ ಸ್ಮೃತಾ ॥ 14–39**

ನಾನೇ ಶಿವನು, ನಾನೇ ಗುರುವು, ನಾನೇ ಚರಾಚರವಾದ ವಿಶ್ವವು ಎಂಬುದಾಗಿ ಯಾವುದರಿಂದ ಚೆನ್ನಾಗಿ ತಿಳಿಯಲ್ಪಡುತ್ತದೆಯೋ ಅದುವೇ ಪೂರ್ಣಾಹಂತವೆಂದು ಕರೆಯಲ್ಪಡುತ್ತದೆ.

**ಆಧಾರವಹ್ನೌ ಚಿದ್ರೂಪೇ**
**ಭೇದಜಾತಂ ಜಗದ್ಧವಿಃ ।**
**ಜುಹೋತಿ ಜ್ಞಾನಯಜ್ವಾ ಯಃ**
**ಸ ಜ್ಞೇಯೋ ವಿಶ್ವಹವ್ಯಭುಕ್ ॥ 14–40**

ಚಿದ್ರೂಪವಾದ ಅತ್ಮವೆಂಬ ಆಧಾರ ಅಗ್ನಿಯಲ್ಲಿ ಜಗತ್ತಿನ ಭೇದ ಸಮೂಹವೆಂಬ ಹವಿಸ್ಸನ್ನು ಯಾವಾತನು ಹೋಮ ಮಾಡುವನೋ ಅವನು ಜ್ಞಾನಯಜ್ವಾ (ಜ್ಞಾನಯಜ್ಞ ದೀಕ್ಷಿತನೆಂತಲೂ) ಮತ್ತು ವಿಶ್ವಹವ್ಯಭುಕ್ (ವಿಶ್ವವೆಂಬ ಹವಿಸ್ಸನ್ನು ಭುಂಜಿಸುವವನು) ಎಂದು ತಿಳಿದುಕೊಳ್ಳಬೇಕು.

**ಚಿದಾಕಾರೇ ಪರಾಕಾಶೇ**
**ಪರಮಾನಂದಭಾಸ್ವತಿ ।**
**ವಿಲೀನಚಿತ್ತವೃತ್ತೀನಾಮ್**
**ಕಾ ವಾ ವಿಶ್ವಕ್ರಮಸ್ಥಿತಿಃ ॥ 14–41**

ಪರಾಕಾಶದಲ್ಲಿ (ಸರ್ವೋತ್ಕೃಷ್ಟವಾದ ಆಜ್ಞೆಯೆಂಬ ಸಂಜ್ಞೆಯುಳ್ಳ ಊರ್ಧ್ವ ಹೃದಯಾಕಾಶದಲ್ಲಿ), ಚಿದಾಕಾರರೂಪವುಳ್ಳ (ಅರಿವೇ ಸ್ವರೂಪವಾಗುಳ್ಳ) ಪರಮಾನಂದ ರೂಪವಾದ ಸೂರ್ಯನಲ್ಲಿ (ಪರಮಾನಂದ ರೂಪವಾದ ಮಹಾಲಿಂಗವೆಂಬ ಮಹಾಬೆಳಗಿನಲ್ಲಿ) ತನ್ನ ಚಿತ್ತವೃತ್ತಿಗಳನ್ನು ಅಡಗಿಸಿಕೊಂಡಿರುವ ಐಕ್ಯಸ್ಥಲಿಗೆ ವಿಶ್ವಕ್ರಮದ ಸ್ಥಿತಿಯು, ಜಗತ್ತಿನ ವ್ಯವಹಾರವು ಯಾವುದೂ ಇರುವುದಿಲ್ಲ.

**ನಿರಸ್ತವಿಶ್ವಸಂಬಾಧೇ**
**ನಿಷ್ಕಲಂಕೇ ಚಿದಂಬರೇ ।**
**ಭಾವಯೇಲ್ಲೀನಮಾತ್ಮಾನಮ್**
**ಸಾಮರಸ್ಯಸ್ವಭಾವತಃ ॥ 14–42**

ನಿರಾಕರಿಸಲ್ಪಟ್ಟು ವಿಶ್ವ ಸಂಬಾಧೆಯುಳ್ಳ (ಜಗತ್ತಿನ ಎಲ್ಲ ಬಾಧೆಗಳನ್ನು ತೊಲಗಿಸಿಕೊಂಡ), ನಿಷ್ಕಲಂಕವಾದ (ಕಲಂಕರಹಿತವಾದ), ಚಿದಾಕಾಶರೂಪವಾದ ಮಹಾಲಿಂಗದಲ್ಲಿ ಸಾಮರಸ್ಯ ಭಾವದಿಂದ ತನ್ನನ್ನು ಐಕ್ಯನನ್ನಾಗಿ ಭಾವಿಸಬೇಕು.

**ಸೈಷಾ ವಿದ್ಯಾ ಪರಾ ಜ್ಞೇಯಾ**
**ಸತ್ತಾನಂದಪ್ರಕಾಶಿನೀ ।**
**ಮುಕ್ತಿರಿತ್ಯುಚ್ಯತೇ ಸದ್ಭಿಃ**
**ಜಗನ್ಮೋಹನಿವರ್ತಿನೀ ॥ 14-43**

ಸಚ್ಚಿದಾನಂದ ಸ್ವರೂಪವನ್ನು ಪ್ರಕಾಶಿಸುವ ಪರಾವಿದ್ಯೆಯನ್ನೇ (ಜ್ಞಾನವನ್ನೇ) ಶ್ರೇಷ್ಠವೆಂದು ತಿಳಿದುಕೊಳ್ಳಬೇಕು. ಜಗತ್ತಿನ ಮೋಹವನ್ನು ನಿವಾರಿಸುವ ಆ ವಿದ್ಯೆಯಿಂದಲೇ ಮುಕ್ತಿ ಸಿಗುವುದೆಂದು ಸಜ್ಜನರು ಹೇಳುತ್ತಾರೆ.

**ಭಕ್ತಾದಿಧಾಮಾರ್ಪಿತಧರ್ಮಯೋಗಾತ್**
**ಪ್ರಾಪ್ತೈಕಭಾವಃ ಪರಮಾದ್ಭುತೇನ ।**
**ಶಿವೇನ ಚಿದ್ವ್ಯೋಮಮಯೇನ ಸಾಕ್ಷಾತ್**
**ಮೋಕ್ಷಶ್ರಿಯೋ ಭಾಜನತಾಮುಪೈತಿ॥ 14-44**

**- ಇಂದ್ರವಜ್ರಾ ವೃತ್ತಮ್**

ಭಕ್ತಸ್ಥಲಾದಿಗಳಲ್ಲಿ ಹೇಳಿದ ಧರ್ಮಗಳನ್ನು (ಸದಾಚಾರಗಳನ್ನು) ಆಚರಿಸುವುದರಿಂದ, ಚಿದಾಕಾಶರೂಪವಾದ ಸಾಕ್ಷಾತ್ ಶಿವನೊಡನೆ ಪರಮಾದ್ಭುತವಾದ ರೂಪದಲ್ಲಿ ಐಕ್ಯಭಾವನೆಯನ್ನು ಹೊಂದಿ ಮೋಕ್ಷಶ್ರೀಗೆ ಭಾಜನನಾಗುತ್ತಾನೆ.

***ಇತಿ ಸಹಭೋಜನಸ್ಥಲಂ*** *ಇಲ್ಲಿಗೆ ಸಹಭೋಜನಸ್ಥಲವು ಮುಗಿಯಿತು.*

**ಓಂ ತತ್ಸತ್ ಇತಿ**
***ಶ್ರೀ ಶಿವಗೀತೇಷು ಸಿದ್ಧಾಂತಾಗಮೇಷು ಶಿವಾದ್ವೈತವಿದ್ಯಾಯಾಂ ಶಿವಯೋಗಶಾಸ್ತ್ರೇ ಶ್ರೀರೇಣುಕಾಗಸ್ತ್ಯಸಂವಾದೇ ವೀರಶೈವಧರ್ಮನಿರ್ಣಯೇ***
***ಶ್ರೀಶಿವಯೋಗಿಶಿವಾಚಾರ್ಯವಿರಚಿತೇ ಶ್ರೀಸಿದ್ಧಾಂತಶಿಖಾಮಣೌ ಐಕ್ಯಸ್ಥಲೇ ಐಕ್ಯಸ್ಥಲಾದಿ ಚತುರ್ವಿಧಸ್ಥಲಪ್ರಸಂಗೋ ನಾಮ ಚತುರ್ದಶಃ ಪರಿಚ್ಛೇದಃ ॥***
*ಓಂ ತತ್ಸತ್ ಇತಿ ಶ್ರೀ ಶಿವನಿಂದ ಉಪದೇಶಿಸಲ್ಪಟ್ಟು,*
*ಶ್ರೀ ಸಿದ್ಧಾಂತಾಗಮಗಳಲ್ಲಿಯ ಶಿವಾದ್ವೈತವಿದ್ಯಾರೂಪವೂ, ಶಿವಯೋಗಶಾಸ್ತ್ರವೂ, ಶ್ರೀ ರೇಣುಕಾಗಸ್ತ್ಯಸಂವಾದರೂಪವೂ, ಶ್ರೀ ವೀರಶೈವಧರ್ಮನಿರ್ಣಯವೂ, ಶ್ರೀ ಶಿವಯೋಗಿ ಶಿವಾಚಾರ್ಯ ವಿರಚಿತವಾದ ಶ್ರೀ ಸಿದ್ಧಾಂತ ಶಿಖಾಮಣಿಯಲ್ಲಿ ಐಕ್ಯಸ್ಥಲದಲ್ಲಿಯ ಐಕ್ಯಸ್ಥಲಾದಿ ನಾಲ್ಕು ವಿಧ ಸ್ಥಲಪ್ರಸಂಗವೆಂಬ ಹೆಸರಿನ ಹದಿನಾಲ್ಕನೆಯ ಪರಿಚ್ಛೇದವು ಮುಗಿದುದು.*

# ಪಂಚದಶಃ ಪರಿಚ್ಛೇದಃ

ಹದಿನೈದನೆಯ ಪರಿಚ್ಛೇದವು

**(71 ಶ್ಲೋಕಗಳು)**

**ಭಕ್ತಸ್ಥಲಾಂತರ್ಗತನವವಿಧಲಿಂಗಸ್ಥಲಪ್ರಸಂಗಃ**

ಭಕ್ತಸ್ಥಲಾಂತರ್ಗತವಾದ ನವವಿಧ ಲಿಂಗಸ್ಥಲ ಪ್ರಸಂಗವು

## ಅಥ ಭಕ್ತಸ್ಥಲಮ್

ಈಗ ಭಕ್ತಸ್ಥಲವು

**(6 ಶ್ಲೋಕಗಳು)**

**॥ ಶ್ರೀ ರೇಣುಕ ಉವಾಚ ॥**

**ಷಟ್ಸ್ಥಲೋಕ್ತಸದಾಚಾರ–**
**ಸಂಪನ್ನಸ್ಯ ಯಥಾಕ್ರಮಮ್ ।**
**ಲಿಂಗಸ್ಥಲಾನಿ ಕಥ್ಯಂತೇ**
**ಜೀವನ್ಮುಕ್ತಿಪರಾಣಿ ಚ ॥ 15–1**

ಹೇ ಅಗಸ್ತ್ಯನೇ, ಅಂಗ ಷಟ್‌ಸ್ಥಲದಲ್ಲಿ ಹೇಳಿದ ಸದಾಚಾರ ಸಂಪನ್ನನಾದವನಿಗೆ 'ಜೀವನ್ಮುಕ್ತಿ' ಪರವಾಗಿ ಹೇಳುವ ಲಿಂಗಸ್ಥಲಗಳು ಕ್ರಮಾನುಸಾರವಾಗಿ ಹೇಳಲ್ಪಡುತ್ತವೆ.

**॥ ಅಗಸ್ತ್ಯ ಉವಾಚ ॥**

**ಭಕ್ತಾದ್ಯೈಕ್ಯಾವಸಾನಾನಿ**
**ಷಡುಕ್ತಾನಿ ಸ್ಥಲಾನಿ ಚ ।**
**ಲಿಂಗಸ್ಥಲಾನಿ ಕಾನೀಹ**
**ಕಥ್ಯಂತೇ ಕತಿ ವಾ ಪುನಃ ॥ 15–2**

ಹೇ ರೇಣುಕಗಣಾಧೀಶ್ವರನೇ, ಭಕ್ತನನ್ನೇ ಮೊದಲುಗೊಂಡು ಐಕ್ಯನೇ ಕೊನೆಯದಾಗಿರುವ ಆರು ಸ್ಥಲಗಳನ್ನು ನೀವು ಹೇಳಿದ್ದೀರಿ. ಈಗ ಲಿಂಗಸ್ಥಲಗಳೆಂದರೆ ಯಾವುವು? ಅವು ಪುನಃ ಎಷ್ಟು ವಿಧವಾಗಿ ಹೇಳಲ್ಪಡುತ್ತವೆ?

**॥ ಶ್ರೀ ರೇಣುಕ ಉವಾಚ ॥**

**ಗುರ್ವಾದಿಜ್ಞಾನಶೂನ್ಯಾಂತಾಃ**
**ಭಕ್ತಾದಿಸ್ಥಲಸಂಶ್ರಿತಾಃ ।**
**ಸ್ಥಲಭೇದಾಃ ಪ್ರಕೀರ್ತ್ಯಂತೇ**
**ಪಂಚಾಶತ್ಸಪ್ತ ಚಾಧುನಾ ॥15–3**

ಭಕ್ತಾದಿ ಸ್ಥಲಗಳನ್ನು ಆಶ್ರಯಿಸಿರುವ ದೀಕ್ಷಾಗುರುಸ್ಥಲವನ್ನೇ ಮೊದಲು ಮಾಡಿಕೊಂಡು ಜ್ಞಾನಶೂನ್ಯಸ್ಥಲದವರೆಗಿನ ಐವತ್ತೇಳು (57) ಪ್ರಕಾರದ ಸ್ಥಲಭೇದಗಳು ಹೇಳಲ್ಪಡುತ್ತವೆ.

**ಆದೌ ನವಸ್ಥಲಾನೀಹ**
**ಭಕ್ತಸ್ಥಲಸಮಾಶ್ರಯಾತ್ ।**
**ಕಥ್ಯಂತೇ ಗುಣಸಾರೇಣ**
**ನಾಮಾನ್ಯೇಷಾಂ ಪೃಥಕ್ ಶ್ರುಣು ॥ 15–4**

**ದೀಕ್ಷಾಗುರುಸ್ಥಲಂ ಪೂರ್ವಮ್**
**ತತಃ ಶಿಕ್ಷಾಗುರುಸ್ಥಲಮ್ ।**
**ಪ್ರಜ್ಞಾಗುರುಸ್ಥಲಂ ಚಾಥ**
**ಕ್ರಿಯಾಲಿಂಗಸ್ಥಲಂ ತತಃ ॥15–5**

**ಭಾವಲಿಂಗಸ್ಥಲಂ ಚಾಥ**
**ಜ್ಞಾನಲಿಂಗಸ್ಥಲಂ ತತಃ ।**
**ಸ್ವಯಂ ಪರಂ ಚರಂ ಚೇತಿ**
**ತೇಷಾಂ ಲಕ್ಷ್ಮಣಮುಚ್ಯತೇ ॥ 15–6**

ಇವುಗಳಲ್ಲಿ ಭಕ್ತಸ್ಥಲವನ್ನು ಆಶ್ರಯಿಸಿರುವ ಒಂಭತ್ತು ಅವಾಂತರ ಸ್ಥಲಗಳು ಗುಣಶ್ರೇಷ್ಠತ್ವದಿಂದ ಹೇಳಲ್ಪಡುತ್ತವೆ. ಇವುಗಳ ಹೆಸರುಗಳನ್ನು ಬೇರೆಬೇರೆಯಾಗಿ ಕೇಳು. ಮೊದಲನೆಯದು ದೀಕ್ಷಾಗುರುಸ್ಥಲವು. ಅನಂತರ ಶಿಕ್ಷಾಗುರುಸ್ಥಲವು. ಅದಾದ ಮೇಲೆ ಪ್ರಜ್ಞಾ (ಜ್ಞಾನ) ಗುರುಸ್ಥಲವು. ನಂತರ ಕ್ರಿಯಾಲಿಂಗಸ್ಥಲವು. ಅದಾದ ಮೇಲೆ ಭಾವಲಿಂಗ ಸ್ಥಲವು. ನಂತರ ಜ್ಞಾನಲಿಂಗಸ್ಥಲವು. ತರುವಾಯ ಸ್ವಯಸ್ಥಲ, ಪರಸ್ಥಲ, ಚರಸ್ಥಲಗಳು ಹೇಳಲ್ಪಡುತ್ತವೆ. ಅವುಗಳ ಲಕ್ಷಣಗಳನ್ನು ಕ್ರಮವಾಗಿ ಹೇಳಲಾಗುವುದು.

## 45. ಅಥ ದೀಕ್ಷಾಗುರುಸ್ಥಲಮ್
ಈಗ ದೀಕ್ಷಾಗುರುಸ್ಥಲವು
**(5 ಶ್ಲೋಕಗಳು)**

**ದೀಯತೇ ಪರಮಂ ಜ್ಞಾನಮ್**
**ಕ್ಷೀಯತೇ ಪಾಶಬಂಧನಮ್ ।**
**ಯಯಾ ದೀಕ್ಷೇತಿ ಸಾ ತಸ್ಯಾಮ್**
**ಗುರುರ್ದೀಕ್ಷಾಗುರುಃ ಸ್ಮೃತಃ ॥ 15–7**

ಯಾವುದರಿಂದ ಪರಮಶ್ರೇಷ್ಠವಾದ ಶಿವಜ್ಞಾನವು ಕೊಡಲ್ಪಡುವುದೋ ಮತ್ತು ಮಲ ಮಾಯಾಪಾಶರೂಪವಾದ ಬಂಧನವು ಕ್ಷಯಿಸಲ್ಪಡುವುದೋ ಅದುವೇ ದೀಕ್ಷೆಯು. ಆ ದೀಕ್ಷೆಯಲ್ಲಿ (ದೀಕ್ಷೆ ಮಾಡುವಲ್ಲಿ) ಯಾರು ಗುರುವೋ ಅವನು 'ದೀಕ್ಷಾಗುರು'ವೆಂದು ನೆನೆಯಲ್ಪಡುವನು.

**ಗುಣಾತೀತಂ ಗುಕಾರಂ ಚ**
**ರೂಪಾತೀತಂ ರುಕಾರಕಮ್ ।**
**ಗುಣಾತೀತಮರೂಪಂ ಚ**
**ಯೋ ದದ್ಯಾತ್ ಸ ಗುರುಃ ಸ್ಮೃತಃ ॥ 15–8**

'ಗು'ಕಾರವೆಂದರೆ ಗುಣಾತೀತ (ಪ್ರಾಕೃತ ಗುಣಾತೀತ)ವೆಂದರ್ಥ ಮತ್ತು 'ರು' ಕಾರವೆಂದರೆ ರೂಪಾತೀತ (ಮಾಯಾ ರೂಪವನ್ನು ಮೀರಿದ್ದು) ಎಂದರ್ಥ. ಹೀಗೆ ಗುಣಾತೀತವೂ ಮತ್ತು ರೂಪಾತೀತವೂ ಆದ (ಗುಣತ್ರಯವನ್ನು ಮೀರಿದ ಜ್ಯೋತಿರ್ಮಯವಾದ ಬಿಂದು ಸಂಬಂಧವಾದ, ಕಲಾರೂಪವಿಲ್ಲದ, ಚಿನ್ಮಯ ವಸ್ತುವನ್ನು) ಯಾವನು ಕೊಡುವನೋ (ಯಾವನು ಉಪದೇಶಿಸಿ ತಿಳಿಸಿ ಕೊಡುವನೋ) ಅವನೇ 'ಗುರು'ವೆಂದು ನೆನೆಯಲ್ಪಡುವನು.

**ಆಚಿನೋತಿ ಚ ಶಾಸ್ತ್ರಾರ್ಥಾನ್**
**ಆಚಾರೇ ಸ್ಥಾಪಯತ್ಯಲಮ್ ।**

**ಸ್ವಯಮಾಚರತೇ ಯಸ್ಮಾತ್**
**ಆಚಾರ್ಯಸ್ತೇನ ಚೋಚ್ಯತೇ ॥ 15–9**

ಶಾಸ್ತ್ರಾರ್ಥಗಳನ್ನು (ಶಿವಾಗಮ ಶಾಸ್ತ್ರ ರಹಸ್ಯಾರ್ಥಗಳನ್ನು) ಯಾರು ಸಂಗ್ರಹಿಸುತ್ತಾರೆಯೋ, ಆಚಾರದಲ್ಲಿ (ವೀರಶೈವಾಚಾರದಲ್ಲಿ) ಹೆಚ್ಚಿನ ಪ್ರಮಾಣದಲ್ಲಿ (ಶಿಷ್ಯರನ್ನು) ನಿಯೋಜಿಸುವನೋ ಮತ್ತು ತಾನೂ ಆಚರಿಸುವನೋ ಅವನೇ 'ಆಚಾರ್ಯ'ನೆಂದು ಹೇಳಲ್ಪಡುತ್ತಾನೆ.

**ಷಡಧ್ವಾತೀತಯೋಗೇನ**
**ಯತತೇ ಯಸ್ತು ದೇಶಿಕಃ ।**
**ಮಾಯಾಬ್ಧಿತಾರಣೋಪಾಯ–**
**ಹೇತುರ್ವಿಶ್ವಗುರುಃ ಶಿವಃ ॥ 15–10**

ಯಾವ ದೇಶಿಕನು (ಗುರುವು) ಷಡಧ್ವಗಳನ್ನು (ವರ್ಣಾಧ್ವ, ಪದಾಧ್ವ, ಮಂತ್ರಾಧ್ವ, ಭುವನಾಧ್ವ, ತತ್ತ್ವಾಧ್ವ, ಕಲಾಧ್ವಗಳನ್ನು) ಮೀರಿದ ಉಪಾಯದಿಂದ ಶಿವಯೋಗದಲ್ಲಿ ಯತ್ನಶೀಲನಾಗುತ್ತಾನೆಯೋ ಅವನೇ ವಿಶ್ವಗುರುವು, ಅವನೇ ಶಿವನು.

**ಅಖಂಡಂ ಯೇನ ಚೈತನ್ಯಮ್**
**ವ್ಯಜ್ಯತೇ ಸರ್ವವಸ್ತುಷು ।**
**ಆತ್ಮಯೋಗಪ್ರಭಾವೇನ**
**ಸ ಗುರುರ್ವಿಶ್ವಭಾಸಕಃ ॥ 15–11**

ತನ್ನ ಆತ್ಮಯೋಗ ಪ್ರಭಾವದಿಂದ (ಶಿವತಾದಾತ್ಮ್ಯ ಯೋಗದ) ಯಾವ ದೇಶಿಕನಿಗೆ ಜಗತ್ತಿನ ಎಲ್ಲ ವಸ್ತುಗಳಲ್ಲಿ ಅಖಂಡವಾದ ಚೈತನ್ಯವೇ ತೋರುವುದೋ ಅಂತಹ ಆ ಗುರುವನ್ನು ವಿಶ್ವಭಾಸಕನೆಂದು ಕರೆಯುತ್ತಾರೆ.

*ಇತಿ ದೀಕ್ಷಾಗುರುಸ್ಥಲಂ* *ಇಲ್ಲಿಗೆ ದೀಕ್ಷಾಗುರುಸ್ಥಲವು ಮುಗಿಯಿತು.*

## 46. ಅಥ ಶಿಕ್ಷಾಗುರುಸ್ಥಲಮ್
ಈಗ ಶಿಕ್ಷಾಗುರುಸ್ಥಲವು
**(9 ಶ್ಲೋಕಗಳು)**

**ದೀಕ್ಷಾಗುರುರಸೌ ಶಿಕ್ಷಾ–**
**ಹೇತುಃ ಶಿಷ್ಯಸ್ಯ ಬೋಧಕಃ ।**
**ಪ್ರಶ್ನೋತ್ತರಪ್ರವಕ್ತಾ ಚ**
**ಶಿಕ್ಷಾಗುರುರಿತೀರ್ಯತೇ ॥15–12**

ಆ ದೀಕ್ಷಾಗುರುವೇ ಶಿಷ್ಯನಿಗೆ ಬೋಧಕನಾಗಿ ಮತ್ತು ಪ್ರಶ್ನೋತ್ತರಗಳಿಗೆ ಪ್ರವಕ್ತಕನಾಗಿ ಶಿಕ್ಷಣಕ್ಕೆ ಕಾರಣವಾಗಿರುವುದರಿಂದ ಅವನನ್ನು 'ಶಿಕ್ಷಾಗುರು'ವೆಂದು ಕರೆಯಲಾಗಿದೆ.

**ಬೋಧಕೋಽಯಂ ಸಮಾಖ್ಯಾತೋ**
**ಬೋಧ್ಯಮೇತದಿತಿ ಸ್ಫುಟಮ್ ।**
**ಶಿಷ್ಯೇ ನಿಯುಜ್ಯತೇ ಯೇನ**
**ಸ ಶಿಕ್ಷಾಗುರುರುಚ್ಯತೇ ॥ 15–13**

ಈ ಗುರುವು ಬೋಧಕನೆಂದು ಹೇಳಲ್ಪಡುತ್ತಾನೆ. ಈ ಶಿವಯೋಗ ಜ್ಞಾನವು ಬೋಧ್ಯವೆಂದು ನಿಶ್ಚಯವಾಗಿ ತಿಳಿದುಕೊಳ್ಳಬೇಕು. ಈ ಬೋಧ್ಯ–ಬೋಧಕ ಭಾವನೆಯು ಯಾವ ಗುರುವಿನಿಂದ ಶಿಷ್ಯನಲ್ಲಿ ನಿಯೋಜಿಸಲ್ಪಡುತ್ತದೆಯೋ ಅವನು 'ಶಿಕ್ಷಾಗುರು'ವೆಂದು ಹೇಳಲ್ಪಡುತ್ತಾನೆ.

**ಸಂಸಾರತಿಮಿರೋನ್ಮಾಥಿ–**
**ಶರಚ್ಚಂದ್ರ ಮರೀಚಯಃ ।**
**ವಾಚೋ ಯಸ್ಯ ಪ್ರವರ್ತಂತೇ**
**ತಮಾಚಾರ್ಯಂ ಪ್ರಚಕ್ಷತೇ ॥ 15–14**

ಯಾವನ ಉಪದೇಶ ವಾಕ್ಯಗಳು ಸಂಸಾರವೆಂಬ ಅಂಧಕಾರವನ್ನು ತೊಲಗಿಸುವಲ್ಲಿ ಶರತ್‌ಕಾಲದ ಚಂದ್ರನ ಕಿರಣಗಳಂತೆ ಕಾರ್ಯಗೈಯುವುದೋ ಅವನನ್ನು ಆಚಾರ್ಯನೆಂದು ಕರೆಯುತ್ತಾರೆ.

**ದದಾತಿ ಯಃ ಪತಿಜ್ಞಾನಮ್**
**ಜಗನ್ಮಾಯಾನಿವರ್ತಕಮ್ ।**
**ಅದ್ವೈತವಾಸನೋಪಾಯಮ್**
**ತಮಾಚಾರ್ಯವರಂ ವಿದುಃ ॥ 15–15**

ಜಗದ್ರೂಪವಾದ ಮಾಯೆಯನ್ನು ನಿವರ್ತನಗೊಳಿಸುವ (ತೊಲಗಿರುವ) ಪತಿಜ್ಞಾನವನ್ನು (ಶಿವಜ್ಞಾನವನ್ನು) ಯಾವಾತನು ಕೊಡುತ್ತಾನೆಯೋ ಮತ್ತು ಅದ್ವೈತ (ಶಿವಾದ್ವೈತ) ವಾಸನೆಗೆ ಸಾಧನವಾದ ಆ ಗುರುವನ್ನು ಆಚಾರ್ಯಶ್ರೇಷ್ಠನೆಂದು ಹೇಳುತ್ತಾರೆ.

**ಪೂರ್ವಪಕ್ಷಂ ಸಮಾದಾಯ**
**ಜಗದ್ಭೇದವಿಕಲ್ಪನಮ್ ।**
**ಅದ್ವೈತಕೃತಸಿದ್ಧಾಂತೋ**
**ಗುರುರೇಷ ಗುಣಾಧಿಕಃ ॥ 15–16**

ಜಗತ್ತಿನ ಭೇದರೂಪವಾದ ವಿಕಲ್ಪಾದಿಗಳನ್ನು ಪೂರ್ವಪಕ್ಷ ರೂಪದಲ್ಲಿ ಗ್ರಹಿಸಿಕೊಂಡು (ಅವುಗಳನ್ನು ನಿರಸನಗೊಳಿಸಿ) ಶಿವಾದ್ವೈತ ಸಿದ್ಧಾಂತವನ್ನು ಸಿದ್ಧಗೊಳಿಸುವ ಈ ಶಿಕ್ಷಾಗುರುವೇ ಗುಣಾಧಿಕನು (ಶ್ರೇಷ್ಠನು) (ಪೂರ್ವಪಕ್ಷವಾದ ದ್ವೈತ ಸಿದ್ಧಾಂತವನ್ನು ಖಂಡಿಸಿ, ಶಿವಾದ್ವೈತ ಸಿದ್ಧಾಂತವನ್ನು ಬೋಧಿಸುವವನೇ ಶಿಕ್ಷಾಗುರುವು).

**ಸಂದೇಹವನಸಂದೋಹ–**
**ಸಮುಚ್ಛೇದಕುಠಾರಿಕಾ ।**
**ಯತ್ಸೂಕ್ತಿಧಾರಾ ವಿಮಲಾ**
**ಸ ಗುರೂಣಾಂ ಶಿಖಾಮಣಿಃ ॥ 15–17**

ಸಂದೇಹಗಳೆಂಬ ನಿಬಿಡವಾದ ಅರಣ್ಯವನ್ನು ಕತ್ತರಿಸಿ ಹಾಕುವ ಕೊಡಲಿಯಂತಿರುವ ನಿರ್ಮಲವಾದ ಸದುಪದೇಶವೆಂಬ ವಾಗ್ಝರಿ ಯಾರಿಗೆ ಇರುವುದೋ ಆ ಶಿಕ್ಷಾಗುರುವು ಗುರುಗಳಿಗೆಲ್ಲಾ ಶಿಖಾಮಣಿಯಾಗಿದ್ದಾನೆ.

**ಯತ್ಸೂಕ್ತಿದರ್ಪಣಾಭೋಗೇ**
**ನಿರ್ಮಲೇ ದೃಶ್ಯತೇ ಸದಾ ।**
**ಮೋಕ್ಷಶ್ರೀರ್ಬಿಂಬರೂಪೇಣ**
**ಸ ಗುರುರ್ಭವತಾರಕಃ ॥ 15–18**

ಯಾರ ಉಪದೇಶವೆಂಬ ನಿರ್ಮಲವಾದ ದರ್ಪಣದ ವಿಸ್ತಾರದಲ್ಲಿ ಮೋಕ್ಷಲಕ್ಷ್ಮಿಯು ಬಿಂಬರೂಪದಿಂದ ಕಾಣುವಳೋ ಆ ಶಿಕ್ಷಾಗುರುವೆ ಭವತಾರಕನು.

**ಶಿಷ್ಯಾಣಾಂ ಹೃದಯಾಲೇಖ್ಯಮ್**
**ಪ್ರದ್ಯೋತಯತಿ ಯಃ ಸ್ವಯಮ್ ।**
**ಜ್ಞಾನದೀಪಿಕಯಾಽನೇನ**
**ಗುರುಣಾ ಕಃ ಸಮೋ ಭವೇತ್ ॥ 15–19**

ಶಿಷ್ಯರ ಹೃದಯ ಕಮಲದಲ್ಲಿರುವ (ಅವರ) 'ನಿಜ'ರೂಪದ ಚಿತ್ರವನ್ನು ತನ್ನ ಜ್ಞಾನದೀಪದಿಂದ ಯಾರು ಪ್ರಕಾಶಗೊಳಿಸುವನೋ ಅಂತಹ ಶಿಕ್ಷಾಗುರುವಿಗೆ ಯಾರು ತಾನೇ ಸಮಾನರಾಗುವರು?

**ಪರಮಾದ್ವೈತವಿಜ್ಞಾನ**
**ಪರಮೌಷಧಿದಾನತಃ ।**
**ಸಂಸಾರರೋಗನಿರ್ಮಾಥೀ**
**ದೇಶಿಕಃ ಕೇನ ಲಭ್ಯತೇ ॥ 15–20**

ಪರಮಾದ್ವೈತ ವಿಜ್ಞಾನವೆಂಬ (ಶ್ರೇಷ್ಠವಾದ ಶಿವಾದ್ವೈತ ಜ್ಞಾನವೆಂಬ) ಉತ್ಕೃಷ್ಟ ಔಷಧವನ್ನು ಕೊಡುವುದರ ಮೂಲಕ ಸಂಸಾರವೆಂಬ ರೋಗವನ್ನು ಪರಿಹರಿಸುವ ಈ ಶಿಕ್ಷಾಗುರುವೆಂಬ ದೇಶಿಕನು ಯಾರಿಗೆ ತಾನೇ ಲಭ್ಯವಾಗಬಲ್ಲನು? (ಶಕ್ತಿಪಾತರೂಪವಾದ ಸಾತ್ವಿಕ ಭಾವಸಹಿತರಾದವರಿಗೆ ಮಾತ್ರ ಇಂತಹ ಗುರುವು ದೊರೆಯುತ್ತಾನೆ).

***ಇತಿ ಶಿಕ್ಷಾಗುರುಸ್ಥಲಂ*** *ಇಲ್ಲಿಗೆ ಶಿಕ್ಷಾಗುರುಸ್ಥಲವು ಮುಗಿಯಿತು.*

## 47. ಅಥ (ಪ್ರಜ್ಞಾ) ಜ್ಞಾನಗುರುಸ್ಥಲಮ್

ಈಗ ಜ್ಞಾನಗುರುಸ್ಥಲ

**(9 ಶ್ಲೋಕಗಳು)**

**ಉಪದೇಷ್ಟೋಪದೇಶಾನಾಮ್**
**ಸಂಶಯಚ್ಛೇದಕಾರಕಃ ।**
**ಸಮ್ಯಕ್‌ಜ್ಞಾನಪ್ರದಃ ಸಾಕ್ಷಾತ್**
**ಏಷ ಜ್ಞಾನಗುರುಃ ಸ್ಮೃತಃ ॥ 15–21**

ಉಪದೇಶಗಳನ್ನು (ಶಾಸ್ತ್ರದ ರಹಸ್ಯಾರ್ಥಗಳನ್ನು) ಉಪದೇಶಿಸುವ, (ಶಿಷ್ಯನ) ಮನಸ್ಸಿನಲ್ಲಿರುವ ಸಂಶಯಗಳನ್ನು ನಿವಾರಣೆ ಮಾಡುವ ಮತ್ತು ಸಾಕ್ಷಾತ್ ಸಮ್ಯಕ್ ಜ್ಞಾನವನ್ನು ಪ್ರಧಾನ ಮಾಡುವ (ಶಿವಜ್ಞಾನವನ್ನು ಅನುಗ್ರಹಿಸುವ) ಈ ಗುರುವೇ 'ಜ್ಞಾನಗುರು'ವೆಂದು ಕರೆಯಿಸಿಕೊಳ್ಳುವನು.

**ನಿರಸ್ತವಿಶ್ವಸಂಭೇದಮ್**
**ನಿರ್ವಿಕಾರಂ ಚಿದಂಬರಮ್।**
**ಸಾಕ್ಷಾತ್ಕರೋತಿ ಯೋ ಯುಕ್ತ್ಯಾ**
**ಸ ಜ್ಞಾನಗುರುರುಚ್ಯತೇ॥ 15–22**

ಯಾವ ಗುರುವು ಯುಕ್ತಿಯಿಂದ (ಶಿವಾದ್ವೈತ ಶಾಸ್ತ್ರದಲ್ಲಿ ಹೇಳಿದ ಯುಕ್ತಿ ಪ್ರಮಾಣಗಳಿಂದ ಮತ್ತು ಸ್ವಾನುಭಾವದಿಂದ) ಜಗತ್ತಿನ ಯಾವ ಭೇದವೂ ಇಲ್ಲದಿರುವ, ವಿಕಾರರಹಿತವಾದ 'ಚಿದಂಬರ'ವನ್ನು (ಚಿದಾಕಾಶ ತತ್ತ್ವದ ಸ್ವರೂಪ ಪರಮಾತ್ಮನನ್ನು) ತಾನು ಸಾಕ್ಷಾತ್ಕರಿಸಿಕೊಳ್ಳುವನೋ ಅವನೇ 'ಜ್ಞಾನಗುರು'ವೆಂದು ಹೇಳಲ್ಪಡುತ್ತಾನೆ.

**ಕಲಂಕವಾನಸೌ ಚಂದ್ರಃ**
**ಕ್ಷಯವೃದ್ಧಿಪರಿಪ್ಲುತಃ ।**
**ನಿಷ್ಕಲಂಕಸ್ಥಿತೋ ಜ್ಞಾನ–**

**ಚಂದ್ರಮಾ ನಿರ್ವಿಕಾರವಾನ್ ॥ 15–23**

ಚಂದ್ರನು (ಆಕಾಶಚಂದ್ರನು) ಕಲಂಕವುಳ್ಳವನು ಮತ್ತು ಕ್ಷಯ ವೃದ್ಧಿಗಳಿಂದ ಕೂಡಿಕೊಂಡಿರುವವನು ಆಗಿರುತ್ತಾನೆ. ಆದರೆ ಈ ಜ್ಞಾನವೆಂಬ 'ಜ್ಞಾನಚಂದ್ರನು' ನಿಷ್ಕಲಂಕಿಯೂ, ನಿರ್ವಿಕಾರಿಯೂ ಆಗಿದ್ದಾನೆ.

**ಪಾರ್ಶ್ವಸ್ಥತಿಮಿರಂ ಹಂತಿ**
**ಪ್ರದೀಪೋ ಮಣಿನಿರ್ಮಿತಃ ।**
**ಸರ್ವಗಾಮಿ ತಮೋ ಹಂತಿ**
**ಬೋಧದೀಪೋ ನಿರಂಕುಶಃ ॥ 15–24**

ಮಣಿಯಿಂದ ನಿರ್ಮಿಸಲ್ಪಟ್ಟ ದೀಪವು ಸಮೀಪದಲ್ಲಿರುವ ತಿಮಿರವನ್ನು (ಕತ್ತಲೆಯನ್ನು) ನಾಶಮಾಡುವುದು. ಆದರೆ ನಿರಂಕುಶವಾದ (ಅಪರಿಚ್ಛಿನ್ನವಾದ) ಬೋಧದೀಪವು (ಶಿವಜ್ಞಾನದ ದೀಪವು) ಎಲ್ಲೆಡೆಯಲ್ಲಿರುವ (ತಮಸ್ಸನ್ನು) ಅಜ್ಞಾನವನ್ನು ನಾಶಮಾಡುತ್ತದೆ.

**ಸರ್ವಾರ್ಥಸಾಧಕಜ್ಞಾನ–**
**ವಿಶೇಷಾದೇಶತತ್ಪರಃ ।**
**ಜ್ಞಾನಾಚಾರ್ಯಃ ಸಮಸ್ತಾನಾಮ್**
**ಅನುಗ್ರಹಕರಃ ಶಿವಃ ॥ 15–25**

ಸರ್ವಾರ್ಥಸಾಧಕವಾದ (ಭೋಗ ಮೋಕ್ಷಗಳಿಗೆ ಸಾಧಕವಾದ) ಜ್ಞಾನ ವಿಶೇಷವನ್ನು (ಶಿವಾದ್ವೈತ ಜ್ಞಾನವನ್ನು) ಆದೇಶಿಸುವುದರಲ್ಲಿ (ಉಪದೇಶಿಸುವಲ್ಲಿ) ತತ್ಪರನಾದ ಮತ್ತು ಎಲ್ಲ ಮುಮುಕ್ಷುಗಳಿಗೆ ಅನುಗ್ರಹವನ್ನು ಮಾಡುವ ಜ್ಞಾನಾಚಾರ್ಯನು ಸಾಕ್ಷಾತ್ ಶಿವನೇ ಆಗಿದ್ದಾನೆ.

**ಕಟಾಕ್ಷಚಂದ್ರಮಾ ಯಸ್ಯ**
**ಜ್ಞಾನಸಾಗರವರ್ಧನಃ ।**
**ಸಂಸಾರತಿಮಿರಚ್ಛೇದೀ**
**ಸ ಗುರುರ್ಜ್ಞಾನಪಾರಗಃ ॥15–26**

ಯಾವ ಗುರುವಿನ ಕೃಪಾಕಟಾಕ್ಷವೆಂಬ ಚಂದ್ರನು (ಶಿಷ್ಯನ) ಜ್ಞಾನಸಾಗರವನ್ನು ಹೆಚ್ಚಿಸುವನೋ ಮತ್ತು ಸಂಸಾರವೆಂಬ ಕತ್ತಲೆಯನ್ನು ಹೋಗಲಾಡಿಸುವನೋ ಆ ಗುರುವು ಜ್ಞಾನಪಾರಂಗತನು.

**ಬಹಿಸ್ತಿಮಿರವಿಚ್ಛೇತ್ತಾ**
**ಭಾನುರೇಷ ಪ್ರಕೀರ್ತಿತಃ ।**
**ಬಹಿರಂತಸ್ತಮಶ್ಛೇದೀ**
**ವಿಭುರ್ದೇಶಿಕಭಾಸ್ಕರಃ ॥ 15–27**

ಈ ಕಾಣುವ ಸೂರ್ಯನು ಬಹಿರಂಗದಲ್ಲಿರುವ ಕತ್ತಲೆಯನ್ನು ಕಳೆಯುವ ನೆಂದು ಹೇಳಲ್ಪಟ್ಟಿರುವನು. ಆದರೆ ಈ ವಿಭುವಾದ (ಚಿದ್ವ್ಯಾಪಕನಾದ) ದೇಶಿಕನೆಂಬ ಭಾಸ್ಕರನು (ಜ್ಞಾನಗುರುವೆಂಬ ಸೂರ್ಯನು) ಹೊರ ಒಳಗಿನ ಅಜ್ಞಾನವನ್ನು ದೂರಮಾಡುವನು.

**ಕಟಾಕ್ಷಲೇಶಮಾತ್ರೇಣ**
**ವಿನಾ ಧ್ಯಾನಾದಿಕಲ್ಪನಮ್ ।**
**ಶಿವತ್ವಂ ಭಾವಯೇದ್ಯತ್ರ**
**ಸ ವೇಧಃ ಶಾಂಭವೋ ಮತಃ ॥ 15–28**

ಧ್ಯಾನ ಧಾರಣಾದಿ ಅಷ್ಟಾಂಗಯೋಗಗಳನ್ನು ಮಾಡದೆ ಯಾವ ಗುರುವಿನ ಸ್ವಲ್ಪವೇ ಆದ ಕೃಪಾಕಟಾಕ್ಷದಿಂದಲೇ ಶಿಷ್ಯನಲ್ಲಿ ಶಿವತ್ವವು (ಶಿವನೇ ನಾನೆಂಬ ಜ್ಞಾನವು) ವ್ಯಕ್ತವಾಗುವುದೋ ಆ ವೇಧವು (ಗುರುವಿನಿಂದ ಅನುಗ್ರಹಿಸಲ್ಪಟ್ಟ ಶಿವತ್ವ ಸಮಾವೇಶವು) 'ಶಾಂಭವಜ್ಞಾನ'ವೆಂದು ಕರೆಯಲಾಗುವುದು.

**ಶಿವವೇಧಕರೇ ಜ್ಞಾನೇ**
**ದತ್ತೇ ಯೇನ ಸುನಿರ್ಮಲೇ ।**
**ಜೀವನ್ಮುಕ್ತೋ ಭವೇಚ್ಛಿಷ್ಯಃ**
**ಸ ಗುರುರ್ಜ್ಞಾನಸಾಗರಃ ॥ 15–29**

ಶಿಷ್ಯನಲ್ಲಿ ಶಿವವೇಧವನ್ನುಂಟು ಮಾಡುವ (ಶಿವತ್ವವನ್ನು ಸಮಾವೇಶ ಗೊಳಿಸುವ) ನಿರ್ಮಲವಾದ ಜ್ಞಾನವು ಯಾವ ಗುರುವಿನಿಂದ ಕೊಟ್ಟೊಡನೆ ಶಿಷ್ಯನು ಜೀವನ್ಮುಕ್ತನಾಗುವನೋ ಆ ಗುರುವು ಜ್ಞಾನಸಾಗರನು.

*ಇತಿ (ಪ್ರಜ್ಞಾ) ಜ್ಞಾನಗುರುಸ್ಥಲಂ ಇಲ್ಲಿಗೆ (ಪ್ರಜ್ಞಾ) ಜ್ಞಾನಗುರುಸ್ಥಲವು ಮುಗಿಯಿತು.*

## 48. ಅಥ ಕ್ರಿಯಾಲಿಂಗಸ್ಥಲಮ್
ಈಗ ಕ್ರಿಯಾಲಿಂಗಸ್ಥಲವು
**(7 ಶ್ಲೋಕಗಳು)**

**ಗುರೋರ್ವಿಜ್ಞಾನಯೋಗೇನ**
**ಕ್ರಿಯಾ ಯತ್ರ ವಿಲೀಯತೇ ।**
**ತತ್ಕ್ರಿಯಾಲಿಂಗಮಾಖ್ಯಾತಮ್**
**ಸರ್ವೈರಾಗಮಪಾರಗೈಃ ॥ 15–30**

ಜ್ಞಾನಗುರುವಿನಿಂದ ದೊರೆತ ಅನುಭವಾತ್ಮಕ ಜ್ಞಾನಸಂಬಂಧದಿಂದ ಯಾವ ಲಿಂಗದಲ್ಲಿ ಎಲ್ಲ ಕ್ರಿಯೆಗಳು ವಿಲಯಗೊಳ್ಳುವವೋ ಆ ಲಿಂಗಕ್ಕೆ ಎಲ್ಲರೂ ಶಿವಾಗಮಗಳಲ್ಲಿ ಪಾರಂಗತರಾದವರು (ಎಲ್ಲ ವೀರಶೈವಾಚಾರ್ಯರು) 'ಕ್ರಿಯಾಲಿಂಗ'ವೆಂದು ಹೇಳುತ್ತಾರೆ.

**ಪರಾನಂದಚಿದಾಕಾರಮ್**
**ಪರಬ್ರಹ್ಮೈವ ಕೇವಲಮ್ ।**
**ಲಿಂಗಂ ಸದ್ರೂಪತಾಪನ್ನಮ್**
**ಲಕ್ಷ್ಯತೇ ವಿಶ್ವಸಿದ್ಧಯೇ ॥ 15–31**

ಪರಮಾನಂದ ಸ್ವರೂಪವೂ, ಚಿದ್ರೂಪವೂ ಆದ ಆ ಕೇವಲ ಪರಬ್ರಹ್ಮವೇ ವಿಶ್ವದಲ್ಲಿಯ ಎಲ್ಲ ಸತ್ಕ್ರಿಯೆಗಳ ಸಿದ್ಧಿಗಾಗಿ ಸದ್ರೂಪತೆಯನ್ನು ತಾಳಿ, ಇಷ್ಟಲಿಂಗ ರೂಪದಲ್ಲಿ ಕುರುಹಾಗಿ ದೊರೆತಿದೆ.

**ಲಿಂಗಮೇವ ಪರಂ ಜ್ಯೋತಿಃ**
**ಭವತಿ ಬ್ರಹ್ಮಕೇವಲಮ್ ।**
**ತಸ್ಮಾತ್ ತತ್ಪೂಜನಾದೇವ**
**ಸರ್ವಕರ್ಮಫಲೋದಯಃ ॥ 15–32**

ಪರಂಜ್ಯೋತಿ ಸ್ವರೂಪವಾದ, ಕೇವಲ ಸ್ವರೂಪದ (ಒಂದೇ ಆದ) ಆ ಪರಬ್ರಹ್ಮವೇ ಈ ಲಿಂಗವು (ಇಷ್ಟಲಿಂಗವು). ಆದ್ದರಿಂದ ಈ ಲಿಂಗದ ಪೂಜೆಯಿಂದಲೇ ಎಲ್ಲ ಸತ್ಕರ್ಮಗಳು ಫಲಿಸುವುವು.

**ಪರಿತ್ಯಜ್ಯ ಕ್ರಿಯಾಃ ಸರ್ವಾ**
**ಲಿಂಗಪೂಜೈಕತತ್ಪರಾಃ ।**
**ವರ್ತಂತೇ ಯೋಗಿನಃ ಸರ್ವೇ**
**ತಸ್ಮಾಲ್ಲಿಂಗಂ ವಿಶಿಷ್ಯತೇ ॥ 15–33**

ಆದ್ದರಿಂದ ಎಲ್ಲ (ಶಿವ)ಯೋಗಿಗಳು ಬೇರೆಲ್ಲಾ ಕ್ರಿಯೆಗಳನ್ನು ತ್ಯಜಿಸಿ ಶಿವಲಿಂಗ ಪೂಜೆಯೊಂದರಲ್ಲಿಯೇ ತತ್ಪರರಾಗಿ ಇರುತ್ತಾರೆ. ಅಂತೆಯೇ ಕ್ರಿಯಾಲಿಂಗವು ಸರ್ವೋತ್ಕೃಷ್ಟವಾಗಿದೆ.

**ಯಜ್ಞಾದಯಃ ಕ್ರಿಯಾಃ ಸರ್ವಾ**
**ಲಿಂಗಪೂಜಾಂಶಸಮ್ಮಿತಾಃ ।**
**ಇತಿ ಯತ್ಪೂಜ್ಯತೇ ಸಿದ್ಧೈಃ**
**ತತ್ಕ್ರಿಯಾಲಿಂಗಮುಚ್ಯತೇ ॥ 15–34**

ಯಜ್ಞ ಯಾಗ ಮೊದಲಾದ ಎಲ್ಲ ಕ್ರಿಯೆಗಳು ಈ ಇಷ್ಟಲಿಂಗಪೂಜೆಯ ಫಲದ ಒಂದು ಅಂಶಕ್ಕೆ ಸಮನಾಗಿರುತ್ತದೆ. ಈ ರೀತಿಯಾಗಿ ತಿಳಿದುಕೊಂಡ (ಶಿವಯೋಗ) ಸಿದ್ಧರಿಂದ ಪೂಜೆಗೊಳ್ಳುವ ಯಾವ ಲಿಂಗವಿದೆಯೋ ಅದುವೇ ಕ್ರಿಯಾಲಿಂಗವೆಂದು ಹೇಳಲ್ಪಡುತ್ತದೆ.

**ಕಿಂ ಯಜ್ಞೈರಗ್ನಿಹೋತ್ರಾದ್ಯೈಃ**
**ಕಿಂ ತಪೋಭಿಶ್ಚ ದುಶ್ಚರೈಃ ।**
**ಲಿಂಗಾರ್ಚನರತಿರ್ಯಸ್ಯ**
**ಸ ಸಿದ್ಧಃ ಸರ್ವಕರ್ಮಸು ॥ 15–35**

ಕ್ರಿಯಾಲಿಂಗಪೂಜೆಯಲ್ಲಿ ಯಾರಿಗೆ ಆಸಕ್ತಿ ಇದೆಯೋ ಅವನಿಗೆ ಎಲ್ಲ ಸತ್ಕರ್ಮಗಳ ಸಿದ್ಧಿಗಳು ಉಂಟಾಗುತ್ತವೆ. ಆದ್ದರಿಂದ ಅವನಿಗೆ ಅಗ್ನಿಹೋತ್ರಾದಿ ಯಜ್ಞಗಳಿಂದಲೇ ಆಗಲಿ, ಅಸಾಧ್ಯವಾದ ತಪಸ್ಸುಗಳಿಂದಲೇ ಆಗಲಿ ಏನು ಪ್ರಯೋಜನ? (ಅವನಿಗೆ ಯಾವ ಪ್ರಯೋಜನವೂ ಇರುವುದಿಲ್ಲ).

**ಬ್ರಹ್ಮವಿಷ್ಣ್ವಾದಯಃ ಸರ್ವೇ**
**ವಿಬುಧಾ ಲಿಂಗಮಾಶ್ರಿತಾಃ ।**
**ಸಿದ್ಧಾಃ ಸ್ವಸ್ವಪದೇ ಭಾಂತಿ**
**ಜಗತ್ತಂತ್ರಾಧಿಕಾರಿಣಃ ॥ 15–36**

ಜಗತ್ತಿನ ನಿರ್ಮಾಣಾದಿ ತಂತ್ರಗಳಿಗೆ (ಕ್ರಿಯೆಗಳಿಗೆ) ಅಧಿಕಾರಿಗಳಾದ ಬ್ರಹ್ಮ, ವಿಷ್ಣುವೇ ಮೊದಲಾದ ಎಲ್ಲ ದೇವತೆಗಳು ಲಿಂಗವನ್ನೇ ಆಶ್ರಯಿಸಿದವರಾಗಿ (ಲಿಂಗಪೂಜೆಯನ್ನೇ ಮಾಡಿ) ತಮ್ಮ ತಮ್ಮ ಪದಗಳಲ್ಲಿ ಸಿದ್ಧಿಯನ್ನು ಪಡೆದವರಾಗಿರುತ್ತಾರೆ.

*ಇತಿ ಕ್ರಿಯಾಲಿಂಗಸ್ಥಲಂ*
*ಇಲ್ಲಿಗೆ ಕ್ರಿಯಾಲಿಂಗಸ್ಥಲವು ಮುಗಿಯಿತು.*

## 49. ಅಥ ಭಾವಲಿಂಗಸ್ಥಲಮ್

ಈಗ ಭಾವಲಿಂಗಸ್ಥಲವು

**(8 ಶ್ಲೋಕಗಳು)**

**ಕ್ರಿಯಾ ಯಥಾ ಲಯಂ ಪ್ರಾಪ್ತಾ**
**ತಥಾ ಭಾವೋಽಪಿ ಲೀಯತೇ ।**
**ಯತ್ರ ತದ್ ದೇಶಿಕೈರುಕ್ತಮ್**
**ಭಾವಲಿಂಗಮಿತಿ ಸ್ಫುಟಮ್ ॥ 15–37**

ಈ ಹಿಂದೆ ಹೇಳಿದಂತೆ ಯಾವ ಪ್ರಕಾರವಾಗಿ ಕ್ರಿಯೆಗಳು ಲಯವನ್ನು ಹೊಂದುವುವೋ, ಅದರಂತೆ ಯಾವ ಲಿಂಗದಲ್ಲಿ ಭಾವವೂ ಸಹ ಲೀನವಾಗುವುದೋ ಅದು ಭಾವಲಿಂಗ (ಪ್ರಾಣಲಿಂಗ)ವೆಂದು ದೇಶಿಕರು (ವೀರಶೈವ ಆಚಾರ್ಯರು) ಸ್ಪಷ್ಟವಾಗಿ ಹೇಳುತ್ತಾರೆ.

**ಭಾವೇನ ಗೃಹ್ಯತೇ ದೇವೋ**
**ಭಗವಾನ್ ಪರಮಃ ಶಿವಃ ।**
**ಕಿಂ ತೇನ ಕ್ರೀಯತೇ ತಸ್ಯ**
**ನಿತ್ಯಪೂರ್ಣೋ ಹಿ ಸ ಸ್ಮೃತಃ ॥ 15–38**

ಭಗವಂತನಾದ (ಷಡ್ಗುಣೈಶ್ವರ್ಯ ಸಂಪನ್ನನಾದ), ಪರಮಶಿವನಾದ ದೇವನು ಭಾವದಿಂದಲೇ (ಪರಿಪೂರ್ಣವಾದ ಶಿವಾತ್ಮಕ ವೃತ್ತಿಯಿಂದಲೇ) ಗ್ರಹಿಸಲ್ಪಡುತ್ತಾನೆ. ಹೀಗೆ ನಿತ್ಯಪರಿಪೂರ್ಣನೆಂದು ಹೇಳಲ್ಪಟ್ಟ ಅವನಿಗೆ ಕೇವಲ ಕ್ರಿಯೆಗಳಿಂದ ಏನು ಪ್ರಯೋಜನ?

**ಅಖಂಡಪರಮಾನಂದ–**
**ಬೋಧರೂಪಃ ಪರಃ ಶಿವಃ ।**
**ಭಕ್ತಾನಾಮುಪಚಾರೇಣ**
**ಭಾವಯೋಗಾತ್ ಪ್ರಸೀದತಿ ॥ 15–39**

ಅಖಂಡನೂ (ಅಪರಿಚ್ಛಿನ್ನನೂ), ಪರಮಾನಂದ ಸ್ವರೂಪವೂ ಮತ್ತು ಬೋಧರೂಪನೂ (ಚಿದ್ರೂಪನೂ) ಆದ ಆ ಪರಶಿವನು ಭಾವದಿಂದ ಮಾಡಿದ ಭಕ್ತರ ಭಾವನಾತ್ಮಕವಾದ ಉಪಚಾರಗಳಿಂದ ಪ್ರಸನ್ನನಾಗುತ್ತಾನೆ.

**ಮೃಚ್ಛಿಲಾವಿಹಿತಾಲ್ಲಿಂಗಾದ್**
**ಭಾವಲಿಂಗಂ ವಿಶಿಷ್ಯತೇ ।**
**ನಿರಸ್ತಸರ್ವದೋಷತ್ವಾದ್**
**ಜ್ಞಾನಮಾರ್ಗಪ್ರವೇಶನಾತ್ ॥ 15–40**

ಮಣ್ಣು ಮತ್ತು ಶಿಲೆ ಮುಂತಾದ ಬಾಹ್ಯವಸ್ತುಗಳಿಂದ ನಿರ್ಮಿಸಲ್ಪಟ್ಟ ಲಿಂಗಕ್ಕಿಂತಲೂ ಭಾವಲಿಂಗವು (ಪ್ರಾಣಲಿಂಗವು) ವಿಲಕ್ಷಣವಾಗಿರುತ್ತದೆ. ಏಕೆಂದರೆ ಅದು ಸರ್ವದೋಷಗಳಿಂದ ವಿಮುಕ್ತವಾಗಿದ್ದು ಜ್ಞಾನಮಾರ್ಗ ಪ್ರವೇಶಕ್ಕೆ ಸಹಾಯಕವಾಗುತ್ತದೆ.

**ವಿಹಾಯ ಬಾಹ್ಯಲಿಂಗಾನಿ**
**ಚಿಲ್ಲಿಂಗಂ ಮನಸಿ ಸ್ಮರನ್ ।**
**ಪೂಜಯೇದ್ ಭಾವಪುಷ್ಪೈರ್ಯೋ**
**ಭಾವಲಿಂಗೀತಿ ಕಥ್ಯತೇ ॥ 15–41**

ಬಾಹ್ಯ (ಇಷ್ಟಲಿಂಗದ ಹೊರತಾದ) ಲಿಂಗಗಳನ್ನು ಬಿಟ್ಟು, ಚಿಲ್ಲಿಂಗವನ್ನೇ ಮನಸ್ಸಿನಲ್ಲಿ ಸ್ಮರಿಸುತ್ತಾ ಭಾವಪುಷ್ಪಗಳಿಂದ ಯಾವಾತನು ಅದನ್ನು ಪೂಜಿಸುತ್ತಾನೆಯೋ ಅವನು ಭಾವಲಿಂಗಿಯೆಂದು ಕರೆಯಲ್ಪಡುತ್ತಾನೆ.

**ಮೂಲಾಧಾರೇಽಥವಾ ಚಿತ್ತೇ**
**ಭ್ರೂಮಧ್ಯೇ ವಾ ಸುನಿರ್ಮಲಮ್ ।**
**ದೀಪಾಕಾರಂ ಯಜನ್ ಲಿಂಗಮ್**
**ಭಾವದ್ರವ್ಯೈಃ ಸ ಯೋಗವಾನ್ ॥ 15-42**

ತನ್ನ ಮೂಲಾಧಾರದಲ್ಲಿ (ಆಧಾರ ಚಕ್ರದಲ್ಲಿ), ಚಿತ್ತದಲ್ಲಿ (ಹೃದಯದ ಅನಾಹತ ಚಕ್ರದಲ್ಲಿ) ಅಥವಾ ಭ್ರೂಮಧ್ಯದಲ್ಲಿ (ಆಜ್ಞಾ ಚಕ್ರದಲ್ಲಿ) ಅತ್ಯಂತ ನಿರ್ಮಲವಾದ ದೀಪಾಕಾರದ ಲಿಂಗವನ್ನು ಭಾವದ್ರವ್ಯಗಳಿಂದ ಯಾವಾತನು ಪೂಜಿಸುವನೋ ಅವನೇ ಯೋಗಿಯು (ಶಿವಯೋಗಿಯು).

**ಸ್ವಾನುಭೂತಿಪ್ರಮಾಣೇನ**
**ಜ್ಯೋತಿರ್ಲಿಂಗೇನ ಸಂಯುತಃ ।**
**ಶಿಲಾಮೃದ್ದಾರುಸಂಭೂತಮ್**
**ನ ಲಿಂಗಂ ಪೂಜಯತ್ಯಸೌ ॥ 15-43**

ಸ್ವಾನುಭೂತಿಯ (ಶಿವನೇ ನಾನೆಂಬ ಅನುಭವ ರೂಪವಾದ) ಪ್ರಮಾಣದಿಂದ ಜ್ಯೋತಿರ್ಲಿಂಗದೊಡನೆ ಬೆರೆತಿರುವವನು ಶಿಲೆ, ಮಣ್ಣು, ಕಟ್ಟಿಗೆ ಮುಂತಾದವುಗಳಿಂದ ನಿರ್ಮಾಣಗೊಂಡ ಲಿಂಗಗಳನ್ನು (ಇಷ್ಟಲಿಂಗ ಹೊರತಾದ ಬಾಹ್ಯಲಿಂಗಗಳನ್ನು) ಪೂಜಿಸುವುದಿಲ್ಲ.

**ಕ್ರಿಯಾರೂಪಾ ತು ಯಾ ಪೂಜಾ**
**ಸಾ ಜ್ಞೇಯಾ ಸ್ವಲ್ಪಸಂವಿದಾಮ್ ।**
**ಅಂತರಾ ಭಾವಪೂಜಾ ತು**
**ಶಿವಸ್ಯ ಜ್ಞಾನಿನಾಂ ಮತಾ ॥ 15-44**

ಕ್ರಿಯಾರೂಪವಾದ (ಬಾಹ್ಯ ಉಪಚಾರಗಳಿಂದ ಮಾಡಲ್ಪಡುವ) ಯಾವ ಪೂಜೆಯಿದೆಯೋ ಆ ಪೂಜೆಯನ್ನು ಸ್ವಲ್ಪ ತಿಳುವಳಿಕೆ ಉಳ್ಳವರದ್ದೆಂದು ತಿಳಿದುಕೊಳ್ಳಬೇಕು. ಆದರೆ ಅಂತರಂಗದಲ್ಲಿ ಮಾಡಲ್ಪಡುವ ಶಿವನ ಆ ಭಾವಪೂಜೆಯು ಜ್ಞಾನಿಗಳಿಗೆ (ಶಿವಾದ್ವೈತ ಜ್ಞಾನಿಗಳಿಗೆ) ಸಮ್ಮತವಾದುದು (ಇಷ್ಟಲಿಂಗ ಪೂಜೆಯನ್ನು ಮಾಡುತ್ತಾ ಭಾವಲಿಂಗದ ಕಡೆಗೆ ಸಾಧಕನು ಸಾಗಿದಾಗಲೇ ಪೂರ್ಣಜ್ಞಾನಿಯಾಗುವನು).

*ಇತಿ ಭಾವಲಿಂಗಸ್ಥಲಂ ಇಲ್ಲಿಗೆ ಭಾವಲಿಂಗಸ್ಥಲವು ಮುಗಿಯಿತು.*

## 50. ಅಥ ಜ್ಞಾನಲಿಂಗಸ್ಥಲಮ್

ಈಗ ಜ್ಞಾನಲಿಂಗಸ್ಥಲವು

**(6 ಶ್ಲೋಕಗಳು)**

**ತದ್ಭಾವಜ್ಞಾಪಕಜ್ಞಾನಮ್**
**ಲಯಂ ಯತ್ರ ಸಮಶ್ನುತೇ ।**
**ತಜ್ಜ್ಞಾನಲಿಂಗಮಾಖ್ಯಾತಮ್**
**ಶಿವತತ್ತ್ವಾರ್ಥಕೋವಿದೈಃ ॥ 15-45**

ಆ ಭಾವಲಿಂಗವನ್ನು ಜ್ಞಾಪಕ ಮಾಡಿಕೊಡುವ (ಅರುಹಿಸುವ) ಜ್ಞಾನವು ಯಾವುದರಲ್ಲಿ ಸಂಪೂರ್ಣವಾಗಿ ಲಯವನ್ನು ಹೊಂದುವುದೋ, ಅದನ್ನೇ ಶಿವತತ್ತ್ವಕೋವಿದರು ಜ್ಞಾನಲಿಂಗವೆಂದು ಕರೆಯುತ್ತಾರೆ.

**ತ್ರಿಮೂರ್ತಿಭೇದನಿರ್ಮುಕ್ತಮ್**
**ತ್ರಿಗುಣಾತೀತವೈಭವಮ್ ।**
**ಬ್ರಹ್ಮ ಯದ್ ಬೋಧ್ಯತೇ ತತ್ತು**
**ಜ್ಞಾನಲಿಂಗಮುದಾಹೃತಮ್ ॥ 15-46**

ಬ್ರಹ್ಮ, ವಿಷ್ಣು ರುದ್ರರೆಂಬ ತ್ರಿಮೂರ್ತಿ ರೂಪವಾದ ಭೇದವಿಲ್ಲದಿರುವ (ಅಖಂಡವಾದ) ಸತ್ವ, ರಜ, ತಮಸ್ಸುಗಳೆಂಬ ತ್ರಿಗುಣಗಳ ವೈಭವಕ್ಕಿಂತಲೂ ಮಿಗಿಲಾದ ವೈಭವವುಳ್ಳ ಇಂತಹ ಆ ಯಾವ ಪರಬ್ರಹ್ಮತತ್ತ್ವವು ಶ್ರುತಿ, ಗುರು, ಸ್ವಾನುಭಾವಗಳಿಂದ ಬೋಧಿಸಲ್ಪಡುತ್ತದೆಯೋ ಅದುವೇ 'ಜ್ಞಾನಲಿಂಗ'ವೆಂದು ಹೇಳಲ್ಪಡುತ್ತದೆ.

**ಸ್ಥೂಲೇ ಕ್ರಿಯಾಸಮಾಪತ್ತಿಃ**
**ಸೂಕ್ಷ್ಮೇ ಭಾವಸ್ಯ ಸಂಭವಃ ।**
**ಸ್ಥೂಲಸೂಕ್ಷ್ಮಪದಾತೀತೇ**
**ಜ್ಞಾನಮೇವ ಪರಾತ್ಮನಿ ॥ 15-47**

ಪರಾತ್ಪರವಾದ ಆ ಜ್ಞಾನಲಿಂಗವೇ ಸ್ಥೂಲರೂಪದಲ್ಲಿ ಇಷ್ಟಲಿಂಗವಾಗಿರುವ ಕಾರಣ, ಅಲ್ಲಿ ಕ್ರಿಯಾರೂಪವಾದ ಪೂಜಾಸಂಪತ್ತಿಯು ಅರ್ಪಿತವಾಗುವುದು. ಅದುವೇ ಸೂಕ್ಷ್ಮ ರೂಪದಲ್ಲಿ ಭಾವಲಿಂಗ (ಪ್ರಾಣಲಿಂಗ)ವಾದ ಕಾರಣ ಅದರಲ್ಲಿ ಭಾವಮಯವಾದ ಸಂಪತ್ತಿಯು ಅರ್ಪಿತವಾಗುವುದು. ಇನ್ನು ಈ ಸ್ಥೂಲ ಸೂಕ್ಷ್ಮಕ್ಕಿಂತಲೂ ಅತೀತವಾದ ಪರಾತ್ಪರವಾದ ಜ್ಞಾನಲಿಂಗ (ತೃಪ್ತಿಲಿಂಗ)ಕ್ಕೆ ಜ್ಞಾನವೇ ಅರ್ಪಣೀಯವಾಗುವುದು.

**ಕಲ್ಪಿತಾನಿ ಹಿ ರೂಪಾಣಿ**
**ಸ್ಥೂಲಾನಿ ಪರಮಾತ್ಮನಃ ।**
**ಸೂಕ್ಷ್ಮಾಣ್ಯಪಿ ಚ ತೈಃ ಕಿಂ ವಾ**
**ಪರಬೋಧಂ ಸಮಾಚರೇತ್ ॥ 15-48**

ಪರಮಾತ್ಮನ ಸ್ಥೂಲ ಹಾಗೂ ಸೂಕ್ಷ್ಮ ರೂಪಗಳು ಕಲ್ಪಿತಗಳಾಗಿರುತ್ತವೆ. ಮುಮುಕ್ಷುಗಳಿಗೆ ಅವುಗಳಿಂದ ಪ್ರಯೋಜನವಿಲ್ಲದ ಕಾರಣ, ಪರಬೋಧರೂಪವಾದ ತೃಪ್ತಿಲಿಂಗವನ್ನೇ ಸರ್ವೋತ್ಕೃಷ್ಟವೆಂದು ತಿಳಿಯಬೇಕು.

**ಪರಾತ್ಪರಂ ತು ಯದ್ ಬ್ರಹ್ಮ**
**ಪರಮಾನಂದಲಕ್ಷಣಮ್ ।**
**ಶಿವಾಖ್ಯಂ ಜ್ಞಾಯತೇ ಯೇನ**
**ಜ್ಞಾನಲಿಂಗೀತಿ ಕಥ್ಯತೇ ॥ 15-49**

ಪರಮಾನಂದವೇ ಸ್ವರೂಪಲಕ್ಷಣವಾಗಿರುವ ಈ ಪರಾತ್ಪರ ಬ್ರಹ್ಮರೂಪವಾದ ಶಿವತತ್ತ್ವವು ಯಾರಿಂದ ತಿಳಿಯಲ್ಪಡುತ್ತದೆಯೋ ಅವನೇ ಜ್ಞಾನಲಿಂಗಿಯೆಂದು ಕರೆಯಲ್ಪಡುತ್ತಾನೆ.

**ಬಾಹ್ಯಕ್ರಿಯಾಂ ಪರಿತ್ಯಜ್ಯ**
**ಚಿಂತಾಮಪಿ ಚ ಮಾನಸೀಮ್ ।**
**ಅಖಂಡಜ್ಞಾನರೂಪತ್ವಮ್**
**ಯೋ ಭಜೇನ್ಮುಕ್ತ ಏವ ಸಃ ॥ 15-50**

ಪೂರ್ವೋಕ್ತವಾದ ಇಷ್ಟಲಿಂಗದ ಬಾಹ್ಯಕ್ರಿಯಾ ರೂಪವಾದ ಪೂಜೆಯನ್ನು ಮತ್ತು ಅದರಂತೆ ಪ್ರಾಣಲಿಂಗಿ ಸಂಬಂಧಿಯಾದ ಧ್ಯಾನರೂಪವಾದ ಅಂತಃಪೂಜೆಯನ್ನೂ ಸಹ ಪರಿತ್ಯಜಿಸಿ ಯಾವಾತನು ಅಖಂಡ ಜ್ಞಾನರೂಪವಾದ ತೃಪ್ತಿಲಿಂಗವನ್ನು ಪೂಜಿಸುವನೋ ಅವನೇ ಮುಕ್ತನು.

*ಇತಿ ಜ್ಞಾನಲಿಂಗಸ್ಥಲಂ ಇಲ್ಲಿಗೆ ಜ್ಞಾನಲಿಂಗಸ್ಥಲವು ಮುಗಿಯಿತು.*

## 51. ಅಥ ಸ್ವಯಸ್ಥಲಮ್

ಈಗ ಸ್ವಯಸ್ಥಲವು

**(6 ಶ್ಲೋಕಗಳು)**

**ತದ್ಭಾವಜ್ಞಾಪಕಜ್ಞಾನಮ್**
**ಯತ್ರ ಜ್ಞಾನೇ ಲಯಂ ವ್ರಜೇತ್ ।**
**ತದ್ವಾನೇಷ ಸಮಾಖ್ಯಾತಃ**
**ಸ್ವಾಭಿಧಾನೋ ಮನೀಷಿಭಿಃ ॥ 15–51**

ಆ ಭಾವ (ಭಾವಲಿಂಗ) ಪ್ರಕಾಶಕವಾದ ಜ್ಞಾನವು ಯಾವ ಜ್ಞಾನ (ಲಿಂಗ)ದಲ್ಲಿ ಲಯ ಹೊಂದುವುದೋ ಅಂತಹ ಸ್ಥಿತಿಯುಳ್ಳವನೆ 'ಸ್ವಯ'ವೆಂದು ಅಭಿಧಾನವುಳ್ಳವನೆಂದು (ಸ್ವಯಸ್ಥಲಿಯೆಂದು, ಸ್ವಯಲಿಂಗವೆಂದು) ಮನೀಷಿಭಿಗಳು (ಶಿವಜ್ಞಾನಿಗಳು) ಹೇಳುತ್ತಾರೆ.

**ಸ್ವಚ್ಛಂದಾಚಾರಸಂತುಷ್ಟೋ**
**ಜ್ಯೋತಿರ್ಲಿಂಗಪರಾಯಣಃ ।**
**ಆತ್ಮಸ್ಥಸಕಲಾಕಾರಃ**
**ಸ್ವಾಭಿಧೋ ಮುನಿಸತ್ತಮಃ ॥ 15–52**

ತನ್ನ ಇಷ್ಟಾನುಸಾರ ಆಚರಣೆಗಳಲ್ಲಿ ಸಂತುಷ್ಟನಾಗಿದ್ದು ಜ್ಯೋತಿರ್ಲಿಂಗ (ಜ್ಞಾನಲಿಂಗ) ನಿಷ್ಠನಾದ ಶಿವಸ್ವರೂಪನಾದ ಮತ್ತು ತನ್ನಲ್ಲಿ ಪ್ರಪಂಚದ ಎಲ್ಲಾ ಆಕಾರಗಳನ್ನು ಅಡಗಿಸಿಕೊಂಡ ಮುನಿಶ್ರೇಷ್ಠನೇ ಸ್ವಯಸ್ಥಲಿಯು.

**ನಿರ್ಮಮೋ ನಿರಹಂಕಾರೋ**
**ನಿರಸ್ತಕ್ಲೇಶಪಂಚಕಃ ।**
**ಭಿಕ್ಷಾಶೀ ಸಮಬುದ್ಧಿಶ್ಚ**
**ಮುಕ್ತಪ್ರಾಯೋ ಮುನಿರ್ಭವೇತ್॥ 15–53**

ಮಮಕಾರ ರಹಿತನಾದ, ನಿರಹಂಕಾರಿಯಾದ, ಅವಿದ್ಯಾದಿ ಪಂಚಕ್ಲೇಶಗಳನ್ನು ಕಳೆದುಕೊಂಡ, ಭಿಕ್ಷಾಹಾರವನ್ನು ಸೇವಿಸುವ, ಸರ್ವರಲ್ಲಿ ಸಮಬುದ್ಧಿಯುಳ್ಳವನಾದ ಮತ್ತು ಮುನಿಯಾದ (ಮೌನಿಯಾದ) ಮುಕ್ತಪ್ರಾಯನಾದವನೇ (ಪರಮುಕ್ತಿಯನ್ನು ಪಡೆದವರಿಗೆ ಸಮಾನನಾದವನೇ) ಸ್ವಯಸ್ಥಲಿಯು.

**ಯದೃಚ್ಛಾಲಾಭಸಂತುಷ್ಟೋ**
**ಭಸ್ಮನಿಷ್ಠೋ ಜಿತೇಂದ್ರಿಯಃ ।**
**ಸಮವೃತ್ತಿರ್ಭವೇದ್ ಯೋಗೀ**

**ಭಿಕ್ಷುಕೇ ವಾ ನೃಪೇಽಥವಾ ॥ 15–54**

ದೊರೆತಷ್ಟರಲ್ಲಿಯೇ ಸಂತುಷ್ಟನಾದ, ಭಸ್ಮೋದ್ಧೂಳನಾದಿಗಳಲ್ಲಿ ನಿಷ್ಠೆಯುಳ್ಳ, ಜಿತೇಂದ್ರಿಯನಾದ (ಇಂದ್ರಿಯಗಳನ್ನು ಸ್ವಾಧೀನದಲ್ಲಿರಿಸಿಕೊಂಡ) ಸ್ವಯಸ್ಥಲಿಯಾದ ಯೋಗಿಯು, ರಾಜನಲ್ಲಿಯೇ ಆಗಲಿ ಮತ್ತು ಭಿಕ್ಷುಕನಲ್ಲಿಯೇ ಆಗಲಿ ಸಮಬುದ್ಧಿಯುಳ್ಳವನಾಗುತ್ತಾನೆ.

**ಪಶ್ಯನ್ ಸರ್ವಾಣಿ ಭೂತಾನಿ**
**ಸಂಸಾರಸ್ಥಾನಿ ಸರ್ವಶಃ ।**
**ಸ್ಮಯಮಾನಃ ಪರಾನಂದೇ**
**ಲೀನಾತ್ಮಾ ವರ್ತತೇ ಸುಧೀಃ ॥ 15–55**

ಸುಧೀಯಾದ (ಶೋಭಾಯಮಾನ ಬುದ್ಧಿಯುಳ್ಳ) ಸ್ವಯಸ್ಥಲಿಯು (ಶಿವಯೋಗಿಯು) ಸಂಸಾರದಲ್ಲಿರುವ ಎಲ್ಲ ಪ್ರಾಣಿಗಳನ್ನು ವಿಸ್ಮಯವಾಗಿ ನೋಡುತ್ತಾ ಪರಮಾನಂದಮಯವಾದ ಮಹಾಲಿಂಗದಲ್ಲಿ ಲೀನವಾಗಿ ವರ್ತಿಸುವನು.

**ಧ್ಯಾನಂ ಶೈವಂ ತಥಾ ಜ್ಞಾನಮ್**
**ಭಿಕ್ಷಾ ಚೈಕಾಂತಶೀಲತಾ ।**
**ಯತೇಶ್ಚತ್ವಾರಿ ಕರ್ಮಾಣಿ**
**ನ ಪಂಚಮಮಿಹೇಷ್ಯತೇ ॥ 15–56**

ಶಿವಧ್ಯಾನವು, ಶಿವಜ್ಞಾನವು, ಭಿಕ್ಷಾಹಾರವು ಮತ್ತು ಏಕಾಂತಶೀಲತೆ – ಈ ನಾಲ್ಕು ಕರ್ಮಗಳನ್ನು ಮಾಡುವವನಾಗಿ, ಇದರ ಹೊರತು ಐದನೆಯದಾದ ಯಾವುದೇ ಕರ್ಮವನ್ನು ಅಪೇಕ್ಷಿಸದವನೇ 'ಸ್ವಯಸ್ಥಲಿ'ಯೆಂದು ತಿಳಿದುಕೊಳ್ಳಬೇಕು.

*ಇತಿ ಸ್ವಯಸ್ಥಲಂ ಪರಿಸಮಾಪ್ತಮ್* *ಇಲ್ಲಿಗೆ ಸ್ವಯಸ್ಥಲವು ಮುಗಿಯಿತು.*

## 52. ಅಥ ಚರಸ್ಥಲಮ್
ಈಗ ಚರಸ್ಥಲವು
**(7 ಶ್ಲೋಕಗಳು)**

**ಸ್ವರೂಪಜ್ಞಾನಸಂಪನ್ನೋ**
**ಧ್ವಸ್ತಾಹಂಮಮತಾಕೃತಿಃ ।**
**ಸ್ವಯಮೇವ ಸ್ವಯಂ ಭೂತ್ವಾ**
**ಚರತೀತಿ ಚರಾಭಿಧಃ ॥ 15–57**

ನಾನು ನನ್ನದೆಂಬ ಅಹಂಕಾರ ಮಮಕಾರಗಳನ್ನು ನಿವಾರಿಸಿಕೊಂಡ, ಸ್ವಸ್ವರೂಪ ಜ್ಞಾನವನ್ನು ಪಡೆದುಕೊಂಡ, ಆ ಸ್ವಯಲಿಂಗಿಯೇ ತಾನೇ ತಾನಾಗಿ 'ಚರಿಸು'ವುದರಿಂದ 'ಚರಸ್ಥಲಿ'ಯೆಂದು (ಚರಲಿಂಗವೆಂದು) ಕರೆಸಿಕೊಳ್ಳುವನು.

**ಕಾಮಕ್ರೋಧಾದಿನಿರ್ಮುಕ್ತಃ**
**ಶಾಂತಿದಾಂತಿಸಮನ್ವಿತಃ ।**
**ಸಮಬುದ್ಧ್ಯಾ ಚರೇದ್ ಯೋಗೀ**
**ಸರ್ವತ್ರ ಶಿವಬುದ್ಧಿಮಾನ್ ॥ 15–58**

ಕಾಮಕ್ರೋಧಾದಿಗಳನ್ನು ನಿಃಶೇಷವಾಗಿ ಕಳೆದುಕೊಂಡ, ಶಾಂತಿ–ದಾಂತಿ ಸಮನ್ವಿತವಾದ (ಶಮೆ, ದಮೆಗಳಿಂದ ಕೂಡಿದ), ಸಮಬುದ್ಧಿಯುಳ್ಳ ಮತ್ತು ಸರ್ವತ್ರ ಶಿವಬುದ್ಧಿಯುಳ್ಳವನಾಗಿ, ಈ ಚರಸ್ಥಲದ ಶಿವಯೋಗಿಯು ಎಲ್ಲೆಡೆಯಲ್ಲಿ ಸಂಚರಿಸುತ್ತಾನೆ.

**ಇದಂ ಮುಖ್ಯಮಿದಂ ಹೀನಮ್**
**ಇತಿ ಚಿಂತಾಮಕಲ್ಪಯನ್ ।**
**ಸರ್ವತ್ರ ಸಂಚರೇದ್ ಯೋಗೀ**
**ಸರ್ವಂ ಬ್ರಹ್ಮೇತಿ ಭಾವಯನ್ ॥ 15-59**

ಇದು ಮುಖ್ಯವಾದುದು ಮತ್ತು ಇದು ಹೀನವಾದುದು ಎಂಬ ಚಿಂತೆಯನ್ನು ಮಾಡದೆ ಸರ್ವವನ್ನು ಬ್ರಹ್ಮವೆಂಬುದಾಗಿ ಸ್ವಾನುಭಾವದಿಂದ ಭಾವಿಸಿ ಎಲ್ಲೆಡೆ ಸಂಚರಿಸುವ ಯೋಗಿಯೇ 'ಚರಲಿಂಗ'ನು.

**ನ ಸನ್ಮಾನೇಷು ಸಂಪ್ರೀತಿಮ್**
**ನಾವಮಾನೇಷು ಚ ವ್ಯಥಾಮ್ ।**
**ಕುರ್ವಾಣಃ ಸಂಚರೇದ್ ಯೋಗೀ**
**ಕೂಟಸ್ಥೇ ಸ್ವಾತ್ಮನಿ ಸ್ಥಿತಃ ॥15-60**

ಕೂಟಸ್ಥನಾದ (ನಿರ್ವಿಕಾರ ಸ್ಥಿತಿಯಲ್ಲಿರುವ), ತನ್ನ ನಿಜದಲ್ಲೇ ತಾನಿರುವ ಚರಸ್ಥಲಿಯು (ಲೋಕದಲ್ಲಿ ದೊರೆಯುವ) ಸನ್ಮಾನಗಳಲ್ಲಿ ಪ್ರೀತಿಯನ್ನೇ ಆಗಲಿ ಮತ್ತು ಅವಮಾನಗಳಲ್ಲಿ ವ್ಯಥೆಯನ್ನೇ ಆಗಲಿ (ಮಾನಸಿಕ ದುಃಖವನ್ನೇ ಆಗಲಿ) ಹೊಂದದೇ ಸರ್ವತ್ರ ಸಂಚರಿಸುವ ಶಿವಯೋಗಿಯೇ ಚರಲಿಂಗನು.

**ಅಪ್ರಾಕೃತೈರ್ಗುಣೈಃ ಸ್ವೀಯೈಃ**
**ಸರ್ವಂ ವಿಸ್ಮಾಪಯನ್ ಜನಮ್ ।**
**ಅದ್ವೈತಪರಮಾನಂದ-**
**ಮುದಿತೋ ದೇಹಿವಚ್ಚರೇತ್ ॥ 15-61**

ಶಿವಾದ್ವೈತ ಜ್ಞಾನದಿಂದುಂಟಾದ ಪರಮಾನಂದದಿಂದ ಸಂತುಷ್ಟನಾದ, ಅಪ್ರಾಕೃತಗಳಾದ (ಲೋಕೋತ್ತರಗಳಾದ) ತನ್ನ ಗುಣಗಳಿಂದ ಜಗತ್ತಿನ ಎಲ್ಲಾ ಜನರನ್ನು ವಿಸ್ಮಯಗೊಳಿಸುತ್ತಾ (ಅಚ್ಚರಿಗೊಳಿಸುತ್ತಾ) ಸಾಮಾನ್ಯ ಜೀವಿಯಂತೆ ಸಂಚರಿಸುವವನೇ ಚರಲಿಂಗನು.

**ನ ಪ್ರಪಂಚೇ ನಿಜೇ ದೇಹೇ**
**ನ ಧರ್ಮೇ ನ ಚ ದುಷ್ಕೃತೇ ।**
**ಗತವೈಷಮ್ಯಧೀರ್ಧೀರೋ**
**ಯತಿಶ್ಚರತಿ ದೇಹಿವತ್ ॥ 15-62**

ವಿಧಿ-ನಿಷೇಧಗಳ ವೈಷಮ್ಯ ಬುದ್ಧಿಯನ್ನು ಕಳೆದುಕೊಂಡ, ಧೀರನಾದ (ನಿರ್ವಿಕಾರ ಮನಸ್ಸುಳ್ಳ) ಯತಿಯು (ಈ ಚರಸ್ಥಲಿಯು) ಈ ಪ್ರಪಂಚದಲ್ಲಿಯೇ ಆಗಲಿ, ತನ್ನ ದೇಹದ ವ್ಯವಹಾರದಲ್ಲಿಯೇ ಆಗಲಿ, ಧರ್ಮದಲ್ಲಿಯೇ ಆಗಲಿ, ದೃಷ್ಕೃತ್ಯದಲ್ಲಿ (ಪಾಪದಲ್ಲಿ)ಯೇ ಆಗಲಿ ದೇಹಿಯಂತೆ (ಸಾಮಾನ್ಯ ಜೀವಿಯಂತೆ) ಆಚರಿಸುವುದಿಲ್ಲ.

**ಪ್ರಾಕೃತೈಶ್ವರ್ಯಸಂಪತ್ತಿ-**
**ಪರಾಙ್ಮುಖಮನಃ ಸ್ಥಿತಿಃ ।**
**ಚಿದಾನಂದನಿಜಾತ್ಮಸ್ಥೋ**
**ಮೋದತೇ ಮುನಿಪುಂಗವಃ ॥ 15-63**

ಪ್ರಕೃತಿತತ್ತ್ವಗಳಿಂದುಂಟಾದ ಬ್ರಹ್ಮ, ವಿಷ್ಣು ಮೊದಲಾದವರ ಐಶ್ವರ್ಯರೂಪವಾದ ಸಂಪತ್ತಿನಿಂದ ಪರಾಙ್ಮುಖವಾದ ಮನಸ್ಸುಳ್ಳ ಮತ್ತು ಚಿದಾನಂದರೂಪವಾದ ತನ್ನ ಆತ್ಮನಲ್ಲಿಯೇ ಸ್ಥಿತನಾಗಿ ಆನಂದವನ್ನು ಪಡುತ್ತಿರುವ ಈ ಮುನಿಪುಂಗವನೇ (ಮುನಿಶ್ರೇಷ್ಠನೇ) ಚರಸ್ಥಲಿಯು.

*ಇತಿ ಚರಸ್ಥಲಂ ಇಲ್ಲಿಗೆ ಚರಸ್ಥಲವು ಮುಗಿಯಿತು.*

## 53. ಅಥ ಪರಸ್ಥಲಮ್
ಈಗ ಪರಸ್ಥಲವು
**(8 ಶ್ಲೋಕಗಳು)**

**ಸ್ವಯಮೇವ ಸ್ವಯಂ ಭೂತ್ವಾ**
**ಚರತಃ ಸ್ವಸ್ವರೂಪತಃ ।**
**ಪರಂ ನಾಸ್ತೀತಿ ಬೋಧಸ್ಯ**
**ಪರತ್ವಮಭಿಧೀಯತೇ ॥ 15-64**

ತಾನೇ ತಾನಾಗಿ ಚರಿಸುತ್ತಿದ್ದವನೂ, ತನ್ನ ಸ್ವಸ್ವರೂಪಕ್ಕಿಂತಲೂ (ತನಗಿಂತಲೂ) ಬೇರೊಂದು ಏನೂ ಇಲ್ಲವೆಂಬ ಜ್ಞಾನವುಳ್ಳವನಾಗುವುದೇ 'ಪರತ್ವ' ಸ್ಥಿತಿಯೆಂದು ಹೇಳಲ್ಪಡುತ್ತದೆ (ಪರಸ್ಥಲಿಯೆಂದು ಕರೆಯಲ್ಪಡುತ್ತಾನೆ).

**ಸ್ವತಂತ್ರಃ ಸರ್ವಕೃತ್ಯೇಷು**
**ಸ್ವಂ ಪರತ್ವೇನ ಭಾವಿತಃ ।**
**ತೃಣೀಕುರ್ವನ್ ಜಗಜ್ಜಾಲಮ್**
**ವರ್ತತೇ ಶಿವಯೋಗಿರಾಟ್ ॥ 15-65**

ತನ್ನನ್ನು ಪರವಸ್ತುವನ್ನಾಗಿ ಭಾವಿಸಿದ (ತಾನೇ ಪರವಸ್ತುವಾದ) ಪರಸ್ಥಲದ ಶಿವಯೋಗೀಶ್ವರನು ಎಲ್ಲ ಕೃತ್ಯಗಳಲ್ಲಿ ಸ್ವತಂತ್ರನಾಗಿದ್ದು, ಈ ಜಗಜ್ಜಾಲವನ್ನು (ಜಗತ್ ಸಮೂಹವನ್ನು) ತೃಣವೆಂದು ತಿಳಿದುಕೊಂಡವನಾಗಿರುತ್ತಾನೆ.

**ವರ್ಣಾಶ್ರಮಸಮಾಚಾರ-**
**ಮಾರ್ಗನಿಷ್ಠಾಪರಾಙ್ಮುಖಃ ।**
**ಸರ್ವೋತ್ಕೃಷ್ಟಂ ಸ್ವಮಾತ್ಮಾನಮ್**
**ಪಶ್ಯನ್ ಯೋಗೀ ತು ಮೋದತೇ ॥ 15-66**

ಲೌಕಿಕಗಳಾದ ವರ್ಣಾಶ್ರಮಗಳಿಗೆ ಸಂಬಂಧಪಟ್ಟ ಆಚಾರಗಳ ನಿಷ್ಠೆಯಿಂದ ಪರಾಙ್ಮುಖನಾದ ಈ ಪರಸ್ಥಲಯೋಗಿಯು ತನ್ನನ್ನೇ ಸರ್ವೋತ್ಕೃಷ್ಟವಾದ ಪರಬ್ರಹ್ಮವನ್ನಾಗಿಯೇ ನೋಡುತ್ತಾ (ಅನುಭವಿಸುತ್ತಾ) ಆನಂದಮಯನಾಗಿರುತ್ತಾನೆ.

**ವಿಶ್ವಾತೀತಂ ಪರಂ ಬ್ರಹ್ಮ**
**ಶಿವಾಖ್ಯಂ ಚಿತ್ಸ್ವರೂಪಕಮ್ ।**
**ತದೇವಾಹಮಿತಿ ಜ್ಞಾನೀ**
**ಸರ್ವೋತ್ಕೃಷ್ಟಃ ಸ ಉಚ್ಯತೇ ॥ 15-67**

ವಿಶ್ವಾತೀತವಾದ (ಜಗತ್ತನ್ನು ಮೀರಿದ) ಚಿದ್ರೂಪವಾದ ಶಿವನೆಂಬ ಪರಬ್ರಹ್ಮವೇ ತಾನೆಂದು ಅರಿತ ಜ್ಞಾನಿಯೇ ಸರ್ವೋತ್ಕೃಷ್ಟನೆಂದು ಹೇಳಲ್ಪಡುತ್ತಾನೆ.

**ಅಚಲಂ ಧ್ರುವಮಾತ್ಮಾನಮ್**
**ಅನುಪಶ್ಯನ್ನಿರಂತರಮ್ ।**
**ನಿರಸ್ತವಿಶ್ವವಿಭ್ರಾಂತಿಃ**
**ಜೀವನ್ಮುಕ್ತೋ ಭವೇನ್ಮುನಿಃ ॥ 15–68**

ತನ್ನನ್ನು ಅಚಲವನ್ನಾಗಿಯೂ (ನಿಶ್ಚಲನನ್ನಾಗಿಯೂ), ದೃಢನನ್ನಾಗಿಯೂ (ನಿತ್ಯನನ್ನಾಗಿಯೂ) ನಿರಂತರವಾಗಿ ನೋಡುತ್ತಿರುವ, ಪ್ರಾಪಂಚಿಕ ಭೇದಭ್ರಾಂತಿಯನ್ನು ನಿರಾಕರಿಸಿಗೊಂಡ ಆ ಮುನಿಯೇ (ಆ ಪರಸ್ಥಲದ ಯೋಗಿಯೇ) ಜೀವನ್ಮುಕ್ತನಾಗಿರುವನು.

**ಬ್ರಹ್ಮಾದ್ಯಾಃ ಕಿಂ ನು ಕುರ್ವಂತಿ**
**ದೇವತಾಃ ಕರ್ಮಮಾರ್ಗಗಾಃ ।**
**ಕರ್ಮಾತೀತಪದಸ್ಥಸ್ಯ**
**ಸ್ವಯಂ ಬ್ರಹ್ಮಸ್ವರೂಪಿಣಃ ॥ 15–69**

ಕರ್ಮಾತೀತ ಪದಸ್ಥನಾದ, ಕರ್ಮಕಾಂಡಗಳಲ್ಲಿ ಹೇಳಿದ ಪದವಿಗಳನ್ನು ಮೀರಿ ನಿಂತಿರುವ, ತಾನೇ ಪರಬ್ರಹ್ಮ ಸ್ವರೂಪನಾದ ಈ ಪರಸ್ಥಲದ ಯೋಗಿಗೆ ಕರ್ಮಮಾರ್ಗಿಗಳಾದ ಬ್ರಹ್ಮಾದಿ ದೇವತೆಗಳು ಏನು ಮಾಡಬಲ್ಲರು?

**ಸ್ವೇಚ್ಛಯಾ ಸಂಚರೇದ್ ಯೋಗೀ**
**ವಿಮುಂಚನ್ ದೇಹಮಾನಿತಾಮ್ ।**
**ದರ್ಶನೈಃ ಸ್ಪರ್ಶನೈಃ ಸರ್ವಾನ್**
**ಅಜ್ಞಾನಪಿ ವಿಮೋಚಯೇತ್ ॥ 15–70**

ದೇಹಾಭಿಮಾನವನ್ನು ಬಿಟ್ಟಿರುವ, ತನ್ನ ಇಚ್ಛಾನುಸಾರವಾಗಿ ಸಂಚರಿಸುತ್ತಿರುವ ಈ ಪರಸ್ಥಲದ ಯೋಗಿಯು ಕೇವಲ ತನ್ನ ದರ್ಶನ, ಸ್ಪರ್ಶನಗಳಿಂದಲೇ ಅಜ್ಞಾನಿಗಳಾದ ಜೀವಿಗಳನ್ನೂ ಸಹ ಮುಕ್ತರನ್ನಾಗಿ ಮಾಡುವನು.

**ನಿತ್ಯೇ ನಿರ್ಮಲಭಾವನೇ ನಿರುಪಮೇ ನಿರ್ಧೂತವಿಶ್ವಭ್ರಮೇ**
**ಸತ್ತಾನಂದಚಿದಾತ್ಮಕೇ ಪರಶಿವೇ ಸಾಮ್ಯಂ ಗತಃ ಸಂಯಮೀ।**
**ಪ್ರಧ್ವಸ್ತಾಶ್ರಮವರ್ಣಧರ್ಮನಿಗಲಃ ಸ್ವಚ್ಛಂದಸಂಚಾರವಾನ್**
**ದೇಹೀವಾದ್ಭುತವೈಭವೋ ವಿಜಯತೇ ಜೀವನ್ವಿಮುಕ್ತಃ ಸುಧೀಃ ॥ 15–71**
**–ಶಾರ್ದೂಲವಿಕ್ರೀಡಿತವೃತ್ತಮ್**

ನಿತ್ಯನೂ, ನಿರ್ಮಲ ಸ್ವರೂಪನೂ, ಉಪಮಾತೀತನೂ, ವಿಶ್ವಭ್ರಾಂತಿರಹಿತನೂ, ಸಚ್ಚಿದಾನಂದಮಯನೂ ಆದ ಪರಶಿವನಲ್ಲಿ ಸಾಮ್ಯತ್ವವನ್ನು ಪಡೆದುಕೊಂಡ ಮತ್ತು ಸಂಯಮಿಯಾದ, ವರ್ಣಾಶ್ರಮ ಧರ್ಮಗಳ ಸಂಕೋಲೆಗಳನ್ನು ಕಳೆದುಕೊಂಡ, ಸ್ವಚ್ಛಂದವಾಗಿ ಸಂಚರಿಸುತ್ತಿರುವ, ದೇಹವನ್ನು ಧರಿಸಿದ್ದರೂ ಸಹ ಅದ್ಭುತವಾದ ವೈಭವವನ್ನು ಹೊಂದಿರುವ, ಸುಜ್ಞಾನಿಯಾದ ಪರಸ್ಥಲದ ಸಂಯಮಿಯು ಜೀವನ್ಮುಕ್ತನಾಗಿ ವಿಜಯಂಗೈಯುತ್ತಿರುವನು.

***ಇತಿ ಪರಸ್ಥಲಂ*** *ಇಲ್ಲಿಗೆ ಪರಸ್ಥಲವು ಮುಗಿಯಿತು.*

**ಓಂ ತತ್ಸತ್ ಇತಿ**

***ಶ್ರೀ ಶಿವಗೀತೇಷು ಸಿದ್ಧಾಂತಾಗಮೇಷು ಶಿವಾದ್ವೈತವಿದ್ಯಾಯಾಂ ಶಿವಯೋಗಶಾಸ್ತ್ರೇ ಶ್ರೀರೇಣುಕಾಗಸ್ತ್ಯಸಂವಾದೇ ವೀರಶೈವಧರ್ಮನಿರ್ಣಯೇ ಶ್ರೀಶಿವಯೋಗಿಶಿವಾಚಾರ್ಯವಿರಚಿತೇ ಶ್ರೀಸಿದ್ಧಾಂತಶಿಖಾಮಣೌ ಭಕ್ತಸ್ಥಲಾಂತರ್ಗತಲಿಂಗಸ್ಥಲೇ ದೀಕ್ಷಾಗುರುಸ್ಥಲಾದಿ ನವವಿಧಸ್ಥಲಪ್ರಸಂಗೋ ನಾಮ ಪಂಚದಶಃ ಪರಿಚ್ಛೇದಃ ॥***

*ಓಂ ತತ್ಸತ್ ಇಲ್ಲಿಗೆ ಶ್ರೀ ಶಿವನಿಂದ ಉಪದೇಶಿಸಲ್ಪಟ್ಟ*
*ಶ್ರೀ ಸಿದ್ಧಾಂತಾಗಮಗಳಲ್ಲಿಯ ಶಿವಾದ್ವೈತವಿದ್ಯಾರೂಪವೂ, ಶಿವಯೋಗಶಾಸ್ತ್ರವೂ, ಶ್ರೀ ರೇಣುಕಾಗಸ್ತ್ಯಸಂವಾದರೂಪವೂ. ಶ್ರೀ*

*ವೀರಶೈವಧರ್ಮನಿರ್ಣಯವೂ ಆದ ಶ್ರೀ ಸಿದ್ಧಾಂತಶಿಖಾಮಣಿಯಲ್ಲಿ ಭಕ್ತಸ್ಥಲದಲ್ಲಿಯ ಲಿಂಗಸ್ಥಲದಲ್ಲಿಯ ದೀಕ್ಷಾಗುರುಸ್ಥಲಾದಿ ಒಂಭತ್ತು ವಿಧ ಸ್ಥಲಪ್ರಸಂಗವೆಂಬ ಹೆಸರಿನ ಹದಿನೈದನೆಯ ಪರಿಚ್ಛೇದವು ಮುಗಿದುದು.*

# ಷೋಡಶಃ ಪರಿಚ್ಛೇದಃ

ಹದಿನಾರನೆಯ ಪರಿಚ್ಛೇದವು

**(84 ಶ್ಲೋಕಗಳು)**

## ಮಾಹೇಶ್ವರಸ್ಥಲಾಂತರ್ಗತ ನವವಿಧಲಿಂಗಸ್ಥಲಪ್ರಸಂಗಃ

ಮಾಹೇಶ್ವರಸ್ಥಲಾಂತರ್ಗತವಾದ ನವವಿಧ ಲಿಂಗಸ್ಥಲಗಳ ಪ್ರಸಂಗವು

## ಅಥ ಮಾಹೇಶ್ವರಸ್ಥಲಮ್

ಈಗ ಮಾಹೇಶ್ವರಸ್ಥಲವು

(4 ಶ್ಲೋಕಗಳು)

**॥ ಅಗಸ್ತ್ಯ ಉವಾಚ ॥**

**ಸ್ಥಲಾನಾಂ ನವಕಂ ಪ್ರೋಕ್ತಮ್**
**ಭಕ್ತಸ್ಥಲಸಮಾಶ್ರಯಮ್।**
**ಮಾಹೇಶ್ವರಸ್ಥಲೇ ಸಿದ್ಧಮ್**
**ಸ್ಥಲಭೇದಂ ವದಸ್ವ ಮೇ॥ 16–1**

ಭಕ್ತಸ್ಥಲವನ್ನಾಶ್ರಯಿಸಿರ್ದ ಒಂಭತ್ತು ಸ್ಥಲಗಳು (ಲಿಂಗ ಸ್ಥಲಗಳು) ನಿನ್ನಿಂದ ಹೇಳಲ್ಪಟ್ಟವು. ಇನ್ನು ಮಾಹೇಶ್ವರಸ್ಥಲದಲ್ಲಿರುವ ಸ್ಥಲಭೇದವನ್ನು ನನಗೆ ಹೇಳುವಂಥವನಾಗು.

**॥ ಶ್ರೀ ರೇಣುಕ ಉವಾಚ ॥**

**ಮಾಹೇಶ್ವರಸ್ಥಲೇ ಸಂತಿ**
**ಸ್ಥಲಾನಿ ನವ ತಾಪಸ ।**
**ಕ್ರಿಯಾಗಮಸ್ಥಲಂ ಪೂರ್ವಮ್**
**ತತೋ ಭಾವಾಗಮಸ್ಥಲಮ್ ॥ 16–2**
**ಜ್ಞಾನಾಗಮಸ್ಥಲಂ ಚಾಥ**
**ಸಕಾಯಸ್ಥಲಮೀರಿತಮ್ ।**
**ತತೋಽಕಾಯಸ್ಥಲಂ ಪ್ರೋಕ್ತಮ್**
**ಪರಕಾಯಸ್ಥಲಂ ತತಃ ॥ 16–3**

**ಧರ್ಮಾಚಾರಸ್ಥಲಂ ಚಾಥ**
**ಭಾವಾಚಾರಸ್ಥಲಂ ತತಃ ।**
**ಜ್ಞಾನಾಚಾರಸ್ಥಲಂ ಚೇತಿ**
**ಕ್ರಮಾದೇಷಾಂ ಭಿದೋಚ್ಯತೇ ॥ 16–4**

ಹೇ ತಪಸ್ವಿಯಾದ ಅಗಸ್ತ್ಯನೇ, ಮಾಹೇಶ್ವರಸ್ಥಲದಲ್ಲಿ ಒಂಭತ್ತು ಸ್ಥಲಗಳು ಇರುತ್ತವೆ. ಅದರಲ್ಲಿ ಮೊದಲನೆಯದು ಕ್ರಿಯಾಗಮಸ್ಥಲವು. ಅನಂತರ ಭಾವಾಗಮ ಸ್ಥಲವು. ಅದಾದ ಮೇಲೆ ಜ್ಞಾನಾಗಮಸ್ಥಲವು. ನಂತರ ಸಕಾಯಸ್ಥಲವು. ಆಮೇಲೆ ಅಕಾಯಸ್ಥಲವು. ತರುವಾಯ ಪರಕಾಯಸ್ಥಲವು, ಅದಾದ ಮೇಲೆ ಧರ್ಮಾಚಾರ ಸ್ಥಲವು. ನಂತರ ಭಾವಾಚಾರಸ್ಥಲವು ಮತ್ತು ಜ್ಞಾನಾಚಾರಸ್ಥಲವು. ಕ್ರಮವಾಗಿ ಇವುಗಳ ಭೇದವನ್ನು ಹೇಳುತ್ತೇನೆ.

## 54. ಅಥ ಕ್ರಿಯಾಗಮಸ್ಥಲಮ್
ಈಗ ಕ್ರಿಯಾಗಮಸ್ಥಲವು
**(10 ಶ್ಲೋಕಗಳು)**

**ಶಿವೋ ಹಿ ಪರಮಃ ಸಾಕ್ಷಾತ್**
**ಪೂಜಾ ತಸ್ಯ ಕ್ರಿಯೋಚ್ಯತೇ ।**
**ತತ್ಪರಾ ಆಗಮಾ ಯಸ್ಮಾತ್**
**ತದುಕ್ತೋಽಯಂ ಕ್ರಿಯಾಗಮಃ ॥ 16–5**

ಪರಮನು (ಪರಸ್ಥಲಿಯಾದ ಶಿವಯೋಗಿಯು) ಸಾಕ್ಷಾತ್ ಶಿವನೇ ಆಗಿದ್ದಾನೆ. ಆ ಶಿವನ ಪೂಜೆಯೇ (ಆ ಶಿವಯೋಗಿಯಾದ ಪರಸ್ಥಲಿಯ ಪೂಜೆಯೇ) ಕ್ರಿಯೆ ಎನಿಸಿಕೊಳ್ಳುವುದು. ಅಂತಹ ಕ್ರಿಯೆಯನ್ನು ಹೇಳುವ ಆಗಮಗಳೇ ಕ್ರಿಯಾಗಮಗಳೆಂದು ಹೇಳಲ್ಪಟ್ಟಿರುವವು.

**ಪ್ರಕಾಶತೇ ಯಥಾ ನಾಗ್ನಿಃ**
**ಅರಣ್ಯಾಂ ಮಥನಂ ವಿನಾ ।**
**ಕ್ರಿಯಾಂ ವಿನಾ ತಥಾಂತಸ್ಥೋ**
**ನ ಪ್ರಕಾಶೋ ಭವೇಚ್ಛಿವಃ ॥ 16–6**

ಅರಣಿಮಂಥನವನ್ನು ಮಾಡದೆ (ಕಟ್ಟಿಗೆಯ ಗುಳಿಯಲ್ಲಿ ಕೊರಡನಿಟ್ಟು ಮಂಥನ ಮಾಡದೆ) ಅಗ್ನಿಯು ಹೇಗೆ ಪ್ರಕಟವಾಗುವುದಿಲ್ಲವೋ ಅದರಂತೆ ಶಿವರೂಪವಾದ ಕ್ರಿಯೆಯನ್ನು ಮಾಡಲಾರದೆ ಅಂತರಂಗದಲ್ಲಿಯ ಶಿವನು ಪ್ರಕಾಶಿಸಲಾರನು.

**ನ ಯಥಾ ವಿಧಿಲೋಪಃ ಸ್ಯಾತ್**
**ಯಥಾ ದೇವಃ ಪ್ರಸೀದತಿ ।**
**ಯಥಾಗಮಃ ಪ್ರಮಾಣಂ ಸ್ಯಾತ್**
**ತಥಾ ಕರ್ಮ ಸಮಾಚರೇತ್ ॥ 16–7**

ವಿಧಿಯು ಲೋಪವಾಗದ ಹಾಗೆ, ಶಿವನು ಪ್ರಸನ್ನವಾಗುವ ಹಾಗೆ ಆಗಮಶಾಸ್ತ್ರದ ಪ್ರಮಾಣದಂತೆ ಶಿವಪೂಜಾರೂಪವಾದ ಕರ್ಮವನ್ನು ಆಚರಿಸಬೇಕು.

**ವಿಧಿಃ ಶಿವನಿಯೋಗೋಽಯಮ್**
**ತಸ್ಮಾದ್ ವಿಹಿತಕರ್ಮಣಿ ।**
**ಶಿವಾರಾಧನಬುದ್ಧ್ಯೈವ**
**ನಿರತಃ ಸ್ಯಾದ್ ವಿಚಕ್ಷಣಃ ॥ 16–8**

ವಿಧಿಯೆಂದರೆ ಶಿವನ ಶಾಸನವೆಂದರ್ಥ. ಆದ್ದರಿಂದ ವಿಚಕ್ಷಣನಾದವನು ಶಿವಾರಾಧನ ಬುದ್ಧಿಯಿಂದಲೇ ವಿಹಿತವಾದ ಕರ್ಮಗಳನ್ನು ಆಚರಿಸಬೇಕು.

**ಗುರೋರಾದೇಶಮಾಸಾದ್ಯ**
**ಪೂಜಯೇತ್ ಪರಮೇಶ್ವರಮ್ ।**
**ಪೂಜಿತೇ ಪರಮೇಶಾನೇ**
**ಪೂಜಿತಾಃ ಸರ್ವದೇವತಾಃ ॥ 16–9**

ಶ್ರೀಗುರುವಿನ ಆದೇಶವನ್ನು ಪಡೆದುಕೊಂಡೇ ಪರಮೇಶ್ವರನನ್ನು ಪೂಜಿಸಬೇಕು. ಆ ಪರಮೇಶ್ವರನನ್ನು ಪೂಜಿಸಲು ಎಲ್ಲ ದೇವತೆಗಳನ್ನೂ ಪೂಜಿಸಿದಂತೆ ಆಗುತ್ತದೆ.

**ಸದಾ ಶಿವಾರ್ಚನೋಪಾಯ–**
**ಸಾಮಗ್ರೀವ್ಯಗ್ರಮಾನಸಃ ।**
**ಶಿವಯೋಗರತೋ ಯೋಗೀ**
**ಮುಚ್ಯತೇ ನಾತ್ರ ಸಂಶಯಃ ॥ 16–10**

ಯಾವಾಗಲೂ ಶಿವಾರ್ಚನೆಗೆ ಸಾಧನಗಳಾದ ಸಾಮಗ್ರಿಗಳನ್ನು ಸಂಪಾದಿಸುವುದರಲ್ಲಿಯೇ ತೊಡಗಿದ ಮನಸ್ಸುಳ್ಳ ಮತ್ತು ಶಿವಯೋಗದಲ್ಲಿಯೇ ರತನಾದ ಯೋಗಿಯು ಮುಕ್ತನಾಗುತ್ತಾನೆ. ಇದರಲ್ಲಿ ಯಾವ ಸಂಶಯವೂ ಇರುವುದಿಲ್ಲ.

**ಅಂಧಪಂಗುವದನ್ಯೋನ್ಯ–**
**ಸಾಪೇಕ್ಷೇ ಜ್ಞಾನಕರ್ಮಣೀ ।**
**ಫಲೋತ್ಪತ್ತೌ ವಿರಕ್ತಸ್ಯ**
**ತಸ್ಮಾತ್ ತದ್‌ದ್ವಯಮಾಚರೇತ್ ॥ 16–11**

ಜ್ಞಾನ ಕರ್ಮಗಳು (ಶಿವಾದ್ವೈತ ಜ್ಞಾನ ಮತ್ತು ಶಿವಪೂಜಾರೂಪವಾದ ಕರ್ಮಗಳು) ಕುರುಡ ಮತ್ತು ಕುಂಟರಂತೆ ಪರಸ್ಪರ ಸಾಪೇಕ್ಷಗಳಾಗಿರುತ್ತವೆ. ಆದ್ದರಿಂದ ಫಲಗಳಲ್ಲಿ (ಪರಾ ಮತ್ತು ಅಪರಾ ಮುಕ್ತಿರೂಪವಾದ ಫಲಗಳಲ್ಲಿ) ವಿರಕ್ತನಾಗಿ ಸಾಧಕನು ಜ್ಞಾನ ಕರ್ಮಗಳೆರಡನ್ನೂ ಆಚರಿಸಬೇಕು.

**ಜ್ಞಾನೇ ಸಿದ್ಧೇಽಪಿ ವಿದುಷಾಮ್**
**ಕರ್ಮಾಪಿ ವಿನಿಯುಜ್ಯತೇ ।**
**ಫಲಾಭಿಸಂಧಿರಹಿತಮ್**
**ತಸ್ಮಾತ್ ಕರ್ಮ ನ ಸಂತ್ಯಜೇತ್ ॥ 16–12**

ಜ್ಞಾನಿಗಳಿಗೆ ಶಿವಾದ್ವೈತ ಜ್ಞಾನವು ಸಿದ್ಧವಾದರೂ ಸಹ ಫಲಾಪೇಕ್ಷೆ ಇಲ್ಲದ ಶಿವಪೂಜಾರೂಪವಾದ ಕರ್ಮವೂ ಸಹ ವಿಧಿಸಲ್ಪಡುತ್ತದೆ. ಆದ್ದರಿಂದ ಶಿವಪೂಜಾ ರೂಪವಾದ ಕರ್ಮವನ್ನು ತ್ಯಜಿಸಕೂಡದು.

**ಆಚಾರ ಏವ ಸರ್ವೇಷಾಮ್**
**ಅಲಂಕಾರಾಯ ಕಲ್ಪ್ಯತೇ ।**
**ಆಚಾರಹೀನಃ ಪುರುಷೋ**
**ಲೋಕೇ ಭವತಿ ನಿಂದಿತಃ ॥ 16–13**

ಎಲ್ಲರಿಗೂ ಆಚಾರವೇ ಅಲಂಕಾರವೆಂದು ಹೇಳಲ್ಪಟ್ಟಿದೆ. ಆದ್ದರಿಂದ ಈ ಲೋಕದಲ್ಲಿ ಆಚಾರಹೀನನಾದ ಮನುಷ್ಯನು ನಿಂದಿತನಾಗುತ್ತಾನೆ.

**ಜ್ಞಾನೇನಾಚಾರಯುಕ್ತೇನ**
**ಪ್ರಸೀದತಿ ಮಹೇಶ್ವರಃ ।**
**ತಸ್ಮಾದಾಚಾರವಾನ್ ಜ್ಞಾನೀ**
**ಭವೇದಾದೇಹಪಾತನಮ್ ॥ 16–14**

ಸದಾಚಾರಯುಕ್ತವಾದ ಜ್ಞಾನದಿಂದಲೇ ಮಹೇಶ್ವರನಾದ ಶಿವನು ಪ್ರಸನ್ನನಾಗುತ್ತಾನೆ. ಆದ್ದರಿಂದ ಜ್ಞಾನಿಯಾದವನು ದೇಹ ಪತನವಾಗುವವರೆಗೆ (ಮರಣ ಪರ್ಯಂತರವಾಗಿ) ಆಚಾರವಂತನಾಗಿಯೇ ಇರಬೇಕು.

*ಇತಿ ಕ್ರಿಯಾಗಮಸ್ಥಲಂ*
*ಇಲ್ಲಿಗೆ ಕ್ರಿಯಾಗಮಸ್ಥಲವು ಮುಗಿಯಿತು.*

## 55. ಅಥ ಭಾವಾಗಮಸ್ಥಲಮ್
ಈಗ ಭಾವಾಗಮಸ್ಥಲವು
**(9 ಶ್ಲೋಕಗಳು)**

**ಭಾವಚಿಹ್ನಾನಿ ವಿದುಷೋ**
**ಯಾನಿ ಸಂತಿ ವಿರಾಗಿಣಃ ।**
**ತಾನಿ ಭಾವಾಗಮತ್ವೇನ**
**ವರ್ತಂತೇ ಸರ್ವದೇಹಿನಾಮ್ ॥ 16–15**

ವೈರಾಗ್ಯ ಸಂಪನ್ನನಾದ ಶಿವಯೋಗಿಗೆ ಯಾವ ಭಾವಚಿಹ್ನೆಗಳುಂಟೋ (ಪರಿಪೂರ್ಣ ಶಿವಸ್ವರೂಪವಾದ ಅವನ ಮನಸ್ಸಿನ ಲಕ್ಷಣಗಳುಂಟೋ) ಅವುಗಳೇ ಎಲ್ಲ ಜೀವಿಗಳಿಗೆ ಭಾವಾಗಮವೆಂದು ಹೇಳಲ್ಪಡುತ್ತದೆ.

**ಶಿವೋऽಹಮಿತಿ ಭಾವೋऽಪಿ**
**ಶಿವತಾಪತ್ತಿಕಾರಣಮ್ ।**
**ನ ಜ್ಞಾನಮಾತ್ರಂ ನಾಚಾರೋ**
**ಭಾವಯುಕ್ತಃ ಶಿವೋ ಭವೇತ್॥ 16–16**

'ಶಿವೋऽಹಂ' (ಶಿವನೇ ನಾನು) ಎಂಬ ಭಾವವೇ ಶಿವತ್ವ ಪ್ರಾಪ್ತಿಗೆ ಕಾರಣವಾಗಿರುತ್ತದೆ. ಆದರೆ ಕೇವಲ ಶಿವಜ್ಞಾನವೇ ಆಗಲಿ, ಕೇವಲ ಶಿವಪೂಜಾರೂಪವಾದ ಆಚಾರವೇ ಆಗಲಿ ಶಿವತ್ವವನ್ನು ಪ್ರಾಪ್ತಿಮಾಡಿಕೊಡಲಾರವು. ಆದ್ದರಿಂದ ಭಾವಯುಕ್ತನಾಗಿಯೇ (ಧ್ಯಾನಯುಕ್ತನಾಗಿಯೇ) ಶಿವನಾಗಬೇಕು (ಜ್ಞಾನ ಮತ್ತು ಆಚಾರಗಳನ್ನು ಭಾವಯುಕ್ತನಾಗಿಯೇ ಮಾಡಬೇಕೆಂಬುದೇ ತಾತ್ಪರ್ಯ).

**ಜ್ಞಾನಂ ವಸ್ತುಪರಿಚ್ಛೇದೋ**
**ಧ್ಯಾನಂ ತದ್ಭಾವಕಾರಣಮ್ ।**
**ತಸ್ಮಾದ್ ಜ್ಞಾತೇ ಮಹಾದೇವೇ**
**ಧ್ಯಾನಯುಕ್ತೋ ಭವೇತ್ ಸುಧೀಃ ॥ 16–17**

ವಸ್ತುವಿನ ಸ್ವರೂಪವನ್ನು ನಿರ್ಣಯಿಸುವುದೇ ಜ್ಞಾನವು. ತದ್ಭಾವಕ್ಕೆ (ಅದೇ ಆಗಲಿಕ್ಕೆ) ಧ್ಯಾನವು ಕಾರಣ. ಆದ್ದರಿಂದ ಮಹಾದೇವನನ್ನು ತಿಳಿದುಕೊಂಡ ಜ್ಞಾನಿಯು ಧ್ಯಾನಯುಕ್ತನಾಗಬೇಕು.

**ಅಂತರ್ಬಹಿಶ್ಚ ಸರ್ವತ್ರ**
**ಪರಿಪೂರ್ಣಂ ಮಹೇಶ್ವರಮ್ ।**
**ಭಾವಯೇತ್ ಪರಮಾನಂದ–**
**ಲಬ್ಧಯೇ ಪಂಡಿತೋತ್ತಮಃ ॥ 16–18**

ಪಂಡಿತೋತ್ತಮನು (ಶಿವಾಗಮಶಾಸ್ತ್ರ ಕುಶಲನಾದ ಶಿವಯೋಗಿಯು) ಪರಮಾನಂದದ ಪ್ರಾಪ್ತಿಗಾಗಿ ಮಹೇಶ್ವರನನ್ನು ತನ್ನ ಒಳಗೂ ಮತ್ತು ಹೊರಗೂ ಪರಿಪೂರ್ಣವಾಗಿರುವನೆಂದು ಭಾವಿಸಬೇಕು (ಧ್ಯಾನಿಸಬೇಕು).

**ಅರ್ಥಹೀನಾ ಯಥಾ ವಾಣೀ**

**ಪತಿಹೀನಾ ಯಥಾ ಸತೀ ।**
**ಶ್ರುತಿಹೀನಾ ಯಥಾ ಬುದ್ಧಿಃ**
**ಭಾವಹೀನಾ ತಥಾ ಕ್ರಿಯಾ ॥ 16–19**

ಅರ್ಥಹೀನವಾದ ವಾಣಿ (ಮಾತು), ಪತಿ ಇಲ್ಲದ ಸತಿ, ಶಾಸ್ತ್ರ ಸಮ್ಮತವಲ್ಲದ ಜ್ಞಾನ, ಇವೆಲ್ಲವುಗಳು ಹೇಗೆ ವ್ಯರ್ಥಗಳಾಗಿರುತ್ತವೆಯೋ ಅದರಂತೆ ಭಾವಹೀನವಾದ ಕ್ರಿಯೆಯೂ ಸಹ ವ್ಯರ್ಥವಾಗಿರುತ್ತದೆ.

**ಚಕ್ಷುರ್ಹೀನೋ ಯಥಾ ರೂಪಮ್**
**ನ ಕಿಂಚಿದ್ವೀಕ್ಷಿತುಂ ಕ್ಷಮಃ ।**
**ಭಾವಹೀನಸ್ತಥಾ ಯೋಗೀ**
**ನ ಶಿವಂ ದ್ರಷ್ಟುಮೀಶ್ವರಃ ॥ 16–20**

ಕಣ್ಣಿಲ್ಲದ ವ್ಯಕ್ತಿಯು ರೂಪವನ್ನು ನೋಡುವುದಕ್ಕೆ ಹೇಗೆ ಸ್ವಲ್ಪವೂ ಸಮರ್ಥನಲ್ಲವೋ ಅದರಂತೆ ಭಾವಹೀನನಾದ ಯೋಗಿಯು ಶಿವನನ್ನು ಕಾಣಲು ಸ್ವಲ್ಪವೂ ಸಮರ್ಥನಾಗುವುದಿಲ್ಲ.

**ಭಾವಶುದ್ಧೇನ ಮನಸಾ**
**ಪೂಜಯೇತ್ ಪರಮೇಷ್ಠಿನಮ್ ।**
**ಭಾವಹೀನಾಂ ನ ಗೃಹ್ಣಾತಿ**
**ಪೂಜಾಂ ಸುಮಹತೀಮಪಿ ॥ 16–21**

ಆದ್ದರಿಂದ ಭಾವಶುದ್ಧವಾದ ಮನಸ್ಸಿನಿಂದಲೇ ಪರಮೇಷ್ಠಿಯನ್ನು (ಪರಶಿವನನ್ನು) ಪೂಜಿಸಬೇಕು. ಭಾವಹೀನವಾದ ಪೂಜೆಯು ಮಹತ್ತರವಾಗಿದ್ದರೂ ಶಿವನು ಅದನ್ನು ಸ್ವೀಕರಿಸುವುದಿಲ್ಲ.

**ನೈರಂತರ್ಯೇಣ ಸಂಪನ್ನೇ**
**ಭಾವೇ ಧ್ಯಾತುಂ ಶಿವಂ ಪ್ರತಿ ।**
**ತದ್ ಭಾವೋ ಜಾಯತೇ ಯದ್ವತ್**
**ಕ್ರಿಮೇಃ ಕೀಟಸ್ಯ ಚಿಂತನಾತ್ ॥ 16–22**

ಯಾವ ರೀತಿಯಾಗಿ ಭ್ರಮರದ ಚಿಂತನೆಯಿಂದ ಕೀಟಕ್ಕೆ ಭ್ರಮರ ಭಾವವು ಉಂಟಾಗುವುದೋ, ಅದರಂತೆ ಶಿವನನ್ನು ಕುರಿತು ನಿರಂತರವಾಗಿ ತನ್ನ ಭಾವನೆಯಲ್ಲಿ ಧ್ಯಾನವು ಸಂಪನ್ನವಾಗಲು ಅವನಿಗೆ ಶಿವತ್ವವೇ ಪ್ರಾಪ್ತವಾಗುವುದು.

**ನಿಷ್ಕಲಂಕಂ ನಿರಾಕಾರಮ್**
**ಪರಬ್ರಹ್ಮ ಶಿವಾಭಿಧಮ್ ।**
**ನಿರ್ಧ್ಯಾತುಮಸಮರ್ಥೋಽಪಿ**
**ತದ್ವಿಭೂತಿಂ ವಿಭಾವಯೇತ್ ॥ 16–23**

ನಿಷ್ಕಲಂಕನೂ (ನಿರ್ಮಲನೂ), ನಿರಾಕಾರನೂ ಆದ ಶಿವ ಎಂಬ ಹೆಸರಿನ ಪರಬ್ರಹ್ಮವನ್ನು ಧ್ಯಾನಿಸಲು ಅಸಮರ್ಥನಾಗಿದ್ದರೂ ಸಹ ಆ ಪರಶಿವನ ವಿಭೂತಿಯನ್ನು (ಸರ್ವಜ್ಞತ್ವ, ನಿತ್ಯತೃಪ್ತತ್ವ, ಅನಾದಿಬೋಧತ್ವ, ಸ್ವತಂತ್ರತ್ವ, ಅಲುಪ್ತಶಕ್ತಿತ್ವ ಮತ್ತು ಅನಂತ ಶಕ್ತಿತ್ವಗಳೆಂಬ ಷಡ್ಗುಣೈಶ್ವರ್ಯಗಳನ್ನು) ಭಾವಿಸಬೇಕು. ಇವು ಪರಮಾತ್ಮನ ಷಡ್ಗುಣೈಶ್ವರ್ಯಗಳಾಗಿವೆ.

***ಇತಿ ಭಾವಾಗಮಸ್ಥಲಂ*** *ಇಲ್ಲಿಗೆ ಭಾವಾಗಮಸ್ಥಲವು ಮುಗಿಯಿತು.*

## 56. ಅಥ ಜ್ಞಾನಾಗಮಸ್ಥಲಮ್

ಈಗ ಜ್ಞಾನಾಗಮಸ್ಥಲವು

**(11 ಶ್ಲೋಕಗಳು)**

**ಪರಸ್ಯ ಜ್ಞಾನಚಿಹ್ನಾನಿ**
**ಯಾನಿ ಸಂತಿ ಶರೀರಿಣಾಮ್ ।**
**ತಾನಿ ಜ್ಞಾನಾಗಮತ್ವೇನ**
**ಪ್ರವರ್ತಂತೇ ವಿಮುಕ್ತಯೇ ॥ 16–24**

ಭಾವಾಗಮಸ್ಥಲದ ಪರಮಯೋಗೀಶ್ವರನ ಯಾವ ಜ್ಞಾನ ಚಿಹ್ನೆಗಳಿವೆಯೋ ಅವುಗಳೇ ಶರೀರಗಳಿಗೆ (ಲೋಕದ ಜೀವಿಗಳಿಗೆ) ಮುಕ್ತಿಗೆ ಜ್ಞಾನಾಗಮಗಳಾಗಿ ಪ್ರವರ್ತಿಸುತ್ತವೆ.

**ಭಾವೇನ ಕಿಂ ಫಲಂ ಪುಂಸಾಮ್**
**ಕರ್ಮಣಾ ವಾ ಕಿಮಿಷ್ಯತೇ ।**
**ಭಾವಕರ್ಮಸಮಾಯುಕ್ತಮ್**
**ಜ್ಞಾನಮೇವ ವಿಮುಕ್ತಿದಮ್ ॥ 16–25**

ಪುರುಷರಿಗೆ (ಮನುಷ್ಯರಿಗೆ) ಕೇವಲ ಕರ್ಮದಿಂದಲೇ ಆಗಲಿ ಅಥವಾ ಕೇವಲ ಭಾವದಿಂದಲೇ ಆಗಲಿ ಏನು ಪ್ರಯೋಜನ? ಏಕೆಂದರೆ ಭಾವಕರ್ಮಗಳಿಂದ ಕೂಡಿದ ಜ್ಞಾನವೇ ಮುಕ್ತಿಯನ್ನು ಕೊಡುವುದು.

**ಕೇವಲಂ ಕರ್ಮಮಾತ್ರೇಣ**
**ಜನ್ಮಕೋಟಿಶತೈರಪಿ ।**
**ನಾತ್ಮನಾಂ ಜಾಯತೇ ಮುಕ್ತಿಃ**
**ಜ್ಞಾನಂ ಮುಕ್ತೇರ್ಹಿ ಕಾರಣಮ್ ॥ 16–26**

ಕೇವಲ ಕರ್ಮವೊಂದನ್ನೇ ಆಚರಿಸುತ್ತಾ ಒಂದು ನೂರು ಕೋಟಿ ಜನ್ಮಗಳನ್ನು ಕಳೆದರೂ ಸಹ ಜೀವಿಗಳಿಗೆ ಮುಕ್ತಿಯು ದೊರೆಯುವುದಿಲ್ಲ. ಮುಕ್ತಿಗೆ ಜ್ಞಾನವು ಕಾರಣವಾಗಿರುತ್ತದೆ.

**ಜ್ಞಾನಹೀನಂ ಸದಾ ಕರ್ಮ**
**ಪುಂಸಾಂ ಸಂಸಾರಕಾರಣಮ್ ।**
**ತದೇವ ಜ್ಞಾನಯೋಗೇನ**
**ಸಂಸಾರವಿನಿವರ್ತಕಮ್ ॥16–27**

ಜ್ಞಾನಹೀನನಾದ ಕೇವಲ ಕರ್ಮವನ್ನೇ ಆಚರಿಸುವುದರಿಂದ ಅದು ಜೀವಿಗಳ ಸಂಸಾರಬಂಧನಕ್ಕೆ ಕಾರಣವಾಗುವುದು. ಆ ಕರ್ಮವೇ ಜ್ಞಾನದಿಂದ ಕೂಡಿ ಆಚರಿಸಲ್ಪಟ್ಟಾಗ ಜೀವಿಗಳ ಸಂಸಾರ ಬಂಧನವನ್ನು ನಿವೃತ್ತಿಗೊಳಿಸುವುದು.

**ಫಲಂ ಕ್ರಿಯಾವತಾಂ ಪುಂಸಾಮ್**
**ಸ್ವರ್ಗಾದ್ಯಂ ನಶ್ವರಂ ಯತಃ ।**
**ತಸ್ಮಾತ್ ಸ್ಥಾಯಿಫಲಪ್ರಾಪ್ತ್ಯೈ**
**ಜ್ಞಾನಮೇವ ಸಮಭ್ಯಸೇತ್ ॥ 16–28**

ಕೇವಲ ಕರ್ಮವನ್ನು ಆಚರಿಸುವ ಜೀವಿಗಳಿಗೆ ನಶ್ವರಗಳಾದ ಸ್ವರ್ಗಾದಿ ಫಲಗಳೇ ದೊರೆಯುವುವು. ಆದ್ದರಿಂದ ಸ್ಥಿರವಾದ ಮುಕ್ತಿಫಲವನ್ನು ಪ್ರಾಪ್ತಿ ಮಾಡಿಕೊಳ್ಳಲು ಜ್ಞಾನವನ್ನೇ ಚೆನ್ನಾಗಿ ಅಭ್ಯಾಸ ಮಾಡಬೇಕು.

**ಶಾಸ್ತ್ರಾಭ್ಯಾಸಾದಿಯತ್ನೇನ**
**ಸದ್ಗುರೋರುಪದೇಶತಃ ।**
**ಜ್ಞಾನಮೇವ ಸಮಭ್ಯಸ್ಯೇತ್**
**ಕಿಮನ್ಯೇನ ಪ್ರಯೋಜನಮ್ ॥ 16–29**

ಶಾಸ್ತ್ರಗಳ (ವೇದಾಗಮಗಳಲ್ಲಿ ಪ್ರಸಿದ್ಧವಾದ ವೀರಶೈವ ಶಾಸ್ತ್ರಗಳ) ಅಭ್ಯಾಸವೇ ಮೊದಲಾದ ಪ್ರಯತ್ನಗಳಿಂದ ಮತ್ತು ಸದ್ಗುರುವಿನ ಉಪದೇಶದಿಂದ ಜ್ಞಾನವನ್ನೇ ಅಭ್ಯಸಿಸಬೇಕು. ಉಳಿದ ಶಾಸ್ತ್ರಗಳಿಂದ ಏನು ಪ್ರಯೋಜನ?

**ಜ್ಞಾನಂ ಪರಶಿವಾದ್ವೈತ–**
**ಪರಿಪಾಕವಿನಿಶ್ಚಯಃ ।**
**ಯೇನ ಸಂಸಾರಸಂಬಂಧ–**
**ವಿನಿವೃತ್ತಿರ್ಭವೇತ್ ಸತಾಮ್ ॥ 16–30**

ಪರಮ ಶಿವಾದ್ವೈತದಲ್ಲಿಯ ಪರಿಪಕ್ವವಾದ ನಿಶ್ಚಯವೇ ಜ್ಞಾನವು. ಇಂತಹ ಜ್ಞಾನದಿಂದಲೇ ಸತ್ಪುರುಷರಿಗೆ ಸಂಸಾರಬಂಧನದ ನಿವೃತ್ತಿ ಉಂಟಾಗುವುದು.

**ಶಿವಾತ್ಮಕಮಿದಂ ಸರ್ವಮ್**
**ಶಿವಾದನ್ಯನ್ನ ವಿದ್ಯತೇ ।**
**ಶಿವೋಽಹಮಿತಿ ಯಾ ಬುದ್ಧಿಃ**
**ತದೇವ ಜ್ಞಾನಮುತ್ತಮಮ್ ॥ 16–31**

ಈ ಕಾಣುವ ಜಗತ್ತೆಲ್ಲವೂ ಶಿವಾತ್ಮಕವೇ ಆಗಿದೆ. ಇಲ್ಲಿ ಶಿವನಿಗೆ ಅನ್ಯವಾದದ್ದು ಬೇರಾವುದೂ ಇರುವುದಿಲ್ಲ. ನಾನೂ ಸಹ ಶಿವನೇ ಆಗಿದ್ದೇನೆ ಎನ್ನುವಂತಹ ಬುದ್ಧಿಯೇ (ತಿಳುವಳಿಕೆಯೇ) ಉತ್ತಮವಾದ ಜ್ಞಾನವೆಂದು ಕರೆಯಲ್ಪಡುವುದು.

**ಅಂಧೋ ಯಥಾ ಪುರಸ್ಥಾನಿ**
**ವಸ್ತೂನಿ ಚ ನ ಪಶ್ಯತಿ ।**
**ಜ್ಞಾನಹೀನಸ್ತಥಾ ದೇಹೀ**
**ನಾತ್ಮಸ್ಥಂ ವೀಕ್ಷತೇ ಶಿವಮ್ ॥ 16–32**

ಅಂಧನಾದ ಮನುಷ್ಯನು ತನ್ನ ಎದುರಿಗಿರುವ ವಸ್ತುಗಳನ್ನು ಹೇಗೆ ನೋಡಲಾರನೋ, ಅದರಂತೆಯೇ ಜ್ಞಾನಹೀನನಾದ ಜೀವಿಯು ತನ್ನೊಳಗಿರುವ ಶಿವನನ್ನು ನೋಡಲಾರನು.

**ಶಿವಸ್ಯ ದರ್ಶನಾತ್ ಪುಂಸಾಮ್**
**ಜನ್ಮರೋಗನಿವರ್ತನಮ್ ।**
**ಶಿವದರ್ಶನಮಪ್ಯಾಹುಃ**
**ಸುಲಭಂ ಜ್ಞಾನಚಕ್ಷುಷಾಮ್ ॥ 16–33**

ಪುರುಷರಿಗೆ (ಜೀವಿಗಳಿಗೆ) ಶಿವದರ್ಶನದಿಂದಲೇ ಜನ್ಮರೋಗವು (ಜನನ–ಮರಣರೂಪವಾದ ಸಂಸಾರ ಬಂಧನವು) ನಿವೃತ್ತಿಯಾಗುವುದು. ಈ ಶಿವದರ್ಶನವು ಜ್ಞಾನಚಕ್ಷುಗಳಿಗೆ ಸುಲಭವಾದದ್ದೆಂದು ಜ್ಞಾನಿಗಳು ಹೇಳುತ್ತಾರೆ.

**ದೀಪಂ ವಿನಾ ಯಥಾ ಗೇಹೇ**
**ನಾಂಧಕಾರೋ ನಿವರ್ತತೇ ।**
**ಜ್ಞಾನಂ ವಿನಾ ತಥಾ ಚಿತ್ತೇ**
**ಮೋಹೋಽಪಿ ನ ನಿವರ್ತತೇ ॥ 16–34**

ಮನೆಯಲ್ಲಿ ಅಂಧಕಾರವು ದೀಪವಿಲ್ಲದೆ ಹೇಗೆ ತೊಲಗುವುದಿಲ್ಲವೋ, ಅದರಂತೆ ಚಿತ್ತದಲ್ಲಿಯ ಮೋಹವೂ ಸಹ ಶಿವಜ್ಞಾನವಿಲ್ಲದೆ ನಿವೃತ್ತಿಯಾಗದು.

*ಇತಿ ಜ್ಞಾನಾಗಮಸ್ಥಲಂ* *ಇಲ್ಲಿಗೆ ಜ್ಞಾನಾಗಮಸ್ಥಲವು ಮುಗಿಯಿತು.*

## 57. ಅಥ ಸಕಾಯಸ್ಥಲಮ್

ಈಗ ಸಕಾಯಸ್ಥಲವು

(8 ಶ್ಲೋಕಗಳು)

**ಪರಸ್ಯ ಯಾ ತನುರ್ಜ್ಞೇಯಾऽ–**
**ದೇಹಕರ್ಮಾಭಿಮಾನಿನಃ ।**
**ತಯಾ ಸಕಾಯೋ ಲೋಕೋऽಯಂ**
**ತದಾತ್ಮತ್ವನಿರೂಪಣಾತ್ ॥16–35**

ನಾನು ಸ್ಥೂಲನು, ನಾನು ಮಾಡುತ್ತಿದ್ದೇನೆ ಮುಂತಾದ ದೇಹ ಮತ್ತು ಕರ್ಮಾದಿಗಳ ಅಭಿಮಾನವಿಲ್ಲದಿರುವ ಆ ಪರನ (ಶಿವಯೋಗಿಯ) ಯಾವ ಶರೀರವಿದೆಯೋ ಅದರಿಂದಲೇ ಈ ಜಗತ್ತು 'ಸಕಾಯ'ವೆಂದು ಕರೆಯಲ್ಪಡುತ್ತದೆ. ಏಕೆಂದರೆ ಆ ಪರನ ದೇಹವೇ ಜನರಿಗೆ 'ಆತ್ಮ'ವೆಂಬುದಾಗಿ ನಿರೂಪಿಸಲ್ಪಟ್ಟಿದೆ.

**ಕಾಯಂ ವಿನಾ ಸಮಸ್ತಾನಾಮ್**
**ನ ಕ್ರಿಯಾ ನ ಚ ಭಾವನಾ ।**
**ನ ಜ್ಞಾನಂ ಯತ್ತತೋ ಯೋಗೀ**
**ಕಾಯವಾನೇವ ಸಂಚರೇತ್ ॥ 16–36**

ಎಲ್ಲರಿಗೂ ಕಾಯವಿಲ್ಲದೆ ಕ್ರಿಯೆಯಾಗಲಿ, ಭಾವನೆಯಾಗಲಿ ಮತ್ತು ಜ್ಞಾನವಾಗಲಿ ಉಂಟಾಗುವುದಿಲ್ಲ. ಆದ್ದರಿಂದ ಯೋಗಿಯಾದವನು ಕಾಯವುಳ್ಳವನಾಗಿಯೇ ಸಂಚರಿಸಬೇಕು.

**ಶಿವೈಕಜ್ಞಾನಯುಕ್ತಸ್ಯ**
**ಯೋಗಿನೋऽಪಿ ಮಹಾತ್ಮನಃ ।**
**ಕಾಯಯೋಗೇನ ಸಿದ್ಧ್ಯಂತಿ**
**ಭೋಗಮೋಕ್ಷಾದಯಃ ಸದಾ ॥ 16–37**

ಶಿವೈಕ್ಯ ಜ್ಞಾನವನ್ನು ಪಡೆದ ಯೋಗಿಗಳಾದ ಮಹಾತ್ಮರಿಗೂ ಸಹ ಕಾಯ ಸಂಬಂಧದಿಂದಲೇ ಯಾವಾಗಲೂ ಭೋಗ ಮೋಕ್ಷಾದಿಗಳು ಸಿದ್ಧಿಸುತ್ತವೆ.

**ಕಾಷ್ಠಂ ವಿನಾ ಯಥಾ ವಹ್ನಿಃ**
**ಜಾಯತೇ ನ ಪ್ರಕಾಶವಾನ್ ।**
**ಮೂರ್ತಿಂ ವಿನಾ ತಥಾ ಯೋಗೀ**
**ನಾತ್ಮತತ್ತ್ವಪ್ರಕಾಶವಾನ್ ॥ 16–38**

ಕಟ್ಟಿಗೆಯ ಹೊರತಾಗಿ ಅಗ್ನಿಯು ಹೇಗೆ ಪ್ರಕಾಶಮಾನವಾಗಿ ತೋರುವುದಿಲ್ಲವೋ ಅದರಂತೆ ದೇಹವಿಲ್ಲದೆ ಯೋಗಿಯು ತನ್ನ ಆತ್ಮತತ್ತ್ವವನ್ನು ಪ್ರಕಾಶಪಡಿಸಿಕೊಳ್ಳಲು ಆಗುವುದಿಲ್ಲ.

**ಮೂರ್ತ್ಯಾತ್ಮನೈವ ದೇವಸ್ಯ**
**ಯಥಾ ಪೂಜ್ಯತ್ವಕಲ್ಪನಾ ।**
**ತಥಾ ದೇಹಾತ್ಮನೈವಾಸ್ಯ**
**ಪೂಜ್ಯತ್ವಂ ಪರಯೋಗಿನಃ ॥ 16–39**

ಮೂರ್ತಿರೂಪವಾದ ವಿಗ್ರಹವಿಲ್ಲದೆ ದೇವರಪೂಜೆಯು ಹೇಗೆ ಉಂಟಾಗುವುದಿಲ್ಲವೋ, ಅದರಂತೆ ದೇಹಸಂಬಂಧದಿಂದಲೇ ಪರ(ಶಿವ) ಯೋಗಿಗೂ ಪೂಜ್ಯತ್ವವು ಉಂಟಾಗುತ್ತದೆ.

**ನಿಷ್ಕಲೋ ಹಿ ಮಹಾದೇವಃ**
**ಪರಿಪೂರ್ಣಃ ಸದಾಶಿವಃ ।**
**ಜಗತ್ಸೃಷ್ಟ್ಯಾದಿಸಂಸಿದ್ಧ್ಯೈ**
**ಮೂರ್ತಿಮಾನೇವ ಭಾಸತೇ ॥ 16–40**

ಪರಿಪೂರ್ಣನು, ಸರ್ವದಾ ಮಂಗಲಮಯನೂ, ಸದಾಶಿವತತ್ವವೂ (ಪಂಚಸಾದಾಖ್ಯ, ಪಂಚಕಲೆ ಮತ್ತು ಪಂಚಶಕ್ತಿ ಮುಂತಾದವುಗಳ ಪ್ರಾಕ್ಯಟ್ಯ ಸ್ಥಾನವೇಸದಾಶಿವತತ್ವವು) ಆದ ಆ ಮಹಾದೇವನು ನಿಷ್ಕಲನಾಗಿದ್ದಾನೆ (ನಿರಾಕಾರನಾಗಿದ್ದಾನೆ). ಅವನು ಜಗತ್ತಿನ ಸೃಷ್ಟ್ಯಾದಿಗಳ ಸಿದ್ಧಿಗಾಗಿ ಮೂರ್ತಿಮಂತನಾಗಿ ತೋರುತ್ತಾನೆ.

**ಬ್ರಹ್ಮಾದ್ಯಾ ದೇವತಾಃ ಸರ್ವಾಃ**
**ಮುನಯೋऽಪಿ ಮುಮುಕ್ಷವಃ ।**
**ಕಾಯವಂತೋ ಹಿ ಕುರ್ವಂತಿ**
**ತಪಃ ಸರ್ವಾರ್ಥಸಾಧಕಮ್ ॥ 16–41**

ಬ್ರಹ್ಮಾದಿ ಎಲ್ಲ ದೇವತೆಗಳು, ಮುಮುಕ್ಷುಗಳಾದ ಎಲ್ಲಾ ಮುನಿಗಳು, ಸರ್ವಾರ್ಥಸಾಧಕವಾದ (ಸಕಲ ಇಷ್ಟಾರ್ಥಗಳನ್ನು ಕೊಡುವ) ತಪಸ್ಸನ್ನು ದೇಹಧಾರಿಗಳಾಗಿಯೇ ಮಾಡುತ್ತಾರೆ.

**ತಪೋ ಹಿ ಮೂಲಂ ಸರ್ವಾಸಾಮ್**
**ಸಿದ್ಧೀನಾಂ ಯಜ್ಜಗತ್ತ್ರಯೇ ।**
**ತಪಸ್ತತ್ಕಾಯಮೂಲಂ ಹಿ**
**ತಸ್ಮಾತ್ ಕಾಯಂ ನ ಸಂತ್ಯಜೇತ್ ॥ 16–42**

ಮೂರು ಲೋಕದಲ್ಲಿರುವ ಸಕಲ ಸಿದ್ಧಿಗಳಿಗೆ ತಪ್ಪಸ್ಸೇ ಮೂಲ ಸಾಧನವಾಗಿರುತ್ತದೆ. ಆ ತಪಸ್ಸಿಗೆ ಕಾಯವೇ ಮುಖ್ಯವಾದುದು. ಆದ್ದರಿಂದ ಜ್ಞಾನಿಯಾದವನು ಶರೀರವನ್ನು ಬಿಡಕೂಡದು.

*ಇತಿ ಸಕಾಯಸ್ಥಲಂ ಇಲ್ಲಿಗೆ ಸಕಾಯಸ್ಥಲವು ಮುಗಿಯಿತು.*

## 58. ಅಥ ಅಕಾಯಸ್ಥಲಮ್

ಈಗ ಅಕಾಯಸ್ಥಲವು

**(6 ಶ್ಲೋಕಗಳು)**

**ಔಪಚಾರಿಕದೇಹಿತ್ವಾತ್**
**ಜಗದಾತ್ಮತ್ವಭಾವನಾತ್ ।**
**ಮಾಯಾಸಂಬಂಧರಾಹಿತ್ಯಾತ್**
**ಅಕಾಯೋ ಹಿ ಪರಃ ಸ್ಮೃತಃ ॥ 16–43**

ಆ ಸಕಾಯಸ್ಥಲದ ಪರಯೋಗಿಯು ಔಪಚಾರಿಕ ದೇಹವುಳ್ಳವನಾಗಿ (ದೇಹಾಭಿಮಾನ ಇಲ್ಲದವನಾಗಿ) ಜಗವೆಲ್ಲವೂ ತನ್ನ ಆತ್ಮವೆಂದು ಭಾವಿಸಿ ಮತ್ತು ಮಾಯಾ ಸಂಬಂಧವನ್ನು ಕಳೆದುಕೊಳ್ಳುವನೋ ಆಗ ಅವನು ಅಕಾಯವೆಂದು ಹೇಳಲ್ಪಡುವನು.

**ಪರಸ್ಯ ದೇಹಯೋಗೇऽಪಿ**
**ನ ದೇಹಾಶ್ರಯವಿಕ್ರಿಯಾ ।**
**ಶಿವಸ್ಯೇವ ಯತಸ್ತಸ್ಮಾತ್**
**ಅಕಾಯೋऽಯಂ ಪ್ರಕೀರ್ತಿತಃ ॥ 16–44**

ಪರಯೋಗಿಗೆ ದೇಹ ಸಂಬಂಧವಿದ್ದರೂ ಸಹ ಅವನಿಗೆ ಶಿವನಂತೆ ದೇಹದಲ್ಲಿಯ ಕಾಯಾದಿವಿಕಾರಗಳು ಉಂಟಾಗುವುದಿಲ್ಲ. ಆದ್ದರಿಂದ ಆ ಯೋಗಿಯು ಅಕಾಯವೆಂದು ಹೇಳಲ್ಪಡುತ್ತಾನೆ.

**ಪರಲಿಂಗೇ ವಿಲೀನಸ್ಯ**
**ಪರಮಾನಂದಚಿನ್ಮಯೇ ।**
**ಕುತೋ ದೇಹೇನ ಸಂಬಂಧೋ**
**ದೇಹಿವದ್ಭಾಸನಂ ಭ್ರಮಃ ॥ 16–45**

ಪರಮಾನಂದ ರೂಪವೂ, ಚಿನ್ಮಯವೂ ಆದ ಆ ಪರಲಿಂಗದಲ್ಲಿ ವಿಲೀನನಾದ ಆ ಯೋಗಿಗೆ ದೇಹಸಂಬಂಧವು ಹೇಗೆ ತಾನೇ ಇರುತ್ತದೆ. ಅವನು ದೇಹಿಯಂತೆ ತೋರುವುದು (ದೇಹಧಾರಿಯಂತೆ ತೋರುವುದು) ಭ್ರಮೆಯೇ ಆಗಿದೆ.

**ದೇಹಾಭಿಮಾನಹೀನಸ್ಯ**
**ಶಿವಭಾವೇ ಸ್ಥಿತಾತ್ಮನಃ ।**
**ಜಗದೇತಚ್ಛರೀರಂ ಸ್ಯಾತ್**
**ದೇಹೇನೈಕೇನ ಕಾ ವ್ಯಥಾ ॥ 16–46**

ದೇಹಾಭಿಮಾನಹೀನನಾಗಿ ಶಿವೋऽಹಂ ಭಾವನೆಯಲ್ಲಿಯೇ ಸ್ಥಿತನಾಗಿರುವ ಆ ಪರಯೋಗಿಗೆ ಈ ಸಮಸ್ತ ಜಗವೆಲ್ಲವೂ ಶರೀರವಾಗಿರುತ್ತದೆ ಎಂದ ಮೇಲೆ, ಅವನಿಗಿರುವ ಈ ಒಂದು ದೇಹದಿಂದ ಯಾವ ವ್ಯವಸ್ಥೆಯು ತಾನೇ ಉಂಟಾದೀತು?

**ಶಿವಜ್ಞಾನೈಕನಿಷ್ಠಸ್ಯ**
**ನಾಹಂಕಾರಭವಭ್ರಮಃ ।**
**ನ ಚೇಂದ್ರಿಯಭವಂ ದುಃಖಮ್**
**ತ್ಯಕ್ತದೇಹಾಭಿಮಾನಿನಃ ॥ 16–47**

ದೇಹಾಭಿಮಾನವನ್ನು ತ್ಯಾಗ ಮಾಡಿದ, ಶಿವಜ್ಞಾನವೊಂದರಲ್ಲಿಯೇ ನಿಷ್ಠನಾದ ಆ ಪರಯೋಗಿಗೆ ಅಹಂಕಾರದಿಂದುಂಟಾದ ಭ್ರಮೆಯೇ ಆಗಲಿ ಅಥವಾ ಇಂದ್ರಿಯಂಗಳಿಂದುಂಟಾದ ದುಃಖವೇ ಆಗಲಿ ಇರುವುದಿಲ್ಲ.

**ನ ಮನುಷ್ಯೋ ನ ದೇವೋऽಹಮ್**
**ನ ಯಕ್ಷೋ ನೈವ ರಾಕ್ಷಸಃ ।**
**ಶಿವೋऽಹಮಿತಿ ಯೋ ಬುದ್ಧ್ಯಾತ್**
**ತಸ್ಯ ಕಿಂ ದೇಹಕರ್ಮಣಾ ॥ 16–48**

ನಾನು ಮನುಷ್ಯನಲ್ಲ, ನಾನು ದೇವನಲ್ಲ, ನಾನು ಯಕ್ಷನಲ್ಲ, ನಾನು ರಾಕ್ಷಸನಲ್ಲ. ಆದರೆ ನಾನು ಶಿವನೇ ಇದ್ದೇನೆ ಎಂಬ ತಿಳುವಳಿಕೆಯಿಂದ ಯಾರು ಇರುತ್ತಾರೆಯೋ ಅಂತಹವನಿಗೆ ದೇಹ ಕರ್ಮದಿಂದ (ದೇಹ ವ್ಯವಹಾರದಿಂದ) ಯಾವ ಪ್ರಯೋಜನವೂ ಇರುವುದಿಲ್ಲ.

***ಇತಿ ಅಕಾಯಸ್ಥಲಂ*** *ಇಲ್ಲಿಗೆ ಅಕಾಯಸ್ಥಲವು ಮುಗಿಯಿತು.*

## 59. ಅಥ ಪರಕಾಯಸ್ಥಲಮ್

**ಈಗ ಪರಕಾಯಸ್ಥಲವು**

**(9 ಶ್ಲೋಕಗಳು)**

**ವಶೀಕೃತತ್ವಾತ್ ಪ್ರಕೃತೇಃ**
**ಮಾಯಾಮಾರ್ಗಾತಿವರ್ತನಾತ್ ।**
**ಪರಕಾಯೋಽಯಮಾಖ್ಯಾತಃ**
**ಸತ್ಯಜ್ಞಾನಸುಖಾತ್ಮಕಃ ॥ 16–49**

ಪ್ರಕೃತಿಯನ್ನು ತನ್ನ ವಶದಲ್ಲಿ ಇಟ್ಟುಕೊಂಡಿರುವ ಮತ್ತು ಮಾಯಾಮಾರ್ಗವನ್ನು ಮೀರಿ ನಿಂತಿರುವ ಆ ಅಕಾಯವೇ ಸಚ್ಚಿದಾನಂದ ಸ್ವರೂಪಾತ್ಮಕನಾಗಿರುವುದರಿಂದ ಅವನಿಗೆ ಪರಕಾಯನೆಂದು ಹೇಳಲಾಗುತ್ತದೆ.

**ಪರಬ್ರಹ್ಮವಪುರ್ಯಸ್ಯ**
**ಪ್ರಬೋಧಾನಂದಭಾಸುರಮ್ ।**
**ಪ್ರಾಕೃತೇನ ಶರೀರೇಣ**
**ಕಿಮೇತೇನಾಸ್ಯ ಜಾಯತೇ ॥ 16–50**

ಸಚ್ಚಿದಾನಂದ ಸ್ವರೂಪವಾದ ಪರಶಿವ ಬ್ರಹ್ಮವೇ ಯಾರಿಗೆ ಶರೀರವಾಗಿದೆಯೋ ಅಂತಹ ಪರಕಾಯನಾದ ಯೋಗಿಗೆ ಈ ಪ್ರಾಕೃತವಾದ ಶರೀರದಿಂದ ಯಾವ ಹಾನಿಯೂ ಆಗುವುದಿಲ್ಲ.

**ಸಮ್ಯಗ್ಜ್ಞಾನಾಗ್ನಿಸಂದ–**
**ಗ್ಧಜನ್ಮಬೀಜಕಲೇವರಃ ।**
**ಶಿವತತ್ತ್ವಾವಲಂಬೀ ಯಃ**
**ಪರಕಾಯಃ ಸ ಉಚ್ಯತೇ ॥ 16–51**

ಸಮ್ಯಕ್‌ಜ್ಞಾನವೆಂಬ ಅಗ್ನಿಯಲ್ಲಿ (ಶಿವಾದ್ವೈತ ಜ್ಞಾನವೆಂಬ ಅಗ್ನಿಯಲ್ಲಿ) ಜನ್ಮಬೀಜವನ್ನು ಸುಟ್ಟು ಹಾಕಿದ ಮತ್ತು ಶಿವತತ್ತ್ವವನ್ನು ಅವಲಂಬಿಸಿದ ಯೋಗಿಯೇ ಪರಕಾಯನೆಂದು ಕರೆಸಿಕೊಳ್ಳುತ್ತಾನೆ.

**ಇಂದ್ರಿಯಾಣಿ ಮನೋವೃತ್ತಿ–**
**ವಾಸನಾಃ ಕರ್ಮಸಂಭವಾಃ ।**
**ಯತ್ರ ಯಾಂತಿ ಲಯಂ ತೇನ**
**ಸಕಾಯೋಽಯಂ ಪರಾತ್ಮನಾ ॥ 16–52**

ಕರ್ಮಪಾಶದಿಂದ ಹುಟ್ಟಿದ ಮತ್ತು ಮನೋಪ್ರವೃತ್ತಿಯ ವಾಸನೆಗಳು ಮತ್ತು ದಶೇಂದ್ರಿಯ ವ್ಯಾಪಾರಗಳು ಯಾವ ಪರಬ್ರಹ್ಮದಲ್ಲಿ ಲಯವನ್ನು ಹೊಂದುತ್ತವೆಯೋ, ಆ ಪರಬ್ರಹ್ಮ ಯಾರಿಗೆ ಕಾಯವಾಗಿದೆಯೋ ಅವನೇ ಪರಕಾಯನೆನಿಸಿಕೊಳ್ಳುವನು.

**ಪರಾಹಂತಾಮನುಪ್ರಾಪ್ಯ**
**ಪಶ್ಯೇದ್ ವಿಶ್ವಂ ಚಿದಾತ್ಮಕಮ್ ।**
**ಸದೇಹೋಽತಿಭ್ರಮಸ್ತಸ್ಯ**
**ನಿಶ್ಚಿತಾ ಹಿ ಶಿವಾತ್ಮತಾ ॥ 16–53**

ಪರಬ್ರಹ್ಮ ಪರಮಾತ್ಮನೇ ನಾನು ಎಂಬ ಪರಾಹಂತಾ ಸ್ವರೂಪವನ್ನು ಪ್ರಾಪ್ತಿಮಾಡಿಕೊಂಡು, ವಿಶ್ವವೆಲ್ಲವನ್ನೂ ಚಿದಾತ್ಮಕವಾಗಿ ನೋಡುವ ಈ ಪರಯೋಗಿಯು ಸದೇಹಿ ಎನ್ನುವುದು ಭ್ರಾಂತಿಯು. ಏಕೆಂದರೆ ಅವನ ದೇಹವೂ ಸಹ ನಿಶ್ಚಿತವಾಗಿ ಶಿವಾತ್ಮರೂಪವೇ ಆಗಿರುತ್ತದೆ.

**ಸ್ವಸ್ವರೂಪಂ ಚಿದಾಕಾರಮ್**
**ಜ್ಯೋತಿಃ ಸಾಕ್ಷಾದ್ವಿಚಿಂತಯನ್ ।**
**ದೇಹವಾನಪಿ ನಿರ್ದೇಹೋ**
**ಜೀವನ್ಮುಕ್ತೋ ಹಿ ಸಾಧಕಃ ॥ 16–54**

ತನ್ನ ಸ್ವರೂಪವನ್ನು ಚಿದಾಕಾರವಾದ ಜ್ಯೋತಿಯೆಂದು ಸಾಕ್ಷಾತ್ ಚಿಂತಿಸುತ್ತಿರುವ ಈ ಪರಕಾಯ ಸ್ಥಲದ ಸಾಧಕನು ದೇಹಧಾರಿಯಾಗಿದ್ದರೂ ಸಹ ನಿರ್ದೇಹಿಯೂ (ದೇಹ ಭಾವನೆ ಇಲ್ಲದವನೂ ಮತ್ತು ಪುನಃ ದೇಹಾಂತರವನ್ನು ಪ್ರಾಪ್ತಿ ಮಾಡಿಕೊಳ್ಳದವನು), ಜೀವನ್ಮುಕ್ತನೂ ಆಗಿರುತ್ತಾನೆ

**ದೇಹಸ್ತಿಷ್ಠತು ವಾ ಯಾತು**
**ಯೋಗಿನಃ ಸ್ವಾತ್ಮಬೋಧಿನಃ ।**
**ಜೀವನ್ಮುಕ್ತಿರ್ಭವೇತ್ ಸದ್ಯಃ**
**ಚಿದಾನಂದಪ್ರಕಾಶಿನೀ ॥ 16–55**

ಸ್ವಸ್ವರೂಪ ಜ್ಞಾನಸಂಪನ್ನನಾದ ಪರಕಾಯ ಯೋಗಿಯ ಸ್ಥೂಲದೇಹವು ಇರಲಿ ಅಥವಾ ಇಲ್ಲದೆ ಇರಲಿ ಚಿದಾನಂದ ಪ್ರಕಾಶವಾದ ಜೀವನ್ಮುಕ್ತಿಯು ತಕ್ಷಣದಲ್ಲೇ ಪ್ರಾಪ್ತವಾಗುತ್ತದೆ.

**ಆತ್ಮಜ್ಞಾನಾವಸಾನಂ ಹಿ**
**ಸಂಸಾರಪರಿಪೀಡನಮ್ ।**
**ಸೂರ್ಯೋದಯೇऽಪಿ ಕಿಂ ಲೋಕಃ**
**ತಿಮಿರೇಣೋಪರುಧ್ಯತೇ ॥ 16–56**

ಸಂಸಾರ ಪೀಡೆಯು (ಜನನ ಮರಣ ರೂಪವಾದ ಸಂಸಾರ ಬಾಧೆಯು) ಆತ್ಮಜ್ಞಾನವಾಗುವವರೆವಿಗೆ ಮಾತ್ರ ಇರುತ್ತದೆ) ಸೂರ್ಯೋದಯವಾದ ಮೇಲೆಯೂ ಲೋಕಕ್ಕೆ ಕತ್ತಲೆಯು ವ್ಯಾಪಿಸಿರುವುದುಂಟೇ? (ಸೂರ್ಯೋದಯವಾದ ಮೇಲೆ ಕತ್ತಲೆಯು ಇಲ್ಲವಾಗುವಂತೆ ಆತ್ಮಜ್ಞಾನವಾದ ನಂತರ ಸಂಸಾರ ಬಾಧೆ ಇರುವುದಿಲ್ಲ).

**ದೇಹಾಭಿಮಾನನಿರ್ಮುಕ್ತಃ**
**ಕಲಾತೀತಪದಾಶ್ರಯಃ ।**
**ಕಥಂ ಯಾತಿ ಪರಿಚ್ಛೇದಮ್**
**ಶರೀರೇಷು ಮಹಾಬುಧಃ ॥ 16–57**

ದೇಹಾಭಿಮಾನದಿಂದ ಮುಕ್ತನಾದ, ನಿವೃತ್ತ್ಯಾದಿ ಕಲೆಗಳಿಗೆ ಅತೀತವಾದ ಪರಬ್ರಹ್ಮ ಪದವಿಯನ್ನು ಪಡೆದುಕೊಂಡ ಮಹಾಬುಧನಾದ (ಮಹಾಜ್ಞಾನಿಯಾದ) ಪರಕಾಯ ಯೋಗಿಯು ಶರೀರಗಳಲ್ಲಿ ಹೇಗೆ ತಾನೇ ಪರಿಚ್ಛಿನ್ನನಾದಾನು?

***ಇತಿ ಪರಕಾಯಸ್ಥಲಂ*** *ಇಲ್ಲಿಗೆ ಪರಕಾಯಸ್ಥಲವು ಮುಗಿಯಿತು.*

## 60. ಅಥ ಧರ್ಮಾಚಾರಸ್ಥಲಮ್

ಈಗ ಧರ್ಮಾಚಾರಸ್ಥಲವು

**(9 ಶ್ಲೋಕಗಳು)**

**ತಸ್ಯೈವ ಪರಕಾಯಸ್ಯ**
**ಸಮಾಚಾರೋ ಯ ಇಷ್ಯತೇ ।**
**ಸ ಧರ್ಮಃ ಸರ್ವಲೋಕಾನಾಮ್**
**ಉಪಕಾರಾಯ ಕಲ್ಪ್ಯತೇ ॥ 16–58**

ಆ ಪರಕಾಯನಾದ ಯೋಗಿಗೆ ಯಾವ ಆಚಾರವು ಇಷ್ಟವಾಗುತ್ತದೆಯೋ ಆ ಆಚಾರವೇ ಧರ್ಮವು. ಈ ಧರ್ಮವೇ ಜಗತ್ತಿನ ಎಲ್ಲ ಜನರ ಉಪಕಾರವಾಗಿ ಸಂಭವಿಸುತ್ತದೆ.

**ಅಹಿಂಸಾ ಸತ್ಯಮಸ್ತೇಯಮ್**
**ಬ್ರಹ್ಮಚರ್ಯಂ ದಯಾ ಕ್ಷಮಾ ।**
**ದಾನಂ ಪೂಜಾ ಜಪೋ ಧ್ಯಾನಮ್**
**ಇತಿ ಧರ್ಮಸ್ಯ ಸಂಗ್ರಹಃ ॥ 16–59**

ಅಹಿಂಸೆ, ಸತ್ಯ, ಅಸ್ತೇಯ, ಬ್ರಹ್ಮಚರ್ಯ, ದಯ, ಕ್ಷಮೆ, ದಾನ, ಪೂಜೆ, ಜಪ ಮತ್ತು ಧ್ಯಾನ – ಈ ಹತ್ತು ಧರ್ಮವನ್ನು ಸಂಗ್ರಹಿಸುವ ಸಾಧನಗಳಾಗಿರುತ್ತವೆ (ಪ್ರಾಣಿಗಳನ್ನು ಹಿಂಸಿಸದೆ ಇರುವುದು, ಸತ್ಯವನ್ನು ನುಡಿಯುವುದು, ಪರದ್ರವ್ಯವನ್ನು ಅಪರಿಹರಿಸದೇ ಇರುವುದು, ಬ್ರಹ್ಮಚರ್ಯವನ್ನು ಪಾಲಿಸುವುದು, ಪ್ರಾಣಿದಯೆ, ಸೈರಣೆ, ದಾನ, ಶಿವಲಿಂಗ ಪೂಜೆ, ಶಿವಮಂತ್ರ, ಜಪ ಮತ್ತು ಶಿವಧ್ಯಾನ – ಈ ಹತ್ತೂ ಆಚರಣೆಗಳು ಧರ್ಮಸಂಗ್ರಹದ ಕಾರಣಗಳಾಗಿರುತ್ತವೆ).

**ಶಿವೇನ ವಿಹಿತೋ ಯಸ್ಮಾತ್**
**ಆಗಮೈರ್ಧರ್ಮಸಂಗ್ರಹಃ ।**
**ತಸ್ಮಾತ್ತಮಾಚರನ್ ವಿದ್ವಾನ್**
**ತತ್ಪ್ರಸಾದಾಯ ಕಲ್ಪ್ಯತೇ ॥ 16–60**

ಈಗ ಹೇಳಿದ ಅಹಿಂಸಾದಿ ಧರ್ಮಸಂಗ್ರಹಗಳು ಆಗಮಗಳಲ್ಲಿ ಶಿವನಿಂದ ವಿಹಿತಗಳಾಗಿವೆ (ವಿಧಿಸಲ್ಪಟ್ಟಿವೆ). ಆದ್ದರಿಂದ ಅವುಗಳನ್ನು ಆಚರಿಸುವ ವಿದ್ವಾಂಸನು ಶಿವನ ಪ್ರಸಾದವನ್ನು (ಅನುಗ್ರಹವನ್ನು) ಪಡೆಯಲು ಸಮರ್ಥನಾಗುವನು.

**ಅಧರ್ಮಂ ನ ಸ್ಪೃಶೇತ್ ಕಿಂಚಿದ್**
**ವಿಹಿತಂ ಧರ್ಮಮಾಚರೇತ್ ।**
**ತಂ ಚ ಕಾಮವಿನಿರ್ಮುಕ್ತಮ್**
**ತಮಪಿ ಜ್ಞಾನಪೂರ್ವಕಮ್ ॥ 16–61**

ಸ್ವಲ್ಪವೂ ಕೂಡ ಅಧರ್ಮಾಚರಣೆಯನ್ನು ಮಾಡಕೂಡದು. ಕೇವಲ ವಿಹಿತ ಧರ್ಮಗಳನ್ನೇ (ಅಹಿಂಸಾದಿ ಧರ್ಮಗಳನ್ನೇ) ಆಚರಿಸಬೇಕು. ಅವುಗಳನ್ನು ಆಚರಿಸುವಾಗ **'ಕಾಮವಿನಿರ್ಮುಕ್ತ'**ವಾಗಿ (ಫಲಾಪೇಕ್ಷೆಯಿಲ್ಲದೆ) ಮತ್ತು ಜ್ಞಾನಪೂರ್ವಕವಾಗಿ ಆಚರಿಸಬೇಕು.

**ಆತ್ಮವತ್ ಸರ್ವಭೂತಾನಿ**
**ಸಂಪಶ್ಯೇದ್ ಯೋಗವಿತ್ತಮಃ ।**
**ಜಗದೇಕಾತ್ಮತಾಭಾವಾತ್**
**ನಿಗ್ರಹಾದಿವಿರೋಧತಃ ॥ 16–62**

ಯೋಗವನ್ನು ಬಲ್ಲ ಈ ಯೋಗೀಶ್ವರನು ಜಗತ್ತೆಲ್ಲವನ್ನು ಏಕಾತ್ಮ ಭಾವದಿಂದ (ಒಂದೇ ಆದ ಪರಬ್ರಹ್ಮ ಸ್ವರೂಪವೆಂಬ ಭಾವದಿಂದ ಕೂಡಿಕೊಂಡಿರುವ) ನಿಗ್ರಹಾದಿಗಳಿಲ್ಲದೆ (ನಿಗ್ರಹ, ಅನುಗ್ರಹಾದಿ ಭಾವನೆಗಳಿಲ್ಲದೆ) ಎಲ್ಲ ಪ್ರಾಣಿಗಳನ್ನು ತನ್ನಾತ್ಮ ಸ್ವರೂಪವಾಗಿಯೇ ಕಾಣುತ್ತಾನೆ.

**ಏಕ ಏವ ಶಿವಃ ಸಾಕ್ಷಾತ್**
**ಜಗದೇತದಿತಿ ಸ್ಫುಟಮ್ ।**

**ಪಶ್ಯತಃ ಕಿಂ ನ ಜಾಯೇತ**
**ಮಮಕಾರೋ ಹಿ ವಿಭ್ರಮಃ ॥ 16-63**

ಈ ಜಗವೆಲ್ಲವೂ ಒಬ್ಬನೇ ಆದ ಸಾಕ್ಷಾತ್ ಶಿವನೇ ಆಗಿರುವನು. ಇದು ನಿಶ್ಚಯವಾದುದು. ಹೀಗೆ ನೋಡುವ ಯೋಗಿಗೆ ಈ ಲೋಕದಲ್ಲಿ ಏನು ತಾನೇ ಆಗುವುದಿಲ್ಲ (ಯಾವುದು ತಾನೇ ದುರ್ಲಭವು). ಇನ್ನು ಇದು ನನ್ನದು ಮತ್ತು ಇದು ತನ್ನದೆಂಬ ಮಮಕಾರವಾದರೋ ವಿಶೇಷವಾದ ಭ್ರಮೆಯಾಗಿದೆ (ಈ ಭ್ರಾಂತಿಯು ಯೋಗಿಯಲ್ಲಿರುವುದಿಲ್ಲ).

**ಧರ್ಮ ಏವ ಸಮಸ್ತಾನಾಮ್**
**ಯತಃ ಸಂಸಿದ್ಧಿಕಾರಣಮ್ ।**
**ನಿಃಸ್ಪೃಹೋಽಪಿ ಮಹಾಯೋಗೀ**
**ಧರ್ಮಮಾರ್ಗಂ ಚ ನ ತ್ಯಜೇತ್ ॥ 16-64**

ಸರ್ವರಿಗೂ ಸಂಸಿದ್ಧಿಗೆ ಕಾರಣವಾದುದು (ಭೋಗ ಮೋಕ್ಷಗಳ ಸಿದ್ಧಿಗೆ ಕಾರಣವಾದುದು) ಧರ್ಮವೇ ಆಗಿರುತ್ತದೆ. ಆದ್ದರಿಂದ ಮಹಾಯೋಗಿಯು ನಿಸ್ಪೃಹನಾಗಿದ್ದರೂ ಸಹ ಧರ್ಮಾಚರಣೆಯನ್ನು ಬಿಡಕೂಡದು.

**ಜ್ಞಾನಾಮೃತೇನ ತೃಪ್ತೋಽಪಿ**
**ಯೋಗೀ ಧರ್ಮಂ ನ ಸಂತ್ಯಜೇತ್ ।**
**ಆಚಾರಂ ಮಹತಾಂ ದೃಷ್ಟ್ವಾ**
**ಪ್ರವರ್ತಂತೇ ಹಿ ಲೌಕಿಕಾಃ ॥ 16-65**

ಯೋಗಿಯಾದವನು ಜ್ಞಾನಾಮೃತದಿಂದ (ಶಿವಜ್ಞಾನಾಮೃತದಿಂದ) ತೃಪ್ತನಾಗಿದ್ದರೂ ಸಹ ಧರ್ಮವನ್ನು (ಅಹಿಂಸಾದಿ ಧರ್ಮಗಳನ್ನು) ಬಿಡಕೂಡದು. ಏಕೆಂದರೆ ಮಹಾತ್ಮರ ಆಚಾರವನ್ನು ನೋಡಿಯೇ ಲೌಕಿಕರು (ಸಾಮಾನ್ಯ ಜನರು) ವರ್ತಿಸುತ್ತಾರೆ (ಆದ್ದರಿಂದ ಲೋಕಸಂಗ್ರಹಕ್ಕಾಗಿ ಜ್ಞಾನಿಗಳು ಧರ್ಮವನ್ನು ಆಚರಿಸಬೇಕು).

**ಸದಾಚಾರಪ್ರಿಯಃ ಶಂಭುಃ**
**ಸದಾಚಾರೇಣ ಪೂಜ್ಯತೇ ।**
**ಸದಾಚಾರಂ ವಿನಾ ತಸ್ಯ**
**ಪ್ರಸಾದೋ ನೈವ ಜಾಯತೇ ॥ 16-66**

ಶಂಭುವು ಸದಾಚಾರ ಪ್ರಿಯನಾಗಿರುತ್ತಾನೆ ಮತ್ತು ಅವನು ಸದಾಚಾರಗಳಿಂದಲೇ ಪೂಜಿಸಲ್ಪಡುತ್ತಾನೆ. ಸದಾಚಾರವಿಲ್ಲದಿದ್ದರೆ ಶಿವನ ಪ್ರಸಾದವು ಉಂಟಾಗುವುದಿಲ್ಲ.

*ಇತಿ ಧರ್ಮಾಚಾರಸ್ಥಲಂ*
*ಇಲ್ಲಿಗೆ ಧರ್ಮಾಚಾರಸ್ಥಲವು ಮುಗಿಯಿತು.*

## 61. ಅಥ ಭಾವಾಚಾರಸ್ಥಲಮ್
ಈಗ ಭಾವಾಚಾರಸ್ಥಲವು
**(9 ಶ್ಲೋಕಗಳು)**

**ಭಾವ ಏವಾಸ್ಯ ಸರ್ವೇಷಾಮ್**
**ಭಾವಾಚಾರಃ ಪ್ರಕೀರ್ತಿತಃ ।**

**ಭಾವೋ ಮಾನಸಚೇಷ್ಟಾತ್ಮಾ**
**ಪರಿಪೂರ್ಣಃ ಶಿವಾಶ್ರಯಃ ॥ 16–67**

ಈ ಪೂರ್ವದಲ್ಲಿ ಹೇಳಿದ ಧರ್ಮಾಚಾರ ಸಂಪನ್ನಯೋಗಿಯ ಭಾವವೇ ಲೋಕದ ಜನರಿಗೆಲ್ಲಾ ಭಾವಾಚಾರವೆಂದು ಹೇಳಲ್ಪಡುವುದು (ಭಾವವೆಂದರೆ ಪರಿಪೂರ್ಣವಾಗಿ ಶಿವನನ್ನು ಆಶ್ರಯಿಸಿದ ಮನೋವೃತ್ತಿ ರೂಪವೆಂದು ತಿಳಿದುಕೊಳ್ಳಬೇಕು).

**ಭಾವನಾವಿಹಿತಂ ಕರ್ಮ**
**ಪಾವನಾದಪಿ ಪಾವನಮ್ ।**
**ತಸ್ಮಾದ್ಭಾವನಯಾ ಯುಕ್ತಮ್**
**ಪರಧರ್ಮಂ ಸಮಾಚರೇತ್ ॥ 16–68**

ಭಾವನೆಯಿಂದ ಮಾಡಲ್ಪಟ್ಟ ಕರ್ಮವೇ ಅತ್ಯಂತ ಪವಿತ್ರವಾದುದು. ಆದ್ದರಿಂದ ಶ್ರೇಷ್ಠ(ಪರ)ವಾದ ಶಿವಧರ್ಮಾಚರಣೆಯನ್ನು ಭಾವಯುಕ್ತವಾಗಿಯೇ ಆಚರಿಸಬೇಕು.

**ಭಾವೇನ ಹಿ ಮನಃಶುದ್ಧಿಃ**
**ಭಾವಶುದ್ಧಿಶ್ಚ ಕರ್ಮಣಾ ।**
**ಇತಿ ಸಂಚಿಂತ್ಯ ಮನಸಾ**
**ಯೋಗೀ ಭಾವಂ ನ ಸಂತ್ಯಜೇತ್ ॥ 16–69**

ಭಾವದಿಂದಲೇ (ಶಿವಭಾವನೆಯಿಂದಲೇ) ಮನಸ್ಸಿನ ಶುದ್ಧಿಯಾಗುವುದು. ಅದರಂತೆ ಆ ಶುದ್ಧವಾದ ಭಾವದಿಂದಲೇ ಕರ್ಮಗಳ ಫಲಸಿದ್ಧಿಯು ಆಗುವುದು. ಈ ರೀತಿಯಾಗಿ ಮನಃಪೂರ್ವಕವಾಗಿ ಚಿಂತಿಸಿದ ಯೋಗಿಯು ಭಾವವನ್ನು ಎಂದೂ ತ್ಯಜಿಸಬಾರದು.

**ಶಿವಭಾವನಯಾ ಸರ್ವಮ್**
**ನಿತ್ಯನೈಮಿತ್ತಿಕಾದಿಕಮ್ ।**
**ಕುರ್ವನ್ನಪಿ ಮಹಾಯೋಗೀ**
**ಗುಣದೋಷೈರ್ನ ಬಾಧ್ಯತೇ ॥ 16–70**

ಮಹಾಯೋಗಿಯು ಶಿವಭಾವನೆಯುಳ್ಳವನಾಗಿ ನಿತ್ಯನೈಮಿತ್ತಿಕಾದಿ ಎಲ್ಲ ಕರ್ಮಗಳನ್ನು ಮಾಡಿದರೂ ಸಹ ಆ ಕರ್ಮ ಸಂಬಂಧಿಗಳಾದ ಗುಣದೋಷಗಳಿಂದ ಅವನಿಗೆ ಯಾವ ಬಾಧೆಯೂ ಉಂಟಾಗುವುದಿಲ್ಲ.

**ಅಂತಃ ಪ್ರಕಾಶಮಾನಸ್ಯ**
**ಸಂವಿತ್ಸೂರ್ಯಸ್ಯ ಸಂತತಮ್ ।**
**ಭಾವೇನ ಯದುಪಸ್ಥಾನಮ್**
**ತತ್ಸಂಧ್ಯಾವಂದನಂ ವಿದುಃ ॥ 16–71**

ತನ್ನ ಅಂತರಂಗದಲ್ಲಿ (ತನ್ನ ಊರ್ಧ್ವ ಹೃತ್ಕಮಲದಲ್ಲಿ) ಯಾವಾಗಲೂ ಪ್ರಕಾಶಮಾನವಾಗಿರುವ ಸಂವಿತ್ ಸೂರ್ಯನನ್ನು (ಜ್ಞಾನಸೂರ್ಯನನ್ನು) ಭಾವನೆಯಿಂದ ಮಾಡುವ ಯಾವ ಉಪಸ್ಥಾನವಿದೆಯೋ (ಉಪಾಸನೆಯಿದೆಯೋ) ಅದನ್ನು ಸಂಧ್ಯಾವಂದನೆಯನ್ನಾಗಿ ವಿಧರು (ವೀರಶೈವ ಆಚಾರ್ಯರು) ತಿಳಿದಿರುತ್ತಾರೆ.

**ಆತ್ಮಜ್ಯೋತಿಷಿ ಸರ್ವೇಷಾಮ್**
**ವಿಷಯಾಣಾಂ ಸಮರ್ಪಣಮ್ ।**
**ಅಂತರ್ಮುಖೇನ ಭಾವೇನ**
**ಹೋಮಕರ್ಮೇತಿ ಗೀಯತೇ ॥ 16–72**

ತನ್ನ ಆತ್ಮಜ್ಯೋತಿಯಲ್ಲಿ (ಚಿದಗ್ನಿಯಲ್ಲಿ) ಅಂತರ್ಮುಖವಾದ ಭಾವನೆಯಿಂದ ಎಲ್ಲ ವಿಷಯಗಳನ್ನು ಸಮರ್ಪಣೆ ಮಾಡುವುದೇ (ಸಾಗರ ತರಂಗ ನ್ಯಾಯದಂತೆ ಲಯ ಚಿಂತನೆಯನ್ನು ಮಾಡುವುದೇ) ಹೋಮಕರ್ಮವೆಂದು ಹೇಳಲ್ಪಡುತ್ತದೆ.

**ಭಾವಯೇತ್ ಸರ್ವಕರ್ಮಾಣಿ**
**ನಿತ್ಯನೈಮಿತ್ತಿಕಾನಿ ಚ ।**
**ಶಿವಪ್ರೀತಿಕರಾಣ್ಯೇವ**
**ಸಂಗರಾಹಿತ್ಯಸಿದ್ಧಯೇ ॥ 16–73**

ಸಂಗರಾಹಿತ್ಯದ ಸಿದ್ಧಿಗಾಗಿ (ಸಂಸಾರ ಬಂಧನದ ನಿವೃತ್ತಿಗಾಗಿ) ತಾನು ಮಾಡುವ ಸರ್ವ ನಿತ್ಯಕರ್ಮ ಮತ್ತು ನೈಮಿತ್ತಿಕ ಕರ್ಮಗಳು ಶಿವನಲ್ಲಿ ಪ್ರೀತಿಯನ್ನು ಉಂಟು ಮಾಡುವುದಕ್ಕಾಗಿಯೇ ಇವೆ ಎಂದು ಭಾವಿಸಬೇಕು.

**ಶಿವೇ ನಿವೇಶ್ಯ ಸಕಲಮ್**
**ಕಾರ್ಯಾಕಾರ್ಯಂ ವಿವೇಕತಃ ।**
**ವರ್ತತೇ ಯೋ ಮಹಾಭಾಗಃ**
**ಸ ಸಂಗರಹಿತೋ ಭವೇತ್ ॥ 16–74**

ವಿವೇಕದಿಂದ (ಮಾಡುವವನೂ ನೀನೇ, ಮಾಡಿಸುವವನೂ ನೀನೆ ಮತ್ತು ಮಾಡಿದ ಕರ್ಮಫಲವೂ ನೀನೆ ಎಂಬ ವಿವೇಕಬುದ್ಧಿಯಿಂದ) ಯಾವ ಮಹಾನುಭಾವನು ತನ್ನ ಕಾರ್ಯ ಅಕಾರ್ಯಗಳನ್ನು (ಮಾಡಬೇಕಾದ ಮತ್ತು ಮಾಡಬಾರದ) ಎಲ್ಲ ಕರ್ಮಗಳನ್ನು ಶಿವನಿಗೆ ಸಮರ್ಪಿಸುವನೋ ಅವನೇ ಸಂಗರಹಿತನಾಗುವನು.

**ಆತ್ಮಾನಮಖಿಲಂ ವಸ್ತು**
**ಶಿವಮಾನಂದಚಿನ್ಮಯಮ್ ।**
**ಏಕಭಾವೇನ ಸತತಮ್**
**ಸಂಪಶ್ಯನ್ನೇವ ಪಶ್ಯತಿ ॥ 16–75**

ತನ್ನನ್ನು, ಸಕಲ ಜಗತ್ತನ್ನು ಮತ್ತು ಸಚ್ಚಿದಾನಂದ ಸ್ವರೂಪನಾದ ಶಿವನನ್ನು ಯಾವಾಗಲೂ ಒಂದೇ ಭಾವದಿಂದ ಯಾರು ನೋಡುವನೋ ಅವನೇ ಶಿವಸಾಕ್ಷಾತ್ಕಾರವನ್ನು ಪಡೆಯುವನು.

***ಇತಿ ಭಾವಾಚಾರಸ್ಥಲಂ*** *ಇಲ್ಲಿಗೆ ಭಾವಾಚಾರಸ್ಥಲವು ಮುಗಿಯಿತು.*

## 62. ಅಥ ಜ್ಞಾನಾಚಾರಸ್ಥಲಮ್
ಈಗ ಜ್ಞಾನಾಚಾರಸ್ಥಲವು
**(9 ಶ್ಲೋಕಗಳು)**

**ಅಸ್ಯ ಜ್ಞಾನಸಮಾಚಾರೋ**
**ಯೋಗಿನಃ ಸರ್ವದೇಹಿನಾಮ್ ।**
**ಜ್ಞಾನಾಚಾರೋ ಯದುಕ್ತೋಽಯಮ್**
**ಜ್ಞಾನಾಚಾರಃ ಸ ಕಥ್ಯತೇ ॥ 16–76**

ಭಾವಾಚಾರ ಸಂಪನ್ನನಾದ ಯೋಗೀಶ್ವರನ ಯಾವ ಜ್ಞಾನಾಚಾರವಿದೆಯೋ (ಜ್ಞಾನಕ್ಕೆ ತಕ್ಕ ಆಚಾರವಿದೆಯೋ) ಅದುವೇ ಎಲ್ಲ ಜೀವಿಗಳಿಗೆ ಜ್ಞಾನಾಚಾರವೆಂದು ಹೇಳಲ್ಪಡುತ್ತದೆ.

**ಶಿವಾದ್ವೈತಪರಂ ಜ್ಞಾನಮ್**

**ಜ್ಞಾನಮಿತ್ಯುಚ್ಯತೇ ಬುಧೈಃ ।**
**ಸಿದ್ಧೇನ ವಾಪ್ಯಸಿದ್ಧೇನ**
**ಫಲಂ ಜ್ಞಾನಾಂತರೇಣ ಕಿಮ್ ॥ 16–77**

ಶಿವಾದ್ವೈತ ಪರವಾದ ಜ್ಞಾನವೇ ಉತ್ಕೃಷ್ಟವಾದ ಜ್ಞಾನವೆಂಬುದಾಗಿ ಶಾಸ್ತ್ರಜ್ಞರು ಹೇಳುತ್ತಾರೆ. ಅದನ್ನು ಬಿಟ್ಟು ಉಳಿದ ಜ್ಞಾನಗಳು ಸಿದ್ಧವಾದರೇನು ಅಥವಾ ಅಸಿದ್ಧವಾದರೇನು? ಅದರಿಂದ ಯಾವ ಪ್ರಯೋಜನವೂ ಇರುವುದಿಲ್ಲ.

**ನಿರ್ಮಲಂ ಹಿ ಶಿವಜ್ಞಾನಮ್**
**ನಿಃಶ್ರೇಯಸಕರಂ ಪರಮ್ ।**
**ರಾಗದ್ವೇಷಾದಿಕಲುಷಮ್**
**ಭೂಯಃ ಸಂಸೃತಿಕಾರಣಮ್ ॥ 16–78**

ಶ್ರೇಷ್ಠವಾದ ಶಿವಜ್ಞಾನವು (ಶಿವಾದ್ವೈತ ಜ್ಞಾನವು) ನಿರ್ಮಲವಾದುದು ಮತ್ತು ನಿಃಶ್ರೇಯಸ್ಕರವಾದುದು (ಮುಕ್ತಿ ಪರವಾದುದು). ಇನ್ನೂ ರಾಗ ದ್ವೇಷಾದಿಗಳಿಂದ ಕಲುಷಿತವಾದ (ದೂಷಿತವಾದ) ದ್ವೈತ ಜ್ಞಾನವಾದರೋ ಮತ್ತೆ ಸಂಸಾರಕ್ಕೆ ಕಾರಣವಾಗುವುದು (ಆದ್ದರಿಂದ ಶಿವಾದ್ವೈತಜ್ಞಾನವೇ ಶ್ರೇಷ್ಠವಾದುದು).

**ಪರಿಪೂರ್ಣಂ ಮಹಾಜ್ಞಾನಮ್**
**ಪರತತ್ತ್ವಪ್ರಕಾಶಕಮ್ ।**
**ಅವಲಂಬ್ಯ ಪ್ರವೃತ್ತೋ ಯೋ**
**ಜ್ಞಾನಾಚಾರಃ ಸ ಉಚ್ಯತೇ ॥ 16–79**

ಪರಶಿವ ತತ್ತ್ವವನ್ನು ಪ್ರಕಾಶಗೊಳಿಸುವ, ಅಖಂಡವಾದ ಮಹಾಜ್ಞಾನವನ್ನು (ಶಿವಾದ್ವೈತ ಜ್ಞಾನವನ್ನು) ಅವಲಂಬಿಸಿಕೊಂಡು ಯಾವ ಆಚರಣೆಯು ನಡೆಯಲ್ಪಡುವುದೋ ಅದನ್ನೇ ಜ್ಞಾನಾಚಾರವೆಂದು ಹೇಳಲಾಗಿದೆ.

**ನಿರ್ವಿಕಲ್ಪೇ ಪರೇ ಧಾಮ್ನಿ**
**ನಿಷ್ಕಲೇ ಶಿವನಾಮನಿ ।**
**ಜ್ಞಾನೇನ ಯೋಜಯೇತ್ ಸರ್ವಮ್**
**ಜ್ಞಾನಾಚಾರೀ ಪ್ರಕೀರ್ತಿತಃ ॥ 16–80**

ನಿರ್ವಿಕಲ್ಪವಾದ (ಭೇದರಹಿತವಾದ), ನಿಷ್ಕಲವಾದ (ನಿರವಯವಾದ) ಶಿವನೆಂಬ ಹೆಸರಿನ ಪರಂಧಾಮದಲ್ಲಿ (ಪರಬ್ರಹ್ಮದಲ್ಲಿ) ಸರ್ವವನ್ನು (ಜಗತ್ತೆಲ್ಲವನ್ನೂ) ಜ್ಞಾನದಿಂದ (ಅಭೇದಜ್ಞಾನದಿಂದ) ಯಾವ ಯೋಗಿಯು ಸಂಯೋಜಿಸುವನೋ (ಕೂಡಿಸುವನೋ) ಅವನೇ ಜ್ಞಾನಾಚಾರಿಯೆಂದು ಹೇಳಲ್ಪಡುವನು.

**ಜ್ಞಾನಂ ಮುಕ್ತಿಪ್ರದಂ ಪ್ರಾಪ್ಯ**
**ಗುರುದೃಷ್ಟಿಪ್ರಸಾದತಃ ।**
**ಕಃ ಕುರ್ಯಾತ್ ಕರ್ಮಕಾರ್ಪಣ್ಯೇ**
**ವಾಂಛಾಂ ಸಂಸಾರವರ್ಧನೇ ॥ 16–81**

ಮುಕ್ತಿದಾಯಕವಾದ ಶಿವಾದ್ವೈತ ಜ್ಞಾನವನ್ನು ಗುರು (ಕೃಪಾ)ದೃಷ್ಟಿಯಿಂದ ಪಡೆದುಕೊಂಡ ಬಳಿಕ, ಸಂಸಾರವರ್ಧಕವಾದ ಕರ್ಮಕಾರ್ಪಣ್ಯದಲ್ಲಿ (ಕರ್ಮ ಕೋಟಲೆಗಳಲ್ಲಿ) ತೊಡಗಿಸಿಕೊಳ್ಳಲು ಯಾರು ತಾನೇ ಇಚ್ಛಿಸಬಲ್ಲರು?

**ಕರ್ಮ ಜ್ಞಾನಾಗ್ನಿನಾ ದಗ್ಧಮ್**
**ನ ಪ್ರರೋಹೇತ್ ಕಥಂಚನ ।**

**ಯದಾಹುಃ ಸಂಸೃತೇರ್ಮೂಲಮ್**
**ಪ್ರವಾಹಾನುಗತಂ ಬುಧಾಃ ॥ 16–82**

ಯಾವ ಕರ್ಮವನ್ನು ವಿದ್ವಾಂಸರು ಸಂಸಾರಕ್ಕೆ ಮೂಲ ಕಾರಣವನ್ನಾಗಿ ಹೇಳುವರೋ ಮತ್ತು ಯಾವ ಕರ್ಮವು ಜಲಪ್ರವಾಹ ನ್ಯಾಯದಂತೆ ಆನಾದಿಯಾಗಿ ಶರೀರವನ್ನು ಬಳಿವಿಡಿದು ಬಂದಿರುವುದೋ ಆ ಕರ್ಮವನ್ನು ಶಿವಾದ್ವೈತ ಜ್ಞಾನವೆಂಬ ಅಗ್ನಿಯಲ್ಲಿ ಸುಡಲಾಗಿ ಅದು ಯಾವ ಕಾರಣಕ್ಕೂ ಪುನಃ ಅಂಕುರಿಸುವುದಿಲ್ಲ.

**ಜ್ಞಾನೇನ ಹೀನಃ ಪುರುಷಃ**
**ಕರ್ಮಣಾ ಬದ್ಧ್ಯತೇ ಸದಾ ।**
**ಜ್ಞಾನಿನಃ ಕರ್ಮಸಂಕಲ್ಪಾ**
**ಭವಂತಿ ಕಿಲ ನಿಷ್ಫಲಾಃ ॥ 16–83**

ಶಿವಾದ್ವೈತ ಜ್ಞಾನವಿಲ್ಲದ ಪುರುಷನು ಕರ್ಮಜಾಲದಿಂದ ಯಾವಾಗಲೂ ಬಂಧಿಸಲ್ಪಡುತ್ತಾನೆ. ಆದರೆ ಶಿವಾದ್ವೈತ ಜ್ಞಾನಿಗಳಿಂದ ಮಾಡಲ್ಪಟ್ಟ ಕರ್ಮಗಳು ನಿಷ್ಫಲವಾಗಿರುವುದರಿಂದ ಅವುಗಳು ಬಂಧನಕಾರಿಯಾಗಿರುವುದಿಲ್ಲ.

**ಶುದ್ಧಾಚಾರೇ ಶುದ್ಧಭಾವೋ ವಿವೇಕೀ**
**ಜ್ಯೋತಿಃ ಪಶ್ಯನ್ ಸರ್ವತಶ್ಚೈವಮೇಕಮ್ ।**
**ಜ್ಞಾನಧ್ವಸ್ತಪ್ರಾಕೃತಾತ್ಮಪ್ರಪಂಚಃ**
**ಜೀವನ್ಮುಕ್ತಶ್ಚೇಷ್ಟತೇ ದಿವ್ಯಯೋಗೀ ॥ 16–84**
**– ಶಾಲಿನೀ ವೃತ್ತಮ್**

ಶುದ್ಧಾಚಾರಿಯು (ಧರ್ಮಾಚಾರ ಸಂಪನ್ನನು) ಶುದ್ಧ ಭಾವವುಳ್ಳವನೂ (ಭಾವಾಚಾರ ಸಂಪನ್ನನೂ ಆದ) ಮತ್ತು ವಿವೇಕಿಯೂ (ಜ್ಞಾನಚಾರಸ್ಥಲದ ಯೋಗಿಯು) ಎಲ್ಲೆಡೆಯಲ್ಲಿ ಜ್ಯೋತಿ ರೂಪನಾದ ಶಿವನೊಬ್ಬನನ್ನೇ ಕಾಣುತ್ತಾ, ತನಗುಂಟಾದ ಆ ಶಿವಾದ್ವೈತ ಜ್ಞಾನದಿಂದ ಪ್ರಕೃತಿಜನ್ಯವಾದ ದೇಹ ಪ್ರಪಂಚವನ್ನು ಧ್ವಂಸಮಾಡಿಕೊಂಡ (ದೇಹಾಭಿಮಾನವನ್ನು ಮತ್ತು ಪ್ರಪಂಚದಲ್ಲಿಯ ಭೇದಬುದ್ಧಿಯನ್ನು ನಾಶಮಾಡಿಕೊಂಡ) ಆ ದಿವ್ಯಯೋಗಿಯು ಜೀವನ್ಮುಕ್ತನಾಗಿ ಸಂಚರಿಸುತ್ತಾನೆ.

***ಇತಿ ಜ್ಞಾನಾಚಾರಸ್ಥಲಂ*** *ಇಲ್ಲಿಗೆ ಜ್ಞಾನಾಚಾರಸ್ಥಲವು ಮುಗಿಯಿತು.*

***ಓಂ ತತ್ಸತ್ ಇತಿ***
***ಶ್ರೀ ಶಿವಗೀತೇಷು ಸಿದ್ಧಾಂತಾಗಮೇಷು ಶಿವಾದ್ವೈತವಿದ್ಯಾಯಾಂ ಶಿವಯೋಗಶಾಸ್ತ್ರೇ ಶ್ರೀರೇಣುಕಾಗಸ್ತ್ಯಸಂವಾದೇ ವೀರಶೈವಧರ್ಮನಿರ್ಣಯೇ***
***ಶ್ರೀಶಿವಯೋಗಿಶಿವಾಚಾರ್ಯವಿರಚಿತೇ ಶ್ರೀಸಿದ್ಧಾಂತಶಿಖಾಮಣೌ ಲಿಂಗಸ್ಥಲಾಂತರ್ಗತ ಮಾಹೇಶ್ವರಸ್ಥಲೇ***
***ಕ್ರಿಯಾಗಮಸ್ಥಲಾದಿನವವಿಧಸ್ಥಲಪ್ರಸಂಗೋ ನಾಮ ಷೋಡಶಃ***
***ಪರಿಚ್ಛೇದಃ ॥***

*ಓಂ ತತ್ಸತ್ ಇಲ್ಲಿಗೆ ಶ್ರೀ ಶಿವನಿಂದ ಉಪದೇಶಿಸಲ್ಪಟ್ಟು ಶ್ರೀ ಸಿದ್ಧಾಂತಾ ಗಮಗಳಲ್ಲಿಯ ಶಿವಾದ್ವೈತವಿದ್ಯಾರೂಪವೂ, ಶಿವಯೋಗಶಾಸ್ತ್ರವೂ, ಶ್ರೀ ರೇಣುಕಾಗಸ್ತ್ಯ ಸಂವಾದರೂಪವೂ, ಶ್ರೀ ವೀರಶೈವಧರ್ಮನಿರ್ಣಯವೂ ಆದ ಶ್ರೀ ಸಿದ್ಧಾಂತ ಶಿಖಾಮಣಿಯಲ್ಲಿ ಲಿಂಗಸ್ಥಲಾಂತರ್ಗತ ಮಾಹೇಶ್ವರಸ್ಥಲದಲ್ಲಿಯ ಕ್ರಿಯಾಗಮಸ್ಥಲಾದಿ ಒಂಭತ್ತು ವಿಧ ಸ್ಥಲಪ್ರಸಂಗವೆಂಬ ಹೆಸರಿನ ಹದಿನಾರನೆಯ ಪರಿಚ್ಛೇದವು ಮುಗಿದುದು.*

# ಸಪ್ತದಶಃ ಪರಿಚ್ಛೇದಃ
ಹದಿನೇಳನೆಯ ಪರಿಚ್ಛೇದವು
**(86 ಶ್ಲೋಕಗಳು)**

## ಪ್ರಸಾದಿಸ್ಥಲಾಂತರ್ಗತನವವಿಧಲಿಂಗಸ್ಥಲಪ್ರಸಂಗಃ
ಪ್ರಸಾದಿಸ್ಥಲಾಂತರ್ಗತವಾದ ನವವಿಧಲಿಂಗಸ್ಥಲ ಪ್ರಸಂಗವು

## ಅಥ ಪ್ರಸಾದಿಸ್ಥಲಮ್
ಈಗ ಪ್ರಸಾದಿಸ್ಥಲವು
**(4 ಶ್ಲೋಕಗಳು)**

**॥ ಅಗಸ್ತ್ಯ ಉವಾಚ ॥**
**ಸ್ಥಲಾನಿ ತಾನಿ ಚೋಕ್ತಾನಿ**
**ಯಾನಿ ಮಾಹೇಶ್ವರಸ್ಥಲೇ ।**
**ವದಸ್ವ ಸ್ಥಲಭೇದಂ ಮೇ**
**ಪ್ರಸಾದಿಸ್ಥಲಸಂಶ್ರಿತಮ್ ॥ 17-1**

ಹೇ ರೇಣುಕ ಗಣೇಶ್ವರನೇ, ಮಾಹೇಶ್ವರಸ್ಥಲದಲ್ಲಿ ಯಾವ ಯಾವ ಸ್ಥಲ ಭೇದಗಳಿರುವವೋ ಅವುಗಳು ನಿಮ್ಮಿಂದ ಹೇಳಲ್ಪಟ್ಟವು. ಇನ್ನು ಪ್ರಸಾದಿಸ್ಥಲವನ್ನು ಆಶ್ರಯಿಸಿದ ಸ್ಥಲಭೇದಗಳನ್ನು ಎನಗೆ ಹೇಳುವಂತಹವನಾಗು.

**॥ ಶ್ರೀ ರೇಣುಕ ಉವಾಚ ॥**
**ಸ್ಥಲಭೇದಾ ನವ ಪ್ರೋಕ್ತಾಃ**
**ಪ್ರಸಾದಿಸ್ಥಲಸಂಶ್ರಿತಾಃ ।**
**ಕಾಯಾನುಗ್ರಹಣಂ ಪೂರ್ವಮ್**
**ಇಂದ್ರಿಯಾನುಗ್ರಹಂ ತತಃ ॥ 17-2**

**ಪ್ರಾಣಾನುಗ್ರಹಣಂ ಪಶ್ಚಾತ್**
**ತತಃ ಕಾಯಾರ್ಪಿತಂ ಮತಮ್।**
**ಕರಣಾರ್ಪಿತಮಾಖ್ಯಾತಮ್**
**ತತೋ ಭಾವಾರ್ಪಿತಂ ಮತಮ್ ॥ 17-3**

**ಶಿಷ್ಯಸ್ಥಲಂ ತತಃ ಪ್ರೋಕ್ತಮ್**
**ಶುಶ್ರೂಷಾಸ್ಥಲಮೇವ ಚ ।**
**ತತಃ ಸೇವ್ಯಸ್ಥಲಂ ಚೈಷಾಮ್**
**ಕ್ರಮಶಃ ಶೃಣು ಲಕ್ಷಣಮ್ ॥ 17-4**

ಹೇ ಮುನೀಶ್ವರನೇ, ಈ ಪ್ರಸಾದಿಸ್ಥಲದಲ್ಲಿ ಒಂಭತ್ತು ಸ್ಥಲ ಭೇದಗಳು ಹೇಳಲ್ಪಟ್ಟಿವೆ. ಅವುಗಳಲ್ಲಿ ಮೊದಲನೆಯದು ಕಾಯಾನುಗ್ರಹಸ್ಥಲ. ಅನಂತರ ಇಂದ್ರಿಯಾನುಗ್ರಹಸ್ಥಲ ಆಮೇಲೆ ಪ್ರಾಣಾನುಗ್ರಹಸ್ಥಲ. ಅದಾದ ಮೇಲೆ ಕಾಯಾರ್ಪಿತಸ್ಥಲ.

ನಂತರ ಕರಣಾರ್ಪಿತಸ್ಥಲ, ಅದಾದ ಮೇಲೆ ಭಾವಾರ್ಪಿತಸ್ಥಲ, ತರುವಾಯ ಶಿಷ್ಯಸ್ಥಲ, ಅದಾದ ಮೇಲೆ ಶುಶ್ರೂಷಾಸ್ಥಲ ಮತ್ತು ಕೊನೆಯದಾದ ಸೇವ್ಯ ಸ್ಥಲ. ಇನ್ನು ಕ್ರಮವಾಗಿ ಇವುಗಳ ಲಕ್ಷಣಗಳನ್ನು ಕೇಳು.

## 63. ಅಥ ಕಾಯಾನುಗ್ರಹಸ್ಥಲಮ್
ಈಗ ಕಾಯಾನುಗ್ರಹಸ್ಥಲವು
**(9 ಶ್ಲೋಕಗಳು)**

**ಅನುಗೃಹ್ಣಾತಿ ಯಲ್ಲೋಕಾನ್**
**ಸ್ವಕಾಯಂ ದರ್ಶಯನ್ನಸೌ ।**
**ತಸ್ಮಾದೇಷ ಸಮಾಖ್ಯಾತಃ**
**ಕಾಯಾನುಗ್ರಹನಾಮಕಃ ॥ 17–5**

ಈ (ಜ್ಞಾನಾಚಾರ ಸಂಪನ್ನನಾದ) ಸ್ವಕಾಯಯೋಗಿಯು ಈ ಲೋಕದಲ್ಲಿ ತನ್ನ ಕಾಯವನ್ನು (ದೇಹವನ್ನು) ತೋರಿಸುತ್ತಾ ಜನರಿಗೆ ಅನುಗ್ರಹ ಮಾಡುತ್ತಾನೆ. ಆದ್ದರಿಂದ ಈ ಯೋಗಿಗೆ 'ಕಾಯಾನುಗ್ರಾಹಕನು' ಎಂಬುದಾಗಿ ಹೇಳುತ್ತಾರೆ (ತನ್ನ ಕಾಯದ ದರ್ಶನ ಮಾತ್ರದಿಂದಲೇ ಜೀವರನ್ನು ಅನುಗ್ರಹಿಸುತ್ತಾನೆ. ಅಂತೆಯೇ ಇವನು ಕಾಯಾನುಗ್ರಾಹಕನಾಗಿದ್ದಾನೆ).

**ಯಥಾ ಶಿವೋಽನುಗೃಹ್ಣಾತಿ**
**ಮೂರ್ತಿಮಾವಿಶ್ಯ ದೇಹಿನಃ ।**
**ತಥಾ ಯೋಗೀ ಶರೀರಸ್ಥಃ**
**ಸರ್ವಾನುಗ್ರಾಹಕೋ ಭವೇತ್ ॥ 17–6**

ನಿಷ್ಕಲನಾದ ಶಿವನು ಹೇಗೆ ಲೀಲಾವಿಗ್ರಹಗಳಲ್ಲಿ ಪ್ರವೇಶಿಸಿ ಜೀವಿಗಳನ್ನು ಅನುಗ್ರಹಿಸುವನೋ ಹಾಗೇ ಈ ಯೋಗಿಯು ಶರೀರದಲ್ಲಿದ್ದುಕೊಂಡು (ತನ್ನ ದಿವ್ಯದೇಹದಲ್ಲಿದ್ದುಕೊಂಡು) ಸರ್ವರನ್ನು ಅನುಗ್ರಹಿಸುತ್ತಾನೆ.

**ಶಿವಃ ಶರೀರಯೋಗೇಽಪಿ**
**ಯಥಾ ಸಂಗವಿವರ್ಜಿತಃ ।**
**ತಥಾ ಯೋಗೀ ಶರೀರಸ್ಥೋ**
**ನಿಃಸಂಗೋ ವರ್ತತೇ ಸದಾ ॥ 17–7**

ಶಿವನು ತನ್ನ ಲೀಲಾವಿಗ್ರಹಗಳಲ್ಲಿ ಇರುವಂತಹವನಾಗಿ ಹೇಗೆ ಆ ವಿಗ್ರಹಗಳ ಸಂಗರಹಿತನಾಗಿರುತ್ತಾನೆಯೋ ಅದರಂತೆ ಶರೀರದಲ್ಲಿರುವ ಯೋಗಿಯೂ ಸಹ ಯಾವಾಗಲೂ ನಿಸ್ಸಂಗನಾಗಿರುತ್ತಾನೆ.

**ಶಿವಭಾವನಯಾ ಯುಕ್ತಃ**
**ಸ್ಥಿರಯಾ ನಿರ್ವಿಕಲ್ಪಯಾ ।**
**ಶಿವೋ ಭವತಿ ನಿರ್ಧೂತ–**
**ಮಾಯಾವೇಶಪರಿಪ್ಲವಃ ॥17–8**

ನಿರ್ವಿಕಲ್ಪವಾದ (ಭೇದಬುದ್ಧಿಯಿಲ್ಲದ) ಸ್ಥಿರವಾದ ಶಿವಭಾವನೆಯಿಂದ ಕೂಡಿಕೊಂಡ ಯೋಗೀಶ್ವರನು ಮಾಯಾವೇಶದಿಂದಾಗುವ ಭಾವನೆಗಳನ್ನು ಕೊಡಹಿಕೊಂಡವನಾಗಿ ಶಿವನೇ ತಾನಾಗಿರುತ್ತಾನೆ.

**ಚಿತ್ತವೃತ್ತಿಷು ಲೀನಾಸು**
**ಶಿವೇ ಚಿತ್ಸುಖಸಾಗರೇ ।**
**ಅವಿದ್ಯಾಕಲ್ಪಿತಂ ವಸ್ತು**
**ನಾನ್ಯತ್ ಪಶ್ಯತಿ ಸಂಯಮೀ ॥ 17–9**

ಈ ಯೋಗೀಶ್ವರನ ಚಿತ್ತವೃತ್ತಿಗಳು (ಮನೋವರ್ತನೆಗಳು) ಚಿದಾನಂದ ಸಾಗರನಾದ ಶಿವನಲ್ಲಿಯೇ ಲೀನವಾಗಿರುವುದರಿಂದ ಈ ಸಂಯಮಿಯು ಅವಿದ್ಯಾಕಲ್ಪಿತವಾದ ಯಾವ ವಸ್ತುವನ್ನೂ ನೋಡುವುದಿಲ್ಲ.

**ನೇದಂ ರಜತಮಿತ್ಯುಕ್ತೇ**
**ಯಥಾ ಶುಕ್ತಿಃ ಪ್ರಕಾಶತೇ ।**
**ನೇದಂ ಜಗದಿತಿ ಜ್ಞಾತೇ**
**ಶಿವತತ್ತ್ವಂ ಪ್ರಕಾಶತೇ ॥ 17–10**

ಶುಕ್ತಿಯಲ್ಲಿ (ಕಪ್ಪೆಚಿಪ್ಪಿನಲ್ಲಿ) ಬೆಳ್ಳಿ ತೋರುತ್ತಿರುವಾಗ ಇದು ಬೆಳ್ಳಿಯಲ್ಲ ಎಂಬುದಾಗಿ ಯಥಾರ್ಥ ಜ್ಞಾನವಾದರೂ ಹೇಗೆ ಶುಕ್ತಿಯೇ ಪ್ರಕಾಶಿಸುವುದೋ ಅದರಂತೆ ಇದು ಜಗತ್ತಲ್ಲ ಎಂಬ ತಿಳುವಳಿಕೆಯುಂಟಾಗಲು ಆಗ ಶಿವತತ್ತ್ವವೇ ಪ್ರಕಾಶಿಸುತ್ತದೆ.

**ಯಥಾ ಸ್ವಪ್ನಕೃತಂ ವಸ್ತು**
**ಪ್ರಬೋಧೇನೈವ ಶಾಮ್ಯತಿ ।**
**ತಥಾ ಶಿವಸ್ಯ ವಿಜ್ಞಾನೇ**
**ಸಂಸಾರಂ ನೈವ ಪಶ್ಯತಿ ॥ 17–11**

ಸ್ವಪ್ನದಲ್ಲಿ ತೋರುವ ವಸ್ತುಗಳು ಎಚ್ಚರಿಕೆಯಾದ ಮೇಲೆ ಹೇಗೆ ಅಳಿದು ಹೋಗುವವೋ, ಅದರಂತೆ ಶಿವಜ್ಞಾನವಾಗಲು ಯೋಗಿಯು ಸಂಸಾರವನ್ನು ನೋಡುವುದಿಲ್ಲ.

**ಅಜ್ಞಾನಮೇವ ಸರ್ವೇಷಾಮ್**
**ಸಂಸಾರಭ್ರಮಕಾರಣಮ್ ।**
**ತನ್ನಿವೃತ್ತೌ ಕಥಂ ಭೂಯಃ**
**ಸಂಸಾರಭ್ರಮದರ್ಶನಮ್ ॥ 17–12**

ಎಲ್ಲರ ಸಂಸಾರ ಭ್ರಾಂತಿಗೆ ಕಾರಣವಾದದ್ದು ಅಜ್ಞಾನವೇ ಆಗಿರುತ್ತದೆ. ಆ ಅಜ್ಞಾನವು ನಿವೃತ್ತಿಯಾಗಲು ಮತ್ತು ಸಂಸಾರ ಭ್ರಾಂತಿಯ ದರ್ಶನವು ಹೇಗೆ ಆದೀತು?

**ಗಲಿತಾಹಂಕೃತಿಗ್ರಂಥಿಃ**
**ಕ್ರೀಡಾಕಲ್ಪಿತವಿಗ್ರಹಃ ।**
**ಜೀವನ್ಮುಕ್ತಶ್ಚರೇದ್ ಯೋಗೀ**
**ದೇಹಿವನ್ನಿರುಪಾಧಿಕಃ ॥ 17–13**

ಮೂಲ ಅಹಂಕಾರ ಗ್ರಂಥಿಯನ್ನು ನಿವಾರಿಸಿಕೊಂಡ, ವಿನೋದಕ್ಕಾಗಿ ಧರಿಸಿದ ಶರೀರವುಳ್ಳವನಾದ, ಉಪಾಧಿರಹಿತನಾದ ಈ ಯೋಗಿಯು, ಜೀವನ್ಮುಕ್ತನಾಗಿ ದೇಹಿಯಂತೆ (ಸಾಮಾನ್ಯ ಜೀವಿಯಂತೆ) ಚರಿಸುವನು.

***ಇತಿ ಕಾಯಾನುಗ್ರಹಸ್ಥಲಂ*** *ಇಲ್ಲಿಗೆ ಕಾಯಾನುಗ್ರಹಸ್ಥಲವು ಮುಗಿಯಿತು.*

## 64. ಅಥ ಇಂದ್ರಿಯಾನುಗ್ರಹಸ್ಥಲಮ್

ಈಗ ಇಂದ್ರಿಯಾನುಗ್ರಹಸ್ಥಲವು

**(10 ಶ್ಲೋಕಗಳು)**

**ದರ್ಶನಾತ್ ಪರಕಾಯಸ್ಯ**
**ಕರಣಾನಾಂ ವಿವೇಕತಃ ।**
**ಇಂದ್ರಿಯಾನುಗ್ರಹಃ ಪ್ರೋಕ್ತಃ**
**ಸರ್ವೇಷಾಂ ತತ್ತ್ವವೇದಿಭಿಃ ॥ 17–14**

(ಕಾಯಾನುಗ್ರಹಿಯಾದ) ಪರಯೋಗಿಯ ದರ್ಶನದಿಂದ ಮತ್ತು ಅವನಲ್ಲಿರುವ ಇಂದ್ರಿಯಗಳ ವಿವೇಕದಿಂದ ಎಲ್ಲರಲ್ಲಿ ಉಂಟಾಗುವ ಕರಣಗಳ ವಿವೇಕವೇ ಇಂದ್ರಿಯಾನುಗ್ರಹವೆಂದು ಶಿವತತ್ತ್ವಜ್ಞಾನಿಗಳು ಹೇಳುತ್ತಾರೆ.

**ಇಂದ್ರಿಯಾಣಾಂ ಸಮಸ್ತಾನಾಮ್**
**ಸ್ವಾರ್ಥೇಷು ಸತಿ ಸಂಗಮೇ ।**
**ರಾಗೋ ವಾ ಜಾಯತೇ ದ್ವೇಷಃ**
**ತೌ ಯೋಗೀ ಪರಿವರ್ಜಯೇತ್ ॥ 17–15**

ಎಲ್ಲಾ ಇಂದ್ರಿಯಗಳು (ಪಂಚಜ್ಞಾನೇಂದ್ರಿಯ, ಪಂಚಕರ್ಮೇಂದ್ರಿಯಗಳು, ಇಂದ್ರಿಯ ವ್ಯಾಪಾರವನ್ನು ಪಂಚಸೂತ್ರಗಳಿಂದ ಹೇಳಲಾಗಿದೆ) ತಮ್ಮ ತಮ್ಮ ವಿಷಯಗಳೊಂದಿಗೆ ಸಂಬಂಧವಾಗಲು ಮನಸ್ಸಿನಲ್ಲಿ ರಾಗವೇ ಆಗಲಿ ಅಥವಾ ದ್ವೇಷವೇ ಆಗಲಿ ಉತ್ಪನ್ನವಾಗುತ್ತದೆ. ಆದರೆ ಯೋಗಿಯಾದವನು ಅವೆರಡನ್ನೂ ಪರಿತ್ಯಜಿಸುವವನಾಗಬೇಕು.

**ಇಂದ್ರಿಯಾಣಾಂ ಬಹಿರ್ವೃತ್ತಿಃ**
**ಪ್ರಪಂಚಸ್ಯ ಪ್ರಕಾಶಿನೀ ।**
**ಅಂತಃ ಶಿವೇ ಸಮಾವೇಶೋ**
**ನಿಷ್ಪ್ರಪಂಚಸ್ಯ ಕಾರಣಮ್ ॥ 17–16**

ಇಂದ್ರಿಯಗಳ ಬಹಿರ್ಮುಖ ಪ್ರವೃತ್ತಿಯಿಂದ ಪ್ರಪಂಚವು ಪ್ರಕಾಶಿಸುವುದು. ಅದೇ ಇಂದ್ರಿಯಗಳು ಅಂತರ್ಮುಖಗೊಂಡು ಶಿವನಲ್ಲಿ ಐಕ್ಯಗೊಳ್ಳಲು ಅದು ನಿಷ್ಪ್ರಪಂಚಕ್ಕೆ ಕಾರಣವಾಗುವುದು (ಅಂದರೆ ಪ್ರಪಂಚವು ಪ್ರಕಾಶಿಸುವುದಿಲ್ಲ).

**ಕ್ಷಣಮಂತಃ ಶಿವಂ ಪಶ್ಯನ್**
**ಕೇವಲೇನೈವ ಚೇತಸಾ ।**
**ಬಾಹ್ಯಾರ್ಥಾನಾಮನುಭವಮ್**
**ಕ್ಷಣಂ ಕುರ್ವನ್ ದೃಗಾದಿಭಿಃ ॥ 17–17**
**ಸರ್ವೇಂದ್ರಿಯನಿರೂಢೋಽಪಿ**
**ಸರ್ವೇಂದ್ರಿಯವಿಹೀನವಾನ್ ।**
**ಶಿವಾಹಿತಮನಾ ಯೋಗೀ**
**ಶಿವಂ ಪಶ್ಯತಿ ನಾಪರಮ್ ॥ 17–18**

ಆ ಶಿವಯೋಗಿಯು ಅಂತರ್ಮುಖನಾಗಿ ಕೇವಲ ಚಿತ್ತದಿಂದ ತನ್ನೊಳಗೆ ಕ್ಷಣಕಾಲ ಶಿವನನ್ನು ನೋಡುತ್ತಾ, ಕೆಲವು ಕಾಲ ಚಕ್ಷುರಾದಿ ಬಾಹ್ಯೇಂದ್ರಿಯಗಳಿಂದ ಶಬ್ದಾದಿ ವಿಷಯಗಳನ್ನು ಅನುಭವಿಸುತ್ತಾ, ಹೀಗೆ ಸರ್ವೇಂದ್ರಿಯಗಳೊಂದಿಗೆ ಕೂಡಿಕೊಂಡಿದ್ದರೂ ಸರ್ವೇಂದ್ರಿಯಗಳಿಲ್ಲದವನಾಗಿ ಶಿವನಲ್ಲಿ ಆಸಕ್ತವಾದ ಮನಸ್ಸುಳ್ಳ ಆ ಯೋಗಿಯು ಶಿವನನ್ನೇ ಕಾಣುತ್ತಾನೆಯೇ ಹೊರತು ಮತ್ತಾವುದನ್ನೂ ಕಾಣುವುದಿಲ್ಲ.

**ನ ಜರಾ ಮರಣಂ ನಾಸ್ತಿ**
**ನ ಪಿಪಾಸಾ ನ ಚ ಕ್ಷುಧಾ ।**
**ಶಿವಾಹಿತೇಂದ್ರಿಯಸ್ಯಾಸ್ಯ**
**ನಿರ್ಮಾನಸ್ಯ ಮಹಾತ್ಮನಃ ॥ 17–19**

ಶಿವನಲ್ಲಿಯೇ ಸಕಲೇಂದ್ರಿಯ ವ್ಯಾಪಾರಗಳನ್ನು ಅಡಗಿಸಿಕೊಂಡ ನಿರ್ಮಾನಿಯಾದ (ದೇಹಾದಿಗಳ ಅಭಿಮಾನ ರಹಿತನಾದ), ಮಹಾತ್ಮನಾದ ಈ ಇಂದ್ರಿಯಾನುಗ್ರಹಸ್ಥಲದ ಯೋಗಿಗೆ (ದೇಹಧರ್ಮಗಳಾದ) ಮುಪ್ಪು, ಸಾವುಗಳಾಗಲಿ, ಪ್ರಾಣಧರ್ಮಗಳಾದ ಹಸಿವೆ, ನೀರಡಿಕೆಗಳಾಗಲಿ ಇರುವುದಿಲ್ಲ.

**ಮನೋ ಯತ್ರ ಪ್ರವರ್ತೇತ**
**ತತ್ರ ಸರ್ವೇಂದ್ರಿಯಸ್ಥಿತಿಃ ।**
**ಶಿವೇ ಮನಸಿ ಸಲ್ಲೀನೇ**
**ಕ್ವ ಚೇಂದ್ರಿಯವಿಚಾರಣಾ ॥ 17–20**

ಮನಸ್ಸು ಎಲ್ಲಿ ವ್ಯವಹರಿಸುವುದೋ ಅಲ್ಲಿಯೇ ಎಲ್ಲ ಇಂದ್ರಿಯಗಳು ವ್ಯವಹರಿಸುವುವು. ಆ ಮನಸ್ಸು ಶಿವನಲ್ಲಿಯೇ ಚೆನ್ನಾಗಿ ಲೀನವಾದರೆ ಇಂದ್ರಿಯಗಳು ಬೇರೆ ಕಡೆಯಲ್ಲಿ ಹೇಗೆ ತಾನೆ ಚರಿಸುವುವು?

**ಯದ್ಯತ್ ಪಶ್ಯನ್ ದೃಶಾ ಯೋಗೀ**
**ಮನಸಾ ಚಿಂತಯತ್ಯಪಿ ।**
**ತತ್ತತ್ ಸರ್ವಂ ಶಿವಾಕಾರಮ್**
**ಸಂವಿದ್ರೂಪಂ ಪ್ರಕಾಶತೇ ॥ 17–21**

ಯೋಗಿಯು ತನ್ನ ಕಣ್ಣಿನಿಂದ ಯಾವುದನ್ನು ನೋಡುವನೋ ಮತ್ತು ಮನಸ್ಸಿನಿಂದ ಯಾವುದನ್ನು ಚಿಂತಿಸುವನೋ, ಅದೆಲ್ಲವೂ ಅವನಿಗೆ ಅರಿವಿನ ಸ್ವರೂಪದ ಶಿವಸ್ವರೂಪವಾಗಿ ಪ್ರಕಾಶಿಸುತ್ತಿರುತ್ತದೆ.

**ಕರಣೈಃ ಸಹಿತಂ ಪ್ರಾಣಮ್**
**ಮನಸ್ಯಾಧಾಯ ಸಂಯಮೀ ।**
**ಯೋಜಯೇತ್ ಸ ಶಿವಃ ಸಾಕ್ಷಾತ್**
**ಯತ್ರ ನಾಸ್ತಿ ಜಗದ್ಭ್ರಮಃ ॥ 17–22**

ನೇತ್ರಾದಿ ಕರಣಗಳಿಂದ ಕೂಡಿದ ಪ್ರಾಣವಾಯುವನ್ನು ಮನಸ್ಸಿನಲ್ಲಿ ಇರಿಸಿ, ಸಂಯಮಿಯಾದ ಆ ಯೋಗಿಯು ಆ ಮನಸ್ಸನ್ನು ಯಾವ ಶಿವನಲ್ಲಿ ಯೋಜಿಸುವನೋ ಅವನು ಸಾಕ್ಷಾತ್ ಶಿವನೇ ಆಗಿದ್ದಾನೆ. ಅವನಿಗೆ ಜಗತ್ತಿನ ಭ್ರಮೆಯು ಇರುವುದಿಲ್ಲ.

**ಸರ್ವೇಂದ್ರಿಯಪ್ರವೃತ್ತ್ಯಾ ಚ**
**ಬಹಿರಂತಃ ಶಿವಂ ಯಜನ್ ।**
**ಸ್ವಚ್ಛಂದಚಾರೀ ಸರ್ವತ್ರ**
**ಸುಖೀ ಭವತಿ ಸಂಯಮೀ ॥ 17–23**

ಸಂಯಮಿಯು (ಇಂದ್ರಿಯಾನುಗ್ರಹಸ್ಥಲದ ಯೋಗಿಯು) ತನ್ನ ಸರ್ವೇಂದ್ರಿಯಗಳ ಪ್ರವೃತ್ತಿಯಿಂದ (ಅಂತರಿಂದ್ರಿಯ ಬಹಿರಿಂದ್ರಿಯ ವ್ಯಾಪಾರದಿಂದ) ಒಳಹೊರಗೂ ಶಿವನನ್ನು (ಪ್ರಾಣಲಿಂಗವನ್ನು) ಪೂಜಿಸುತ್ತಾ ಸ್ವತಂತ್ರವಾಗಿ ಎಲ್ಲೆಡೆ ಸಂಚರಿಸುತ್ತಾನೆ.

***ಇತಿ ಇಂದ್ರಿಯಾನುಗ್ರಹಸ್ಥಲಂ*** *ಇಲ್ಲಿಗೆ ಇಂದ್ರಿಯಾನುಗ್ರಹಸ್ಥಲವು ಮುಗಿಯಿತು.*

## 65. ಅಥ ಪ್ರಾಣಾನುಗ್ರಹಸ್ಥಲಮ್

ಈಗ ಪ್ರಾಣಾನುಗ್ರಹಸ್ಥಲವು

**(10 ಶ್ಲೋಕಗಳು)**

**ಶಿವಸ್ಯ ಪರಕಾಯಸ್ಯ**
**ಯತ್ ತಾತ್ಪರ್ಯಾವಲೋಕನಮ್ ।**

**ತತ್ಪ್ರಾಣಾನುಗ್ರಹಃ ಪ್ರೋಕ್ತಃ**
**ಸರ್ವೇಷಾಂ ತತ್ತ್ವದರ್ಶಿಭಿಃ ॥ 17–24**

ಪರಕಾಯನಾದ (ಪರಬ್ರಹ್ಮವೇ ದೇಹವಾಗುಳ್ಳ), ಶಿವಸ್ವರೂಪನಾದ ಯೋಗಿಯ ಯಾವ ತಾತ್ಪರ್ಯಾವಲೋಕನವಿದೆಯೋ (ಜಗತ್ತೆಲ್ಲವನ್ನು ಶಿವನೆಂದು ನೋಡುವ ಯಾವ ನಿರ್ಣಯವಿದೆಯೋ) ಅದುವೇ ಜಗತ್ತಿನ ಎಲ್ಲ ಜೀವಿಗಳಿಗೆ ತತ್ತ್ವದರ್ಶಿಗಳಿಂದ (ಶಿವಾದ್ವೈತ ತತ್ತ್ವಜ್ಞಾನಿಗಳಿಂದ) ಪ್ರಾಣಾನುಗ್ರಹವೆಂದು ಹೇಳಲ್ಪಡುತ್ತದೆ (ತನ್ನ ಪ್ರಾಣವನ್ನು ಪರಮಾತ್ಮನಲ್ಲೇ ಲಯಗೊಳಿಸಿ ಆ ಪರಶಿವನ ತತ್ತ್ವವನ್ನೇ ನೋಡುತ್ತಿರುವ ಆ ಸ್ಥಿತಿಯು, ಜಗತ್ತಿನ ಜನರಿಗೆ ಪ್ರಾಣಾನುಗ್ರಹವಾಗಿ ಪರಿವರ್ತಿಸುವುದು).

**ಪ್ರಾಣೋ ಯಸ್ಯ ಲಯಂ ಯಾತಿ**
**ಶಿವೇ ಪರಮಕಾರಣೇ ।**
**ಕುತಸ್ತಸ್ಯೇಂದ್ರಿಯಸ್ಫೂರ್ತಿಃ**
**ಕುತಃ ಸಂಸಾರದರ್ಶನಮ್ ॥ 17–25**

ಪರಮ ಕಾರಣನಾದ, ಎಲ್ಲ ಕಾರಣಗಳಿಗೂ ಕಾರಣನಾದ ಪರಶಿವನಲ್ಲಿ ಯಾವ ಯೋಗಿಯ ಪ್ರಾಣವಾಯುವು ಲಯವನ್ನು ಹೊಂದುವುದೋ ಅಂತಹ ಪ್ರಾಣಾನುಗ್ರಾಹಕನಾದ ಯೋಗಿಗೆ ಇಂದ್ರಿಯಗಳ ಸ್ಫೂರ್ತಿಯಾಗಲಿ ಅಥವಾ ಸಂಸಾರದರ್ಶನವೇ ಆಗಲಿ ಎಲ್ಲಿರುವುದು?

**ಕರಣೇಷು ನಿವೃತ್ತೇಷು**
**ಸ್ವಾರ್ಥಸಂಗಾತ್ ಪ್ರಯತ್ನತಃ ।**
**ತೈಃ ಸಮಂ ಪ್ರಾಣಮಾರೋಪ್ಯ**
**ಸ್ವಾಂತೇ ಶಾಂತಮತಿಃ ಸ್ವಯಮ್ ॥ 17–26**

ಕರಣಗಳು (ಅಂತರಿಂದ್ರಿಯ ಬಹಿರಿಂದ್ರಿಯಗಳು) ಸ್ವಾರ್ಥಸಂಗದಿಂದ (ತಮ್ಮ ತಮ್ಮ ವಿಷಯಗಳ ಸಂಗದಿಂದ) ಪ್ರಯತ್ನಪೂರ್ವಕವಾಗಿ ನಿವೃತ್ತಿಗೊಳಿಸಿ, ಆ ಇಂದ್ರಿಯಗಳೊಡನೆ ಪ್ರಾಣವನ್ನು ಸಂಯೋಜಿಸಿ ನಿಶ್ಚಲಗೊಳಿಸಿ ಯೋಗಿಯು ತನ್ನಂತರಂಗದಲ್ಲಿ ತಾನೇ ಶಾಂತಮನಸ್ಕನಾಗುತ್ತಾನೆ (ರಾಗ ದ್ವೇಷಗಳಿಲ್ಲ ದವನಾಗುತ್ತಾನೆ).

**ಶಾಂತತ್ವಾತ್ ಪ್ರಾಣವೃತ್ತೀನಾಮ್**
**ಮನಃ ಶಾಮ್ಯತಿ ವೃತ್ತಿಭಿಃ ।**
**ತಚ್ಛಾಂತೌ ಯೋಗಿನಾಂ ಕಿಂಚಿತ್**
**ಶಿವಾದನ್ಯನ್ನ ದೃಶ್ಯತೇ ॥ 17–27**

ಪ್ರಾಣವೃತ್ತಿಗಳು (ರೇಚಕ ಪೂರಕವಾದ ಪ್ರಾಣವೃತ್ತಿಗಳು) ಶಾಂತವಾದಾಗ (ಕೇವಲ ಕುಂಭಕ ಸ್ಥಿತಿಯಲ್ಲಿದ್ದಾಗ) ಮನಸ್ಸು ತನ್ನ ಸಂಕಲ್ಪ ವಿಕಲ್ಪ ರೂಪವಾದ ವ್ಯವಹಾರಗಳನ್ನು ಬಿಟ್ಟು ಶಾಂತವಾಗುತ್ತದೆ. ಹೀಗೆ ಆ ಮನಸ್ಸು ಶಾಂತವಾಗಲು ಯೋಗಿಯು ಶಿವನ ಹೊರತಾಗಿ ಬೇರೆ ಯಾವುದನ್ನೂ ಸ್ವಲ್ಪವೂ ನೋಡುವುದಿಲ್ಲ.

**ಪ್ರಾಣ ಏವ ಮನುಷ್ಯಾಣಾಮ್**
**ದೇಹಧಾರಣಕಾರಣಮ್ ।**
**ತದಾಧಾರಃ ಶಿವಃ ಪ್ರೋಕ್ತಃ**
**ಸರ್ವಕಾರಣಕಾರಣಮ್ ॥17–28**

ಮನುಷ್ಯರ ದೇಹಧಾರಣಕ್ಕೆ ಪ್ರಾಣವೇ ಕಾರಣವಾಗಿರುತ್ತದೆ. ಸರ್ವಕಾರಣಗಳಿಗೂ ಕಾರಣನಾದ ಶಿವನು ಆ ಪ್ರಾಣಕ್ಕೆ ಆಧಾರವಾಗಿರುವನೆಂದು ಹೇಳಲಾಗಿದೆ.

**ನಿರಾಧಾರಃ ಶಿವಃ ಸಾಕ್ಷಾತ್**
**ಪ್ರಾಣಸ್ತೇನ ಪ್ರತಿಷ್ಠಿತಃ ।**
**ತದಾಧಾರಾ ತನುರ್ಜ್ಞೇಯಾ**
**ಜೀವೋ ಯೇನೈವ ಚೇಷ್ಟತೇ ॥ 17–29**

ಶಿವನು ಸಾಕ್ಷಾತ್ ನಿರಾಧಾರನಾಗಿದ್ದು ಅವನಿಂದಲೇ ಪ್ರಾಣವು ಪ್ರತಿಷ್ಠಿತಗೊಂಡಿದೆ. ಶರೀರವು ಆ ಪ್ರಾಣದ ಆಧಾರದಲ್ಲಿರುತ್ತದೆ ಮತ್ತು ಜೀವಾತ್ಮನು ಆ ಪ್ರಾಣಶಕ್ತಿಯಿಂದಲೇ ವ್ಯವಹರಿಸುತ್ತಿರುತ್ತಾನೆ.

**ಶಿವೇ ಪ್ರಾಣೋ ವಿಲೀನೋಽಪಿ**
**ಯೋಗಿನೋ ಯೋಗಮಾರ್ಗತಃ ।**
**ಸ್ವಶಕ್ತಿವಾಸನಾಯೋಗಾದ್**
**ಧಾರಯತ್ಯೇವ ವಿಗ್ರಹಮ್ ॥ 17–30**

ಯೋಗಿಗಳು ಯೋಗ ಮಾರ್ಗದಿಂದ (ಕುಂಭಕ ರೂಪವಾದ ಯೋಗಮಾರ್ಗದಿಂದ) ಶಿವನಲ್ಲಿ ತಮ್ಮ ಪ್ರಾಣವನ್ನು ವಿಲೀನಗೊಳಿಸಿಕೊಂಡರೂ ಸಹ **'ಸ್ವಶಕ್ತಿವಾಸನಾ'** ಯೋಗದಿಂದ (ತನ್ನದೇ ಆದ ಅವಿದ್ಯಾಶಕ್ತಿಯಲ್ಲಿರುವ ವಿಕ್ಷೇಪ ಸಂಸ್ಕಾರಗಳ ಬಲದಿಂದ) ತನ್ನ ದೇಹವನ್ನು ಧರಿಸಿಕೊಂಡು ಇರುತ್ತಾರೆ.

**ಸ ಚಾಭ್ಯಾಸವಶಾದ್ ಭೂಯಃ**
**ಸರ್ವತತ್ತ್ವಾತಿವರ್ತಿನಿ ।**
**ನಿಷ್ಕಲಂಕೇ ನಿರಾಕಾರೇ**
**ನಿರಸ್ತಾಶೇಷವಿಕ್ಲವೇ ॥ 17–31**

**ಚಿದ್ವಿಲಾಸಪರಿಸ್ಫೂರ್ತಿ–**
**ಪರಿಪೂರ್ಣಸುಖಾಹ್ವಯೇ ।**
**ಶಿವೇ ವಿಲೀನಃ ಸರ್ವಾತ್ಮಾ**
**ಯೋಗೀ ಚಲತಿ ನ ಕ್ವಚಿತ್ ॥ 17–32**

ಸರ್ವತತ್ತ್ವಗಳನ್ನು ಮೀರಿ ಇರುವ (ಭೂಮ್ಯಾದಿ–ಶಿವಾಂತಗಳಾದ 36 ತತ್ತ್ವಗಳನ್ನು ಮೀರಿ ಇರುವ), ನಿಷ್ಕಲಂಕನಾದ (ದೋಷರಹಿತನಾದ), ನಿರಾಕಾರನಾದ (ಪ್ರಾಕೃತಿಕ ಆಕಾರರಹಿತನಾದ), ಯಾವ ಬಾಧೆಗಳೂ ಇಲ್ಲದ ಚಿದ್ವಿಲಾಸ ಪರಿಸ್ಫೂರ್ತಿಯಿಂದ (ಅರಿವಿನ ವಿಲಾಸದ ಆಧಿಕ್ಯದಿಂದ) ಪರಿಪೂರ್ಣನೂ, ಸುಖಸ್ವರೂಪನೂ, ಅದ್ವಿತೀಯನೂ ಆದ ಶಿವನಲ್ಲಿ ಆ ಪ್ರಾಣವಾಯುವನ್ನು ಪುನಃ ಪುನಃ ಅಭ್ಯಾಸದಿಂದ ವಿಲೀನಗೊಳಿಸಿಕೊಂಡ ಸರ್ವಾತ್ಮನಾದ ಯೋಗಿಯು ಎಲ್ಲಿಯೂ ಚಲಿಸದೆ ನಿಶ್ಚಲನಾಗಿರುತ್ತಾನೆ.

**ಪ್ರಧ್ವಸ್ತವಾಸನಾಸಂಗಾತ್**
**ಪ್ರಾಣವೃತ್ತಿಪರಿಕ್ಷಯಾತ್ ।**
**ಶಿವೈಕೀಭೂತಸರ್ವಾತ್ಮಾ**
**ಸ್ಥಾಣುವದ್ ಭಾತಿ ಸಂಯಮೀ ॥ 17–33**

ಪ್ರಾಣವೃತ್ತಿಗಳು ಕ್ಷಯಗೊಳ್ಳಲು (ಪ್ರಾಕೃತ ಮತ್ತು ವೈಕೃತ ರೂಪವಾದ ಪ್ರಾಣವಾಯುವಿನ ಗತಿಯು ನಿಲ್ಲಲಾಗಿ) ವಿಷಯ ವಾಸನೆಗಳನ್ನು ನಾಶ ಮಾಡಿಕೊಂಡು ಶಿವನೊಂದಿಗೆ ಐಕ್ಯತೆಯನ್ನು ಪಡೆದ ಸರ್ವಾತ್ಮನಾದ ಆ ಸಂಯಮಿ (ಒಂದೇ

ವಿಷಯದಲ್ಲಿ ಧಾರಣ, ಧ್ಯಾನ, ಸಮಾಧಿಗಳನ್ನು ಪಡೆದುಕೊಂಡವನಾದ ಪತಂಜಲಿ, ಯೋಗಸೂತ್ರ 3–4)ಯಾದ ಯೋಗಿಯು ಸ್ಥಾಣುವಿನಂತೆ ನಿಶ್ಚಲನಾಗಿರುತ್ತಾನೆ.

*ಇತಿ ಪ್ರಾಣಾನುಗ್ರಹಸ್ಥಲಂ*
*ಇಲ್ಲಿಗೆ ಪ್ರಾಣಾನುಗ್ರಹಸ್ಥಲವು ಮುಗಿಯಿತು.*

## 66. ಅಥ ಕಾಯಾರ್ಪಿತಸ್ಥಲಮ್
ಈಗ ಕಾಯಾರ್ಪಿತಸ್ಥಲವು
**(5 ಶ್ಲೋಕಗಳು)**

**ಶಿವಸ್ಯ ಪರರೂಪಸ್ಯ**
**ಸರ್ವಾನುಗ್ರಾಹಿಣೋಽರ್ಚನೇ ।**
**ತ್ಯಾಗೋ ದೇಹಾಭಿಮಾನಸ್ಯ**
**ಕಾಯಾರ್ಪಿತಮುದಾಹೃತಮ್ ॥ 17–34**

ಸರ್ವರನ್ನು ಅನುಗ್ರಹಿಸುವ ಪರಬ್ರಹ್ಮ ರೂಪನಾದ, ಪ್ರಾಣಾನುಗ್ರಹ ಸಂಪನ್ನನಾದ ಯೋಗಿಯು ಶಿವಲಿಂಗದ ಅರ್ಚನೆಯಲ್ಲಿ ತನ್ನ ದೇಹಾಭಿಮಾನದ ತ್ಯಾಗವನ್ನು ಮಾಡುವುದೇ ಕಾಯಾರ್ಪಿತವೆಂದು ಹೇಳಲಾಗಿದೆ.

**ಯದಾ ಯೋಗೀ ನಿಜಂ ದೇಹಮ್**
**ಶಿವಾಯ ವಿನಿವೇದಯೇತ್ ।**
**ತದಾ ಭವತಿ ತದ್ರೂಪಮ್**
**ಶಿವರೂಪಂ ನ ಸಂಶಯಃ ॥ 17–35**

ಕಾಯಾರ್ಪಣಸ್ಥಲದ ಯೋಗಿಯು ನಿಜದೇಹವನ್ನು ಯಾವಾಗ ಶಿವನಿಗೆ ವಿನಿವೇದಿಸುವನೋ (ಅರ್ಪಿಸುವನೋ) ಆಗ ಅವನ ದೇಹವು ಶಿವರೂಪವೇ ಆಗುತ್ತದೆ. ಇದರಲ್ಲಿ ಸಂಶಯವಿಲ್ಲ.

**ಇಂದ್ರಿಯಪ್ರೀತಿಹೇತೂನಿ**
**ವಿಷಯಾಸಂಗಜಾನಿ ಚ ।**
**ಸುಖಾನಿ ಸುಖಚಿದ್ರೂಪೇ**
**ಶಿವಯೋಗೀ ನಿವೇದಯೇತ್॥ 17–36**

ಶಿವಯೋಗಿಯು ತನ್ನ ಇಂದ್ರಿಯಗಳ ಪ್ರೀತಿಗೆ ಕಾರಣಗಳಾದ ವಿಷಯಸಂಗಗಳಿಂದ ಉತ್ಪನ್ನಗಳಾದ ಸುಖಗಳನ್ನೂ ಸಹ ಸುಖಸ್ವರೂಪನೂ, ಚಿದ್ರೂಪನೂ ಆದ ಶಿವನಿಗೆ ನಿವೇದಿಸಬೇಕು (ಸಮರ್ಪಿಸಬೇಕು).

**ದರ್ಶನಾತ್ ಸ್ಪರ್ಶನಾದ್ ಭುಕ್ತೇಃ**
**ಶ್ರವಣಾದ್ ಘ್ರಾಣನಾದಪಿ ।**
**ವಿಷಯೇಭ್ಯೋ ಯದುತ್ಪನ್ನಮ್**
**ಶಿವೇ ತತ್ಸುಖಮರ್ಪಯೇತ್ ॥ 17–37**

ಕಣ್ಣಿನಿಂದ ನೋಡುವುದರಿಂದ, ಚರ್ಮದಿಂದ ಸ್ಪರ್ಶಿಸುವುದರಿಂದ; ನಾಲಿಗೆಯಿಂದ ಆಸ್ವಾದಿಸುವುದರಿಂದ, ಕಿವಿಯಿಂದ ಕೇಳುವುದರಿಂದ, ಮೂಗಿನಿಂದ ಮೂಸಿಸುವುದರಿಂದ, ಇದೂ ಅಲ್ಲದೆ ಉಳಿದ ಯಾವುದೇ ವಿಷಯಗಳಿಂದ ಉತ್ಪನ್ನವಾದ ಯಾವ ಸುಖವಿದೆಯೋ ಅದನ್ನು ಶಿವನಿಗೆ ಸಮರ್ಪಿಸಬೇಕು.

**ದೇಹದ್ವಾರೇಣ ಯದ್ಯತ್ ಸ್ಯಾತ್**

**ಸುಖಂ ಪ್ರಾಸಂಗಮಾತ್ಮನಃ ।**
**ತತ್ತನ್ನಿವೇದಯನ್ ಶಂಭೋಃ**
**ಯೋಗೀ ಭವತಿ ನಿರ್ಮಲಃ ॥ 17–38**

ದೇಹದ್ವಾರಗಳಿಂದ, ದಶೇಂದ್ರಿಯಗಳಿಂದ ಯಾವ ಯಾವ ಸುಖ ಪ್ರಸಂಗಗಳು ತನಗೆ ಒದಗುವುದೋ ಅದೆಲ್ಲವನ್ನೂ ಯೋಗಿಯಾದವನು ಶಂಭುವಿಗೆ ನಿವೇದಿಸಿ ನಿರ್ಮಲನಾಗುತ್ತಾನೆ (ನಿರ್ಲಿಪ್ತನಾಗುತ್ತಾನೆ).

*ಇತಿ ಕಾಯಾರ್ಪಿತಸ್ಥಲಂ* *ಇಲ್ಲಿಗೆ ಕಾಯಾರ್ಪಿತಸ್ಥಲವು ಮುಗಿಯಿತು.*

## 67. ಅಥ ಕರಣಾರ್ಪಿತಸ್ಥಲಮ್

ಈಗ ಕರಣಾರ್ಪಿತಸ್ಥಲವು

**(11 ಶ್ಲೋಕಗಳು)**

**ಆಸಂಜನಂ ಸಮಸ್ತಾನಾಮ್**
**ಕರಣಾನಾಂ ಪರಾತ್ಪರೇ ।**
**ಶಿವೇ ಯತ್ ತದಿದಂ ಪ್ರೋಕ್ತಮ್**
**ಕರಣಾರ್ಪಿತಮಾಗಮೇ ॥ 17–39**

ಪರಾತ್ಪರನಾದ ಪರಶಿವನಲ್ಲಿ ತನ್ನ ಸಮಸ್ತಕರಣಗಳ (ಅಂತಃಕರಣ, ಬಹಿಃಕರಣಗಳ) ಸಮರ್ಪಣೆಯು ಯಾವುದಿದೆಯೋ ಅದುವೇ ಶಿವಾಗಮ ಶಾಸ್ತ್ರಗಳಲ್ಲಿ 'ಕರಣಾರ್ಪಿತ'ವೆಂದು ಹೇಳಲ್ಪಟ್ಟಿದೆ.

**ಯದ್ಯತ್ಕರಣಮಾಲಂಬ್ಯ**
**ಭುಂಕ್ತೇ ವಿಷಯಜಂ ಸುಖಮ್ ।**
**ತತ್ತಚ್ಛಿವೇ ಸಮರ್ಪ್ಯೈಷ**
**ಕರಣಾರ್ಪಕ ಉಚ್ಯತೇ ॥ 17–40**

ಯಾವ ಯಾವ ಕರಣಗಳನ್ನು ಅವಲಂಬಿಸಿ ವಿಷಯ ಜನ್ಯವಾದ ಸುಖವನ್ನು ಅನುಭವಿಸುವನೋ ಅದೆಲ್ಲವನ್ನು ಶಿವನಿಗೆ ಸಮರ್ಪಿಸಿದ ಈ ಯೋಗಿ ಕರಣಾರ್ಪಕನೆಂದು ಹೇಳಲ್ಪಡುತ್ತಾನೆ.

**ಅಹಂಕಾರಮದೋದ್ರಿಕ್ತಮ್**
**ಅಂತಃಕರಣವಾರಣಮ್ ।**
**ಬಧ್ನೀಯಾದ್ ಯಃ ಶಿವಾಲಾನೇ**
**ಸ ಧೀರಃ ಸರ್ವಸಿದ್ಧಿಮಾನ್ ॥ 17–41**

ಅಹಂಕಾರವೆಂಬ ಮದದಿಂದ ಕೊಬ್ಬಿದ ಅಂತಃಕರಣವೆಂಬ ಮದಗಜವನ್ನು ಯಾರು ಶಿವಲಿಂಗವೆಂಬ ಕಂಭಕ್ಕೆ ಕಟ್ಟಿ ಹಾಕುವನೋ ಅವನೇ ಸಕಲ ಸಿದ್ಧಿಗಳನ್ನು ಪಡೆದ ಧೀರನೆಂಬುದಾಗಿ ಕರೆಯಲ್ಪಡುತ್ತಾನೆ.

**ಇಂದ್ರಿಯಾಣಾಂ ಸಮಸ್ತಾನಾಮ್**
**ಮನಃ ಪ್ರಥಮಮುಚ್ಯತೇ ।**
**ವಶೀಕೃತೇ ಶಿವೇ ತಸ್ಮಿನ್**
**ಕಿಮನ್ಯೈಸ್ತದ್ವಶಾನುಗೈಃ ॥ 17–42**

ಸಮಸ್ತ ಇಂದ್ರಿಯಗಳಿಗೆ ಮನವೇ ಮುಖ್ಯವಾದುದೆಂದು ಹೇಳಲ್ಪಡುತ್ತದೆ. ಆದ್ದರಿಂದ ಆ ಮನಸ್ಸೇ ಶಿವನ ವಶವಾಗಲು, ಅದರ ಅನುಯಾಯಿಗಳಾದ ಉಳಿದ ಇಂದ್ರಿಯಗಳಿಂದ ಆಗುವುದೇನು?

**ಇಂದ್ರಿಯಾಣಾಂ ವಶೀಕಾರೋ**
**ನಿವೃತ್ತಿರಿತಿ ಗೀಯತೇ ।**
**ಲಕ್ಷೀಕೃತೇ ಶಿವೇ ತೇಷಾಮ್**
**ಕುತಃ ಸಂಸಾರಗಾಹನಮ್ ॥ 17–43**

ಇಂದ್ರಿಯಗಳನ್ನು ವಶದಲ್ಲಿಟ್ಟುಕೊಳ್ಳುವುದೇ ಬಂಧನ ನಿವೃತ್ತಿಯೆಂಬುದಾಗಿ ಹೇಳಲ್ಪಟ್ಟಿದೆ. ಆದ್ದರಿಂದ ಆ ಎಲ್ಲ ಇಂದ್ರಿಯಗಳು ಶಿವಲಿಂಗದಲ್ಲಿ ಲಯಗೊಳ್ಳಲು ಸಂಸಾರಸಾಗರದಲ್ಲಿ ಹೇಗೆ ಮುಳುಗಲು ಸಾಧ್ಯ?

**ಸಂಸಾರವಿಷಕಾಂತಾರ–**
**ಸಮುಚ್ಛೇದಕುಠಾರಿಕಾ ।**
**ಉಪಶಾಂತಿರ್ಭವೇತ್ ಪುಂಸಾಮ್**
**ಇಂದ್ರಿಯಾಣಾಂ ವಶೀಕೃತೌ ॥ 17–44**

ಇಂದ್ರಿಯಗಳ ವಶೀಕರಣವು ಸಂಸಾರವೆಂಬ ವಿಷವೃಕ್ಷಗಳ ಅಡವಿಯನ್ನು ಕಡಿಯುವ ಕೊಡಲಿಯಾಗಿರುತ್ತದೆ. ಆ ಇಂದ್ರಿಯಗಳ ವಶೀಕರಣದಿಂದಲೇ ಎಲ್ಲ ಜೀವಿಗಳಿಗೆ ಉಪಶಾಂತಿಯು (ನಿರಪೇಕ್ಷತ್ವ ಭಾವವು) ಉಂಟಾಗುವುದು.

**ಇಂದ್ರಿಯೈರೇವ ಜಾಯಂತೇ**
**ಪಾಪಾನಿ ಸುಕೃತಾನಿ ಚ ।**
**ತೇಷಾಂ ಸಮರ್ಪಣಾದೀಶೇ**
**ಕುತಃ ಕರ್ಮನಿಬಂಧನಮ್ ॥ 17–45**

ಇಂದ್ರಿಯಗಳಿಂದಲೇ ಪಾಪಗಳು ಮತ್ತು ಪುಣ್ಯಗಳು ಉಂಟಾಗುತ್ತವೆ. ಆ ಇಂದ್ರಿಯಗಳನ್ನೇ ಈಶನಲ್ಲಿ ಸಮರ್ಪಿಸುವುದರಿಂದ ಕರ್ಮಬಂಧನವು ಹೇಗೆ ಉಂಟಾದೀತು?

**ಪ್ರಕಾಶಮಾನೇ ಚಿದ್ವಹ್ನೌ**
**ಬಹಿರಂತರ್ಜಗನ್ಮಯೇ ।**
**ಸಮರ್ಪ್ಯ ವಿಷಯಾನ್ ಸರ್ವಾನ್**
**ಮುಕ್ತವಜ್ಜಾಯತೇ ಜನಃ ॥17–46**

ಜಗನ್ಮಯವಾದ ಚಿದಗ್ನಿಯು ಒಳಹೊರಗೂ ಪ್ರಕಾಶಿಸುತ್ತಿರಲು ಅದರಲ್ಲಿ ತನ್ನ ಎಲ್ಲ ವಿಷಯಗಳೆಂಬ ಹವಿಸ್ಸುಗಳನ್ನು ಸಮರ್ಪಿಸಿದ ಜನರು ಮುಕ್ತರೇ ಆಗುತ್ತಾರೆ.

**ಚಿತ್ತದ್ರವ್ಯಂ ಸಮಾದಾಯ**
**ಜಗಜ್ಜಾತಂ ಮಹಾಹವಿಃ ।**
**ಚಿದ್ವಹ್ನೌ ಜುಹ್ವತಾಮಂತಃ**
**ಕುತಃ ಸಂಸಾರವಿಪ್ಲವಃ ॥ 17–47**

ಜಗದ್ ಸಮೂಹವೆಂಬ ಮಹಾಹವಿಸ್ಸನ್ನು ಮತ್ತು ಚಿತ್ತದ್ರವ್ಯವನ್ನು ತೆಗೆದುಕೊಂಡು ತನ್ನ ಹೃದಯಕಮಲದಲ್ಲಿರುವ ಚಿದಗ್ನಿಯಲ್ಲಿ ಹೋಮ ಮಾಡುತ್ತಿರುವ ಈ ಕರಣಾರ್ಪಕ ಯೋಗಿಗೆ ಸಂಸಾರ ವಿಪ್ಲವವು (ಸಂಸಾರ ಬಾಧೆಯು) ಎಲ್ಲಿರುವುದು?

**ಆತ್ಮಜ್ಯೋತಿಷಿ ಚಿದ್ರೂಪೇ**
**ಪ್ರಾಣವಾಯುನಿಬೋಧಿತೇ ।**
**ಜುಹ್ವನ್ ಸಮಸ್ತವಿಷಯಾನ್**
**ತನ್ಮಯೋ ಭವತಿ ಧ್ರುವಮ್ ॥ 17–48**

ಪ್ರಾಣವಾಯುವಿನಿಂದ ಪ್ರಜ್ವಲಗೊಳಿಸಿದ ಚಿದ್ರೂಪವಾದ ತನ್ನ ಆತ್ಮಜ್ಯೋತಿಯಲ್ಲಿ ಸಕಲ ವಿಷಯಗಳೆಂಬ ಹವಿಸ್ಸುಗಳನ್ನು ಹೋಮ ಮಾಡಿರುವ ಆ ಯೋಗಿಯು ನಿಶ್ಚಯವಾಗಿ ಶಿವಸ್ವರೂಪನೇ ಆಗಿರುತ್ತಾನೆ.

**ಇಂದ್ರಿಯಾಣಿ ಸಮಸ್ತಾನಿ**
**ಶರೀರಂ ಭೋಗಸಾಧನಮ್ ।**
**ಶಿವಪೂಜಾಂಗಭಾವೇನ**
**ಭಾವಯನ್ ಮುಕ್ತಿಮಾಪ್ನುಯಾತ್॥ 17–49**

ಸಮಸ್ತ ಇಂದ್ರಿಯಗಳನ್ನು ಮತ್ತು ಭೋಗ ಸಾಧನವಾದ ಶರೀರವನ್ನು ಶಿವಪೂಜೆಯ ಅಂಗಗಳೆಂದು ಭಾವಿಸುವ ಈ ಕರಣಾರ್ಪಕಯೋಗಿಯು ಮುಕ್ತಿಯನ್ನು ಪಡೆಯುತ್ತಾನೆ.

***ಇತಿ ಕರಣಾರ್ಪಿತಸ್ಥಲಂ*** *ಇಲ್ಲಿಗೆ ಕರಣಾರ್ಪಿತಸ್ಥಲವು ಮುಗಿಯಿತು.*

## 68. ಅಥ ಭಾವಾರ್ಪಿತಸ್ಥಲಮ್

ಈಗ ಭಾವಾರ್ಪಿತಸ್ಥಲವು

**(8 ಶ್ಲೋಕಗಳು)**

**ಶಿವೇ ನಿಶ್ಚಲಭಾವೇನ**
**ಭಾವಾನಾಂ ಯತ್ಸಮರ್ಪಣಮ್ ।**
**ಭಾವಾರ್ಪಿತಮಿದಂ ಪ್ರೋಕ್ತಮ್**
**ಶಿವಸದ್ಭಾವವೇದಿಭಿಃ ॥ 17–50**

ಶಿವಲಿಂಗದಲ್ಲಿ ನಿಶ್ಚಲವಾದ ಭಾವದಿಂದ ತನ್ನ ಮನೋಭಾವನೆಗಳನ್ನು ಅರ್ಪಿಸುವುದೇ ಭಾವಾರ್ಪಿತವೆಂದು ಶಿವಸದ್ಭಾವವನ್ನು ಬಲ್ಲವರು ಹೇಳುತ್ತಾರೆ (ಭಾವವೆಂದರೆ ಮನೋವೃತ್ತಿಯೆಂದರ್ಥ).

**ಚಿತ್ತಸ್ಥಸಕಲಾರ್ಥಾನಾಮ್**
**ಮನನಂ ಯತ್ತು ಮಾನಸೇ ।**
**ತದರ್ಪಣಂ ಶಿವೇ ಸಾಕ್ಷಾತ್**
**ಮಾನಸೋ ಭಾವ ಉಚ್ಯತೇ ॥ 17–51**

ತನ್ನ ಚಿತ್ತದಲ್ಲಿರುವ ಎಲ್ಲ ಪದಾರ್ಥಗಳ ಯಾವ ಮನನವಿದೆಯೋ (ಅನುಭವರೂಪವಾದ ಚಿಂತನೆ ಇದೆಯೋ) ಅದನ್ನು ಸಾಕ್ಷಾತ್ ಅರ್ಪಿಸುವುದೇ ಭಾವಾರ್ಪಿತವಾಗಿದೆ.

**ಭಾವ ಏವ ಹಿ ಜಂತೂನಾಮ್**
**ಕಾರಣಂ ಬಂಧಮೋಕ್ಷಯೋಃ ।**
**ಭಾವಶುದ್ಧೌ ಭವೇನ್ಮುಕ್ತಿಃ**
**ವಿಪರೀತೇ ತು ಸಂಸೃತಿಃ ॥ 17–52**

ಜೀವಿಗಳ ಬಂಧ ಮೋಕ್ಷಗಳಿಗೆ ಭಾವವೇ ಕಾರಣವಾಗಿರುತ್ತದೆ. ಭಾವವು ಶುದ್ಧವಾಗಿದ್ದರೆ ಮುಕ್ತಿಯುಂಟಾಗುವುದು. ಅದಕ್ಕೆ ವಿಪರೀತವಾಗಿ ಭಾವವು ಅಶುದ್ಧವಾಗಿದ್ದರೆ (ಅಹಂಕಾರ, ಮಮಕಾರಗಳಿಂದ ಕೂಡಿದ್ದರೆ) ಸಂಸಾರ ಪ್ರಾಪ್ತಿಯಾಗುವುದು.

**ಭಾವಸ್ಯ ಶುದ್ಧಿರಾಖ್ಯಾತಾ**
**ಶಿವೋಽಹಮಿತಿ ಯೋಜನಾ ।**
**ವಿಪರೀತಸಮಾಯೋಗೇ**
**ಕುತೋ ದುಃಖನಿವರ್ತನಮ್ ॥ 17–53**

ಯಾವ ಭಾವದಲ್ಲಿ 'ಶಿವೋऽಹಂ' (ಶಿವನೇ ನಾನು) ಎಂಬುದರ ಸಂಯೋಜನೆ ಇರುತ್ತದೆಯೋ ಅದುವೇ ಶುದ್ಧಭಾವವೆಂದು ಹೇಳಲ್ಪಡುತ್ತದೆ. ಇದರ ವಿಪರೀತದ (ನಾನು ಶಿವನಲ್ಲ ಎಂಬುದರ) ಸಮಾಯೋಗವಿದ್ದರೆ, ದುಃಖನಿವಾರಣೆಯು ಹೇಗೆ ಆಗುವುದು? (ಶಿವೋऽಹಂ ಭಾವನೆಯಿಂದಲೇ ಭಾವಶುದ್ಧಿಯು.)

**ಭೋಕ್ತಾ ಭೋಗ್ಯಂ ಭೋಜಯಿತಾ**
**ಸರ್ವಮೇತಚ್ಚರಾಚರಮ್ ।**
**ಭಾವಯನ್ ಶಿವರೂಪೇಣ**
**ಶಿವೋ ಭವತಿ ವಸ್ತುತಃ ॥ 17–54**

ಭೋಕ್ತೃವಾದ ಜೀವನು, ಭೋಗ್ಯವಾದ ವಸ್ತುವು ಮತ್ತು ಭೋಗವನ್ನು ಕೊಡುವ ಶಿವನು ಅದರಂತೆ ಚರಾಚರವಾದ ವಿಶ್ವವು, ಇವೆಲ್ಲವನ್ನು ಶಿವರೂಪವಾಗಿ ಭಾವಿಸುವವನು ನಿಜವಾಗಿಯೂ ಶಿವನೇ ಆಗುತ್ತಾನೆ (ಎಲ್ಲದರಲ್ಲಿ ಶಕ್ತಿವಿಶಿಷ್ಟ ಅಖಂಡ ಚೈತನ್ಯವನ್ನೇ ಭಾವಿಸಬೇಕು).

**ಮಿಥ್ಯೇತಿ ಭಾವಯನ್ ವಿಶ್ವಮ್**
**ವಿಶ್ವಾತೀತಂ ಶಿವಂ ಸ್ಮರನ್ ।**
**ಸತ್ತಾನಂದಚಿದಾಕಾರಮ್**
**ಕಥಂ ಬದ್ಧುಮಿಹಾರ್ಹತಿ ॥ 17–55**

ಸಮಸ್ತ ವಿಶ್ವವನ್ನು ಮಿಥ್ಯೆ ಎಂಬುದಾಗಿ ಭಾವಿಸುತ್ತಿದ್ದ ಮತ್ತು ವಿಶ್ವಾತೀತನಾದ ಶಿವನನ್ನು ಸಚ್ಚಿದಾನಂದ ಸ್ವರೂಪನನ್ನಾಗಿ ಸ್ಮರಿಸುವ ಈ ಭಾವಾರ್ಪಿತ ಸ್ಥಲದ ಯೋಗಿಯು, ಮಲಮಾಯಾದಿ ಪಾಶಗಳಿಂದ ಹೇಗೆ ತಾನೇ ಬಂಧಿಸಲು ಯೋಗ್ಯನಾದನು?

**ಸರ್ವಂ ಕರ್ಮಾರ್ಚನಂ ಶಂಭೋಃ**
**ವಚನಂ ತಸ್ಯ ಕೀರ್ತನಮ್ ।**
**ಇತಿ ಭಾವಯತೋ ನಿತ್ಯಮ್**
**ಕಥಂ ಸ್ಯಾತ್ ಕರ್ಮಬಂಧನಮ್ ॥ 17–56**

ತಾನು ಮಾಡುವ ಸರ್ವಕರ್ಮಗಳನ್ನು ಶಂಭುವಿನ ಅರ್ಚನೆಯೆಂತಲೂ, ತಾನು ಆಡುವ ಮಾತುಗಳನ್ನೆಲ್ಲಾ ಶಿವಕೀರ್ತನೆಯೆಂತಲೂ ಈ ರೀತಿಯಾಗಿ ನಿತ್ಯವೂ ಭಾವಿಸುವ ಈ ಯೋಗಿಗೆ ಕರ್ಮಬಂಧನವು ಹೇಗೆ ತಾನೇ ಉಂಟಾದೀತು?

**ಸರ್ವೇಂದ್ರಿಯಗತಂ ಸೌಖ್ಯಮ್**
**ದುಃಖಂ ವಾ ಕರ್ಮಸಂಭವಮ್ ।**
**ಶಿವಾರ್ಥಂ ಭಾವಯನ್ ಯೋಗೀ**
**ಜೀವನ್ಮುಕ್ತೋ ಭವಿಷ್ಯತಿ ॥ 17–57**

ತನ್ನ ಸರ್ವ ಇಂದ್ರಿಯಗಳ ಮುಖಾಂತರವಾಗಿ ದೊರೆಯುವ ಕರ್ಮಜನ್ಯವಾದ ಸುಖದುಃಖಗಳನ್ನು ಶಿವಾರ್ಥವಾಗಿ ಭಾವಿಸುವ ಯೋಗಿಯು ಜೀವನ್ಮುಕ್ತನಾಗುತ್ತಾನೆ.

*ಇತಿ ಭಾವಾರ್ಪಿತಸ್ಥಲಂ*
*ಇಲ್ಲಿಗೆ ಭಾವಾರ್ಪಿತಸ್ಥಲವು ಮುಗಿಯಿತು.*

# 69. ಅಥ ಶಿಷ್ಯಸ್ಥಲಮ್

ಈಗ ಶಿಷ್ಯಸ್ಥಲವು

**(10 ಶ್ಲೋಕಗಳು)**

**ಶಾಸನೀಯೋ ಭವೇದ್ಯಸ್ತು**
**ಪರಕಾಯೇನ ಸರ್ವದಾ ।**
**ತತ್ಪ್ರಸಾದಾತ್ತು ಮೋಕ್ಷಾರ್ಥೀ**
**ಸ ಶಿಷ್ಯ ಇತಿ ಕೀರ್ತಿತಃ ॥ 17–58**

ಪರಕಾಯದ (ಪರಬ್ರಹ್ಮ ದೇಹಿಯಾದ ಭಾವಾರ್ಪಿತ ಸ್ಥಲದ) ಯೋಗಿಯಿಂದ ಯಾವಾತನು ಯಾವಾಗಲೂ ಶಾಸನೀಯನಾಗಿರುತ್ತಾನೆಯೋ (ಶಿಕ್ಷಿಸಲು ಅರ್ಹನಾಗಿರುತ್ತಾನೆಯೋ) ಅಲ್ಲದೆ ಆ ಯೋಗಿಯ ಪ್ರಸಾದದಿಂದಲೇ ಮೋಕ್ಷವನ್ನು ಅಪೇಕ್ಷಿಸುತ್ತಾನೆಯೋ ಅವನು ಶಿಷ್ಯನೆಂದು ಕರೆಯಲ್ಪಡುತ್ತಾನೆ.

**ಭಾವೋ ಯಸ್ಯ ಸ್ಥಿರೋ ನಿತ್ಯಮ್**
**ಮನೋವಾಕ್ಕಾಯಕರ್ಮಭಿಃ ।**
**ಗುರೌ ನಿಜೇ ಗುಣೋದಾರೇ**
**ಸ ಶಿಷ್ಯ ಇತಿ ಗೀಯತೇ ॥17–59**

ಗುಣೋದಾರನಾದ (ಜ್ಞಾನ ವೈರಾಗ್ಯಾದಿ ಗುಣಗಳಿಂದ ಶ್ರೇಷ್ಠನಾದ) ನಿಜ ಗುರುವಿನಲ್ಲಿ (ತನ್ನ ಗುರುವಿನಲ್ಲಿ) ಮನಸ್ಸು, ವಾಕ್ಕು ಹಾಗೂ ಕರ್ಮಗಳೆಂಬ ತ್ರಿಕರಣಗಳಿಂದ ಕೂಡಿದ ಯಾರ ಭಾವವು ನಿತ್ಯವೂ ಸಿದ್ಧವಾಗಿರುವುದೋ ಅವನೇ ಶಿಷ್ಯನೆಂದು ಹೇಳಲ್ಪಡುತ್ತಾನೆ.

**ಶಾಂತೋ ದಾಂತಸ್ತಪಶ್ಶೀಲಃ**
**ಸತ್ಯವಾಕ್‌ಸಮದರ್ಶನಃ ।**
**ಗುರೌ ಶಿವೇ ಸಮಾನಸ್ಥಃ**
**ಸ ಶಿಷ್ಯಾಣಾಮಿಹೋತ್ತಮಃ ॥ 17–60**

ಶಾಂತನು (ಅಂತರಿಂದ್ರಿಯ ನಿಗ್ರಹ ಸಂಪನ್ನನು), ದಾಂತನು (ಬಹಿರಿಂದ್ರಿಯ ನಿಗ್ರಹ ಸಂಪನ್ನನು), ತಪಶ್ಶೀಲನು (ಯಮ ನಿಯಮಾದಿ ಅಷ್ಟಾಂಗ ಯೋಗ ಸಂಪನ್ನನು), ಸತ್ಯ ನುಡಿಯುವವನು, ಸಮದರ್ಶಿಯು, ಗುರು ಮತ್ತು ಶಿವರೀರ್ವರಲ್ಲಿ ಸಮಾನವಾದ ಬುದ್ಧಿಯುಳ್ಳವನೂ ಆದ ಯಾವ ಶಿಷ್ಯನಿರುವನೋ ಅವನು ಶಿಷ್ಯರಲ್ಲಿ ಉತ್ತಮನೆನಿಸಿಕೊಳ್ಳುವನು.

**ಗುರುಮೇವ ಶಿವಂ ಪಶ್ಯೇತ್**
**ಶಿವಮೇವ ಗುರುಂ ತಥಾ ।**
**ನೈತಯೋರಂತರಂ ಕಿಂಚಿತ್**
**ವಿಜಾನೀಯಾದ್ವಿಚಕ್ಷಣಃ ॥ 17–61**

ವಿಚಕ್ಷಣನಾದ ಶಿಷ್ಯನು ಗುರುವನ್ನೇ ಶಿವನನ್ನಾಗಿಯೂ, ಅದರಂತೆ ಶಿವನನ್ನೇ ಗುರುವನ್ನಾಗಿಯೂ ನೋಡಬೇಕು. ಅವರೀರ್ವರಲ್ಲಿ ಕಿಂಚಿತ್ತೂ ಭೇದಬುದ್ಧಿಯನ್ನು ಮಾಡಕೂಡದು.

**ಶಿವಾಚಾರೇ ಶಿವಧ್ಯಾನೇ**
**ಶಿವಜ್ಞಾನೇ ಚ ನಿರ್ಮಲೇ ।**
**ಗುರೋರಾದೇಶಮಾತ್ರೇಣ**

**ಪರಾಂ ನಿಷ್ಠಾಮವಾಪ್ನುಯಾತ್ ॥ 17–62**

ಆ ಶಿಷ್ಯನು ಶಿವಾಚಾರದಲ್ಲಿ, ಶಿವಧ್ಯಾನದಲ್ಲಿ, ನಿರ್ಮಲವಾದ ಶಿವಜ್ಞಾನದ ವಿಷಯದಲ್ಲಿ ಗುರುವಿನ ಆದೇಶದಂತೆ ಪರಮನಿಷ್ಠೆ (ವಿಶ್ವಾಸವನ್ನು)ಯನ್ನು ಹೊಂದಬೇಕು.

**ಬ್ರಹ್ಮಾಂಡಬುದ್ಬುದೋದ್ಭೂತಮ್**
**ಮಾಯಾಸಿಂಧುಂ ಮಹತ್ತರಮ್ ।**
**ಗುರೋಃ ಕವಲಯತ್ಯಾಶು**
**ಕಟಾಕ್ಷವಡವಾನಲಃ ॥ 17–63**

ಈ ಗುರುವಿನ ಕರುಣಾಕಟಾಕ್ಷವೆಂಬ ವಡವಾಗ್ನಿಯು ಅನೇಕ ಬ್ರಹ್ಮಾಂಡ ರೂಪಗಳಾದ ಗುಳ್ಳೆಗಳನ್ನು ತನ್ನಲ್ಲಿ ಹುಟ್ಟುತ್ತಿರುವ ಮಹತ್ತರವಾದ ಮಾಯೆಯೆಂಬ ಸಮುದ್ರವನ್ನು ಶೀಘ್ರದಲ್ಲಿ ಹೀರಿಬಿಡುವುದು.

**ಗುರೋಃ ಕಟಾಕ್ಷವೇಧೇನ**
**ಶಿವೋ ಭವತಿ ಮಾನವಃ ।**
**ರಸವೇಧಾದ್ ಯಥಾ ಲೋಹೋ**
**ಹೇಮತಾಂ ಪ್ರತಿಪದ್ಯತೇ ॥ 17–64**

ರಸವೇಧದಿಂದ (ಸಿದ್ಧರಸವು ವ್ಯಾಪಿಸಿಕೊಳ್ಳುವುದರಿಂದ) ಕಬ್ಬಿಣವು ಹೇಗೆ ಚಿನ್ನವಾಗುವುದೋ ಹಾಗೆ ಗುರುವಿನ ಕಟಾಕ್ಷವೇಧದಿಂದ ಮಾನವನು ಶಿವನಾಗುತ್ತಾನೆ.

**ನ ಲಂಘಯೇದ್ ಗುರೋರಾಜ್ಞಾಮ್**
**ಜ್ಞಾನಮೇವ ಪ್ರಕಾಶಯನ್ ।**
**ಶಿವಾಸಕ್ತೇನ ಮನಸಾ**
**ಸರ್ವಸಿದ್ಧಿಮವಾಪ್ನುಯಾತ್ ॥ 17–65**

ಆದ್ದರಿಂದ ಅಂಥ ಶ್ರೇಷ್ಠ(ನಾದ) ಗುರುವಿನ ಆಜ್ಞೆಯನ್ನು ಮೀರಕೂಡದು ಮತ್ತು ಶಿವನಲ್ಲಿ ಆಸಕ್ತವಾದ ಮನಸ್ಸಿನಿಂದ ಜ್ಞಾನವನ್ನೇ ಪ್ರಕಾಶಿಸುವವನಾಗಿ ಸಕಲ ಸಿದ್ಧಿಗಳನ್ನು ಪಡೆಯುವನು.

**ಶಿವಾದನ್ಯಜ್ಜಗನ್ಮಿಥ್ಯಾ**
**ಶಿವಃ ಸಂವಿತ್ಸ್ವರೂಪಕಃ ।**
**ಶಿವಸ್ತ್ವಮಿತಿ ನಿರ್ದಿಷ್ಟೋ**
**ಗುರುಣಾ ಮುಕ್ತ ಏವ ಸಃ ॥ 17–66**

ಜಗತ್ತು ಶಿವನಿಗಿಂತಲೂ ಭಿನ್ನವಾದುದು ಎಂದು ತಿಳಿಯುವುದು ಮಿಥ್ಯೆ. ಶಿವನು ಸಂವಿತ್‌ಸ್ವರೂಪನು (ಅರಿವಿನ ಸ್ವರೂಪವಾಗುಳ್ಳಾತನು) ಆ ಶಿವನೇ ನೀನಿರುವೆ ಎಂದು ಶ್ರೀ ಗುರುವಿನಿಂದ ಉಪದೇಶಿಸಲ್ಪಟ್ಟ ಆ ಶಿಷ್ಯನು ಮುಕ್ತನೇ ಆಗುತ್ತಾನೆ.

**ಗುರೋರ್ಲಬ್ಧ್ವಾ ಮಹಾಜ್ಞಾನಮ್**
**ಸಂಸಾರಾಮಯಭೇಷಜಮ್ ।**
**ಮೋದತೇ ಯಃ ಸುಖೀ ಶಾಂತಃ**
**ಸ ಜೀವನ್ಮುಕ್ತ ಏವ ಹಿ ॥ 17–67**

ಸಂಸಾರವೆಂಬ ರೋಗಕ್ಕೆ ಔಷಧ ಸ್ವರೂಪವಾದ ಮಹಾಜ್ಞಾನವನ್ನು (ಶಿವಾದ್ವೈತ ಜ್ಞಾನವನ್ನು) ಶ್ರೀಗುರುವಿನಿಂದ ಪಡೆದು ಯಾವಾತನು ಸುಖಿಯೂ, ಶಾಂತನೂ ಅಗಿ ಆನಂದವನ್ನು ಪಡೆಯುವನೋ ಆ ಶಿಷ್ಯನು ಜೀವನ್ಮುಕ್ತನೇ ಆಗಿರುತ್ತಾನೆ.

*ಇತಿ ಶಿಷ್ಯಸ್ಥಲಂ* *ಇಲ್ಲಿಗೆ ಶಿಷ್ಯಸ್ಥಲವು ಮುಗಿಯಿತು.*

## 70. ಅಥ ಶುಶ್ರೂಷುಸ್ಥಲಮ್
*ಈಗ ಶುಶ್ರೂಷುಸ್ಥಲವು*
**(13 ಶ್ಲೋಕಗಳು)**

**ಬೋಧ್ಯಮಾನಃ ಸ ಗುರುಣಾ**
**ಪರಕಾಯೇನ ಸರ್ವದಾ ।**
**ತಚ್ಛುಶ್ರೂಷಾರತಃ ಶಿಷ್ಯಃ**
**ಶುಶ್ರೂಷುರಿತಿ ಕೀರ್ತ್ಯತೇ ॥ 17–68**

ಪರಕಾಯನಾದ (ಪರಬ್ರಹ್ಮ ದೇಹಿಯಾದ) ಶ್ರೀ ಗುರುವಿನಿಂದ ಯಾವಾಗಲೂ ಉಪದೇಶಿಸಲ್ಪಡುತ್ತಿರುವ ಆ ಶಿಷ್ಯನು, ಆ ಗುರುವಿನಿಂದ ಬೋಧಿಸಲ್ಪಡುವ ತತ್ತ್ವಾರ್ಥಗಳನ್ನು ಕೇಳಬೇಕೆನ್ನುವ ಉತ್ಕಟವಾದ ಬಯಕೆ ಯುಳ್ಳವನೇ ಶುಷ್ರೂಷುವೆಂದು ಹೇಳಲ್ಪಡುತ್ತಾನೆ.

**ಕಿಂ ಸತ್ಯಂ ಕಿಂ ನು ವಾಽಸತ್ಯಮ್**
**ಕ ಆತ್ಮಾ ಕಃ ಪರಃ ಶಿವಃ ।**
**ಇತಿ ಶ್ರವಣಸಂಸಕ್ತೋ**
**ಗುರೋಃ ಶಿಷ್ಯೋ ವಿಶಿಷ್ಯತೇ ॥ 17–69**

ಬೋಧಗುರುವೇ ಸತ್ಯವಾದ ವಸ್ತುವಾವುದು? ಅಸತ್ಯವಾದ ವಸ್ತುವಾವುದು? ಆತ್ಮನಾರು? ಪರಶಿವನಾರು? ಈ ರೀತಿಯಾಗಿ ಶ್ರೀಗುರುವಿನಿಂದ ಉತ್ತರವನ್ನು ಕೇಳುವುದರಲ್ಲಿ ಆಸಕ್ತಿಯುಳ್ಳ ಶಿಷ್ಯನೇ ವಿಶಿಷ್ಟನಾಗಿರುತ್ತಾನೆ.

**ಶ್ರುತ್ವಾ ಶ್ರುತ್ವಾ ಗುರೋರ್ವಾಕ್ಯಮ್**
**ಶಿವಸಾಕ್ಷಾತ್ಕ್ರಿಯಾವಹಮ್ ।**
**ಉಪಶಾಮ್ಯತಿ ಯಃ ಸ್ವಾಂತೇ**
**ಸ ಮುಕ್ತಿಪದಮಾಪ್ನುಯಾತ್ ॥ 17–70**

ಶಿವಸಾಕ್ಷಾತ್ಕಾರವನ್ನು ಮಾಡಿಕೊಡುವ ಶ್ರೀ ಗುರುವಿನ ವಾಕ್ಯವನ್ನು ಮೇಲಿಂದ ಮೇಲೆ ಕೇಳಿ, ಯಾವನು ತನ್ನೊಳಗೆ ಶಾಂತಚಿತ್ತನಾಗುವನೋ (ಸಮಾಧಾನವನ್ನು ಹೊಂದುವನೋ) ಅವನೇ ಮುಕ್ತಿಪದವನ್ನು ಹೊಂದುವನು.

**ನ ಬುದ್ಧ್ಯತಿ ಗುರೋರ್ವಾಕ್ಯಮ್**
**ವಿನಾ ಶಿಷ್ಯಸ್ಯ ಮಾನಸಮ್ ।**
**ತೇಜೋ ವಿನಾ ಸಹಸ್ರಾಂಶೋಃ**
**ಕಥಂ ಸ್ಫುರತಿ ಪಂಕಜಮ್ ॥ 17–71**

ಶ್ರೀ ಗುರುವಿನ ಉಪದೇಶ ವಾಕ್ಯವನ್ನು ಕೇಳಿದ ಹೊರತಾಗಿ ಶಿಷ್ಯನ ಮನಸ್ಸಿಗೆ ಬೋಧೆಯುಂಟಾಗುವುದಿಲ್ಲ (ಹೃದಯಕಮಲವು ಅರಳುವುದಿಲ್ಲ) ಸಹಸ್ರಾಂಶುವಿನ (ಸೂರ್ಯನ) ಪ್ರಕಾಶವಿಲ್ಲದೆ ಕಮಲವು ಹೇಗೆ ತಾನೇ ಅರಳಬಲ್ಲುದು?

**ಸೂರ್ಯಸ್ಯೋದಯಮಾತ್ರೇಣ**
**ಸೂರ್ಯಕಾಂತಃ ಪ್ರಕಾಶತೇ ।**
**ಗುರೋರಾಲೋಕಮಾತ್ರೇಣ**
**ಶಿಷ್ಯೋ ಬೋಧೇನ ಭಾಸತೇ ॥ 17–72**

ಸೂರ್ಯನು ಉದಯವಾದ ಮೇಲೆ ಸೂರ್ಯಕಾಂತಮಣಿಯು ಹೇಗೆ ಪ್ರಕಾಶಿಸುವುದೋ ಅದರಂತೆ ಶ್ರೀ ಗುರುವಿನ ನೋಟ ಮಾತ್ರದಿಂದ ಶಿಷ್ಯನು ಜ್ಞಾನದಿಂದ ಪ್ರಕಾಶಿಸುತ್ತಾನೆ.

**ಅದ್ವೈತಪರಮಾನಂದ–**
**ಪ್ರಬೋಧೈಕಪ್ರಕಾಶಕಮ್ ।**
**ಉಪಾಯಂ ಶ್ರುಣುಯಾಚ್ಛಿಷ್ಯಃ**
**ಸದ್ಗುರುಂ ಪ್ರಾಪ್ಯ ಸಾಂಜಲಿಃ ॥ 17–73**

ಶಿಷ್ಯನಾದವನು ಸದ್ಗುರುವಿನ ಬಳಿಗೆ ಹೋಗಿ ತನ್ನ ಎರಡು ಕೈಗಳನ್ನು ಜೋಡಿಸಿ, ಅದ್ವೈತ ರೂಪವಾದ ಪರಮಾನಂದದ ಬೋಧೆಯೊಂದನ್ನೇ ತಿಳಿಸಿಕೊಡುವ ಉಪಾಯವನ್ನು ಶ್ರವಣ ಮಾಡಬೇಕು.

**ಕಿಂ ತತ್ತ್ವಂ ಪರಮಂ ಜ್ಞೇಯಮ್**
**ಕೇನ ಸರ್ವೇ ಪ್ರತಿಷ್ಠಿತಾಃ ।**
**ಕಸ್ಯ ಸಾಕ್ಷಾತ್ಕ್ರಿಯಾ ಮುಕ್ತಿಃ**
**ಕಥಯೇತಿ ಸಮಾಸತಃ ॥ 17–74**

(ಭೋ ಗುರುವೇ) ತಿಳಿದುಕೊಳ್ಳಲೇಬೇಕಾದ ಪರಮತತ್ತ್ವವು ಯಾವುದು, ಯಾರಿಂದ ಈ ಎಲ್ಲಾ ತತ್ತ್ವಗಳು ಪ್ರತಿಷ್ಠಿತವಾಗಿವೆ, ಯಾರನ್ನು ಸಾಕ್ಷಾತ್ಕರಿಸಿಕೊಳ್ಳುವುದರಿಂದ ಮುಕ್ತಿಯಾಗುವುದು? ಇವೆಲ್ಲದರ ಬಗ್ಗೆ ಸಂಕ್ಷೇಪವಾಗಿ (ಸಾರ ರೂಪವಾಗಿ ನೀವು) ನನಗೆ ಹೇಳಬೇಕು.

**ಇತಿ ಪ್ರಶ್ನೇ ಕೃತೇ ಪೂರ್ವಮ್**
**ಶಿಷ್ಯೇಣ ನಿಯತಾತ್ಮನಾ ।**
**ಬ್ರೂಯಾತ್ ತತ್ತ್ವಂ ಗುರುಸ್ತಸ್ಮೈ**
**ಯೇನ ಸ್ಯಾತ್ ಸಂಸೃತೇರ್ಲಯಃ ॥ 17–75**

ನಿಯತಾತ್ಮನಾದ (ಏಕಾಗ್ರಚಿತ್ತನಾದ) ಶಿಷ್ಯನಿಂದ ಈ ಪೂರ್ವದಲ್ಲಿ ಹೇಳಿದಂತೆ ಪ್ರಶ್ನೆಗಳು ಮಾಡಲ್ಪಡಲು ಶ್ರೀ ಗುರುವು ಅವನಿಗೆ ಸಂಸಾರವನ್ನು ನೀಗಿಸುವ ತತ್ತ್ವವನ್ನು ಉಪದೇಶಿಸಬೇಕು.

**ಶಿವ ಏವ ಪರಂ ತತ್ತ್ವಮ್**
**ಚಿದಾನಂದಸದಾಕೃತಿಃ ।**
**ಸ ಯಥಾರ್ಥಸ್ತದನ್ಯಸ್ಯ**
**ಜಗತೋ ನಾಸ್ತಿ ನಿತ್ಯತಾ ॥17–76**

ಸಚ್ಚಿದಾನಂದ ರೂಪನಾದ ಶಿವನೊಬ್ಬನೇ ಪರಮತತ್ತ್ವನು. ಅವನೊಬ್ಬನೇ ಯಥಾರ್ಥನು (ನಿತ್ಯನು). ಅವನಿಗಿಂತಲೂ ಭಿನ್ನವಾದ ಜಗತ್ತಿಗೆ ನಿತ್ಯತ್ವವೂ ಇರುವುದಿಲ್ಲ.

**ಅಯಥಾರ್ಥಪ್ರಪಂಚೋಽಯಮ್**
**ಪ್ರತಿತಿಷ್ಠತಿ ಶಂಕರೇ ।**
**ಸದಾತ್ಮನಿ ಯಥಾ ಶುಕ್ತೌ**

**ರಜತತ್ವಂ ವ್ಯವಸ್ಥಿತಮ್ ॥ 17–77**

ಶುಕ್ತಿಯಲ್ಲಿ ರಜತತ್ವವು ಹೇಗೆ ವ್ಯವಸ್ಥಿತವಾಗಿರುವುದೋ (ತೋರುವುದೋ), ಅದರಂತೆ ಅಯಥಾರ್ಥವಾದ (ಅನಿತ್ಯವಾದ) ಈ ಪ್ರಪಂಚವು ನಿತ್ಯರೂಪನಾದ ಶಂಕರನಲ್ಲಿ ಪ್ರತಿಷ್ಠಿತವಾಗಿರುವುದು (ತೋರುತ್ತಿರುವುದು).

**ಶಿವೋಽಹಮಿತಿ ಭಾವೇನ**
**ಶಿವೇ ಸಾಕ್ಷಾತ್ಕೃತೇ ಸ್ಥಿರಮ್ ।**
**ಮುಕ್ತೋ ಭವತಿ ಸಂಸಾರಾತ್**
**ಮೋಹಗ್ರಂಥೇರ್ವಿಭೇದತಃ ॥ 17–78**

ಶಿವೋಽಹಂ (ಶಿವನೇ ನಾನು) ಎಂಬ ಭಾವದಿಂದ ದೃಢವಾದ ಶಿವಸಾಕ್ಷಾತ್ಕಾರ ವಾದರೋ ಮೋಹಗ್ರಂಥಿಯ ಬೋಧನದ ಮೂಲಕ ಸಾಧಕನು ಸಂಸಾರದಿಂದ ಮುಕ್ತನಾಗುತ್ತಾನೆ.

**ಶಿವಂ ಭಾವಯ ಚಾತ್ಮಾನಮ್**
**ಶಿವಾದನ್ಯಂ ನ ಚಿಂತಯ ।**
**ಏವಂ ಸ್ಥಿರೇ ಶಿವಾದ್ವೈತೇ**
**ಜೀವನ್ಮುಕ್ತೋ ಭವಿಷ್ಯಸಿ ॥17–79**

ಭೋ ಶಿಷ್ಯನೇ, ನೀನು ನಿನ್ನನ್ನು ಶಿವನನ್ನಾಗಿಯೇ ಭಾವಿಸು. ಶಿವನಿಗಿಂತಲೂ ಭಿನ್ನವಾದದ್ದನ್ನು ಚಿಂತಿಸಬೇಡ. (ಈ ರೀತಿಯಾಗಿ ಮಾಡುವುದರಿಂದ) ನಿನಗೆ ಶಿವಾದ್ವೈತ ಜ್ಞಾನವು ಸ್ಥಿರಗೊಳ್ಳಲು, ನೀನು ಜೀವನ್ಮುಕ್ತನೇ ಆಗುವೆ.

**ಏವಂ ಪ್ರಚೋದಿತಃ ಶಿಷ್ಯೋ**
**ಗುರುಣಾ ಗುಣಶಾಲಿನಾ ।**
**ಶಿವಮೇವ ಜಗತ್ ಪಶ್ಯನ್**
**ಜೀವನ್ಮುಕ್ತೋಽಭಿಜಾಯತೇ ॥ 17–80**

ಗುಣಶಾಲಿಯಾದ (ಜ್ಞಾನ ವೈರಾಗ್ಯಾದಿ ಗುಣಸಂಪನ್ನನಾದ) ಶ್ರೀಗುರುವಿನಿಂದ ಈ ರೀತಿಯಾಗಿ ಚೆನ್ನಾಗಿ ಬೋಧಿಸಲ್ಪಟ್ಟ ಶಿಷ್ಯನು, ಈ ಜಗತ್ತೆಲ್ಲವನ್ನು ಶಿವಾತ್ಮಕವೆಂದೇ ನೋಡುತ್ತಾ ಜೀವನ್ಮುಕ್ತನೇ ಆಗುತ್ತಾನೆ.

*ಇತಿ ಶುಶ್ರೂಷುಸ್ಥಲಂ*
*ಇಲ್ಲಿಗೆ ಶುಶ್ರೂಷುಸ್ಥಲವು ಮುಗಿಯಿತು.*

## 71. ಅಥ ಸೇವ್ಯಸ್ಥಲಮ್
## ಈಗ ಸೇವ್ಯಸ್ಥಲವು
## (6 ಶ್ಲೋಕಗಳು)

**ಗುರುವಾಕ್ಯಾಮೃತಾಸ್ವಾದಾತ್**
**ಪ್ರಾಪ್ತಬೋಧಮಹಾಫಲಃ ।**
**ಶುಶ್ರೂಷುರೇವ ಸರ್ವೇಷಾಮ್**
**ಸೇವ್ಯತ್ವಾತ್ ಸೇವ್ಯ ಉಚ್ಯತೇ ॥ 17–81**

ಶ್ರೀಗುರುವಿನ ಉಪದೇಶ ವಾಕ್ಯರೂಪವಾದ ಅಮೃತದ ಆಸ್ವಾದನೆಯಿಂದ ಶಿವಾದ್ವೈತ ಬೋಧರೂಪವಾದ ಮಹಾಫಲವನ್ನು ಪ್ರಾಪ್ತ ಮಾಡಿಕೊಂಡ ಶುಶ್ರೂಷುಸ್ಥಲದ ಸಾಧಕನೇ ಎಲ್ಲರಿಂದ ಸೇವಿಸಲು ಯೋಗ್ಯನಾಗಿರುವುದರಿಂದ ಅವನು ಸೇವ್ಯನೆಂದು ಕರೆಯಲ್ಪಡುತ್ತಾನೆ.

**ಗುರೂಪದಿಷ್ಟೇ ವಿಜ್ಞಾನೇ**
**ಚೇತಸಿ ಸ್ಥಿರತಾಂ ಗತೇ ।**
**ಸಾಕ್ಷಾತ್ಕೃತಶಿವಃ ಶಿಷ್ಯೋ**
**ಗುರುವತ್ ಪೂಜ್ಯತೇ ಸದಾ ॥ 17–82**

ಶ್ರೀಗುರುವಿನಿಂದ ಉಪದೇಶಿಸಲ್ಪಟ್ಟ ಅನುಭವಾತ್ಮಕವಾದ ಶಿವಾದ್ವೈತ ವಿಜ್ಞಾನವು ತನ್ನ ಮನಸ್ಸಿನಲ್ಲಿ ಸ್ಥಿರತೆಯನ್ನು ಹೊಂದಲು ಶಿವನನ್ನು ಸಾಕ್ಷಾತ್ಕರಿಸಿಕೊಂಡ ಶಿಷ್ಯನು ಯಾವಾಗಲೂ ಗುರುವಿನಂತೆ ಪೂಜಿಸಲ್ಪಡುತ್ತಾನೆ.

**ಜ್ಞಾನಾದಾಧಿಕ್ಯಸಂಪತ್ತಿಃ**
**ಗುರೋರ್ಯಸ್ಮಾದುಪಸ್ಥಿತಾ ।**
**ತಸ್ಮಾಜ್ಜ್ಞಾನಾಗಮಾಚ್ಛಿಷ್ಯೋ**
**ಗುರುವತ್ ಪೂಜ್ಯತಾಂ ವ್ರಜೇತ್॥ 17–83**

ಯಾವ ಶ್ರೀಗುರುವಿನ ದೆಸೆಯಿಂದ (ಶಿಷ್ಯನಿಗೆ) ಶಿವಾದ್ವೈತ ಜ್ಞಾನವೆಂಬ ಉತ್ಕೃಷ್ಟವಾದ ಸಂಪತ್ತಿಯು ಪ್ರಾಪ್ತವಾಗುವುದೋ, ಆ ಜ್ಞಾನಪ್ರಾಪ್ತಿಯಿಂದಲೇ ಶಿಷ್ಯನೂ ಸಹ ಗುರುವಿನಂತೆ ಪೂಜ್ಯತ್ವವನ್ನು ಪಡೆಯುತ್ತಾನೆ.

**ಶಿವೋಽಹಮಿತಿ ಭಾವಸ್ಯ**
**ನೈರಂತರ್ಯಾದ್ ವಿಶೇಷತಃ ।**
**ಶಿವಭಾವೇ ಸಮುತ್ಪನ್ನೇ**
**ಶಿವವತ್ ಪೂಜ್ಯ ಏವ ಸಃ ॥ 17–84**

'ಶಿವೋಽಹಂ' ಎಂಬ (ಶಿವನೇ ನಾನು ಎಂಬ) ಭಾವನೆಯು ನಿರಂತರ ಅಭ್ಯಾಸದಿಂದ ಶಿವಭಾವವು ಉತ್ಪನ್ನವಾಗಲು ಆ ಸೇವ್ಯನು ಶಿವನಂತೆ ಪೂಜ್ಯನಾಗುತ್ತಾನೆ.

**ವಿಷಯಾಸಕ್ತಚಿತ್ತೋಽಪಿ**
**ವಿಷಯಾಸಂಗವರ್ಜಿತಃ ।**
**ಶಿವಭಾವಯುತೋ ಯೋಗೀ**
**ಸೇವ್ಯಃ ಶಿವ ಇವಾಪರಃ ॥17–85**

ಈ ಸೇವ್ಯನು, ವಿಷಯ ಸಂಗಿಯಂತೆ ತೋರಿದರೂ ಸಹ ಶಿವಭಾವದಿಂದ ಕೂಡಿದ ಅವನು ವಿಷಯ ಸಂಗವರ್ಜಿತನಾಗಿರುತ್ತಾನೆ. ಆದ್ದರಿಂದ ಈ ಯೋಗಿಯು ದ್ವಿತೀಯ ಶಿವನಂತೆ ಜನರಿಗೆ ಸೇವ್ಯನಾಗಿರುತ್ತಾನೆ (ಪೂಜ್ಯನಾಗಿರುತ್ತಾನೆ)

**ಮುಕ್ತಃ ಸಂಶಯಪಾಶತಃ ಸ್ಥಿರಮನಾ ಬೋಧೇ ಚ ಮುಕ್ತಿಪ್ರದೇ**
**ಮೋಹಂ ದೇಹಭೃತಾಂ ದೃಶಾ ವಿಘಟಯನ್ ಮೂಲಂ ಮಹಾಸಂಸೃತೇಃ ।**
**ಸತ್ತಾನಂದಚಿದಾತ್ಮಕೇ ನಿರುಪಮೇ ಶೈವೇ ಪರಸ್ಮಿನ್ ಪದೇ**
**ಲೀನಾತ್ಮಾ ಕ್ಷಯಿತಪ್ರಪಂಚವಿಭವೋ ಯೋಗೀ ಜನೈಃ ಸೇವ್ಯತೇ॥**
**17–86**
**–ಶಾರ್ದೂಲವಿಕ್ರೀಡಿತಾ ವೃತ್ತಮ್**

ಸಂಶಯಪಾಶಗಳಿಂದ ಮುಕ್ತನಾದ ಮತ್ತು ಮುಕ್ತಿಪ್ರದಾಯಕನಾದ ಶಿವಾದ್ವೈತ ಬೋಧೆಯಲ್ಲಿ ಸ್ಥಿರ ಮನಸ್ಕನಾದ ಜೀವಿಗಳ ಸಂಸಾರಕ್ಕೆ ಮೂಲ ಕಾರಣವಾದ ಮೋಹವನ್ನು ತನ್ನ ಕೃಪಾದೃಷ್ಟಿಯಿಂದಲೇ ತೊಲಗಿಸುವ ಸಚ್ಚಿದಾನಂದ ಸ್ವರೂಪವೂ, ಉಪಮಾತೀತವೂ ಆದ ಪರಶಿವ ಪದದಲ್ಲಿ

ಲೀನಾತ್ಮನಾದ ಹಾಗೂ ಪ್ರಪಂಚದ ವೈಭವವನ್ನು ಕ್ಷಯಿಸಿ ಕೊಂಡ ಈ ಸೇವ್ಯಸ್ಥಲದ ಯೋಗಿಯು ಈ ಲೋಕದ ಜನರಿಂದ ಸೇವಿಸಿಕೊಳ್ಳಲು ಯೋಗ್ಯನಾಗಿರುತ್ತಾನೆ.

***ಇತಿ ಸೇವ್ಯಸ್ಥಲಂ*** *ಇಲ್ಲಿಗೆ ಸೇವ್ಯಸ್ಥಲವು ಮುಗಿಯಿತು.*

***ಓಂ ತತ್ಸತ್ ಇತಿ***
***ಶ್ರೀ ಶಿವಗೀತೇಷು ಸಿದ್ಧಾಂತಾಗಮೇಷು ಶಿವಾದ್ವೈತವಿದ್ಯಾಯಾಂ ಶಿವಯೋಗಶಾಸ್ತ್ರೇ ಶ್ರೀರೇಣುಕಾಗಸ್ತ್ಯಸಂವಾದೇ ವೀರಶೈವಧರ್ಮನಿರ್ಣಯೇ ಶ್ರೀಶಿವಯೋಗಿಶಿವಾಚಾರ್ಯವಿರಚಿತೇ ಶ್ರೀಸಿದ್ಧಾಂತಶಿಖಾಮಣೌ ಲಿಂಗಸ್ಥಲಾಂತರ್ಗತ ಪ್ರಸಾದಿಸ್ಥಲೇ ಕಾಯಾನುಗ್ರಹಾದಿನವವಿಧಸ್ಥಲಪ್ರಸಂಗೋ ನಾಮ ಸಪ್ತದಶಃ ಪರಿಚ್ಛೇದಃ ॥***

*ಓಂ ತತ್ಸತ್ ಇಲ್ಲಿಗೆ ಶ್ರೀ ಶಿವನಿಂದ ಉಪದೇಶಿಸಲ್ಪಟ್ಟ*
*ಶ್ರೀ ಸಿದ್ಧಾಂತಾಗಮಗಳಲ್ಲಿಯ ಶಿವಾದ್ವೈತವಿದ್ಯಾರೂಪವೂ, ಶಿವಯೋಗಶಾಸ್ತ್ರವೂ, ಶ್ರೀ ರೇಣುಕಾಗಸ್ತ್ಯಸಂವಾದರೂಪವೂ, ಶ್ರೀ ವೀರಶೈವ ಧರ್ಮನಿರ್ಣಯವೂ,*
*ಶ್ರೀ ಶಿವಯೋಗಿ ಶಿವಾಚಾರ್ಯ ವಿರಚಿತವೂ ಆದ ಶ್ರೀ ಸಿದ್ಧಾಂತ ಶಿಖಾಮಣಿಯಲ್ಲಿ ಲಿಂಗಸ್ಥಲಾಂತರ್ಗತವಾದ ಪ್ರಸಾದಿಸ್ಥಲದಲ್ಲಿಯ ಕಾಯಾನುಗ್ರಹಾದಿ ಒಂಭತ್ತು ವಿಧ ಸ್ಥಲಪ್ರಸಂಗವೆಂಬ ಹೆಸರಿನ ಹದಿನೇಳನೆಯ ಪರಿಚ್ಛೇದವು ಮುಗಿದುದು.*

## **ಅಷ್ಟಾದಶಃ ಪರಿಚ್ಛೇದಃ**

ಹದಿನೆಂಟನೆಯ ಪರಿಚ್ಛೇದವು

**(78 ಶ್ಲೋಕಗಳು)**

### **ಪ್ರಾಣಲಿಂಗಿಸ್ಥಲಾಂತರ್ಗತನವವಿಧಲಿಂಗಸ್ಥಲಪ್ರಸಂಗಃ**

ಪ್ರಾಣಲಿಂಗಿಸ್ಥಲಾಂತರ್ಗತವಾದ ನವವಿಧಲಿಂಗಸ್ಥಲ ಪ್ರಸಂಗವು

### **ಅಥ ಪ್ರಾಣಲಿಂಗಿಸ್ಥಲಮ್**

ಈಗ ಪ್ರಾಣಲಿಂಗಿಸ್ಥಲವು

**(4 ಶ್ಲೋಕಗಳು)**

**॥ ಅಗಸ್ತ್ಯ ಉವಾಚ ॥**
**ಪ್ರಸಾದಿಸ್ಥಲಸಂಬದ್ಧಾಃ**
**ಸ್ಥಲಭೇದಾಃ ಪ್ರಕೀರ್ತಿತಾಃ ।**
**ಪ್ರಾಣಲಿಂಗಿಸ್ಥಲಾರೂಢಾನ್**
**ಸ್ಥಲಭೇದಾನ್ ವದಸ್ವ ಮೇ ॥ 18–1**

ಹೇ ಗಣೇಶ್ವರನೇ, ಪ್ರಸಾದಿ ಸ್ಥಲಕ್ಕೆ ಸಂಬಂಧಪಟ್ಟ ಸ್ಥಲ ಭೇದಗಳು ತಮ್ಮಿಂದ ಉಪದೇಶಿಸಲ್ಪಟ್ಟಿವೆ. (ಈಗ ತಾವು) ನನಗೆ ಪ್ರಾಣಲಿಂಗಿ ಸ್ಥಲದಲ್ಲಿರುವ ಸ್ಥಲ ಭೇದವನ್ನು ಕುರಿತು ಹೇಳುವವರಾಗಿರಿ.

**॥ ಶ್ರೀ ರೇಣುಕ ಉವಾಚ ॥**
**ಸ್ಥಲಾನಾಂ ನವಕಂ ಪ್ರೋಕ್ತಮ್**
**ಪ್ರಾಣಲಿಂಗಿಸ್ಥಲಾಶ್ರಿತಮ್ ।**
**ಆದಾವಾತ್ಮಸ್ಥಲಂ ಪ್ರೋಕ್ತಮ್**
**ಅಂತರಾತ್ಮಸ್ಥಲಂ ತತಃ ॥ 18–2**
**ಪರಮಾತ್ಮಸ್ಥಲಂ ಪಶ್ಚಾತ್**
**ನಿರ್ದೇಹಾಗಮಸಂಜ್ಞಕಮ್ ।**
**ನಿರ್ಭಾವಾಗಮಸಂಜ್ಞಂ ಚ**
**ತತೋ ನಷ್ಟಾಗಮಸ್ಥಲಮ್ ॥ 18–3**

**ಆದಿಪ್ರಸಾದನಾಮಾಥ**
**ತತೋಽಪ್ಯಂತ್ಯಪ್ರಸಾದಕಮ್ ।**
**ಸೇವ್ಯಪ್ರಸಾದಕಂ ಚಾಥ**
**ಶ್ರುಣು ತೇಷಾಂ ಚ ಲಕ್ಷಣಮ್ ॥ 18–4**

ಹೇ ಮುನಿಶ್ರೇಷ್ಠನೇ, ಈ ಪ್ರಾಣಲಿಂಗಿಸ್ಥಲದಲ್ಲಿ ಒಂಭತ್ತು ಸ್ಥಲಗಳು ಹೇಳಲ್ಪಟ್ಟಿವೆ. ಅವುಗಳಲ್ಲಿ ಮೊದಲನೆಯದು ಆತ್ಮಸ್ಥಲವು, ಅನಂತರ ಅಂತರಾತ್ಮಸ್ಥಲವು. ಅದಾದ ಮೇಲೆ ಪರಮಾತ್ಮಸ್ಥಲವು. ತರುವಾಯ ನಿರ್ದೇಹಾಗಮಸ್ಥಲವು, ನಂತರ

ನಿರ್ಭಾವಾಗಮಸ್ಥಲವು. ಅದಾದ ಮೇಲೆ ನಷ್ಟಾಗಮಸ್ಥಲವು, ತದನಂತರ ಆದಿ ಪ್ರಸಾದಿಸ್ಥಲವು, ಆನಂತರ ಅಂತ್ಯಪ್ರಸಾದಿಸ್ಥಲವು. ಅದಾದ ಮೇಲೆ ಸೇವ್ಯಪ್ರಸಾದಿ ಸ್ಥಲವು. ಇನ್ನು ಇವುಗಳ ಲಕ್ಷಣಗಳನ್ನು ಕೇಳುವಂತಹವನಾಗು.

## 72. ಅಥ ಆತ್ಮಸ್ಥಲಮ್
ಈಗ ಆತ್ಮಸ್ಥಲವು
**(13 ಶ್ಲೋಕಗಳು)**

**ಜೀವಭಾವಂ ಪರಿತ್ಯಜ್ಯ**
**ಯದಾ ತತ್ತ್ವಂ ವಿಭಾವ್ಯತೇ ।**
**ಗುರೋಶ್ಚ ಬೋಧಯೋಗೇನ**
**ತದಾತ್ಮಾಽಯಂ ಪ್ರಕೀರ್ತಿತಃ ॥ 18-5**

ಶ್ರೀಗುರುವಿನಿಂದ ಮಾಡಿದ ಶಿವಾದ್ವೈತ ಬೋಧೆಯಿಂದ ಶಿಷ್ಯನು ತನ್ನ ಜೀವಭಾವವನ್ನು ಪರಿತ್ಯಜಿಸಿ ಯಾವಾಗ ಪರತತ್ತ್ವವನ್ನು ಭಾವಿಸುವನೋ ಆಗ ಅವನು ಆತ್ಮಸ್ಥಲಿಯೆಂದು ಕರೆಯಿಸಿಕೊಳ್ಳುವನು.

**ವಾಲಾಗ್ರಶತಭಾಗೇನ**
**ಸದೃಶೋ ಹೃದಯಸ್ಥಿತಃ ।**
**ಅಶ್ನನ್ ಕರ್ಮಫಲಂ ಸರ್ವಮ್**
**ಆತ್ಮಾ ಸ್ಫುರತಿ ದೀಪವತ್ ॥ 18-6**

ಈ ಆತ್ಮನು ಕೂದಲಿನ ಅಗ್ರಭಾಗದ ಶತಭಾಗಕ್ಕೆ ಸಮಾನವಾದ ಪ್ರಮಾಣವುಳ್ಳವನಾಗಿ (ಅತ್ಯಂತ ಸೂಕ್ಷ್ಮ ರೂಪವಾಗಿ) ಹೃದಯದಲ್ಲಿ ಇದ್ದುಕೊಂಡು ತನ್ನ ಕರ್ಮಫಲಗಳನ್ನು ಅನುಭವಿಸುತ್ತಾ ದೀಪದಂತೆ ಪ್ರಕಾಶಮಾನವಾಗಿದ್ದಾನೆ.

**ಆತ್ಮಾಽಪಿ ಸರ್ವಭೂತಾನಾಮ್**
**ಅಂತಃಕರಣಮಾಶ್ರಿತಃ ।**
**ಅಣುಭೂತೋ ಮಲಾಸಂಗಾದ್**
**ಆದಿಕರ್ಮನಿಯಂತ್ರಿತಃ ॥ 18-7**

ಈ ಆತ್ಮನು ಎಲ್ಲ ಭೂತಗಳ ಆತ್ಮನಾಗಿದ್ದರೂ ಸಹ (ವ್ಯಾಪಕವಾಗಿದ್ದರೂ) ಮಲಗಳ ಸಂಗದಿಂದ (ಆಣವಾದಿ ಮಲಗಳ ಸಂಬಂಧದಿಂದ) ತಾನು ಅಣುರೂಪನಾಗಿ ಅಂತಃಕರಣವನ್ನು ಆಶ್ರಯಿಸಿಕೊಂಡು ತನ್ನ ಪ್ರಾಚೀನವಾದ ಕರ್ಮಪಾಶದಿಂದ ಬಂಧಿಸಲ್ಪಟ್ಟಿದ್ದಾನೆ.

**ಜಪಾಯೋಗಾದ್ಯಥಾ ರಾಗಃ**
**ಸ್ಫಟಿಕಸ್ಯ ಮಣೇರ್ಭವೇತ್ ।**
**ತಥಾಽಹಂಕಾರಸಂಬಂಧಾತ್**
**ಆತ್ಮನೋ ದೇಹಮಾನಿತಾ ॥ 18-8**

ಜಪಾಕುಸುಮ ಯೋಗದಿಂದ (ಕೆಂಪು ದಾಸವಾಳದ ಸಂಬಂಧದಿಂದ) ಹೇಗೆ ಸ್ಫಟಿಕಮಣಿಗೆ ಕೆಂಪುಬಣ್ಣದ ಸಂಬಂಧವಾಗುವುದೋ ಅದರಂತೆ ಅಹಂಕಾರದ ಸಂಬಂಧದಿಂದ ಈ ಆತ್ಮನಿಗೆ ದೇಹಾಭಿಮಾನವು ಉಂಟಾಗುತ್ತದೆ.

**ಅಶರೀರೋಽಪಿ ಸರ್ವತ್ರ**
**ವ್ಯಾಪಕೋಽಪಿ ನಿರಂಜನಃ ।**
**ಆತ್ಮಾ ಮಾಯಾಶರೀರಸ್ಥಃ**
**ಪರಿಭ್ರಮತಿ ಸಂಸೃತೌ ॥ 18-9**

ಈ ಆತ್ಮನು ಅಶರೀರನಾಗಿದ್ದರೂ, ಸರ್ವತ್ರ ವ್ಯಾಪಕನಾಗಿದ್ದರೂ ಮತ್ತು ನಿರಂಜನನಾಗಿದ್ದರೂ (ದೋಷರಹಿತನಾಗಿದ್ದರೂ) ಸಹ ಮಾಯಾಶರೀರಸ್ಥನಾಗಿ (ಅಧೋಮಾಯೆಯಿಂದ ಕಲ್ಪಿಸಲ್ಪಟ್ಟ ಶರೀರದಲ್ಲಿ ವಾಸಿಸುವವನಾಗಿ) ಸಂಸಾರ ಚಕ್ರದಲ್ಲಿ ಸುತ್ತುತ್ತಿರುತ್ತಾನೆ.
(ತಾತ್ಪರ್ಯ : ಶಕ್ತಿ ಸದಾಶಿವೇಶ್ವರ ವಿದ್ಯಾರೂಪವಾಗಿ ಅಪರಮುಕ್ತಿ ಕ್ಷೇತ್ರವಾದ ಶುದ್ಧಮಯಾ ಶರೀರಸ್ಥ ನಾದಾತ್ಮನಿಗೆ ಸಂಸಾರವಿಲ್ಲವೆಂದರ್ಥ. ಆಧಾರ – ಸಿದ್ಧಾಂತ ಶಿಖಾಮಣಿ ಸೋಸಲೆ ಶ್ರೀ ರೇವಣಾರಾಧ್ಯರ ಗ್ರಂಥ)

**ಆತ್ಮಸ್ವರೂಪವಿಜ್ಞಾನಮ್**
**ದೇಹೇಂದ್ರಿಯವಿಭಾಗತಃ ।**
**ಅಖಂಡಬ್ರಹ್ಮರೂಪೇಣ**
**ತದಾತ್ಮಪ್ರಾಪ್ತಿರುಚ್ಯತೇ ॥ 18–10**

ದೇಹ, ಇಂದ್ರಿಯಗಳಿಗಿಂತ ನಾನು ಭಿನ್ನನಾಗಿದ್ದೇನೆ ಮತ್ತು ನಾನು ಅಖಂಡ ಬ್ರಹ್ಮರೂಪನಾಗಿದ್ದೇನೆ ಎಂಬುದಾಗಿ ತನ್ನ ಆತ್ಮಸ್ವರೂಪದ ಅನುಭವಾತ್ಮಕ ಜ್ಞಾನವನ್ನು ಪ್ರಾಪ್ತ ಮಾಡಿಕೊಳ್ಳುವುದೇ ಆತ್ಮಪ್ರಾಪ್ತಿಯೆಂದು ಹೇಳಲ್ಪಡುತ್ತದೆ.

**ನ ಚಾಸ್ತಿ ದೇಹಸಂಬಂಧೋ**
**ನಿರ್ದೇಹಸ್ಯ ಸ್ವಭಾವತಃ ।**
**ಅಜ್ಞಾನಕರ್ಮಯೋಗೇನ**
**ದೇಹೀ ಭವತಿ ಭುಕ್ತಯೇ ॥ 18–11**

ನಿರ್ದೇಹಿಯಾದ ಆತ್ಮನಿಗೆ ಸ್ವಾಭಾವಿಕವಾಗಿ (ಸಹಜವಾಗಿ) ದೇಹಸಂಬಂಧವು ಇರುವುದಿಲ್ಲ. ಆದರೆ ಅನಾದಿಯಾದ (ಆಣವಾದಿ ಮಲ ಹಾಗೂ ಕರ್ಮಸಂಬಂಧದಿಂದ) ಕರ್ಮಫಲದ ಭೋಗಕ್ಕಾಗಿ 'ದೇಹ'ವುಳ್ಳವನಾಗುತ್ತಾನೆ.

**ನಾಸೌ ದೇವೋ ನ ಗಂಧರ್ವೋ**
**ನ ಯಕ್ಷೋ ನೈವ ರಾಕ್ಷಸಃ ।**
**ನ ಮನುಷ್ಯೋ ನ ತಿರ್ಯಕ್ ಚ**
**ನ ಚ ಸ್ಥಾವರವಿಗ್ರಹಃ ।**
**ತತ್ತಚ್ಛರೀರಯೋಗೇನ**
**ತತ್ತನ್ನಾಮ್ನಾ ವಿರಾಜತೇ ॥ 18–12**

ಈ ಆತ್ಮನು ದೇವನೂ ಅಲ್ಲ, ಗಂಧರ್ವನೂ ಅಲ್ಲ, ಯಕ್ಷನೂ ಅಲ್ಲ, ರಾಕ್ಷಸನೂ ಅಲ್ಲ, ಮನುಷ್ಯನೂ ಅಲ್ಲ, ತಿರ್ಯಕ್ ಪ್ರಾಣಿಯೂ ಅಲ್ಲ ಮತ್ತು ಸ್ಥಾವರ ಶರೀರಿಯೂ ಅಲ್ಲ (ತರು ಮರಾದಿಗಳಲ್ಲ) ಆದರೆ ಆಯಾ ಶರೀರಗಳ ಸಂಬಂಧದಿಂದ ಆಯಾ ಹೆಸರುಗಳಿಂದ ಕರೆಯಲ್ಪಡುತ್ತಾನೆ.

**ನಾನಾಕರ್ಮವಿಪಾಕಾಶ್ಚ**
**ನಾನಾಯೋನಿಸಮಾಶ್ರಿತಾಃ ।**
**ನಾನಾಯೋಗಸಮಾಪನ್ನಾ**
**ನಾನಾ ಬುದ್ಧಿವಿಚೇಷ್ಟಿತಾಃ ॥ 18–13**

**ನಾನಾಮಾರ್ಗಸಮಾರೂಢಾ**
**ನಾನಾಸಂಕಲ್ಪಕಾರಿಣಃ ।**

**ಅಸ್ವತಂತ್ರಾಶ್ಚ ಕಿಂಚಿಜ್ಜ್ಞಾಃ**
**ಕಿಂಚಿತ್ಕರ್ತೃತ್ವಹೇತವಃ ।**
**ಲೀಲಾಭಾಜನತಾಂ ಪ್ರಾಪ್ತಾಃ**
**ಶಿವಸ್ಯ ಪರಮಾತ್ಮನಃ ॥ 18–14**

ಈ ಜೀವರು ತಮ್ಮ ನಾನಾ ವಿಧಗಳಾದ ಪೂರ್ವಕರ್ಮದ ಪರಿಪಾಕದಿಂದ ದೇವ ಮನುಷ್ಯಾದಿ ನಾನಾ ಯೋನಿಗಳಲ್ಲಿ ಹುಟ್ಟಿ ಅನೇಕ ವಿಧವಾದ ಯೋಗಗಳನ್ನು ಪಡೆದು (ಅನೇಕ ಅಪ್ರಾಪ್ತ ವಸ್ತುಗಳನ್ನು ಪ್ರಾಪ್ತ ಮಾಡಿಕೊಂಡು) ಅನೇಕ ವಿಧವಾದ ಬುದ್ಧಿಗಳಿಂದ ವ್ಯವಹರಿಸುವವರಾಗಿ, ನಾನಾ ವಿಧಗಳಾದ ಷಡ್ದರ್ಶನಾದಿ ಮಾರ್ಗಗಳನ್ನು ಅವಲಂಬಿಸಿ, ಅನೇಕ ಸಂಕಲ್ಪಗಳನ್ನು ಮಾಡುತ್ತಾ, ಅಸ್ವತಂತ್ರರಾಗಿ, ಅಲ್ಪಜ್ಞರಾಗಿ, ಅಲ್ಪಕರ್ತೃತ್ವಶಕ್ತಿಯುಳ್ಳವರಾದ (ಈ ಜೀವಿಗಳು) ಪರಮಾತ್ಮನಾದ ಶಿವನಿಗೆ ಲೀಲಾ ಭಾಜನರಾಗುತ್ತಾರೆ.

**ಚೋದಿತಾಃ ಪರಮೇಶೇನ**
**ಸ್ವಸ್ವಕರ್ಮಾನುರೂಪತಃ ।**
**ಸ್ವರ್ಗಂ ವಾ ನರಕಂ ವಾಪಿ**
**ಪ್ರಾಣಿನೋ ಯಾಂತಿ ಕರ್ಮಿಣಃ ॥ 18–15**

ಕರ್ಮಿಗಳಾದ (ಕರ್ಮಬದ್ಧರಾದ) ಈ ಜೀವರು ತಮ್ಮ ತಮ್ಮ ಕರ್ಮಾನುಸಾರವಾಗಿ ಪರಮಾತ್ಮನಿಂದ ಪ್ರೇರಿತರಾಗಿ ಸ್ವರ್ಗವನ್ನೇ ಆಗಲಿ ಅಥವಾ ನರಕವನ್ನೇ ಆಗಲಿ ಹೊಂದುತ್ತಾರೆ.

**ಪುನಃ ಕರ್ಮಾವಶೇಷೇಣ**
**ಜಾಯಂತೇ ಗರ್ಭಕೋಟರಾತ್ ।**
**ಜಾತಾ ಮೃತಾಃ ಪುನರ್ಜಾತಾಃ**
**ಪುನರ್ಮರಣಭಾಜಿನಃ ।**
**ಭ್ರಮಂತಿ ಘೋರಸಂಸಾರೇ**
**ವಿಶ್ರಾಂತಿಕಥಯಾ ವಿನಾ ॥18–16**

(ಹೀಗೆ ಸ್ವರ್ಗ ಹಾಗೂ ನರಕಗಳಲ್ಲಿ ಪುಣ್ಯ ಪಾಪಗಳ ಫಲವನ್ನು ಅನುಭವಿಸಿ) ಪುನಃ ಉಳಿದ ಕರ್ಮಶೇಷವನ್ನು ತೆಗೆದುಕೊಂಡು ಆ ಜೀವಿಗಳು ಗರ್ಭಗಳಿಂದ ಪುನಃ ಹುಟ್ಟುತ್ತಾರೆ. ಹುಟ್ಟಿದ ಅವರು ಮತ್ತೆ ಮೃತರಾಗುತ್ತಾರೆ; ಪುನಃ ಹುಟ್ಟುತ್ತಾರೆ. ಮರಣ ಭಾಜನರಾಗುತ್ತಾರೆ. ಹೀಗೆ ಈ ಘೋರವಾದ ಸಂಸಾರದಲ್ಲಿ ವಿಶ್ರಾಂತಿಯ ಮಾತೇ ಇಲ್ಲದೆ ಯಾವಾಗಲೂ ಸುತ್ತುತ್ತಿರುತ್ತಾರೆ.

**ಜೀವತ್ವಂ ದುಃಖಸರ್ವಸ್ವಮ್**
**ತದಿದಂ ಮಲಕಲ್ಪಿತಮ್ ।**
**ನಿರಸ್ಯತೇ ಗುರೋರ್ಬೋಧಾತ್**
**ಜ್ಞಾನಶಕ್ತಿಃ ಪ್ರಕಾಶತೇ ॥ 18–17**

ಆಣವಾದಿ ಮಲಗಳಿಂದ ಕಲ್ಪಿಸಲ್ಪಟ್ಟ ದುಃಖವೇ ಸರ್ವಸ್ವವಾಗಿರುವ (ದುಃಖರೂಪವಾಗಿರುವ) ಈ ಜೀವಭಾವವು ಗುರುವಿನ ಬೋಧೆಯಿಂದ ನಿವಾರಿಸಲ್ಪಡುತ್ತದೆ ಮತ್ತು ಸಾಧಕನಲ್ಲಿ ಜ್ಞಾನಶಕ್ತಿಯನ್ನು ಪ್ರಕಾಶಗೊಳಿಸುತ್ತದೆ.

***ಇತಿ ಆತ್ಮಸ್ಥಲಂ*** *ಇಲ್ಲಿಗೆ ಆತ್ಮಸ್ಥಲವು ಮುಗಿಯಿತು.*

## 73. ಅಥ ಅಂತರಾತ್ಮಸ್ಥಲಮ್

ಈಗ ಅಂತರಾತ್ಮಸ್ಥಲವು

**(10 ಶ್ಲೋಕಗಳು)**

**ಯದಾ ನಿರಸ್ತಂ ಜೀವತ್ವಮ್**
**ಭವೇದ್ ಗುರ್ವನುಬೋಧತಃ ।**
**ತದಾಂತರಾತ್ಮಭಾವೋಽಪಿ**
**ನಿರಸ್ತಸ್ಯ ಭವೇದ್ ಧ್ರುವಮ್ ॥ 18–18**

ಶ್ರೀಗುರುವಿನ ಬೋಧದಿಂದ ಯಾವಾಗ ಈ ಆತ್ಮಸ್ಥಲದ ಸಾಧಕನಿಗೆ ಜೀವತ್ವಭಾವವು ನಿರಸ್ತವಾಗುವುದೋ (ಇಲ್ಲವಾಗುವುದೋ) ಆಗ ನಿರಾಕರಿಸಲ್ಪಟ್ಟ ಜೀವತ್ವ ಭಾವವುಳ್ಳ ಅವನಿಗೆ ಅಂತರಾತ್ಮ ಭಾವವು ನಿಶ್ಚಯವಾಗಿ ಉಂಟಾಗುವುದು.

**ದೇಹಸ್ಥಿತೋಽಪ್ಯಯಂ ಜೀವೋ**
**ದೇಹಸಂಗವಿವರ್ಜಿತಃ ।**
**ಬೋಧಾತ್ಪರಾತ್ಮಭಾವಿತ್ವಾತ್**
**ಅಂತರಾತ್ಮೇತಿ ಕೀರ್ತಿತಃ ॥ 18–19**

ಈ ಜೀವನು ದೇಹಸ್ಥನಾಗಿದ್ದರೂ ಸಹ ಗುರುಬೋಧೆಯಿಂದುಂಟಾದ ಸ್ವಸ್ವರೂಪ ಜ್ಞಾನದ ದೆಸೆಯಿಂದ,
ದೇಹಸಂಗವಿಲ್ಲದವನಾಗಿ ಪರಾತ್ಮ ಭಾವವುಳ್ಳವನಾದ್ದರಿಂದ ಅವನು ಅಂತರಾತ್ಮನೆಂದು ಕರೆಯಿಸಿಕೊಳ್ಳುತ್ತಾನೆ.

**ಆತ್ಮಾಂತರಾಲವರ್ತಿತ್ವಾತ್**
**ಜೀವಾತ್ಮಪರಮಾತ್ಮನೋಃ ।**
**ಯೋಗಾದುಭಯಧರ್ಮಾಣಾಮ್**
**ಅಂತರಾತ್ಮೇತಿ ಕೀರ್ತಿತಃ ॥ 18–20**

ಈ ಆತ್ಮನು ಜೀವಾತ್ಮ ಮತ್ತು ಪರಮಾತ್ಮ ಇವರೀರ್ವರ ಮಧ್ಯದಲ್ಲಿ ಇರುವುದರಿಂದ ಮತ್ತು ಅವರೀರ್ವರ ಧರ್ಮಗಳಿಂದ ಕೂಡಿಕೊಂಡಿರುವುದರಿಂದ (ಕರ್ತೃತ್ವ ಮತ್ತು ಭೋಕ್ತೃತ್ವಗಳಾದ ಜೀವಾತ್ಮ ಧರ್ಮವನ್ನು ಹಾಗೂ ಸಾಕ್ಷೀರೂಪವಾದ ಪರಮಾತ್ಮ ಧರ್ಮವನ್ನು ಹೊಂದಿರುವುದರಿಂದ) ಅವನು ಅಂತರಾತ್ಮನೆನಿಸಿಕೊಳ್ಳುವನು.

**ಅಹಂಕಾರಸ್ಯ ಸಂಬಂಧಾತ್**
**ಮನುಷ್ಯತ್ವಾದಿವಿಭ್ರಮಃ ।**
**ನ ಸ್ವಭಾವ ಇತಿ ಜ್ಞಾನಾತ್**
**ಅಂತರಾತ್ಮೇತಿ ಕಥ್ಯತೇ ॥ 18–21**

ಜೀವಾತ್ಮನಲ್ಲಿಯ ಮನುಷ್ಯತ್ವಾದಿ ಭ್ರಾಂತಿಯು ಪರಿಚ್ಛಿನ್ನವಾದ ಮೂಲ ಅಹಂಕಾರದ ಸಂಬಂಧದ ದೆಸೆಯಿಂದ ತೋರುವುದಲ್ಲದೆ ಅದು ಸ್ವಾಭಾವಿಕವಾದುದಲ್ಲ ಎಂಬ ಜ್ಞಾನವು ಇವನಿಗೆ ಇರುವುದರಿಂದ, ಇವನು ಅಂತರಾತ್ಮನೆಂದು ಹೇಳಲ್ಪಡುತ್ತಾನೆ.

**ಯಥಾ ಪದ್ಮಪಲಾಶಸ್ಯ**
**ನ ಸಂಗೋ ವಾರಿಣಾ ಭವೇತ್ ।**
**ತಥಾ ದೇಹಜುಷೋಽಪ್ಯಸ್ಯ**
**ನ ಶರೀರೇಣ ಸಂಗತಿಃ ॥ 18–22**

ತಾವರೆಯ ಎಲೆಯು ಹೇಗೆ ನೀರಿನಲ್ಲಿದ್ದರೂ ನೀರಿನ ಸಂಗವಿಲ್ಲ ದಂತಿರುವುದೋ ಅದರಂತೆ ಈ ಅಂತರಾತ್ಮನು ದೇಹವನ್ನು ಹೊಂದಿದ್ದರೂ, ಶರೀರದ ಸಂಗವು ಅವನಿಗೆ ಇರುವುದಿಲ್ಲ (ಅವನು ದೇಹಧರ್ಮಗಳನ್ನು ತನ್ನ ಮೇಲೆ
ಆರೋಪಿಸಿಕೊಳ್ಳುವುದಿಲ್ಲ).

**ನೀಡಸ್ಥಿತೋ ಯಥಾ ಪಕ್ಷೀ**
**ನಿಡಾದ್ಭಿನ್ನಃ ಪ್ರದೃಶ್ಯತೇ ।**
**ದೇಹಸ್ಥಿತಸ್ತಥಾತ್ಮಾಯಮ್**

**ದೇಹಾದನ್ಯಃ ಪ್ರಕಾಶ್ಯತೇ ॥ 18–23**

ಗೂಡಿನಲ್ಲಿರುವ ಪಕ್ಷಿಯು ಹೇಗೆ ಗೂಡಿಗಿಂತಲೂ ಭಿನ್ನವಾಗಿ ಕಾಣುತ್ತದೆಯೋ ಅದರಂತೆ ದೇಹದಲ್ಲಿರುವ ಈ ಅಂತರಾತ್ಮನು ದೇಹಕ್ಕಿಂತಲೂ ಭಿನ್ನವಾಗಿ ಪ್ರಕಾಶಿಸುತ್ತಾನೆ.

**ಆಚ್ಛಾದ್ಯತೇ ಯಥಾ ಚಂದ್ರೋ**
**ಮೇಘೈರಾಸಂಗವರ್ಜಿತೈಃ ।**
**ತಥಾತ್ಮಾ ದೇಹಸಂಘಾತೈಃ**
**ಅಸಂಗಪರಿವೇಷ್ಟಿತಃ ॥ 18–24**

ಚಂದ್ರನು ಹೇಗೆ ತನ್ನನ್ನು ಸ್ಪರ್ಶಿಸದೆ ಇರುವ ಮೇಘಗಳಿಂದ ಆವರಿಸಲ್ಪಡುತ್ತಾನೆಯೋ (ಮರೆಮಾಡಲ್ಪಡುತ್ತಾನೆಯೋ) ಅದರಂತೆ ಜೀವಭಾವ ನಿವೃತ್ತಿಗೊಂಡ ಈ ಅಂತರಾತ್ಮನು ಸ್ಥೂಲಾದಿದೇಹಗಳ ಗುಣಸಂಗವನ್ನು ಹೊಂದದೆ ಅವುಗಳಿಂದ ಆವರಿಸಲ್ಪಟ್ಟಿರುವನು.

**ನಿರ್ಮಮೋ ನಿರಹಂಕಾರೋ**
**ನಿರಸ್ತೋಪಾಧಿವಿಕ್ಲವಃ ।**
**ದೇಹಸ್ಥೋಽಪಿ ಸದಾ ಹ್ಯಾತ್ಮಾ**
**ಶಿವಂ ಪಶ್ಯತಿ ಯೋಗತಃ ॥ 18–25**

ಈ ಅಂತರಾತ್ಮನು ದೇಹಸ್ಥನಾಗಿದ್ದರೂ ಅಹಂಕಾರ ಮಮಕಾರ ರಹಿತನಾಗಿರುವುದರಿಂದ ಮತ್ತು ದೇಹಾದಿ ಉಪಾಧಿಗಳ ಬಾಧೆಯಿಲ್ಲ ದಿರುವುದರಿಂದ ಇವನು ಯಾವಾಗಲೂ ಶಿವಯೋಗ ಮಾರ್ಗದಿಂದ ಶಿವನನ್ನೇ ನೋಡುತ್ತಿರುತ್ತಾನೆ.

**ಭೋಕ್ತೃಭೋಜ್ಯಪರಿತ್ಯಾಗಾತ್**
**ಪ್ರೇರಕಸ್ಯ ಪ್ರಸಾದತಃ ।**
**ಭೋಕ್ತೃತಾಭಾವಗಲಿತಃ**
**ಸ್ಫುರತ್ಯಾತ್ಮಾ ಸ್ವಭಾವತಃ ॥ 18–26**

ಈ ಅಂತರಾತ್ಮನು ತನ್ನ ಪೂರ್ವದ ಜೀವಭಾವದಲ್ಲಿಯ ಭೋಕ್ತೃತ್ವವನ್ನು ಮತ್ತು ಭೋಜ್ಯಗಳಾದ ವಿಷಯಗಳನ್ನು ಪರಿತ್ಯಾಗ ಮಾಡಿರುವುದರಿಂದ ಮತ್ತು ಪ್ರೇರಕನಾದ ಶಿವನ 'ಅನುಗ್ರಹವು' ದೊರೆತಿರುವುದರಿಂದ ತನ್ನ ಭೋಕ್ತೃಭಾವವನ್ನು ನಿವೃತ್ತಿ ಮಾಡಿಕೊಂಡವನಾಗಿ ಸ್ವಸ್ವರೂಪದಿಂದ ಪ್ರಕಾಶಿಸುತ್ತಿಹನು.

**ಸರ್ವೇಷಾಂ ಪ್ರೇರಕತ್ವೇನ**
**ಶಂಭುರಂತಃಸ್ಥಿತಃ ಸದಾ ।**
**ತತ್ಪರಿಜ್ಞಾನಯೋಗೇನ**
**ಯೋಗೀ ನಂದತಿ ಮುಕ್ತವತ್ ॥ 18–27**

ಪ್ರೇರಕನಾಗಿರುವ ಶಂಭುವು ಎಲ್ಲರ ಹೃದಯದಲ್ಲಿ ಸದಾ ವಾಸಿಸುತ್ತಿರುತ್ತಾನೆ. ಆ ಶಂಭುವಿನ ಅನುಸಂಧಾನ ಮಾಡುವ ಜ್ಞಾನಯೋಗದಿಂದ ಕೂಡಿದ ಈ ಅಂತರಾತ್ಮ ಯೋಗಿಯು ಮುಕ್ತನಂತೆ ಆನಂದವಾಗಿರುತ್ತಾನೆ.

*ಇತಿ ಅಂತರಾತ್ಮಸ್ಥಲಂ*
*ಇಲ್ಲಿಗೆ ಅಂತರಾತ್ಮಸ್ಥಲವು ಮುಗಿಯಿತು.*

## 74. ಅಥ ಪರಮಾತ್ಮಸ್ಥಲಮ್
ಈಗ ಪರಮಾತ್ಮಸ್ಥಲವು
**(8 ಶ್ಲೋಕಗಳು)**

**ನಿರ್ಧೂತೇ ತತ್ತ್ವಬೋಧೇನ**
**ಮಲೇ ಸಂಸಾರಕಾರಣೇ ।**
**ಸಾಮರಸ್ಯಾತ್ ಪರಾತ್ಮಸ್ಥಾತ್**
**ಪರಮಾತ್ಮಾಯಮುಚ್ಯತೇ ॥ 18–28**

ಈ ಅಂತರಾತ್ಮನಿಗೆ ಶಿವಾದ್ವೈತ ಪ್ರಬೋಧನದಿಂದ ಸಂಸಾರಕ್ಕೆ ಕಾರಣೀಭೂತಗಳಾದ ಮಲಗಳು ಅಳಿಯಲಾಗಿ ಮತ್ತು ಆ ಪರಮಾತ್ಮನೊಂದಿಗೆ ಸಾಮರಸ್ಯ ಸ್ಥಿತಿ ಪ್ರಾಪ್ತವಾಗಲು ಅವನು ಪರಮಾತ್ಮನೆಂದು ಕರೆಯಲ್ಪಡುತ್ತಾನೆ.

**ಸರ್ವೇಷಾಮಾತ್ಮಭೇದಾನಾಮ್**
**ಉತ್ಕೃಷ್ಟತ್ವಾತ್ ಸ್ವತೇಜಸಾ ।**
**ಪರಮಾತ್ಮಾ ಶಿವಃ ಪ್ರೋಕ್ತಃ**
**ಸರ್ವಗೋಽಪಿ ಪ್ರಕಾಶವಾನ್ ॥ 18–29**

ವಿವಿಧ ಭೇದಗಳಿಂದ ಕೂಡಿದ ಎಲ್ಲ ಆತ್ಮಗಳಲ್ಲಿ ತನ್ನ ತೇಜಸ್ಸಿನಿಂದ ಸರ್ವೋತ್ಕೃಷ್ಟನಾದ, ಸರ್ವವ್ಯಾಪಕನಾದ, ಸರ್ವವನ್ನೂ ಪ್ರಕಾಶಿಸುವ ಆ ಶಿವನು ಪರಮಾತ್ಮನೆಂದು ಹೇಳಲ್ಪಡುತ್ತಾನೆ.

**ಬ್ರಹ್ಮಾಂಡಬುದ್ಬುದಸ್ತೋಮಾ**
**ಯಸ್ಯ ಮಾಯಾಮಹೋದಧೌ ।**
**ಉನ್ಮಜ್ಜಂತಿ ನಿಮಜ್ಜಂತಿ**
**ಪರಮಾತ್ಮಾ ಸ ಉಚ್ಯತೇ ॥ 18–30**

ಯಾವನ ಮಾಯೆಯೆಂಬ ಮಹಾಸಮುದ್ರದಲ್ಲಿ ಬ್ರಹ್ಮಾಂಡಗಳೆಂಬ ಗುಳ್ಳೆಗಳ ಸಮೂಹವು ತೇಲುತ್ತಲೂ, ಮುಳುಗುತ್ತಲೂ ಇರುವುವೋ ಅವನೇ ಪರಮಾತ್ಮನೆಂದು ಹೇಳಲಾಗಿದೆ.

**ಯಸ್ಮಿನ್ ಜ್ಯೋತಿರ್ಗಣಾಃ ಸರ್ವೇ**
**ಸ್ಫುಲಿಂಗಾ ಇವ ಪಾವಕಾತ್ ।**
**ಉತ್ಪತ್ಯ ವಿಲಯಂ ಯಾಂತಿ**
**ತದ್ರೂಪಂ ಪರಮಾತ್ಮನಃ ॥ 18–31**

ಯಾವ ಪರವಸ್ತುವಿನಲ್ಲಿ ಎಲ್ಲಾ ಜೀವತೇಜ ಸಮೂಹವು ಅಗ್ನಿಯಿಂದ ವಿಸ್ಫುಲಿಂಗಗಳಂತೆ (ಬೆಂಕಿಯ ಕಿಡಿಗಳಂತೆ) ಹುಟ್ಟಿ ವಿಲಯವನ್ನು ಹೊಂದುವುದೋ ಅದುವೇ ಪರಮಾತ್ಮ ಸ್ವರೂಪವು.

**ಯಸ್ಮಿನ್ ಸಮಸ್ತವಸ್ತೂನಿ**
**ಕಲ್ಲೋಲಾ ಇವ ವಾರಿಧೌ ।**
**ಸಂಭೂಯ ಲಯಮಾಯಾಂತಿ**
**ತದ್ರೂಪಂ ಪರಮಾತ್ಮನಃ ॥ 18–32**

ಯಾವ ಪರತತ್ತ್ವದಲ್ಲಿ ಎಲ್ಲಾ ವಸ್ತುಗಳು (ಪೃಥಿವ್ಯಾದಿ ಸಕಲ ತತ್ತ್ವಗಳು) ಸಮುದ್ರದಲ್ಲಿ ತೆರೆಗಳಂತೆ ಉತ್ಪನ್ನವಾಗಿ ವಿಲಯವಾಗುತ್ತದೆಯೋ ಅದುವೇ ಪರಮಾತ್ಮ ಸ್ವರೂಪವು.

**ನಿರಸ್ತಮಲಸಂಬಂಧಮ್**
**ನಿಃಶೇಷಜಗದಾತ್ಮಕಮ್ ।**
**ಸರ್ವತತ್ತ್ವೋಪರಿ ಪ್ರೋಕ್ತಮ್**
**ಸ್ವರೂಪಂ ಪರಮಾತ್ಮನಃ ॥ 18–33**

ಆಣವಾದಿ ಮಲಸಂಬಂಧಗಳಿಲ್ಲದ ನಾಮರೂಪಾತ್ಮಕವಾದ ಸಕಲ ಜಗತ್ತಿಗೆ ಆತ್ಮರೂಪವಾದ ಎಲ್ಲ ತತ್ವಗಳನ್ನು ಮೀರಿರುವ ಯಾವ ಸ್ವರೂಪವಿದೆಯೋ ಅದುವೇ ಪರಮಾತ್ಮನ ಸ್ವರೂಪವು.

**ಯಥಾ ವ್ಯಾಪ್ಯ ಜಗತ್ಸರ್ವಮ್**
**ಸ್ವಭಾಸಾ ಭಾತಿ ಭಾಸ್ಕರಃ ।**
**ತಥಾ ಸ್ವಶಕ್ತಿಭಿರ್ವ್ಯಾಪ್ಯ**
**ಪರಮಾತ್ಮಾ ಪ್ರಕಾಶತೇ ॥ 18–34**

ಸೂರ್ಯನು ತನ್ನ ಪ್ರಕಾಶದಿಂದ ಜಗತ್ತೆಲ್ಲವನ್ನೂ ವ್ಯಾಪಿಸಿ ಹೇಗೆ ಪ್ರಕಾಶಿಸುವನೋ ಅದರಂತೆ ತನ್ನ ಶಕ್ತಿಗಳಿಂದ ಜಗತ್ತೆಲ್ಲವನ್ನೂ ವ್ಯಾಪಿಸಿ ಪರಮಾತ್ಮನು ಪ್ರಕಾಶಿಸುತ್ತಾನೆ.

**ವಿಶ್ವತೋ ಭಾಸಮಾನೋಽಪಿ**
**ವಿಶ್ವಮಾಯಾವಿಲಕ್ಷಣಃ ।**
**ಪರಮಾತ್ಮಾ ಸ್ವಯಂಜ್ಯೋತೀ –**
**ರೂಪೋ ಜೀವಾತ್ಮನಾಂ ಭವೇತ್॥ 18–35**

ಈ ಪರಮಾತ್ಮನು ಜಗತ್ತಿನಲ್ಲೆಲ್ಲಾ ವ್ಯಾಪಿಸಿ ಪ್ರಕಾಶಿಸುತ್ತಿದ್ದರೂ, ವಿಶ್ವಮಾಯೆಯಿಂದ ವಿಲಕ್ಷಣನಾಗಿದ್ದಾನೆ. ಷಡ್ಭಾವ ವಿಕಾರರಹಿತವಾಗಿದ್ದಾನೆ. (ಷಡ್ಭಾವ ವಿಕಾರಗಳು: ಅಸ್ತಿ (ಇರುವಿಕೆ), ಜಾಯತೇ (ಹುಟ್ಟುವಿಕೆ), ವಿವರ್ಧತೆ (ಬೆಳೆಯುವಿಕೆ), ವಿಪರಿಣಮತೆ (ಪರಿಣಾಮವನ್ನು ಹೊಂದುವಿಕೆ), ಅಪಕ್ಷೀಯತೆ (ಕ್ಷೀಣವಾಗುವಿಕೆ), ವಿನಶ್ಯತಿ (ನಾಶವಾಗುವಿಕೆ). ಪರಮಾತ್ಮನು ಜೀವಾತ್ಮರಲ್ಲಿ ಮಾತ್ರ ಪ್ರಕಾಶಮಾನ ನಾದರೂ, ಸ್ವಯಂಜ್ಯೋತಿ ಸ್ವರೂಪನಾಗಿಯೇ ಪ್ರಕಾಶಿಸುತ್ತಾನೆ.

*ಇತಿ ಪರಮಾತ್ಮಸ್ಥಲಂ ಇಲ್ಲಿಗೆ ಪರಮಾತ್ಮಸ್ಥಲವು ಮುಗಿಯಿತು.*

## 75. ಅಥ ನಿರ್ದೇಹಾಗಮಸ್ಥಲಮ್

ಈಗ ನಿರ್ದೇಹಾಗಮಸ್ಥಲವು

**(8 ಶ್ಲೋಕಗಳು)**

**ದೇಹಿನೋಽಪಿ ಪರಾತ್ಮತ್ವ–**
**ಭಾವಿನೋ ನಿರಹಂಕೃತೇಃ ।**
**ನಿರಸ್ತದೇಹಧರ್ಮಸ್ಯ**
**ನಿರ್ದೇಹಾಗಮ ಉಚ್ಯತೇ ॥ 18–36**

ಪರಮಾತ್ಮ ತತ್ತ್ವವನ್ನು ಭಾವಿಸುತ್ತಿರುವ ಯೋಗಿಯು ತಾನು ದೇಹವನ್ನು ಧರಿಸಿದ್ದರೂ, ದೇಹಧರ್ಮಗಳನ್ನು (ಸ್ಥೂಲತ್ವ ಮತ್ತು ಕೃಶತ್ವ ಮೊದಲಾದ ಧರ್ಮಗಳನ್ನು) ನಿವಾರಿಸಿಕೊಂಡಿರುತ್ತಾನೆ ಮತ್ತು ನಿರಹಂಕಾರ ಸ್ಥಿತಿಯಲ್ಲಿರುವ ಆ ಯೋಗಿಯೇ ನಿರ್ದೇಹಾಗಮನೆಂದು ಕರೆಯಲ್ಪಡುತ್ತಾನೆ.

**ಗಲಿತೇ ಮಮತಾಹಂತೇ**
**ಸಂಸಾರಭ್ರಮಕಾರಣೇ ।**

**ಪರಾಹಂತಾಂ ಪ್ರವಿಷ್ಟಸ್ಯ**
**ಕುತೋ ದೇಹಃ ಕುತೋ ರತಿಃ ॥ 18–37**

ಸಂಸಾರದ ಭ್ರಮಕ್ಕೆ ಕಾರಣಗಳಾದ ಅಹಂಕಾರ ಮತ್ತು ಮಮಕಾರಗಳು ಇಲ್ಲವಾಗಲು, ಪರಾಹಂತಾ ಸ್ಥಿತಿಯನ್ನು ಪ್ರವೇಶಿಸಿದ ಆ ಯೋಗಿಗೆ ದೇಹವೆಲ್ಲಿಯದು ಹಾಗೂ ದೇಹದ ಮೇಲಿನ ಪ್ರೀತಿಯೇ ಆಗಲಿ ಎಲ್ಲಿಯದು?

**ಕೇವಲೇ ನಿಷ್ಪ್ರಪಂಚೌಘೇ**
**ಗಂಭೀರೇ ಚಿನ್ಮಹೋದಧೌ ।**
**ನಿಮಗ್ನಮಾನಸೋ ಯೋಗೀ**
**ಕಥಂ ದೇಹಂ ವಿಚಿಂತಯೇತ್ ॥ 18–38**

ಚರಾಚರಾತ್ಮಕ ಪ್ರಪಂಚ ಪ್ರವಾಹವಿಲ್ಲದಿರುವ ಗಂಭೀರವಾದ (ಅಗಾಧವಾದ) ಕೇವಲ ಅರಿವೆಂಬ ಮಹಾಸಮುದ್ರದಲ್ಲಿ ಮುಳುಗಿದ ಮನಸ್ಸುಳ್ಳ ಯೋಗಿಯು ತನ್ನ ದೇಹವನ್ನು ಕುರಿತು ಹೇಗೆ ತಾನೇ ಚಿಂತಿಸಬಲ್ಲನು?

**ಅಪರಿಚ್ಛೇದ್ಯಮಾತ್ಮಾನಮ್**
**ಚಿದಂಬರಮಿತಿ ಸ್ಮರನ್ ।**
**ದೇಹಯೋಗೇऽಪಿ ದೇಹಸ್ಥೈಃ**
**ವಿಕಾರೈರ್ನ ವಿಲಿಪ್ಯತೇ ॥ 18–39**

ತನ್ನನ್ನು ಅಪರಿಚ್ಛೇದ್ಯವಾದ (ದೇಶ, ಕಾಲ, ವಸ್ತು ಪರಿಚ್ಛೇದವಿಲ್ಲದ, ಅಖಂಡವಾದ) ಚಿದಾಕಾಶವನ್ನಾಗಿ ಸ್ಮರಿಸುತ್ತಿರುವ ಈ ಯೋಗಿಗೆ ದೇಹ ಸಂಬಂಧವಿದ್ದರೂ ದೇಹದಲ್ಲಿಯ ವಿಕಾರಗಳಿಂದ (ಷಡ್ಭಾವ ವಿಕಾರಗಳಿಂದ) ಅಥವಾ ಇಂದ್ರಿಯ ವಿಕಾರಗಳಿಂದ ಲಿಪ್ತನಾಗುವುದಿಲ್ಲ.

**ಅಖಂಡಸಂವಿದಾಕಾರಮ್**
**ಅದ್ವಿತೀಯಂ ಸುಖಾತ್ಮಕಮ್ ।**
**ಪರಮಾಕಾಶಮಾತ್ಮಾನಮ್**
**ಮನ್ವಾನಃ ಕುತ್ರ ಮುಹ್ಯತಿ ॥ 18–40**

ಅಖಂಡವೂ ಜ್ಞಾನಸ್ವರೂಪವೂ ಅದ್ವಿತೀಯವೂ, ಆನಂದ ಸ್ವರೂಪವೂ ಆದ ಪರಮಾಕಾಶ ರೂಪವಾದ ಪರಮಾತ್ಮನೇ ತಾನೆಂದು ತಿಳಿದುಕೊಂಡ ಯೋಗಿಯು ಯಾವ ದೇಹದಲ್ಲಿ ಮೋಹಿತನಾಗಬಲ್ಲನು?

**ಉಪಾಧಿವಿಹಿತಾ ಭೇದಾ**
**ದೃಶ್ಯಂತೇ ಚೈಕವಸ್ತುನಿ ।**
**ಇತಿ ಯಸ್ಯ ಮತಿಃ ಸೋऽಯಮ್**
**ಕಥಂ ದೇಹಮಿತೋ ಭವೇತ್ ॥ 18–41**

ಒಂದೇ ಆದ ಅಖಂಡ ವಸ್ತುವಿನಲ್ಲಿ ಉಪಾಧಿ ಮೂಲಕವಾಗಿಯೇ ಭೇದಗಳು ಕಾಣುತ್ತವೆ. ಈ ಪ್ರಕಾರವಾದ ತಿಳುವಳಿಕೆಯುಳ್ಳ ಆ ಯೋಗಿಯು ಹೇಗೆ ತಾನೇ ದೇಹಾದಿಗಳಿಂದ ಪರಿಚ್ಛಿನ್ನ ಭಾವವನ್ನು ಪಡೆಯಬಲ್ಲನು? (ಅಖಂಡವಾದ ಆಕಾಶವು ಘಟ ಮಠಾದಿ ಉಪಾಧಿಗಳಿಂದ ಭಿನ್ನವಾಗಿ ತೋರುವಂತೆ ದೇಹಾದಿ ಉಪಾಧಿಗಳಿಂದ ಆತ್ಮನ ಭೇದ ವ್ಯವಹಾರವೆಂದು ತಿಳಿದುಕೊಳ್ಳಬೇಕು).

**ಭೇದಬುದ್ಧಿಃ ಸಮಸ್ತಾನಾಮ್**
**ಪರಿಚ್ಛೇದಸ್ಯ ಕಾರಣಮ್ ।**
**ಅಭೇದಬುದ್ಧೌ ಜಾತಾಯಾಮ್**
**ಪರಿಚ್ಛೇದಸ್ಯ ಕಾ ಕಥಾ ॥ 18–42**

ಎಲ್ಲರಿಗೂ ಅವರವರ ಭೇದಬುದ್ಧಿಯೇ ಅವರವರ ಪರಿಮಿತ ವ್ಯವಹಾರಕ್ಕೆ ಕಾರಣವಾಗಿರುತ್ತದೆ. ಇನ್ನು (ಪರಮಾತ್ಮ ಸ್ವರೂಪವನ್ನು ತಿಳಿದುಕೊಂಡ ಮೇಲೆ ಅಭೇದ ಬುದ್ಧಿಯುಂಟಾಗಲು) ಪರಿಚ್ಛೇದದ ಮಾತೇ ಇರುವುದಿಲ್ಲ.

**ಶಿವೋऽಹಮಿತಿ ಯಸ್ಯಾಸ್ತಿ**
**ಭಾವನಾ ಸರ್ವಗಾಮಿನೀ ।**
**ತಸ್ಯ ದೇಹೇನ ಸಂಬಂಧಃ**
**ಕಥಂ ಸ್ಯಾದಮಿತಾತ್ಮನಃ ॥ 18–43**

ಶಿವನು ನಾನೆಂಬ ಭಾವನೆಯು ಯಾವ ಯೋಗಿಗೆ ಇರುತ್ತದೆಯೋ ಅಂತಹ ಅಖಂಡ ಪರಮಾತ್ಮ ಸ್ವರೂಪನಾದ ಅವನಿಗೆ ದೇಹ ಸಂಬಂಧವು ಹೇಗೆ ತಾನೇ ಆಗುವುದು?

*ಇತಿ ನಿರ್ದೇಹಾಗಮಸ್ಥಲಂ* *ಇಲ್ಲಿಗೆ ನಿರ್ದೇಹಾಗಮಸ್ಥಲವು ಮುಗಿಯಿತು.*

## 76. ಅಥ ನಿರ್ಭಾವಾಗಮಸ್ಥಲಮ್

ಈಗ ನಿರ್ಭಾವಾಗಮಸ್ಥಲವು

**(7 ಶ್ಲೋಕಗಳು)**

**ವ್ಯತಿರೇಕಾತ್ ಸ್ವರೂಪಸ್ಯ**
**ಭಾವಾಂತರನಿರಾಕೃತೇಃ ।**
**ಭಾವೋ ವಿಕಾರನಿರ್ಮುಕ್ತೋ**
**ನಿರ್ಭಾವಾಗಮ ಉಚ್ಯತೇ ॥ 18–44**

ಈ ಹಿಂದೆ ಹೇಳಿದ ತನ್ನ ಸ್ವರೂಪಕ್ಕೆ (ನಿರ್ದೇಹಾಗಮ ಸ್ವರೂಪಕ್ಕೆ) ವ್ಯತಿರೇಕಗಳಾದ (ವಿಪರೀತಗಳಾದ) ಬೇರೆ ಬೇರೆ ಭಾವಗಳನ್ನು ನಿರಾಕರಿಸಲ್ಪಟ್ಟ ಮತ್ತು ಇಂದ್ರಿಯಗಳ ವಿಕಾರದಿಂದ ಮುಕ್ತವಾದ ಯಾವ ಭಾವವಿದೆಯೋ ಅದುವೇ ನಿರ್ಭಾವಾಗಮವೆಂದು ಹೇಳಲ್ಪಡುತ್ತದೆ.

**ಅಹಂ ಬ್ರಹ್ಮೇತಿ ಭಾವಸ್ಯ**
**ವಸ್ತುದ್ವಯಸಮಾಶ್ರಯಃ ।**
**ಏಕೀಭೂತಸ್ಯ ಚಿದ್ವ್ಯೋಮ್ನಿ**
**ತದಭಾವೋ ವಿನಿಶ್ಚಿತಃ ॥ 18–45**

ಅಹಂ ಬ್ರಹ್ಮಾಸ್ಮಿ (ನಾನು ಬ್ರಹ್ಮನಾಗಿದ್ದೇನೆ) ಎಂಬ ಭಾವದಲ್ಲಿ ಅಹಂ ಮತ್ತು ಬ್ರಹ್ಮವೆಂಬ ಎರಡು ವಸ್ತುಗಳು ಇರುತ್ತವೆ. ಆದರೆ ಚಿದಾಕಾಶದಲ್ಲಿ ಏಕೀಭೂತನಾದ ಈ ಯೋಗಿಗೆ ಆ ಭಾವನೆಯ ಅಭಾವವು ನಿಶ್ಚಿತವಾಗಿ ಇರುತ್ತದೆ. ಅಂದರೆ ಅಹಂ ಬ್ರಹ್ಮಾಸ್ಮಿ, ಶಿವೋऽಹಂ ಈ ಭಾವನೆಗಳಿಲ್ಲದ ಯೋಗಿಯ ಆ ಸ್ಥಿತಿಯೇ ನಿರ್ಭಾವಾಗಮ ಸ್ಥಿತಿಯಾಗಿದೆ.

**ಏಕಭಾವನಿರೂಢಸ್ಯ**
**ನಿಷ್ಕಲಂಕೇ ಚಿದಂಬರೇ ।**
**ಕ್ವ ಜಾತಿವಾಸನಾಯೋಗಃ**
**ಕ್ವ ದೇಹಿತ್ವಂ ಪರಿಭ್ರಮಃ ॥ 18–46**

ನಿಷ್ಕಲಂಕವಾದ, ಚಿದಂಬರದಲ್ಲಿ (ಚಿದಾಕಾಶದಲ್ಲಿ) ತಾದಾತ್ಮ್ಯ ಭಾವವನ್ನು ಹೊಂದಿದ ಈ ನಿರ್ಭಾವಾಗಮ ಯೋಗಿಗೆ, ಜಾತಿ ವಾಸನೆಗಳ ಸಂಬಂಧವು ಇರುವುದಿಲ್ಲ ಮತ್ತು ದೇಹವುಳ್ಳಾತನದಿಂದ ಉಂಟಾಗುವ ಜನನ ಮರಣ ರೂಪವಾದ ಸಂಸಾರ ಚಕ್ರದ ಪರಿಭ್ರಮಣವಾದರೂ ಇರುವುದಿಲ್ಲ.

**ಶೂನ್ಯೇ ಚಿದಂಬರೇ ಸ್ಥಾನೇ**
**ದೂರೇ ವಾಙ್ಮಾನಸಾಧ್ವನಃ ।**
**ವಿಲೀನಾತ್ಮಾ ಮಹಾಯೋಗೀ**
**ಕೇನ ಕಿಂ ವಾಽಪಿ ಭಾವಯೇತ್ ॥ 18–47**

ವಾಣಿ ಮತ್ತು ಮನಸ್ಸುಗಳಿಗೆ ಅಗೋಚರವಾದ, ಶೂನ್ಯವಾದ (ನಿರಾಕಾರವಾದ), ಚಿದಂಬರ (ಚಿದಾಕಾಶ) ಸ್ಥಾನದಲ್ಲಿ ತಾದಾತ್ಮ್ಯಭಾವದಿಂದ ಈ ಯೋಗಿಯು ಯಾವುದರಿಂದ ಏನು ಭಾವಿಸಬೇಕು?

**ಅವಿಶುದ್ಧೇ ವಿಶುದ್ಧೇ ವಾ**
**ಸ್ಥಲೇ ದೀಪ್ತಿರ್ಯಥಾ ರವೇಃ ।**
**ಪತತ್ಯೇವಂ ಸದಾದ್ವೈತೀ**
**ಸರ್ವತ್ರ ಸಮವೃತ್ತಿಮಾನ್ ॥ 18–48**

ಅಶುದ್ಧ ಸ್ಥಾನವಿರಲಿ ಅಥವಾ ವಿಶುದ್ಧ ಸ್ಥಾನವಿರಲಿ, ಎಲ್ಲ ಕಡೆ ಸೂರ್ಯನ ಕಿರಣವು ಸಮಾನವಾಗಿ ಬೀಳುವಂತೆ ಈ ಶಿವಾದ್ವೈತಿಯು ಎಲ್ಲೆಡೆ ಸಮಾನವಾದ ವೃತ್ತಿಯುಳ್ಳವನು ಆಗಿರುತ್ತಾನೆ.

**ನ ಬಿಭೇತಿ ಜರಾಮೃತ್ಯೋಃ**
**ನ ಕ್ಷುಧಾಯಾ ವಶಂ ವ್ರಜೇತ್ ।**
**ಪರಿಪೂರ್ಣನಿಜಾನಂದಮ್**
**ಸಮಾಸ್ವಾದನ್ ಮಹಾಸುಖೀ ॥ 18–49**

ಈ ನಿರ್ಭಾವಾಗಮ ಯೋಗಿಯು ಮುಪ್ಪು ಮರಣಗಳಿಗೆ ಅಂಜುವುದಿಲ್ಲ. ಹಸಿವೆ ತೃಷೆಗಳಿಗೆ ವಶನಾಗುವುದಿಲ್ಲ ಮತ್ತು ಪರಿಪೂರ್ಣವಾದ ನಿಜಾನಂದವನ್ನೇ ಆಸ್ವಾದಿಸುತ್ತಿರುವ ಇವನು ಮಹಾಸುಖಿಯಾಗಿರುತ್ತಾನೆ (ಈ ಯೋಗಿಯು ತನ್ನ ದೇಹ ಮತ್ತು ಪ್ರಾಣಗಳ ಅಭಿಮಾನವನ್ನು ಹೊಂದಿರುವುದಿಲ್ಲ).

**ಕುತೋ ಭಾವಃ ಕುತಶ್ಚಿತ್ತಮ್**
**ಕುತಃ ಸಂಕಲ್ಪವಾಸನಾ ।**
**ನಿಸ್ತರಂಗೇ ಚಿದಂಬೋಧೌ**
**ವಿಲೀನಸ್ಯ ಮಹಾತ್ಮನಃ ॥ 18–50**

ನಿಸ್ತರಂಗವಾದ (ಕ್ಷುಧೆ, ತೃಷ್ಣೆ, ಹರ್ಷ, ವಿಷಾದ, ಜನನ, ಮರಣಗಳೆಂಬ ಷಡೂರ್ಮಿ ರೂಪಗಳಾದ ತರಂಗವಿಲ್ಲದ) ಚಿತ್ಸಾಗರದಲ್ಲಿ ವಿಲೀನನಾದ, ಮಹಾತ್ಮನಾದ ಯೋಗಿಗೆ ಭಾವವೆಲ್ಲಿಯದು, ಚಿತ್ತವೆಲ್ಲಿಯದು, ಸಂಕಲ್ಪವಾಸನೆಗಳಾದರೂ ಸಹ ಎತ್ತಣವು?

*ಇತಿ ನಿರ್ಭಾವಾಗಮಸ್ಥಲಂ*
*ಇಲ್ಲಿಗೆ ನಿರ್ಭಾವಾಗಮಸ್ಥಲವು ಮುಗಿಯಿತು.*

## 77. ಅಥ ನಷ್ಟಾಗಮಸ್ಥಲಮ್
ಈಗ ನಷ್ಟಾಗಮಸ್ಥಲವು
(6 ಶ್ಲೋಕಗಳು)

**ಭೇದಶೂನ್ಯೇ ಮಹಾಬೋಧೇ**
**ಜ್ಞಾತ್ರಾದಿತ್ರಯಹೀನಕಃ ।**
**ಜ್ಞಾನಸ್ಯ ನಷ್ಟಭಾವೇನ**
**ನಷ್ಟಾಗಮ ಇಹೋಚ್ಯತೇ ॥ 18–51**

ಭೇದಶೂನ್ಯವಾದ ಮಹಾಬೋಧೆಯು (ಶಿವಾದ್ವೈತ ರೂಪವಾದ ಮಹಾಜ್ಞಾನವು) ಜ್ಞಾತೃ, ಜ್ಞಾನ, ಜ್ಞೇಯಗಳೆಂಬ ತ್ರಿಪುಟಿ ವ್ಯವಹಾರದಿಂದ ಹೀನವಾಗಿರುತ್ತದೆ. ಈ ರೀತಿಯಾಗಿ ಜ್ಞಾನದ ತ್ರಿಪುಟಿ ಭಾವನೆಗಳು ನಷ್ಟವಾದಾಗ ಆ ಜ್ಞಾನವು ನಷ್ಟಾಗಮವೆಂದು ಕರೆಯಲ್ಪಡುತ್ತದೆ.

**ಅದ್ವೈತವಾಸನಾವಿಷ್ಟ–**
**ಚೇತಸಾಂ ಪರಯೋಗಿನಾಮ್ ।**
**ಪಶ್ಯತಾಮಂತರಾತ್ಮಾನಮ್**
**ಜ್ಞಾತೃತ್ವಂ ಕಥಮನ್ಯಥಾ ॥ 18–52**

ಅದ್ವೈತ ವಾಸನೆಯಿಂದಲೇ (ಎಲ್ಲವೂ ಶಿವನೇ ಎಂಬ ಜ್ಞಾನದಿಂದ) ತುಂಬಿಕೊಂಡ ಮನಸ್ಸುಳ್ಳ ಮತ್ತು ತನ್ನ ಹೃದಯದಲ್ಲಿ ತನ್ನ ಸ್ವರೂಪವನ್ನೇ ಕಾಣುತ್ತಿರುವ ಪರಯೋಗಿಗಳಿಗೆ ಬೇರೊಂದು ಜ್ಞಾತೃತ್ವವು ಹೇಗೆ ಉಂಟಾದೀತು?

**ಅಕರ್ತಾऽಹಮವೇತ್ತಾऽಹಮ್**
**ಅದೇಹೋऽಹಂ ನಿರಂಜನಃ ।**
**ಇತಿ ಚಿಂತಯತಃ ಸಾಕ್ಷಾತ್**
**ಸಂವಿದೇವ ಪ್ರಕಾಶತೇ ॥ 18–53**

ನಾನು ಕರ್ಮಕರ್ತೃವಲ್ಲ, ನಾನು ಪ್ರಪಂಚವನ್ನು ಅರಿವವನಲ್ಲ, ನಾನು ದೇಹನೂ ಅಲ್ಲ, ನಾನು ನಿರಂಜನನು (ನಾನು ದೋಷರಹಿತನು) ಎಂಬುದಾಗಿ ಚಿಂತಿಸುತ್ತಿರುವ ಈ ನಷ್ಟಾಗಮಸ್ಥಲದ ಯೋಗಿಗೆ ಸಾಕ್ಷಾತ್ ಶಿವಜ್ಞಾನವೊಂದೇ ಪ್ರಕಾಶಿಸುತ್ತಿರುತ್ತದೆ.

**ನಿರಸ್ತಭೇದಜಲ್ಪಸ್ಯ**
**ನಿರೀಹಸ್ಯ ಪ್ರಶಾಮ್ಯತಃ ।**
**ಸ್ವೇ ಮಹಿಮ್ನಿ ವಿಲೀನಸ್ಯ**
**ಕಿಮನ್ಯಜ್ಜ್ಞೇಯಮುಚ್ಯತೇ ॥ 18–54**

ವಾದ, ಜಲ್ಪ, ವಿತಂಡಗಳೆಂಬ ಭೇದದಿಂದ ಕೂಡಿದ ವಾಗ್ ವ್ಯವಹಾರವಿಲ್ಲದ, ನಿರೀಹನಾದ (ಅಪೇಕ್ಷಾರಹಿತನಾದ), ಪ್ರಶಾಂತನಾದ ಮತ್ತು ತನ್ನಲ್ಲಿಯೇ ತಾನು ಲೀನನಾದ ಈ ಯೋಗಿಗೆ ಬೇರಾವುದು ಜ್ಞೇಯವಾಗಿರುತ್ತದೆ?

**ಏಕೀಭೂತೇ ನಿಜಾಕಾರೇ**
**ಸಂವಿದಾ ನಿಷ್ಪ್ರಪಂಚಯಾ ।**
**ಕೇನ ಕಿಂ ವೇದನೀಯಂ ತದ್**
**ವೇತ್ತಾ ಕಃ ಪರಿಭಾಷ್ಯತೇ ॥ 18–55**

ನಿರಾಕಾರನಾದ, ನಿಷ್ಪ್ರಪಂಚರೂಪನಾದ ಆ ಪರಮಾತ್ಮನಲ್ಲಿ ಜ್ಞಾನದಿಂದ ಏಕೀಭೂತನಾದ (ಸಮರಸನಾದ) ಈ ಯೋಗಿಗೆ ಯಾವುದರಿಂದ ಏನನ್ನು ತಿಳಿದುಕೊಳ್ಳುವುದು ಇದೆ? ತಿಳಿದುಕೊಳ್ಳುವವರು ಯಾರಿದ್ದಾರೆ ಮತ್ತು ತಿಳಿಸುವವರು ಯಾರಿದ್ದಾರೆ? (ಜ್ಞಾತೃ, ಜ್ಞಾನ, ಜ್ಞೇಯಗಳೆಂಬ ತ್ರಿಪುಟಿಗಳು ನಷ್ಟವಾಗಿರುತ್ತವೆ)

**ಮಹಾಸತ್ತಾ ಮಹಾಸಂವಿದ್**
**ವಿಶ್ವರೂಪಾ ಪ್ರಕಾಶತೇ ।**
**ತದ್ವಿನಾ ನಾಸ್ತಿ ವಸ್ತ್ವೇಕಮ್**
**ಭೇದಬುದ್ಧಿಂ ವಿಮುಂಚತಃ ॥ 18–56**

ಭೇದಬುದ್ಧಿಯನ್ನು ಕಳೆದುಕೊಂಡ ಆ ಯೋಗಿಗೆ ಮಹಾಸತ್ತಾ ರೂಪವಾದ (ಮಹಾ ಸದ್ರೂಪವಾದ) ಮಹಾ ಸಂವಿದ್ರೂಪವಾದ (ಮಹಾ ಚಿದ್ರೂಪವೂ ಆದ ಬ್ರಹ್ಮ ಚೈತನ್ಯವೇ ವಿಶ್ವರೂಪವಾಗಿ ಪ್ರಕಾಶಿಸುತ್ತದೆ.) ಆ ಬ್ರಹ್ಮ ಚೈತನ್ಯದ ಹೊರತಾಗಿ ಮತ್ತೊಂದು ವಸ್ತುವು ಇರುವುದಿಲ್ಲ.

*ಇತಿ ನಷ್ಟಾಗಮಸ್ಥಲಂ ಇಲ್ಲಿಗೆ ನಷ್ಟಾಗಮಸ್ಥಲವು ಮುಗಿಯಿತು.*

## 78. ಅಥ ಆದಿಪ್ರಸಾದಿಸ್ಥಲಮ್

ಈಗ ಆದಿಪ್ರಸಾದಿಸ್ಥಲವು

**(6 ಶ್ಲೋಕಗಳು)**

**ಸರ್ವಾಧಿಷ್ಠಾತೃಕಃ ಶಂಭುಃ**
**ಆದಿಸ್ತಸ್ಯ ಪ್ರಸಾದತಃ ।**
**ಆದಿಪ್ರಸಾದೀತ್ಯುಕ್ತೋಽಯಮ್**
**ನಿರ್ವಿಕಾರಪದೇ ಸ್ಥಿತಃ ॥ 18–57**

ಶಂಭುವು ಸರ್ವಕ್ಕೂ ಅಧಿಷ್ಠಾತೃವಾಗಿದ್ದಾನೆ. ಅಂತೆಯೇ ಅವನು ಸರ್ವಕ್ಕೂ ಆದಿಯು. ಅವನ ಪ್ರಸಾದವೇ ಆದಿಪ್ರಸಾದವು. ಆ ಪ್ರಸಾದವನ್ನು (ಅನುಗ್ರಹವನ್ನು) ಪಡೆದುಕೊಂಡ ಮತ್ತು ನಿರ್ವಿಕಾರವಾದ ಸ್ಥಿತಿಯಲ್ಲಿರುವ ಯೋಗಿಯೇ ಆದಿಪ್ರಸಾದಿಯೆಂದು ಕರೆಯಲ್ಪಟ್ಟಿದ್ದಾನೆ.

**ಅನೇಕಜನ್ಮಶುದ್ಧಸ್ಯ**
**ನಿರಹಂಕಾರಭಾವಿನಃ ।**
**ಅಪ್ರಪಂಚಸ್ಯಾದಿದೇವಃ**
**ಪ್ರಸೀದತಿ ವಿಮುಕ್ತಯೇ ॥ 18–58**

ಅನೇಕ ಜನ್ಮಗಳಲ್ಲಿ ಮಾಡಿದ ಸಾಧನೆಯಿಂದ ಶುದ್ಧನಾದ (ದೇಹಾಭಿಮಾನ ಶೂನ್ಯವಾದ) ನಿರಹಂಕಾರ ಭಾವವುಳ್ಳ ಮತ್ತು ಅಪ್ರಪಂಚಿಯಾದ (ಪ್ರಾಪಂಚಿಕ ಭೇದರಹಿತನಾದ) ಯೋಗಿಗೆ ಆದಿದೇವನಾದ ಪರಮಾತ್ಮನು ಮುಕ್ತಿಯನ್ನು ಕೊಡುವುದಕ್ಕಾಗಿ ಪ್ರಸನ್ನನಾಗುತ್ತಾನೆ.

**ಶಿವಪ್ರಸಾದಸಂಪತ್ತ್ಯಾ**
**ಶಿವಭಾವಮುಪೇಯುಷಿ ।**
**ಶಿವಾದನ್ಯಜ್ಜಗಜ್ಜಾಲಮ್**
**ದೃಶ್ಯತೇ ನ ಚ ದೃಶ್ಯತೇ ॥ 18–59**

ಶಿವನ ಪ್ರಸಾದರೂಪವಾದ ಸಂಪತ್ತಿನಿಂದ ಶಿವಭಾವವನ್ನು ಪಡೆದುಕೊಂಡ ಈ ಯೋಗಿಗೆ ಈ ಜಗಜ್ಜಾಲವು ಶಿವನಿಗಿಂತಲೂ ಭಿನ್ನವಾದುದಾಗಿ ಕಾಣುವುದಿಲ್ಲ. ಆದರೆ ಅವನು ಶಿವಸ್ವರೂಪವನ್ನಾಗಿಯೇ ಕಾಣುತ್ತಾನೆ.

**ಶಂಭೋಃ ಶಿವಪ್ರಸಾದೇನ**
**ಸಂಸಾರಚ್ಛೇದಕಾರಿಣಾ ।**
**ಮೋಹಗ್ರಂಥಿಂ ವಿನಿರ್ಭಿದ್ಯ**
**ಮುಕ್ತಿಂ ಯಾಂತಿ ವಿವೇಕಿನಃ ॥ 18–60**

ವಿವೇಕಿಗಳು (ಶಿವಾದ್ವೈತ ಜ್ಞಾನಿಗಳು) ಸಂಸಾರವನ್ನು ನಿವೃತ್ತಿಗೊಳಿಸುವ ಶಂಭುವಿನ ಮಂಗಲಮಯ ಪ್ರಸಾದದಿಂದ ಮೋಹಗ್ರಂಥಿಯನ್ನು ಭೇದಿಸಿಕೊಂಡು ಮುಕ್ತಿಯನ್ನು ಪಡೆಯುತ್ತಾರೆ.

**ವಿನಾ ಪ್ರಸಾದಮೀಶಸ್ಯ**
**ಸಂಸಾರೋ ನ ನಿವರ್ತತೇ ।**
**ವಿನಾ ಸೂರ್ಯೋದಯಂ ಲೋಕೇ**
**ಕುತಃ ಸ್ಯಾತ್ ತಮಸೋ ಲಯಃ ॥ 18–61**

ಲೋಕದಲ್ಲಿ ಸೂರ್ಯೋದಯವಾಗದೆ ಹೇಗೆ ಕತ್ತಲೆಯು ಲಯವಾಗುವು ದಿಲ್ಲವೋ ಅದರಂತೆ ಪ್ರಸಾದವಿಲ್ಲದೆ ಸಂಸಾರವು ನಿವೃತ್ತಿಯಾಗುವುದಿಲ್ಲ.

**ಸರ್ವಾನುಗ್ರಾಹಕಃ ಶಂಭುಃ**
**ಕೇವಲಂ ಕೃಪಯಾ ಪ್ರಭುಃ ।**
**ಮೋಚಯೇತ್ ಸಕಲಾನ್ ಜಂತೂನ್**
**ನ ಕಿಂಚಿದಿಹ ಕಾರಣಮ್ ॥ 18–62**

ಸರ್ವರನ್ನು ಅನುಗ್ರಹಿಸುವ ಹಾಗೂ ಪ್ರಭುವಾದ ಶಂಭುವು ಕೇವಲ ತನ್ನ ಕೃಪೆಯಿಂದಲೇ ಎಲ್ಲ ಜೀವಿಗಳನ್ನು ಮುಕ್ತಿಗೊಳಿಸಬಲ್ಲನು. ಈ ವಿಷಯದಲ್ಲಿ ಬೇರೊಂದು ಕಾರಣವು ಯಾವುದೂ ಇರುವುದಿಲ್ಲ.

***ಇತಿ ಆದಿಪ್ರಸಾದಿಸ್ಥಲಂ*** *ಇಲ್ಲಿಗೆ ಆದಿಪ್ರಸಾದಿಸ್ಥಲವು ಮುಗಿಯಿತು.*

## 79. ಅಥ ಅಂತ್ಯಪ್ರಸಾದಿಸ್ಥಲಮ್
ಈಗ ಅಂತ್ಯಪ್ರಸಾದಿಸ್ಥಲವು
**(8 ಶ್ಲೋಕಗಳು)**

**ಲಯಃ ಸರ್ವಪದಾರ್ಥಾನಾಮ್**
**ಅಂತ್ಯ ಇತ್ಯುಚ್ಯತೇ ಬುಧೈಃ ।**
**ಪ್ರಸಾದೋಽನುಭವಸ್ತಸ್ಯ**
**ತದ್ವಾನಂತ್ಯಪ್ರಸಾದವಾನ್ ॥ 18–63**

ಎಲ್ಲ ಪದಾರ್ಥಗಳು ಎಲ್ಲಿ ಲಯಗೊಳ್ಳುವವೋ ಅದಕ್ಕೆ ಬುಧರು (ವೀರಶೈವ ಶಾಸ್ತ್ರಜ್ಞರು) ಅಂತ್ಯವೆಂಬುದಾಗಿ ಕರೆದಿದ್ದಾರೆ. ಆ ಅಂತ್ಯತತ್ತ್ವದ ಸ್ವಾತ್ಮರೂಪವಾದ ಅನುಭವವೇ ಅಂತ್ಯಪ್ರಸಾದವು. ಅದನ್ನು ಪಡೆದುಕೊಂಡವನೇ ಅಂತ್ಯಪ್ರಸಾದಿಯು.

**ದೇವತಿರ್ಯಙ್ಮನುಷ್ಯಾದಿ–**

**ವ್ಯವಹಾರವಿಕಲ್ಪನಾ ।**
**ಮಾಯಾಕೃತಾ ಪರೇ ತತ್ತ್ವೇ**
**ತಲ್ಲಯೇ ತತ್ಕ್ಷಯೋ ಭವೇತ್ ॥ 18–64**

ದೇವ, ತಿರ್ಯಕ್ ಮತ್ತು ಮನುಷ್ಯರೆಂಬ ಈ ಭೇದ ವ್ಯವಹಾರವು ಮಾಯಾಕೃತವಾದುದು. ಈ ಮಾಯೆಯು ಆ ಪರತತ್ತ್ವದಲ್ಲಿ ಲಯವಾಗಲು ಈ ಭೇದವ್ಯವಹಾರವು ಕ್ಷಯಗೊಳ್ಳುವುದು.

**ಸಾಕ್ಷಾತ್ಕೃತೇ ಪರೇ ತತ್ತ್ವೇ**
**ಸಚ್ಚಿದಾನಂದಲಕ್ಷಣೇ ।**
**ಕ್ವ ಪದಾರ್ಥಪರಿಜ್ಞಾನಮ್**
**ಕುತೋ ಜ್ಞಾತೃತ್ವಸಂಭವಃ ॥ 18–65**

ಸಚ್ಚಿದಾನಂದ ಲಕ್ಷಣವಾದ ಪರತತ್ತ್ವವು (ಪರಶಿವಬ್ರಹ್ಮದ) ಸಾಕ್ಷಾತ್ಕಾರವಾಗಲು ಪದಾರ್ಥಗಳ (ಜ್ಞೇಯ ಪದಾರ್ಥಗಳ) ಪರಿಜ್ಞಾನವಾಗಲಿ ಮತ್ತು ಜ್ಞಾತೃತ್ವವಾಗಲಿ ಹೇಗೆ ತಾನೇ ಸಂಭವಿಸುವುದು?

**ಪದಾರ್ಥಾಃ ಸ್ವಪ್ನ ಸಂದೃಷ್ಟಾ**
**ಯಥಾ ಬೋಧೇ ಲಯಂ ಗತಾಃ ।**
**ತಥಾ ಸಂಸಾರಜಾಃ ಭಾವಾ**
**ಲೀಯಂತೇ ಬ್ರಹ್ಮಬೋಧತಃ ॥ 18–66**

ಸಪ್ನದಲ್ಲಿ ತೋರಿದ ಪದಾರ್ಥಗಳು ಎಚ್ಚರವಾದೊಡನೆ ಹೇಗೆ ಲಯವಾಗುತ್ತವೆಯೋ ಹಾಗೆಯೇ ಸಂಸಾರದಲ್ಲಿ ಹುಟ್ಟಿದ ಭಾವಗಳು ಬ್ರಹ್ಮಜ್ಞಾನವಾದೊಡನೆ ಅದರಲ್ಲಿಯೇ ಲಯವಾಗುತ್ತವೆ.

**ಸುಷುಪ್ತಸ್ಯ ಯಥಾ ವಸ್ತು**
**ನ ಕಿಂಚಿದಪಿ ಭಾಸತೇ ।**
**ತಥಾ ಮುಕ್ತಸ್ಯ ಜೀವಸ್ಯ**
**ನ ಕಿಂಚಿದ್ವಸ್ತು ದೃಶ್ಯತೇ ॥ 18–67**

ಗಾಢವಾದ ನಿದ್ರೆಯಲ್ಲಿರುವ ವ್ಯಕ್ತಿಗೆ ಪ್ರಪಂಚದ ಯಾವುದೇ ವಸ್ತು ಹೇಗೆ ಭಾಸವಾಗುವುದಿಲ್ಲವೋ (ತೋರುವುದಿಲ್ಲವೋ) ಅದರಂತೆ ಮುಕ್ತನಾದ ಜೀವಿಗೆ ಯಾವ ವಸ್ತುವೂ ತೋರುವುದಿಲ್ಲ.

**ಯಥಾಕಾಶಮವಿಚ್ಛಿನ್ನಮ್**
**ನಿರ್ವಿಕಾರಂ ಸ್ವರೂಪತಃ ।**
**ತಥಾ ಮುಕ್ತಸ್ಯ ಜೀವಸ್ಯ**
**ಸ್ವರೂಪಮವಶಿಷ್ಯತೇ ॥ 18–68**

ಆಕಾಶವು ಸ್ವರೂಪತಃ ಅವಿಚ್ಛಿನ್ನವೂ ಮತ್ತು ನಿರ್ವಿಕಾರವೂ ಹೇಗೆ ಆಗಿರುತ್ತದೆಯೋ ಅದರಂತೆ ಮುಕ್ತನಾದ ಜೀವಿಯ ಸ್ವರೂಪವೂ ಸಹ ಹಾಗೆಯೇ ಇರುತ್ತದೆ.

**ನ ಕಿಂಚಿದಪಿ ಮುಕ್ತಸ್ಯ**
**ದೃಶ್ಯಂ ಕರ್ತವ್ಯಮೇವ ವಾ ।**
**ಸುಖಸ್ಫೂರ್ತಿಸ್ವರೂಪೇಣ**
**ನಿಶ್ಚಲಾ ಸ್ಥಿತಿರುಚ್ಯತೇ ॥ 18–69**

ಈ ಮುಕ್ತನಾದ ಜೀವಿಗೆ ದೃಶ್ಯವಾಗಲಿ (ಕಣ್ಣಿನಿಂದ ನೋಡುವುದಾಗಲಿ) ಮತ್ತು ಕರ್ತವ್ಯವಾಗಲಿ (ಕೈಯಿಂದ ಮಾಡುವುದಾಗಲಿ) ಯಾವುದೂ ಇರುವುದಿಲ್ಲ. ಆದರೆ ಅವನು ಪರಿಪೂರ್ಣ ಆನಂದ ಸ್ವರೂಪದಿಂದ ನಿಶ್ಚಲ ಸ್ಥಿತಿಯಲ್ಲಿರುತ್ತಾನೆ.

**ಶಿವಾದ್ವೈತಪರಿಜ್ಞಾನ–**
**ಶಿಥಿಲಾಶೇಷವಸ್ತುನಃ ।**
**ಕೇವಲಂ ಸಂವಿದುಲ್ಲಾಸ–**
**ದರ್ಶಿನಃ ಕೇನ ಕೋ ಭವೇತ್ ॥ 18–70**

ಶಿವಾದ್ವೈತ ಪರಿಜ್ಞಾನದಿಂದ ಪ್ರಾಪಂಚಿಕ ವಸ್ತುಗಳ ಭೇದ ಭ್ರಾಂತಿಯನ್ನು ಸಡಿಲಿಸಿಕೊಂಡ ಮತ್ತು ಯಾವಾಗಲೂ ಜ್ಞಾನದ ಉಲ್ಲಾಸವನ್ನೇ ನೋಡುತ್ತಿರುವ (ಶಿವಾದ್ವೈತ ಜ್ಞಾನದ ಅನುಭಾವದಲ್ಲೇ ಇರುವ) ಈ ಅಂತ್ಯಪ್ರಸಾದಿಗೆ ಯಾರಿಂದ ಏನೂ ಪ್ರಯೋಜನವಿಲ್ಲ.

*ಇತಿ ಅಂತ್ಯಪ್ರಸಾದಿಸ್ಥಲಂ* *ಇಲ್ಲಿಗೆ ಅಂತ್ಯಪ್ರಸಾದಿಸ್ಥಲವು ಮುಗಿಯಿತು.*

## 80. ಅಥ ಸೇವ್ಯಪ್ರಸಾದಿಸ್ಥಲಮ್
ಈಗ ಸೇವ್ಯಪ್ರಸಾದಿಸ್ಥಲವು
**(8 ಶ್ಲೋಕಗಳು)**

**ಸೇವ್ಯೋ ಗುರುಃ ಸಮಸ್ತಾನಾಮ್**
**ಶಿವ ಏವ ನ ಸಂಶಯಃ ।**
**ಪ್ರಸಾದೋಽಸ್ಯ ಪರಾನಂದ–**
**ಪ್ರಕಾಶಃ ಪರಿಕೀರ್ತ್ಯತೇ ॥ 18–71**

ಎಲ್ಲರಿಗೂ ಸೇವ್ಯನಾಗಿರುವಂತಹ ಗುರುವು ಸಾಕ್ಷಾತ್ ಶಿವನೇ ಆಗಿರುತ್ತಾನೆ. ಇದರಲ್ಲಿ ಯಾವ ಸಂಶಯವೂ ಇಲ್ಲ. ಅವನ ಪ್ರಸಾದವೇ ಸೇವ್ಯಪ್ರಸಾದವು. ಆ ಪ್ರಸಾದವು ಪರಾನಂದ ಪ್ರಕಾಶರೂಪವಾಗಿರುತ್ತದೆ.

**ಸೇವ್ಯೋ ಗುರುಃ ಸ್ಮೃತೋ ಹ್ಯಸ್ಯ**
**ಪ್ರಸಾದೋಽನುಭವೋ ಮತಃ ।**
**ತದೇಕಾವೇಶರೂಪೇಣ**
**ತದ್ವಾನ್ ಸೇವ್ಯಪ್ರಸಾದವಾನ್ ॥ 18–72**

ಶಿವಸ್ವರೂಪನಾದ ಶ್ರೀಗುರುವು ಎಲ್ಲರಿಗೂ ಸೇವ್ಯನಾಗಿರುವನು. ಇಂತಹ ಶ್ರೀಗುರುವಿನ ಅನುಭವವು (ಉಪದೇಶಾನುಭಾವವು) ಪ್ರಸಾದವೆಂದು ಕರೆಯಲ್ಪಡುತ್ತದೆ. ಇಂತಹ ಗುರುವನ್ನು ಹಾಗೂ ಪ್ರಸಾದವನ್ನು ಏಕರೂಪದಿಂದ ಕಂಡು ಅನುಭವಿಸತಕ್ಕವನೆ ಸೇವ್ಯಪ್ರಸಾದಿ ಎನಿಸಿಕೊಳ್ಳುವನು.

**ಗುರುದೇವಃ ಪರಂ ತತ್ತ್ವಮ್**
**ಪರತತ್ತ್ವಂ ಗುರುಃ ಸ್ಮೃತಃ ।**
**ತದೇಕತ್ವಾನುಭಾವೇನ**
**ನ ಕಿಂಚಿದವಶಿಷ್ಯತೇ ॥ 18–73**

ಗುರುದೇವನೇ ಪರತತ್ತ್ವವು ಮತ್ತು ಆ ಪರಮತತ್ತ್ವವೇ ಶ್ರೀಗುರುವು. ಆದ್ದರಿಂದ ಅವೆರಡನ್ನು ಐಕ್ಯಾನುಸಂಧಾನ ಮಾಡುವುದರಿಂದ ಆ ಶಿವಯೋಗಿಗೆ (ತನ್ನ ಹೊರತು) ಬೇರೆ ಯಾವುದೂ ಉಳಿಯುವುದಿಲ್ಲ.

**ಅಪರಿಚ್ಛೇದ್ಯಮಾತ್ಮಸ್ಥಮ್**

**ಅವಾಙ್ಮನಸಗೋಚರಮ್ ।**
**ಆನಂದಂ ಪಶ್ಯತಾಂ ಪುಂಸಾಮ್**
**ರತಿರನ್ಯತ್ರ ಕಾ ಭವೇತ್ ॥ 18–74**

ವಾಣಿ ಮತ್ತು ಮನಸ್ಸುಗಳಿಗೆ ಅಗೋಚರವಾದ ಪರಿಚ್ಛೇದವಲ್ಲದ (ಅಖಂಡವಾದ) ತನ್ನ ಆತ್ಮಾನಂದವನ್ನು ಅನುಭವಿಸುತ್ತಿರುವ ಯೋಗಿಗೆ ಬೇರೆ ಕಡೆ ಪ್ರೀತಿಯು ಅದು ಹೇಗೆ ತಾನೆ ಉಂಟಾದೀತು?

**ಜ್ಞಾನಾಮೃತೇನ ತೃಪ್ತಸ್ಯ**
**ಕಿಮನ್ಯೈರ್ಭೋಜ್ಯವಸ್ತುಭಿಃ ।**
**ಜ್ಞಾನಾದೇವ ಪರಾನಂದಮ್**
**ಪ್ರಕಾಶಯತಿ ಸಚ್ಛಿವಃ ॥ 18–75**

ಜ್ಞಾನಾಮೃತದಿಂದ ತೃಪ್ತನಾದ ಯೋಗಿಗೆ ಅದಕ್ಕಿಂತಲೂ ಭಿನ್ನವಾದ ಭೋಜ್ಯ ವಸ್ತುಗಳಿಂದ ಏನು ಪ್ರಯೋಜನ? ಆದ್ದರಿಂದ ಜ್ಞಾನದಿಂದಲೇ ಪರಾನಂದವು ಪ್ರಕಾಶಿಸುವುದು ಎಂಬುದಾಗಿ ಶಿವನೇ ಶ್ರುತಿಯಲ್ಲಿ ಹೇಳಿದ್ದಾನೆ.

**ಮುಕ್ತಿರೇವ ಪರಾ ತೃಪ್ತಿಃ**
**ಸಚ್ಚಿದಾನಂದಲಕ್ಷಣಾ ।**
**ನಿತ್ಯತೃಪ್ತಸ್ಯ ಮುಕ್ತಸ್ಯ**
**ಕಿಮನ್ಯೈರ್ಭೋಗಸಾಧನೈಃ ॥ 18–76**

ಸಚ್ಚಿದಾನಂದ ಲಕ್ಷಣವಾದ ಮುಕ್ತಿಯೇ ಪರಾತೃಪ್ತಿಯು, ಹೀಗೆ ಮುಕ್ತನಾದ ಅಂತೆಯೇ ನಿತ್ಯತೃಪ್ತನಾದ ಯೋಗಿಗೆ ಅನ್ಯಭೋಗ ಸಾಧನಗಳಿಂದ ಏನು ಪ್ರಯೋಜನ?

**ನ ಬಾಹ್ಯಂ ಕರ್ಮ ತಸ್ಯಾಸ್ತಿ**
**ನ ಚಾಂತರ್ನೈವ ಕುತ್ರಚಿತ್ ।**
**ಶಿವೈಕ್ಯಜ್ಞಾನರೂಢಸ್ಯ**
**ದೇಹಭ್ರಾಂತಿಂ ವಿಮುಂಚತಃ ॥ 18–77**

ಶಿವೈಕ್ಯ ಜ್ಞಾನದಿಂದ ದೇಹಭ್ರಾಂತಿಯನ್ನು ಕಳೆದುಕೊಂಡ ಯೋಗಿಗೆ ಬಾಹ್ಯ ಕರ್ಮವಾಗಲಿ, ಅಂತರಂಗ ಕರ್ಮವಾಗಲಿ ಅಥವಾ ಇನ್ನಾವುದೇ ಕರ್ಮವಾಗಲಿ ಇರುವುದಿಲ್ಲ.

**ನ ಕರ್ಮಬಂಧೇ ನ ತಪೋವಿಶೇಷೇ**
**ನ ಮಂತ್ರಯೋಗಾಭ್ಯಸನೇ ತಥೈವ ।**
**ಧ್ಯಾನೇ ನ ಬೋಧೇ ಚ ತಥಾತ್ಮತತ್ತ್ವೇ**
**ಮನಃಪ್ರವೃತ್ತಿಃ ಪರಯೋಗಭಾಜಾಮ್॥ 18–78**
**– ಉಪೇಂದ್ರವಜ್ರಾ ವೃತ್ತಮ್**

ಪರಶಿವ ಬ್ರಹ್ಮದೊಡನೆ ಸಾಮರಸ್ಯವನ್ನು ಪಡೆದುಕೊಂಡಿರುವ ಈ ಸೇವ್ಯ ಪ್ರಸಾದಿಗೆ ಕರ್ಮಬಂಧನದಲ್ಲಿಯೇ ಆಗಲಿ, ಯಾವುದೇ ವಿಶಿಷ್ಟ ತಪಸ್ಸಿನಲ್ಲಿಯೇ ಆಗಲಿ, ಮಂತ್ರ, ಲಯ, ಹಠ ಮತ್ತು ರಾಜಯೋಗಾದಿಗಳ ಅಭ್ಯಾಸದಲ್ಲಿಯೇ ಆಗಲಿ, ಅದರಂತೆ ಧ್ಯಾನದಲ್ಲಿಯೇ ಆಗಲಿ ಮತ್ತು ಬೋಧನಾತ್ಮಕ ವ್ಯವಹಾರದಲ್ಲಿಯೇ ಆಗಲಿ ಅವನ ಮನಃಪ್ರವೃತ್ತಿ ಇರುವುದಿಲ್ಲ.

*ಇತಿ ಸೇವ್ಯಪ್ರಸಾದಿಸ್ಥಲಂ* *ಇಲ್ಲಿಗೆ ಸೇವ್ಯಪ್ರಸಾದಿಸ್ಥಲವು ಮುಗಿಯಿತು.*

*ಓಂ ತತ್ಸತ್ ಇತಿ*

***ಶ್ರೀ ಶಿವಗೀತೇಷು ಸಿದ್ಧಾಂತಾಗಮೇಷು ಶಿವಾದ್ವೈತವಿದ್ಯಾಯಾಂ ಶಿವಯೋಗಶಾಸ್ತ್ರೇ ಶ್ರೀರೇಣುಕಾಗಸ್ತ್ಯಸಂವಾದೇ ವೀರಶೈವಧರ್ಮನಿರ್ಣಯೇ, ಶ್ರೀಶಿವಯೋಗಿಶಿವಾಚಾರ್ಯವಿರಚಿತೇ ಶ್ರೀಸಿದ್ಧಾಂತಶಿಖಾಮಣೌ ಲಿಂಗಸ್ಥಲಾಂತರ್ಗತ ಪ್ರಾಣಲಿಂಗಿಸ್ಥಲೇ ಆತ್ಮಸ್ಥಲಾದಿನವವಿಧಸ್ಥಲಾಂತರ್ಗತಪ್ರಸಂಗೋ ನಾಮ ಅಷ್ಟಾದಶಃ ಪರಿಚ್ಛೇದಃ ॥***

*ಓಂ ತತ್ಸತ್ ಇಲ್ಲಿಗೆ ಶ್ರೀ ಶಿವನಿಂದ ಉಪದೇಶಿಸಲ್ಪಟ್ಟ*

*ಶ್ರೀ ಸಿದ್ಧಾಂತಾಗಮಗಳಲ್ಲಿಯ ಶಿವಾದ್ವೈತವಿದ್ಯಾರೂಪವೂ, ಶಿವಯೋಗಶಾಸ್ತ್ರವೂ, ಶ್ರೀ ರೇಣುಕಾಗಸ್ತ್ಯ ಸಂವಾದರೂಪವೂ, ಶ್ರೀವೀರಶೈವಧರ್ಮನಿರ್ಣಯವೂ,*

*ಶ್ರೀ ಶಿವಯೋಗಿ ಶಿವಾಚಾರ್ಯ ವಿರಚಿತವೂ ಆದ ಶ್ರೀ ಸಿದ್ಧಾಂತ ಶಿಖಾಮಣಿಯಲ್ಲಿ ಲಿಂಗಸ್ಥಲಾಂತರ್ಗತವಾದ ಪ್ರಾಣಲಿಂಗಿಸ್ಥಲದಲ್ಲಿಯ ಆತ್ಮಸ್ಥಲಾದಿ ಒಂಭತ್ತು ವಿಧ ಸ್ಥಲಪ್ರಸಂಗವೆಂಬ ಹೆಸರಿನ ಹದಿನೆಂಟನೆಯ ಪರಿಚ್ಛೇದವು ಮುಗಿಯಿತು.*

# ಏಕೋನವಿಂಶಃ ಪರಿಚ್ಛೇದಃ

ಹತ್ತೊಂಭತ್ತನೆಯ ಪರಿಚ್ಛೇದವು
**(97 ಶ್ಲೋಕಗಳು)**

## ಶರಣಸ್ಥಲಾಂತರ್ಗತದ್ವಾದಶವಿಧಲಿಂಗಸ್ಥಲಪ್ರಸಂಗಃ

ಶರಣಸ್ಥಲಾಂತರ್ಗತವಾದ ದ್ವಾದಶವಿಧ ಲಿಂಗಸ್ಥಲ ಪ್ರಸಂಗವು

### ಅಥ ಶರಣಸ್ಥಲಮ್

ಈಗ ಶರಣಸ್ಥಲವು
**(5 ಶ್ಲೋಕಗಳು)**

**॥ ಅಗಸ್ತ್ಯ ಉವಾಚ ॥**

**ಸ್ಥಲಭೇದಾಃ ಸಮಾಖ್ಯಾತಾಃ**
**ಪ್ರಾಣಲಿಂಗಿಸ್ಥಲಾಶ್ರಯಾಃ ।**
**ಕಥಯ ಸ್ಥಲಭೇದಂ ಮೇ**
**ಶರಣಸ್ಥಲಸಂಶ್ರಿತಮ್ ॥ 19-1**

ಹೇ ರೇಣುಕ ಗಣೇಶ್ವರನೇ, ಪ್ರಾಣಲಿಂಗಿಸ್ಥಲವನ್ನು ಆಶ್ರಯಿಸಿದ ಸ್ಥಲ ಭೇದಗಳು ತಮ್ಮಿಂದ ಚೆನ್ನಾಗಿ ಹೇಳಲ್ಪಟ್ಟವು. ಇನ್ನು ಶರಣಸ್ಥಲವನ್ನು ಆಶ್ರಯಿಸಿದ ಸ್ಥಲ ಭೇದವನ್ನು ಕುರಿತು ನನಗೆ ಹೇಳುವಂತಹವನಾಗು.

**॥ ಶ್ರೀ ರೇಣುಕ ಉವಾಚ ॥**

**ಶರಣಸ್ಥಲಮಾಶ್ರಿತ್ಯ**
**ಸ್ಥಲದ್ವಾದಶಕಂ ಮಯಾ ।**
**ಉಚ್ಯತೇ ನಾಮ ಸರ್ವೇಷಾಮ್**
**ಸ್ಥಲಾನಾಂ ಶೃಣು ತಾಪಸ ॥ 19-2**
**ದೀಕ್ಷಾಪಾದೋದಕಂ ಪೂರ್ವಮ್**
**ಶಿಕ್ಷಾಪಾದೋದಕಂ ತತಃ ।**
**ಜ್ಞಾನಪಾದೋದಕಂ ಚಾಥ**
**ಕ್ರಿಯಾನಿಷ್ಪತ್ತಿಕಂ ತತಃ ॥ 19-3**

**ಭಾವನಿಷ್ಪತ್ತಿಕಂ ಚಾಥ**
**ಜ್ಞಾನನಿಷ್ಪತ್ತಿಕಂ ತತಃ ।**
**ಪಿಂಡಾಕಾಶಸ್ಥಲಂ ಚಾಥ**
**ಬಿಂದ್ವಾಕಾಶಸ್ಥಲಂ ತತಃ ॥ 19-4**

**ಮಹಾಕಾಶಸ್ಥಲಂ ಚಾಥ**
**ಕ್ರಿಯಾಯಾಶ್ಚ ಪ್ರಕಾಶನಮ್ ।**

**ಭಾವಪ್ರಕಾಶನಂ ಪಶ್ಚಾತ್**
**ತತೋ ಜ್ಞಾನಪ್ರಕಾಶನಮ್ ।**
**ಸ್ವರೂಪಂ ಪೃಥಗೇತೇಷಾಮ್**
**ಕಥಯಾಮಿ ಯಥಾಕ್ರಮಮ್ ॥ 19–5**

ಹೇ ತಪಸ್ವಿಯಾದ ಆಗಸ್ತ್ಯನೇ, ಈ ಶರಣಸ್ಥಲದಲ್ಲಿ ಹನ್ನೆರಡು ಸ್ಥಲಗಳು ಇರುತ್ತವೆ. ಆ ಎಲ್ಲವುಗಳ ಹೆಸರುಗಳನ್ನು ನಾನು ಹೇಳುತ್ತೇನೆ. ನೀನು ಶ್ರವಣ ಮಾಡು. ದೀಕ್ಷಾಪಾದೋದಕಸ್ಥಲವು ಮೊದಲನೆಯದು. ಅನಂತರ ಶಿಕ್ಷಾಪಾದೋದಕ ಸ್ಥಲವು, ಆದಾದ ಮೇಲೆ ಜ್ಞಾನಪಾದೋದಕಸ್ಥಲವು. ಅನಂತರ ಕ್ರಿಯಾನಿಷ್ಪತ್ತಿಸ್ಥಲವು. ತರುವಾಯ ಭಾವನಿಷ್ಪತ್ತಿಸ್ಥಲವು. ನಂತರ ಜ್ಞಾನನಿಷ್ಪತ್ತಿಸ್ಥಲವು. ಅದಾದ ಮೇಲೆ ಪಿಂಡಾಕಾಶಸ್ಥಲವು. ಅದಾದ ಮೇಲೆ ಬಿಂದ್ವಾಕಾಶಸ್ಥಲವು. ಅನಂತರ ಮಹಾಕಾಶಸ್ಥಲವು. ತರುವಾಯ ಕ್ರಿಯಾಪ್ರಕಾಶನಸ್ಥಲವು. ನಂತರ ಭಾವಪ್ರಕಾಶನಸ್ಥಲವು. ನಂತರ ಜ್ಞಾನ ಪ್ರಕಾಶನಸ್ಥಲವು. ಈ ಎಲ್ಲವುಗಳ ಭಿನ್ನಭಿನ್ನ ಸ್ವರೂಪಗಳನ್ನು ಕುರಿತು ಕ್ರಮವಾಗಿ ಹೇಳುತ್ತೇನೆ.

## 81. ಅಥ ದೀಕ್ಷಾಪಾದೋದಕಸ್ಥಲಮ್
ಈಗ ದೀಕ್ಷಾಪಾದೋದಕಸ್ಥಲವು
**(6 ಶ್ಲೋಕಗಳು)**

**ದೀಕ್ಷಯಾಽಪಗತದ್ವೈತಮ್**
**ಯಜ್ಜ್ಞಾನಂ ಗುರುಶಿಷ್ಯಯೋಃ ।**
**ಆನಂದಸ್ಯೈಕ್ಯಮೇತೇನ**
**ದೀಕ್ಷಾಪಾದೋದಕಂ ಸ್ಮೃತಮ್ ॥ 19–6**

ಸದ್ಗುರುವಿನಿಂದ ಪ್ರಾಪ್ತವಾದ ಚಿನ್ಮಯ ದೀಕ್ಷೆಯಿಂದ ಗುರುಶಿಷ್ಯರಲ್ಲಿಯ ದ್ವೈತಭಾವನೆಯು ದೂರವಾಗಿ ಅವರಲ್ಲಿ ಉಂಟಾದ ಅದ್ವೈತಜ್ಞಾನದ ಮೂಲಕವಾಗಿ ಅವರೀರ್ವರಲ್ಲಿ ನಿಜಾನಂದದ ಐಕ್ಯಸ್ಥಿತಿಯು ಪ್ರಾಪ್ತವಾಗಲು ಅದಕ್ಕೆ ದೀಕ್ಷಾಪಾದೋದಕವೆಂದು ಕರೆಯುತ್ತಾರೆ (ಗುರು ಶಿಷ್ಯರು ಸಮಾನ ಸಾಮರಸ್ಯ ಸ್ಥಿತಿಯನ್ನು ಅನುಭವಿಸುವ ಸ್ಥಲವೇ ದೀಕ್ಷಾಪಾದೋದಕಸ್ಥಲವು).

**ಅಥವಾ ಪಾದಶಬ್ದೇನ**
**ಗುರುರೇವ ನಿಗದ್ಯತೇ ।**
**ಶಿಷ್ಯಶ್ಚೋದಕಶಬ್ದೇನ**
**ತಯೋರೈಕ್ಯಂ ತು ದೀಕ್ಷಯಾ ॥ 19–7**

ಅಥವಾ ಈ ದೀಕ್ಷಾಪಾದೋದಕ ಶಬ್ದದಲ್ಲಿನ ಪಾದ ಶಬ್ದದಿಂದ ಗುರುವು ಹೇಳಲ್ಪಡುತ್ತಾನೆ. ಉದಕ ಶಬ್ದದಿಂದ ಶಿಷ್ಯನು ಹೇಳಲ್ಪಡುತ್ತಾನೆ. ಅವರೀರ್ವರ ಐಕ್ಯವು ಚಿನ್ಮಯ ದೀಕ್ಷೆಯಿಂದ ಉಂಟಾಗುವುದು.

**ಪರಮಾನಂದ ಏವೋಕ್ತಃ**
**ಪಾದಶಬ್ದೇನ ನಿರ್ಮಲಃ ।**
**ಜ್ಞಾನಂ ಚೋದಕಶಬ್ದೇನ**
**ತಯೋರೈಕ್ಯಂ ತು ದೀಕ್ಷಯಾ ॥ 19–8**

ಹೀಗೆ ಪಾದ ಶಬ್ದದಿಂದ ನಿರ್ಮಲವಾದ ಪರಮಾನಂದವೂ ಮತ್ತು ಉದಕ ಶಬ್ದದಿಂದ ಜ್ಞಾನವೂ ಹೇಳಲ್ಪಡುವುದು. ಇವೆರಡರ ಐಕ್ಯವು ದೀಕ್ಷೆಯಿಂದ ಉಂಟಾಗುವುದು.

**ಪರಸಂವಿತ್ಪ್ರಕಾಶಾತ್ಮಾ**
**ಪರಮಾನಂದಭಾವನಾಮ್ ।**
**ಅಧಿಗಮ್ಯ ಮಹಾಯೋಗೀ**
**ನ ಭೇದಂ ಕ್ವಾಪಿ ಪಶ್ಯತಿ ॥ 19–9**

ದೀಕ್ಷಾಪಾದೋದಕ ಸಂಪನ್ನನಾದ ಮಹಾಯೋಗಿಯು ಅತಿಶ್ರೇಷ್ಠವಾದ ಜ್ಞಾನಪ್ರಕಾಶ ಸ್ವರೂಪವಾದ ಆನಂದ ಸ್ಥಿತಿಯನ್ನು ಪಡೆದುಕೊಂಡು ಎಲ್ಲಿಯೂ ಭೇದವನ್ನು ಕಾಣುವುದಿಲ್ಲ. (ಭೇದಬುದ್ಧಿಯನ್ನು ಕಳೆದುಕೊಂಡಿರುತ್ತಾನೆ).

**ದೇಶಕಾಲಾದ್ಯವಚ್ಛೇದ–**
**ವಿಹೀನಂ ನಿತ್ಯನಿರ್ಮಲಮ್ ।**
**ಆನಂದಂ ಪ್ರಾಪ್ಯ ಬೋಧೇನ**
**ನಾನ್ಯತ್ ಕಾಂಕ್ಷತಿ ಸಂಯಮೀ ॥ 19–10**

ದೇಶ, ಕಾಲ ಮತ್ತು ವಸ್ತು ಪರಿಚ್ಛೇದವಿಲ್ಲದ (ಅಖಂಡವಾದ), ನಿತ್ಯವಾದ ಮತ್ತು ನಿರ್ಮಲವಾದ ಪರಮಾನಂದ ಸ್ವರೂಪವನ್ನು ಬೋಧದಿಂದ (ಶಿವಾದ್ವೈತ ಬೋಧದಿಂದ) ಪಡೆದುಕೊಂಡ ಸಂಯಮಿಯಾದ ಈ ದೀಕ್ಷಾಪಾದೋದಕಸ್ಥಲದ ಯೋಗಿಯು ಬೇರೆ ಯಾವುದನ್ನೂ ಅಪೇಕ್ಷಿಸುವುದಿಲ್ಲ.

**ಜ್ಞಾನಾಮೃತಮಪಿ ಸ್ವಚ್ಛಮ್**
**ಗುರುಕಾರುಣ್ಯಸಂಭವಮ್ ।**
**ಆಸ್ವಾದ್ಯ ರಮತೇ ಯೋಗೀ**
**ಸಂಸಾರಾಮಯವರ್ಜಿತಃ ॥ 19–11**

ಗುರುಕಾರುಣ್ಯದಿಂದ ಪ್ರಾಪ್ತವಾದ, ನಿರ್ಮಲವಾದ ಜ್ಞಾನಮೃತವನ್ನು ಆಸ್ವಾದಿಸಿದ ಈ ಯೋಗಿಯು ಸಂಸಾರವೆಂಬ ರೋಗದಿಂದ (ಭವರೋಗದಿಂದ) ಮುಕ್ತವಾಗಿ ಆನಂದಿಸುತ್ತಾನೆ.

***ಇತಿ ದೀಕ್ಷಾಪಾದೋದಕಸ್ಥಲಂ*** *ಇಲ್ಲಿಗೆ ದೀಕ್ಷಾಪಾದೋದಕಸ್ಥಲವು ಮುಗಿಯಿತು.*

## 82. ಅಥ ಶಿಕ್ಷಾಪಾದೋದಕಸ್ಥಲಮ್
ಈಗ ಶಿಕ್ಷಾಪಾದೋದಕಸ್ಥಲವು
**(7 ಶ್ಲೋಕಗಳು)**

**ಗುರುಶಿಷ್ಯಮಯಂ ಜ್ಞಾನಮ್**
**ಶಿಕ್ಷಾ ಯೋಗಿನಮೀರ್ಯತೇ ।**
**ತಯೋಃ ಸಮರಸತ್ವಂ ಹಿ**
**ಶಿಕ್ಷಾಪಾದೋದಕಂ ಸ್ಮೃತಮ್ ॥ 19–12**

ಶ್ರೀಗುರುವಿನ ಉಪದೇಶಾತ್ಮಕವಾದ ಶಿಕ್ಷೆಯಿಂದ ಗುರುಶಿಷ್ಯರೀರ್ವರಲ್ಲಿ ಉಂಟಾದ ಸಾಮರಸ್ಯ ಜ್ಞಾನವೇ ಶಿಕ್ಷಾಪಾದೋದಕವೆಂದು ಕರೆಯಲ್ಪಡುತ್ತದೆ.

**ಮಥಿತಾಚ್ಛಾಸ್ತ್ರಜಲಧೇಃ**
**ಯುಕ್ತಿಮಂಥಾನವೈಭವಾತ್ ।**

**ಗುರುಣಾ ಲಭ್ಯತೇ ಬೋಧ–**
**ಸುಧಾ ಸುಮನಸಾಂ ಗಣೈಃ ॥ 19–13**

ಶಿವಾಗಮಶಾಸ್ತ್ರವೆಂಬ ಸಮುದ್ರವನ್ನು ಯುಕ್ತಿರೂಪವಾದ ಮಂದರ ಪರ್ವತವೆಂಬ ಕಡೆಗೋಲಿನಿಂದ ಮಥನ ಮಾಡಿದಾಗ ಶಿಕ್ಷಾಗುರುವೆಂಬ ಬೃಹಸ್ಪತಿಯ ವೈಭವದಿಂದ ಶುದ್ಧಮನಸ್ಕರಾದ ದೀಕ್ಷಾಪಾದೋದಕಸ್ಥಲದ ಯೋಗಿಗಳೆಂಬ ದೇವತೆಗಳಿಗೆ ಶಿವಾದ್ವೈತ ಜ್ಞಾನವೆಂಬ ಅಮೃತವು ಲಭಿಸುವುದು (ಶಿಕ್ಷಾ ಗುರುವಿನೊಡನೆ ಶಾಸ್ತ್ರ ಚಿಂತನೆಯನ್ನು ಮಾಡಿದಾಗ ಶಿವಾದ್ವೈತ ಜ್ಞಾನವು ಪ್ರಾಪ್ತವಾಗುವುದು).

**ಜ್ಞಾನಚಂದ್ರಸಮುದ್ಭೂತಾಮ್**
**ಪರಮಾನಂದಚಂದ್ರಿಕಾಮ್ ।**
**ಪಶ್ಯಂತಿ ಪರಮಾಕಾಶೇ**
**ಮುಕ್ತಿರಾತ್ರೌ ಮಹಾಧಿಯಃ ॥ 19–14**

ಮಹಾಧೀಮಂತರಾದ ಶಿಕ್ಷಾಪಾದೋದಕಸ್ಥಲದ ಯೋಗಿಗಳು ಮುಕ್ತಿಯೆಂಬ ರಾತ್ರಿಯಲ್ಲಿ ಜ್ಞಾನಚಂದ್ರನಿಂದ ಉತ್ಪನ್ನವಾದ ಪರಮಾನಂದ ರೂಪವಾದ ಬೆಳದಿಂಗಳನ್ನು ಪರಮಾಕಾಶರೂಪವಾದ ತಮ್ಮ ಹೃದಯಾಕಾಶದಲ್ಲಿ ಕಾಣುತ್ತಾರೆ.

**ದೃಷ್ಟೇ ತಸ್ಮಿನ್ ಪರಾನಂದೇ**
**ದೇಶಕಾಲಾದಿವರ್ಜಿತೇ ।**
**ದ್ರಷ್ಟವ್ಯಂ ವಿದ್ಯತೇ ನಾನ್ಯತ್**
**ಶ್ರೋತವ್ಯಂ ಜ್ಞೇಯಮೇವ ವಾ ॥ 19–15**

ದೇಶಕಾಲಾದಿ ಪರಿಚ್ಛೇದಗಳಿಲ್ಲದ ಆ ಪರಮಾನಂದ ರೂಪವಾದ ಬೆಳದಿಂಗಳನ್ನು ನೋಡಿದ ಆ ಯೋಗಿಗೆ ನೋಡಬೇಕಾದ ವಸ್ತುವೇ ಆಗಲಿ, ಕೇಳಬೇಕಾದ ಜ್ಞಾನವೇ ಆಗಲಿ ಯಾವುದೂ ಇರುವುದಿಲ್ಲ.

**ಆತ್ಮಾನಂದೇನ ತೃಪ್ತಸ್ಯ**
**ಕಾ ಸ್ಪೃಹಾ ವಿಷಯೇ ಸುಖೇ ।**
**ಗಂಗಾಜಲೇನ ತೃಪ್ತಸ್ಯ**
**ಕೂಪತೋಯೇ ಕುತೋ ರತಿಃ ॥ 19–16**

ಆತ್ಮಾನಂದದಿಂದ ತೃಪ್ತನಾದ ಯೋಗಿಗೆ ಶಬ್ದ ಸ್ಪರ್ಶಾದಿ ವಿಷಯಸುಖದಲ್ಲಿ ಇಚ್ಛೆ ಹೇಗೆ ಉಂಟಾದೀತು? ಗಂಗಾಜಲದಿಂದ ತೃಪ್ತನಾದ ಮನುಷ್ಯನಿಗೆ ಬಾವಿಯ ನೀರಿನಲ್ಲಿ ಪ್ರೀತಿ ಉಂಟಾದೀತೇ?

**ಯಸ್ಮಿನ್ನಪ್ರಾಪ್ತಕಲ್ಲೋಲೇ**
**ಸುಖಸಿಂಧೌ ನಿಮಜ್ಜತಿ ।**
**ಸಾಮರಸ್ಯಾನ್ಮಹಾಯೋಗೀ**
**ತಸ್ಯ ಸೀಮಾ ಕುತೋ ಭವೇತ್ ॥ 19–17**

ಕಲ್ಲೋಲಗಳಿಲ್ಲದ (ರಾಗ ದ್ವೇಷಗಳೆಂಬ ತೆರೆಗಳಿಲ್ಲದಿರುವ) ತನ್ನ ನಿಜಾನಂದವೆಂಬ ಸುಖಸಾಗರದಲ್ಲಿ ಸಾಮರಸ್ಯ ಭಾವದಿಂದ ಮುಳುಗಿದ ಮಹಾಯೋಗಿಗೆ ಸೀಮೆಯೆಂಬುದೇ ಇರುವುದಿಲ್ಲ (ಅವನು ನಿಸ್ಸೀಮನಾಗಿರುತ್ತಾನೆ).

**ಗುರುಪ್ರಸಾದಚಂದ್ರೇಣ**
**ನಿಷ್ಕಲಂಕೇನ ಚಾರುಣಾ ।**
**ಯನ್ಮನಃ ಕುಮುದಂ ನಿತ್ಯಮ್**
**ಬೋಧಿತಂ ತಸ್ಯ ಕೋ ಭ್ರಮಃ ॥ 19–18**

ನಿಷ್ಕಲಂಕನೂ, ಸುಂದರನೂ ಆದ ಗುರುಪ್ರಸಾದವೆಂಬ ಚಂದ್ರನಿಂದ ಯಾರ ಮನಸ್ಸೆಂಬ ಕುಮುದವು ನಿತ್ಯವೂ ವಿಕಸಿತವಾಗಿರುತ್ತದೆಯೋ ಅಂತಹ ಯೋಗಿಗೆ ಯಾವ ಭ್ರಮೆಯುಂಟಾಗಬಲ್ಲದು?

*ಇತಿ ಶಿಕ್ಷಾಪಾದೋದಕಸ್ಥಲಂ* *ಇಲ್ಲಿಗೆ ಶಿಕ್ಷಾಪಾದೋದಕಸ್ಥಲವು ಮುಗಿಯಿತು.*

## 83. ಅಥ ಜ್ಞಾನಪಾದೋದಕಸ್ಥಲಮ್
ಈಗ ಜ್ಞಾನಪಾದೋದಕಸ್ಥಲವು
**(10 ಶ್ಲೋಕಗಳು)**

**ತದೈಕ್ಯಸಂಪದಾನಂದ–**
**ಜ್ಞಾನಂ ಜ್ಞಾನಗುರುರ್ಮತಃ ।**
**ತತ್ಸಾಮರಸ್ಯಂ ಶಿಷ್ಯಸ್ಯ**
**ಜ್ಞಾನಪಾದೋದಕಂ ವಿದುಃ ॥ 19–19**

ಪರಾತ್ಪರ ವಸ್ತುವಿನ ಆನಂದ ಸ್ವರೂಪವನ್ನು ತನ್ನ ಅಪರೋಕ್ಷ ಜ್ಞಾನದಿಂದ ಪಡೆದುಕೊಂಡವನೇ ಜ್ಞಾನಗುರುವೆಂದು ಕರೆಯಲ್ಪಡುತ್ತಾನೆ. ಆ ಗುರುವಿನ ಜ್ಞಾನವನ್ನು ಪಡೆದ ಶಿಷ್ಯನು ಜ್ಞಾನದಲ್ಲಿ ಗುರುವಿನೊಂದಿಗೆ ಸಾಮರಸ್ಯ ಸ್ಥಿತಿಯಲ್ಲಿದ್ದಾಗ ಅದು ಜ್ಞಾನಪಾದೋದಕವೆಂದು ಕರೆಸಿಕೊಳ್ಳುತ್ತದೆ.

**ಅವಿದ್ಯಾರಾಹುನಿರ್ಮುಕ್ತೋ**
**ಜ್ಞಾನಚಂದ್ರಃ ಸುನಿರ್ಮಲಃ ।**
**ಪ್ರಕಾಶತೇ ಪರಾಕಾಶೇ**
**ಪರಾನಂದಮಹಾದ್ಯುತಿಃ ॥ 19–20**

ಶಿವಾದ್ವೈತ ಜ್ಞಾನವೆಂಬ ಚಂದ್ರನು ಅವಿದ್ಯೆಯೆಂಬ ರಾಹುವಿನ ಗ್ರಹಣದಿಂದ ಮುಕ್ತನಾದಾಗ, ನಿರ್ಮಲವಾಗಿ, ಪರಮಾನಂದವೆಂಬ ಕಾಂತಿಯುಳ್ಳವನಾಗಿ ಉತ್ಕೃಷ್ಟವಾದ ಹೃದಯಾಕಾಶದಲ್ಲಿ ಪ್ರಕಾಶಿಸುತ್ತಿರುತ್ತಾನೆ.

**ಅಜ್ಞಾನಮೇಘನಿರ್ಮುಕ್ತಃ**
**ಪೂರ್ಣಜ್ಞಾನಸುಧಾಕರಃ ।**
**ಆನಂದಜಲಧೇರ್ವೃದ್ಧಿಮ್**
**ಅನುಪಶ್ಯನ್ ವಿಭಾಸತೇ ॥19–21**

ಶಿವಾದ್ವೈತ ಜ್ಞಾನವೆಂಬ ಪೂರ್ಣಚಂದ್ರಮ ಅಜ್ಞಾನವೆಂಬ ಮೋಡದ ಮುಸುಕಿನಿಂದ ಮುಕ್ತನಾಗಿ ನಿಜಾನಂದವೆಂಬ ಸಮುದ್ರದ ವೃದ್ಧಿಯನ್ನು ಮಾಡುತ್ತಾ ಪ್ರಕಾಶಿಸುವನು.

**ಜ್ಞಾನಚಂದ್ರೋದಯೇ ಜಾತೇ**
**ಧ್ವಸ್ತಮೋಹತಮೋಭರಾಃ ।**
**ಪಶ್ಯಂತಿ ಪರಮಾಂ ಕಾಷ್ಠಾಮ್**
**ಯೋಗಿನಃ ಸುಖರೂಪಿಣೀಮ್ ॥ 19–22**

ಜ್ಞಾನವೆಂಬ ಚಂದ್ರನು ಉದಯವಾಗಲು ಅಜ್ಞಾನವೆಂಬ ಕತ್ತಲೆಯು ಹರಿದುಹೋಗಲು (ಜ್ಞಾನ ಪಾದೋದಕ), ಯೋಗಿಗಳು ಪರಮಾನಂದ ರೂಪವಾದ ಸ್ವಸ್ವರೂಪವನ್ನು ನೋಡುವರು (ಅನುಭವಿಸುವರು).

**ಮಾಯಾರಜನ್ಯಾ ವಿರಮೇ**

**ಬೋಧಸೂರ್ಯೇ ಪ್ರಕಾಶಿತೇ ।**
**ನಿರಸ್ತಸರ್ವವ್ಯಾಪಾರಃ**
**ಚಿತ್ರಂ ಸ್ವಪಿತಿ ಸಂಯಮೀ ॥ 19–23**

ಮಾಯೆಯೆಂಬ ಕತ್ತಲು ಇಲ್ಲವಾಗಿ ಶಿವಾದ್ವೈತ ಜ್ಞಾನವೆಂಬ ಸೂರ್ಯನು ಉದಯವಾಗಿ ಪ್ರಕಾಶಿಸುತ್ತಿರಲು ಸಂಯಮಿಯಾದ ಯೋಗಿಯು ತನ್ನ ಎಲ್ಲ ಬಾಹ್ಯ ವ್ಯವಹಾರಗಳನ್ನು ಬಿಟ್ಟು ನಿದ್ರಿಸುವನು. ಇದೇನು ಆಶ್ಚರ್ಯ?

**ಅನಾದ್ಯವಿದ್ಯಾವಿಚ್ಛಿತ್ತಿ–**
**ವೇಲಾಯಾಂ ಪರಯೋಗಿನಃ ।**
**ಪ್ರಕಾಶತೇ ಪರಾನಂದಃ**
**ಪ್ರಪಂಚೇನ ವಿನಾ ಕೃತಃ ॥19–24**

ಆನಾದಿಯಾದ ಅವಿದ್ಯೆಯು ಕಳೆದು ಹೋದಾಗಲೇ ಈ ಪರಯೋಗಿಗೆ ಪ್ರಪಂಚವಿಲ್ಲದ ಆ ಸ್ಥಿತಿಯಲ್ಲಿ ಪರಾನಂದವೇ ಪ್ರಕಾಶಿಸುವುದು.

**ನಿತ್ಯಾನಂದೇ ನಿಜಾಕಾರೇ**
**ವಿಮಲೇ ಪರತೇಜಸಿ ।**
**ವಿಲೀನಚೇತಸಾಂ ಪುಂಸಾಮ್**
**ಕುತೋ ವಿಶ್ವವಿಕಲ್ಪನಾ ॥ 19–25**

ನಿತ್ಯಾನಂದ ಸ್ವರೂಪವೂ ಮತ್ತು ನಿಜಸ್ವರೂಪವೂ ಆಗಿರುವ ನಿರ್ಮಲವಾದ ಪರಶಿವ ಬ್ರಹ್ಮತೇಜಸ್ಸಿನಲ್ಲಿ ಮುಳುಗಿದ ಚಿತ್ತವುಳ್ಳ ಜನರಿಗೆ ವಿಶ್ವದ ಕಲ್ಪನೆಯು ಎಲ್ಲಿಂದ ಉಂಟಾದೀತು?

**ಕುತೋ ಬ್ರಹ್ಮಾ ಕುತೋ ವಿಷ್ಣುಃ**
**ಕುತೋ ರುದ್ರಃ ಕುತೋ ರವಿಃ ।**
**ಸಾಕ್ಷಾತ್ಕೃತಪರಾನಂದ–**
**ಜ್ಯೋತಿಷಃ ಸಾಮ್ಯಕಲ್ಪನಾ ॥ 19–26**

ಪರಮಾನಂದ ಸ್ವರೂಪವೂ ಮತ್ತು ಜ್ಯೋತಿ ರೂಪವೂ ಆದ ಪರಬ್ರಹ್ಮ ತತ್ತ್ವವನ್ನು ಅಪರೋಕ್ಷವಾಗಿ ಸಾಕ್ಷಾತ್ಕರಿಸಿಕೊಂಡ ಈ ಯೋಗಿಗೆ ಬ್ರಹ್ಮನೇ ಆಗಲಿ, ವಿಷ್ಣುವೇ ಆಗಲಿ, ರುದ್ರನೆ ಆಗಲಿ ಅಥವಾ ಸೂರ್ಯನೇ ಆಗಲಿ ಇವರಾರೂ ಸಮಾನರಾಗರು.

**ಅಪರೋಕ್ಷಪರಾನಂದ–**
**ವಿಲಾಸಸ್ಯ ಮಹಾತ್ಮನಃ ।**
**ಬ್ರಹ್ಮವಿಷ್ಣ್ವಾದಯೋ ದೇವಾ**
**ವಿಶೇಷಾಃ ಸುಖಬಿಂದವಃ ॥ 19–27**

ಅಪರೋಕ್ಷವಾದ ಪರಾನಂದದಲ್ಲಿ ವಿಹರಿಸುತ್ತಿರುವ ಈ (ಜ್ಞಾನಪಾದೋದಕ ಸಂಪನ್ನನಾದ) ಈ ಮಹಾತ್ಮನ ಮುಂದೆ ಬ್ರಹ್ಮ ವಿಷ್ಣು ಮೊದಲಾದ ಎಲ್ಲ ದೇವತೆಗಳು ಸಣ್ಣಸಣ್ಣ ಸುಖಬಿಂದುಗಳಿದ್ದಂತೆ.

**ಯನ್ಮಾತ್ರಾಸಹಿತಂ ಲೋಕೇ**
**ವಾಂಛಂತಿ ವಿಷಯಂ ನರಾಃ ।**
**ತದಪ್ರಮೇಯಮಾನಂದಮ್**
**ಪರಮಂ ಕೋ ನ ವಾಂಛತಿ ॥ 19–28**

ಈ ಲೋಕದಲ್ಲಿ ಎಲ್ಲ ಜನರು ಆ ಬ್ರಹ್ಮಾನಂದದ ಕಿಂಚಿತ್ ಭಾಗದಿಂದ ಕೂಡಿದ ವಿಷಯಗಳನ್ನೇ ಅಪೇಕ್ಷಿಸುತ್ತಾರೆ. ಅಂದಾಗ ಆ ಅಪ್ರಮೇಯವಾದ ಪರಮಾನಂದವನ್ನು ಯಾರು ತಾನೇ ಅಪೇಕ್ಷಿಸಲಿಕ್ಕಿಲ್ಲ?

***ಇತಿ ಜ್ಞಾನಪಾದೋದಕಸ್ಥಲಂ***
*ಇಲ್ಲಿಗೆ ಜ್ಞಾನಪಾದೋದಕಸ್ಥಲವು ಮುಗಿಯಿತು.*

## 84. ಅಥ ಕ್ರಿಯಾನಿಷ್ಪತ್ತಿಸ್ಥಲಮ್
ಈಗ ಕ್ರಿಯಾನಿಷ್ಪತ್ತಿಸ್ಥಲವು
**(8 ಶ್ಲೋಕಗಳು)**

**ಪರಕಾಯೇ ಕ್ರಿಯಾಪತ್ತಿಃ**
**ಕಲ್ಪಿತೈವ ಪ್ರಕಾಶತೇ ।**
**ರಜ್ಜೌ ಭುಜಂಗವದ್ ಯಸ್ಮಾತ್**
**ಕ್ರಿಯಾನಿಷ್ಪತ್ತಿಮಾನಯಮ್ ॥ 19–29**

ಪರಬ್ರಹ್ಮ ಸ್ಥಿತಿಯಲ್ಲಿರುವ ಪರಕಾಯನಾದ ಈ ಯೋಗಿಯು ಮಾಡುವ ಕ್ರಿಯೆಯು ಹಗ್ಗದಲ್ಲಿಯ ಹಾವಿನಂತೆ ಕಲ್ಪಿತವಾಗಿಯೇ ತೋರುತ್ತದೆ. ಇಂತಹ ಕಲ್ಪಿತ ಕ್ರಿಯೆಯುಳ್ಳವನೇ ಕ್ರಿಯಾನಿಷ್ಪತ್ತಿಮಾನ್ ಎಂದು ಕರೆಸಿಕೊಳ್ಳುತ್ತಾನೆ.

**ಜ್ಞಾನಿನಾಂ ಯಾನಿ ಕರ್ಮಾಣಿ**
**ತಾನಿ ನೋ ಜನ್ಮಹೇತವಃ ।**
**ಅಗ್ನಿದಗ್ಧಾನಿ ಬೀಜಾನಿ**
**ಯಥಾ ನಾಂಕುರಕಾರಣಮ್ ॥ 19–30**

ಅಗ್ನಿದಗ್ಧವಾದ ಬೀಜಗಳು ಹೇಗೆ ಮೊಳಕೆಯೊಡೆಯಲು ಕಾರಣವಾಗು ವುದಿಲ್ಲವೋ ಹಾಗೆ ಈ ಶಿವಾದ್ವೈತ ಜ್ಞಾನಿಯು ಮಾಡುವ ಕರ್ಮಗಳು ಅವನ ಪುನರ್ಜನ್ಮಕ್ಕೆ ಕಾರಣವಾಗುವುದಿಲ್ಲ.

**ಕರ್ಮಣಾ ಕಿಂ ಕೃತೇನಾಪಿ**
**ಜ್ಞಾನಿನೋ ನಿರಹಂಕೃತೇಃ ।**
**ವಿಕ್ರಿಯಾ ಪ್ರತಿಬಿಂಬಸ್ಥಾ**
**ಕಿಂ ಕರೋತಿ ಹಿಮದ್ಯುತೇಃ ॥ 19–31**

ಪ್ರತಿಬಿಂಬದಲ್ಲಿ ಉಂಟಾಗುವ ವಿಕಾರಗಳು ಬಿಂಬರೂಪನಾದ ಚಂದ್ರನಲ್ಲಿ ತೋರದಿರುವಂತೆ, ಮೂಲಾಹಂಕಾರ ರಹಿತನಾದ ಈ ಕ್ರಿಯಾನಿಷ್ಪತ್ತಿ ಸ್ಥಲದ ಜ್ಞಾನಿಯಿಂದ ಆಚರಿಸಲ್ಪಟ್ಟ ಕರ್ಮಗಳು ಅವನಿಗೆ ಯಾವ ಫಲಗಳನ್ನು ಕೊಡುವುದಿಲ್ಲ.

**ಚಂದ್ರಸ್ಯ ಮೇಘಸಂಬಂಧಾದ್**
**ಯಥಾ ಗಮನಕಲ್ಪನಾ ।**
**ತಥಾ ದೇಹಸ್ಯ ಸಂಬಂಧಾತ್**
**ಆರೋಪ್ಯಾ ಸ್ಯಾತ್ ಕ್ರಿಯಾಽಽತ್ಮನಃ॥ 19–32**

ಆಕಾಶದಲ್ಲಿಯ ಮೇಘಗಳು ಚಲಿಸುವುದರಿಂದ ಚಂದ್ರನಲ್ಲಿ ಹೇಗೆ ಚಲಿಸುವಿಕೆಯು ಕಲ್ಪಿಸಲ್ಪಡುತ್ತದೆಯೋ ಅದರಂತೆ ಈ ಕ್ರಿಯಾನಿಷ್ಪತ್ತಿ ಸ್ಥಲದ ಯೋಗಿಯ ಎಲ್ಲ ಕ್ರಿಯೆಗಳು ದೇಹ ಸಂಬಂಧದಿಂದ ಅವನಲ್ಲಿ ಆರೋಪಿಸಲ್ಪಡುತ್ತವೆ.

**ಜ್ಞಾನೀ ಕರ್ಮನಿರೂಢೋಽಪಿ**
**ಲಿಪ್ಯತೇ ನ ಕ್ರಿಯಾಫಲೈಃ ।**
**ಘೃತಾದಿನಾ ಯಥಾ ಜಿಹ್ವಾ**
**ಭೋಕ್ತ್ರೀ ಚಾಪಿ ನ ಲಿಪ್ಯತೇ ॥ 19–33**

ನಾಲಿಗೆಯು ಪದಾರ್ಥಗಳನ್ನು ಭುಂಜಿಸುತ್ತಿದ್ದರೂ, ಘೃತಾದಿಗಳಿಂದ (ತುಪ್ಪ ಮೊದಲಾದ ಜಿಡ್ಡು ಪದಾರ್ಥಗಳಿಂದ) ಹೇಗೆ ಲಿಪ್ತವಾಗುವುದಿಲ್ಲವೋ ಅದರಂತೆ ಕ್ರಿಯಾನಿಷ್ಪತ್ತಿ ಸ್ಥಲದ ಜ್ಞಾನಿಯು ಕರ್ಮಗಳನ್ನು ಆಚರಿಸಿದರೂ ಅವುಗಳ ಫಲಗಳಿಂದ ಅವನು ಲಿಪ್ತನಾಗುವುದಿಲ್ಲ.

**ನಿರಸ್ತೋಪಾಧಿಸಂಬಂಧೇ**
**ಜೀವೇ ಯಾ ಯಾ ಕ್ರಿಯಾಸ್ಥಿತಿಃ ।**
**ಸಾ ಸಾ ಪ್ರತೀತಿಮಾತ್ರೇಣ**
**ನಿಷ್ಫಲಾ ಚಾತ್ರ ಲೀಯತೇ ॥ 19–34**

ಮೂಲಾಹಂಕಾರ ರೂಪವಾದ ಉಪಾಧಿಯ ಸಂಬಂಧವಿಲ್ಲದ ಜೀವಿಯ (ಯೋಗಿಯ) ಯಾವ ಕ್ರಿಯೆಗಳಿರುತ್ತವೆಯೋ ಅವುಗಳೆಲ್ಲವೂ ಪ್ರತೀತಿ ಮಾತ್ರವಾಗಿದ್ದು (ತೋರಿಕೆಯಾಗಿದ್ದು) ನಿಷ್ಫಲಗಳಾಗಿ ಅವನಲ್ಲೇ ಲಯಗೊಳ್ಳುತ್ತವೆ.

**ಗಚ್ಛನ್ತಿಷ್ಠನ್ ಸ್ವಪನ್ ವಾಽಪಿ**
**ನ ನಿಷ್ಕರ್ಮಾಸ್ತಿ ಕಶ್ಚನ ।**
**ಸ್ವಭಾವೋ ದೇಹಿನಾಂ ಕರ್ಮ**
**ಜ್ಞಾನಿನಾಂ ತತ್ತು ನಿಷ್ಫಲಮ್ ॥ 19–35**

ದೇಹಿಗಳಿಗೆ (ಜೀವಿಗಳಿಗೆ) ಹೋಗುವ, ನಿಲ್ಲುವ ಮತ್ತು ನಿದ್ರಿಸುವ ಮುಂತಾದ ಕರ್ಮಗಳು ಸ್ವಾಭಾವಿಕವಾದವುಗಳು. ಈ ಲೋಕದಲ್ಲಿ ಯಾರೊಬ್ಬರೂ ನಿಷ್ಕರ್ಮಿಯಾಗಿರಲು ಸಾಧ್ಯವೇ ಇಲ್ಲ. ಜ್ಞಾನಿಗಳು ಮಾಡಿದ ಕರ್ಮಗಳು ಮಾತ್ರ ಅವರಿಗೆ ಯಾವ ಫಲವನ್ನೂ ಕೊಡದೆ ನಿಷ್ಫಲಗಳಾಗುತ್ತವೆ.

**ಪರಿಪೂರ್ಣಮಹಾನಂದ–**
**ಭಾವಿನಃ ಶುದ್ಧಚೇತಸಃ ।**
**ನ ಭವೇತ್ ಕರ್ಮಕಾರ್ಪಣ್ಯಮ್**
**ನಾನಾಭೋಗಫಲಪ್ರದಮ್ ॥ 19–36**

ಶುದ್ಧ ಚೇತನವಾದ, ಶುದ್ಧಾಂತಃಕರಣವುಳ್ಳ ಮತ್ತು ಪರಿಪೂರ್ಣವಾದ ಮಹಾನಂದವನ್ನು ಅನುಭವಿಸುತ್ತಿರುವ ಈ ಕ್ರಿಯಾನಿಷ್ಪತ್ತಿ ಸ್ಥಲದ ಯೋಗಿಗೆ ನಾನಾವಿಧ ಭೋಗ ಫಲವನ್ನು ಕೊಡುವ ಕರ್ಮ ಕಾರ್ಪಣ್ಯವು (ಕರ್ಮಗಳ ಪೀಡೆಯು) ಉಂಟಾಗುವುದಿಲ್ಲ.

*ಇತಿ ಕ್ರಿಯಾನಿಷ್ಪತ್ತಿಸ್ಥಲಂ*
*ಇಲ್ಲಿಗೆ ಕ್ರಿಯಾನಿಷ್ಪತ್ತಿಸ್ಥಲವು ಮುಗಿಯಿತು.*

## 85. ಅಥ ಭಾವನಿಷ್ಪತ್ತಿಸ್ಥಲಮ್

ಈಗ ಭಾವನಿಷ್ಪತ್ತಿಸ್ಥಲವು

**(7 ಶ್ಲೋಕಗಳು)**

**ಭಾವಃ ಪ್ರತೀಯಮಾನೋಽಪಿ**
**ಪರಕಾಯೇ ತು ಕಲ್ಪಿತಃ ।**
**ಶುಕ್ತೌ ರಜತವದ್ ಯಸ್ಮಾದ್**
**ಭಾವನಿಷ್ಪತ್ತಿಮಾನಯಮ್ ॥ 19–37**

ಪರಬ್ರಹ್ಮ ಕಾಯನಾದ ಯೋಗಿಯಲ್ಲಿ ಭಾವವು ತೋರುತ್ತಿದ್ದರೂ ಸಹ (ಕ್ರಿಯಾಸಂಬಂಧವಾದ ಭಾವರೂಪ ಮನೋವೃತ್ತಿಯು ತೋರುತ್ತಿದ್ದರೂ ಸಹ) ಕಪ್ಪೆ ಚಿಪ್ಪಿನಲ್ಲಿ ತೋರುವ ಬೆಳ್ಳಿಯಂತೆ ಕಲ್ಪಿತವಾಗಿರುತ್ತದೆ. ಆದ್ದರಿಂದಲೇ ಅವನಿಗೆ ಭಾವನಿಷ್ಪತ್ತಿಮಾನ್ ಎಂದು ಕರೆಯುತ್ತಾರೆ.

**ಭಾವೇನ ನಾಸ್ತಿ ಸಂಬಂಧಃ**
**ಕೇವಲಜ್ಞಾನಯೋಗಿನಃ ।**
**ತಥಾಪಿ ಭಾವಂ ಕುರ್ವೀತ**
**ಶಿವೇ ಸಂಸಾರಮೋಚಕೇ ॥ 19–38**

ಕೇವಲ ಶಿವಜ್ಞಾನಿಯಾದ ಯೋಗಿಗೆ ಭಾವದೊಂದಿಗೆ ಯಾವ ಸಂಬಂಧವೂ ಇರುವುದಿಲ್ಲ. ಆದರೂ ಸಹ ಸಂಸಾರದಿಂದ ಬಿಡುಗಡೆಯನ್ನುಂಟುಮಾಡುವ ಶಿವನ ವಿಷಯಕವಾದ ಭಾವವನ್ನು ಮಾಡಲೇಬೇಕು.

**ಪರಿಪೂರ್ಣಪ್ರಬೋಧೇಽಪಿ**
**ಭಾವಂ ಶಂಭೌ ನ ವರ್ಜಯೇತ್ ।**
**ಭಾವೋ ಹಿ ನಿಹಿತಸ್ತಸ್ಮಿನ್**
**ಭವಸಾಗರತಾರಕಃ ॥ 19–39**

ಪರಿಪೂರ್ಣವಾದ ಅಪರೋಕ್ಷ ಜ್ಞಾನವನ್ನು ಪಡೆದುಕೊಂಡ ನಂತರವೂ ಸಹ ಆ ಯೋಗಿಯು ಶಂಭುವಿನಲ್ಲಿ ತನ್ನ ಭಾವನೆಯನ್ನು (ಶಿವೋಽಹಂ ಭಾವನೆಯನ್ನು) ಅದೆಂದಿಗೂ ಬಿಡಕೂಡದು. ಏಕೆಂದರೆ ಶಿವನಲ್ಲಿ ಇರಿಸಿದ ಆ ಭಾವವು ನಿಶ್ಚಯವಾಗಿ ಭವಸಾಗರ ತಾರಕವಾಗಿರುತ್ತದೆ.

**ನಿವರ್ತ್ಯ ಜನ್ಮಜಂ ದುಃಖಮ್**
**ಭಾವಃ ಶೈವೋ ನಿವರ್ತತೇ ।**
**ಯಥಾ ಕಾಷ್ಠಾದಿಕಂ ದಗ್ಧ್ವಾ**
**ಸ್ವಯಂ ಶಾಮ್ಯತಿ ಪಾವಕಃ ॥ 19–40**

ಅಗ್ನಿಯು ಕಾಷ್ಠಾದಿಗಳನ್ನು (ಕಟ್ಟಿಗೆ ಮುಂತಾದ ಪದಾರ್ಥಗಳನ್ನು) ಸುಟ್ಟು ಬಳಿಕ ತಾನೇ ಹೇಗೆ ಶಾಂತವಾಗುತ್ತದೆಯೋ ಅದರಂತೆ ಈ ಭಾವನಿಷ್ಪತ್ತಿಸ್ಥಲದ ಯೋಗಿಯು ಮನಸ್ಸಿನಲ್ಲಿ ಉಂಟಾದ 'ಶಿವೋಽಹಂ' ಭಾವನೆಯೂ ಸಹ ಜನ್ಮ ಸಂಬಂಧಿಯಾದ ದುಃಖವನ್ನು ದೂರಮಾಡಿ ತಾನೂ ಅಡಗಿಹೋಗುತ್ತದೆ.

**ಪ್ರಕಾಶಿತೇ ಶಿವಾನಂದೇ**
**ತದ್ಭಾವೈಃ ಕಿಂ ಪ್ರಯೋಜನಮ್ ।**
**ಸಿದ್ಧೇ ಸಾಧ್ಯೇ ಚಿರೇಣಾಪಿ**
**ಸಾಧನೈಃ ಕಿಂ ಪ್ರಯೋಜನಮ್ ॥ 19–41**

ಹೀಗೆ ದುಃಖವನ್ನು ದೂರ ಮಾಡಿ ಶಿವಾನಂದವನ್ನು ಪ್ರಕಾಶಗೊಳಿಸಿದ ಮೇಲೆ ಆ ಭಾವನೆಯಿಂದ (ಶಿವೋಽಹಂ ಭಾವನೆಯಿಂದ) ಏನು ಪ್ರಯೋಜನ? ಬಹುಕಾಲದಿಂದಲೂ (ಇದ್ದ) ಸಾಧ್ಯವು ಸಿದ್ಧವಾದ ಮೇಲೆ ಸಾಧನೆಗಳಿಂದ ಏನು ಪ್ರಯೋಜನ? (ಶಿವೋಽಹಂ ಭಾವನೆಯೇ ಸಾಧನ, ಶಿವನಾಗಿರುವುದೇ ಸಿದ್ಧಿ).

**ಏಕೀಕೃತೇ ಶಿವೇ ಭಾವೇ**
**ಜ್ಞಾನೇನ ಸಹ ಸಂಯಮೀ ।**
**ವಿಸ್ಮಿತಾತ್ಮಸಮಾವೇಶಃ**
**ಶಿವಭಾವೇ ವಿಭಾಸತೇ ॥ 19-42**

ಸಂಯಮಿಯಾದ ಯೋಗಿಯು ಜ್ಞಾನದಿಂದ (ಶಿವನ ಪರಿಚಯಾತ್ಮಕ ಪರೋಕ್ಷ ಜ್ಞಾನದಿಂದ) ಕೂಡಿದ ತನ್ನ ಭಾವನೆಯನ್ನು ಶಿವನಲ್ಲಿ ಏಕೀಕರಿಸಲಾಗಿ ಆಶ್ಚರ್ಯಕರವಾದ ಆತ್ಮ ಸಮಾವೇಶವಾಗುವುದು (ಸ್ವಸ್ವರೂಪ ಅನುಭೂತಿಯಾಗುವುದು). ಆ ಸ್ಥಿತಿಯಲ್ಲಿನ ಯೋಗಿಯು ಶಿವಭಾವದಲ್ಲಿಯೇ ಪ್ರಕಾಶಿಸುತ್ತಿರುತ್ತಾನೆ.

**ನ ಭಾವೇನ ವಿನಾ ಜ್ಞಾನಮ್**
**ನ ಭಾವೋ ಜ್ಞಾನಮಂತರಾ ।**
**ಮೋಕ್ಷಾಯ ಕಾರಣಂ ಪ್ರೋಕ್ತಮ್**
**ತಸ್ಮಾದುಭಯಮಾಶ್ರಯೇತ್ ॥ 19-43**

ಭಾವವಿಲ್ಲದೆ ಜ್ಞಾನವುಂಟಾಗುವುದಿಲ್ಲ. ಜ್ಞಾನದ ಹೊರತಾಗಿ ಭಾವವು ಇರಲಾರದು. ಆದ್ದರಿಂದ ಭಾವ ಜ್ಞಾನಗಳೆರಡೂ ಮೋಕ್ಷಕ್ಕೆ ಕಾರಣವೆಂದು ಹೇಳಲ್ಪಟ್ಟಿದೆ. ಅಂತೆಯೇ ಸಾಧಕನು ಭಾವ ಜ್ಞಾನಗಳೆರಡನ್ನೂ ಆಶ್ರಯಿಸಬೇಕು.

*ಇತಿ ಭಾವನಿಷ್ಪತ್ತಿಸ್ಥಲಂ* *ಇಲ್ಲಿಗೆ ಭಾವನಿಷ್ಪತ್ತಿಸ್ಥಲವು ಮುಗಿಯಿತು.*

## 86. ಅಥ ಜ್ಞಾನನಿಷ್ಪತ್ತಿಸ್ಥಲಮ್
ಈಗ ಜ್ಞಾನನಿಷ್ಪತ್ತಿಸ್ಥಲವು
**(7 ಶ್ಲೋಕಗಳು)**

**ಜ್ಞಾನಸ್ಯ ವ್ಯವಹಾರೇಽಪಿ**
**ಜ್ಞೇಯಾಭಾವಾತ್ ಸ್ವಭಾವತಃ ।**
**ಸ್ವಪ್ನವಜ್ಜ್ಞಾನನಿಷ್ಪತ್ತ್ಯಾ**
**ಜ್ಞಾನನಿಷ್ಪನ್ನ ಇತ್ಯಸೌ ॥ 19-44**

ಭಾವನಿಷ್ಪತ್ತಿಸ್ಥಲದ ಯೋಗಿಯಲ್ಲಿ ಜ್ಞಾನದ ವ್ಯವಹಾರವಾಗುತ್ತಿದ್ದರೂ ಅಲ್ಲಿ ಸ್ವಸ್ವರೂಪದ ಹೊರತಾಗಿ ಬೇರೆ ಯಾವುದೇ ಜ್ಞೇಯ ಪದಾರ್ಥಗಳು ಇಲ್ಲದಿರುವುದರಿಂದ ಅವನ ಆ ಜ್ಞಾನವು ಸ್ವಪ್ನಜ್ಞಾನದಂತೆ ಇರುತ್ತದೆ. ಇಂತಹ ಜ್ಞಾನವುಳ್ಳವನೇ ಜ್ಞಾನನಿಷ್ಪನ್ನನೆಂದು ಕರೆಯಿಸಿಕೊಳ್ಳುವನು. (ಜಾಗ್ರತದಲ್ಲಾಗುವ ಈ ಯೋಗಿಯ ಜ್ಞಾನ ವ್ಯವಹಾರಗಳು ಸ್ವಪ್ನ ಜ್ಞಾನದಂತೆ ಅಸ್ಥಿರವೆಂಬುದಾಗಿ ತಿಳಿದುಕೊಳ್ಳಬೇಕು).

**ಸ್ವಪ್ನಜಾತಂ ಯಥಾ ಜ್ಞಾನಮ್**
**ಸಹ ಸ್ವಾರ್ಥೈರ್ನಿವರ್ತತೇ ।**
**ತಥಾತ್ಮನಿ ಪ್ರಕಾಶೇ ತು**
**ಜ್ಞಾನಂ ಜ್ಞೇಯಂ ನಿವರ್ತತೇ ॥ 19-45**

ಸ್ವಪ್ನದಲ್ಲಿ ಹುಟ್ಟಿದ ಜ್ಞಾನವು ಎಚ್ಚರವಾದೊಡನೆ ತನ್ನ ಎಲ್ಲ ವಿಷಯಗಳೊಡನೆ ಹೇಗೆ ಇಲ್ಲವಾಗುವುದೋ ಅದರಂತೆ ಸ್ವಸ್ವರೂಪದ ಪ್ರಕಾಶವಾಗಲು ಜಾಗ್ರದಾವಸ್ಥೆಯ ಜ್ಞಾನ ಮತ್ತು ಜ್ಞೇಯಗಳೆರಡೂ ಇಲ್ಲವಾಗುವುವು.

**ಪರಿಪೂರ್ಣೇ ಮಹಾನಂದೇ**
**ಪರಮಾಕಾಶಲಕ್ಷಣೇ ।**
**ಶಿವೇ ವಿಲೀನಚಿತ್ತಸ್ಯ**
**ಕುತೋ ಜ್ಞೇಯಾಂತರೇ ಕಥಾ ॥ 19–46**

ಪರಿಪೂರ್ಣವೂ, ಮಹಾನಂದ ಸ್ವರೂಪವೂ ಆದ ಪರಮಾಕಾಶರೂಪವಾದ ಪರಶಿವನಲ್ಲಿ ಚಿತ್ತವೃತ್ತಿಯು ಅಡಗಿ ಹೋಗಲು ಆ ಯೋಗಿಗೆ ಬೇರೊಂದು ಜ್ಞೇಯ ವಿಷಯದ ವ್ಯವಹಾರವು ಎಲ್ಲಿಂದ ಆದೀತು?

**ಅಖಂಡಾನಂದಸಂವಿತ್ತಿ–**
**ಸ್ವರೂಪಂ ಬ್ರಹ್ಮಕೇವಲಮ್ ।**
**ಮಿಥ್ಯಾ ತದನ್ಯದಿತ್ಯೇಷಾ**
**ಸ್ಥಿತಿರ್ಜ್ಞಾನಮಿಹೋಚ್ಯತೇ ॥ 19–47**

ಅಖಂಡವೂ, ಚಿದಾನಂದ ಸ್ವರೂಪವೂ ಆದ ಬ್ರಹ್ಮವೊಂದೇ ಸತ್ಯವಾದುದು. ಅದಕ್ಕಿಂತಲೂ ಭಿನ್ನವಾದುದೆಲ್ಲವೂ ಮಿಥ್ಯಾರೂಪವಾದುದು ಎಂಬ ಅರಿವಿನ ಸ್ಥಿತಿಯೇ ಜ್ಞಾನವೆಂಬುದಾಗಿ ಹೇಳಲ್ಪಡುತ್ತದೆ.

**ಸತ್ತಾತ್ಮನಾಽನುವೃತ್ತಂ ಯದ್**
**ಘಟಾದಿಷು ಪರಂ ಹಿ ತತ್ ।**
**ವ್ಯಾವರ್ತಮಾನಾ ಮಿಥ್ಯೇತಿ**
**ಸ್ಥಿತಿರ್ಜ್ಞಾನಮಿಹೋಚ್ಯತೇ ॥ 19–48**

ಘಟಪಟಾದಿ ವಸ್ತುಗಳಲ್ಲಿ ಯಾವುದು ಸದ್ರೂಪದಿಂದ ಓತಪ್ರೋತ ವಾಗಿರುವುದೋ ಅದುವೇ ಪರಬ್ರಹ್ಮವು, ಆದುವೇ ಸತ್ಯವಾದುದ್ದು. ಆದರೆ ವ್ಯಾವರ್ತನಗೊಳ್ಳುತ್ತಿರುವ (ಒಂದಕ್ಕೊಂದು ಭಿನ್ನವಾಗಿ ತೋರುತ್ತಿರುವ) ಘಟಪಟಾದಿಗಳ ನಾಮರೂಪಾದಿಗಳು ಮಿಥ್ಯೆಯೆಂಬ ತಿಳುವಳಿಕೆಯೇ ಜ್ಞಾನವಾಗಿದೆ.

**ಅಕಾರಣಮಕಾರ್ಯಂ ಯತ್**
**ಅಶೇಷೋಪಾಧಿವರ್ಜಿತಮ್ ।**
**ತದ್ಬ್ರಹ್ಮ ತದಹಂ ಚೇತಿ**
**ನಿಷ್ಠಾ ಜ್ಞಾನಮುದೀರ್ಯತೇ ॥ 19–49**

ಪರಬ್ರಹ್ಮವು ಕಾರಣವೂ ಅಲ್ಲ ಮತ್ತು ಅದು ಕಾರ್ಯವೂ ಅಲ್ಲ. ಹಾಗೂ ಅದು ಎಲ್ಲ ಉಪಾಧಿಗಳಿಂದ ಮುಕ್ತವಾಗಿರುತ್ತದೆ. ಅಂತಹ ಆ ಪರಬ್ರಹ್ಮವೇ ನಾನು ಎಂಬ ದೃಢವಾದ ತಿಳುವಳಿಕೆಯೇ ಜ್ಞಾನವೆಂದು ಕರೆಯಲ್ಪಡುತ್ತದೆ.

**ಜ್ಞಾತಾಪ್ಯಹಂ ಜ್ಞೇಯಮಿದಮ್**
**ಇತಿ ವ್ಯವಹೃತಿಃ ಕುತಃ ।**
**ಅಭೇದಬ್ರಹ್ಮಸ್ವಾರಸ್ಯೇ**
**ನಿರಸ್ತಾಖಿಲವಸ್ತುನಿ ॥ 19–50**

ತನ್ನಲ್ಲಿ ನಾಮರೂಪಾತ್ಮಕ ಪ್ರಪಂಚವಿಲ್ಲದಿರುವ ಆ ಪರಬ್ರಹ್ಮದೊಂದಿಗೆ ಸಾಮರಸ್ಯ ಸ್ಥಿತಿಯನ್ನು ಪಡೆದ ಜ್ಞಾನನಿಷ್ಪತ್ತಿ ಸ್ಥಲದ ಯೋಗಿಗೆ ನಾನು ತಿಳಿದುಕೊಳ್ಳುವವನು ಎಂಬ ಜ್ಞಾತೃತ್ವ ವ್ಯವಹಾರವಾಗಲಿ, ಇದು ತಿಳಿಯಲ್ಪಡುತ್ತದೆ ಎಂಬ ಜ್ಞೇಯ ವ್ಯವಹಾರವಾಗಲಿ ಹೇಗೆ ಸಂಭವಿಸಲು ಸಾಧ್ಯ?

*ಇತಿ ಜ್ಞಾನನಿಷ್ಪತ್ತಿಸ್ಥಲಂ ಇಲ್ಲಿಗೆ ಜ್ಞಾನನಿಷ್ಪತ್ತಿಸ್ಥಲವು ಮುಗಿಯಿತು.*

## 87. ಅಥ ಪಿಂಡಾಕಾಶಸ್ಥಲಮ್

ಈಗ ಪಿಂಡಾಕಾಶಸ್ಥಲವು

**(8 ಶ್ಲೋಕಗಳು)**

**ಯಥಾ ಪಿಂಡಸ್ಥ ಆಕಾಶ–**
**ಸ್ತಥಾತ್ಮಾ ಪೂರ್ಣ ಉಚ್ಯತೇ ।**
**ಏತದರ್ಥವಿವೇಕೋ ಯಃ**
**ಪಿಂಡಾಕಾಶಸ್ಥಲಂ ವಿದುಃ ॥ 19–51**

ಪೂರ್ಣವಾದ ಆಕಾಶವು ಹೇಗೆ ಪಿಂಡದಲ್ಲಿ ಇರುತ್ತದೆಯೋ ಅದರಂತೆ ಪಿಂಡದಲ್ಲಿರುವ ಆತ್ಮವೂ ಸಹ ಪೂರ್ಣವಾಗಿರುತ್ತದೆ. ಈ ಪ್ರಕಾರವಾದ ಯಾವ ಅರ್ಥದ ವಿವೇಕವಿರುತ್ತದೆಯೋ ಆ ವಿವೇಕವುಳ್ಳವನೇ ಪಿಂಡಾಕಾಶಸ್ಥಲಿಯೆಂದು ಜ್ಞಾನಿಗಳು ತಿಳಿಯುತ್ತಾರೆ.

**ಘಟೋಪಾಧಿರ್ಯಥಾಕಾಶಃ**
**ಪರಿಪೂರ್ಣಃ ಸ್ವರೂಪತಃ ।**
**ತಥಾ ಪಿಂಡಸ್ಥಿತೋ ಹ್ಯಾತ್ಮಾ**
**ಪರಿಪೂರ್ಣಃ ಪ್ರಕಾಶತೇ ॥ 19–52**

ಘಟದ ಉಪಾಧಿಯುಳ್ಳ ಆಕಾಶವು ಸ್ವರೂಪತಃ ಹೇಗೆ ಪರಿಪೂರ್ಣ ವಾಗಿರುತ್ತದೆಯೋ ಅದರಂತೆ ಪಿಂಡದಲ್ಲಿರುವ (ಶರೀರದಲ್ಲಿರುವ) ಈ ಆತ್ಮವೂ ಸಹ ಪರಿಪೂರ್ಣವಾಗಿಯೇ ಪ್ರಕಾಶಿಸುತ್ತದೆ.

**ಅಂತಃಸ್ಥಿತಂ ಪರಾಕಾಶಮ್**
**ಶಿವಮದ್ವೈತಲಕ್ಷಣಮ್ ।**
**ಭಾವಯೇದ್ ಯಃ ಸುಮನಸಾ**
**ಪಿಂಡಾಕಾಶಃ ಸ ಉಚ್ಯತೇ ॥ 19–53**

ಚಿದಾಕಾಶರೂಪವಾದ ಅದ್ವೈತ ಲಕ್ಷಣವುಳ್ಳ ಆ ಶಿವನನ್ನು ಯಾರು ತನ್ನ ಸುಂದರವಾದ ಮನಸ್ಸಿನಿಂದ ಹೃದಯಾಕಾಶದಲ್ಲಿ ಇರುವಂತಹದನ್ನಾಗಿ ಭಾವಿಸುತ್ತಾನೆಯೋ ಅವನು ಪಿಂಡಾಕಾಶನೆಂದು ಕರೆಯಲ್ಪಡುತ್ತಾನೆ.

**ಶಿವಾಗಾರಮಿದಂ ಪ್ರೋಕ್ತಮ್**
**ಶರೀರಂ ಬೋಧದೀಪಿತಮ್ ।**
**ಷಟ್ತ್ರಿಂಶತ್ತತ್ತ್ವಘಟಿತಮ್**
**ಸುಮನಃ ಪದ್ಮಪೀಠಕಮ್ ॥ 19–54**

36 ತತ್ತ್ವಗಳಿಂದ ನಿರ್ಮಾಣಗೊಂಡ ಹೃದಯ ಕಮಲವೆಂಬ ಗದ್ದುಗೆಯಿಂದ ಕೂಡಿದ, ಜ್ಞಾನದೀಪದಿಂದ ಬೆಳಗುತ್ತಿರುವ ಈ ಶರೀರವು ಶಿವಾಲಯವೆಂದು ಹೇಳಲ್ಪಟ್ಟಿದೆ.

**ಪರಾಕಾಶಸ್ವರೂಪೇಣ**
**ಪ್ರಕಾಶಃ ಪರಮೇಶ್ವರಃ ।**
**ಹೃದಾಕಾಶಗುಹಾಲೀನೋ**

**ದೃಶ್ಯತೇಽಂತಃ ಶರೀರಿಣಾಮ್ ॥ 19–55**

ಪರಾಕಾಶ ಸ್ವರೂಪವಾದ ಪರಮೇಶ್ವರನು ಜೀವಿಗಳ (ಪ್ರಾಣಿಗಳ) ಹೃದಯಾಕಾಶವೆಂಬ ಗುಹೆಯೊಳಗೆ ಲೀನವಾಗಿ ಪ್ರಕಾಶರೂಪದಿಂದ ಜ್ಞಾನಿಗಳಿಗೆ ಗೋಚರಿಸುತ್ತಿರುವನು.

**ಏತಚ್ಛಿವಪುರಂ ಪ್ರೋಕ್ತಮ್**
**ಸಪ್ತಧಾತುಸಮಾವೃತಮ್ ।**
**ಅತ್ರ ಹೃತ್ಪಂಕಜಂ ವೇಶ್ಮ**
**ಸೂಕ್ಷ್ಮಾಂಬರಮನೋಹರಮ್ ॥ 19–56**

ಸಪ್ತಧಾತುಗಳಿಂದ ನಿರ್ಮಿತವಾದ ಈ ಶರೀರವು ಶಿವಪುರವೆಂದು ಹೇಳಲ್ಪಡುತ್ತದೆ. ಈ ದೇಹದಲ್ಲಿಯ ಹೃದಯ ಕಮಲವೇ ಅರಮನೆಯು, ಅದರೊಳಗಿನ ಸುಂದರವಾದ ಸೂಕ್ಷ್ಮಾಕಾಶವೇ ಅಂತಃಪುರವು.

**ತತ್ರ ಸನ್ನಿಹಿತಂ ಸಾಕ್ಷಾತ್**
**ಸಚ್ಚಿದಾನಂದಲಕ್ಷಣಮ್ ।**
**ನಿತ್ಯಸಿದ್ಧಃ ಪ್ರಕಾಶಾತ್ಮಾ**
**ಜಲಸ್ಥಾಕಾಶವಚ್ಛಿವಃ ॥ 19–57**

ಆ ಅಂತಃಪುರದೊಳಗೆ ಸಾಕ್ಷಾತ್ ಸಚ್ಚಿದಾನಂದ ಲಕ್ಷಣನಾದ ನಿತ್ಯ ಸಿದ್ಧನಾದ ಆ ಪರಶಿವನು (ನಿರ್ಮಲವಾದ) ಜಲದಲ್ಲಿ ತೋರುವ ಆಕಾಶದಂತೆ ಪ್ರಕಾಶಿಸುತ್ತಿರುವನು.

**ಅಂತರಾಕಾಶಬಿಂಬಸ್ಥಮ್**
**ಅಶೇಷೋಪಾಧಿವರ್ಜಿತಮ್ ।**
**ಘಟಾಕಾಶ ಇವ ಚ್ಛಿನ್ನಮ್**
**ಭಾವಯೇಚ್ಚಿನ್ಮಯಂ ಶಿವಮ್ ॥ 19–58**

ಅಖಂಡವಾದ ಅಕಾಶವು ಘಟರೂಪವಾದ ಉಪಾಧಿಯಿಂದ ಘಟಾಕಾಶವೆಂದೆನಿಸಿಕೊಂಡಿರುವಂತೆ ಸಕಲೋಪಾಧಿವಿಹೀನನು ಚಿನ್ಮಯನು ಆದ ಪರಶಿವನೇ ಶರೀರದಲ್ಲಿರುವ ಸೂಕ್ಷ್ಮಾಕಾಶದಲ್ಲಿ ನೆಲಸಿ ಆ ಉಪಾಧಿಯಿಂದ ಪರಿಚ್ಛಿನ್ನನಾಗಿ ತೋರುತ್ತಿರುವನೆಂದು ತಿಳಿಯಬೇಕು.

*ಇತಿ ಪಿಂಡಾಕಾಶಸ್ಥಲಂ*
*ಇಲ್ಲಿಗೆ ಪಿಂಡಾಕಾಶಸ್ಥಲವು ಮುಗಿಯಿತು.*

## 88. ಅಥ ಬಿಂದ್ವಾಕಾಶಸ್ಥಲಮ್
ಈಗ ಬಿಂದ್ವಾಕಾಶಸ್ಥಲಮ್
**(6 ಶ್ಲೋಕಗಳು)**

**ಯಥಾಕಾಶೋ ವಿಭುರ್ಜ್ಞೇಯಃ**
**ಸರ್ವಪ್ರಾಣ್ಯುಪರಿ ಸ್ಥಿತಃ ।**
**ತಥಾತ್ಮೇತ್ಯುಪಮಾನಾರ್ಥಮ್**

**ಬಿಂದ್ವಾಕಾಶಸ್ಥಲಂ ವಿದುಃ ॥ 19–59**

ಸರ್ವ ಪ್ರಾಣಿಗಳ ಒಳ ಹೊರಗೂ ವ್ಯಾಪಿಸಿರುವ ಆಕಾಶವು ಯಾವ ರೀತಿಯಾಗಿ ವಿಭುವೆಂದು ತಿಳಿಯಲ್ಪಡುತ್ತದೆಯೋ, ಅದರಂತೆ ಆತ್ಮವೂ ಕೂಡ ಆಕಾಶದೋಪಾದಿಯಲ್ಲಿ ಸರ್ವತ್ರ ವ್ಯಾಪಕವಾಗಿದೆ ಎಂಬುದನ್ನು ಉಪಮಾನ ರೂಪವಾಗಿ ತಿಳಿಸುವ ಸ್ಥಲವೇ ಬಿಂದ್ವಾಕಾಶವು (ಬಿಂದು ರೂಪನಾದ ಶಿವನು ಸರ್ವಜೀವಿಗಳ ಆತ್ಮ ರೂಪನಾಗಿ ಆಕಾಶದಂತೆ ವ್ಯಾಪಕನಾಗಿದ್ದಾನೆ ಎಂಬುದನ್ನು ತಿಳಿಸುವುದೇ ಬಿಂದ್ವಾಕಾಶಸ್ಥಲವೆಂಬುದು ತಾತ್ಪರ್ಯ).

**ಯಥೈಕೋ ವಾಯುರಾಖ್ಯಾತಃ**
**ಸರ್ವಪ್ರಾಣಿಗತೋ ವಿಭುಃ ।**
**ತಥಾತ್ಮಾ ವ್ಯಾಪಕಃ ಸಾಕ್ಷಾತ್**
**ಸರ್ವಪ್ರಾಣಿಗತಃ ಸ್ವಯಮ್ ॥ 19–60**

ಹೇಗೆ ಒಂದೇ ಆದ ವಾಯುವು ಎಲ್ಲ ಪ್ರಾಣಿಗಳಲ್ಲಿ ವ್ಯಾಪಿಸಿ, ವಿಭುವಾಗಿರುವಂತೆ ಆತ್ಮನು ಸಹ ಎಲ್ಲ ಪ್ರಾಣಿಗಳಲ್ಲಿ ಇರುವಂತಹದ್ದಾಗಿ ವ್ಯಾಪಕವಾಗಿದೆ.

**ಯಥಾ ವಹ್ನಿರಮೇಯಾತ್ಮಾ**
**ಸರ್ವತ್ರೈಕೋಽಪಿ ಭಾಸತೇ ।**
**ತಥಾ ಶಂಭುಃ ಸಮಸ್ತಾತ್ಮಾ**
**ಪರಿಚ್ಛೇದವಿವರ್ಜಿತಃ ॥ 19–61**

ಅಮೇಯವಾದ (ಅಳತೆ ಮಾಡಲು ಬಾರದ) ವಹ್ನಿಯು (ಅಗ್ನಿಯು) ಹೇಗೆ ಒಂದೇ ಆಗಿದ್ದರೂ ಎಲ್ಲ ಕಡೆ ಹೇಗೆ ತೋರುವುದೋ ಅದರಂತೆ ಸಮಸ್ತರ ಆತ್ಮ ರೂಪನಾದ ಶಂಭುವೂ ಸಹ ಪರಿಚ್ಛೇದ ವರ್ಜಿತನಾಗಿದ್ದಾನೆ. (ವ್ಯಾಪಕನಾಗಿದ್ದಾನೆ).

**ಸರ್ವೇಷಾಂ ದೇಹಿನಾಮಂತಃ**
**ಚಿತ್ ತತೋಯಂ ಪ್ರಕಾಶತೇ ।**
**ತಸ್ಮಿನ್ ಪ್ರತಿಫಲತ್ಯಾತ್ಮಾ**
**ಶಿವೋ ದರ್ಪಣವದ್ ವಿಭುಃ ॥ 19–62**

ಪ್ರತಿಯೊಬ್ಬ ಜೀವಾತ್ಮನ ಅಂತರಂಗದಲ್ಲಿ ಚಿತ್ತವೆಂಬ ನಿರ್ಮಲವಾದ ಜಲವಿರುತ್ತದೆ. ಆ ಚಿತ್ತವೆಂಬ ಜಲದಲ್ಲಿ ವಿಭುವಾದ ಶಿವನು ದರ್ಪಣೋಪಾದಿಯಲ್ಲಿ ಪ್ರತಿಬಿಂಬಿಸುತ್ತಾನೆ.

**ಏಕೋ ವಶೀಕೃತಃ ಸಂವಿತ್**
**ಪ್ರಕಾಶಾತ್ಮಾ ಪರಾತ್ಪರಃ ।**
**ಸರ್ವಪ್ರಾಣಿಗತೋ ಭಾತಿ**
**ತಥಾಪಿ ವಿಭುರುಚ್ಯತೇ ॥ 19–63**

ಸಂವಿತ್ಪ್ರಕಾಶ ರೂಪನಾದ (ಅರಿವಿನ ಪ್ರಕಾಶ ರೂಪನಾದ), ಪರಾತ್ಪರನಾದ ಮತ್ತು ಒಬ್ಬನೇ ಆದ ಆ ಶಿವನು ಎಲ್ಲ ಪ್ರಾಣಿಗಳ ಹೃದಯಕಮಲದಲ್ಲಿ ವಶೀಕೃತನಾಗಿ (ವಶೀಕರಿಸಲ್ಪಟ್ಟವನಾಗಿ ತೋರುತ್ತಿದ್ದಾನೆ). ಆದರೂ ಅವನು ವಿಭುವೆಂತಲೇ ಕರೆಸಿಕೊಳ್ಳುತ್ತಾನೆ.

**ಏಕ ಏವ ಯಥಾ ಸೂರ್ಯಃ**
**ತೇಜಸಾ ಭಾತಿ ಸರ್ವಗಃ ।**
**ತಥಾತ್ಮಾ ಶಕ್ತಿಭೇದೇನ**
**ಶಿವಃ ಸರ್ವಗತೋ ಭವೇತ್ ॥ 19–64**

ಒಬ್ಬನೇ ಆದ ಸೂರ್ಯನು ತನ್ನ ತೇಜಸ್ಸಿನಿಂದ ಎಲ್ಲ ಕಡೆ ಹೇಗೆ ಬೆಳಗುತ್ತಾನೆಯೋ ಅದರಂತೆ ಶಿವನು ತನ್ನ ಶಕ್ತಿಗಳ ಭೇದದಿಂದ (ಇಚ್ಛಾ, ಜ್ಞಾನ, ಕ್ರಿಯಾಶಕ್ತಿ ಭೇದಗಳಿಂದ) ಎಲ್ಲ ಕಡೆ ವ್ಯಾಪಕನಾಗಿರುತ್ತಾನೆ.

***ಇತಿ ಬಿಂದ್ವಾಕಾಶಸ್ಥಲಂ*** *ಇಲ್ಲಿಗೆ ಬಿಂದ್ವಾಕಾಶಸ್ಥಲವು ಮುಗಿಯಿತು.*

## 89. ಅಥ ಮಹಾಕಾಶಸ್ಥಲಮ್
ಈಗ ಮಹಾಕಾಶಸ್ಥಲವು
**(11 ಶ್ಲೋಕಗಳು)**

**ಪಿಂಡಾಂಡಸ್ಥಂ ಯಥಾಕಾಶಮ್**
**ನ ಭಿನ್ನಂ ತದ್ವದಾತ್ಮನಃ ।**
**ಅಭಿನ್ನಃ ಪರಮಾತ್ಮೇತಿ**
**ಮಹಾಕಾಶಸ್ಥಲಂ ವಿದುಃ ॥ 19–65**

ಪಿಂಡಾಂಡದಲ್ಲಿಯ ಆಕಾಶವು ಮಹಾಕಾಶಕ್ಕಿಂತಲೂ ಹೇಗೆ ಭಿನ್ನವಾಗಿರು ವುದಿಲ್ಲವೋ ಅದರಂತೆ ಪಿಂಡಾಂಡದೊಳಗಿನ ಆತ್ಮವು ಪರಮಾತ್ಮನೊಂದಿಗೆ ಅಭಿನ್ನನಾಗಿದ್ದಾನೆ ಎಂಬುದಾಗಿ ತಿಳಿದುಕೊಳ್ಳುವುದೇ ಮಹಾಕಾಶವು.

**ಯಥಾ ನ ಭಿನ್ನಮಾಕಾಶಮ್**
**ಘಟೇಷು ಚ ಮಠೇಷು ಚ ।**
**ತಥಾಂಡೇಷು ಚ ಪಿಂಡೇಷು**
**ಸ್ಥಿತೋ ಹ್ಯಾತ್ಮಾ ನ ಭಿದ್ಯತಃ ॥ 19–66**

ಘಟಗಳಲ್ಲಿ ಮತ್ತು ಮಠಗಳಲ್ಲಿ ಇರುವ ಆಕಾಶವು ಹೇಗೆ ಭಿನ್ನ ಭಿನ್ನವಾಗಿರುವುದಿಲ್ಲವೋ, ಅದರಂತೆ ಅಂಡಗಳಲ್ಲಿ (ಬ್ರಹ್ಮಾಂಡಗಳಲ್ಲಿ) ಮತ್ತು ಪಿಂಡಗಳಲ್ಲಿ (ಶರೀರಗಳಲ್ಲಿ) ಇರುವ ಆತ್ಮನೂ ಸಹ ಭಿನ್ನ ಭಿನ್ನವಾಗಿರುವುದಿಲ್ಲ.

**ಅನಿರ್ದೇಶ್ಯಮನೌಪಮ್ಯಮ್**
**ಅವಾಙ್ಮನಸಗೋಚರಮ್ ।**
**ಸರ್ವತೋಮುಖಸಂಪನ್ನಮ್**
**ಸತ್ತಾನಂದಂ ಚಿದಾತ್ಮಕಮ್ ॥ 19–67**

**ಕಾಲಾತೀತಂ ಕಲಾತೀತಮ್**
**ಕ್ರಮಯೋಗಾದಿವರ್ಜಿತಮ್ ।**
**ಸ್ವಾನುಭೂತಿಪ್ರಮಾಣಸ್ಥಮ್**
**ಜ್ಯೋತಿಷಾಮುದಯಸ್ಥಲಮ್ ॥ 19–68**

**ಶಿವಾಖ್ಯಂ ಪರಮಂ ಬ್ರಹ್ಮ**
**ಪರಮಾಕಾಶಲಕ್ಷಣಮ್ ।**
**ಲಿಂಗಮಿತ್ಯುಚ್ಯತೇ ಸದ್ಭಿಃ**
**ಯದ್ವಿನಾ ನ ಜಗತ್ಸ್ಥಿತಿಃ ॥ 19–69**

ನಿರ್ದೇಶಿಸಲು ಬಾರದ (ತೋರಿಸಲು ಬಾರದ), ಉಪಮಾತೀತವಾದ ವಾಣಿ ಮತ್ತು ಮನಸ್ಸುಗಳಿಗೆ ಆಗೋಚರವಾದ, ಎಲ್ಲೆಡೆ ವ್ಯಾಪಿಸಿಕೊಂಡಿರುವ, ಸಚ್ಚಿದಾನಂದ, ಸ್ವರೂಪವಾದ, ಕಾಲತತ್ತ್ವವನ್ನು ಮೀರಿದ, ಕಲಾತತ್ತ್ವವನ್ನು ಮೀರಿದ, ಕ್ರಮಯೋಗಾದಿಗಳಿಲ್ಲದ (ಉತ್ಪತ್ತಿಯಾದಿ ಕ್ರಮಗಳಿಲ್ಲದ), ಸ್ವಾನುಭೂತಿ ಪ್ರಮಾಣ ವೇದ್ಯವಾದ, ಎಲ್ಲ ಜ್ಯೋತಿಗಳಿಗೆ ಉದಯಸ್ಥಾನವಾದ, ಶಿವನೆಂಬ ಹೆಸರಿನ ಆ ಪರಬ್ರಹ್ಮ ಪರಮಾಕಾಶವೇ ಲಿಂಗವೆಂದು (ಮಹಾಲಿಂಗವೆಂದು) ಸತ್ಪುರುಷರಿಂದ ಹೇಳಲ್ಪಡುತ್ತದೆ. ಈ ಮಹಾಲಿಂಗದ ಹೊರತಾಗಿ ಜಗತ್ತಿನ ಅಸ್ತಿತ್ವವು ಇರುವುದಿಲ್ಲ.

**ಪರಮಾಕಾಶಮವ್ಯಕ್ತಮ್**
**ಪ್ರಬೋಧಾನಂದಲಕ್ಷಣಮ್ ।**
**ಲಿಂಗಂ ಜ್ಯೋತಿರ್ಮಯಂ ಪ್ರಾಹುಃ**
**ಲೀಯಂತೇ ಯತ್ರ ಯೋಗಿನಃ ॥ 19–70**

ಪರಮಾಕಾಶ ಸ್ವರೂಪವೂ, ಅವ್ಯಕ್ತವೂ, ಚಿದಾನಂದ ಸ್ವರೂಪವೂ ಆದ ಮಹಾಲಿಂಗವನ್ನು ಜ್ಯೋತಿರ್ಲಿಂಗವೆಂದು ಕರೆಯುತ್ತಾರೆ. ಶಿವಯೋಗ ಸಂಪನ್ನರಾದ ಯೋಗಿಗಳು ಈ ಲಿಂಗದಲ್ಲಿಯೇ ಐಕ್ಯವನ್ನು ಪಡೆಯುತ್ತಾರೆ.

**ಸಂವಿದೇವ ಪರಾ ಕಾಷ್ಠಾ**
**ಪರಮಾನಂದರೂಪಿಣೀ ।**
**ತಾಮಾಹುಃ ಪರಮಾಕಾಶಮ್**
**ಮುನಯೋ ಮುಕ್ತಸಂಶಯಾಃ ॥ 19–71**

ಸಂಶಯರಹಿತರಾದ ಮುನಿಗಳು (ವಸಿಷ್ಠಾದಿಗಳು) ಯಾವ ತತ್ತ್ವವನ್ನು ಮಹಾಕಾಶವೆಂದು ಹೇಳುವರೋ ಅದು ಪರಮಾನಂದ ಸ್ವರೂಪವೂ, ಸರ್ವೋತ್ಕೃಷ್ಟವೂ ಆದ ಚಿತ್ತೇ ಆಗಿರುತ್ತದೆ.

**ತರಂಗಾದಿ ಯಥಾ ಸಿಂಧೋಃ**
**ಸ್ವರೂಪಾನ್ನಾತಿರಿಚ್ಯತೇ ।**
**ತಥಾ ಶಿವಾಚ್ಚಿದಾಕಾಶಾದ್**
**ವಿಶ್ವಮೇತನ್ನ ಭಿದ್ಯತೇ ॥ 19–72**

ಸಮುದ್ರದಲ್ಲಿಯ ನೆರೆತೆರೆಗಳು ಸಮುದ್ರದ ನೀರಿನ ಸ್ವರೂಪಕ್ಕಿಂತಲೂ ಹೇಗೆ ಭಿನ್ನವಾಗಿರುವುದಿಲ್ಲವೋ ಅದರಂತೆ ಈ ವಿಶ್ವವೂ ಸಹ ಚಿದಾಕಾಶ ರೂಪನಾದ ಶಿವನಿಗಿಂತ ಭಿನ್ನವಾಗಿರುವುದಿಲ್ಲ.

**ಯಥಾ ಪುಷ್ಪಪಲಾಶಾದಿ**
**ವೃಕ್ಷರೂಪಾನ್ನ ಭಿದ್ಯತೇ ।**
**ತಥಾ ಶಿವಾತ್ ಪರಾಕಾಶಾತ್**
**ಜಗತೋ ನಾಸ್ತಿ ಭಿನ್ನತಾ ॥ 19–73**

ಮರದಿಂದ ಹುಟ್ಟಿದ ಹೂವು, ಎಲೆ ಮೊದಲಾದವುಗಳು ಮರಕ್ಕಿಂತ ಹೇಗೆ ಭಿನ್ನವಾಗಿರುವುದಿಲ್ಲವೋ ಅದರಂತೆ ಪರಾಕಾಶ ರೂಪನಾದ ಶಿವನಿಗಿಂತಲೂ (ಪರಶಿವನಿಗಿಂತಲೂ) ಈ ಜಗತ್ತು ಭಿನ್ನವಾಗಿರುವುದಿಲ್ಲ.

**ಯಥಾ ಜ್ಯೋತೀಂಷಿ ಭಾಸಂತೇ**
**ಭೂತಾಕಾಶೇ ಪೃಥಕ್ ಪೃಥಕ್ ।**

**ತಥಾ ಭಾಂತಿ ಪರಾಕಾಶೇ**
**ಬ್ರಹ್ಮಾಂಡಾನಿ ವಿಶೇಷತಃ ॥ 19–74**

ಆಕಾಶವೆಂಬ ಮಹಾಭೂತದಲ್ಲಿ ನಕ್ಷತ್ರಗಳು ಹೇಗೆ ಬೇರೆ ಬೇರೆಯಾಗಿ ಪ್ರಕಾಶಿಸುವುವೋ ಹಾಗೇ ಪರಾಕಾಶ ರೂಪವಾದ ಪರಬ್ರಹ್ಮದಲ್ಲಿ ಅನೇಕ ಬ್ರಹ್ಮಾಂಡಗಳು ವಿಶೇಷವಾಗಿ ತೋರುತ್ತವೆ.

**ನಿರಸ್ತೋಪಾಧಿಸಂಬಂಧಮ್**
**ನಿರ್ಮಲಂ ಸಂವಿದಾತ್ಮಕಮ್ ।**
**ಪರಾಕಾಶಂ ಜಗಚ್ಚಿತ್ರ–**
**ವಿಲಾಸಾಲಂಬಭಿತ್ತಿಕಮ್ ॥ 19–75**

ಯಾವುದೇ ಉಪಾಧಿಗಳ ಸಂಬಂಧವಿಲ್ಲದ ನಿರ್ಮಲವಾದ, ಜ್ಞಾನ ಸ್ವರೂಪವಾದ, ಪರಾಕಾಶರೂಪವಾದ ಪರಬ್ರಹ್ಮವೇ ಜಗಜ್ಜಾಲ ರೂಪವಾದ ಚಿತ್ರಕ್ಕೆ ಆಧಾರಭೂತವಾದ ಗೋಡೆಯಂತೆ ಇರುವುದು.

***ಇತಿ ಮಹಾಕಾಶಸ್ಥಲಂ***
*ಇಲ್ಲಿಗೆ ಮಹಾಕಾಶಸ್ಥಲವು ಮುಗಿಯಿತು.*

## 90. ಅಥ ಕ್ರಿಯಾಪ್ರಕಾಶಸ್ಥಲಮ್
ಈಗ ಕ್ರಿಯಾಪ್ರಕಾಶಸ್ಥಲವು
**(7 ಶ್ಲೋಕಗಳು)**

**ಶಿವಸ್ಯ ಪರಿಪೂರ್ಣಸ್ಯ**
**ಚಿದಾಕಾಶಸ್ವರೂಪಿಣಃ ।**
**ಆತ್ಮತ್ವೇನಾನುಸಂಧಾನಾತ್**
**ಕ್ರಿಯಾದ್ಯೋತನವಾನ್ ಯಮೀ ॥ 19–76**

ಪರಿಪೂರ್ಣನೂ, ಚಿದಾಕಾಶ ಸ್ವರೂಪನೂ ಆದ ಪರಶಿವನನ್ನು ತನ್ನ ಆತ್ಮಸ್ವರೂಪದಿಂದ ಅನುಸಂಧಾನ ಮಾಡುವ ಯಮಿಯೇ (ಯೋಗಿಯೇ) ಕ್ರಿಯಾಪ್ರಕಾಶಸಂಪನ್ನನೆಂದು ಕರೆಸಿಕೊಳ್ಳುವನು.

**ನಿಷ್ಕಲಂಕಚಿದಾನಂದ–**
**ಗಗನೋಪಮರೂಪಿಣಃ ।**
**ಶಿವಸ್ಯ ಪರಿಪೂರ್ಣಸ್ಯ**
**ವೃತ್ತಿಶ್ಚೈತನ್ಯರೂಪಿಣೀ ॥ 19–77**

ಕಲಂಕರಹಿತನೂ, ಚಿದಾನಂದರೂಪನೂ, ಆಕಾಶಸ್ವರೂಪನೂ ಮತ್ತು ಪರಿಪೂರ್ಣನೂ ಆದ ಆ ಪರಶಿವನೇ ನಾನಿದ್ದೇನೆ ಎಂಬುವ ಅನುಸಂಧಾನರೂಪವಾದ ಮನೋವೃತ್ತಿಯು ಚೈತನ್ಯರೂಪಿಣಿಯಾಗಿರುತ್ತದೆ.

**ನಿಷ್ಕಲಂಕೇ ನಿರಾಕಾರೇ**
**ನಿತ್ಯೇ ಪರಮತೇಜಸಿ ।**

**ವಿಲೀನಚಿತ್ತವೃತ್ತಸ್ಯ**
**ತಥಾ ಶಕ್ತಿಃ ಕ್ರಿಯೋಚ್ಯತೇ ॥ 19–78**

ನಿಷ್ಕಲಂಕವೂ, ನಿರಾಕಾರವೂ, ನಿತ್ಯವೂ ಆದ ಪರಶಿವ ಎಂಬ ಹೆಸರಿನ ತೇಜಸ್ಸಿನಲ್ಲಿ ಚಿತ್ತವೃತ್ತಿಯನ್ನು ಅಡಗಿಸಿಕೊಂಡ ಆ ಯೋಗಿಯ ಅನುಸಂಧಾನ ರೂಪವಾದ ಯಾವ ಕ್ರಿಯೆಯುಂಟೋ ಆ ಕ್ರಿಯಾಶಕ್ತಿಯೂ ಸಹ ಪರಮತೇಜೋ ರೂಪವಾದುದು.

**ಸರ್ವಜ್ಞಃ ಸರ್ವಕರ್ತಾ ಚ**
**ಸರ್ವಗಃ ಪರಮೇಶ್ವರಃ ।**
**ತದೈಕ್ಯಚಿಂತಯಾ ಯೋಗೀ**
**ತಾದೃಶಾತ್ಮಾ ಪ್ರಕಾಶತೇ ॥ 19–79**

ಸರ್ವಜ್ಞನೂ, ಸರ್ವಕರ್ತನೂ (ಪಂಚಕೃತ್ಯ ಕರ್ತನೂ), ಸರ್ವವ್ಯಾಪಿಯೂ ಆದ ಪರಶಿವನೊಂದಿಗೆ ಐಕ್ಯ ಚಿಂತನೆಯನ್ನು ಮಾಡಿದ ಯೋಗಿಯು ಆ ಪರಮಾತ್ಮರೂಪನಾಗಿಯೇ ಪ್ರಕಾಶಿಸುತ್ತಾನೆ.

**ಸರ್ವೇಂದ್ರಿಯಾಣಾಂ ವ್ಯಾಪಾರೇ**
**ವಿದ್ಯಮಾನೇಽಪಿ ಸಂಯಮೀ ।**
**ಪ್ರತ್ಯುಙ್ಮುಖೇನ ಮನಸಾ**
**ಶಿವಂ ಪಶ್ಯನ್ ಪ್ರಮೋದತೇ ॥ 19–80**

ಸಂಯಮಿಯಾದ ಯೋಗಿಯಲ್ಲಿ ಎಲ್ಲ ಇಂದ್ರಿಯಗಳ ವ್ಯಾಪಾರವು ನಡೆಯುತ್ತಿದ್ದರೂ ಸಹ ಅವನು ಪ್ರತ್ಯಙ್ಮುಖವಾದ (ಅಂತರಮುಖವಾದ ಅಂದರೆ ಪಶ್ಚಿಮ ಚಕ್ರಾದಿಮುಖವಾದ) ಮನಸ್ಸಿನಿಂದ ಶಿವನನ್ನು ನೋಡುತ್ತಾ ಆನಂದಿಸುತ್ತಿರುತ್ತಾನೆ.

**ಕೂಟಸ್ಥಮಚಲಂ ಪ್ರಾಜ್ಞಮ್**
**ಗುಣಾತೀತಂ ಗುಣೋತ್ತರಮ್ ।**
**ಶಿವತತ್ತ್ವಂ ಸ್ವರೂಪೇಣ**
**ಪಶ್ಯನ್ ಯೋಗೀ ಪ್ರಮೋದತೇ ॥ 19–81**

ಗುಣೋತ್ತರನಾದ (ಜ್ಞಾನ ವೈರಾಗ್ಯಾದಿ ಗುಣಗಳಿಂದ ಶ್ರೇಷ್ಠನಾಗಿರ್ದ), ಪ್ರಾಜ್ಞನಾದ (ಕುಶಲನಾದ), ಕೂಟಸ್ಥನಾದ (ಸಾಕ್ಷಿರೂಪನಾದ), ಗುಣಾತೀತನಾದ (ಮಾಯಿಕ ಸತ್ವಾದಿ ಗುಣರಹಿತನಾದ), ಅಚಲನಾದ ಪರಶಿವನನ್ನು ತನ್ನ ಸ್ವರೂಪವಾಗಿ ನೋಡುವ ಯೋಗಿಯು ಆನಂದವಾಗಿರುತ್ತಾನೆ.

**ಪರಾತ್ಮನಿ ಕ್ರಿಯಾ ಸರ್ವಾ**
**ಗಂಧರ್ವನಗರೀವ ಖೇ ।**
**ಪ್ರಕಾಶತ ಇತಿ ಪ್ರೋಕ್ತಮ್**
**ಕ್ರಿಯಾಯಾಸ್ತು ಪ್ರಕಾಶನಮ್ ॥ 19–82**

ಪರಶಿವ ಸ್ವರೂಪಿಯಾದ ಯೋಗಿಯ ಎಲ್ಲಾ ಕ್ರಿಯೆಗಳು ಆಕಾಶದಲ್ಲಿ ತೋರುವ ಗಂಧರ್ವ ನಗರಗಳಂತೆ ಪ್ರಕಾಶಿಸುತ್ತವೆ ಎಂಬುದಾಗಿ ಜ್ಞಾನಿಗಳಿಂದ ಹೇಳಲಾಗಿದೆ. ಇದುವೇ ಕ್ರಿಯಾಪ್ರಕಾಶವು.

*ಇತಿ ಕ್ರಿಯಾಪ್ರಕಾಶಸ್ಥಲಂ* *ಇಲ್ಲಿಗೆ ಕ್ರಿಯಾಪ್ರಕಾಶಸ್ಥಲವು ಮುಗಿಯಿತು.*

## 91. ಅಥ ಭಾವಪ್ರಕಾಶಸ್ಥಲಮ್
ಈಗ ಭಾವಪ್ರಕಾಶಸ್ಥಲವು
**(7 ಶ್ಲೋಕಗಳು)**

**ತರಂಗಾದ್ಯಾ ಯಥಾ ಸಿಂಧೌ**
**ನ ಭಿದ್ಯಂತೇ ತಥಾऽऽತ್ಮನಿ ।**
**ಭಾವಾ ಬುದ್ಧ್ಯಾದಯಃ ಸರ್ವೇ**
**ಯತ್ತದ್ ಭಾವಪ್ರಕಾಶನಮ್ ॥ 19–83**

ಸಮುದ್ರದಲ್ಲಿಯ ತರಂಗಗಳು ಸಮುದ್ರಕ್ಕಿಂತಲೂ ಹೇಗೆ ಭಿನ್ನವಾದವುಗಳಲ್ಲವೋ ಅದರಂತೆ ಯೋಗಿಯ ಮನಸ್ಸಿನಲ್ಲಿ ಉತ್ಪನ್ನವಾಗಿರುವ ಪರಶಿವ ಸ್ವರೂಪವಾದ ಯಾವ ಯಾವ ಭಾವಬುದ್ಧಿಗಳಿವೆಯೋ ಅವೆಲ್ಲವೂ ಶಿವನಿಗಿಂತಲೂ ಭಿನ್ನವಾಗಿರುವುದಿಲ್ಲ ಎಂಬ ತಿಳುವಳಿಕೆಯೇ ಭಾವಪ್ರಕಾಶವು.

**ಶಿವ ಏವ ಜಗತ್ಸರ್ವಮ್**
**ಶಿವ ಏವಾಹಮಿತ್ಯಪಿ ।**
**ಭಾವಯನ್ ಪರಮೋ ಯೋಗೀ**
**ಭವದೋಷೈರ್ನ ಬಾಧ್ಯತೇ ॥ 19–84**

ಸಕಲವಾದ ಜಗತ್ತು ಶಿವಸ್ವರೂಪವೇ ಆಗಿರುತ್ತದೆ. ಆದ್ದರಿಂದ ನಾನು ಕೂಡ ಶಿವನೇ ಆಗಿರುವೆನು ಎಂಬುದಾಗಿ ಭಾವಿಸುವ ಯೋಗಿಯು ಭವದೋಷಗಳಿಂದ (ಸಾಂಸಾರಿಕ ದೋಷಗಳಿಂದ) ಬಾಧಿಸಲ್ಪಡುವುದಿಲ್ಲ.

**ಶಿವಭಾವೇ ಸ್ಥಿರೇ ಜಾತೇ**
**ನಿರ್ಲೇಪಸ್ಯ ಮಹಾತ್ಮನಃ ।**
**ಯೇ ಯೇ ಭಾವಾಃ ಸಮುತ್ಪನ್ನಾಃ**
**ತೇ ತೇ ಶಿವಮಯಾಃ ಸ್ಮೃತಾಃ ॥ 19–85**

ನಿರ್ಲಿಪ್ತನಾದ (ವಿಷಯಲೇಪ ರಹಿತನಾದ) ಮಹಾತ್ಮನಲ್ಲಿ ಶಿವಭಾವವು ಸ್ಥಿರಗೊಳ್ಳಲು ಅವನಲ್ಲಿ ಯಾವ ಯಾವ ಭಾವಗಳು ಉತ್ಪನ್ನವಾಗುತ್ತವೆಯೋ ಅವೆಲ್ಲವುಗಳೂ ಶಿವಮಯವೇ ಆಗಿರುತ್ತವೆ.

**ಅದ್ವಿತೀಯಶಿವಾಕಾರ–**
**ಭಾವನಾಧ್ವಸ್ತಕರ್ಮಣಾ ।**
**ನ ಕಿಂಚಿದ್ ಭಾವ್ಯತೇ ಸಾಕ್ಷಾತ್**
**ಶಿವಾದನ್ಯನ್ಮಹಾತ್ಮನಾ ॥ 19–86**

ಅದ್ವಿತೀಯವಾದ (ಸಮಾನ ಸಮರಸ ರೂಪವಾದ) ಶಿವಾಕಾರದ ಭಾವನೆಯಿಂದ ತಮ್ಮ ಕರ್ಮಗಳನ್ನು ಧ್ವಂಸಮಾಡಿಕೊಂಡ ಮಹಾತ್ಮರು ಸಾಕ್ಷಾತ್ ಶಿವನಿಗಿಂತಲೂ ಭಿನ್ನವಾದುದೇನನ್ನೂ ಭಾವಿಸುವುದಿಲ್ಲ.

**ಗಲಿತಾಜ್ಞಾನಬಂಧಸ್ಯ**
**ಕೇವಲಾತ್ಮಾನುಭಾವಿನಃ ।**
**ಯತ್ರ ಯತ್ರೇಂದ್ರಿಯಾಸಕ್ತಿಃ**
**ತತ್ರ ತತ್ರ ಶಿವಾತ್ಮತಾ ॥ 19–87**

ಅಜ್ಞಾನರೂಪ ಬಂಧನವನ್ನು ಧ್ವಂಸಮಾಡಿಕೊಂಡ, ಕೇವಲ ಆತ್ಮಾನುಭಾವಿಯಾಗಿರುವ ಯೋಗಿಗೆ ಎಲ್ಲೆಲ್ಲಿ ಇಂದ್ರಿಯಗಳು ಆಸಕ್ತವಾಗುವುವೋ ಅಲ್ಲೆಲ್ಲಾ ಶಿವಸ್ವರೂಪವೇ ಇರುವುದು.

**ರಾಗದ್ವೇಷಾದಯೋ ಭಾವಾಃ**
**ಸಂಸಾರಕ್ಲೇಶಕಾರಣಮ್ ।**
**ತೇಷಾಮುಪರಮೋ ಯತ್ರ**
**ತತ್ರ ಭಾವಃ ಶಿವಾತ್ಮಕಃ ॥ 19–88**

ರಾಗ ದ್ವೇಷಾದಿ ಭಾವಗಳು ಸಂಸಾರದ ಕ್ಲೇಶಕ್ಕೆ ಕಾರಣವಾಗಿರುತ್ತದೆ. ಅವುಗಳು ಯಾವ ಯೋಗಿಯಲ್ಲಿ ಉಪರಮೆಗೊಂಡಿರುವವೋ (ಶಾಂತವಾಗಿ ರುವವೋ) ಅಂತಹ ಶಿವಯೋಗಿಯ ಎಲ್ಲ ಭಾವಗಳು ಶಿವಾತ್ಮಕವಾಗಿರುತ್ತವೆ.

**ಯಥಾ ಸೂರ್ಯಸಮಾಕ್ರಾಂತೌ**
**ನ ಶಕ್ನೋತಿ ತಮಃ ಸದಾ ।**
**ತಥಾ ಪ್ರಕಾಶಮಾತ್ಮಾನಮ್**
**ನಾವಿದ್ಯಾಽಽಕ್ರಮತಿ ಸ್ವಯಮ್ ॥ 19–89**

ಕತ್ತಲೆಯು ಹೇಗೆ ಸೂರ್ಯನನ್ನು ಮುಸುಕಲು ಎಂದೂ ಸಮರ್ಥವಾಗು ವುದಿಲ್ಲವೋ, ಅದರಂತೆ ಪ್ರಕಾಶಸ್ವರೂಪನಾದ ಈ ಯೋಗಿಯನ್ನು ಅವಿದ್ಯೆಯು ಮುಸುಕಲಾರದು.

*ಇತಿ ಭಾವಪ್ರಕಾಶಸ್ಥಲಂ* *ಇಲ್ಲಿಗೆ ಭಾವಪ್ರಕಾಶಸ್ಥಲವು ಮುಗಿಯಿತು.*

## 92. ಅಥ ಜ್ಞಾನಪ್ರಕಾಶಸ್ಥಲಮ್

ಈಗ ಜ್ಞಾನಪ್ರಕಾಶಸ್ಥಲವು

**(8 ಶ್ಲೋಕಗಳು)**

**ಮುಖ್ಯಾರ್ಥೇಽಸಂಭವೇ ಜಾತೇ**
**ಲಕ್ಷಣಾಯೋಗಸಂಶ್ರಯಾತ್ ।**
**ತಜ್ಜ್ಞಾನಯೋಜನಂ ಯತ್ತತ್**
**ಉಕ್ತಂ ಜ್ಞಾನಪ್ರಕಾಶನಮ್ ॥ 19–90**

ಮುಖ್ಯಾರ್ಥವು (ವಾಚ್ಯಾರ್ಥವು) ಸಂಭವಿಸದೇ ಇದ್ದಾಗ ಲಕ್ಷಣಾಯೋಗವನ್ನು (ಲಕ್ಷ್ಯಾರ್ಥವನ್ನು) ಆಶ್ರಯಿಸಿ ಆ ಜ್ಞಾನಗಳ ಒಟ್ಟುಗೂಡಿಸುವಿಕೆ ಯಾವುದಿದೆಯೋ ಅದುವೇ ಜ್ಞಾನಪ್ರಕಾಶವೆಂದು ಹೇಳಲ್ಪಡುತ್ತದೆ (ಅವಿದ್ಯಾ ಉಪಾಧಿಯಿಂದ ಕೂಡಿದ ಜೀವಾತ್ಮ (ಅಂಗ) ಮತ್ತು ಶುದ್ಧಮಾಯಾ ಉಪಾಧಿಯಿಂದ ಕೂಡಿದ ಪರಮಾತ್ಮ (ಈಶ್ವರ, ಲಿಂಗ) ಇವರೀರ್ವರ ಐಕ್ಯತೆಯನ್ನು ತತ್ತ್ವಮಸಿ ಮಹಾ (ಉಪದೇಶ) ವಾಕ್ಯದ ವಾಚ್ಯಾರ್ಥದಿಂದ ಮಾಡಲು ಹೋದಾಗ ಎರಡೂ ಉಪಾಧಿಗಳಲ್ಲಿ ಭಿನ್ನಭಿನ್ನ ಗುಣಗಳಿರುವುದರಿಂದ ಮುಖ್ಯಾರ್ಥದಿಂದ ಅವೆರಡರ ಅಭೇದವನ್ನು ಬೋಧಿಸಲು ಸಾಧ್ಯವಿಲ್ಲ. ಆದರೆ ಲಕ್ಷ್ಯಾರ್ಥದಿಂದ ಅವೆರಡೂ ಉಪಾಧಿಗಳನ್ನು ಉಳಿದು ಉಪಮಿತಗಳಾದ ಎರಡೂ ಚೈತನ್ಯಗಳನ್ನು ಅಭೇದ (ಅಭಿನ್ನವಾಗಿ) ಭೇದಿಸಲು ಸಾಧ್ಯವಾಗುತ್ತದೆ. ಹೀಗೆ ಅಂಗ–ಲಿಂಗಗಳ ಸಮಾನ ಸಮರಸ ಬೋಧೆಯಲ್ಲಿ ವಾಚ್ಯಾರ್ಥವು ಸಂಭವಿಸದೇ ಇದ್ದಾಗ

ಲಕ್ಷ್ಯಾರ್ಥವನ್ನು ಗ್ರಹಿಸಿ ಅಂಗಲಿಂಗಗಳ ಐಕ್ಯ ಸಂಯೋಜನೆಯನ್ನು ಜ್ಞಾನದಿಂದ ಮಾಡಿಕೊಡುವುದಕ್ಕೆ ಜ್ಞಾನಪ್ರಕಾಶವೆಂದು ಕರೆಯುತ್ತಾರೆ.

**ಮುಕ್ತಸ್ಯ ಜ್ಞಾನಸಂಬಂಧೋ**
**ಜ್ಞೇಯಾಭಾವಃ ಸ್ವಭಾವತಃ ।**
**ಉಪಾಧಿಸಹಿತಂ ಜ್ಞಾನಮ್**
**ನ ಭೇದಮತಿವರ್ತತೇ ॥ 19–91**

ಜೀವನ್ಮುಕ್ತನಾದ ಯೋಗಿಗೆ ಜ್ಞಾನಸಂಬಂಧವು (ಲಕ್ಷ್ಯಾರ್ಥ ರೂಪವಾದ ಜ್ಞಾನ ಸಂಬಂಧವು) ಸ್ವಾಭಾವಿಕವಾದುದು. ಆದ್ದರಿಂದ ಆ ಜೀವನ್ಮುಕ್ತನಿಗೆ ಜ್ಞೇಯವು (ತಿಳಿದುಕೊಳ್ಳಬೇಕಾದುದು) ಯಾವುದೂ ಇರುವುದಿಲ್ಲ. ಉಪಾಧಿಯಿಂದ ಕೂಡಿದ ಜ್ಞಾನವು ಭೇದವನ್ನು ಮೀರಿ ಇರುವುದಿಲ್ಲ. ಆದ್ದರಿಂದ ಉಪಾಧಿಗಳನ್ನು ಕಳೆದುಕೊಳ್ಳುವುದೇ ಸಾಮರಸ್ಯಕ್ಕೆ ಮೂಲಕಾರಣವಾಗಿರುತ್ತದೆ. ಆದ್ದರಿಂದ ಉಪಾಧಿಗಳನ್ನು ಜ್ಞಾನದಿಂದ ನಿವೃತ್ತಿಗೊಳಿಸುವುದೇ ಜ್ಞಾನಪ್ರಕಾಶವು.

**ಜ್ಞಾನಮಿತ್ಯುಚ್ಯತೇ ಸದ್ಭಿಃ**
**ಪರಿಚ್ಛೇದೋऽಪಿ ವಸ್ತುನಃ ।**
**ಪರಾತ್ಮನ್ಯಪರಿಚ್ಛೇದೇ**
**ಕುತೋ ಜ್ಞಾನಸ್ಯ ಸಂಭವಃ ॥ 19–92**

ಅಂಗ ಮತ್ತು ಲಿಂಗಗಳೆಂಬ ವಸ್ತುಗಳ ಪರಸ್ಪರ ಭೇದಜ್ಞಾನಕ್ಕೆ ಜ್ಞಾನಿಗಳು ದ್ವೈತಜ್ಞಾನವೆಂದು ಕರೆಯುತ್ತಾರೆ. ಉಪಾಧಿರಹಿತವಾದ ಪರಮಚೈತನ್ಯದಲ್ಲಿ ಪರಿಚ್ಛೇದವು ಅಂದರೆ ಖಂಡಿತತ್ತ್ವವು ಸಂಭವಿಸುವುದಿಲ್ಲವಾದ್ದರಿಂದ ಅಲ್ಲಿ ದ್ವೈತಜ್ಞಾನವು ಅದು ಹೇಗೆ ತಾನೇ ಉಂಟಾದೀತು?

**ಜ್ಞಾನಸ್ಯಾವಿಷಯೇ ತತ್ತ್ವೇ**
**ಶಿವಾಖ್ಯೇ ಚಿತ್ಸುಖಾತ್ಮನಿ ।**
**ಆತ್ಮೈಕತ್ವಾನುಸಂಧಾನಮ್**
**ಜ್ಞಾನಮಿತ್ಯುಚ್ಯತೇ ಬುಧೈಃ ॥ 19–93**

ಜ್ಞಾನವು ಸ್ವಯಂಪ್ರಕಾಶರೂಪವಾಗಿರುವುದರಿಂದ ಅದು ಬೇರೊಂದು ಜ್ಞಾನಕ್ಕೆ ವಿಷಯವಾಗಿರುವುದಿಲ್ಲ. ಇಂತಹ ಜ್ಞಾನರೂಪವೂ, ಸುಖರೂಪವೂ ಆದ ಆ ಪರಶಿವ ತತ್ತ್ವವನ್ನು ತನ್ನಾತ್ಮದೊಂದಿಗೆ ಏಕತ್ವಾನುಸಂಧಾನವನ್ನು ಮಾಡುವುದೇ ಜ್ಞಾನವೆಂಬುದಾಗಿ ಬುಧರು ಕರೆಯುತ್ತಾರೆ.

**ಅಪರಿಚ್ಛಿನ್ನಮಾನಂದಮ್**
**ಸತ್ತಾಕಾರಂ ಜಗನ್ಮಯಮ್ ।**
**ಬ್ರಹ್ಮೇತಿ ಲಕ್ಷಣಂ ಜ್ಞಾನಮ್**
**ಬ್ರಹ್ಮಜ್ಞಾನಮಿಹೋಚ್ಯತೇ ॥ 19–94**

ಅಪರಿಚ್ಛಿನ್ನವೂ, ಆನಂದ ಸ್ವರೂಪವೂ, ಸತ್ತಾಕಾರವೂ (ಸದ್ರೂಪವೂ) ಮತ್ತು ಜಗನ್ಮಯವೂ (ವಿಶ್ವರೂಪವೂ) ಆದದ್ದೇ ಬ್ರಹ್ಮವು ಎಂಬುದಾಗಿ ಲಕ್ಷಣಗಳಿಂದ ಬ್ರಹ್ಮವನ್ನು ತಿಳಿದುಕೊಳ್ಳುವುದೇ 'ಬ್ರಹ್ಮಜ್ಞಾನ'ವೆಂದು ಹೇಳಲ್ಪಡುತ್ತದೆ.

**ಬ್ರಹ್ಮಜ್ಞಾನೇ ಸಮುತ್ಪನ್ನೇ**
**ವಿಶ್ವೋಪಾಧಿವಿವರ್ಜಿತೇ ।**

**ಸರ್ವಂ ಸಂವಿನ್ಮಯಂ ಭಾತಿ**
**ತದನ್ಯನ್ನೈವ ದೃಶ್ಯತೇ ॥ 19–95**

ವಿಶ್ವೋಪಾಧಿ ವಿವರ್ಜಿತವಾದ (ಜಗತ್ತು ಶಿವನಿಗಿಂತಲೂ ಭಿನ್ನವಾದುದು ಎಂಬ ಭೇದ (ಭ್ರಾಂತಿ ಇಲ್ಲದ) ಬ್ರಹ್ಮಜ್ಞಾನವು ಉತ್ಪನ್ನವಾಗಲು ಸಕಲ ಜಗತ್ತು ಜ್ಞಾನಮಯವಾಗಿ ಪ್ರಕಾಶಿಸುತ್ತದೆ. ಅದರ ಹೊರತಾಗಿ ಆ ಜ್ಞಾನಿಗೆ ಬೇರೆ ಯಾವುದೂ ಕಾಣುವುದಿಲ್ಲ.

**ತಸ್ಮಾದದ್ವೈತವಿಜ್ಞಾನಮ್**
**ಅಪವರ್ಗಸ್ಯ ಕಾರಣಮ್ ।**
**ಭಾವಯನ್ ಸತತಂ ಯೋಗೀ**
**ಸಂಸಾರೇಣ ನ ಲಿಪ್ಯತೇ ॥ 19–96**

ಅದ್ವೈತ ವಿಜ್ಞಾನವೇ (ಅನುಭವಾತ್ಮಕ ಶಿವಾದ್ವೈತ ಜ್ಞಾನವೇ) ಅಪವರ್ಗಕ್ಕೆ (ಮುಕ್ತಿಗೆ) ಕಾರಣವಾಗಿರುತ್ತದೆ. ಆದ್ದರಿಂದ ಇಂತಹ ಅನುಭವಾತ್ಮಕ ಜ್ಞಾನವನ್ನೇ ಭಾವಿಸುವ ಯೋಗಿಯು ಸಂಸಾರ ಬಂಧನದಿಂದ ಲಿಪ್ತನಾಗುವುದಿಲ್ಲ.

**ನಿತ್ಯೇ ನಿರ್ಮಲಸತ್ತ್ವಯೋಗಿಷು ಪರೇ ನಿರ್ವಾಸನೇ ನಿಷ್ಕಲೇ**
**ಸರ್ವಾತೀತಪದೇ ಚರಾಚರಮಯೇ ಸತ್ತಾತ್ಮನಿ ಜ್ಯೋತಿಷಿ।**
**ಸಂವಿದ್ವ್ಯೋಮ್ನಿ ಶಿವೇ ವಿಲೀನಹೃದಯಸ್ತದ್ಭೇದವೈಮುಖ್ಯತಃ**
**ಸಾಕ್ಷಾತ್ಸರ್ವಗತೋ ವಿಭಾತಿ ವಿಗಲದ್ವಿಶ್ವಃ ಸ್ವಯಂ ಸಂಯಮೀ॥**
**19–97**
**–ಶಾರ್ದೂಲವಿಕ್ರೀಡಿತಾ ವೃತ್ತಮ್**

ನಿತ್ಯನೂ, ನಿರ್ಮಲನೂ, ಸಾತ್ವಿಕನೂ ಆದ ಯೋಗಿಗಳ ಹೃದಯ ಕಮಲದಲ್ಲಿ ಸದಾ ವಾಸವಾಗಿರುವವನೂ, ಸರ್ವವಿಧ ವಾಸನಾಶೂನ್ಯನೂ, ನಿಷ್ಕಲನೂ, ಸರ್ವೋತ್ಕೃಷ್ಟನೂ, ಎಲ್ಲವನ್ನು ಮೀರಿದ ಸ್ಥಾನ ಸ್ವರೂಪನೂ, ಚರಾಚರ ಪ್ರಪಂಚದಲ್ಲಿ ಅನುಶ್ರೂತವಾಗಿರುವವನೂ, ಎಲ್ಲ ಜ್ಯೋತಿಗಳಿಗೆ ಜ್ಯೋತಿಸ್ವರೂಪನೂ, ಜ್ಞಾನಾಕಾಶರೂಪನೂ ಆದ ಪರಶಿವನಲ್ಲಿ ಯಾರ ಮನಸ್ಸು ಐಕ್ಯವನ್ನು ಪಡೆದಿರುತ್ತದೆಯೋ ಅಂತಹ ಸಂಯಮಿಯಾದ ಯೋಗಿಯು, ಆ ಪರಶಿವನ ಹೊರತು ಬೇರೊಂದು ವಸ್ತುವಿನ ದರ್ಶನವಿಲ್ಲದವನಾದ ಕಾರಣ, ಜಗತ್ತಿನ ಭೇದಭ್ರಾಂತಿ ಶೂನ್ಯನಾಗಿ ಸರ್ವವ್ಯಾಪಕತೆಯಿಂದ ತಾನೇ ತಾನಾಗಿ ವಿರಾಜಿಸುತ್ತಿರುವನು.

***ಇತಿ ಜ್ಞಾನಪ್ರಕಾಶಸ್ಥಲಂ*** *ಇಲ್ಲಿಗೆ ಜ್ಞಾನಪ್ರಕಾಶಸ್ಥಲವು ಮುಗಿಯಿತು.*

***ಓಂ ತತ್ಸತ್ ಇತಿ***

***ಶ್ರೀ ಶಿವಗೀತೇಷು ಸಿದ್ಧಾಂತಾಗಮೇಷು ಶಿವಾದ್ವೈತವಿದ್ಯಾಯಾಂ ಶಿವಯೋಗಶಾಸ್ತ್ರೇ ಶ್ರೀರೇಣುಕಾಗಸ್ತ್ಯಸಂವಾದೇ ವೀರಶೈವಧರ್ಮನಿರ್ಣಯೇ ಶ್ರೀಶಿವಯೋಗಿಶಿವಾಚಾರ್ಯವಿರಚಿತೇ ಶ್ರೀಸಿದ್ಧಾಂತಶಿಖಾಮಣೌ ಲಿಂಗಸ್ಥಲಾಂತರ್ಗತ ಶರಣಸ್ಥಲೇ ದೀಕ್ಷಾಪಾದೋದಕಸ್ಥಲಾದಿದ್ವಾದಶವಿಧಸ್ಥಲಪ್ರಸಂಗೋ ನಾಮ ಏಕೋನವಿಂಶತಿತಮಪರಿಚ್ಛೇದಃ ॥***

*ಓಂ ತತ್ಸತ್ ಇಲ್ಲಿಗೆ ಶ್ರೀ ಶಿವನಿಂದ ಉಪದೇಶಿಸಲ್ಪಟ್ಟ ಶ್ರೀ ಸಿದ್ಧಾಂತಾಗಮಗಳಲ್ಲಿಯ ಶಿವಾದ್ವೈತವಿದ್ಯಾರೂಪವೂ, ಶಿವಯೋಗಶಾಸ್ತ್ರವೂ, ಶ್ರೀ ರೇಣುಕಾಗಸ್ತ್ಯಸಂವಾದರೂಪವೂ, ಶ್ರೀವೀರಶೈವಧರ್ಮನಿರ್ಣಯವೂ, ಶ್ರೀ ಶಿವಯೋಗಿ ಶಿವಾಚಾರ್ಯ ವಿರಚಿತವೂ ಆದ ಶ್ರೀ ಸಿದ್ಧಾಂತ ಶಿಖಾಮಣಿಯಲ್ಲಿ ಲಿಂಗಸ್ಥಲಾಂತರ್ಗತವಾದ ಶರಣಸ್ಥಲದಲ್ಲಿಯ ದೀಕ್ಷಾಪಾದೋದಕಸ್ಥಲಾದಿ ಹನ್ನೆರಡು ವಿಧ ಸ್ಥಲಪ್ರಸಂಗವೆಂಬ ಹೆಸರಿನ ಹತ್ತೊಂಭತ್ತನೆಯ ಪರಿಚ್ಛೇದವು ಮುಗಿದುದು*

# ವಿಂಶಃ ಪರಿಚ್ಛೇದಃ

ಇಪ್ಪತ್ತನೆಯ ಪರಿಚ್ಛೇದವು

**ಐಕ್ಯಸ್ಥಲಾಂತರ್ಗತನವವಿಧಲಿಂಗಸ್ಥಲಪ್ರಸಂಗಃ**

ಐಕ್ಯಸ್ಥಲಾಂತರ್ಗತವಾದ ನವವಿಧ ಲಿಂಗಸ್ಥಲ ಪ್ರಸಂಗವು

**(87 ಶ್ಲೋಕಗಳು)**

## ಅಥ ಐಕ್ಯಸ್ಥಲಮ್

ಈಗ ಐಕ್ಯಸ್ಥಲವು

**(5 ಶ್ಲೋಕಗಳು)**

**॥ ಅಗಸ್ತ್ಯ ಉವಾಚ ॥**

**ಸ್ಥಲಭೇದಾಸ್ತ್ವಯಾ ಪ್ರೋಕ್ತಾಃ**
**ಶರಣಸ್ಥಲಸಂಶ್ರಿತಾಃ ।**
**ಐಕ್ಯಸ್ಥಲಗತಾನ್ ಬ್ರೂಹಿ**
**ಸ್ಥಲಭೇದಾನ್ ಗಣೇಂದ್ರ ಮೇ ॥ 20–1**

ಹೇ ಗಣೇಂದ್ರನಾದ ರೇಣುಕನೇ, ಶರಣಸ್ಥಲದಲ್ಲಿರುವ ಸ್ಥಲಭೇದಗಳು ನಿನ್ನಿಂದ ಹೇಳಲ್ಪಟ್ಟವು. ಈಗ ನನಗೆ ಐಕ್ಯಸ್ಥಲದಲ್ಲಿರುವ ಸ್ಥಲಭೇದಗಳನ್ನು ಹೇಳುವವನಾಗು.

**॥ ಶ್ರೀ ರೇಣುಕ ಉವಾಚ ॥**

**ಸ್ಥಲಾನಾಂ ನವಕಂ ಚೈಕ್ಯ–**
**ಸ್ಥಲೇಽಸ್ಮಿನ್ ಪರಿಕೀರ್ತ್ಯತೇ ॥ 20–2**
**ತತ್ರ ಸ್ವೀಕೃತಪ್ರಸಾದೈಕ್ಯ–**
**ಸ್ಥಲಮಾದೌ ಪ್ರಕೀರ್ತಿತಮ್ ।**
**ಶಿಷ್ಟೋದನಸ್ಥಲಂ ಚಾಥ**
**ಚರಾಚರಲಯಸ್ಥಲಮ್ ॥ 20–3**
**ಭಾಂಡಸ್ಥಲಂ ತತಃ ಪ್ರೋಕ್ತಮ್**
**ಭಾಜನಸ್ಥಲಮುತ್ತಮಮ್ ।**
**ಅಂಗಾಲೇಪಸ್ಥಲಂ ಪಶ್ಚಾತ್**
**ಸ್ವಪರಾಜ್ಞಸ್ಥಲಂ ತತಃ ॥ 20–4**

**ಭಾವಾಭಾವವಿನಾಶಂ ಚ**
**ಜ್ಞಾನಶೂನ್ಯಸ್ಥಲಂ ತತಃ ।**
**ತದೇಷಾಂ ಕ್ರಮಶೋ ವಕ್ಷ್ಯೇ**
**ಶೃಣು ತಾಪಸ ಲಕ್ಷಣಮ್ ॥ 20–5**

ಹೇ ತಪಸ್ವಿಯಾದ ಅಗಸ್ತ್ಯನೇ, ಈ ಐಕ್ಯಸ್ಥಲದಲ್ಲಿ ಒಂಭತ್ತು ಸ್ಥಲಗಳನ್ನು ಹೇಳಲಾಗುತ್ತದೆ. ಅವು ಯಾವುದೆಂದರೆ ಮೊದಲನೆಯದು ಸ್ವೀಕೃತಪ್ರಸಾದಿಸ್ಥಲ ಎಂದು ಹೇಳಲ್ಪಟ್ಟಿದೆ. ಅನಂತರ ಶಿಷ್ಟೋದನಸ್ಥಲ, ಅದಾದ ಮೇಲೆ ಚರಾಚರಲಯ ಸ್ಥಲ,

ತರುವಾಯ ಭಾಂಡಸ್ಥಲವು ಹೇಳಲ್ಪಟ್ಟಿದೆ. ಆನಂತರ ಭಾಜನಸ್ಥಲವು. ಪಶ್ಚಾತ್ ಅಂಗಾಲೇಪಸ್ಥಲವು, ಆನಂತರ ಸ್ವಪರಾಜ್ಞಸ್ಥಲವು, ನಂತರ ಭಾವಾಭಾವವಿನಾಶಸ್ಥಲವು, ನಂತರ ಜ್ಞಾನಶೂನ್ಯಸ್ಥಲವು. ಇವೆಲ್ಲವುಗಳ ಲಕ್ಷಣಗಳನ್ನು ಕ್ರಮವಾಗಿ ಹೇಳುತ್ತೇನೆ, ಕೇಳು.

## 93. ಅಥ ಸ್ವೀಕೃತಪ್ರಸಾದಿಸ್ಥಲಮ್
ಈಗ ಸ್ವೀಕೃತಪ್ರಸಾದಿಸ್ಥಲವು
**(8 ಶ್ಲೋಕಗಳು)**

**ಮುಖ್ಯಾರ್ಥೋ ಲಕ್ಷಣಾರ್ಥಶ್ಚ**
**ಯತ್ರ ನಾಸ್ತಿ ಚಿದಾತ್ಮನಿ ।**
**ವಿಶೃಂಖಲತಯಾ ತಸ್ಯ**
**ಪ್ರಸಾದಃ ಸ್ವೀಕೃತೋ ಭವೇತ್ ॥ 20–6**

ಯಾವ ಚಿದಾತ್ಮನಲ್ಲಿ ಮುಖ್ಯಾರ್ಥವಾಗಲಿ, ಲಕ್ಷಣಾರ್ಥವಾಗಲಿ ಇರುವುದಿಲ್ಲವೋ ಆ ಚಿದಾತ್ಮನ ಪ್ರಸಾದವನ್ನು ವಿಶೃಂಖಲತೆಯಿಂದ (ಯಾವ ಅಡತಡೆಗಳೂ ಇಲ್ಲದೆ) ಯಾವ ಯೋಗಿಯು ಸ್ವೀಕರಿಸುವನೋ ಅವನೇ ಸ್ವೀಕೃತಪ್ರಸಾದಿಯೆಂದು ಹೇಳಲಾಗಿದೆ (ಅಂಗ ಲಿಂಗಗಳಲ್ಲಿ ಔಪಾಧಿಕ ಭೇದವನ್ನು ಹೇಳುವುದು ಮುಖ್ಯಾರ್ಥ. ಆ ಭೇದವನ್ನು ಅಳಿದು ಉಪಾಧಿರಹಿತಗಳಾದ ಅಂಗಲಿಂಗಗಳಲ್ಲಿನ ಚೈತನ್ಯಗಳ ಸಾಮರಸ್ಯವನ್ನು ಬೋಧಿಸುವುದೇ ಲಕ್ಷಣಾರ್ಥ. ಈ ವಾಚ್ಯಾರ್ಥ, ಲಕ್ಷಣಾರ್ಥಗಳ ವಿಚಾರಗಳನ್ನು ಅರಿತು ಲಕ್ಷ್ಯವನ್ನು ಪ್ರಾಪ್ತಿಮಾಡಿಕೊಂಡ ಮೇಲೆ ಲಿಂಗಾಂಗ ಸಾಮರಸ್ಯದ ಅನುಭೂತ ರೂಪವಾದ ಪ್ರಸಾದವನ್ನು ಪಡೆಯುವುದೇ ಸ್ವೀಕೃತಪ್ರಸಾದಿಸ್ಥಲದ ಅರ್ಥವು).

**ಮಾತೃಮೇಯಪ್ರಮಾಣಾದಿ–**
**ವ್ಯವಹಾರೇ ವಿಹಾರಿಣೀಮ್ ।**
**ಸಂವಿತ್ಸಾಕ್ಷಾತ್ಕೃತಿಂ ಲಬ್ಧ್ವಾ**
**ಯೋಗೀ ಸ್ವಾತ್ಮನಿ ತಿಷ್ಠತಿ ॥ 20–7**

ಪ್ರಮಾತೃ ಪ್ರಮಾಣ ಪ್ರಮೇಯಾದಿ ತ್ರಿಪುಟಿ ಪ್ರಪಂಚದ ವ್ಯವಹಾರಾದಿಗಳಲ್ಲಿ ವಿಹರಿಸುವಂತಹ ಸಂವಿಸಾಕ್ಷಾತ್ ಕೃತಿಯನ್ನು ಚಿಚ್ಛಕ್ತಿಯ ಁನ್ನು (ಅನುಭವಾತ್ಮಕ ಸಾಕ್ಷಾತ್ಕಾರವನ್ನು) ಪಡೆದ ಯೋಗಿಯು ತನ್ನೊಳಗೆ ತಾನು ಸ್ಥಿರನಾಗಿರುತ್ತಾನೆ.

**ಅದ್ವೈತಬೋಧನಿರ್ಧೂತ–**
**ಭೇದಾವೇಶಸ್ಯ ಯೋಗಿನಃ ।**
**ಸಾಕ್ಷಾತ್ಕೃತಮಹಾಸಂವಿತ್**
**ಪ್ರಕಾಶಸ್ಯ ಕ್ವ ಬಂಧನಮ್ ॥ 20–8**

ಅದ್ವೈತಬೋಧದಿಂದ (ಶಿವಾದ್ವೈತ ಜ್ಞಾನದಿಂದ) ಭೇದಾವೇಶವನ್ನು (ಅಂಗ ಲಿಂಗಗಳ ಭೇದಭಾವವನ್ನು) ದೂರಮಾಡಿಕೊಂಡ ಮತ್ತು ಮಹಾಸಂವಿತ್ತಿನ (ಚಿಚ್ಛಕ್ತಿಯ) ಪ್ರಕಾಶವನ್ನು ಸಾಕ್ಷಾತ್ಕರಿಸಿಕೊಂಡ (ಅನುಭವಾತ್ಮಕ ಜ್ಞಾನವನ್ನು ಮಾಡಿಕೊಂಡ) ಯೋಗಿಗೆ ಬಂಧನವೆಂಬುದು ಎಲ್ಲಿಯದು?

**ಚಿದಾತ್ಮನಿ ಶಿವೇ ನ್ಯಸ್ತಮ್**
**ಜಗದೇತಚ್ಚರಾಚರಮ್ ।**
**ಜ್ಞಾಯತೇ ತನ್ಮಯಂ ಸರ್ವಮ್**
**ಅಗ್ನೌ ಕಾಷ್ಠಾದಿಕಂ ಯಥಾ ॥ 20–9**

ಅಗ್ನಿಯಲ್ಲಿ ಹಾಕಿದ ಕಟ್ಟಿಗೆ ಮುಂತಾದ ಪದಾರ್ಥಗಳು ತನ್ಮಯವಾಗಿಯೇ (ಅಗ್ನಿರೂಪವಾಗಿಯೇ) ಹೇಗೆ ಆಗುತ್ತವೆಯೋ, ಅದರಂತೆ ಚಿದ್ರೂಪನಾದ ಶಿವನಲ್ಲಿ ಇರುವ ಈ ಚರಾಚರ ಜಗತ್ತು ಕೂಡ ಚಿದ್ರೂಪವಾಗಿಯೇ ಇರುತ್ತದೆ ಎಂಬುದಾಗಿ ಸ್ವೀಕೃತ ಪ್ರಸಾದಿಯು ತಿಳಿದುಕೊಳ್ಳುತ್ತಾನೆ.

**ನ ಭಾತಿ ಪೃಥ್ವೀ ನ ಜಲಮ್**
**ನ ತೇಜೋ ನೈವ ಮಾರುತಃ ।**
**ನಾಕಾಶೋ ನ ಪರಂ ತತ್ತ್ವಮ್**
**ಶಿವೇ ದೃಷ್ಟೇ ಚಿದಾತ್ಮನಿ ॥ 20–10**

ಚಿದ್ರೂಪನಾದ ಶಿವನು ಸಾಕ್ಷಾತ್ಕಾರವಾಗಲು (ಸ್ವಾತ್ಮರೂಪದಲ್ಲಿ ಸಾಕ್ಷಾತ್ಕಾರವಾಗಲು) ಪೃಥ್ವಿ, ಜಲ, ತೇಜ, ವಾಯು ಮತ್ತು ಸರ್ವಭೂತಗಳಲ್ಲಿ ಶ್ರೇಷ್ಠವಾದ ಆಕಾಶವೆಂಬ ತತ್ತ್ವಗಳು ಆ ಶಿವನಿಗಿಂತ ಭಿನ್ನವಾಗಿ ತೋರುವುದಿಲ್ಲ ("ಏಕ ವಿಜ್ಞಾನೇನ ಸರ್ವ ವಿಜ್ಞಾನಂ" ಎಂಬ ಉಪನಿಷತ್ತಿನ ವಚನದಂತೆ ಸರ್ವಕ್ಕೂ ಕಾರಣವಾದ ಪರಶಿವನನ್ನು ತಿಳಿದ ಮೇಲೆ ಎಲ್ಲವೂ ಅವನ ಸ್ವರೂಪವೇ ಆಗಿರುತ್ತದೆ).

**ಜ್ಯೋತಿರ್ಲಿಂಗೇ ಚಿದಾಕಾರೇ**
**ಜ್ವಲತ್ಯಂತರ್ನಿರಂತರಮ್ ।**
**ವಿಲೀನಂ ನಿಖಿಲಂ ತತ್ತ್ವಮ್**
**ಪಶ್ಯನ್ ಯೋಗೀ ನ ಲಿಪ್ಯತೇ ॥ 20–11**

ತನ್ನ ಅಂತರಂಗದ ಹೃದಯರೂಪವಾದ ಅಷ್ಟದಳ ಕಮಲದ ಮಧ್ಯದಲ್ಲಿ ನಿರಂತರವಾಗಿ ಲಿಂಗ ಚಿದ್ರೂಪವಾದ ಜ್ಯೋತಿರ್ಲಿಂಗವು (ಮಹಾಲಿಂಗವು) ಪ್ರಜ್ವಲಿಸುತ್ತದೆ. ಆ ಜ್ಯೋತಿಯಲ್ಲಿ ಯಾವ ಯೋಗಿಯು ನಿಖಿಲ ತತ್ತ್ವಗಳನ್ನು (ಶಿವಾದಿ ಭೂಮ್ಯಂತವಾದ 36 ತತ್ತ್ವಗಳನ್ನು) ಲಯಗೊಳಿಸಿ ನೋಡುವನೋ ಅವನು ಅಲಿಪ್ತನಾಗಿರುತ್ತಾನೆ (ತನ್ನ ಕರಣಾದಿಗಳಿಂದ ಲಿಪ್ತನಾಗಿರುವುದಿಲ್ಲ).

**ಅಂತರ್ಮುಖೇನ ಮನಸಾ**
**ಸ್ವಾತ್ಮಜ್ಯೋತಿಷಿ ಚಿನ್ಮಯೇ ।**
**ಸರ್ವಾನಪ್ಯರ್ಥವಿಷಯಾನ್**
**ಜುಹ್ವನ್ ಯೋಗೀ ಪ್ರಮೋದತೇ ॥ 20–12**

ಅಂತರ್ಮುಖವಾದ ಮನಸ್ಸಿನಿಂದ (ಪಶ್ಚಿಮ ಚಕ್ರಾಭಿಮುಖವಾದ ಮನಸ್ಸಿನಿಂದ) ಚಿನ್ಮಯವಾದ ಸ್ವಾತ್ಮರೂಪವಾದ ಜ್ಯೋತಿಯಲ್ಲಿ ಸಮಸ್ತ ಪದಾರ್ಥಗಳೆಂಬ ವಿಷಯಗಳನ್ನು ಹೋಮ ಮಾಡುತ್ತಾ (ತಾದಾತ್ಮ್ಯಭಾವದಿಂದ ಸಮರ್ಪಿಸುತ್ತಾ) ಯೋಗಿಯು ಪ್ರಮೋದಿಸುತ್ತಾನೆ.

**ಸಚ್ಚಿದಾನಂದಜಲಧೌ**
**ಶಿವೇ ಸ್ವಾತ್ಮನಿ ನಿರ್ಮಲಃ ।**
**ಸಮರ್ಪ್ಯ ಸಕಲಾನ್ ಭುಂಕ್ತೇ**
**ವಿಷಯಾನ್ ತತ್ಪ್ರಸಾದತಃ ॥ 20–13**

ನಿರ್ಮಲವಾದ ಸ್ವೀಕೃತಪ್ರಸಾದಿಸ್ಥಲದ ಯೋಗಿಯು ಸಚ್ಚಿದಾನಂದ ಸಾಗರನಾದ ಪರಶಿವನಲ್ಲಿ ಶಬ್ದಾದಿ ಸಕಲ ಪದಾರ್ಥಗಳನ್ನು ತಾದಾತ್ಮ್ಯಭಾವದಿಂದ ಸಮರ್ಪಿಸಿ ಅವುಗಳನ್ನು ಶಿವಪ್ರಸಾದ ರೂಪದಿಂದ ಅನುಭವಿಸುತ್ತಿರುವನು.

*ಇತಿ ಸ್ವೀಕೃತಪ್ರಸಾದಿಸ್ಥಲಂ*
*ಇಲ್ಲಿಗೆ ಸ್ವೀಕೃತಪ್ರಸಾದಿಸ್ಥಲವು ಮುಗಿಯಿತು.*

## 94. ಅಥ ಶಿಷ್ಟೋದನಸ್ಥಲಮ್

ಈಗ ಶಿಷ್ಟೋದನಸ್ಥಲವು

**(7 ಶ್ಲೋಕಗಳು)**

**ಪ್ರಕಾಶತೇ ಯಾ ಸರ್ವೇಷಾಮ್**
**ಮಾಯಾ ಸೈವೋದನಾಕೃತಿಃ ।**
**ಲೀಯತೇ ತತ್ರ ಚಿಲ್ಲಿಂಗೇ**
**ಶಿಷ್ಟಂ ತತ್ಪರಿಕೀರ್ತಿತಮ್ ॥ 20–14**

ಎಲ್ಲ ಜೀವಿಗಳಿಗೆ (ತನು, ಕರಣ, ಭುವನ ಭೋಗಾದಿಗಳ ರೂಪದಲ್ಲಿ) ಯಾವುದು ಪ್ರಕಾಶಿಸುವುದೋ ಮತ್ತು ಯಾವುದು ಕೊನೆಗೆ ಚಿಲ್ಲಿಂಗದಲ್ಲಿ ಲಯವಾಗುವುದೋ ಆ ಮಾಯೆಯನ್ನು ಶಿಷ್ಟವೆಂದು ಕರೆಯುತ್ತಾರೆ. ಈ ಶಿಷ್ಟವಾದ ಮಾಯೆಯು ಯೋಗಿಗೆ ಓದನ (ಭಕ್ಷ್ಯರೂಪವಾದ ಅನ್ನ)ವಾಗಿರುವುದರಿಂದ ಅದಕ್ಕೆ ಶಿಷ್ಟೋದನವೆಂದು ಕರೆಯುತ್ತಾರೆ.

**ಜಗದಂಗೇ ಪರಿಗ್ರಸ್ತೇ**
**ಮಾಯಾಪಾಶವಿಜೃಂಭಿತೇ ।**
**ಸ್ವಾತ್ಮಜ್ಯೋತಿಷಿ ಬೋಧೇನ**
**ತದೇಕಮವಶಿಷ್ಯತೇ ॥ 20–15**

ಮಾಯಾಪಾಶದಿಂದ ವಿಜೃಂಭಿತವಾದ (ಕಲಾತತ್ತ್ವವೇ ಮೊದಲುಗೊಂಡು ಭೂಮಿತತ್ತ್ವದವರೆಗಿನ 30 ತತ್ತ್ವಗಳ ರೂಪದಲ್ಲಿ ಕಟ್ಟಲ್ಪಟ್ಟಿರುವ) ಜಗತ್ತೆಂಬ ತನ್ನ ಶರೀರದಲ್ಲಿನ (ಅಂಗದಲ್ಲಿನ) ಆತ್ಮಜ್ಯೋತಿಯಲ್ಲಿ ಬೋಧನದಿಂದ (ಆತ್ಮಜ್ಞಾನದಿಂದ) ಆಕ್ರಾಂತವಾಗಲು (ಆವರಿಸಲ್ಪಡಲು) ಮಾಯಾತತ್ತ್ವವೊಂದೇ ಅಶೇಷವಾಗಿ ಉಳಿಯುತ್ತದೆ.

**ಅಖಂಡ(ಸಂವಿದಾನಂದ)ಸಚ್ಚಿದಾನಂದ–**
**ಪರಬ್ರಹ್ಮಸ್ವರೂಪಿಣಃ ।**
**ಜೀವನ್ಮುಕ್ತಸ್ಯ ಧೀರಸ್ಯ**
**ಮಾಯಾ ಕೈಂಕರ್ಯವಾದಿನೀ ॥ 20–16**

ಅಖಂಡವೂ, ಸಚ್ಚಿದಾನಂದ ಸ್ವರೂಪವೂ ಆದ ಪರಬ್ರಹ್ಮ ತತ್ತ್ವವನ್ನು ತನ್ನ ಸ್ವರೂಪವಾಗಿ ತಿಳಿದುಕೊಂಡ ಧೀರನಾದ (ಜಿತೇಂದ್ರಿಯನಾದ), ಜೀವನ್ಮುಕ್ತನಾದ ಆ ಯೋಗಿಗೆ ಅವಶಿಷ್ಟವಾದ ಆ ಮಾಯೆಯು ಕಿಂಕರಭಾವದಿಂದ ಇರುತ್ತದೆ.

**ವಿಶ್ವಂ ಸಂಮೋಹಿನೀ ಮಾಯಾ**
**ಬಹುಶಕ್ತಿರ್ನಿರಂಕುಶಾ ।**
**ಶಿವೈಕತ್ವಮುಪೇತಸ್ಯ**
**ನ ಪುರಃ ಸ್ಥಾತುಮೀಹತೇ ॥ 20–17**

ವಿಶ್ವವೆಲ್ಲವನ್ನೂ ಸಂಮೋಹನಗೊಳಿಸುವ ಬಹುವಿಧ ಶಕ್ತಿಗಳಿಂದ ಕೂಡಿದ, ನಿರಂಕುಶವಾದ ಆ ಮಾಯೆಯು ಶಿವನೊಂದಿಗೆ ಐಕ್ಯತ್ವವನ್ನು ಹೊಂದಿದ (ಸಮಾನ ಸಮರಸ ಭಾವವನ್ನು ಹೊಂದಿದ) ಯೋಗಿಯ ಮುಂದೆ ಮೋಹಕವಾಗಿ ಇರಲು ಇಚ್ಛಿಸುವುದಿಲ್ಲ.

**ಜ್ಯೋತಿರ್ಲಿಂಗೇ ಚಿದಾಕಾರೇ**
**ನಿಮಗ್ನೇನ ಮಹಾತ್ಮನಾ ।**

**ಭುಜ್ಯಮಾನಾ ಯಥಾಯೋಗಮ್**
**ನಶ್ಯಂತಿ ವಿಷಯಾಃ ಸ್ವತಃ ॥ 20–18**

ಚಿದ್ರೂಪವಾದ ಜ್ಯೋತಿರ್ಲಿಂಗದಲ್ಲಿ ಐಕ್ಯಗೊಂಡ ಮಹಾತ್ಮನಾದ ಯೋಗಿಯಿಂದ ಅರ್ಪಣಾವಿಧಾನದ ಕ್ರಮಾನುಸಾರವಾಗಿ ಭೋಗಿಸಲ್ಪಡುವ ಶಬ್ದಾದಿ ವಿಷಯಗಳು ತಾವಾಗಿಯೇ ನಷ್ಟವಾಗುವುವು.

**ಶಬ್ದಾದಯೋಽಪಿ ವಿಷಯಾ**
**ಭುಜ್ಯಮಾನಾಸ್ತದಿಂದ್ರಿಯೈಃ ।**
**ಆತ್ಮನ್ಯೇವ ವಿಲೀಯಂತೇ**
**ಸರಿತಃ ಸಾಗರೇ ಯಥಾ ॥ 20–19**

ಶಿಷ್ಟೋದನಸ್ಥಲದ ಯೋಗಿಯು ತನ್ನ ಇಂದ್ರಿಯಗಳಿಂದ ಶಬ್ದಾದಿ ವಿಷಯಗಳನ್ನು ಅನುಭವಿಸುತ್ತಿದ್ದರೂ ಆ ವಿಷಯಗಳು ನದಿಗಳು ಸಮುದ್ರದಲ್ಲಿ ಅಡಗುವಂತೆ ಅವನ ಆತ್ಮನಲ್ಲಿಯೇ ವಿಲಯಗೊಳ್ಳುತ್ತವೆ.

**ಅರ್ಥಜಾತಮಶೇಷಂ ತು**
**ಗ್ರಸನ್ ಯೋಗೀ ಪ್ರಶಾಮ್ಯತಿ ।**
**ಸ್ವಾತ್ಮನ್ಯೈವಾಸ್ಥಿತೋ ಭಾನುಃ**
**ತೇಜೋಜಾಲಮಶೇಷತಃ ॥ 20–20**

ಸೂರ್ಯನು ತನ್ನ ಎಲ್ಲ ತೇಜೋಜಾಲವನ್ನು (ಕಿರಣಗಳನ್ನು) ತನ್ನಲ್ಲೇ ಅಡಗಿಸಿಕೊಂಡು ಹೇಗೆ ಅಸ್ತಂಗತನಾಗುವನೋ ಹಾಗೇ ಸಮಸ್ತವಾದ ಅರ್ಥ ಸಮೂಹವನ್ನು (ಶಬ್ದಾದಿ ವಿಷಯಗಳನ್ನು) ನಿಃಶ್ಶೇಷವಾಗಿ ಗ್ರಹಣ ಮಾಡಿದ ಯೋಗಿಯು ಪರಮಶಾಂತನಾಗುವನು.

***ಇತಿ ಶಿಷ್ಟೋದನಸ್ಥಲಂ*** *ಇಲ್ಲಿಗೆ ಶಿಷ್ಟೋದನಸ್ಥಲವು ಮುಗಿಯಿತು.*

## 95. ಅಥ ಚರಾಚರಲಯಸ್ಥಲಮ್
ಈಗ ಚರಾಚರಲಯಸ್ಥಲವು
**(8 ಶ್ಲೋಕಗಳು)**

**ಲಿಂಗೈಕ್ಯೇ ತು ಸಮಾಪನ್ನೇ**
**ಚರಣಾಚರಣೇ ಗತೇ ।**
**ನಿರ್ದೇಹೀ ಸ ಭವೇದ್ಯೋಗೀ**
**ಚರಾಚರವಿನಾಶಕಃ ॥ 20–21**

ಚರಾಚರಾತ್ಮಕವಾದ ಪ್ರಪಂಚ ಸಮೇತವಾಗಿ ನಿರ್ದೇಹಿಯಾದ ಈ ಯೋಗಿಯು ಮಹಾಲಿಂಗದೊಂದಿಗೆ ತಾದಾತ್ಮ್ಯವನ್ನು ಹೊಂದಲಾಗಿ ಚರಾಚರವಿನಾಶಕನೆಂದು ಕರೆಯಲ್ಪಡುತ್ತಾನೆ.

**ಅನಾದ್ಯವಿದ್ಯಾಮೂಲಾ ಹಿ**
**ಪ್ರತೀತಿರ್ಜಗತಾಮಿಯಮ್ ।**
**ಸ್ವಾತ್ಮೈಕಬೋಧಾತ್ ತನ್ನಾಶೇ**
**ಕುತೋ ವಿಶ್ವಪ್ರಕಾಶನಮ್ ॥ 20–22**

ಈ ಜಗತ್ತಿನ ಪ್ರತೀತಿಗೆ ಅನಾದಿಯಾದ ಅವಿದ್ಯೆಯೇ ಮೂಲ ವಾಗಿರುವುದು. ಸ್ವಾತ್ಮೈಕ ಬೋಧೆಯಿಂದ (ತನ್ನ ಆತ್ಮ ಮತ್ತು ಪರಮಾತ್ಮರ ಐಕ್ಯಜ್ಞಾನದಿಂದ) ಆ ವಿದ್ಯೆಯು ನಾಶವಾಗಲು ವಿಶ್ವವು ಹೇಗೆ ತಾನೇ ತೋರಬಲ್ಲದು?

**ಯಥಾ ಮೇಘಾಃ ಸಮುದ್ಭೂತಾಃ**
**ವಿಲೀಯಂತೇ ನಭಸ್ಥಲೇ ।**
**ತಥಾಽಽತ್ಮನಿ ವಿಲೀಯಂತೇ**
**ವಿಷಯಾಃ ಸ್ವಾನುಭಾವಿನಃ ॥ 20–23**

ಆಕಾಶದಲ್ಲಿ ಉದ್ಭವಿಸಿದ ಮೋಡಗಳು ಅಲ್ಲಿಯೇ ಹೇಗೆ ಅಡಗಿಹೋಗುವುವೋ, ಅದರಂತೆ ಸ್ವಪ್ನರೂಪಾನುಭಾವಿಯಾದ ಶಿವಯೋಗಿಯ ಆತ್ಮದಲ್ಲಿಯೇ ಎಲ್ಲ ವಿಷಯಗಳು ಅಡಗಿಹೋಗುವುವು.

**ಸ್ವಪ್ನೇ ದೃಷ್ಟಂ ಯಥಾ ವಸ್ತು**
**ಪ್ರಬೋಧೇ ಲಯಮಶ್ನುತೇ ।**
**ತಥಾ ಸಾಂಸಾರಿಕಂ ಸರ್ವಮ್**
**ಆತ್ಮಜ್ಞಾನೇ ವಿನಶ್ಯತಿ ॥ 20–24**

ಸಪ್ನದಲ್ಲಿ ಕಂಡ ವಸ್ತುವು ಎಚ್ಚರಿಕೆಯಾದ ಕೂಡಲೇ ಹೇಗೆ ಲಯವಾಗುವುವೋ ಹಾಗೆ ಸಾಂಸಾರಿಕಗಳಾದ ಎಲ್ಲ ವಸ್ತುಗಳು ಆತ್ಮಜ್ಞಾನವಾದ ಮೇಲೆ ನಷ್ಟವಾಗುವುವು.

**ಜಾಗ್ರತ್ಸ್ವಪ್ನಸುಷುಪ್ತಿಭ್ಯಃ**
**ಪರಾವಸ್ಥಾಮುಪೇಯುಷಃ ।**
**ಕಿಂ ವಾ ಪ್ರಮಾಣಂ ಕಿಂ ಜ್ಞೇಯಮ್**
**ಕಿಂ ವಾ ಜ್ಞಾನಸ್ಯ ಸಾಧನಮ್ ॥ 20–25**

ಜಾಗ್ರತ್, ಸ್ವಪ್ನ ಮತ್ತು ಸುಷುಪ್ತಿ ಅವಸ್ಥೆಗಳಿಗಿಂತಲೂ ಮೀರಿದ ಪರಾವಸ್ಥೆಯನ್ನು (ತುರ್ಯಾವಸ್ಥೆಯನ್ನು) ಹೊಂದಿದ ಯೋಗಿಗೆ ಪ್ರಮಾಣವಾಗಲಿ, ಜ್ಞೇಯ ಪದಾರ್ಥವಾಗಲಿ ಅಥವಾ ಜ್ಞಾನದ ಸಾಧನವಾಗಲಿ ಇವು ಯಾವೂ ಇರುವುದಿಲ್ಲ.

**ತುರ್ಯಾತೀತಪದಂ ಯತ್ತದ್**
**ದೂರಂ ವಾಙ್ಮನಸಾಧ್ವನಃ ।**
**ಅನುಪ್ರವಿಶ್ಯ ತದ್ಯೋಗೀ**
**ನ ಭೂಯೋ ವಿಶ್ವಮೀಕ್ಷತೇ ॥ 20–26**

ವಾಣಿ ಮತ್ತು ಮನಸ್ಸುಗಳ ಮಾರ್ಗವನ್ನು ಮೀರಿದ ಯಾವ ತುರ್ಯಾತೀತ ಪದವಿದೆಯೋ ಅದರಲ್ಲಿ ಪ್ರವೇಶಿಸಿದ ಯೋಗಿಯು ಪುನಃ ಈ ವಿಶ್ವವನ್ನು ನೋಡಲಾರನು.

**ನಾನ್ಯತ್ ಪಶ್ಯತಿ ಯೋಗೀಂದ್ರೋ**
**ನಾನ್ಯಜ್ಜಾನಾತಿ ಕಿಂಚನ ।**
**ನಾನ್ಯಚ್ಛೃಣೋತಿ ಸಂದೃಷ್ಟೇ**
**ಚಿದಾನಂದಮಯೇ ಶಿವೇ ॥ 20–27**

ಚಿದಾನಂದ ಸ್ವರೂಪವಾದ ಶಿವನ ದರ್ಶನವನ್ನು ಪಡೆದ ಆ ಯೋಗೀಂದ್ರನು ತನಗಿಂತಲೂ ಭಿನ್ನವಾದ ಯಾವುದನ್ನೂ ನೋಡುವುದಿಲ್ಲ ಮತ್ತು ಯಾವುದನ್ನೂ ತಿಳಿದುಕೊಳ್ಳುವುದಿಲ್ಲ.

**ಅಸದೇವ ಜಗತ್ ಸರ್ವಮ್**
**ಸದಿವ ಪ್ರತಿಭಾಸತೇ ।**

**ಜ್ಞಾತೇ ಶಿವೇ ತದಜ್ಞಾನಮ್**
**ಸ್ವರೂಪಮುಪಪದ್ಯತೇ ॥ 20–28**

ಈ ಎಲ್ಲ ಜಗತ್ತು ಅಸದ್ರೂಪವೇ ಆಗಿರುತ್ತದೆ (ಶಿವನಿಗಿಂತ ಭಿನ್ನವಾಗಿ ಇರುವುದಿಲ್ಲ) ಆದರೂ ಸಹ ಸತ್ತಿನಂತೆ (ಶಿವನಿಗಿಂತಲೂ ಭಿನ್ನವಾಗಿರುವಂತೆ) ಪ್ರತಿಭಾಸವಾಗುತ್ತದೆ. ಪರಶಿವನನ್ನು ತಿಳಿದ ಮೇಲೆ ಅಜ್ಞಾನವು ನಷ್ಟವಾಗಿ ಯೋಗಿಗೆ ಸರ್ವವೂ ಸ್ವಸ್ವರೂಪವಾಗಿಯೇ ತೋರುವುದು.

***ಇತಿ ಚರಾಚರಲಯಸ್ಥಲಂ*** *ಇಲ್ಲಿಗೆ ಚರಾಚರಲಯಸ್ಥಲವು ಮುಗಿಯಿತು.*

## 96. ಅಥ ಭಾಂಡಸ್ಥಲಮ್
ಈಗ ಭಾಂಡಸ್ಥಲವು
**(6 ಶ್ಲೋಕಗಳು)**

**ಬ್ರಹ್ಮಾಂಡಶತಕೋಟೀನಾಮ್**
**ಸರ್ಗಸ್ಥಿತಿಲಯಾನ್ ಪ್ರತಿ ।**
**ಸ್ಥಾನಭೂತೋ ವಿಮರ್ಶೋ ಯಃ**
**ತದ್ಭಾಂಡಸ್ಥಲಮುಚ್ಯತೇ ॥ 20–29**

ಶತಕೋಟಿ ಬ್ರಹ್ಮಾಂಡಗಳ ಉತ್ಪತ್ತಿ, ಸ್ಥಿತಿ ಮತ್ತು ಲಯಗಳಿಗೆ ಸ್ಥಾನವಾಗಿರುವ (ಆಶ್ರಯಸ್ಥಾನವಾಗಿರುವ) ಯಾವ 'ವಿಮರ್ಶಾಶಕ್ತಿ'ಯಿದೆಯೋ ಅದುವೇ ಭಾಂಡಸ್ಥಲವೆಂದು ಕರೆಯಲ್ಪಡುತ್ತದೆ.

**ವಿಮರ್ಶಾಖ್ಯಾ ಪರಾಶಕ್ತಿಃ**
**ವಿಶ್ವೋದ್ಭಾಸನಕಾರಿಣೀ ।**
**ಸಾಕ್ಷಿಣೀ ಸರ್ವಭೂತಾನಾಮ್**
**ಸಮಿಂಧೇ ಸರ್ವತೋಮುಖೀ ॥ 20–30**

ವಿಮರ್ಶಾಶಕ್ತಿಯೆಂದು ಕರೆಸಿಕೊಳ್ಳುವ ಪರಾಶಕ್ತಿಯೇ (ಬಿಂದುಶಕ್ತಿ) ವಿಶ್ವದ (ಅಧ್ವರೂಪವಾದ ವಿಶ್ವದ) ಉದ್ಭಾಸಕ್ಕೆ (ಉತ್ಪತ್ತಿಗೆ) ಕಾರಣವಾಗಿರುತ್ತದೆ ಮತ್ತು ಸರ್ವಭೂತಗಳಿಗೆ ಇದುವೇ ಸಾಕ್ಷಿರೂಪವಾಗಿರುತ್ತದೆ. ಅಲ್ಲದೆ ಸರ್ವತೋಮುಖವಾಗಿ ಪ್ರಕಾಶಿಸುತ್ತಿರುತ್ತದೆ.

**ವಿಶ್ವಂ ಯತ್ರ ಲಯಂ ಯಾತಿ**
**ವಿಭಾತ್ಯಾತ್ಮಾ ಚಿದಾಕೃತಿಃ ।**
**ಸದಾನಂದಮಯಃ ಸಾಕ್ಷಾತ್**
**ಸಾ ವಿಮರ್ಶಮಯೀ ಕಲಾ ॥ 20–31**

ಯಾವುದರಲ್ಲಿ ವಿಶ್ವವೆಲ್ಲವೂ ಲಯವನ್ನು ಹೊಂದುವುದೋ, ಯಾವುದು ಚಿತ್ಸ್ವರೂಪವಾದ ಆತ್ಮವಾಗಿ ವಿರಾಜಿಸುವುದೋ, ಯಾವುದು ಸಾಕ್ಷಾತ್ ಆನಂದಮಯವಾಗಿರುವುದೋ ಅದುವೇ ವಿಮರ್ಶಾಕಲೆ ಅಥವಾ ವಿಮರ್ಶಾಶಕ್ತಿಯಾಗಿರುತ್ತದೆ.

**ಪರಾಹಂತಾಸಮಾವೇಶ–**
**ಪರಿಪೂರ್ಣವಿಮರ್ಶವಾನ್ ।**
**ಸರ್ವಜ್ಞಃ ಸರ್ವಗಃ ಸಾಕ್ಷೀ**
**ಸರ್ವಕರ್ತಾ ಮಹೇಶ್ವರಃ ॥ 20–32**

ಪರಾಹಂತ ಸಮಾವೇಶದಿಂದ (ಪರಾಹಂತರೂಪವಾದ ವಿಮರ್ಶಾಶಕ್ತಿಯ ತಾದಾತ್ಮ್ಯದಿಂದ) ಪರಿಪೂರ್ಣ ವಿಮರ್ಶಾಸ್ವರೂಪವನ್ನು ಪಡೆದ ಶಿವನು ಸರ್ವಜ್ಞನೆಂತಲೂ, ಸರ್ವವ್ಯಾಪಕವೆಂತಲೂ, ಸರ್ವಸಾಕ್ಷಿಯೆಂತಲೂ, ಸರ್ವಕರ್ತನೆಂತಲೂ ಮತ್ತು ಮಹೇಶ್ವರನೆಂತಲೂ ಕರೆಸಿಕೊಳ್ಳುತ್ತಾನೆ.

**ವಿಶ್ವಾಧಾರಮಹಾಸಂವಿತ್**
**ಪ್ರಕಾಶಪರಿಪೂರಿತಮ್ ।**
**ಪರಾಹಂತಾಮಯಂ ಪ್ರಾಹುಃ**
**ವಿಮರ್ಶಂ ಪರಮಾತ್ಮನಃ ॥ 20–33**

ಪ್ರಪಂಚಕ್ಕೆಲ್ಲಾ ಆಧಾರಭೂತವಾಗಿರುವ ಮಹಾಜ್ಞಾನವೆಂಬ ಪ್ರಕಾಶವುಳ್ಳ ಪರಿಪೂರ್ಣವಾಗಿರುವ ಪರಶಿವನ ಯಾವ ವಿಮರ್ಶಾಶಕ್ತಿ ಇದೆಯೋ, ಅದಕ್ಕೆ ಶಿವಾದ್ವೈತ ಶಾಸ್ತ್ರಜ್ಞರು ಪರಾಹಂತಾ ಎಂಬುದಾಗಿ ಹೇಳುವರು.

**ವಿಮರ್ಶಭಾಂಡವಿನ್ಯಸ್ತ–**
**ವಿಶ್ವತತ್ತ್ವವಿಜೃಂಭಣಃ ।**
**ಅನನ್ಯಮುಖಸಂಪ್ರೇಕ್ಷೀ**
**ಮುಕ್ತಃ ಸ್ವಾತ್ಮನಿ ತಿಷ್ಠತಿ ॥ 20–34**

ವಿಶ್ವತತ್ತ್ವಗಳ ವಿಜೃಂಭಣೆಗೆ (ಶಕ್ತಿತತ್ತ್ವವನ್ನೇ ಮೊದಲುಗೊಂಡು) ಪೃಥ್ವೀತತ್ತ್ವ ಪರ್ಯಂತವಾದ ಸರ್ವತತ್ತ್ವಗಳ ವಿಕಾಸಕ್ಕೆ ವಿಮರ್ಶಾಶಕ್ತಿಯೇ ಭಾಂಡವಾಗಿರುತ್ತದೆ (ಆಧಾರವಾಗಿರುತ್ತದೆ). ಈ (ಭಾಂಡಸ್ಥಲದ ಯೋಗಿಯು ಎಲ್ಲ ತತ್ತ್ವಗಳನ್ನು ಭಾಂಡರೂಪವಾದ ವಿಮರ್ಶಾಶಕ್ತಿಯಲ್ಲಿ ಲಯಗೊಳಿಸಿ) ಬೇರೆ ಯಾವುದೇ ವಿಚಾರವನ್ನು ಮನಸ್ಸಿನಲ್ಲಿ ತಾರದೇ ಮುಕ್ತನಾಗಿ ತನ್ನಲ್ಲೇ ತಾನಿರುತ್ತಾನೆ.

***ಇತಿ ಭಾಂಡಸ್ಥಲಂ*** *ಇಲ್ಲಿಗೆ ಭಾಂಡಸ್ಥಲವು ಮುಗಿಯಿತು.*

## 97. ಅಥ ಭಾಜನಸ್ಥಲಮ್
ಈಗ ಭಾಜನಸ್ಥಲವು
**(7 ಶ್ಲೋಕಗಳು)**

**ಸಮಸ್ತಜಗದಂಡಾನಾಮ್**
**ಸರ್ಗಸ್ಥಿತ್ಯಂತಕಾರಣಮ್ ।**
**ವಿಮರ್ಶೋ ಭಾಸತೇ ಯತ್ರ**
**ತದ್ ಭಾಜನಮಿಹೋಚ್ಯತೇ ॥ 20–35**

ಸಮಸ್ತ ಭುವನ ಬ್ರಹ್ಮಾಂಡಗಳ ಸೃಷ್ಟಿ, ಸ್ಥಿತಿ ಮತ್ತು ಲಯಗಳಿಗೆ ಕಾರಣೀಭೂತವಾದ ವಿಮರ್ಶೆಯೆಂಬ ಹೆಸರಿನ ಪರಬಿಂದುವು ಶಿವ ಸಮೇತವಾದ ಯಾವ ತಿರೋಧಾನ ಶಕ್ತಿಯಲ್ಲಿ ಪ್ರಕಾಶಿಸುವುದೋ ಆ ತಿರೋಧಾನ ಶಕ್ತಿಯುಳ್ಳ ಪರಶಿವಬ್ರಹ್ಮವೇ ಭಾಜನವೆಂಬುದಾಗಿ ಇಲ್ಲಿ ಹೇಳಲ್ಪಡುತ್ತದೆ.

**ವಿಮರ್ಶಾಖ್ಯಾ ಪರಾಶಕ್ತಿಃ**
**ವಿಶ್ವವೈಚಿತ್ರ್ಯಕಾರಿಣೀ ।**
**ಯಸ್ಮಿನ್ ಪ್ರತಿಷ್ಠಿತಾ ಬ್ರಹ್ಮ**
**ತದಿದಂ ವಿಶ್ವಭಾಜನಮ್ ॥ 20–36**

ಚಿತ್ರ ವಿಚಿತ್ರವಾದ ವಿಶ್ವದ ಉತ್ಪತ್ತಿಗೆ ಕಾರಣೀಭೂತವಾದ ವಿಮರ್ಶವೆಂಬ ಹೆಸರಿನ ಪರಾಶಕ್ತಿಯು ಯಾವುದರಲ್ಲಿ ಅವಿನಾಭಾವ ಸಂಬಂಧದಿಂದ ಪ್ರತಿಷ್ಠಿತವಾಗಿರುವುದೋ ಆ ಪರಶಿವ ಬ್ರಹ್ಮನೇ ವಿಶ್ವಭಾಜನವೆಂಬುದಾಗಿ ತಿಳಿದುಕೊಳ್ಳಬೇಕು.

**ಅಂತಃಕರಣರೂಪೇಣ**
**ಜಗದಂಕುರರೂಪತಃ ।**
**ಯಸ್ಮಿನ್ ವಿಭಾತಿ ಚಿಚ್ಛಕ್ತಿಃ**
**ಬ್ರಹ್ಮಭೂತಃ ಸ ಉಚ್ಯತೇ ॥ 20–37**

ಶಿವನಲ್ಲಿ ಅವಿನಾಭಾವ ಸಂಬಂಧದಲ್ಲಿರುವ ಚಿಚ್ಛಕ್ತಿಯು (ವಿಮರ್ಶಾಶಕ್ತಿಯು) ಜಗವೆಂಬ ಅಂಕುರರೂಪವಾದ ಮತ್ತು ಮೂಲಾಹಂಕಾರ ರೂಪವಾಗಿ ಯಾವ ಶಿವನಲ್ಲಿ ಭಾಸಿಸುವುದೋ ಆ ಶಿವನು ಬ್ರಹ್ಮವೆಂಬುದಾಗಿ ಕರೆಯಲಾಗಿದೆ.

**ಯಥಾ ಚಂದ್ರೇ ಸ್ಥಿರಾ ಜ್ಯೋತ್ಸ್ನಾ**
**ವಿಶ್ವವಸ್ತುಪ್ರಕಾಶಿನೀ ।**
**ತಥಾ ಶಕ್ತಿರ್ವಿಮರ್ಶಾತ್ಮಾ**
**ಪ್ರಕಾರೇ ಬ್ರಹ್ಮಣಿ ಸ್ಥಿತಾ ॥ 20–38**

ಚಂದ್ರನಲ್ಲಿ ಸ್ಥಿರವಾಗಿರುವ ಬೆಳದಿಂಗಳು ತಾನು ಏಕದೇಶದಲ್ಲಿದ್ದರೂ (ಒಂದೇ ಸ್ಥಾನದಲ್ಲಿದ್ದರೂ) ವಿಶ್ವದ ವಸ್ತುಗಳನ್ನು ಹೇಗೆ ಪ್ರಕಾಶಿಸುವುದೋ ಅದರಂತೆ ಪರಶಿವ ಬ್ರಹ್ಮದಲ್ಲಿರುವ ಈ ವಿಮರ್ಶಾಶಕ್ತಿಯು ಸಕಲ ಜಗತ್ತನ್ನು ತನ್ನ ಒಂದು ಅಂಶದಿಂದ ವ್ಯಾಪಿಸಿ ಪ್ರಕಾಶಪಡಿಸುತ್ತಿರುವುದು.

**ಅಕಾರಃ ಶಿವ ಆಖ್ಯಾತೋ**
**ಹಕಾರಃ ಶಕ್ತಿರುಚ್ಯತೇ ।**
**ಶಿವಶಕ್ತಿಮಯಂ ಬ್ರಹ್ಮ**
**ಸ್ಥಿತಮೇಕಮಹಂಪದೇ ॥ 20–39**

'ಅ' ಅಕ್ಷರದಿಂದ ಶಿವನು ಹೇಳಲ್ಪಡುತ್ತಾನೆ. 'ಹಂ' ಅಕ್ಷರದಿಂದ ದೃಕ್ ಕ್ರಿಯಾತ್ಮಕವಾದ ಶಕ್ತಿಯು ಹೇಳಲ್ಪಡುತ್ತದೆ. ಹೀಗೆ 'ಅಹಂ' ಎಂಬ ಈ ಒಂದೇ ಪದದಲ್ಲಿ ಶಿವ–ಶಕ್ತಿಮಯವಾದ ಪರಬ್ರಹ್ಮವು ಸ್ಥಿತವಾಗಿರುತ್ತದೆ.

**ಅಹಂತಾಂ ಪರಮಾಂ ಪ್ರಾಪ್ಯ**
**ಶಿವಶಕ್ತಿಮಯೀಂ ಸ್ಥಿರಾಮ್ ।**
**ಬ್ರಹ್ಮಭೂಯಂ ಗತೋ ಯೋಗೀ**
**ವಿಶ್ವಾತ್ಮಾ ಪ್ರತಿಭಾಸತೇ ॥ 20–40**

ಶಿವ–ಶಕ್ತಿಮಯವಾದ (ಶಿವ–ಶಕ್ತಿ ಸ್ವರೂಪವಾದ) ಸ್ಥಿರವಾದ ಸರ್ವೋತ್ಕೃಷ್ಟವಾದ ಅಹಂತಾವನ್ನು (ಪರಾಹಂತೆಯನ್ನು) ಪಡೆದು ಬ್ರಹ್ಮಸ್ವರೂಪನಾದ ಯೋಗಿಯು ವಿಶ್ವಾತ್ಮನಾಗಿ ಪ್ರಕಾಶಿಸುತ್ತಾನೆ.

**ವೃಕ್ಷಸ್ಥಂ ಪತ್ರಪುಷ್ಪಾದಿ**
**ವಟಬೀಜಸ್ಥಿತಂ ಯಥಾ ।**
**ತಥಾ ಹೃದಯಬೀಜಸ್ಥಮ್**
**ವಿಶ್ವಮೇತತ್ ಪರಾತ್ಮನಃ ॥ 20–41**

ವಟಬೀಜದಲ್ಲಿ (ಆಲದ ಮರದ ಬೀಜದಲ್ಲಿ) ಆ ವಟವೃಕ್ಷದ ಪತ್ರ ಪುಷ್ಪಾದಿಗಳು ಹೇಗೆ ಅಡಕವಾಗಿರುತ್ತವೆಯೋ ಅದರಂತೆ ಈ ಭಾಜನಸ್ಥಲದ ಯೋಗಿಯ ಹೃದಯವೆಂಬ ಬೀಜದಲ್ಲಿ ಸಮಸ್ತ ವಿಶ್ವವೆಲ್ಲಾ ಅಡಕವಾಗಿದೆ.

*ಇತಿ ಭಾಜನಸ್ಥಲಂ  ಇಲ್ಲಿಗೆ ಭಾಜನಸ್ಥಲವು ಮುಗಿಯಿತು.*

## 98. ಅಥ ಅಂಗಾಲೇಪಸ್ಥಲಮ್

ಈಗ ಅಂಗಾಲೇಪಸ್ಥಲವು

**(6 ಶ್ಲೋಕಗಳು)**

**ದಿಕ್ ಕಾಲಾದ್ಯನವಚ್ಛಿನ್ನಮ್**
**ಚಿದಾನಂದಮಯಂ ಮಹತ್ ।**
**ಯಸ್ಯ ರೂಪಮಿದಂ ಖ್ಯಾತಮ್**
**ಸೋಽಂಗಾಲೇಪ ಇಹೋಚ್ಯತೇ ॥ 20–42**

ದಿಕ್ಕು ಕಾಲ ದೇಶಗಳಿಂದ ಪರಿಚ್ಛಿನ್ನವಾಗದ (ಎಲ್ಲ ದಿಕ್ಕು, ಎಲ್ಲ ಕಾಲ, ಎಲ್ಲ ದೇಶಗಳಲ್ಲಿ ಸದಾ ಇರುವ) ಚಿದಾನಂದ ರೂಪವಾದ ಮಹತ್ತರವೂ ಆದ ಯಾವ ಪರಶಿವ ಬ್ರಹ್ಮವಿದೆಯೋ ಅದನ್ನು ತಿಳಿದುಕೊಂಡ ಯೋಗಿಯು ಇಲ್ಲಿ ಅಂಗಾಲೇಪನೆಂದು ಕರೆಯಲ್ಪಡುತ್ತಾನೆ (ಇವನಿಗೆ ಶರೀರಕ್ಕೆ ಸಂಬಂಧಪಟ್ಟ ಯಾವುದೇ ಕ್ರಿಯಾಕಲಾಪಗಳ ಲೇಪವು ಇರುವುದಿಲ್ಲ).

**ಸಮಸ್ತಜಗದಾತ್ಮಾಽಪಿ**
**ಸಂವಿದ್ರೂಪೋ ಮಹಾಮತಿಃ ।**
**ಲಿಪ್ಯತೇ ನೈವ ಸಂಸಾರೈಃ**
**ಯಥಾ ಧೂಮಾದಿಭಿರ್ನಭಃ ॥ 20–43**

ಆಕಾಶವು ತನ್ನಲ್ಲಿಯ ಹೊಗೆ, ಮೋಡ ಮೊದಲಾದವುಗಳಿಂದ ಹೇಗೆ ಅಲಿಪ್ತವಾಗಿರುತ್ತದೆಯೋ ಅದರಂತೆ ಮಹಾಮತಿಯು ಸಮಸ್ತವಾದ ಜಗತ್ತಿನ ಆತ್ಮಸ್ವರೂಪನೂ, ಸಂವಿದ್ರೂಪನಾದ (ಚಿದ್ರೂಪನಾದ) ಈ ಯೋಗಿಯು ಸಂಸಾರದ ದೋಷಗಳಿಂದ ಲಿಪ್ತನಾಗುವುದಿಲ್ಲ.

**ನ ವಿಧಿರ್ನ ನಿಷೇಧಶ್ಚ**
**ನ ವಿಕಲ್ಪೋ ನ ವಾಸನಾ ।**
**ಕೇವಲಂ ಚಿತ್ಸ್ವರೂಪಸ್ಯ**
**ಗಲಿತಪ್ರಾಕೃತಾತ್ಮನಃ ॥ 20–44**

ಪ್ರಾಕೃತವಾದ (ಮಾಯಾಸಂಬಂಧಿಯಾದ) ಕರ್ಮ ಪ್ರವೃತ್ತಿಗಳಿಲ್ಲದ ಕೇವಲ ಜ್ಞಾನ ಸ್ವರೂಪನಾಗಿರುವ ಯೋಗಿಗೆ, ವಿಧ್ಯುಕ್ತ ಕರ್ಮಾಚರಣೆಯೇ ಆಗಲಿ, ನಿಷೇಧಿಸಲ್ಪಟ್ಟ ಕರ್ಮ ಪರಿತ್ಯಾಗವೇ ಆಗಲಿ ಹೀಗೋ ಹಾಗೋ ಎಂಬ ಸಂಶಯವೇ ಆಗಲಿ ಮತ್ತು ಕರ್ಮವಾಸನೆಯೇ ಆಗಲಿ ಇರುವುದಿಲ್ಲ.

**ಘಟಾದಿಷು ಪೃಥಗ್ಭೂತಮ್**
**ಯಥಾಽಽಕಾಶಂ ನ ಭಿದ್ಯತೇ ।**
**ತಥೋಪಾಧಿಗತಂ ಬ್ರಹ್ಮ**
**ನಾನಾರೂಪಂ ನ ಭಿದ್ಯತೇ ॥ 20–45**

ಘಟ ಮಠಾದಿ ಉಪಾಧಿಗಳ ಕಾರಣದಿಂದ ಆಕಾಶವೂ ಹೇಗೆ ಭಿನ್ನವಾಗುವುದಿಲ್ಲವೋ ಅದರಂತೆ ದೇವ ದಾನವ ಮಾನವರೆಂಬ ಉಪಾಧಿಗಳಿಂದ ಬ್ರಹ್ಮವು ನಾನಾರೂಪವಾಗಿ ತೋರುತ್ತಿದ್ದರೂ ಸಹ ನಿಜಸ್ಥಿತಿಯಲ್ಲಿ ಭೇದವಿರುವುದಿಲ್ಲ.

**ಅನಶ್ವರಮನಿರ್ದೇಶ್ಯಮ್**

**ಯಥಾ ವ್ಯೋಮ ಪ್ರಕಾಶತೇ ।**
**ತಥಾ ಬ್ರಹ್ಮಾಪಿ ಚೈತನ್ಯಮ್**
**ಅತ್ರ ವೈಶೇಷಿಕೀ ಕಲಾ ॥ 20–46**
ಆಕಾಶವು ಅವಿನಾಶಿಯಾಗಿಯೂ, ತೋರಿಸಲು ಬಾರದ್ದಾಗಿಯೂ ಹೇಗೆ ಪ್ರಕಾಶಿಸುವುದೋ, ಅದರಂತೆ ಬ್ರಹ್ಮವೂ ಕೂಡ ಇರುತ್ತದೆ. ಆದರೆ ಆ ಪರಬ್ರಹ್ಮವು ದೃಕ್ರಿಯಾ ಶಕ್ತಿರೂಪವಾದ ಕಲೆಯಿಂದ ಕೂಡಿಕೊಂಡಿರುವುದೇ ಇದರ ವೈಶಿಷ್ಟ್ಯವಾಗಿದೆ.

**ನ ದೇವತ್ವಂ ನ ಮಾನುಷ್ಯಮ್**
**ನ ತಿರ್ಯಕ್ತ್ವಂ ನ ಚಾನ್ಯಥಾ ।**
**ಸರ್ವಾಕಾರತ್ವಮಾಖ್ಯಾತಮ್**
**ಜೀವನ್ಮುಕ್ತಸ್ಯ ಯೋಗಿನಃ ॥ 20–47**

ಜೀವನ್ಮುಕ್ತನಾದ ಯೋಗಿಗೆ ದೇವತ್ವವಾಗಲಿ, ಮನುಷ್ಯತ್ವವಾಗಲಿ, ತಿರ್ಯಕ್ ಜಂತು ರೂಪತ್ವವಾಗಲಿ ಅಥವಾ ಇನ್ನು ಯಾವುದೇ ರೂಪಗಳಾಗಲಿ ಇರುವುದಿಲ್ಲ. ಆದರೆ ಅವನು ಸರ್ವರಲ್ಲಿಯೂ ಪರಿಪೂರ್ಣವಾದ ಚಿದಾಕಾಶರೂಪನಾಗಿ ಇರುತ್ತಾನೆ.

***ಇತಿ ಅಂಗಾಲೇಪಸ್ಥಲಂ*** *ಇಲ್ಲಿಗೆ ಅಂಗಾಲೇಪಸ್ಥಲವು ಮುಗಿಯಿತು.*

## 99. ಅಥ ಸ್ವಪರಾಜ್ಞಸ್ಥಲಮ್
ಈಗ ಸ್ವಪರಾಜ್ಞಸ್ಥಲವು
**(7 ಶ್ಲೋಕಗಳು)**

**ಅಪ್ರಮೇಯೇ ಚಿದಾಕಾರೇ**
**ಬ್ರಹ್ಮಣ್ಯದ್ವೈತವೈಭವೇ ।**
**ವಿಲೀನಃ ಕಿಂ ನು ಜಾನಾತಿ**
**ಸ್ವಾತ್ಮಾನಂ ಪರಮೇವ ವಾ ॥ 20–48**
ಪರಿಮಿತಿಯಿಲ್ಲದ ಚಿದ್ರೂಪವಾದ ಪರಬ್ರಹ್ಮದ ಅದ್ವೈತ ವೈಭವದಲ್ಲಿ ಐಕ್ಯಗೊಂಡ ಯೋಗಿಯು ತನ್ನನ್ನೇ ಆಗಲಿ, ಅನ್ಯರನ್ನೇ ಆಗಲಿ, ಬ್ರಹ್ಮನಿಗಿಂತ ಬೇರೆ ಎಂಬುದಾಗಿ ತಿಳಿಯುವನೇ?

**ಯತ್ರ ನಾಸ್ತಿ ಭಿದಾಯೋಗಾತ್**
**ಅಹಂ ತ್ವಮಿತಿ ವಿಭ್ರಮಃ ।**
**ನ ಸಂಯೋಗೋ ವಿಯೋಗಶ್ಚ**
**ನ ಜ್ಞೇಯಜ್ಞಾತೃಕಲ್ಪನಾ ॥ 20–49**
ಯಾವ ಪರಬ್ರಹ್ಮದಲ್ಲಿ ಸಮಾನ ಸಮರಸಭಾವದ ಐಕ್ಯಯೋಗವನ್ನು ಪಡೆದ ಮೇಲೆ ಅಲ್ಲಿ ಯಾವ ಭೇದವೂ ಇರುವುದಿಲ್ಲ. ಅಲ್ಲಿ ನಾನು ನೀನೆಂಬ ಭ್ರಮೆಯಿಲ್ಲ. ಅಲ್ಲಿ ಸಂಯೋಗ ವಿಯೋಗಗಳಿಲ್ಲ ಮತ್ತು ಜ್ಞೇಯ ಜ್ಞಾತೃ ಕಲ್ಪನೆಗಳೂ ಸಹ ಇರುವುದಿಲ್ಲ.
**ನ ಬಂಧೋ ನ ಚ ಮುಕ್ತಿಶ್ಚ**
**ನ ದೇವಾದ್ಯಭಿಮಾನಿತಾ ।**
**ನ ಸುಖಂ ನೈವ ದುಃಖಂ ಚ**
**ನಾಜ್ಞಾನಂ ಜ್ಞಾನಮೇವ ವಾ ॥ 20–50**

ಅದರಂತೆ ಆ ಐಕ್ಯಸ್ಥಿತಿಯಲ್ಲಿ ಬಂಧನವಾಗಲಿ ಮುಕ್ತಿಯಾಗಲಿ ಇರುವುದಿಲ್ಲ. ದೇವತ್ವಾದಿ ಅಭಿಮಾನಗಳು ಇರುವುದಿಲ್ಲ. ಸುಖದುಃಖಗಳು ಇರುವುದಿಲ್ಲ ಮತ್ತು ಅಜ್ಞಾನಗಳೂ ಸಹ ಇರುವುದಿಲ್ಲ.

**ನೋತ್ಕೃಷ್ಟತ್ವಂ ನ ಹೀನತ್ವಮ್**
**ನೋಪರಿಷ್ಟಾನ್ನ ಚಾಪ್ಯಧಃ ।**
**ನ ಪಶ್ಚಾನ್ನೈವ ಪುರತೋ**
**ನ ದೂರೇ ಕಿಂಚಿದಂತರೇ ॥ 20–51**

ಇದೇ ಪ್ರಕಾರ ಈ ಐಕ್ಯಸ್ಥಿತಿಯಲ್ಲಿ ಉತ್ಕೃಷ್ಟವಾಗಲಿ ಅಥವಾ ಹೀನತ್ವವಾಗಲಿ ಇರುವುದಿಲ್ಲ. ಮೇಲೆ ಅಥವಾ ಕೆಳಗೆ ಎಂಬ ಭಾವವಿರುವುದಿಲ್ಲ. ಹಿಂದೆ ಮುಂದೆಯೆಂಬ ತಿಳುವಳಿಕೆ ಇರುವುದಿಲ್ಲ. ಅದರಂತೆ ದೂರ ಸಮೀಪ ವ್ಯವಹಾರಗಳೂ ಸಹ ಇರುವುದಿಲ್ಲ.

**ಸರ್ವಾಕಾರೇ ಚಿದಾನಂದೇ**
**ಸತ್ಯರೂಪಿಣಿ ಶಾಶ್ವತೇ ।**
**ಪರಾಕಾಶಮಯೇ ತಸ್ಮಿನ್**
**ಪರೇ ಬ್ರಹ್ಮಣಿ ನಿರ್ಮಲೇ ॥ 20–52**

**ಏಕೀಭಾವಮುಪೇತಾನಾಮ್**
**ಯೋಗಿನಾಂ ಪರಮಾತ್ಮನಾಮ್ ।**
**ಪರಾಪರಪರಿಜ್ಞಾನ–**
**ಪರಿಹಾಸಕಥಾ ಕುತಃ ॥ 20–53**

ಸರ್ವಸ್ವರೂಪವೂ, ಚಿದಾನಂದವೂ, ಸತ್ಯರೂಪವೂ, ಶಾಶ್ವತವೂ, ಪರಾಕಾಶರೂಪವೂ, ನಿರ್ಮಲವೂ ಆದ ಆ ಪರಶಿವ ಬ್ರಹ್ಮದಲ್ಲಿ ಏಕೀಭಾವನೆಯನ್ನು ಪಡೆದ (ಸಾಮರಸ್ಯತ್ವವನ್ನು ಪಡೆದ) ಪರಮಾತ್ಮ ಸ್ವರೂಪರಾದ ಯೋಗಿಗಳಿಗೆ ಪರ ಅಪರವೆಂಬ ಪರಿಜ್ಞಾನದ ಪರಿಹಾಸದ ನುಡಿಗಳು ಹೇಗೆ ತಾನೇ ಬಂದಾವು?

**ದೇಶಕಾಲಾನವಚ್ಛಿನ್ನ–**
**ತೇಜೋರೂಪಸಮಾಶ್ರಯಾತ್ ।**
**ಸ್ವಪರಜ್ಞಾನವಿರಹಾತ್**
**ಸ್ವಪರಾಜ್ಞಸ್ಥಲಂ ವಿದುಃ ॥ 20–54**

ದೇಶಕಾಲಾದಿಗಳಿಂದ ಪರಿಚ್ಛಿನ್ನವಾಗದೆ ಎಲ್ಲೆಡೆ ವ್ಯಾಪಿಸಿಕೊಂಡಿರುವ ಜ್ಞಾನ ಪ್ರಕಾಶರೂಪವನ್ನು ಪಡೆದಿರುವ ಆ ಯೋಗಿಗೆ ತಾನು ಮತ್ತು ಅನ್ಯ ಎಂಬ ಭೇದ ಜ್ಞಾನವಿಲ್ಲದಿರುವುದರಿಂದ ಇದಕ್ಕೆ ಸ್ವಪರಾಜ್ಞಸ್ಥಲವೆಂದು ಶಿವಾಗಮಶಾಸ್ತ್ರಜ್ಞರು ತಿಳಿದಿರುವರು.

*ಇತಿ ಸ್ವಪರಾಜ್ಞಸ್ಥಲಂ ಇಲ್ಲಿಗೆ ಸ್ವಪರಾಜ್ಞಸ್ಥಲವು ಮುಗಿಯಿತು.*

## 100. ಅಥ ಭಾವಾಭಾವಲಯಸ್ಥಲಮ್
ಈಗ ಭಾವಾಭಾವಲಯಸ್ಥಲವು
**(5 ಶ್ಲೋಕಗಳು)**

**ತ್ವಂತಾಹಂತಾವಿನಿರ್ಮುಕ್ತೇ**

**ಶೂನ್ಯಕಲ್ಪೇ ಚಿದಂಬರೇ ।**
**ಏಕೀಭೂತಸ್ಯ ಸಿದ್ಧಸ್ಯ**
**ಭಾವಾಭಾವಕಥಾ ಕುತಃ ॥ 20–55**

ನೀನು–ನಾನು ಎಂಬ ಭೇದಭಾವದಿಂದ ಮುಕ್ತವಾದ ಶೂನ್ಯ ಸದೃಶವಾದ ಚಿದಾಕಾಶದಲ್ಲಿ (ಚಿದಂಬರದಲ್ಲಿ) ಸಾಮರಸ್ಯವನ್ನು ಪಡೆದ ಸಿದ್ಧನಾದ ಯೋಗಿಗೆ (ಸ್ವಪರಾಜ್ಞ ಸ್ಥಲದ ಯೋಗಿಗೆ) ಭಾವ ಮತ್ತು ಅಭಾವಗಳ ಪ್ರಸಂಗವು ಎತ್ತಣದು? (ನಾನು ಎಂಬ ಪರಿಚ್ಛಿನ್ನ ದೇಹಭಾವವಾಗಲಿ ಆತ್ಮನು ಇಲ್ಲವೆಂಬ ಅಭಾವವಾಗಲಿ ಎಲ್ಲಿರುವುದು?)

**ಅಹಂಭಾವಸ್ಯ ಶೂನ್ಯತ್ವಾತ್**
**ಅಭಾವಸ್ಯ ತಥಾಽಽತ್ಮನಃ ।**
**ಭಾವಾಭಾವವಿನಿರ್ಮುಕ್ತೋ**
**ಜೀವನ್ಮುಕ್ತಃ ಪ್ರಕಾಶತೇ ॥ 20–56**

ಶರೀರವೇ ನಾನೆಂಬ ಅಹಂಭಾವದ, ಆತ್ಮವು ಇಲ್ಲವೆಂಬ ಅಭಾವದ – ಹೀಗೆ ಈ ಭಾವಾಭಾವಗಳೆರಡರಿಂದ ಮುಕ್ತನಾದ ಯೋಗಿಯು ಜೀವನ್ಮುಕ್ತನಾಗಿ ಪ್ರಕಾಶಿಸುತ್ತಾನೆ.

**ಸುಖದುಃಖಾದಿಭಾವೇಷು**
**ನಾಭಾವೋ ಭಾವ ಏವ ವಾ ।**
**ವಿದ್ಯತೇ ಚಿತ್ಸ್ವರೂಪಸ್ಯ**
**ನಿರ್ಲೇಪಸ್ಯ ಮಹಾತ್ಮನಃ ॥ 20–57**

ಚಿತ್ಸ್ವರೂಪನೂ, ನಿರ್ಲೇಪನೂ ಮತ್ತು ಮಹಾತ್ಮನೂ ಆದ ಯೋಗಿಯ ಮನಸ್ಸಿನಲ್ಲಿ ಸುಖದುಃಖಾದಿಗಳ ಬಗ್ಗೆ ಭಾವವೇ ಆಗಲಿ (ನಾನು ದುಃಖಿಯಾಗಿದ್ದೇನೆ ಎಂಬ ಭಾವನೆಯಾಗಲಿ) ಅಥವಾ ಅಭಾವವೇ ಆಗಲಿ (ನಾನು ಸುಖಿಯಲ್ಲ ಎಂಬ ಅಭಾವಾತ್ಮದ ಭಾವವೇ ಆಗಲಿ) ಇರುವುದಿಲ್ಲ.

**ಯಸ್ಮಿನ್ ಜ್ಯೋತಿಷಿ ಚಿದ್ರೂಪೇ**
**ದೃಶ್ಯತೇ ನೈವ ಕಿಂಚನ ।**
**ಸದ್ರೂಪಂ ವಾಪ್ಯಸದ್ರೂಪಮ್**
**ಭಾವಾಭಾವಂ ವಿಮುಂಚತಃ ॥ 20–58**

ಭಾವ ಮತ್ತು ಅಭಾವಗಳನ್ನು ಬಿಟ್ಟಿರುವ ಯೋಗಿಗೆ ಚಿದ್ರೂಪವಾದ ಪರಂಜ್ಯೋತಿಯಲ್ಲಿ ಸದ್ರೂಪವಾಗಲಿ ಅಥವಾ ಅಸದ್ರೂಪವಾಗಲಿ ಯಾವುದೂ ತೋರುವುದಿಲ್ಲ (ಇರುತ್ತದೆ ಎಂಬ ಭಾವ ವ್ಯವಹಾರವಾಗಲಿ, ಇಲ್ಲ ಎನ್ನುವ ಅಭಾವ ವ್ಯವಹಾರವಾಗಲೀ ಈ ಯೋಗಿಗೆ ಇರುವುದಿಲ್ಲ).

**ಪ್ರತೀಯಮಾನೌ ವಿದ್ಯೇತೇ**
**ಭಾವಾಭಾವೌ ನ ಕುತ್ರಚಿತ್ ।**
**ಲಿಂಗೈಕ್ಯೇ ಸತಿ ಯತ್ತಸ್ಮಾದ್**
**ಭಾವಾಭಾವಲಯಸ್ಥಲಮ್ ॥ 20–59**

ಲಿಂಗೈಕ್ಯರೂಪವಾದ ಸಾಮರಸ್ಯ ಸ್ಥಿತಿಯನ್ನು ಪ್ರಾಪ್ತಿ ಮಾಡಿಕೊಂಡ ಯೋಗಿಗೆ, ಎಲ್ಲಿಯೂ ಭಾವಾಭಾವಗಳ ಪ್ರತೀತಿಯು ಉಂಟಾಗುವುದಿಲ್ಲ. ಅಂತೆಯೇ ಇದಕ್ಕೆ ಭಾವಾಭಾವಲಯಸ್ಥಲವೆಂದು ಕರೆಯುವರು (ಸಾಮಾನ್ಯ ಜೀವಿಗಳಲ್ಲಿ ತೋರುವ ಭಾವಾಭಾವಗಳ ವ್ಯವಹಾರವು ಲಿಂಗೈಕ್ಯನಲ್ಲಿ ಇರುವುದಿಲ್ಲ).

***ಇತಿ ಭಾವಾಭಾವಲಯಸ್ಥಲಂ*** *ಇಲ್ಲಿಗೆ ಭಾವಾಭಾವಲಯಸ್ಥಲವು ಮುಗಿಯಿತು.*

## 101. ಅಥ ಜ್ಞಾನಶೂನ್ಯಸ್ಥಲಮ್

ಈಗ ಜ್ಞಾನಶೂನ್ಯಸ್ಥಲವು

**(11 ಶ್ಲೋಕಗಳು)**

**ಪರಾಪರಸಮಾಪೇಕ್ಷ–**
**ಭಾವಾಭಾವವಿವೇಚನಮ್ ।**
**ಜ್ಞಾನಂ ಬ್ರಹ್ಮಣಿ ತನ್ನಾಸ್ತಿ**
**ಜ್ಞಾನಶೂನ್ಯಸ್ಥಲಂ ವಿದುಃ ॥ 20–60**

ಪರ ಮತ್ತು ಅಪರಗಳನ್ನು ಸಾಪೇಕ್ಷಿಸಿ (ಅವಲಂಬಿಸಿ) ಇರುವಂತಹ ಭಾವ ಮತ್ತು ಅಭಾವಗಳ ವಿವೇಕರೂಪವಾದ ಭೇದಜ್ಞಾನವು ಪರಬ್ರಹ್ಮ ಸ್ಥಿತಿಯನ್ನು ಪಡೆದ ಈ ಯೋಗಿಗೆ ಇರುವುದಿಲ್ಲ. ಇದಕ್ಕೇನೇ ಜ್ಞಾನಶೂನ್ಯಸ್ಥಲವೆಂದು ತಿಳಿಯುತ್ತಾರೆ.

**ಜಲೇ ಜಲಮಿವ ನ್ಯಸ್ತಮ್**
**ವಹ್ನೌ ವಹ್ನಿರಿವಾರ್ಪಿತಮ್ ।**
**ಪರೇ ಬ್ರಹ್ಮಣಿ ಲೀನಾತ್ಮಾ**
**ವಿಭಾಗೇನ ನ ದೃಶ್ಯತೇ ॥ 20–61**

ಜಲದಲ್ಲಿ ಜಲವನ್ನು ಕೂಡಿಸಿದಂತೆ, ಅಗ್ನಿಯಲ್ಲಿ ಅಗ್ನಿಯನ್ನು ಬೆರೆಸಿದಂತೆ, ಪರಬ್ರಹ್ಮದಲ್ಲಿ ಐಕ್ಯವಾದ ಯೋಗಿಯು ಅದಕ್ಕಿಂತಲೂ ಭಿನ್ನವಾಗಿ ತೋರುವುದಿಲ್ಲ (ತದ್ರೂಪವೇ ಆಗಿರುತ್ತಾನೆ).

**ಸರ್ವಾತ್ಮನಿ ಪರೇ ತತ್ತ್ವೇ**
**ಭೇದಶಂಕಾವಿವರ್ಜಿತೇ ।**
**ಜ್ಞಾತ್ರಾದಿವ್ಯವಹಾರೋತ್ಥಮ್**
**ಕುತೋ ಜ್ಞಾನಂ ವಿಭಾವ್ಯತೇ ॥ 20–62**

ಸರ್ವಾತ್ಮ ರೂಪವಾಗಿರುವ (ಎಲ್ಲವೂ ತಾನೇ ಆಗಿರುವ) ಭೇದಶಂಕೆಗೆ (ದ್ವೈತ ವ್ಯವಹಾರಕ್ಕೆ) ವರ್ಜಿತವಾದ (ಎಡೆಕೊಡದ) ಆ ಪರಬ್ರಹ್ಮ ವಿಷಯದಲ್ಲಿ ಜ್ಞಾತ್ರಾದಿ ವ್ಯವಹಾರಗಳಿಂದ ಉತ್ಪನ್ನವಾದ (ಜ್ಞಾತೃ, ಜ್ಞಾನ, ಜ್ಞೇಯಗಳೆಂಬ ತ್ರಿಪುಟಿಗಳಿಂದ ಉತ್ಪನ್ನವಾದ) ಜ್ಞಾನವು ಅದು ಹೇಗೆ ತಾನೇ ಸಂಭವಿಸಬಲ್ಲದು?

**ನಿರ್ವಿಕಾರಂ ನಿರಾಕಾರಮ್**
**ನಿತ್ಯಂ ಸೀಮಾವಿವರ್ಜಿತಮ್ ।**
**ವ್ಯೋಮವತ್ಪರಮಂ ಬ್ರಹ್ಮ**
**ನಿರ್ವಿಕಲ್ಪತಯಾ ಸ್ಥಿತಮ್ ॥ 20–63**

**ನ ಪೃಥ್ವ್ಯಾದೀನಿ ಭೂತಾನಿ**
**ನ ಗ್ರಹಾ ನೈವ ತಾರಕಾಃ ।**
**ನ ದೇವಾ ನ ಮನುಷ್ಯಾಶ್ಚ**
**ನ ತಿರ್ಯಂಚೋ ನ ಚಾಪರೇ ॥ 20–64**

**ತಸ್ಮಿನ್ ಕೇವಲಚಿನ್ಮಾತ್ರ –**

**ಸತ್ತಾನಂದೈಕಲಕ್ಷಣೇ ।**
**ತ್ವಂತಾಹಂತಾದಿಸಂರೂಢಮ್**
**ವಿಜ್ಞಾನಂ ಕೇನ ಭಾವ್ಯತೇ ॥ 20–65**

ವಿಕಾರಕ್ಕೆ ಒಳಗಾಗದ (ಅಸ್ತಿ, ಜಾಯತೇ, ವರ್ಧತೇ, ವಿಪರಿಣಮತೇ, ಅಪಕ್ಷೀಯತೇ, ವಿನಶ್ಯತಿ ಎಂಬ ಈ ಆರು ಪ್ರಕಾರದ ವಿಕಾರಗಳಿಗೆ ಒಳಗಾಗದ) ನಿರಾಕಾರವಾದ, ನಿತ್ಯವಾದ ಸ್ಥಿತಿಯಲ್ಲಿರುವ ಆಕಾಶದಂತೆ ನಿಸ್ಸೀಮವಾದ, ನಿರ್ವಿಕಲ್ಪ ಆ ಪರಬ್ರಹ್ಮದಲ್ಲಿ ಪೃಥಿವ್ಯಾದಿ ಭೂತಗಳಾಗಲೀ, ಸೂರ್ಯಾದಿ ಗ್ರಹಗಳಾಗಲೀ, ಅಶ್ವಿನ್ಯಾದಿ ನಕ್ಷತ್ರಗಳಾಗಲೀ, ವಿಷ್ಣ್ವಾದಿ ದೇವತೆಗಳಾಗಲೀ, ಮನುಷ್ಯರಾಗಲಿ, ತಿರ್ಯಕ್ ಜಂತುಗಳಾಗಲೀ, ಮತ್ತಿನ್ಯಾವುದೇ ಆಗಲಿ ಇವುಗಳು ಭಿನ್ನವಾಗಿ ತೋರುವುದಿಲ್ಲ. ಇಂತಹ ಸಚ್ಚಿದಾನಂದ ಸ್ವರೂಪವಾದ ಚಿನ್ಮಾತ್ರವಾದ ಕೇವಲ ಪರಬ್ರಹ್ಮ ಸ್ಥಿತಿಯಲ್ಲಿ ತ್ವಂ(ನೀನು) ಅಹಂ (ನಾನು) ರೂಪವಾದ ಜ್ಞಾನವು ಹೇಗೆ ತಾನೇ ಉಂಟಾದೀತು?

**ಜ್ಞೇಯಾಭಾವಾದ್ವಿಶೇಷೇಣ**
**ಶೂನ್ಯಕಲ್ಪಂ ವಿಭಾವ್ಯತೇ ।**
**ಜ್ಞಾತೃಜ್ಞೇಯಾದಿಭಿಃ ಶೂನ್ಯಮ್**
**ಶೂನ್ಯಂ ಜ್ಞಾನಾದಿಭಿರ್ಗುಣೈಃ ॥ 20–66**

**ಆದಾವಂತೇ ಚ ಮಧ್ಯೇ ಚ**
**ಶೂನ್ಯಂ ಸರ್ವತ್ರ ಸರ್ವದಾ ।**
**ದ್ವಿತೀಯೇನ ಪದಾರ್ಥೇನ**
**ಶೂನ್ಯಂ ಶೂನ್ಯಂ ವಿಭಾವ್ಯತೇ ॥ 20–67**

ಈ ಪರಬ್ರಹ್ಮದಲ್ಲಿ ಬೇರೊಂದು ಜ್ಞೇಯವಾದ ವಸ್ತು ಇಲ್ಲದಿರುವುದರಿಂದ ಇದು ಜ್ಞಾನಶೂನ್ಯ ಸದೃಶವಾಗಿರುತ್ತದೆ. ಅಂತೆಯೇ ಇಲ್ಲಿ ಜ್ಞಾತೃ ಜ್ಞಾನ ಜ್ಞೇಯಾದಿ ತ್ರಿಪುಟಿ ವ್ಯವಹಾರವು ಶೂನ್ಯವಾಗಿರುತ್ತದೆ. ಈ ಪರಬ್ರಹ್ಮದಲ್ಲಿ ಜ್ಞಾನಾದಿ ಗುಣಗಳೂ ಸಹ ಶೂನ್ಯವಾಗಿರುತ್ತವೆ. ಆದಿಯಲ್ಲಿ, ಮಧ್ಯದಲ್ಲಿ ಮತ್ತು ಅಂತ್ಯದಲ್ಲಿ ಎಲ್ಲೆಡೆಯಲ್ಲಿ ಯಾವಾಗಲೂ ಶೂನ್ಯವಾಗಿಯೇ ಇರುತ್ತದೆ. ಇಲ್ಲಿ ಆ ಪರಬ್ರಹ್ಮದ ಹೊರತಾಗಿ ಬೇರೊಂದು ಎರಡನೆಯ ಪದಾರ್ಥವು ಇಲ್ಲದಿರುವುದರಿಂದ ಅದು ಶೂನ್ಯವಾಗಿಯೇ ಪ್ರತೀತಿಯಾಗುವುದು.

**ಕೇವಲಂ ಸಚ್ಚಿದಾನಂದ–**
**ಪ್ರಕಾಶಾದ್ವಯಲಕ್ಷಣಮ್ ।**
**ಶೂನ್ಯಕಲ್ಪಂ ಪರಾಕಾಶಮ್**
**ಪರಬ್ರಹ್ಮ ಪ್ರಕಾಶತೇ ॥ 20–68**

ಕೇವಲ ಸಚ್ಚಿದಾನಂದ ಸ್ವರೂಪವಾದ, ಪ್ರಕಾಶರೂಪವಾದ, ಅದ್ವಯ ಸ್ವರೂಪವಾದ, ಪರಾಕಾಶರೂಪವಾದ ಆ ಪರಬ್ರಹ್ಮವು ಶೂನ್ಯರೂಪದಲ್ಲಿ ಪ್ರಕಾಶಿಸುತ್ತದೆ.

**ಶೂನ್ಯಜ್ಞಾನಾದಿಸಂಕಲ್ಪೇ**
**ಶೂನ್ಯಸರ್ವಾರ್ಥಸಾಧನೇ ।**
**ಜ್ಯೋತಿರ್ಲಿಂಗೇ ಚಿದಾಕಾರೇ**
**ಸ್ವಪ್ರಕಾಶೇ ನಿರುತ್ತರೇ ॥**
**ಏಕೀಭಾವಮುಪೇತಸ್ಯ**
**ಕಥಂ ಜ್ಞಾನಸ್ಯ ಸಂಭವಃ ॥ 20–69**

ಜ್ಞಾನಾದಿ ಸಂಕಲ್ಪಗಳಿಂದ ಶೂನ್ಯವಾದ ಧರ್ಮ, ಅರ್ಥ, ಕಾಮ ಮತ್ತು ಮೋಕ್ಷಗಳೆಂಬ ಈ ಸರ್ವಾರ್ಥಗಳ ಸಾಧನೆಗಳಿಂದ ಶೂನ್ಯವಾದ, ಸ್ವಯಂ ಪ್ರಕಾಶರೂಪವಾದ, ಚಿದ್ರೂಪವಾದ, ಎಲ್ಲಕ್ಕೂ ಉತ್ತರದಲ್ಲಿರುವ (ಎಲ್ಲಕ್ಕೂ ಕೊನೆಯದಾಗಿರುವ) ಆ

ಜ್ಯೋತಿರ್ಲಿಂಗದಲ್ಲಿ (ನಿಜ ಸ್ವರೂಪದ ಮಹಾಲಿಂಗದಲ್ಲಿ) ಸಾಮರಸ್ಯರೂಪವಾದ ಐಕ್ಯಭಾವವನ್ನು ಪಡೆದ ಈ ಯೋಗಿಗೆ ಬೇರೊಂದು ಯಾವುದೇ ಜ್ಞಾನವು ಹೇಗೆ ಸಂಭವಿಸೀತು?

**ಯಸ್ಯ ಕಾರ್ಯದಶಾ ನಾಸ್ತಿ**
**ಕಾರಣತ್ವಮಥಾಪಿ ವಾ ।**
**ಶೇಷತ್ವಂ ನೈವ ಶೇಷಿತ್ವಮ್**
**ಸ ಮುಕ್ತಃ ಪರ ಉಚ್ಯತೇ ॥ 20–70**

ಯಾವ ಯೋಗಿಗೆ ಕಾರ್ಯಕಾರಣಗಳ ಭಾವವಾಗಲಿ ಮತ್ತು ಶೇಷ ಶೇಷೀ ಭಾವಗಳಾಗಲಿ ಇರುವುದಿಲ್ಲವೋ, ಅಂತಹ ಆ ಯೋಗಿಯು ಪರಾತ್ಪರನೂ ಮುಕ್ತನೂ ಎಂದು ಹೇಳಲ್ಪಡುತ್ತಾನೆ.

*ಇತಿ ಜ್ಞಾನಶೂನ್ಯಸ್ಥಲಂ* *ಇಲ್ಲಿಗೆ ಜ್ಞಾನಶೂನ್ಯಸ್ಥಲವು ಮುಗಿಯಿತು.*

## ಶಾಸ್ತ್ರೋಪಸಂಹಾರಃ
## ಶಿವೈಕ್ಯಸ್ಥಲಮ್
ಶಿವೈಕ್ಯಸ್ಥಲವು
**(17 ಶ್ಲೋಕಗಳು)**

**ಏತಾವದುಕ್ತ್ವಾ ಪರಮಪ್ರಬೋಧಮ್**
**ಅದ್ವೈತಮಾನಂದಶಿವಪ್ರಕಾಶಮ್ ।**
**ದೇವ್ಯೈ ಪುರಾ ಭಾಷಿತಮೀಶ್ವರೇಣ**
**ತೂಷ್ಣೀಮಭೂದ್ಧ್ಯಾನಪರೋ ಗಣೇಂದ್ರಃ ॥ 20–71**
**–ಇಂದ್ರವಜ್ರಾ ವೃತ್ತಮ್**

ಈ ಪೂರ್ವದಲ್ಲಿ ಪರಮೇಶ್ವರನು ಪಾರ್ವತಿಗೆ ಉಪದೇಶಿಸಿದ ಅದ್ವಿತೀಯವೂ, ಆನಂದರೂಪವೂ, ಶಿವಪ್ರಕಾಶವೂ, ಪರಮ ಬೋಧರೂಪವೂ (ಶಿವಾದ್ವೈತ ರೂಪವು) ಆದ ಈ (ಪಿಂಡಸ್ಥಲಾದಿ ಜ್ಞಾನಶೂನ್ಯಸ್ಥಲಾಂತವಾದ ವೀರಶೈವ ಶಾಸ್ತ್ರವನ್ನು) ಶಾಸ್ತ್ರವನ್ನು ಉಪದೇಶ ಮಾಡಿ ಗಣೇಂದ್ರನಾದ ಶ್ರೀ ರೇಣುಕನು ಸುಮ್ಮನಾಗಿ ಧ್ಯಾನಾಸಕ್ತನಾದನು.

**ಏವಮುಕ್ತ್ವಾ ಸಮಾಸೀನಮ್**
**ಶಿವಯೋಗಪರಾಯಣಮ್ ।**
**ರೇಣುಕಂ ತಂ ಸಮಾಲೋಕ್ಯ**
**ಬಭಾಷೇ ಪ್ರಾಂಜಲಿರ್ಮುನಿಃ ॥ 20–72**

ಈ ರೀತಿಯಾಗಿ ಉಪದೇಶ ಮಾಡಿ ಕುಳಿತಿರುವ ಶಿವಯೋಗ ಪರಾಯಣನಾದ ಶ್ರೀ ರೇಣುಕಗಣೇಶ್ವರನ ಕಡೆಗೆ ನೋಡುತ್ತಾ ಅಂಜಲಿಬದ್ಧನಾದ (ಕೈಮುಗಿದ) ಅಗಸ್ತ್ಯಮುನಿಯು ಈ ರೀತಿಯಾಗಿ ನುಡಿದನು.

**॥ ಅಗಸ್ತ್ಯ ಉವಾಚ ॥**
**ಶಿವಯೋಗವಿಶೇಷಜ್ಞ**
**ಶಿವಜ್ಞಾನಮಹೋದಧೇ ।**
**ಸಮಸ್ತವೇದಶಾಸ್ತ್ರಾದಿ–**
**ವ್ಯವಹಾರಧುರಂಧರ ॥ 20–73**

**ಆಲೋಕಮಾತ್ರನಿರ್ಧೂತ–**
**ಸರ್ವಸಂಸಾರಬಂಧನ ।**
**ಸ್ವಚ್ಛಂದಚರಿತೋಲ್ಲಾಸ**
**ಸ್ವಪ್ರಕಾಶಾತ್ಮವಚ್ಛಿವ ॥ 20–74**

**ಅವತೀರ್ಣಮಿದಂ ಶಾಸ್ತ್ರಮ್**
**ಅನವದ್ಯಂ ತ್ವದಾನನಾತ್ ।**
**ಶ್ರುತ್ವಾ ಮೇ ಮೋದತೇ ಚಿತ್ತಮ್**
**ಜ್ಯೋತಿಃ ಪಶ್ಯೇ ಶಿವಾಭಿಧಮ್ ॥ 20–75**

ಹೇ ಗಣಶ್ರೇಷ್ಠನಾದ ರೇಣುಕನೇ, ನೀನು ಶಿವಯೋಗದ ರಹಸ್ಯವನ್ನು ವಿಶೇಷವಾಗಿ ಅರಿತವನಾಗಿರುವೆ. ನೀನು ಶಿವಜ್ಞಾನದ ಮಹಾಸಾಗರವೇ ಆಗಿರುವೆ. ಸಕಲ ವೇದ ಆಗಮ ಮತ್ತು ಪುರಾಣಾದಿ ಶಾಸ್ತ್ರಗಳಲ್ಲಿ ನೀನು ಅತ್ಯಂತ ಪ್ರವೀಣನಾಗಿರುವೆ. ಕೇವಲ ಕೃಪಾದೃಷ್ಟಿಯಿಂದಲೇ ಜೀವಿಗಳ ಸಂಸಾರ ಬಂಧನವನ್ನು ಕಡಿದುಹಾಕುವ ಸಾಮರ್ಥ್ಯ ನಿನಗಿದೆ. ನೀನು ಸರ್ವತಂತ್ರ ಸ್ವತಂತ್ರನಾಗಿರುವೆ. ಸ್ವಯಂ ಪ್ರಕಾಶರೂಪವಾದ ಶಿವನೇ ನೀನಿರುವೆ. ಅತ್ಯಂತ ಪವಿತ್ರವಾದ ಏಕೋತ್ತರ ಶತಸ್ಥಲಾತ್ಮಕವಾದ ಈ ಶಾಸ್ತ್ರವು ನಿನ್ನ ಮುಖದಿಂದಲೇ ಅವತೀರ್ಣವಾದುದಾಗಿದೆ (ಹೊರಹೊಮ್ಮಿದೆ). ಇದನ್ನು ಕೇಳಿ ನನ್ನ ಚಿತ್ತವು ಆನಂದದಿಂದ ತುಂಬಿ ಹೋಗಿದೆ. ನಾನು ಶಿವನೆಂಬ ಜ್ಯೋತಿಯನ್ನು ನೋಡುತ್ತಲಿದ್ದೇನೆ.

**ಅದ್ಯ ಮೇ ಸಫಲಂ ಜನ್ಮ**
**ಗತೋ ಮೇ ಚಿತ್ತವಿಭ್ರಮಃ ।**
**ಸಂಜಾತಾ ಪಾಶವಿಚ್ಛಿತ್ತಿಃ**
**ತಪಾಂಸಿ ಫಲಿತಾನಿ ಚ ॥ 20–76**

**ಇದಾನೀಮೇವ ಮೇ ಜಾತಮ್**
**ಮುನಿರಾಜೋತ್ತಮೋತ್ತಮಮ್ ।**
**ಇತಃಪರಂ ಮಯಾ ನಾಸ್ತಿ**
**ಸದೃಶೋ ಭುವನತ್ರಯೇ ॥ 20–77**

**ಶಾಸ್ತ್ರಂ ತವ ಮುಖೋದ್ಗೀರ್ಣಮ್**
**ಶಿವಾದ್ವೈತಪರಂ ಪರಮ್ ।**
**ಮಾಂ ವಿನಾ ಕಸ್ಯ ಲೋಕೇಷು**
**ಶ್ರೋತುಮಸ್ತಿ ತಪಃ ಶುಭಮ್ ॥ 20–78**

**ತಪಸಾಂ ಪರಿಪಾಕೇನ**
**ಶಂಕರಸ್ಯ ಪ್ರಸಾದತಃ ।**
**ಆಗತಸ್ತ್ವಂ ಮಹಾಭಾಗ**
**ಮಾಂ ಕೃತಾರ್ಥಯಿತುಂ ಗಿರಾ ॥ 20–79**

ಹೇ ಗಣೇಂದ್ರನೇ, ಇಂದು ನನ್ನ ಜನ್ಮವು ಸಫಲವಾಯಿತು. ನನ್ನ ಮನಸ್ಸಿನಲ್ಲಿರುವ ಸಂಶಯಾದಿ ಭ್ರಮೆಗಳೆಲ್ಲಾ ದೂರವಾದವು. ನನ್ನ ಪಾಪಗಳೆಲ್ಲಾ ಕತ್ತರಿಸಿ ಹೋದವು. ನನ್ನ ತಪಸ್ಸುಗಳು ಇಂದು ಫಲಿಸಿದವು. ಉತ್ತಮೋತ್ತಮವಾದ ಮುನಿರಾಜನೆಂಬ

ಖ್ಯಾತಿಯು ಈಗ ತಾನೇ ನನಗೆ ದೊರೆತಂತಾಯಿತ್ತು. ಈ ಭುವನತ್ರಯಗಳಲ್ಲಿ ನನಗೆ ಸಮಾನರಾದವರು ಇನ್ನು ಮೇಲೆ ಯಾರೂ ಇರುವುದಿಲ್ಲ. ಏಕೆಂದರೆ ನಿನ್ನ ಮುಖಾರವಿಂದದಿಂದ ಹೊರಹೊರಟ ಶಿವಾದ್ವೈತ ರೂಪವಾದ ಈ ಶ್ರೇಷ್ಠವಾದ ಶಾಸ್ತ್ರವನ್ನು ಕೇಳಲು ನನ್ನ ಹೊರತಾಗಿ ಬೇರಾರಿಗೂ ಪವಿತ್ರವಾದ ತಪಸ್ಸು ಇರುವುದಿಲ್ಲ. ನಾನು ಮಾಡಿದ ತಪಸ್ಸಿನ ಫಲವೂ, ಶಿವನ ಅನುಗ್ರಹವೂ ಒಂದುಗೂಡಿರುವುದರಿಂದ ನನ್ನನ್ನು ಉಪದೇಶದಿಂದ ಕೃತಾರ್ಥನನ್ನಾಗಿ ಮಾಡುವುದಕ್ಕಾಗಿ ಮಹಾಮಹಿಮರಾದ ತಾವು ಇಲ್ಲಿಗೆ ದಯಮಾಡಿಸಿದ್ದೀರಿ (ಈ ರೀತಿಯಾಗಿ ಅಗಸ್ತ್ಯನು ಶ್ರೀ ರೇಣುಕ ಭಗವತ್ಪಾದರನ್ನು ಸ್ತುತಿಸಿದನು).

**॥ ಶ್ರೀ ರೇಣುಕ ಉವಾಚ ॥**

**ಇತಿ ಸ್ತುವಂತಂ ವಿನಯಾದ್**
**ಅಗಸ್ತ್ಯಂ ಮುನಿಪುಂಗವಮ್ ।**
**ಆಲೋಕ್ಯ ಕರುಣಾದೃಷ್ಟ್ಯಾ**
**ಬಭಾಷೇ ಸ ಗಣೇಶ್ವರಃ ॥ 20–80**

**ಅಗಸ್ತ್ಯ ಮುನಿಶಾರ್ದೂಲ**
**ತಪಸ್ಸಿದ್ಧಮನೋರಥ ।**
**ತ್ವಾಂ ವಿನಾ ಶಿವಶಾಸ್ತ್ರಸ್ಯ**
**ಕಃ ಶ್ರೋತುಮಧಿಕಾರವಾನ್ ॥ 20–81**

**ಪಾತ್ರಂ ಶಿವಪ್ರಸಾದಸ್ಯ**
**ಭವಾನೇಕೋ ನ ಚಾಪರಃ ।**
**ಇತಿ ನಿಶ್ಚಿತ್ಯ ಕಥಿತಮ್**
**ಮಯಾ ತೇ ತಂತ್ರಮೀದೃಶಮ್ ॥ 20–82**
**ಸ್ಥಾಪ್ಯತಾಂ ಸರ್ವಲೋಕೇಷು**
**ತಂತ್ರಮೇತತ್ ತ್ವಯಾ ಮುನೇ ।**
**ಈದೃಶಂ ಶಿವಬೋಧಸ್ಯ**
**ಸಾಧನಂ ನಾಸ್ತಿ ಕುತ್ರಚಿತ್ ॥ 20–83**

**ರಹಸ್ಯಮೇತತ್ ಸರ್ವಜ್ಞಃ**
**ಸರ್ವಾನುಗ್ರಾಹಕಃ ಶಿವಃ ।**
**ಅವಾದೀತ್ ಸರ್ವಲೋಕಾನಾಮ್**
**ಸಿದ್ಧಯೇ ಪಾರ್ವತೀಪತಿಃ ॥ 20–84**

**ತದಿದಂ ಶಿವಸಿದ್ಧಾಂತ–**
**ಸಾರಾಣಾಮುತ್ತಮೋತ್ತಮಮ್ ।**
**ವೇದವೇದಾಂತಸರ್ವಸ್ವಮ್**
**ವಿದ್ಯಾಚಾರಪ್ರವರ್ತಕಮ್ ॥ 20–85**

**ವೀರಮಾಹೇಶ್ವರಗ್ರಾಹ್ಯಮ್**

**ಶಿವಾದ್ವೈತಪ್ರಕಾಶಕಮ್ ।**
**ಪರೀಕ್ಷಿತೇಭ್ಯೋ ದಾತವ್ಯಮ್**
**ಶಿಷ್ಯೇಭ್ಯೋ ನಾನ್ಯಥಾ ಕ್ವಚಿತ್ ॥ 20–86**

**ಏತಚ್ಛ್ರವಣಮಾತ್ರೇಣ**
**ಸರ್ವೇಷಾಂ ಪಾಪಸಂಕ್ಷಯಃ ।**
**ಅವತೀರ್ಣಂ ಮಯಾ ಭೂಮೌ**
**ಶಾಸ್ತ್ರಸ್ಯಾಸ್ಯ ಪ್ರವೃತ್ತಯೇ ।**
**ಪ್ರವರ್ತಯ ಶಿವಾದ್ವೈತಮ್**
**ತ್ವಮಪಿ ಜ್ಞಾನಮೀದೃಶಮ್ ॥ 20–87**

ಈ ರೀತಿಯಾಗಿ ವಿನಯಪೂರ್ವಕವಾಗಿ ಸ್ತುತಿಸುತ್ತಿರುವ ಮುನಿಪುಂಗವನಾದ ಅಗಸ್ತ್ಯನನ್ನು ತಮ್ಮ ಕರುಣಾಮಯ ದೃಷ್ಟಿಯಿಂದ ನೋಡುತ್ತಾ ಗಣಶ್ರೇಷ್ಠನಾದ ಆ ರೇಣುಕ ಗಣೇಶ್ವರನು ಈ ರೀತಿಯಾಗಿ ಹೇಳತೊಡಗಿದನು. ಮುನಿಗಳಲ್ಲಿ ಅಗ್ರಗಣ್ಯನಾದ, ತಪಸ್ಸಿನಿಂದ ಮನೋರಥವನ್ನು ಪೂರ್ಣಮಾಡಿಕೊಂಡಿರುವ ಎಲೈ ಅಗಸ್ತ್ಯ ಮಹರ್ಷಿಯೇ, ಈ ಶಿವಾದ್ವೈತ ಶಾಸ್ತ್ರವನ್ನು ಶ್ರವಣ ಮಾಡಲು ನಿನ್ನ ಹೊರತಾಗಿ ಬೇರೆ ಯಾರಿಗೆ ಅಧಿಕಾರವಿದೆ? ಈ ಭೂಲೋಕದಲ್ಲಿ ಶಿವಪ್ರಸಾದಕ್ಕೆ ಪಾತ್ರನಾದವನು ನೀನೊರ್ವನೆ ಇರುವೆಯೇ ವಿನಃ ಬೇರಾರೂ ಇಲ್ಲ ಎಂಬುದನ್ನು ನಿಶ್ಚಯಿಸಿಕೊಂಡೇ ನಿನಗೆ ಈ ತಂತ್ರ ಶಾಸ್ತ್ರವನ್ನು (ವೀರಶೈವ ಸಿದ್ಧಾಂತವನ್ನು) ಉಪದೇಶಿಸಿದ್ದೇನೆ. ಶಿವನ ಯಥಾರ್ಥ ಸ್ವರೂಪವನ್ನು ತಿಳಿದುಕೊಳ್ಳುವುದಕ್ಕೆ ಈ ತಂತ್ರ ಸಿದ್ಧಾಂತಕ್ಕಿಂತಲೂ ಅನ್ಯವಾದ ಬೇರೊಂದು ಸ್ಥಾನವಿಲ್ಲ. ಆದ್ದರಿಂದ ಹೇ ಮುನಿಯೇ, ನೀನೂ ಸಹ ಎಲ್ಲೆಡೆಯಲ್ಲಿ ಈ ತಂತ್ರವನ್ನು ಸ್ಥಾಪಿಸುವಂತಹವನಾಗು (ಪ್ರಸಾರಗೊಳಿಸುವವನಾಗು). ಈ ರಹಸ್ಯವಾದ ಶಾಸ್ತ್ರವನ್ನು ಸರ್ವಜ್ಞನೂ, ಸರ್ವರನ್ನು ಅನುಗ್ರಹಿಸುವವನೂ, ಪಾರ್ವತಿಯ ಪತಿಯೂ ಆದ ಶಿವನು ಸರ್ವಜನರ ಕಲ್ಯಾಣಸಿದ್ಧಿಗಾಗಿ ಇದನ್ನು ಉಪದೇಶಿಸಿದ್ದಾನೆ. ಶಿವನು ಉಪದೇಶಿಸಿದ ಈ ಶಾಸ್ತ್ರವು 28 ಸಿದ್ಧಾಂತಾಗಮಗಳ ಸಾರರೂಪವಾಗಿರುತ್ತದೆ. ಸರ್ವೋತ್ಕೃಷ್ಟವೂ ಆಗಿದೆ. ಇದು ವೇದ ಮತ್ತು ಉಪನಿಷತ್ತುಗಳ ಸಾರಸರ್ವಸ್ವವೂ ಸಹ ಆಗಿದೆ. ಅದರಂತೆ ಜ್ಞಾನ ಮತ್ತು ಆಚಾರಗಳನ್ನು ಬೋಧಿಸುವಂತಹುದು ಆಗಿದೆ. ವೀರಮಾಹೇಶ್ವರರಿಂದ ಗ್ರಹಿಸಲು ಯೋಗ್ಯವಾದ ಮತ್ತು ಶಿವಾದ್ವೈತ ಪ್ರತಿಪಾದಕವಾದ ಈ ಶಾಸ್ತ್ರವನ್ನು ಪರೀಕ್ಷೆಗೆ ಒಳಗಾದ ಶಿಷ್ಯರಿಗೇ ಕೊಡಬೇಕೇ ವಿನಃ ಬೇರೆಯವರಿಗೆ ಯಾರಿಗೂ ಕೊಡಕೂಡದು. ಈ ಶಿವಾದ್ವೈತ ಶಾಸ್ತ್ರದ ಶ್ರವಣ ಮಾತ್ರದಿಂದಲೇ ಎಲ್ಲ ಜೀವಿಗಳ ಪಾಪಗಳು ಕ್ಷಯಿಸಿ ಹೋಗುವುವು. ಈ ಶಾಸ್ತ್ರವನ್ನು ಭೂಲೋಕದಲ್ಲಿ ಪ್ರವರ್ತಿಸುವುದಕ್ಕಾಗಿಯೇ (ಸ್ಥಾಪಿಸುವುದಕ್ಕಾಗಿಯೇ), ಈ ಭೂಲೋಕದಲ್ಲಿ ನಾನು ಅವತರಿಸಿದ್ದೇನೆ. ಹೇ ಅಗಸ್ತ್ಯನೇ, ನೀನು ಕೂಡ ಇಂತಹ ದಿವ್ಯವಾದ ಶಿವಾದ್ವೈತ ಜ್ಞಾನವನ್ನು ಎಲ್ಲೆಡೆಯಲ್ಲಿ ಪ್ರಚಾರವನ್ನು ಮಾಡು.

***ಇತಿ ಶಿವೈಕ್ಯಸ್ಥಲಂ*** *ಇಲ್ಲಿಗೆ ಶಿವೈಕ್ಯಸ್ಥಲವು ಮುಗಿಯಿತು.*

***ಓಂ ತತ್ಸತ್ ಇತಿ***

***ಶ್ರೀ ಶಿವಗೀತೇಷು ಸಿದ್ಧಾಂತಾಗಮೇಷು ಶಿವಾದ್ವೈತವಿದ್ಯಾಯಾಂ ಶಿವಯೋಗಶಾಸ್ತ್ರೇ ಶ್ರೀರೇಣುಕಾಗಸ್ತ್ಯಸಂವಾದೇ ವೀರಶೈವಧರ್ಮನಿರ್ಣಯೇ ಶ್ರೀಶಿವಯೋಗಿ ಶಿವಾಚಾರ್ಯವಿರಚಿತೇ ಶ್ರೀಸಿದ್ಧಾಂತಶಿಖಾಮಣೌ ಲಿಂಗಸ್ಥಲಾಂತರ್ಗತ ಐಕ್ಯಸ್ಥಲೇ ಸ್ವೀಕೃತಪ್ರಸಾದಿಸ್ಥಲಾದಿನವವಿಧಸ್ಥಲಪ್ರಸಂಗೋ ನಾಮ ವಿಂಶತಿತಮಪರಿಚ್ಛೇದಃ॥***

*ಓಂ ತತ್ಸತ್ ಇಲ್ಲಿಗೆ ಶ್ರೀ ಶಿವನಿಂದ ಉಪದೇಶಿಸಲ್ಪಟ್ಟ ಶ್ರೀಸಿದ್ಧಾಂತಾಗಮಗಳಲ್ಲಿಯ ಶಿವಾದ್ವೈತವಿದ್ಯಾರೂಪವೂ, ಶಿವಯೋಗಶಾಸ್ತ್ರವೂ, ಶ್ರೀರೇಣುಕಾಗಸ್ತ್ಯಸಂವಾದರೂಪವೂ, ಶ್ರೀವೀರಶೈವಧರ್ಮನಿರ್ಣಯವೂ, ಶ್ರೀಶಿವಯೋಗಿಶಿವಾಚಾರ್ಯವಿರಚಿತವೂ ಆದ ಶ್ರೀ ಸಿದ್ಧಾಂತ ಶಿಖಾಮಣಿಯಲ್ಲಿ ಲಿಂಗಸ್ಥಲಾಂತರ್ಗತ ಐಕ್ಯಸ್ಥಲದಲ್ಲಿಯ ಸ್ವೀಕೃತಪ್ರಸಾದಿಸ್ಥಲಾದಿ ಒಂಭತ್ತು ವಿಧ ಸ್ಥಲಪ್ರಸಂಗವೆಂಬ ಹೆಸರಿನ ಇಪ್ಪತ್ತನೆಯ ಪರಿಚ್ಛೇದವು ಮುಗಿದುದು.*

## ಏಕವಿಂಶಃ ಪರಿಚ್ಛೇದಃ

ಇಪ್ಪತ್ತೊಂದನೆಯ ಪರಿಚ್ಛೇದವು

**(55 ಶ್ಲೋಕಗಳು)**

## ವಿಭೀಷಣಾಭೀಷ್ಟಪ್ರದಾನಮ್

ವಿಭೀಷಣಾಭೀಷ್ಟ ಪ್ರದಾನವು

**(55 ಶ್ಲೋಕಗಳು)**

**ಇತ್ಯುಕ್ತ್ವಾ ಪಶ್ಯತಸ್ತಸ್ಯ**
**ಪುರಸ್ತಾದೇವ ರೇಣುಕಃ ।**
**ಅಂತರ್ದಧೇ ಮಹಾದೇವಮ್**
**ಚಿಂತಯನ್ನಂತರಾತ್ಮನಾ ॥ 21–1**

ಈ ರೀತಿಯಾಗಿ ಅಗಸ್ತ್ಯನಿಗೆ ಉಪದೇಶ ಮಾಡಿದ ಶ್ರೀರೇಣುಕನು ಮಹಾದೇವನನ್ನು ತನ್ನ ಮನಸ್ಸಿನಿಂದ ಚಿಂತಿಸುತ್ತಾ ಅವನು ನೋಡುತ್ತಿರುವಾಗಲೇ ಎಲ್ಲರ ಎದುರಿಗೆ ಅಂತರ್ಧಾನನಾದನು.

**ಅಂತರ್ಹಿತೇ ತದಾ ತಸ್ಮಿನ್**
**ಮುನಿರಾಶ್ಚರ್ಯಸಂಕುಲಃ ।**
**ತಚ್ಛಾಸ್ತ್ರಪ್ರವಣೋ ಭೂತ್ವಾ**
**ಸಮವರ್ತತ ಸಂಯಮೀ ॥ 21–2**

ಹೀಗೆ ಶ್ರೀ ರೇಣುಕ ಗಣೇಶ್ವರನು ಅಂತರ್ಧಾನಗೊಳ್ಳಲು ಸಂಯಮಿಯಾದ ಅಗಸ್ತ್ಯಮುನಿಯು ಆಶ್ಚರ್ಯಗೊಂಡ ಬಳಿಕ ಗಣೇಶ್ವರನಿಂದ ಉದ್ದಿಷ್ಟವಾದ (ಉಪದೇಶಿಸಲ್ಪಟ್ಟು) ಶಾಸ್ತ್ರದ ಅನುಷ್ಠಾನದಲ್ಲಿ ಆಸಕ್ತಿಯುಳ್ಳವನಾದನು.

**ಯ ಇದಂ ಶಿವಸಿದ್ಧಾಂತಮ್**
**ವೀರಶೈವಮತಂ ಪರಮ್ ।**
**ಶೃಣೋತಿ ಶುದ್ಧಮನಸಾ**
**ಸ ಯಾತಿ ಪರಮಾಂ ಗತಿಮ್ ॥ 21–3**

ಸರ್ವೋತ್ಕೃಷ್ಟವಾದ ವೀರಶೈವ ಮತದ ಈ ಶಿವಸಿದ್ಧಾಂತ ಶಾಸ್ತ್ರವನ್ನು ಯಾರು ಶುದ್ಧವಾದ ಮನಸ್ಸಿನಿಂದ ಶ್ರವಣ ಮಾಡುವರೋ ಅವರು ಪರಮಗತಿಯನ್ನು (ಲಿಂಗಾಂಗ ಸಾಮರಸ್ಯವನ್ನು) ಪಡೆಯುತ್ತಾರೆ.

**ಸ್ವಚ್ಛಂದಾಚಾರರಸಿಕಃ**
**ಸ್ವೇಚ್ಛಾನಿರ್ಮಿತವಿಗ್ರಹಃ ।**
**ಆಸಸಾದ ಪುರೀಂ ಲಂಕಾಮ್**
**ರೇಣುಕೋ ಗಣನಾಯಕಃ ॥ 21–4**

ತನ್ನ ಇಚ್ಛೆಯಂತೆ ದೇಹಗಳನ್ನು ನಿರ್ಮಿಸಿಕೊಳ್ಳಬಲ್ಲ, ಸ್ವಚ್ಛಂದವಾಗಿ ಸಂಚರಿಸುವಲ್ಲಿ ಪ್ರೀತಿಯುಳ್ಳ, ಎಲ್ಲ ಗಣರಿಗೆ ನಾಯಕನಾದ ಶ್ರೀರೇಣುಕನು ಲಂಕಾಪಟ್ಟಣಕ್ಕೆ ಬಂದವನಾದನು.

**ತಮಾಗತಂ ಮಹಾಭಾಗಮ್**
**ಸರ್ವಾಗಮವಿಶಾರದಮ್ ।**
**ವಿಭೀಷಣಃ ಸಮಾಲೋಕ್ಯ**
**ಗೇಹಂ ಪ್ರಾವೇಶಯನ್ನಿಜಮ್ ॥ 21–5**

ಸಕಲ ಆಗಮಗಳ ವಿಶಾರದನೂ, ಮಹನೀಯನೂ ಆದ ಆ ಆಗಮಿಸಿದ ಗಣೇಂದ್ರನನ್ನು ವಿಭೀಷಣನು ನೋಡಿ ತನ್ನ ಅರಮನೆಗೆ ಕರೆದುಕೊಂಡು ಹೋದನು.

**ಭದ್ರಾಸನೇ ನಿಜೇ ರಮ್ಯೇ**
**ನಿವೇಶ್ಯ ಗಣನಾಯಕಮ್ ।**
**ಅರ್ಘ್ಯಪಾದ್ಯಾದಿಭಿಃ ಸರ್ವೈಃ**
**ಉಪಚಾರೈರಪೂಜಯತ್ ॥ 21–6**

ಆ ಗಣಶ್ರೇಷ್ಠನನ್ನು ತನ್ನ ರಮ್ಯವಾದ ಮಂಗಲಮಯ ಆಸನದ ಮೇಲೆ (ಸಿಂಹಾಸನದ ಮೇಲೆ) ಕುಳ್ಳಿರಿಸಿ ಅರ್ಘ್ಯ ಪಾದ್ಯಾದಿಗಳಿಂದ ಮತ್ತು ಉಳಿದೆಲ್ಲ ಉಪಚಾರಗಳಿಂದ ಆತನ ಪೂಜೆಯನ್ನು ಮಾಡಿದನು.

**ಪೂಜಿತೇನ ಪ್ರಸನ್ನೇನ**
**ರೇಣುಕೇನ ನಿರೂಪಿತಃ ।**
**ನಿಷಸಾದ ತದಭ್ಯಾಸೇ**
**ಸ ನಿಜಾಸನಮಾಶ್ರಿತಃ ॥ 21–7**

ಹೀಗೆ ಪೂಜೆಗೊಳ್ಳಲ್ಪಟ್ಟ ಪ್ರಸನ್ನನಾದ ಶ್ರೀರೇಣುಕನಿಂದ ಆದೇಶಿಸಲ್ಪಟ್ಟ ವಿಭೀಷಣನು ಅವನ ಸಮೀಪದಲ್ಲಿ ತನ್ನ ಆಸನವನ್ನು ಆಶ್ರಯಿಸಿದವನಾಗಿ ಕುಳಿತುಕೊಂಡನು.

**ಆಬಭಾಷೇ ಗಣೇಂದ್ರಂ ತಮ್**
**ಕೃತಾಂಜಲಿರ್ವಿಭೀಷಣಃ ।**
**ಮಾನುಷಾಕಾರಸಂಪನ್ನಮ್**
**ಸಾಕ್ಷಾಚ್ಛಿವಮಿವಾಪರಮ್ ॥ 21–8**

ಮನುಷ್ಯ ಆಕಾರದಿಂದ ಬಂದಿರುವ, ಸಾಕ್ಷಾತ್ ಶಿವನಂತಿರುವ ಆ ರೇಣುಕ ಗಣೇಶ್ವರನನ್ನು ಕುರಿತು ವಿಭೀಷಣನು ಕೈಮುಗಿದು ಈ ರೀತಿಯಾಗಿ ಬಿನ್ನವಿಸಿಕೊಂಡನು.

**ರೇಣುಕ ತ್ವಂ ಗಣಾಧೀಶ**
**ಶಿವಜ್ಞಾನಪರಾಯಣ ।**
**ಅವತೀರ್ಣಂ ಮಹೀಮೇನಾಮ್**
**ಇತಿ ಸಮ್ಯಕ್ ಶ್ರುತಂ ಮಯಾ ॥ 21–9**

ಶಿವಜ್ಞಾನ ಪರಾಯಣನಾದ ಹೇ ರೇಣುಕ ಗಣೇಶ್ವರನೇ, ನೀನು ಭೂಲೋಕದಲ್ಲಿ ಅವತರಿಸಿರುವೆ ಎಂಬುದನ್ನು ಈ ಮೊದಲೇ ನಾನು ಕೇಳಿದವನಾಗಿದ್ದೇನೆ.

**ಮದ್ಭಾಗ್ಯಗೌರವಾದದ್ಯ**
**ಸಮಾಯಾಸ್ತ್ವಂ ಪುರೀಮಿಮಾಮ್ ।**
**ಕಥಂ ಭಾಗ್ಯವಿಹೀನಾನಾಮ್**
**ಸುಲಭಾಃ ಸ್ಯುರ್ಭವಾದೃಶಾಃ ॥ 21–10**

ಈಗ ನನ್ನ ಭಾಗ್ಯದಿಂದ, ಪುಣ್ಯ ವಿಶೇಷದಿಂದ ಇಂದು ನೀನು ನನ್ನ ಪಟ್ಟಣಕ್ಕೆ ದಯಮಾಡಿಸಿರುವೆ. ನಿಮ್ಮಂತಹ ಮಹನೀಯರು ಭಾಗ್ಯಹೀನರಾದ ಜನರಿಗೆ ಹೇಗೆ ತಾನೇ ಸುಲಭವಾಗಿ ದೊರೆತಾರು?

**ಮತ್ಸಮೋ ನಾಸ್ತಿ ಲೋಕೇಷು**
**ಭಾಗ್ಯಾತಿಶಯವತ್ತಯಾ ।**
**ಯಸ್ಯ ಗೇಹಂ ಸ್ವಯಂ ಪ್ರಾಪ್ತೋ**
**ಭವಾನ್ ಸಾಕ್ಷಾನ್ಮಹೇಶ್ವರಃ ॥ 21–11**

ಸಾಕ್ಷಾತ್ ಮಹೇಶ್ವರನಂತಿರುವ ತಾವು ಯಾವ ನನ್ನ ಅರಮನೆಗೆ ನೀವಾಗಿಯೇ ಬಂದಿರುವಿರೋ ಅಂತಹ ನನಗೆ ಸಮಾನವಾದ ಭಾಗ್ಯಶಾಲಿಯು ಈ ಲೋಕದಲ್ಲಿ ಯಾರೂ ಇಲ್ಲ?

**ಕೃತಾರ್ಥಾ ಮೇ ಪುರೀ ಹ್ಯೇಷಾ**
**ಕೃತಾರ್ಥೋ ರಾಕ್ಷಸಾನ್ವಯಃ ।**
**ಜೀವಿತಂ ಚ ಕೃತಾರ್ಥಂ ಮೇ**
**ಯಸ್ಯ ತ್ವಂ ದೃಷ್ಟಿಗೋಚರಃ ॥ 21–12**

ನನಗೆ ತಾವು ದೃಷ್ಟಿಗೋಚರವಾಗಿದ್ದರಿಂದ (ದರ್ಶನವಿತ್ತಿದ್ದರಿಂದ) ನನ್ನ ಈ ಪಟ್ಟಣವು ಕೃತಾರ್ಥವಾಯಿತು. ಅದರಂತೆ ನನ್ನ ರಾಕ್ಷಸ ವಂಶವೂ ಕೂಡ ಧನ್ಯವಾಯಿತು ಮತ್ತು ನನ್ನ ಜೀವನವು ಕೂಡ ಸಫಲವಾಯಿತು.

**ಇತಿ ಬ್ರುವಾಣಂ ಕಲ್ಯಾಣಮ್**
**ರಾಕ್ಷಸೇಂದ್ರಂ ಗಣೇಶ್ವರಃ ।**
**ಬಭಾಷೇ ಸಸ್ಮಿತೋ ವಾಣೀಮ್**
**ವಿಶ್ವೋಲ್ಲಾಸಕರೀಂ ಶುಭಾಮ್ ॥ 21–13**

ಈ ರೀತಿಯಾಗಿ ಹೇಳುತ್ತಿರುವ ಮಂಗಲ ಸ್ವರೂಪವಾದ ರಾಕ್ಷಸೇಂದ್ರನಾದ ವಿಭೀಷಣನನ್ನು ಕುರಿತು ಶ್ರೀ ರೇಣುಕಗಣೇಶ್ವರನು ವಿಶ್ವಕ್ಕೆಲ್ಲಾ ಆನಂದವನ್ನುಂಟು ಮಾಡುವ ಮುಗುಳ್ನಗೆಯಿಂದ ಕೂಡಿದ ಶುಭಕರವಾದ ವಾಣಿಯಿಂದ ಈ ರೀತಿಯಾಗಿ ಹೇಳತೊಡಗಿದನು.

**ವಿಭೀಷಣ ಮಹಾಭಾಗ**
**ಜಾನೇ ತ್ವಾಂ ಧರ್ಮಕೋವಿದಮ್ ।**
**ತ್ವಾಂ ವಿನಾ ಕಸ್ಯ ಲೋಕೇಷು**
**ಜಾಯತೇ ಭಕ್ತಿರೀದೃಶೀ ॥ 21–14**

ಮಹಾ ಭಾಗ್ಯಶಾಲಿಯಾದ ವಿಭೀಷಣನೇ, ನೀನು ಧರ್ಮಕೋವಿದನೆಂಬುದನ್ನು ನಾನು ತಿಳಿದಿರುವೆನು. ನಿನ್ನ ಹೊರತಾಗಿ ಈ ಲೋಕದಲ್ಲಿ ಇಂತಹ ಭಕ್ತಿಯು ಯಾರಲ್ಲಿ ತಾನೇ ಉಂಟಾದೀತು?

**ಸಮಸ್ತಶಾಸ್ತ್ರಸಾರಜ್ಞಮ್**
**ಸರ್ವಧರ್ಮಪರಾಯಣಮ್ ।**
**ಅಧ್ಯಾತ್ಮವಿದ್ಯಾನಿರತಮ್**
**ಆಹುಸ್ತ್ವಾಂ ರಾಕ್ಷಸೇಶ್ವರ ॥ 21–15**

ಹೇ ರಾಕ್ಷಸೇಶ್ವರನಾದ ವಿಭೀಷಣನೇ, ನೀನು ಎಲ್ಲ ಶಾಸ್ತ್ರಗಳ ಸಾರವನ್ನು ಬಲ್ಲವನೆಂತಲೂ, ಸರ್ವಧರ್ಮ ಪರಾಯಣನೆಂತಲೂ ಮತ್ತು ಆಧ್ಯಾತ್ಮ ವಿದ್ಯೆಯಲ್ಲಿ ನಿಷ್ಠೆಯುಳ್ಳವನೆಂತಲೂ ಎಲ್ಲ ಜನರೂ ಹೇಳುತ್ತಿರುವರು.

**ತ್ವದೀಯಧರ್ಮಸಂಪತ್ತಿಮ್**
**ಶ್ರುತ್ವಾಽಹಂ ವಿಸ್ಮಿತಾಶಯಃ ।**
**ವ್ರಜನ್ ಕೈಲಾಸಮಚಲಮ್**
**ತ್ವದಂತಿಕಮುಪಾಗತಃ ॥ 21–16**

ಆದ್ದರಿಂದ ಕೈಲಾಸಕ್ಕೆ ಹೋಗುತ್ತಿದ್ದ ನಾನು ನಿನ್ನ ಧರ್ಮನಿಷ್ಠೆಯನ್ನು ಕೇಳಿ ವಿಸ್ಮಿತನಾಗಿ ನಿನ್ನ ಸಮೀಪಕ್ಕೆ ಬಂದಿರುವೆನು.

**ಪ್ರೀತೋಽಸ್ಮಿ ತವ ಚಾರಿತ್ರೈಃ**
**ಶೋಭನೈರ್ಲೋಕವಿಶ್ರುತೈಃ ।**
**ದಾಸ್ಯಾಮಿ ತೇ ವರಂ ಸಾಕ್ಷಾತ್**
**ಪ್ರಾರ್ಥಯಸ್ವ ಯಥೇಪ್ಸಿತಮ್ ॥ 21–17**

ಜಗತ್‌ಪ್ರಸಿದ್ಧವೂ, ಮಂಗಳಕರವೂ ಆದ ನಿನ್ನ ನಡತೆಗಳಿಂದ, ನಿನ್ನ ಉತ್ತಮವಾದ ಆಚರಣೆಗಳಿಂದ ನಾನು ಸಂತುಷ್ಟನಾಗಿದ್ದೇನೆ. ಅಂತೆಯೇ ನಿನಗೆ ಅಪೇಕ್ಷಿತವಾದ ಇಷ್ಟಾರ್ಥವನ್ನು ಬೇಡಿಕೋ, ಅದನ್ನು ನಾನು ನಿನಗೆ ಕೊಡುತ್ತೇನೆ.

**ಇತಿ ಪ್ರಸಾದಸುಮುಖೇ**
**ಭಾಷಮಾಣೇ ಗಣೇಶ್ವರೇ ।**
**ಪ್ರಣಮ್ಯ ಪರಯಾ ಪ್ರೀತ್ಯಾ**
**ವ್ಯಾಜಹಾರ ವಿಭೀಷಣಃ ॥ 21–18**

ಹೀಗೆ ಶ್ರೀ ರೇಣುಕ ಗಣೇಶ್ವರನು ಪ್ರಸನ್ನ ಮುಖಮಂಡಲವುಳ್ಳವನಾಗಿ ನುಡಿಯಲು ವಿಭೀಷಣನು ಅತ್ಯಂತ ಪ್ರೀತಿಯಿಂದ ನಮಸ್ಕರಿಸಿ ಹೀಗೆ ನುಡಿದನು.

**ಆಗಮಾನುಗ್ರಹಾದೇವ**
**ಭವತಃ ಶಿವಯೋಗಿನಃ ।**
**ದುರ್ಲಭಾಃ ಸರ್ವಲೋಕಾನಾಮ್**
**ಸಮಪದ್ಯಂತ ಸಂಪದಃ ॥ 21–19**

ಹೇ ಗಣಶ್ರೇಷ್ಠನೇ, ಶಿವಯೋಗಿಯಾದ ತಮ್ಮ ಅಗಮನ ರೂಪವಾದ ಅನುಗ್ರಹದಿಂದಲೇ ಎಲ್ಲ ಜನರಿಗೆ ದುರ್ಲಭಗಳಾದ
ಸಂಪತ್ತುಗಳೆಲ್ಲಾ
ದೊರೆಯುವುವು.

**ತಥಾಪಿ ಪ್ರಾರ್ಥನೀಯಂ ಮೇ**
**ಕಿಂಚಿದಸ್ತಿ ಗಣೇಶ್ವರ ।**
**ಸುಕೃತೇ ಪರಿಪಕ್ವೇ ಹಿ**
**ಸ್ವಯಂ ಸಿಧ್ಯತಿ ವಾಂಛಿತಮ್ ॥ 21–20**

ಹೇ ಗಣೇಶ್ವರನೇ, ಆದರೂ ಸಹ ನಾನು ಬೇಡಿಕೊಳ್ಳುವುದು ಸ್ವಲ್ಪ ಇರುವುದು. ಸುಕೃತಗಳು (ಪುಣ್ಯಗಳು) ಪರಿಪಕ್ವವಾದಾಗಲೇನೇ ಅಪೇಕ್ಷಿತವಾದದ್ದು ತಾನಾಗಿಯೇ ಸಿದ್ಧಿಯಾಗುವುದು (**'ಸುಕೃತೇ ಪರಿಪಕ್ವೇ ಹಿ ಸ್ವಯಮ್ ಸಿಧ್ಯತಿ ವಾಂಛಿತಮ್'**).

**ರಾವಣೋ ಹಿ ಮಮ ಭ್ರಾತಾ**
**ಮಾಹೇಶ್ವರಶಿಖಾಮಣಿಃ ।**
**ಅದೃಷ್ಟಶತ್ರುಸಂಬಾಧಮ್**

**ಶಶಾಸ ಹಿ ಜಗತ್ತ್ರಯಮ್ ॥ 21–21**

ನನ್ನ ಅಣ್ಣನಾದ ರಾವಣನು ಮಾಹೇಶ್ವರ (ಶಿವಭಕ್ತ) ಶಿರೋಮಣಿಯಾಗಿದ್ದನು. ಅವನು ಯಾವನೊಬ್ಬ ಶತ್ರುವಿನ ಬಾಧೆಯಿಲ್ಲದ ಹಾಗೆ ಈ ಮೂರು ಲೋಕವನ್ನು ಪರಿಪಾಲಿಸುತ್ತಿದ್ದನು.

**ಯಸ್ಯ ಪ್ರತಾಪಮತುಲಮ್**
**ಸೋಢುಮಕ್ಷತಶಕ್ತಯಃ ।**
**ಇಂದ್ರಾದಯಃ ಸುರಾಃ ಸರ್ವೇ**
**ರಾಜ್ಯಲಕ್ಷ್ಮ್ಯಾ ವಿಯೋಜಿತಾಃ ॥ 21–22**

ಆ ರಾವಣೇಶ್ವರನ ಅತುಲನೀಯವಾದ ಪರಾಕ್ರಮವನ್ನು ಸಹಿಸಲು ಅಸಮರ್ಥರಾದ ಇಂದ್ರಾದಿ ದೇವತೆಗಳೆಲ್ಲರೂ, ತಮ್ಮ ರಾಜ್ಯಲಕ್ಷ್ಮಿಯನ್ನು ಕಳೆದುಕೊಂಡವರಾದರು.

**ಸ ತು ಕಾಲವಶೇನೈವ**
**ಸ್ವಚರಿತ್ರವಿಪರ್ಯಯಾತ್ ।**
**ರಣೇ ವಿಷ್ಣ್ವವತಾರೇಣ**
**ರಾಮೇಣ ನಿಹತೋಽಭವತ್ ॥ 21–23**

ಅಂತಹ ರಾವಣೇಶ್ವರನು ತನ್ನ ಕಾಲಕರ್ಮವಶದಿಂದ ತನ್ನ ಚಾರಿತ್ರ್ಯದಲ್ಲಿ ವಿಪರ್ಯಾಸವುಂಟಾಗಲು ಯುದ್ಧದಲ್ಲಿ ವಿಷ್ಣುವಿನ ಅವತಾರಿಯಾದ ರಾಮನಿಂದ ಕೊಲ್ಲಲ್ಪಟ್ಟನು.

**ಸ ತು ರಾಮಶರಾವಿದ್ಧಃ**
**ಕಂಠಸ್ಖಲಿತಜೀವಿತಃ ।**
**ಅವಶಿಷ್ಟಂ ಸಮಾಲೋಕ್ಯ**
**ಮಾಮವಾದೀತ್ಸುದುಃಖಿತಃ ॥ 21–24**

ಯುದ್ಧದಲ್ಲಿ ಅವನು ರಾಮನ ಬಾಣಗಳಿಂದ ಪೆಟ್ಟು ತಿಂದವನಾಗಿ ಪ್ರಾಣವು ಕಂಠಗತವಾದಾಗ ರಾಕ್ಷಸ ವಂಶದಲ್ಲಿ ಉಳಿದಿರುವ ನನ್ನನ್ನು ನೋಡಿ ಅತ್ಯಂತ ದುಃಖಿತನಾಗಿ ನನಗೆ ಹೀಗೆ ನುಡಿದನು.

**ವಿಭೀಷಣ ವಿಶೇಷಜ್ಞ**
**ಮಹಾಬುದ್ಧೇ ಸುಧಾರ್ಮಿಕ ।**
**ಅವಶಿಷ್ಟೋಽಸಿ ವಂಶಸ್ಯ**
**ರಕ್ಷಸಾಂ ಭಾಗ್ಯಗೌರವಾತ್ ॥ 21–25**

ಧರ್ಮತತ್ಪರನೂ, ಮಹಾಬುದ್ಧಿಶಾಲಿಯೂ, ವಿವೇಕಿಯೂ ಆದ ಎಲೈ ವಿಭೀಷಣನೇ, ರಾಕ್ಷಸ ವಂಶದ ಭಾಗ್ಯದಿಂದಾಗಿ ನೀನೊಬ್ಬನೇ ಜೀವಂತವಾಗಿ ಉಳಿದಿರುವೆ.

**ವಯಮಜ್ಞಾನಸಂಪನ್ನಾ**
**ಮಹತ್ಸು ದ್ರೋಹಕಾರಿಣಃ ।**
**ಈದೃಶೀಂ ತು ಗತಿಂ ಪ್ರಾಪ್ತಾ**
**ದುಸ್ತರಾ ಹಿ ವಿಧಿಸ್ಥಿತಿಃ ॥ 21–26**

ಅಜ್ಞಾನಿಗಳಾದ ನಾವು ಮಹಾಪುರುಷರಿಗೆ ದ್ರೋಹವನ್ನು ಮಾಡಿ ಇಂತಹ ದುರ್ಗತಿಯನ್ನು ಹೊಂದಿದೆವು. ವಿಧಿಯ ವಿಧಾನವನ್ನು ಯಾರಿಂದಲೂ ದಾಟಲಾಗುವುದಿಲ್ಲ.

**ನವಕಂ ಲಿಂಗಕೋಟೀನಾಮ್**
**ಪ್ರತಿಷ್ಠಾಪ್ಯಮಿಹ ಸ್ಥಲೇ ।**

**ಇತಿ ಸಂಕಲ್ಪಿತಂ ಪೂರ್ವಮ್**
**ಮಯಾ ತದವಶಿಷ್ಯತೇ ॥ 21–27**

ಈ ಲಂಕೆಯಲ್ಲಿ ಒಂಭತ್ತು ಕೋಟಿ ಲಿಂಗಗಳನ್ನು ಪ್ರತಿಷ್ಠಾಪಿಸಬೇಕೆಂದು ಪೂರ್ವದಲ್ಲಿ ನಾನು ಸಂಕಲ್ಪ ಮಾಡಿದ್ದೆನು. ಅದೆಲ್ಲವೂ ಈಡೇರದೆ ಸ್ವಲ್ಪ ಉಳಿದುಕೊಂಡಿದೆ.

**ಕೋಟಿಷಟ್ಕಂ ತು ಲಿಂಗಾನಾಮ್**
**ಮಯಾ ಸಾಧು ಪ್ರತಿಷ್ಠಿತಮ್ ।**
**ಕೋಟಿತ್ರಯಂ ತು ಲಿಂಗಾನಾಮ್**
**ಸ್ಥಾಪನೀಯಮತಸ್ತ್ವಯಾ ॥ 21–28**

ಆ ಸಂಕಲ್ಪದಲ್ಲಿ ಆರು ಕೋಟಿ ಲಿಂಗಗಳನ್ನು ನಾನೇ ಚೆನ್ನಾಗಿ ಪ್ರತಿಷ್ಠಾಪನೆ ಮಾಡಿದೆನು. ಇನ್ನು ಮೂರು ಕೋಟಿ ಲಿಂಗಗಳ ಪ್ರತಿಷ್ಠಾಪನೆ ಮಾತ್ರ ಉಳಿದಿರುವುದು. ಆದ್ದರಿಂದ ಆ ಮೂರು ಕೋಟಿ ಲಿಂಗಗಳ ಸ್ಥಾಪನೆಯ ಕಾರ್ಯವನ್ನು ನೀನು ನೆರವೇರಿಸಬೇಕು.

**ಇತಿ ತಸ್ಯ ವಚಃ ಶ್ರುತ್ವಾ**
**ದೀನಬುದ್ಧೇರ್ಮರಿಷ್ಯತಃ ।**
**ತಥಾ ಸಾಧು ಕರೋಮೀತಿ**
**ಪ್ರತಿಜ್ಞಾತಂ ಮಯಾ ತಥಾ ॥ 21–29**

ಹೀಗೆ ಮರಣದ ಸಮಯದಲ್ಲಿ ದೈನ್ಯಬುದ್ಧಿಯಿಂದ ಹೇಳಿದ ಆ ನನ್ನ ಅಣ್ಣನ ಮಾತುಗಳನ್ನು ಕೇಳಿ, ಆಗಲಿ. ನಿನ್ನ ಸಂಕಲ್ಪವನ್ನು ಚೆನ್ನಾಗಿ ನೆರವೇರಿಸುತ್ತೇನೆ ಎಂದು ನಾನು ಆಗ ಪ್ರತಿಜ್ಞೆಯನ್ನು ಮಾಡಿದೆನು.

**ಯುಗಪಚ್ಛಿವಲಿಂಗಾನಾಮ್**
**ಕೋಟಿತ್ರಯಮನುತ್ತಮಮ್ ।**
**ಪ್ರತಿಷ್ಠಾಪ್ಯಂ ಯಥಾಶಾಸ್ತ್ರಮ್**
**ಇತಿ ಮೇ ನಿಶ್ಚಯೋಽಭವತ್ ॥ 21–30**

ಶ್ರೇಷ್ಠವಾದ ಮೂರು ಕೋಟಿ ಲಿಂಗಗಳನ್ನು ಏಕಕಾಲದಲ್ಲಿ ಶಾಸ್ತ್ರೋಕ್ತ ವಿಧಿಯಂತೆ ಪ್ರತಿಷ್ಠಾಪನೆಯನ್ನು ಮಾಡಬೇಕು ಎಂಬ ನಿಶ್ಚಯವನ್ನು ನಾನು ಮಾಡಿದೆನು.

**ಲಿಂಗಕೋಟಿತ್ರಯಸ್ಯೇಹ**
**ಯುಗಪತ್ ಸ್ಥಾಪನಾವಿಧೌ ।**
**ಅವಿದನ್ನೇಕಮಾಚಾರ್ಯಮ್**
**ಅಹಮೇವಮವಸ್ಥಿತಃ ॥ 21–31**

ಆದರೆ ಒಂದೇ ಮುಹೂರ್ತದಲ್ಲಿ ಮೂರು ಕೋಟಿ ಲಿಂಗಗಳನ್ನು ಸ್ಥಾಪಿಸುವ ವಿಷಯದಲ್ಲಿ ಸಮರ್ಥನಾದ ಆಚಾರ್ಯನನ್ನು ಕಾಣದೆ ಸುಮ್ಮನೆ ಹೀಗೆ ಕುಳಿತಿದ್ದೇನೆ.

**ಶಿವಶಾಸ್ತ್ರವಿಶೇಷಜ್ಞ**
**ಶಿವಜ್ಞಾನನಿಧಿರ್ಭವಾನ್ ।**
**ಆಚಾರ್ಯಭಾವಮಾಸಾದ್ಯ**
**ಮಮ ಪೂರಯ ವಾಂಛಿತಮ್ ॥ 21–32**

ಶಿವಶಾಸ್ತ್ರದ ರಹಸ್ಯವನ್ನು ವಿಶೇಷವಾಗಿ ತಿಳಿದಿರುವ ಹೇ ರೇಣುಕನೇ, ನೀನು ಶಿವಜ್ಞಾನಕ್ಕೆ ನಿಕ್ಷೇಪದಂತಿರುವೆ. ಆದಕಾರಣ ನೀನು ಆಚಾರ್ಯಭಾವವನ್ನು ಹೊಂದಿ ನನ್ನ ವಾಂಛಿತವನ್ನು (ಇಷ್ಟಾರ್ಥವನ್ನು) ಪೂರ್ಣ ಮಾಡು.

**ತಸ್ಯೇತಿ ವಚನಂ ಶ್ರುತ್ವಾ**
**ರಾಕ್ಷಸೇಂದ್ರಸ್ಯ ಧೀಮತಃ ।**
**ತಥೇತಿ ಪ್ರತಿಶುಶ್ರಾವ**
**ಸರ್ವಜ್ಞೋ ಗಣನಾಯಕಃ ॥ 21–33**

ಧೀಮಂತನಾದ ರಾಕ್ಷಸೇಂದ್ರನಾದ ವಿಭೀಷಣನ ಈ ರೀತಿಯಾದ ಮಾತುಗಳನ್ನು ಕೇಳಿ ಸರ್ವಜ್ಞನಾದ ರೇಣುಕ ಗಣನಾಯಕನು ಹಾಗೆ ಆಗಲಿ ಎಂದು ಮರಳಿ ಹೇಳಿದನು (ಒಪ್ಪಿಕೊಂಡನು).

**ತತ್ರ ಸಂತುಷ್ಟಚಿತ್ತಸ್ಯ**
**ಪೌಲಸ್ತ್ಯಸ್ಯೇಷ್ಟಸಿದ್ಧಯೇ ।**
**ಕೋಟಿತ್ರಯಂ ತು ಲಿಂಗಾನಾಮ್**
**ಯಥಾಶಾಸ್ತ್ರಂ ಯಥಾವಿಧಿ ।**
**ತ್ರಿಕೋಟ್ಯಾಚಾರ್ಯರೂಪೇಣ**
**ಸ್ಥಾಪಿತಂ ತೇನ ತತ್ಕ್ಷಣೇ ॥ 21–34**

ಸಂತುಷ್ಟ ಚಿತ್ತನಾದ ಪುಲಸ್ತ್ಯ ಋಷಿಯ ಮಗನಾದ ವಿಭೀಷಣನ ಇಷ್ಟಾರ್ಥ ಸಿದ್ಧಿಗಾಗಿ ಆ ಲಂಕೆಯಲ್ಲಿ ಶ್ರೀ ರೇಣುಕಗಣೇಶ್ವರನು ಮೂರು ಕೋಟಿ ಆಚಾರ್ಯರ ರೂಪವನ್ನು (ಏಕಕಾಲಕ್ಕೆ) ಧರಿಸಿ ಶಾಸ್ತ್ರದ ವಿಧಿವಿಧಾನಾನುಸಾರವಾಗಿ ಒಂದೇ ಕ್ಷಣದಲ್ಲಿ ಮೂರು ಕೋಟಿ ಲಿಂಗಗಳನ್ನು ಪ್ರತಿಷ್ಠಾಪನೆ ಮಾಡಿದನು.

**ತಾದೃಶಂ ತಸ್ಯ ಮಾಹಾತ್ಮ್ಯಮ್**
**ಸಮಾಲೋಕ್ಯ ವಿಭೀಷಣಃ ।**
**ಪ್ರಣನಾಮ ಮುಹುರ್ಭಕ್ತ್ಯಾ**
**ಪಾದಯೋಸ್ತಸ್ಯ ವಿಸ್ಮಿತಃ ॥21–35**

ಈ ರೀತಿಯಾದ ಆ ರೇಣುಕಗಣೇಶ್ವರನ ಮಹಿಮಾಸಿದ್ಧಿಯನ್ನು ನೋಡಿ ಆಶ್ಚರ್ಯಗೊಂಡ ವಿಭೀಷಣನು ಅವನ ಪಾದಗಳಿಗೆ ಭಕ್ತಿಯಿಂದ ಮತ್ತೆ ಮತ್ತೆ ನಮಸ್ಕಾರವನ್ನು ಮಾಡಿದನು.

**ಪ್ರಣತಂ ವಿನಯೋಪೇತಮ್**
**ಪ್ರಹೃಷ್ಟಂ ರಾಕ್ಷಸೇಶ್ವರಮ್ ।**
**ಅನುಗೃಹ್ಯ ಸ್ವಮಾಹಾತ್ಮ್ಯಾದ್**
**ರೇಣುಕೋಽಂತರ್ಹಿತೋಽಭವತ್ ॥ 21–36**

ಹೀಗೆ ಸಂತೋಷಗೊಂಡು ವಿನಯದಿಂದ ಪ್ರಣಾಮವನ್ನು ಮಾಡಿದ ರಾಕ್ಷಸೇಶ್ವರನಾದ ವಿಭೀಷಣನನ್ನು ಅನುಗ್ರಹಿಸಿ ರೇಣುಕಗಣೇಶ್ವರನು ತನ್ನ ಮಹಿಮಾ ಶಕ್ತಿಯಿಂದ ಅಂತರ್ಧಾನಗೊಂಡನು.

**ವಿಭೀಷಣೋಽಪಿ ಹೃಷ್ಟಾತ್ಮಾ**
**ರೇಣುಕಸ್ಯ ಪ್ರಸಾದತಃ ।**
**ಶಿವಭಕ್ತಿರಸಾಸಕ್ತಃ**
**ಸ್ಥಿರರಾಜ್ಯಮಪಾಲಯತ್ ॥ 21–37**

ಇತ್ತ ವಿಭೀಷಣನೂ ಕೂಡ ಶ್ರೀ ರೇಣುಕ ಗಣೇಶ್ವರನ ಪ್ರಸಾದದಿಂದ ಸಂತೋಷಗೊಂಡವನಾಗಿ, ಶಿವಭಕ್ತಿಯ ರಸದಲ್ಲಿ ಆಸಕ್ತನಾದವನಾಗಿ (ಶಿವಭಕ್ತಿ ತತ್ಪರನಾಗಿ) ತನ್ನ ರಾಜ್ಯವನ್ನು ಚಿರಕಾಲದವರೆವಿಗೆ ಪರಿಪಾಲನೆ ಮಾಡಿದನು.

**ರೇಣುಕೋಽಪಿ ಮಹಾತೇಜಾಃ**

**ಸಂಚರನ್ ಕ್ಷಿತಿಮಂಡಲೇ ।**
**ಪ್ರಚ್ಛನ್ನಶ್ಚ ಪ್ರಕಾಶಶ್ಚ**
**ಪರಮಾದ್ವೈತಭಾವಿತಃ ॥ 21–38**

**ಕಾಂಶ್ಚಿದ್ ದೃಷ್ಟಿನಿಪಾತೇನ**
**ಕರುಣಾರಸವರ್ಷಿಣಾ ।**
**ಅಪರಾನುಪದೇಶೇನ**
**ಶಿವಾದ್ವೈತಾಭಿಮರ್ಶಿನಾ ॥21–39**

**ಅನ್ಯಾಂಶ್ಚ ಸಹವಾಸೇನ**
**ಸಮಸ್ತಮಲಹಾರಿಣಾ ।**
**ಕೃತಾರ್ಥಯನ್ ಜನಾನ್**
**ಸರ್ವಾನ್ ಕೃತಿನಃ ಪಕ್ವಕರ್ಮಿಣಃ ॥ 21–40**
**ದರ್ಶಯಿತ್ವಾ ನಿಜಾಧಿಕ್ಯಮ್**
**ಶಿವದರ್ಶನಲಾಲಸಃ ।**
**ಖಂಡಯಿತ್ವಾ ದುರಾಚಾರಾನ್**
**ಪಾಷಂಡಾನ್ ಭಿನ್ನದರ್ಶನಾನ್ ॥ 21–41**

**ಯಂತ್ರಮಂತ್ರಕಲಾಸಿದ್ಧಾನ್**
**ವಿಮತಾನ್ ಸಿದ್ಧಮಂಡಲಾನ್ ।**
**ವಿಜಿತ್ಯ ಸ್ವಪ್ರಭಾವೇನ**
**ಸ್ಥಾಪಯಿತ್ವಾ ಶಿವಾಗಮಾನ್ ।**
**ಆಜಗಾಮ ನಿಜಾವಾಸಮ್**
**ಕೊಲ್ಲಿಪಾಕ್ಯಾಭಿಧಂ ಪುರಮ್ ॥ 21–42**

**ತತ್ರ ಸಂಭಾವಿತಃ ಸರ್ವೈಃ**
**ಜನೈಃ ಶಿವಪರಾಯಣೈಃ ।**
**ಸೋಮನಾಥಾಭಿಧಾನಸ್ಯ**
**ಶಿವಸ್ಯ ಪ್ರಾಪ ಮಂದಿರಮ್ ॥ 21–43**

ಮಹಾತೇಜಸ್ವಿಯಾದ ಶ್ರೀ ರೇಣುಕನು ಸದಾ ಶಿವಾದ್ವೈತಭಾವ ಸಂಪನ್ನನಾಗಿ ಪ್ರಚ್ಛನ್ನನಾಗಿಯೂ (ಗುಪ್ತವಾಗಿಯೂ) ಮತ್ತು ಕೆಲವು ಸಮಯ ಪ್ರಕಟವಾಗಿಯೂ ಭೂಮಂಡಲದಲ್ಲಿ ಸಂಚರಿಸುತ್ತಾ, ಕೆಲವರನ್ನು ತನ್ನ ಕರುಣಾಕಟಾಕ್ಷದಿಂದ ನೋಡುತ್ತಾ, ಬೇರೆಯವರನ್ನು ಶಿವಾದ್ವೈತ ಜ್ಞಾನದ ಉಪದೇಶದಿಂದ ಕೃತಾರ್ಥರನ್ನಾಗಿ ಮಾಡುತ್ತಾ, ಮತ್ತೆ ಕೆಲವರನ್ನು ಮಲತ್ರಯ ನಿವಾರಕವಾದ ತನ್ನ ಸಹವಾಸದಿಂದ ಕೃತಾರ್ಥರನ್ನಾಗಿ ಮಾಡುತ್ತಾ, ಇನ್ನುಳಿದ ಸಕಲ ಜನರನ್ನು ಕರ್ತವ್ಯ ಕುಶಲರನ್ನಾಗಿಯೂ ಮತ್ತು ಪಕ್ವ ಕರ್ಮಿಗಳನ್ನಾಗಿಯೂ ಮಾಡುತ್ತಾ, ತನ್ನ ಆಧಿಕ್ಯವನ್ನು ತೋರಿಸುತ್ತಾ, ದುರಾಚಾರಿಗಳಾದ ಪಾಷಂಡಿಗಳನ್ನು (ನಾಸ್ತಿಕ ದರ್ಶನಗಳನ್ನು) ಖಂಡಿಸುತ್ತಾ, ಯಂತ್ರ ಮಂತ್ರ ಕಲೆಗಳಲ್ಲಿ ಸಿದ್ಧರಾದ, ತಮಗೆ ಸಮ್ಮತರಲ್ಲದ ಸಿದ್ಧರ ಮಂಡಲಗಳನ್ನು ಗೆದ್ದು ತನ್ನ ಪ್ರಭಾವದಿಂದ ಶಿವಾಗಮೋಕ್ತ ಸಿದ್ಧಾಂತವನ್ನು ಸ್ಥಾಪಿಸಿ, ಶಿವದರ್ಶನದ ಅಭಿಲಾಷೆಯುಳ್ಳವನಾಗಿ ತನ್ನ ವಾಸಸ್ಥಾನವಾದ

ಕೊಲ್ಲಿಪಾಕಿಯೆಂಬ ಪುರಕ್ಕೆ ಆಗಮಿಸಿದನು. ಅಲ್ಲಿದ್ದ ಸಕಲ ಶಿವಭಕ್ತರಿಂದ ಸತ್ಕರಿಸಲ್ಪಟ್ಟವನಾಗಿ ಅಲ್ಲಿನ ಸೋಮನಾಥ ಮಂದಿರಕ್ಕೆ ತಲುಪಿದನು.

**ಪಶ್ಯತಾಂ ತತ್ರ ಸರ್ವೇಷಾಮ್**
**ಭಕ್ತಾನಾಂ ಶಿವಯೋಗಿನಾಮ್ ।**
**ತನ್ವಾನೋ ವಿಸ್ಮಯಂ ಭಾವೈಃ**
**ತುಷ್ಟಾವ ಪರಮೇಶ್ವರಮ್ ॥ 21–44**

ಆ ಸೋಮನಾಥ ಮಂದಿರದಲ್ಲಿ ತನ್ನನ್ನು ನೋಡುತ್ತಿರುವ ಎಲ್ಲ ಶಿವಯೋಗೀಶ್ವರರಿಗೂ ಮತ್ತು ಎಲ್ಲ ಭಕ್ತರಿಗೂ ವಿಸ್ಮಯಗೊಳ್ಳುವ ಹಾಗೆ ತನ್ನ ಉತ್ಕೃಷ್ಟ ಭಾವನೆಗಳಿಂದ ಪರಮೇಶ್ವರನನ್ನು ಕುರಿತು ಸ್ತೋತ್ರ ಮಾಡಿದನು.

**ದೇವ ದೇವ ಜಗನ್ನಾಥ**
**ಜಗತ್ಕಾರಣಕಾರಣ ।**
**ಬ್ರಹ್ಮವಿಷ್ಣುಸುರಾಧೀಶ–**
**ವಂದ್ಯಮಾನಪದಾಂಬುಜ ॥ 21–45**

**ಸಂಸಾರನಾಟಕಭ್ರಾಂತಿ–**
**ಕಲಾನಿರ್ವಹಣಪ್ರದ ।**
**ಸಮಸ್ತವೇದವೇದಾಂತ–**
**ಪರಿಬೋಧಿತವೈಭವ ॥ 21–46**

**ಸಂಸಾರವೈದ್ಯ ಸರ್ವಜ್ಞ**
**ಸರ್ವಶಕ್ತಿನಿರಂಕುಶ ।**
**ಸಚ್ಚಿದಾನಂದ ಸರ್ವಸ್ವ**
**ಪರಮಾಕಾಶವಿಗ್ರಹ ॥ 21–47**
**ಸಮಸ್ತಜಗದಾಧಾರ–**
**ಜ್ಯೋತಿರ್ಲಿಂಗವಿಜೃಂಭಣ ।**
**ಸದಾಶಿವಮುಖಾನೇಕ–**
**ದಿವ್ಯಮೂರ್ತಿಕಲಾಧರ ॥ 21–48**

**ಗುಣತ್ರಯಪದಾತೀತ**
**ಮಲತ್ರಯವಿನಾಶನ ।**
**ಜಗತ್ತ್ರಯವಿಲಾಸಾತ್ಮನ್**
**ಶ್ರುತಿತ್ರಯವಿಲೋಚನ ॥ 21–49**

**ಪಾಹಿ ಮಾಂ ಪರಮೇಶಾನ**
**ಪಾಹಿ ಮಾಂ ಪಾರ್ವತೀಪತೇ ।**
**ತ್ವದಾಜ್ಞಯಾ ಮಯೈತಾವತ್**

**ಕಾಲಮಾತ್ರಂ ಮಹೀತಲೇ ।**
**ಅಚಾರಿ ಭವದುಕ್ತಾನಾಮ್**
**ಆಗಮಾನಾಂ ಪ್ರಸಿದ್ಧಯೇ ॥ 21–50**
**ಅತಃ ಪರಂ ಸ್ವರೂಪಂ ತೇ**
**ಪ್ರಾಪ್ತುಕಾಮೋऽಸ್ಮಿ ಶಂಕರ ।**
**ಅಂತರಂ ದೇಹಿ ಮೇ ಕಿಂಚಿತ್**
**ಅನುಕಂಪಾವಿಶೇಷತಃ ॥ 21–51**

ಹೇ ದೇವದೇವನಾದ ಜಗನ್ನಾಥನೇ, ಈ ಜಗತ್ತಿನ ಕಾರಣಕ್ಕೂ ಕಾರಣನಾದವನೇ, ಬ್ರಹ್ಮ, ವಿಷ್ಣು ಮತ್ತು ಇಂದ್ರರಿಂದ ನಮಸ್ಕರಿಸಲ್ಪಟ್ಟ ಪಾದಕಮಲವುಳ್ಳವನೇ, ಸಂಸಾರವೆಂಬ ನಾಟಕ ಭ್ರಾಂತಿಯನ್ನು ದೂರ ಮಾಡಿದವನೇ, ಸಮಸ್ತ ವೇದ ವೇದಾಂತಗಳಿಂದ ಹೊಗಳಲ್ಪಟ್ಟ ವೈಭವವುಳ್ಳವನೇ, ಭವರೋಗ ವೈದ್ಯನೇ, ಸರ್ವಜ್ಞನೇ, ಸರ್ವಕರ್ತೃತ್ವಾದಿ ಮಹಾಶಕ್ತಿಯುಳ್ಳವನೇ, ನಿರಂಕುಶನೇ, ಸಚ್ಚಿದಾನಂದ ಸ್ವರೂಪನೇ, ಚಿದಾಕಾಶವೇ ದೇಹವಾಗಿ ಉಳ್ಳವನೇ, ಸಕಲ ಜಗತ್ತಿಗೂ ಆಧಾರಭೂತನಾದವನೇ, ಜ್ಯೋತಿರ್ಲಿಂಗ ರೂಪದಿಂದ ಗೋಚರಿಸುವವನೇ, ಸದಾಶಿವ ರುದ್ರವರ್ಗ ಮೊದಲಾದ ಅನೇಕ ಲೀಲಾಮೂರ್ತಿಗಳನ್ನು ಧರಿಸಿದವನೇ, ಸತ್ವಾದಿ ಗುಣತ್ರಯ ಸ್ಥಾನಾತೀತನೇ, ಆಣವಾದಿ ಮಲತ್ರಯ ವಿನಾಶಕನೇ, ಮೂರು ಲೋಕಗಳ ಪಂಚಕೃತ್ಯಗಳೇ ಲೀಲೆಯಾಗಿ ಉಳ್ಳವನೇ, ಮೂರು ಶ್ರುತಿಗಳೇ ಕಣ್ಣಾಗಿ ಉಳ್ಳವನೇ, ಹೇ ಪಾರ್ವತೀಪತಿಯಾದ ಪರಮೇಶ್ವರನೇ, ನನ್ನನ್ನು ರಕ್ಷಿಸು, ನನ್ನನ್ನು ರಕ್ಷಿಸು. ನಿನ್ನ ಅಪ್ಪಣೆಯ ಮೇರೆಗೆ ನಾನು ಇರುವವರೆವಿಗೆ ಭೂಮಿಯ ಮೇಲೆ ನಿನ್ನಿಂದ ಉಪದೇಶಿಸಲ್ಪಟ್ಟ ಶಿವಾಗಮಗಳನ್ನು ಪ್ರಸಾರ ಮಾಡುವುದಕ್ಕಾಗಿ ಸಂಚರಿಸಿದೆನು. ಎಲೈ ಶಂಕರನೇ, ಇನ್ನು ನಾನು ನಿನ್ನ ನಿಜರೂಪವನ್ನು ಪಡೆಯಬೇಕೆಂಬ ಇಚ್ಛೆಯುಳ್ಳವನಾಗಿದ್ದೇನೆ. ಆದಕಾರಣ ಕೃಪೆಯಿಂದ ನಿನ್ನಲ್ಲಿ ನನಗೆ ಸ್ವಲ್ಪ ಅವಕಾಶವನ್ನು ಕೊಡು.

**ಇತ್ಯುಕ್ತೇ ಗಣನಾಯಕೇನ ಸಹಸಾ ಲಿಂಗಾತ್ತತಃ ಶಾಂಕರಾತ್**
**ವತ್ಸಾಗಚ್ಛ ಮಹಾನುಭಾವ ಭವತೋ ಭಕ್ತ್ಯಾ ಪ್ರಸನ್ನೋऽಸ್ಮ್ಯಹಮ್।**
**ಇತ್ಯುಚ್ಚೈರಗದಾದ್ವಚಸ್ತನುಭೃತಾಮಾಶ್ಚರ್ಯಮಾಸೀತ್ ತ್ತದಾ**
**ದಿವ್ಯೋ ದುಂದುಭಿರಾನನಾದ ಗಗನೇ ಪುಷ್ಪಂ ವವರ್ಷುರ್ಗಣಾಃ॥**
**21–52**

– *ಶಾರ್ದೂಲವಿಕ್ರೀಡಿತಂ ವೃತ್ತಮ್*

**ಶ್ರುತ್ವಾ ಲಿಂಗಾದ್ವಚನಮುದಿತಂ ಶಾಂಕರಂ ಸಾನುಕಂಪಮ್**
**ಸಂಹೃಷ್ಟಾತ್ಮಾ ಗಣಪತಿರಥೋ ಜ್ಯೋತಿಷಾ ದೀಪ್ಯಮಾನಃ ।**
**ಜಾತೋತ್ಕಂಠೈಃ ಪರಮನುಚರೈಃ ಯೋಗಿಭಿಃ ಸ್ತೂಯಮಾನೋ**
**ಜ್ಯೋತಿರ್ಲಿಂಗಂ ಪರಮನುವಿಶತ್ ಸ್ವಪ್ರಕಾಶಂ ತದಾನೀಮ್ ॥ 21–53**

*–ಮಂದಾಕ್ರಾಂತವೃತ್ತಮ್*

ಪೂರ್ವೋಕ್ತ ರೀತಿಯಲ್ಲಿ ಶ್ರೀ ರೇಣುಕ ಗಣೇಶ್ವರನು ಶಿವನನ್ನು ಸ್ತುತಿಸಲು ಆ ಕೂಡಲೇ ಆ ಸೋಮೇಶ್ವರ ಮಹಾಲಿಂಗದಿಂದ ಹೇ ಮಹಿಮಾಶಾಲಿಯಾದ ವತ್ಸನೇ, ಇಲ್ಲಿ ಬಾ. ನಿನ್ನ ಭಕ್ತಿಯಿಂದ ನಾನು ಪ್ರಸನ್ನನಾಗಿದ್ದೇನೆ ಎಂಬ ಧ್ವನಿಯು ಉತ್ಪನ್ನವಾಯಿತು. ಆ ಧ್ವನಿಯನ್ನು ಕೇಳಿ ಜನರೆಲ್ಲಾ ಆಶ್ಚರ್ಯಚಕಿತರಾದರು. ಅದೇ ಸಮಯದಲ್ಲಿ ದೇವ ದುಂದುಭಿಗಳು ಮೊಳಗತೊಡಗಿದವು. ಶಿವಗಣರು ಪುಷ್ಪವೃಷ್ಟಿಯನ್ನುಗೈದರು. ಶಿವಲಿಂಗದಿಂದ ಹೊರಹೊರಟ ದಯಾಘನವಾದ ಶಿವನ ಆ ನುಡಿಗಳನ್ನು ಕೇಳಿ ರೇಣುಕ ಗಣೇಶ್ವರನು ಅತ್ಯಂತ ಸಂತುಷ್ಟಾಂತರಂಗನಾಗಿ ತೇಜಸ್ಸಿನಿಂದ ಹೊಳೆಯ ತೊಡಗಿದನು. ಆಗ ಅವನ ಒಡನಾಡಿಗಳಾದ ಶಿವಯೋಗಿಗಳೆಲ್ಲಾ ಆಶ್ಚರ್ಯಗೊಂಡು ಸ್ತುತಿಯನ್ನು ಮಾಡುತ್ತಿರುವಾಗ ಆ ಜ್ಯೋತಿರ್ಲಿಂಗದಲ್ಲಿ ಸಾಮರಸ್ಯದಿಂದ ಪ್ರವೇಶಿಸಿ ಐಕ್ಯಗೊಂಡನು.

**ಲೀನೇ ತಸ್ಮಿನ್ ಶಾಂಕರೇ ಸ್ವಪ್ರಕಾಶೇ**

**ದಿವ್ಯಾಕಾರೇ ರೇಣುಕೋ ಸಿದ್ಧನಾಥೇ ।**
**ಸರ್ವೋ ಲೋಕೋ ವಿಸ್ಮಿತೋಽಭೂತ್ ತದಾನೀಂ**
**ಶೈವೀ ಭಕ್ತಿಃ ಸಪ್ರಮಾಣಾ ಬಭೂವ ॥ 21–54**
**– ಇಂದ್ರವಜ್ರಾವೃತ್ತಮ್**

ದಿವ್ಯದೇಹಧಾರಿಯಾದ ಸಿದ್ಧರಿಗೆಲ್ಲಾ ಒಡೆಯನಾದ ರೇಣುಕ ಗಣೇಶ್ವರನು ಹೀಗೆ ಸ್ವಪ್ರಕಾಶಮಯವಾದ ಆ ಸೋಮೇಶ್ವರ ಲಿಂಗದಲ್ಲಿ ಐಕ್ಯನಾಗಲು ಸಕಲ ಜನರು ಆಶ್ಚರ್ಯಗೊಂಡರು. ಆಗ ಶಿವಭಕ್ತಿಯು ಸರ್ವೋತ್ಕೃಷ್ಟವಾದುದೆಂಬ ವಿಷಯವು ಪ್ರತ್ಯಕ್ಷ ಪ್ರಮಾಣದಿಂದ ಸಿದ್ಧವಾಯಿತು.

**ಶ್ರೀವೇದಾಗಮವೀರಶೈವಸರಣಿಂ ಶ್ರೀಷಟ್ಸ್ಥಲೋದ್ಯನ್ಮಣಿಮ್**
**ಶ್ರೀಜೀವೇಶ್ವರಯೋಗಪದ್ಮತರಣಿಂ ಶ್ರೀಗೋಪ್ಯಚಿಂತಾಮಣಿಮ್।**
**ಶ್ರೀಸಿದ್ಧಾಂತಶಿಖಾಮಣಿಂ ಲಿಖಯಿತಾ ಯಸ್ತಂ ಲಿಖಿತ್ವಾ ಪರಾನ್**
**ಶ್ರುತ್ವಾ ಶ್ರಾವಯಿತಾ ಸ ಯಾತಿ ವಿಮಲಾಂ ಭುಕ್ತಿಂ ಚ ಮುಕ್ತಿಂ ಪರಾಮ್॥**
**21–55**

– *ಶಾರ್ದೂಲವಿಕ್ರೀಡಿತವೃತ್ತಮ್*

ಶ್ರೀ ವೇದಾಗಮಗಳಿಂದ ಪ್ರತಿಪಾದಿತವಾಗಿರುವ ವೀರಶೈವ ಮಾರ್ಗವನ್ನು ನಿರೂಪಿಸಿರುವ, ಷಟ್‌ಸ್ಥಲ ಮಾರ್ಗವನ್ನು ತೋರಿಸಿ ಕೊಡುವ ಹೊಳೆಯುತ್ತಿರುವ ರತ್ನದಂತಿರುವ, **ಜೀವ ಮತ್ತು ಈಶ್ವರರ ಐಕ್ಯವೆಂಬ ತಾವರೆಯನ್ನು ಅರಳಿಸುವ ಸೂರ್ಯನಂತಿರುವ,** ಶಿವಾದ್ವೈತ ಜ್ಞಾನವೆಂಬ ಗುಪ್ತನಿಧಿಯನ್ನು ತೋರಿಸಿಕೊಡುವ ಶ್ರೀ ಚಿಂತಾಮಣಿಯಾಗಿರುವ, ಸಕಲ ಸಿದ್ಧಾಂತಗಳಿಗೆ ಶಿಖಾರತ್ನದಂತಿರುವ ಈ ಶ್ರೀ ಸಿದ್ಧಾಂತ ಶಿಖಾಮಣಿಯೆಂಬ ಶಿವಾದ್ವೈತ ಶಾಸ್ತ್ರವನ್ನು ಯಾರು ತಾನಾಗಿ ಬರೆದು, ಇತರರಿಂದಲೂ ಬರೆಯಿಸುವನೋ, ಯಾವಾತನು ತಾನೂ ಶ್ರವಣ ಮಾಡಿ (ಕೇಳಿ) ಇತರರಿಗೂ ಶ್ರವಣ ಮಾಡಿಸುವನೋ ಆತನು ನಿರ್ಮಲವಾದ ಐಹಿಕ ಸುಖಭೋಗಗಳನ್ನು ಮತ್ತು ಸರ್ವೋತ್ಕೃಷ್ಟವಾದ ಮುಕ್ತಿಯನ್ನು ಪಡೆದುಕೊಳ್ಳುವನು.
***ಇತಿ ವಿಭೀಷಣಾಭೀಷ್ಟಪ್ರದಾನಂ*** *ಇಲ್ಲಿಗೆ ವಿಭೀಷಣಾಭೀಷ್ಟಪ್ರದಾನವು ಮುಗಿಯಿತು.*

***ಓಂ ತತ್ಸತ್ ಇತಿ***

***ಶ್ರೀ ಶಿವಗೀತೇಷು ಸಿದ್ಧಾಂತಾಗಮೇಷು ಶಿವಾದ್ವೈತವಿದ್ಯಾಯಾಂ ಶಿವಯೋಗಶಾಸ್ತ್ರೇ ಶ್ರೀರೇಣುಕಾಗಸ್ತ್ಯಸಂವಾದೇ ವೀರಶೈವಧರ್ಮನಿರ್ಣಯೇ ಶ್ರೀಶಿವಯೋಗಿ ಶಿವಾಚಾರ್ಯವಿರಚಿತೇ ಶ್ರೀಸಿದ್ಧಾಂತಶಿಖಾಮಣೌ ವಿಭೀಷಣಾಭೀಷ್ಟವರ ಪ್ರದಾನಪ್ರಸಂಗೋ ನಾಮ ಏಕವಿಂಶತಿತಮಃ ಪರಿಚ್ಛೇದಃ ॥***

*ಓಂ ತತ್ಸತ್ ಇಲ್ಲಿಗೆ ಶ್ರೀ ಶಿವನಿಂದ ಉಪದೇಶಿಸಲ್ಪಟ್ಟು*
*ಶ್ರೀ ಸಿದ್ಧಾಂತಾಗಮಗಳಲ್ಲಿಯ ಶಿವಾದ್ವೈತವಿದ್ಯಾರೂಪವೂ, ಶಿವಯೋಗ ಶಾಸ್ತ್ರವೂ,*
*ಶ್ರೀ ರೇಣುಕಾಗಸ್ತ್ಯಸಂವಾದರೂಪವೂ, ಶ್ರೀ ವೀರಶೈವಧರ್ಮನಿರ್ಣಯವೂ, ಶ್ರೀ ಶಿವಯೋಗಿ ಶಿವಾಚಾರ್ಯವಿರಚಿತವೂ ಆದ ಶ್ರೀ ಸಿದ್ಧಾಂತ ಶಿಖಾಮಣಿಯಲ್ಲಿ ವಿಭೀಷಣನ ಅಭೀಷ್ಟವರಪ್ರದಾನಪ್ರಸಂಗವೆಂಬ ಹೆಸರಿನ ಇಪ್ಪತ್ತೊಂದನೆಯ ಪರಿಚ್ಛೇದವು ಮುಗಿದುದು.*

## ಶ್ರೀ ಸಿದ್ಧಾಂತಶಿಖಾಮಣೇಃ ಆರಾರ್ತಿಕ್ಯಮ್
**(ಶ್ರೀಸಿದ್ಧಾಂತಶಿಖಾಮಣಿಯ ಆರತಿ)**

ಜಯ ರೇಣುಕಗೀತೇ ಮಾತಃ! ಜಯ ರೇಣುಕಗೀತೇ ।
ರೇಣುಕ ಹೃದಯ ವಿಹಾರಿಣಿ ಜಯ ಜಯ ಶಿವಗೀತೇ ॥ ಪ ॥
ಶ್ರೀಸಿದ್ಧಾಂತಶಿಖಾಮಣಿಸಂಜ್ಞೇ ಸುಖ್ಯಾತೇ ।
ಕಲಸೀಸಂಭವಮುನಿವರ ಸುಕೃತೈರವತೀರ್ಣೇ ॥1॥
ಏಕೋತ್ತರಶತಸಂಖ್ಯಸ್ಥಲ ಮಣಿಮಯದೀಪೇ ।
ಶಿವಯೋಗಿಶಿವಾಚಾರ್ಯ ಸ್ವರ್ಣಾಕ್ಷರರಚಿತೇ ॥2॥
ಅಷ್ಟಾವರಣವಿಧಾಯಿನಿ ಷಟ್‌ಸ್ಥಲಸೋಪಾನೇ ।
ಪಂಚಾಚಾರವಿಮರ್ಶಿನಿ ತತ್ತ್ವತ್ರಯಗೀತೇ ॥3॥
ಗುರುಚರಲಿಂಗಸಪರ್ಯಾ ದೀಕ್ಷಾವಿಖ್ಯಾತೇ ।
ಶತಶತಭಕ್ತಸುಗೀತೇ ವಿದ್ಯೇ ಬ್ರಹ್ಮಪರೇ ॥4॥
ಶರಣಾಗತಕರುಣಾರಸ-ಘಟಶೋಭಿತಹಸ್ತೇ ।
ನಿಶ್ಚಲಭಕ್ತಿವಿಧಾಯಿನಿ ಮಲಹಾರಿಣಿಗಂಗೇ ॥5॥
ಶ್ರೀ ಶಿವಯೋಗಿಸುವೇದ್ಯೇ ಶೈವಾಗಮವಿದ್ಯೇ ।
ಷಡಧಿಕತ್ರಿಂಶದ್ ಬುದ್ಬುದ ಶಿವಸಾಗರರಮ್ಯೇ ॥6॥
ವಿಶ್ವಾರಾಧ್ಯಜಗದ್ಗುರುಸಿಂಹಾಸನಪತಿನಾ
ಪ್ರವಚನಮಾಲಾಗ್ರಥಿತಾ ಭೂಮಂಡಲಧಾರ್ಯಾ ॥7॥
ಜ್ಞಾನಾಮೃತಪರಿತೃಪ್ತೈಃ ಕೋಟಿಜನೈರ್ವಂದ್ಯೇ ।
ಸಾ ತ್ವಂ ಭಗವತಿ ಮಾತಃ ! ಜಯ ರೇಣುಕಗೀತೇ ॥8॥

## ಕ್ಷಮಾಪಣಸ್ತೋತ್ರಮ್

ಯದಕ್ಷರಪದಭ್ರಷ್ಟಮ್
ಮಾತ್ರಾಹೀನಂ ಚ ಯದ್ಭವೇತ್ ।
ತತ್ಸರ್ವಂ ಕ್ಷಮ್ಯತಾಂ ದೇವ
ಶ್ರೀರೇಣುಕ ಗಣೇಶ್ವರ ॥

ಓಂ ಸರ್ವೇಷಾಂ ಸ್ವಸ್ತಿರ್ಭವತು
ಓಂ ಸರ್ವೇಷಾಂ ಶಾಂತಿರ್ಭವತು
ಓಂ ಸರ್ವೇಷಾಂ ಶಿವಂ ಭವತು

ಓಂ ಶಾಂತಿಃ ಶಾಂತಿಃ ಶಾಂತಿಃ

## ಪಂಚಾಚಾರ್ಯರ ವಿಳಾಸ

1. **ಶ್ರೀ ಮದ್ರಂಭಾಪುರೀ ವೀರಸಿಂಹಾಸನಾಧೀಶ್ವರ ಶ್ರೀ ಶ್ರೀ ಶ್ರೀ 1008 ಜಗದ್ಗುರು ವೀರಸೋಮೇಶ್ವರ ರಾಜದೇಶಿಕೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳವರು,** ಬಾಳೆಹೊನ್ನೂರು, ಚಿಕ್ಕಮಗಳೂರು ಜಿಲ್ಲೆ. ದೂರವಾಣಿ : 08266–250442 ಮೊ : 9448451824 E-mail: pro_rambhapuripeetha@rediffmail.com
2. **ಶ್ರೀಮತ್ ಉಜ್ಜಯಿನಿ ಸದ್ಧರ್ಮ ಸಿಂಹಾಸನಾಧೀಶ್ವರ ಶ್ರೀ ಶ್ರೀ ಶ್ರೀ 1008 ಜಗದ್ಗುರು ಲಿಂ॥ ಶ್ರೀ ಮರುಳಸಿದ್ಧ ರಾಜದೇಶಿಕೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳವರು, ಶ್ರೀ ಷ॥ ಬ್ರ॥ ಮಹಾಂತ ರಾಜೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳು (ಆಯೋಜಿತ ಜಗದ್ಗುರುಗಳು)** ಉಜ್ಜಯಿನಿ, ಕೂಡ್ಲಿಗಿ ತಾ॥, ಬಳ್ಳಾರಿ ಜಿಲ್ಲೆ ದೂ : 0839–228425, 228456, 9986581306. E-mail: srs1008ujjaini@gmail.com
3. **ಶ್ರೀಮತ್ ಹಿಮವತ್ಕೇದಾರ ವೈರಾಗ್ಯ ಸಿಂಹಾಸನಾಧೀಶ್ವರ ರಾವಲ್ ಶ್ರೀ ಶ್ರೀ ಶ್ರೀ 1008 ಜಗದ್ಗುರು ಶ್ರೀ ಭೀಮಶಂಕರಲಿಂಗ ಶಿವಾಚಾರ್ಯ ಮಹಾಸ್ವಾಮಿಗಳವರು,** ಊಖಿಮಠ, ರುದ್ರಪ್ರಯಾಗ ಜಿಲ್ಲೆ, ಉತ್ತರಾಂಚಲ ರಾಜ್ಯ. ದೂ : 01364–264521, 267228, ಮೊ : 9448464044
4. **ಶ್ರೀಮದ್ಗಿರಿರಾಜ ಸೂರ್ಯಸಿಂಹಾಸನಾಧೀಶ್ವರ ಶ್ರೀ ಶ್ರೀ ಶ್ರೀ 1008 ಜಗದ್ಗುರು ಉಮಾಪತಿ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳವರು, (ಹಿರಿಯ ಜಗದ್ಗುರುಗಳು) ಶ್ರೀ ಶ್ರೀ ಶ್ರೀ 1008 ಜಗದ್ಗುರು ಚನ್ನಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳವರು, (ಕಿರಿಯ ಜಗದ್ಗುರುಗಳು)** ಶ್ರೀಶೈಲ, ಕರ್ನೂಲು ಜಿಲ್ಲೆ, ಆಂಧ್ರಪ್ರದೇಶ. ದೂ :08524–287123, 287141, ಮೊ : 9880568699 E-mail : cspsswamiji@yahoo.com
5. **ಶ್ರೀಮತ್ ಕಾಶೀಜ್ಞಾನ ಸಿಂಹಾಸನಾಧೀಶ್ವರ ಶ್ರೀ ಶ್ರೀ ಶ್ರೀ 1008 ಜಗದ್ಗುರು ಡಾ॥ ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳವರು,** ಡಿ 35/77, ಜಂಗಮವಾಡಿಮಠ, ವಾರಾಣಸಿ–221001, ಉತ್ತರಪ್ರದೇಶ. ದೂ:0542–2450546 ಮೊ : 9448128564 E-mail : kashipeeth@yahoo.com